ತೇಜಸ್ವಿ ಕಥನ : ಸಾಮಾಜಿಕ ಕಾಳಜಿಯ ವಿನ್ಯಾಸಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ರಮೇಶ ಎ.ಆರ್

(ನೋಂದಣಿ ಸಂಖ್ಯೆ: **KVMB-00146**)

ಮಾರ್ಗದರ್ಶಕರು

ಡಾ. ರಾಮಲಿಂಗಪ್ಪ ಟಿ. ಬೇಗೂರು

ಕನ್ನಡ ಸಹ ಪ್ರಾಧ್ಯಾಪಕರು,

ಸರ್ಕಾರಿ ಪ್ರಥಮ ದರ್ಜೆ ಕಾಲೇಜು,

ಹಾರೋಹಳ್ಳಿ, ರಾಮನಗರ ಜಿಲ್ಲೆ,

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

ಕಾವ್ಯಮಂಡಲ

ಬೆಂಗಳೂರು

೨೦೧೭

807

ತೇಜಸ್ವಿ ಕಥನ : ಸಾಮಾಜಿಕ ಕಾಳಜಿಯ ವಿನ್ಯಾಸಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು.

ರಮೇಶ ವಿ.ಆರ್

(ನೋಂದಣಿ ಸಂಖ್ಯೆ: KVMB-00146)

ಮಾರ್ಗದರ್ಶಕರು

ಡಾ. ರಾಮಲಿಂಗಪ್ಪ ಟಿ. ಬೇಗೂರು

ಕನ್ನಡ ಸಹ ಪ್ರಾಧ್ಯಾಪಕರು,

ಸರ್ಕಾರಿ ಪ್ರಥಮ ದರ್ಜೆ ಕಾಲೇಜು,

ಹಾರೋಹಳ್ಳಿ, ರಾಮನಗರ ಜಿಲ್ಲೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

ಕಾವ್ಯಮಂಡಲ

ಬೆಂಗಳೂರು

೨೦೧೭

ಡಾ.ರಾಮಲಿಂಗಪ್ಪ ಟಿ.ಬೇಗೂರು
ಕನ್ನಡ ಸಹ ಪ್ರಾಧ್ಯಾಪಕರು

ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಾರೋಹಳ್ಳಿ, ರಾಮನಗರ ಜಿಲ್ಲೆ.

ಮಾರ್ಗದರ್ಶಕರ ದೃಢೀಕರಣ ಪತ್ರ

ರಮೇಶ ವಿ.ಆರ್ ಅವರು ನನ್ನ ಮಾರ್ಗದರ್ಶನದಲ್ಲಿ **"ತೇಜಸ್ವಿ ಕಥನ : ಸಾಮಾಜಿಕ ಕಾಳಜಿಯ ವಿನ್ಯಾಸಗಳು"** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಮಾನ್ಯತಾ ಸಂಸ್ಥೆ **ಕಾವ್ಯಮಂಡಲ, ಬೆಂಗಳೂರು** ಮೂಲಕ ಕನ್ನಡ ವಿಶ್ವವಿದ್ಯಾಲಯದ **ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧದ ಸಮಗ್ರ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ರಾಮಲಿಂಗಪ್ಪ ಟಿ. ಬೇಗೂರು)

ದಿನಾಂಕ: ೧೧.೦೮.೨೦೧೭
ಸ್ಥಳ: ಬೆಂಗಳೂರು.

ಪ್ರಮಾಣ ಪತ್ರ

ಡಾ.ರಾಮಲಿಂಗಪ್ಪ ಟಿ. ಬೇಗೂರು ಅವರ ಮಾರ್ಗದರ್ಶನದಲ್ಲಿ **"ತೇಜಸ್ವಿ ಕಥನ : ಸಾಮಾಜಿಕ ಕಾಳಜಿಯ ವಿನ್ಯಾಸಗಳು"** ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಮತ್ತು ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ರಮೇಶ ವಿ.ಆರ್.)

(ನೋಂದಣಿ ಸಂಖ್ಯೆ: KVMB-00146)

(ಮಾನ್ಯತಾ ಸಂಸ್ಥೆ)

ಕಾವ್ಯಮಂಡಲ, ಬೆಂಗಳೂರು.

ದಿನಾಂಕ: ೧೧.೦೮.೨೦೧೭

ಸ್ಥಳ: ಬೆಂಗಳೂರು.

:ಪರಿವಿಡಿ:

ಅಧ್ಯಾಯಗಳು ಮತ್ತು ಪುಟ ಸಂಖ್ಯೆ

ಅಧ್ಯಾಯ–೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ

ತೇಜಸ್ವಿ ಕಥನ: ಸಾಮಾಜಿಕ ಕಾಳಜಿಯ ವಿನ್ಯಾಸಗಳು ಎಂಬ ಈ ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಂಶೋಧನಾ ಪದವಿ ಪಡೆಯಲಿಕ್ಕಾಗಿ ಕೈಗೊಳ್ಳಲಾಗಿದೆ. ಸಾಹಿತ್ಯ ಮತ್ತು ಸಮಾಜದ ಸಂಬಂಧ ಇಂದು ನೆನ್ನೆಯದಲ್ಲ. ಸಾಹಿತ್ಯ ಎಂದು ಜನಿಸಿತೋ ಅಂದಿನಿಂದಲೇ ಸಮಾಜವನ್ನು ಅದು ಪ್ರತಿನಿಧಿಸುತ್ತಿದೆ. ಸಮಾಜವೇ ಸಾಹಿತ್ಯದ ಮೂಲ ಆಕರ. ಸಾಹಿತ್ಯವು ತನಗೆ ಬೇಕಾದ ಸಾಮಗ್ರಿಯನ್ನು ಸಮಾಜ ಮೂಲದಿಂದ ಹೆಕ್ಕಿ ತೆಗೆಯುತ್ತದೆ. ಹಾಗಾಗಿ ಸಮಾಜವನ್ನು ತನ್ನದೇ ನೆಲೆಯಲ್ಲಿ ಚಿತ್ರಿಸುವ, ವಿಶ್ಲೇಷಿಸುವ, ವಿಮರ್ಶಿಸುವ, ದಿಕ್ಕುದೆಸೆಗಳನ್ನು ತೋರಿಸುವ ಕೆಲಸವನ್ನೂ ಮಾಡುತ್ತಿರುತ್ತದೆ.

ಯಾವುದೇ ಸಾಹಿತ್ಯದ ಪಠ್ಯವೊಂದರ 'ನಿಕಟ ಓದು' ಅದರಲ್ಲಿನ ನಿಲುವುಗಳು, ಅರ್ಥಸಾಧ್ಯತೆಗಳು, ಬದ್ಧತೆಗಳು, ಆಶಯಗಳು ಮೊದಲಾದುವುಗಳನ್ನು ತೆರೆದು ತೋರಬಲ್ಲದು. ಹಾಗೆಯೆ ಸಮಾಜವು ಇರುವ ಮತ್ತು ಇರಬೇಕಾದ ನೆಲೆಗಳನ್ನು ತಿಳಿಯುವ ಆಕರ ಸಾಮಗ್ರಿಯಾಗಿ ಸಾಹಿತ್ಯ ಪಠ್ಯವನ್ನು ಓದುವುದು ಕೂಡ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದ ಅಧ್ಯಯನದ ಮೂಲಕ ಸಮಾಜವನ್ನು ತಿಳಿಯಲು ಯತ್ನಿಸುವುದು ಮತ್ತು ಸಮಾಜದ ತಿಳಿವಿನ ಮೂಲಕ ಸಾಹಿತ್ಯವನ್ನು ಅರಿಯಲು ಯತ್ನಿಸುವುದು ಎರಡೂ ರೀತಿಯ ಓದನ್ನು ಮಂಡಿಸುವುದು ಈ ಅಧ್ಯಯನದ ಒಂದು ಉದ್ದೇಶವಾಗಿದೆ.

ಯಾವುದೇ ಲೇಖಕನೊಬ್ಬನ ಸಮಾಜವನ್ನು ಕುರಿತ ನಿಲುವುಗಳು ಕೇವಲ ವ್ಯಕ್ತಿನಿಷ್ಠವಾದ ನಿಲುವುಗಳಾಗಿರುವುದಿಲ್ಲ; ಅವು ಪ್ರಜ್ಞಾವಂತ ಸಮುದಾಯದ ನಿಲುವುಗಳೂ ಆಗಿರುತ್ತವೆ. ಯಾವುದೇ ಸಾಹಿತ್ಯ ಪಠ್ಯವು ವೈಯಕ್ತಿಕ ಅಭಿಪ್ರಾಯಗಳನ್ನು ಮಾತ್ರ ಪ್ರತಿನಿಧಿಸದೇ ಯುಗಧರ್ಮವನ್ನೇ ಪ್ರತಿನಿಧಿಸುತ್ತದೆ ಎಂಬ ನಂಬಿಕೆಯಿಂದ ಇಲ್ಲಿನ ಅಧ್ಯಯನವನ್ನು ಕೈಗೊಳ್ಳಲಾಗಿದೆ. ತೇಜಸ್ವಿಯವರ ಸಾಹಿತ್ಯ(ಕಥನಸಾಹಿತ್ಯ) ಒಂದು ಕಾಲಮಾನದ, ಯುಗಧರ್ಮದ, ಸಾಮುದಾಯಿಕ ಅಭಿವ್ಯಕ್ತಿಯ ಭಾಗ. ಅಲ್ಲದೆ ಸಾಹಿತ್ಯ ಎನ್ನುವುದೇ ಒಂದು 'ಸಮಾಜದ ಓದು' ಎಂಬ ನಂಬಿಕೆಯನ್ನೆ ಇಲ್ಲಿನ ಸಾಹಿತ್ಯದ ಅಧ್ಯಯನದಲ್ಲಿ ಇರಿಸಿಕೊಳ್ಳಲಾಗಿದೆ.

ಇಂದು ನಾವು ನಮ್ಮ ಹಿರಿಯ ಸಾಹಿತಿಗಳಿಗೆ ಕೆಲವು ನಿಲುವುಗಳನ್ನು ಆರೋಪಿಸಿದ್ದೇವೆ. ಆದರೆ ಅವು ಅವರ ನಿಜವಾದ ಚಹರೆಗಳಾಗಿರುವುದಿಲ್ಲ. ನಾವು ಅವರ ಸಾಹಿತ್ಯ ಕೃತಿಗಳನ್ನು ನಮ್ಮ ಸಮಕಾಲೀನ ಸಂದರ್ಭಕ್ಕೆ ಇಟ್ಟು ನೋಡುತ್ತಿರುತ್ತೇವೆ. ಆ ಕಾರಣಗಳಿಂದಾಗಿ ಅವರು

ಹಾಗೆ ಕಾಣುತ್ತಾರೆ. ನಾವು ಅಂದುಕೊಂಡಷ್ಟು, ಗುರುತಿಸಿದಷ್ಟು, ವಿಶ್ಲೇಷಿಸಿದಷ್ಟು ಅವರ ಕೃತಿಗಳು ಸರಳವಾಗಿರುವುದಿಲ್ಲ. ಆ ಕೃತಿಗಳ ಒಳಹೊಕ್ಕು ಅಭ್ಯಸಿಸಿದಷ್ಟು ಹೊಸ ಹೊಸ ಆಯಾಮಗಳನ್ನೂ, ಹೊಳಹುಗಳನ್ನೂ ಜೊತೆಗೆ ನಮ್ಮ ಸಾಮಾಜಿಕ ನಿಲುವುಗಳನ್ನು ನಾವು ಕಂಡುಕೊಳ್ಳುವಷ್ಟು, ಗುರುತಿಸಿಕೊಳ್ಳುವಷ್ಟು ಧ್ವನಿಗಳನ್ನು ಹೊರಡಿಸುತ್ತಿರುತ್ತವೆ. ತೇಜಸ್ವಿಯವರ ಕೆಲವು ಆಯ್ದ ಕಥೆ ಕಾದಂಬರಿಗಳನ್ನು ನಮ್ಮ ಸಮಾಜದ ರಚನೆಯನ್ನು ಅರ್ಥಮಾಡಿಕೊಳ್ಳುವ, ನಮ್ಮ ಸಮಾಜದ ಚಲನೆಯ ದಿಕ್ಕನ್ನು ಗ್ರಹಿಸುವ, ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಲು ಬೇಕಾದ ಪರಿಹಾರಗಳನ್ನು ಕಂಡುಕೊಳ್ಳಬಹುದಾದ ನುಡಿರಚನೆಗಳನ್ನಾಗಿ ಭಾವಿಸಿ ಇಲ್ಲಿ ಅಭ್ಯಾಸ ನಡೆಸಲು ಉದ್ದೇಶಿಸಲಾಗಿದೆ. ಆ ಮೂಲಕ ಸಾಹಿತ್ಯದ ಕಥನವು ನಮ್ಮ ಸದ್ಯಃಪೂರ್ವದ ಚರಿತ್ರೆ ಮತ್ತು ವರ್ತಮಾನವನ್ನು ಗ್ರಹಿಸಿ, ಕಟ್ಟಿಕೊಡುವ ನೆಲೆಗಳನ್ನು ಕಂಡುಕೊಳ್ಳುವುದು ಇಲ್ಲಿನ ಅಧ್ಯಯನದ ಉದ್ದೇಶವಾಗಿದೆ.

ಸಮಾಜವೆಂದರೆ ಮನುಷ್ಯ ಸಂಬಂಧಗಳ ಕುರಿತಾದದ್ದು ಮಾತ್ರ ಎಂಬ ತಿಳುವಳಿಕೆ ಈಗ ಇತಿಹಾಸ. ಈ ಬಗೆಯ ಕಲ್ಪನೆ, ಆಲೋಚನೆ ಸಮಾಜಕ್ಕೆ ಒಂದು ಸೀಮಿತ ಅರ್ಥವನ್ನು ಅರೋಪಿಸಿದಂತಾಗುತ್ತದೆ. ಇಂದು ಸಮಾಜವೆಂದರೆ ಮಾನವ ಕೇಂದ್ರಿತ ಮಾತ್ರವಾಗಿ ಉಳಿದಿಲ್ಲ. ಮರ, ಗಿಡ, ಪ್ರಾಣಿ, ಪಕ್ಷಿ, ಕ್ರಿಮಿ–ಕೀಟಗಳೂ ಸಹ ಸಮಾಜದ ಪರಿಕಲ್ಪನೆಯಲ್ಲಿ ಸೇರುತ್ತವೆ. ಇಂದು 'ಸಂಸ್ಕೃತಿ' ಪರಿಭಾಷೆ ಪಡೆದಷ್ಟೇ ವಿಶಾಲವ್ಯಾಪ್ತಿಯನ್ನು ಸಮಾಜವು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಪೂರ್ಣಚಂದ್ರ ತೇಜಸ್ವಿಯವರಿಗೆ ಈ ಭೂಮಿಯ ಮೇಲಿನ ಪ್ರತಿಯೊಂದು ಜೀವಿಯೂ ಸಮಾಜದ ಭಾಗವೇ ಆಗಿತ್ತು. ಆ ಜೀವಿಯ ಪ್ರತಿಯೊಂದು ಚಲನೆಯೂ ಸಮಾಜದ ಚಲನೆಯೆಂದೇ ಅವರು ಭಾವಿಸಿದ್ದರು. ಯಾವುದೇ ಜೀವಿಯ ಅವನತಿಯೆಡೆಗಿನ ನಡೆಯನ್ನು ಸಮಾಜದ ಅವನತಿಯೆಂದೇ ಅವರು ಗ್ರಹಿಸುತ್ತಿದ್ದರು. ಅವರ ಕುಬಿ ಮತ್ತು ಇಯಾಲ, ಅವನತಿ, ತಬರನ ಕಥೆ, ತುಕ್ಕೋಜಿ ಮುಂತಾದ ಕಥೆಗಳು, ಚಿದಂಬರ ರಹಸ್ಯ, ಕರ್ವಾಲೋ, ಜುಗಾರಿ ಕ್ರಾಸ್ ಮಾಯಾಲೋಕ ಮುಂತಾದ ಕಾದಂಬರಿಗಳು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿ ನಿಲ್ಲುತ್ತವೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಥನಗಳಿಗೆ ಸಾಮಾಜಿಕ ಕಾಳಜಿಯನ್ನು ಮುಖಾಮುಖಿಯಾಗಿಸುವ ಮೂಲಕ ಅವರ ಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿಯು ಯಾವ ಯಾವ ನೆಲೆಗಳಲ್ಲಿ ದಾಖಲಾಗಿದೆ, ಅವು ನಿರ್ವಹಣೆಗೊಳ್ಳುವ ವಿಧಾನಗಳಾವುವು ಎಂಬುದನ್ನು ಇಲ್ಲಿ ಕಂಡುಕೊಳ್ಳಲು ಉದ್ದೇಶಿಸಲಾಗಿದೆ.

ತೇಜಸ್ವಿಯವರ ಸಾಹಿತ್ಯವನ್ನು ಕುರಿತ ಸಂಶೋಧನಾ ಆಧ್ಯಯನಗಳಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ಕಾಳಜಿಯನ್ನು ಮುಖಾಮುಖಿಯಾಗಿಸುವ ಪ್ರಯತ್ನಗಳು ತುಂಬಾ ವಿರಳವಾಗಿವೆ.

ಹಾಗಾಗಿ ಇಲ್ಲಿ ಅವರ ಸಾಹಿತ್ಯವನ್ನು ಸಾಮಾಜಿಕ ಕಾಳಜಿಯ ಹಿನ್ನಲೆಯಲ್ಲಿ ಸಂಶೋಧನೆಯ ವಸ್ತುವನ್ನಾಗಿ ಆಯ್ದುಕೊಂಡು ಅಧ್ಯಯನವನ್ನು ನಡೆಸಲಾಗಿದೆ.

ತೇಜಸ್ವಿಯವರು ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನ ಸಮಕಾಲೀನರಿಗಿಂತ ಭಿನ್ನರೀತಿಯಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡವರು. ತೇಜಸ್ವಿಯಂತಹ ಲೇಖಕ ನಮಗೆ ಮುಖ್ಯವಾಗುವುದು ಅವರ ಮಾತುಗಳಿಂದ ಅಥವಾ ವಕ್ತಾರಿಕೆಯಿಂದ ಖಂಡಿತಾ ಅಲ್ಲ. ಯಾವ ಮುಲಾಜುಗಳಿಗೂ ಒಳಗಾಗದೇ ತನಗೆ ಸರಿಕಂಡ ಹಾಗೆ ಬದುಕುವುದರಿಂದ. ನಮ್ಮ ಅನೇಕ ಸಾಹಿತ್ಯ, ಸಾಹಿತ್ಯೇತರ ಹವ್ಯಾಸಗಳ ನಡುವೆ ಬದುಕಿದ್ದ ತೇಜಸ್ವಿ ಸೃಜನಶೀಲವಷ್ಟೇ ಅಲ್ಲ, ಚಲನಶೀಲ ಲೇಖಕರೂ ಹೌದು. ತಮಗೆ ಅನಿಸಿದ್ದನ್ನು ನೇರಾನೇರ ಮಾತನಾಡುವುದಲ್ಲದೆ, ಬರೆಯಲೂ ಹಿಂಜರಿಯದ ಪ್ರಾಮಾಣಿಕರು ಮತ್ತು ನಿಷ್ಠುರವಾದಿ. ಈ ಎಲ್ಲಾ ಕಾರಣಗಳು ಈ ಅಧ್ಯಯನ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ನನ್ನನ್ನು ಪ್ರಬಲವಾಗಿ ಪ್ರೇರೇಪಿಸಿವೆ.

ತೇಜಸ್ವಿಯವರ ಬದುಕು ಮತ್ತು ಸಾಹಿತ್ಯವನ್ನು ಕುರಿತಾದ ಅಧ್ಯಯನಗಳು ಸಾಕಷ್ಟು ನಡೆದಿವೆ. ನಡೆಯುತ್ತಲೂ ಇವೆ. ತನ್ನ ಸಮಕಾಲೀನ ಲೇಖಕರಿಗಿಂತ ವಿಭಿನ್ನ ರೀತಿಯ ನಿಲುವುಗಳನ್ನು ಪ್ರಕಟಿಸಿದ ತೇಜಸ್ವಿಯವರು, ವಿವಿಧ ಕಾಲಘಟ್ಟಗಳಲ್ಲಿ ತನ್ನ ಸಾಹಿತ್ಯ ರಚನೆಯ ನಿಲುವುಗಳಲ್ಲಿ ಅಗಾಧ (ಕ್ರಾಂತಿಕಾರಕ) ಬದಲಾವಣೆಗಳನ್ನು ಮಾಡಿಕೊಂಡವರು. ಹಾಗೆಯೇ ಸಭೆ ಸಮಾರಂಭಗಳ ಒಡ್ಡೋಲಗಗಳ ಹಾವಳಿಯಿಂದಾಗಿ ದೂರವಿರಲು ಬಯಸಿದವರು. ತೇಜಸ್ವಿಯವರ ಹೊಸದಿಗಂತದೆಡೆಗಿನ ನಡಿಗೆಯನ್ನು ಕೆಲವು ವಿಮರ್ಶಕರು ಸ್ವಾಗತಿಸಿದ್ದಾರೆ. ಇನ್ನು ಕೆಲವರು ಅದರಲ್ಲಿ ಹೊಸದೇನೂ ಇಲ್ಲ ಎಂದು ಅವರ ನಡೆಯನ್ನು ನಿರಾಕರಿಸಿದ್ದಾರೆ. ಕೆಲವು ವಿಮರ್ಶಕರು ತೇಜಸ್ವಿಯವರು ತಮ್ಮ ಸೃಜನಶೀಲತೆಯನ್ನು ವಿಜ್ಞಾನಕ್ಕೆ ಮತ್ತು ತಂತ್ರಜ್ಞಾನಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ ಎಂದರೆ, ಇನ್ನು ಕೆಲವರು ಅವರ ಬಹುಮುಖ ಪ್ರತಿಭೆಯನ್ನು ಶ್ಲಾಘಿಸಿದ್ದಾರೆ. ಹೀಗೆ ಅನೇಕರ ವಿಮರ್ಶೆಗಳಿಗೆ ತೇಜಸ್ವಿ ಗುರಿಯಾಗಿದ್ದಾರೆ.

ಕೆ.ವಿ.ನಾರಾಯಣ್, ಜಿ.ಎಚ್.ನಾಯಕ್, ಕೀರ್ತಿನಾಥ ಕುರ್ತಕೋಟಿ, ಗಿರಡ್ಡಿ ಗೋವಿಂದರಾಜು, ಯು.ಆರ್.ಅನಂತಮೂರ್ತಿ, ಚಂದ್ರಶೇಖರ ನಂಗಲಿ, ರಹಮತ್ ತರೀಕೆರೆ, ಟಿ.ಪಿ.ಅಶೋಕ, ಹೆಚ್.ಶಶಿಕಲಾ, ಕೆ.ಪುಟ್ಟಸ್ವಾಮಿ, ನಟರಾಜ್ ಹುಳಿಯಾರ್, ಎಂ.ಎಸ್.ಆಶಾದೇವಿ, ಎಸ್.ಆರ್. ವಿಜಯಶಂಕರ, ಮುಂತಾದವರು ತೇಜಸ್ವಿಯವರ ಸಾಹಿತ್ಯವನ್ನು ತಮ್ಮ ವಿಮರ್ಶೆಗೆ ಒಳಗು ಮಾಡಿದ್ದಾರೆ. ಅವರು ತೇಜಸ್ವಿಯವರ ಸಾಹಿತ್ಯವನ್ನು ಯಾವ ಯಾವ ನೆಲೆಗಳಿಂದ ನೋಡಲು ಪ್ರಯತ್ನಿಸಿದ್ದಾರೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳುವ ಪ್ರಯತ್ನ ನಡೆಸಲೂ ಉದ್ದೇಶಿಸಲಾಗಿದೆ. ಇವುಗಳ ಮೂಲಕ ತೇಜಸ್ವಿ ಮತ್ತು ಅವರ ಅಧ್ಯಯನಕ್ಕೆ ಗುರಿಪಡಿಸಿರುವ ವಿಧಾನಗಳು ಮತ್ತು ಅವುಗಳ ಹಿಂದಿನ ತಾತ್ವಿಕ

ನಿಲುವುಗಳು ಯಾವುವು? ತೇಜಸ್ವಿಯವರ ಸಾಹಿತ್ಯಿಕ ನಿಲುವುಗಳ ಕುರಿತು ಅವರ ತಕರಾರುಗಳೇನು? ಎಂಬುದನ್ನೂ ಇಲ್ಲಿ ಕಂಡುಕೊಳ್ಳಲು ಉದ್ದೇಶಿಸಲಾಗಿದೆ. ಈ ಮೂಲಕ ತೇಜಸ್ವಿಯವರ ಕಥನ ಸಾಹಿತ್ಯದ ಸಾಮಾಜಿಕ ಕಾಳಜಿಗಳ ಭಿನ್ನ ಅಯಾಮಗಳು ಚರ್ಚೆಗೆ ಒಳಗಾಗಿವೆಯೇ ಎಂಬುದನ್ನು ಕೂಡ ಕಂಡುಕೊಳ್ಳಲು ಈ ಅಧ್ಯಯನದ ಆರಂಭಕ್ಕೇ ಉದ್ದೇಶಿಸಲಾಗಿದೆ.

ಇಂದು ಇಡೀ ಸಮಾಜ ಗೊಂದಲ, ಗಾಬರಿ, ಆತಂಕಗಳಿಂದ ನರಳುತ್ತಿದೆ. ತಬ್ಬಲಿತನವನ್ನು ಅನುಭವಿಸುತ್ತಿದೆ. ಮಾನವೀಯತೆ, ಶಾಂತಿ ಮಾಯವಾಗಿ ಹಿಂಸೆ ತಾಂಡವವಾಡುತ್ತಿದೆ. ಗ್ರಾಮಜೀವನದ ಬಗ್ಗೆ ಯುವಜನತೆಯಲ್ಲಿ ಕೀಳರಿಮೆ ಬೆಳೆಯುತ್ತಿದೆ. ಗ್ರಾಮ ಮತ್ತು ನಗರಗಳ ನಡುವೆ ಸಂಘರ್ಷಮಯ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆಲ್ಲಾ ಕಾರಣವಾಗಿರುವುದು ಭ್ರಮೆ ಮತ್ತು ಆಕರ್ಷಣೆಗಳಿಂದ ಪ್ರತಿಯೊಬ್ಬರನ್ನು ತನ್ನ ತಕ್ಕೆಗೆ ಸೆಳೆಯುತ್ತಿರುವದು ಸರಕು ಸಂಸ್ಕೃತಿ. ಈ ಸರಕು ಸಂಸ್ಕೃತಿಯೇ ಆಧುನಿಕತೆಯಾಗಿದೆ. ಈ ಆಧುನಿಕತೆಯನ್ನು ಪರಂಪರೆಯ ಜಾತೀಯತೆ, ಮೌಢ್ಯತೆ, ಮತೀಯವಾದ, ಅಸಮಾನತೆ ಮುಂತಾದ ಕಾಯಿಲೆಗಳಿಗೆ ಔಷಧಿಯಂತೆ ಭಾವಿಸಲಾಗಿತ್ತು. ಆದರೆ ಇಂದು ಇದೇ ಆಧುನಿಕತೆ ಪ್ರತಿಯೊಂದನ್ನೂ ವ್ಯಾಪಾರದ, ಅಧಿಕಾರದ ನೆಲೆಯಿಂದ ನೋಡುವ ಹೊಸ ಬಗೆಯ ರೋಗಗಳನ್ನೂ ಸೃಷ್ಟಿಸುತ್ತಿದೆ. ಇಂತಹ ರೋಗಗಳಿಂದ ಬಿಡುಗಡೆಗೊಳ್ಳುವ ವಿಧಾನಗಳಾವುವು?

ಇಂದು ಆಧುನಿಕ ಸಂವೇದನೆ ಪ್ರತಿಯೊಂದನ್ನೂ ಆರ್ಥಿಕ ನೆಲೆಯಿಂದ ಕಾಣುತ್ತಿದ್ದು, ನಮ್ಮ ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧಗಳು ಹಾಗೂ ಗ್ರಾಮ ಸಮುದಾಯಗಳು ವಿಘಟನೆಗೊಳ್ಳುತ್ತಿವೆ. ಅಲ್ಲಿನ ಗ್ರಾಮಕಸುಬು, ಕುಶಲಕಲೆಗಳು, ಅವರ ಜೀವನ ವಿಧಾನಗಳು ಅವನತಿಯಾಗುತ್ತಿರುವ ಇಲ್ಲವೇ ಕೀಳರಿಮೆಗೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ಇವೆಲ್ಲಕ್ಕೂ ತೇಜಸ್ವಿ ಕಥನ ಹೇಗೆ ಪ್ರತಿಕ್ರಿಯಿಸುತ್ತದೆ. ಈ ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿಯಲ್ಲಿ ರೈತ, ಹೆಣ್ಣು, ನೈಸರ್ಗಿಕ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ತೇಜಸ್ವಿ ಕಥನ ಸೂಚಿಸುತ್ತಿರುವ ಪರಿಹಾರಗಳೇನು ಎಂಬುದನ್ನು ಕಂಡುಕೊಳ್ಳಲೂ ಇಲ್ಲಿ ಉದ್ದೇಶಿಸಲಾಗಿದೆ.

ಆಧುನಿಕತೆಯ ಪ್ರತಿಫಲವೇ ಆದ ಶಿಕ್ಷಣವು ಜನತೆಯಲ್ಲಿ ಆತ್ಮವಿಶ್ವಾಸ ತುಂಬುವ ಬದಲು ಅತಂತ್ರ, ಅಸಹಾಯಕತೆ ಮತ್ತು ತಬ್ಬಲಿತನಗಳನ್ನು ಉಂಟುಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಆಧುನಿಕತೆಯ ಅನಾಚಾರಗಳನ್ನು, ಸಂದಿಗ್ಧತೆಗಳನ್ನು ತೇಜಸ್ವಿ ಕಥನ ಸಾಹಿತ್ಯ ಯಾವ ರೀತಿ ಸೆರೆಹಿಡಿಯುತ್ತದೆ, ನಿರ್ವಚಿಸುತ್ತದೆ ಮತ್ತು ವಿಶ್ಲೇಷಿಸುತ್ತದೆ? ಆಧುನಿಕ ಜ್ಞಾನ ಮತ್ತು ಪರಂಪರೆ ತಿಳುವಳಿಕೆಯ ಕುರಿತು ತೇಜಸ್ವಿ ಕಥನದ ನಿಲುವುಗಳೇನು? ಅವರ ಗ್ರಾಮ

ಮತ್ತು ನಗರ ಪರಿಕಲ್ಪನೆಗಳೇನು? ಆಧುನಿಕತೆ ಮತ್ತು ಪರಂಪರೆಯನ್ನು ಯಥಾವತ್ತು ತೇಜಸ್ವಿ ಶ್ರೇಷ್ಠವಾದದ್ದು ಎಂದು ಒಪ್ಪಿಕೊಂಡವರೇ ಅಥವಾ ನಿರಾಕರಿಸಿದವರೇ? ಒಟ್ಟಾರೆ ಆಧುನಿಕತೆ ಮತ್ತು ಪರಂಪರೆಯ ಕುರಿತು ಅವರ ಕಥನ ಸಾಹಿತ್ಯದಲ್ಲಿನ ಜಿಜ್ಞಾಸೆಗಳೇನು? ಈ ಹಿನ್ನೆಲೆಯಲ್ಲಿ ನಮ್ಮ ಸಮಾಜಕ್ಕೆ ಬೇಕಾದ ಜ್ಞಾನಮೀಮಾಂಸೆ-ಆಚಾರಮೀಮಾಂಸೆಯು ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿದೆಯೆ? ಎಂಬುದೆಲ್ಲವನ್ನೂ ಈ ಅಧ್ಯಯನದಲ್ಲಿ ಆಧುನಿಕತೆ ಮತ್ತು ಪರಂಪರೆಯನ್ನು ತೇಜಸ್ವಿಯವರ ಕಥನ ಸಾಹಿತ್ಯಕ್ಕೆ ಮುಖಾಮುಖಿಯಾಗಿಸುವ ಮೂಲಕ ಕಂಡುಕೊಳ್ಳಲು ಉದ್ದೇಶಿಸಲಾಗಿದೆ.

ಇಂದು ಕೃಷಿ ಒಂದು ಲಾಭದಾಯಕ ಉದ್ಯೋಗವಲ್ಲ. 'ಬೇಸಾಯ ನೀಸಾಯ' ಎಂಬ ಮಾತಿನಂತೆ ಕೃಷಿಯನ್ನು ನಂಬಿ ಬದುಕಲು ಅಸಾಧ್ಯ ಎಂಬ ನಿರ್ಧಾರಕ್ಕೆ ರೈತರು ಬಂದು ತಲುಪಿದ್ದಾರೆ. ದಿನೇ ದಿನೇ ವ್ಯವಸಾಯದ ಮೇಲಿನ ಒಲವು, ಅವಲಂಬನೆ ಕಡಿಮೆಯಾಗುತ್ತಿದೆ. ರೈತರು ಸಾಲಗಾರರಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂದು ತಲುಪಿದ್ದಾರೆ. ಸರ್ಕಾರಗಳೂ ಸಹಾ ಅಭಿವೃದ್ಧಿಯ ನೆಪವೊಡ್ಡಿ ರೈತರ ಕೃಷಿ ಭೂಮಿಯನ್ನು ಬಂಡವಾಳಿಗರಿಗೆ ಧಾರೆಯೆರೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪದವೀಧರರಾದರೂ ಸ್ವತಃ ಕೃಷಿಕರಾಗಿ, ಸಮಾಜವಾದಿ, ರೈತ ಹೋರಾಟಗಳ ಸಕ್ರಿಯ ಕಾರ್ಯಕರ್ತರಾಗಿ ತಾವು ಮಾಡಿದ ಪ್ರಯೋಗಗಳು, ಪಡೆದ ಅನುಭವಗಳನ್ನು ತಮ್ಮ ಕಥನಗಳ ಮೂಲಕ ದಾಖಲಿಸುತ್ತಾ ಬಂದಿರುವ ತೇಜಸ್ವಿಯವರ ಕಥನ ಸಾಹಿತ್ಯದ ರೈತಪರ ನಿಲುವುಗಳೇನು? ತೇಜಸ್ವಿಯವರು ಸಾಮಾಜಿಕ ಮತ್ತು ನೈಸರ್ಗಿಕ ಪರಿಸರಗಳ ಒಟ್ಟು ವ್ಯವಸ್ಥೆಯನ್ನೇ ರೈತ ವ್ಯಾಪ್ತಿಯಲ್ಲಿ ತಂದು ಚರ್ಚಿಸಲುಕಾರಣವೇನು? ಆಧುನಿಕತೆಯ ಬಳುವಳಿಯಾದ ವಿಜ್ಞಾನ ಮತ್ತು ತಂತ್ರಜ್ಞಾನದ ಅವಿಷ್ಕಾರಗಳು ರೈತ ಮತ್ತು ಅವನು ಅವಲಂಬಿಸಿರುವ ಅಥವಾ ಅವನನ್ನು ಅವಲಂಬಿಸಿರುವ ವಲಯಗಳ ಸಂಕಟ ಮತ್ತು ಸಮಸ್ಯೆಗಳನ್ನು ನಿವಾರಣೆ ಮಾಡಬೇಕಿತ್ತು. ಆದರೆ ರೈತನ ಇಂದಿನ ಸಂಕಟಗಳಿಗೆ ಪರಿಹಾರವಾಗಬೇಕಿದ್ದ ಅವುಗಳು ಹೇಗೆ ಮತ್ತಷ್ಟು ಸಮಸ್ಯೆಗಳ ಸೃಷ್ಟಿಗೆ ಕಾರಣವಾಗುತ್ತಿವೆ? ಆಧುನಿಕ ಶಿಕ್ಷಣ ವ್ಯವಸ್ಥೆ ರೈತಕಸುಬಿಗೆ ಪೂರಕವಾಗಿ ಕೆಲಸ ಮಾಡುತ್ತಿದೆಯೇ? ಈ ವ್ಯವಸ್ಥೆಯ ಅಭಿರುಚಿಗಳು, ಆಸಕ್ತಿಗಳು, ಅಲ್ಲಿನ ಭಷ್ಟಾಚಾರ, ವ್ಯಾಪಾರಿ ಮನೋಭಾವ ಮುಂತಾದುವುಗಳು ರೈತನ ಹಾಗೂ ಅವನ ವೃತ್ತಿಯ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳೇನು? ಸರ್ಕಾರಿ ಪ್ರಾಯೋಜಿತ ಕೃಷಿ ಸಂಶೋಧನೆಗಳು, ಸಂಶೋಧಕರು, ಕೃಷಿ ವಿಶ್ವವಿದ್ಯಾಲಯಗಳು ಹಾಗೂ ರೈತನ ನಡುವೆ ಬಹುದೊಡ್ಡ ಕಂದಕಗಳೇ ಸೃಷ್ಟಿಯಾಗಿವೆ. ಈ ಹಿನ್ನೆಲೆಯಲ್ಲಿ ಸಂಶೋಧಕರು, ಸಂಶೋಧನೆಗಳು ಮತ್ತು ರೈತರ ನಡುವಿನ ಸಂಬಂಧ ಹೇಗಿರಬೇಕೆಂದು ತೇಜಸ್ವಿ ಕಥನ ಬಯಸುತ್ತದೆ? ರೈತನನ್ನು ಕಾಡುತ್ತಿರುವ ಸಮಸ್ಯೆಗಳಿಗೆ

ಪ್ರಕೃತಿಯ ಜೊತೆಗೆ ಆಳುವ ಪ್ರಭುತ್ವಗಳು, ಬಂಡವಾಳಿಗರು, ಸ್ವತಃ ರೈತರೇ ಸೃಷ್ಟಿಸಿಕೊಂಡಿರುವ ಸಮಸ್ಯೆಗಳನ್ನು ತೇಜಸ್ವಿ ಕಥನ ಗುರುತಿಸುವ ಬಗೆ ಯಾವುದು? ರೈತರ ಹಿತಕಾಯುವ ಹಿನ್ನೆಲೆಯಲ್ಲಿ ಸ್ಥಾಪನೆಯಾಗಿರುವ ಸಹಕಾರಿ ವ್ಯವಸ್ಥೆ ಭ್ರಷ್ಟಾಚಾರದ ಕೂಪವಾಗಿರುವುದಕ್ಕೆ ಕಾರಣಗಳೇನು? ಈ ನಿಟ್ಟಿನಲ್ಲಿ ರೈತರ ಸಮಸ್ಯೆಗಳು ಮತ್ತು ಸಂಕಟಗಳಿಗೆ ತೇಜಸ್ವಿಯವರ ಕಥನ ಸಾಹಿತ್ಯವು ಪರಿಹಾರಗಳನ್ನೇನಾದರೂ ತೋರುತ್ತಿದೆಯೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲು ಉದ್ದೇಶಿಸಲಾಗಿದೆ. ಆ ಮೂಲಕ ಸಾಹಿತ್ಯದ ಹೊಣೆಗಾರಿಕೆ ಮತ್ತು ಪ್ರಸ್ತುತತೆಗಳ ಪ್ರಶ್ನೆಗಳನ್ನೂ ಸದರಿ ಅಧ್ಯಯನದಲ್ಲಿ ವಿವರಿಸಿಕೊಳ್ಳಲು, ಕೇಳಿಕೊಳ್ಳಲು ಉದ್ದೇಶಿಸಲಾಗಿದೆ.

ತೇಜಸ್ವಿಯವರು ಪರಿಸರ ಕುರಿತು ಕುರುಡು ನಂಬಿಕೆಯುಳ್ಳವರಲ್ಲ. ಕಾರಂತರಂತೆ ನೇರವಾಗಿ ಪರಿಸರ ಕಾಳಜಿಯನ್ನು ವ್ಯಕ್ತಪಡಿಸಿದವರಲ್ಲ. ಕುವೆಂಪುರವರಂತೆ ಪರಿಸರದ ಬಗೆಗೆ ಆರಾಧನ ಮನೋಭಾವವುಳ್ಳವರೂ ಅಲ್ಲ. ಪರಿಸರ ಕುರಿತು ಸುದೀರ್ಘ ಭಾಷಣಗಳನ್ನು ಮಾಡಿದವರೂ ಅಲ್ಲ. ಹಾಗೆಂದರೆ ತೇಜಸ್ವಿಯವರಿಗೆ ಪರಿಸರ ಕಾಳಜಿ ಇರಲಿಲ್ಲ ಎಂದೂ ಅಲ್ಲ. ಏಕೆಂದರೆ ತೇಜಸ್ವಿಯವರಿಗೆ ಮರ, ಗಿಡ, ಪ್ರಾಣಿ, ಪಕ್ಷಿಗಳೇ ಪರಿಸರವಾಗಿರಲಿಲ್ಲ. ಬೌದ್ಧಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರಗಳು ಅವರ ಈ ಕಾಳಜಿಯ ಪರಧಿಯಲ್ಲಿ ಸೇರುತ್ತವೆ. ಈ ಹಿನ್ನೆಲೆಯಲ್ಲಿ ಪರಿಸರದ ಕುರಿತ ಗ್ರಹಿಕೆ ಮತ್ತು ನಿರ್ವಚನ ಸಮಾಜದ ಭಿನ್ನ ಗತಿಶೀಲತೆಗಳನ್ನು ಕುರಿತ ವ್ಯಾಖ್ಯಾನಗಳು ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಹೇಗೆ ವ್ಯಕ್ತವಾಗಿವೆ ಮತ್ತು ಇತರೆ ಪರಿಸರ ಚಿಂತಕರಿಗಿಂತ ತೇಜಸ್ವಿಯವರು ತಮ್ಮ ಕಥನದ ಮೂಲಕ ಪರಿಸರವನ್ನು ಗುರುತಿಸುವ, ಗ್ರಹಿಸುವ, ವ್ಯಾಖ್ಯಾನಿಸುವ ವಿಧಾನಗಳು ಯಾವುವು ಎಂಬುದನ್ನು ಅವರ ಕಥನಗಳ ಮೂಲಕ ಕಂಡುಕೊಳ್ಳುವುದು ಕೂಡ ಈ ಅಧ್ಯಯನದ ಉದ್ದೇಶವಾಗಿದೆ.

ಸರ್ಕಾರಿ ಪ್ರಾಯೋಜಿತವಾದ ಆಧುನಿಕ ಸುಶಿಕ್ಷಿತ ಸಮಾಜ ಮತ್ತು ಸ್ವಘೋಷಿತ ಪರಿಸರ ಕಾಳಜಿಯ ವ್ಯಕ್ತಿ ಹಾಗೂ ಸಂಸ್ಥೆಗಳು ಪರಿಸರದ ಕುರಿತು ವಿಶೇಷವಾದ ಹಕ್ಕು ಇರುವಂತೆ ವರ್ತಿಸುತ್ತಿವೆ. ಈ ಬಗ್ಗೆ ತೇಜಸ್ವಿ ಕಥನದ ಪ್ರತಿಕ್ರಿಯೆ ಏನು? ಮನುಷ್ಯನ ಮಧ್ಯಪ್ರವೇಶದಿಂದ ಸಸ್ಯಜಗತ್ತು ಹಾಗೂ ಮನುಷ್ಯೇತರ ಜೀವ ಸಂಕುಲ ಬೇರೆಬೇರೆ ಬಗೆಯ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿದೆ. ಇದರಿಂದ ನೈಸರ್ಗಿಕ ಪರಿಸರ ಎದುರಿಸಬೇಕಾದ ಸಂಕಷ್ಟಗಳಾವುವು? ಈ ಬಗೆಯ ಮಾನವನ ಕಾಳಜಿ ಮತ್ತು ಮಧ್ಯಪ್ರವೇಶವನ್ನು ನಿಸರ್ಗ ಹೇಗೆ ಪ್ರತಿರೋಧಿಸುತ್ತದೆ ಮತ್ತು ಬಿಡುಗಡೆಯ ಹಾದಿಗಳನ್ನು ಕಂಡುಕೊಳ್ಳುತ್ತದೆ? ಒಂದು ಕಡೆ ನಿಸರ್ಗದ ರಕ್ಷಣೆಯ ಮಾತನ್ನಾಡುತ್ತಲೇ, ಅಭಿವೃದ್ಧಿಯ ನೆಪವೊಡ್ಡಿ ಅವನತಿಗೆ ಅವಕಾಶ

ನೀಡುತ್ತಿರುವ ಪ್ರಭುತ್ವಗಳ ದ್ವಿಮುಖ ನೀತಿಯ ಕುರಿತು ತೇಜಸ್ವಿ ಕಥನ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಕಂಡುಕೊಳ್ಳಲು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ.

ತೇಜಸ್ವಿ ತಮ್ಮ ಕಥನಗಳಲ್ಲಿ ಮಾನವ ಪ್ರಪಂಚಕ್ಕಿಂತ ದಟ್ಟವಾಗಿ ಪ್ರಸ್ತಾಪಿಸುವ ಮಾನವೇತರ ಜೀವಸಂಕುಲವಾದ ಪ್ರಾಣಿ, ಪಕ್ಷಿ, ಕ್ರಿಮಿ-ಕೀಟಗಳು, ಬೆಟ್ಟ-ಗುಡ್ಡ, ನದಿ, ಝರಿ, ತೊರೆಗಳನ್ನು ತರುವ ಉದ್ದೇಶವೇನು ಹಾಗೂ ಅದರ ಹಿಂದಿನ ಆಶಯ ಯಾವುದು? ಮಾನವ ಹಾಗೂ ಮಾನವೇತರ ಪರಿಸರವನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ತೇಜಸ್ವಿಯವರ ಕಥನ ಸಾಹಿತ್ಯ ಬಳಸುವ ನಿರೂಪಣಾ ವಿಧಾನ ಯಾವುದು? ಆಧುನಿಕ ಅವಿಷ್ಕಾರಗಳು, ಸಂಶೋಧನೆಗಳು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳ ಮೇಲೆ ಬೀರುತ್ತಿರುವ ಪರಿಣಾಮಗಳೇನು ಮತ್ತು ಅವು ಪ್ರಗತಿಗೆ ಕಾರಣವಾಗುತ್ತಿವೆಯೋ ಅಥವಾ ಅವನತಿಗೆ ಹಾದಿಯಾಗುತ್ತಿವೆಯೋ ಎಂಬುದನ್ನು ತೇಜಸ್ವಿ ಕಥನಗಳ ಮುಖೇನ ಕಂಡುಕೊಳ್ಳಲು ಇಲ್ಲಿ ಉದ್ದೇಶಿಸಲಾಗಿದೆ.

ಪ್ರತಿಯೊಂದನ್ನೂ ವ್ಯಾವಹಾರಿಕ ದೃಷ್ಟಿಯಿಂದ ನೋಡುವ ಆಧುನಿಕ ಸಮಾಜ ಎದುರಿಸಬೇಕಾದ ಸಮಸ್ಯೆಗಳಾವುವು ಮತ್ತು ಸಾಮಾಜಿಕ ಮತ್ತು ನೈಸರ್ಗಿಕ ಪರಿಸರಗಳು ಯಾವ ಬಗೆಯ ಹೊಕ್ಕುಬಳಕೆ ಸಂಬಂಧವನ್ನು ಹೊಂದಿರಬೇಕೆಂದು ತೇಜಸ್ವಿ ಕಥನ ಬಯಸುತ್ತದೆ ಎಂಬುದನ್ನು ಕಂಡುಕೊಳ್ಳುವುದು ಕೂಡ ಇಲ್ಲಿನ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಹಾಗೆಯೇ ಸಾಹಿತ್ಯದ ಮುಖೇನ ತೇಜಸ್ವಿಯವರ ಪರಿಸರ ಕುರಿತ ನಂಬಿಕೆಗಳು ಯಾವುವು? ಅವರು ಪರಿಸರವನ್ನು ಅವರ ಕಥನಗಳ ಮೂಲಕ ಅಖಂಡವಾಗಿ ಕಂಡುಕೊಳ್ಳಲು ಪ್ರಯತ್ನಿಸಿರುವ ಬಗೆ ಯಾವುದು? ಪರಿಸರ ಕಾಳಜಿಯು ಹೇಗೆ ಒಂದಿಡೀ ಸಮಾಜದ ಸ್ವಾಸ್ಥ್ಯದ ಚಿಂತನೆಯಾಗಿ ಬೆಳವಣಿಗೆ ಪಡೆಯುತ್ತದೆ. ಎಂಬುದನ್ನು ಕೂಡ ಇಲ್ಲಿ ತಿಳಿಯಲು ಉದ್ದೇಶಿಸಲಾಗಿದೆ.

ಸಾಮಾಜಿಕ ಚಲನಶೀಲತೆಯನ್ನು ಹಾಗೂ ಸ್ಥಿತ್ಯಂತರಗಳನ್ನು ದಾಖಲಿಸುವುದು ಸಾಹಿತ್ಯದ ಬಹುಮುಖ್ಯ ಕಾರ್ಯವಾಗಿದೆ. ಇಂದು ಜಾತಿಪದ್ಧತಿ, ಭ್ರಷ್ಟಾಚಾರ, ಭಯೋತ್ಪಾದನೆ, ಕೋಮುವಾದ, ಸ್ತ್ರೀ ಶೋಷಣೆ, ವರ್ಗ ಅಸಮಾನತೆ ಮುಂತಾದುವುಗಳು ಸಮಾಜದ ನೇತ್ಯಾತ್ಮಕ ಚಲನೆಗೆ ಕಾರಣವಾಗಿವೆ. ಸಮಾಜದಲ್ಲಿ ಮನುಷ್ಯ-ಮನುಷ್ಯರ ನಡುವೆ ನಂಬಿಕೆಯಿಲ್ಲದಂತಾಗಿದೆ. ಮನುಷ್ಯ ಸಂಬಂಧಗಳು ಛಿದ್ರಗೊಳ್ಳುತ್ತಿವೆ. ಮಾನವೀಯತೆ ಮಾಯವಾಗಿ ಅಶಾಂತಿ, ಹಿಂಸೆ ತಾಂಡವವಾಡುತ್ತಿದೆ. ಹೀಗಾಗಿ ಈ ಎಲ್ಲಾ ದುರಂತಗಳಿಂದ ಸಮಾಜವನ್ನು ಪಾರುಮಾಡುವ ಜರೂರಿನ ಕಾರ್ಯವಾಗಬೇಕಿದೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಥನ ಸಾಹಿತ್ಯವನ್ನು ಚರ್ಚೆಗೆ ಒಳಪಡಿಸಲಾಗಿದೆ. ಮತೀಯತೆ ಹಾಗೂ

ಕೋಮುವಾದದ ಹಿನ್ನೆಲೆಯಲ್ಲಿ ಸಮಾಜದಲ್ಲಿ ಉಂಟಾಗುವ ಅಪನಂಬಿಕೆ, ಅಭದ್ರತೆ, ಕೀಳರಿಮೆ, ದ್ವೇಷ, ಧಾರ್ಮಿಕತೆ, ಸಾಂಪ್ರದಾಯಿಕತೆ ಇವುಗಳ ಕುರಿತು ತೇಜಸ್ವಿಯವರ ಕಥನ ಸಾಹಿತ್ಯವು ನಮ್ಮನ್ನು ಹೇಗೆ ಎಚ್ಚರಿಸುವ ಕೆಲಸವನ್ನು ಮಾಡುತ್ತದೆ ಮತ್ತು ಸಾಮರಸ್ಯದ ಬದುಕಿನ ಕಡೆಗೆ ಹೇಗೆ ಕರೆದೊಯ್ಯುತ್ತದೆ ಎಂಬ ಅಂಶಗಳನ್ನು ಈ ಅಧ್ಯಯನದಲ್ಲಿ ಕ್ರೋಢೀಕರಿಸಿಕೊಳ್ಳಲು ಉದ್ದೇಶಿಸಲಾಗಿದೆ. ಹಾಗೆಯೇ ಜಾತಿ ಮತ್ತು ಮತೀಯ ನೆಲೆಯ ಸಮಾಜದ ಅಸಮಾನ ಸಂಬಂಧಗಳು ನಮ್ಮಲ್ಲಿ ಯಾವ ರೀತಿಯ ತಲ್ಲಣಗಳನ್ನು ಉಂಟುಮಾಡುತ್ತವೆ ಮತ್ತು ಅದರ ದುಷ್ಪರಿಣಾಮಗಳನ್ನು ಎದುರಿಸುವ ಮಾರ್ಗಗಳು ಯಾವುವು ಎಂಬುದನ್ನು ತೇಜಸ್ವಿ ಕಥನ ಸಾಹಿತ್ಯವು ನಿರ್ವಚಿಸುವ ಬಗೆ ಯಾವುದು ಎಂದು ಕಂಡುಕೊಳ್ಳುವ ಉದ್ದೇಶವನ್ನೂ ಈ ಅಧ್ಯಯನದಲ್ಲಿ ಇರಿಸಿಕೊಳ್ಳಲಾಗಿದೆ.

ಸಮಾಜವಾದಿ ರಾಮಮನೋಹರ ಲೋಹಿಯಾ ಅವರ ದಟ್ಟ ಪ್ರಭಾವಕ್ಕೆ ಒಳಗಾಗಿರುವ ತೇಜಸ್ವಿಯವರು ಸ್ವತಃ ಸರಳ ಅಂತರ್ಜಾತಿ ವಿವಾಹವಾದವರು. ಈ ಹಿನ್ನೆಲೆಯಲ್ಲಿ ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಗಳ ಕುರಿತು ತೇಜಸ್ವಿ ಕಥನ ಹೇಗೆ ಪ್ರತಿಕ್ರಿಯಿಸುತ್ತದೆ? ಇಂದು ಒಂದು ಸಮುದಾಯ ಮತ್ತೊಂದು ಸುಮುದಾಯದ ಬಗ್ಗೆ ದ್ವೇಷ ಬೆಳೆಸಿಕೊಂಡು ಗೋವಿನ ರಾಜಕಾರಣ, ಆಹಾರ, ಲವ್ ಜಿಹಾದ್, ಮತಾಂತರದ ಹೆಸರಿನಲ್ಲಿ ಚರ್ಚ್ ದಾಳಿ ಮತ್ತು ಹಲ್ಲೆಗಳ ಮೂಲಕ ಸಮಾಜದಲ್ಲಿ ಹಿಂಸೆಯನ್ನು ಸೃಷ್ಟಿಸುತ್ತಿರುವ ಪ್ರಸ್ತುತದಲ್ಲಿ ಈ ಎಲ್ಲಾ ಪ್ರಕ್ರಿಯೆಗಳ ಬಗೆಗೆ ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಯಾವ ನಿಲುವುಗಳನ್ನು ನಾವು ಕಾಣಬಹುದು ಎಂಬುದನ್ನು ಅರಿಯಲು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ.

ಪ್ರಸ್ತುತ ಸಮಾಜದಲ್ಲಿ ಲಾಭಕೋರ ಮನಸ್ಸುಗಳು ಜಾತಿವಾದ–ಧರ್ಮ–ಕೋಮುವಾದ–ಹಣ–ಅಧಿಕಾರ–ರಾಜಕೀಯ–ಭ್ರಷ್ಟಾಚಾರ–ವ್ಯಾಪಾರ–ಸಂಸ್ಕೃತಿ ಇವೆಲ್ಲಾ ಒಂದರೊಳಗೊಂದು ಸೇರಿಸಿ ವ್ಯವಹರಿಸುತ್ತಿವೆ. ಈ ಎಲ್ಲವುಗಳನ್ನು ಬಳಸಿಕೊಂಡೆ ಸಮಾಜದಲ್ಲಿ ಅಶಾಂತಿಯನ್ನು, ಸಂಘರ್ಷಗಳನ್ನು ಸೃಷ್ಟಿಸಿ, ದೇಶದ ನೈಸರ್ಗಿಕ ಸಂಪತ್ತನ್ನು ದೋಚಲಾಗುತ್ತಿದೆ. ಈ ಸಂಘರ್ಷದಲ್ಲಿ ಸಾವು ನೋವುಗಳಿಗೆ ಒಳಗಾಗುತ್ತಿರುವುದು, ಸಂತ್ರಸ್ಥರಾಗುತ್ತಿರುವುದು ಮತ್ತು ಲಾಭ ಮಾಡುತ್ತಿರುವುದು ಯಾರು? ತೇಜಸ್ವಿ ಕಥನ ಈ ಹುನ್ನಾರಗಳನ್ನು ನಿರ್ವಚಿಸುವ ಬಗೆ ಯಾವುದು? ಇದರ ಬಗ್ಗೆ ನಮ್ಮನ್ನು ಎಚ್ಚರಿಸುವ ಕ್ರಮ ಹಾಗೂ ತೋರುವ ಹೊರದಾರಿಗಳು ಯಾವುವು? ಎಂಬುದನ್ನು ತೇಜಸ್ವಿ ಕಥನದ ಓದಿನ ಮೂಲಕ ಗ್ರಹಿಸಿಕೊಳ್ಳಲು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ. ಇದೇ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಥನಗಳು ಸಮಾಜವನ್ನು ತೀವ್ರವಾಗಿ ಕಾಡುತ್ತಿರುವ ಜಾತಿವಾದ ಮತ್ತು ಕೋಮುವಾದದ ದುರಂತಗಳನ್ನು

ಯಾವ ರೀತಿ ದಾಖಲಿಸಿವೆ. ಹಾಗೂ ಅಲ್ಲಿ ನಾವು ಸಾಗಬಹುದಾದ ಹಾದಿಗಳ ಸುಳುಹುಗಳೇನಾದರೂ ಕಾಣುತ್ತವೆಯೇ? ಅವುಗಳ ಸ್ವರೂಪವೇನು ಎಂಬುದನ್ನು ಇವರ ಕಥನಗಳ ಮುಖೇನವೆ ಗ್ರಹಿಸಿಕೊಳ್ಳಲು ಕೂಡ ಇಲ್ಲಿ ಉದ್ದೇಶಿಸಲಾಗಿದೆ.

ಭಾರತದ ಸಾಮಾಜಿಕ ಸಂರಚನೆ ಪುರುಷಪ್ರಧಾನ ದೃಷ್ಟಿಯನ್ನು ಹೊಂದಿದ್ದು, ಹೆಣ್ಣನ್ನು, ಆಕೆಯ ಅಸ್ತಿತ್ವವನ್ನು ದಮನ ಮಾಡುವ ಪ್ರಕ್ರಿಯೆಯಲ್ಲಿ ಸದಾ ನಿರತವಾಗಿರುತ್ತದೆ. ಎಲ್ಲಾ ಬಗೆಯ ಪುರುಷ ನಿರ್ಮಿತ ಸಂಕೋಲೆಗಳಿಂದ ಬಿಡುಗಡೆಗೊಳ್ಳದ ಹೊರತು ಸ್ತ್ರೀ- ಪುರುಷ ಸಮಾನತೆಯ ಸಮಾಜದ ನಿರ್ಮಿತಿ ಎನ್ನುವುದು ಮರೀಚಿಕೆಯಾಗಿಯೇ ಉಳಿಯುವ ಅಪಾಯಗಳಿವೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಥನ ಸಾಹಿತ್ಯ ತೋರುವ ಹಾದಿಗಳನ್ನು ಗುರುತಿಸಲು ಇಲ್ಲಿ ಉದ್ದೇಶಿಸಲಾಗಿದೆ. ಪುರುಷರ ಜಾತಿಗಳು, ಆಚಾರಗಳು, ಮದುವೆಗಳು, ಸಂಪ್ರದಾಯಗಳು, ಮೂಡನಂಬಿಕೆಗಳ ವಿಕಾರಗಳು, ಹೀಗೆ ಪ್ರತಿಯೊಂದೂ ಮಹಿಳೆಯರಿಗೆ ಹಿಂಸೆ ನೀಡುವ ಮತ್ತು ಆಕೆಯನ್ನು ನಿಯಂತ್ರಿಸುವ ಗಂಡಸರ ನೀಚತಂತ್ರಗಳಾಗಿದ್ದು; ಎಲ್ಲಾ ಅವಘಡಗಳಿಗೂ ಹೆಣ್ಣನ್ನು ಆರೋಪಿಯನ್ನಾಗಿಸುವುದು, ಗಂಡಿನ ಪರಸ್ಪರ ದ್ವೇಷಾಸೂಯೆಗಳಿಗೂ ಆಕೆಯನ್ನೇ ಶಿಕ್ಷಿಸುವ ಪುರುಷಪ್ರಧಾನ ವ್ಯವಸ್ಥೆಯ ಕುತಂತ್ರಗಳನ್ನು ಛಿದ್ರಗೊಳಿಸುವ, ಆ ಮೂಲಕ ಲಿಂಗ ಶ್ರೇಣೀಕರಣವನ್ನು ಇಲ್ಲವಾಗಿಸುವ ಹಿನ್ನೆಲೆಯಲ್ಲಿ ತೇಜಸ್ವಿ ಕಥನ ಸಾಹಿತ್ಯ ತಳೆಯುವ ನಿಲುವುಗಳಾವುವು ಮತ್ತು ಅದು ತೋರುವ ಪರಿಹಾರಗಳೇನು ಎಂಬುದನ್ನು ಅರಿಯಲು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ.

ಸ್ತ್ರೀ ಶೋಷಣೆ ಎನ್ನುವುದು ಪ್ರದೇಶ, ಶಿಕ್ಷಣ, ಸೌಂದರ್ಯ, ಬಣ್ಣ, ಆಕಾರ, ಜಾತಿ, ಧರ್ಮ ಮತ್ತು ವರ್ಗ ಮುಂತಾದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಗುಪ್ತವಾಗಿ ಭಿನ್ನ ರೀತಿಯಲ್ಲಿ ಕಾರ್ಯರೂಪದಲ್ಲಿರುತ್ತದೆ. ಇವು ಎಷ್ಟೇ ಪ್ರಗತಿಪರವಾಗಿ ಕಂಡರೂ, ಹೆಣ್ಣನ್ನು ನಿಯಂತ್ರಿಸುವ, ಅವಳ ಸ್ವಾತಂತ್ರ್ಯವನ್ನು ದಮನ ಮಾಡುವ ಹುನ್ನಾರಗಳನ್ನೇ ಆಂತರ್ಯದಲ್ಲಿ ಹೊದಿರುತ್ತವೆ. ಇವುಗಳನ್ನು ತೇಜಸ್ವಿ ಕಥನ ಯಾವ ರೀತಿ ಗುರುತಿಸುತ್ತದೆ ಹಾಗೂ ಸಾಮಾಜಿಕ ಸ್ವಾಸ್ಥವನ್ನು ನೆಲೆಗೊಳಿಸುವಲ್ಲಿ ಹೆಣ್ಣಿನ ಪಾತ್ರವೇನು ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಒಟ್ಟಾರೆ ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ನಮ್ಮ ಆಧುನಿಕತೆ ಮತ್ತು ಪರಂಪರೆಗಳ ಮುಖಾಮುಖಿ ಹೇಗೆ ಆಗುತ್ತದೆ? ಜಾತಿ, ಧರ್ಮ, ಕೋಮು, ಮಹಿಳಾ ಸಮುದಾಯ, ರೈತಸಮುದಾಯಗಳ ಬಗ್ಗೆ ಮತ್ತು ಪರಿಸರ ಪ್ರಜ್ಞೆಯ ಬಗ್ಗೆ ಅಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಕಾಳಜಿಯ ವಿನ್ಯಾಸಗಳು ಯಾವುವು? ಇವೆಲ್ಲವೂ ತೇಜಸ್ವಿಯವರ ಕಥನಗಳಲ್ಲಿ

ನಿರ್ವಹಣೆಗೊಳ್ಳುವ ವಿಧಾನ ಅಥವಾ ಕ್ರಮಗಳಾವುವು ಎಂಬುದನ್ನು ಈ ಅಧ್ಯಯನದ ಮೂಲಕ ಅರಿಯಲು ಉದ್ದೇಶಿಸಲಾಗಿದೆ.

ಅಧ್ಯಯನದ ವ್ಯಾಪ್ತಿ-ಮಿತಿ

ತೇಜಸ್ವಿಯವರ ಕಥನ ಸಾಹಿತ್ಯವನ್ನು ಕುರಿತು ವಿಮರ್ಶೆ ಮಾಡುತ್ತ; ಅದರ ಮೌಲ್ಯ ನಿರ್ಣಯ ಮಾಡುವುದಾಗಲೀ, ಸ್ಥಾನ ನಿರ್ಣಯ ಮಾಡುವುದಾಗಲೀ ಈ ಅಧ್ಯಯನದ ಉದ್ದೇಶವಲ್ಲ. ತೇಜಸ್ವಿಯವರ ಸಾಹಿತ್ಯದ ಮೂಲಕ ಸಾಹಿತಿಯಾಗಿ ತೇಜಸ್ವಿಯವರ ಸ್ಥಾನಮಾನವನ್ನು ನಿರ್ಧರಿಸುವ ಉದ್ದೇಶವೂ ಈ ಅಧ್ಯಯನಕ್ಕಿಲ್ಲ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬಹಳ ವೈವಿಧ್ಯಮಯವಾದ ಸಾಹಿತ್ಯವನ್ನು ತೇಜಸ್ವಿಯವರು ರಚಿಸಿದ್ದು, ಇವರ ಒಟ್ಟು ಸಮಗ್ರ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಿದರೆ ವಿಷಯದ ವ್ಯಾಪ್ತಿ ಹೆಚ್ಚಾಗುವ ಕಾರಣದಿಂದಾಗಿ ಆಯ್ದ ಸಣ್ಣಕಥೆ ಮತ್ತು ಕಾದಂಬರಿಗಳನ್ನು ಮುಖ್ಯವಾಗಿಸಿಕೊಂಡು, ಅಂದರೆ ತೇಜಸ್ವಿಯವರ ಕಥನ ಸಾಹಿತ್ಯವನ್ನು ಮುಖ್ಯವಾಗಿ ಅಧ್ಯಯನ ಸಾಮಗ್ರಿಯಾಗಿ ಇಟ್ಟುಕೊಂಡು ಸಾಹಿತ್ಯದ ಸಾಮಾಜಿಕ ಕಾಳಜಿಗಳನ್ನು ಅರಿಯುವುದು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿದೆ. ತೇಜಸ್ವಿಯವರ ಕಥನ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ತೇಜಸ್ವಿಯವರು ಬದುಕಿದ್ದ ಕಾಲದಲ್ಲಿನ ಸಾಮಾಜಿಕ ಚಳುವಳಿಗಳನ್ನಾಗಲಿ, ಸಾಹಿತ್ಯಿಕ ವಾಗ್ವಾದಗಳನ್ನಾಗಲಿ ಹೆಚ್ಚಿನ ಗಮನಕೊಟ್ಟು ಇಲ್ಲಿ ಅಧ್ಯಯನಕ್ಕೆ ಗುರಿ ಮಾಡಿರುವುದಿಲ್ಲ. ಅರವತ್ತರ ದಶಕದಿಂದೀಚೆಗೆ ಬೆಳೆದಿರುವ ಮತ್ತು ಘಟಿಸಿರುವ ಸಾಹಿತ್ಯ ವಿಮರ್ಶೆ ಮತ್ತು ಮೀಮಾಂಸೆ, ಮಹಿಳಾ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ, ಕೋಮುಸೌಹಾರ್ದ ಚಳುವಳಿ, ಭೂ ಹೋರಾಟಗಳು, ಪರಿಸರ ಚಿಂತನೆಗಳು, ನೀರಾವರಿ ಹೋರಾಟಗಳು ಇವೆಲ್ಲವುಗಳನ್ನು ತೇಜಸ್ವಿಯವರು ಸಾಹಿತ್ಯದ ಮೂಲಕ ಮುಖಾಮುಖಿಯಾಗಿರುವ ನೆಲೆಗಳನ್ನು ಈ ಅಧ್ಯಯನದಲ್ಲಿ ವಿವರವಾಗಿ ಗುರುತಿಸಿಕೊಳ್ಳಲು ಉದ್ದೇಶಿಸಿಲ್ಲ. ಹಾಗೆಯೇ ಈ ಎಲ್ಲಾ ಚಿಂತನೆ, ಚಳುವಳಿ ಮತ್ತು ಹೋರಾಟಗಳು ಕನ್ನಡ ಸಮಾಜದಲ್ಲಿ ರೂಪುಗೊಳ್ಳುವುದಕ್ಕೆ ತೇಜಸ್ವಿಯವರ ಕಾಣಿಕೆಯೇನು ಎಂಬ ಸಂಶೋಧನೆಯನ್ನೂ ಸಹಾ ಇಲ್ಲಿ ಕೂಲಂಕಶವಾಗಿ ಕಂಡುಕೊಳ್ಳಲು ಬಹುಶಃ ಸಾಧ್ಯವಾಗಲಾರದೇನೋ. ಹಾಗಾಗಿ ಈ ಅಧ್ಯಯನವು ಶುದ್ಧಾಂಗವಾಗಿ ಸಾಮಾಜಿಕ ಇಲ್ಲವೇ ಚಾರಿತ್ರಿಕ ಸಂಶೋಧನೆ ಆಗದೇ ವಿಮರ್ಶಾತ್ಮಕ ಅಧ್ಯಯನ ಮಾತ್ರವೇ ಆಗುವ ಸಾಧ್ಯತೆಯಿದೆ. ಹಾಗಾಗಿ ಇದು ಈ ಅಧ್ಯಯನದ ವ್ಯಾಪ್ತಿಯೂ ಹೌದು ಮತ್ತು ಮಿತಿಯೂ ಆಗಿದೆ.

ತೇಜಸ್ವಿಯವರ ಮಿಲೇನಿಯಮ್ ಸೀರಿಸ್, ಕಾಡಿನ ಕಥೆಗಳು, ನಾಟಕ, ಕವನ ಸಂಕಲನ, ವಿಮರ್ಶಾ ಸಾಹಿತ್ಯ, ಪ್ರವಾಸ ಸಾಹಿತ್ಯ, ವಿಜ್ಞಾನ ಸಾಹಿತ್ಯ-ಇವುಗಳನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಪರಿಗಣಿಸಿರುವುದಿಲ್ಲ. ಹಾಗಾಗಿ ಇದು ಈ ಅಧ್ಯಯನದ ಮಿತಿಯೂ ಆಗಿದೆ. ಸಾಮಾಜಿಕ ಕಾಳಜಿಗಳ ವಿಚಾರಗಳನ್ನು ಮಾತನಾಡುವಾಗ ಇವರ ಪ್ರವಾಸ ಕಥನ, ವಿಜ್ಞಾನ ಮತ್ತು ಪರಿಸರ ಕುರಿತ ಬರವಣಿಗೆಗಳನ್ನೂ ಗಮನಿಸಬೇಕಿತ್ತು. ಆದರೆ ಇಲ್ಲಿ ಗಮನಿಸಿಲ್ಲ. ಹಾಗಾಗಿ ಸದರಿ ಅಧ್ಯಯನಕ್ಕೆ ಲೇಖಕ ಕೇಂದ್ರಿತವಾದ ಒಂದು ಅಖಂಡ ದೃಷ್ಟಿ ಲಭಿಸಿಲ್ಲ ಎನ್ನಿಸಬಹುದು. ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಕೂಡ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಮಾಜದ ನಡುವಿನ ನಂಟು ಕುರಿತಾದ ಜಿಜ್ಞಾಸೆಯೂ ಇದೆ. ಆದಾಗ್ಯೂ ಸದರಿ ಅಧ್ಯಯನದಲ್ಲಿ ಈ ಆಯಾಮವನ್ನು ಚರ್ಚೆಗೆ ಎತ್ತಿಕೊಂಡಿಲ್ಲ. ಹಾಗಾಗಿ ಇದು ಕೂಡ ಈ ಅಧ್ಯಯನದ ಒಂದು ಮಿತಿಯಾಗಿದೆ. ಕೆಲವೊಮ್ಮೆ ತೇಜಸ್ವಿಯವರ ಸಾಹಿತ್ಯವನ್ನು ಕುರಿತು ಇತರರು ಮಾಡಿರುವ ವಿಮರ್ಶೆ, ಅಧ್ಯಯನ, ಸಮೀಕ್ಷೆಗಳನ್ನು ಸಮೀಕ್ಷಿಸುವಾಗ ಒಟ್ಟಾರೆ ತೇಜಸ್ವಿಯವರ ಕುರಿತ ಎಲ್ಲಾ ಬರಹಗಳನ್ನು ಇಲ್ಲಿ ಸಮೀಕ್ಷೆಗೆ ಗುರಿಮಾಡಲಾಗಿದೆ.

ಅಧ್ಯಯನದ ವಿಧಾನ

ವಿಮರ್ಶಾತ್ಮಕ ಅಧ್ಯಯನ ವಿಧಾನವನ್ನು ಮುಖ್ಯವಾಗಿ ಇಲ್ಲಿ ಅನುಸರಿಸಲು ಉದ್ದೇಶಿಸಲಾಗಿದೆ. ಸಮಾಜಶಾಸ್ತ್ರೀಯ ನೆಲೆಯಿಂದ ಸಾಹಿತ್ಯವನ್ನು ಅಭ್ಯಾಸ ಮಾಡಬಹುದಾದ ಮತ್ತು ಸಾಹಿತ್ಯ ವಿಮರ್ಶೆಯ ಹತ್ಯಾರಗಳ ಮೂಲಕ ಸಮಾಜವನ್ನು ವಿಶ್ಲೇಷಿಸುವ ಅಂತರಶಿಸ್ತೀಯ ವಿಧಾನವನ್ನು ಬಳಸಿಕೊಂಡು ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.

ಸಾಹಿತ್ಯ ಎನ್ನುವುದು ವ್ಯಕ್ತಿನಿಷ್ಠ ಚಿಂತನೆಗಳ ಮಂಡನೆ ಅಲ್ಲ; ಸಾಹಿತ್ಯವು ಒಂದು ಸಮಾಜದ, ಕಾಲಮಾನದ, ಸಾಮುದಾಯಿಕ ಸಂವೇದನೆಗಳ ಅಕ್ಷರರೂಪ. ಹಾಗಾಗಿ ಸಾಹಿತ್ಯದ ಓದು ಎಂಬುದು ಸಮಾಜದ ಓದೇ ಆಗುವುದು. ರಾಚನಿಕ ಇಲ್ಲವೇ ಸೌಂದರ್ಯಾತ್ಮಕ ನೆಲೆಯಿಂದ ಮಾತ್ರವೇ ಸಾಹಿತ್ಯವು ರೂಪುಗೊಳ್ಳದೆ ಸಮಾಜದ ಬದಲಾವಣೆಗಾಗಿ ನಿರ್ದಿಷ್ಟ ಉದ್ದೇಶಗಳಿಂದ ರೂಪುಗೊಳ್ಳುತ್ತದೆ. ಹಾಗಾಗಿ ಸಾಹಿತ್ಯದ ಅಧ್ಯಯನ ಎಂಬುದು ನೇರವಾಗಿ ಸಮಾಜದ ಅಧ್ಯಯನವೇ ಹೌದು. ಸಾಹಿತ್ಯಿಕ ವಾಸ್ತವ ಮತ್ತು ಕಲ್ಪಿತ ವಾಸ್ತವಗಳ ರಚನೆಯ ಮೂಲಕ ಲೇಖಕ ಸದಾ ಮಾದರಿ ಸಮಾಜವೊಂದರ ಶೋಧನೆಯಲ್ಲಿ ತೊಡಗುತ್ತಾನೆ. ಅಂತಹ ಲೇಖಕನ ಕಥನಗಳ ಅಧ್ಯಯನವು ಅಂದಂದಿನ ಸಮಾಜವು ನಡೆಯಬೇಕಾದ ದಾರಿಗಳನ್ನು ಕಂಡುಕೊಳ್ಳಲು ಖಂಡಿತಾ ನೆರವಾಗುತ್ತದೆ ಎಂಬ ನಂಬಿಕೆಗಳನ್ನು ಈ ಅಧ್ಯಯನದ ವಿಧಾನದ ಹಿನ್ನೆಲೆಗೆ ಇರಿಸಿಕೊಳ್ಳಲಾಗಿದೆ.

ಸಮಾಜದಿಂದ ರೂಪುಗೊಳ್ಳುವ ಸಾಹಿತ್ಯವು ಸಮಾಜವನ್ನು ರೂಪಿಸುವ ಕೆಲಸವನ್ನೂ ಕೂಡ ಮಾಡುತ್ತಿರುತ್ತದೆ. ಲಿಂಗ, ಜಾತಿ, ಧರ್ಮ, ಭಾಷೆ, ಕಾಲಗಳನ್ನು ಪ್ರತಿನಿಧಿಸುತ್ತಲೇ ಅವುಗಳನ್ನು ಮೀರುವ ದಾರಿಗಳನ್ನೂ ಶೋಧಿಸುತ್ತಿರುತ್ತದೆ. ಹಾಗೆಯೇ ಯಾವುದೇ ಕಾಲಮಾನವು ಎದುರಿಸುವ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳುವ ತಾತ್ವಿಕತೆಗಳು, ಹೊರದಾರಿಗಳೂ ಕೂಡ ಸಾಹಿತ್ಯದ ಅಭ್ಯಾಸದಿಂದ ದೊರಕಬಲ್ಲವು ಎಂಬ ನಂಬಿಕೆಗಳ ಮೂಲಕ ಈ ಅಧ್ಯಯನವನ್ನು ಕೈಗೊಳ್ಳಲು ಯೋಜಿಸಲಾಗಿದೆ. ಹೀಗಾಗಿ ಇದು ಈ ಅಧ್ಯಯನದ ಮಹತ್ವವೂ ಹೌದು, ವಿಧಾನವೂ ಹೌದು. ಲೇಖಕ ಕೇಂದ್ರಿತ ಓದು, ಪಠ್ಯ ಕೇಂದ್ರಿತ ಓದು, ಸಮಾಜ ಕೇಂದ್ರಿತ ಓದು, ಸಂಸ್ಕೃತಿ ಕೇಂದ್ರಿತ ಓದು, ಅಭಿವೃದ್ಧಿ ಚಿಂತನಾ ಪ್ರಸ್ಥಾನ ಕೇಂದ್ರಿತ ಓದು – ಹೀಗೆ ಹಲವು ರೀತಿಯ ಓದುಗಳನ್ನು ಕಲಸಿದ ಒಂದು ಮಾದರಿ ಓದಿನ ಕ್ರಮವನ್ನು ಪ್ರಯೋಗಿಸುವ ಮತ್ತು ಆ ಮೂಲಕ ಓದಿನ ಹೊಸ ವಿಧಾನವೊಂದನ್ನು ರೂಪಿಸುವ ಉದ್ದೇಶವನ್ನು ಇಲ್ಲಿ ಇರಿಸಿಕೊಳ್ಳಲಾಗಿದೆ. ಹಾಗಾಗಿ ಇಲ್ಲಿನ ಓದಿನ ಪ್ರಯೋಗವೊಂದರ ಹುಡುಕಾಟವು ಇಲ್ಲಿನ ವಿಧಾನದ ಹುಡುಕಾಟವೂ ಆಗಿದೆ. ಅಲ್ಲದೆ ಇಲ್ಲಿ ಲೇಖಕ ಕೇಂದ್ರಿತ ಓದನ್ನು ನಡೆಸದೆ ನಿರೂಪಿತ ಕಥನ ಕೇಂದ್ರಿತ/ಪಠ್ಯಕೇಂದ್ರಿತ ಓದನ್ನು ಮಂಡಿಸಲು ಪ್ರಯತ್ನಿಸಲಾಗಿದೆ. ತೇಜಸ್ವಿ ಹೀಗೆ ಹೇಳುತ್ತಾರೆ – ಹಾಗೆ ಹೇಳುತ್ತಾರೆ ಎಂಬುದಕ್ಕಿಂತ ತೇಜಸ್ವಿ ಕಥನದ ಓದು ಕಾಣಿಸುವ ವಿಚಾರಗಳನ್ನು ಕಂಡುಕೊಂಡು ಮಂಡಿಸುವ ದಾರಿಯನ್ನು ಇಲ್ಲಿ ಬಳಸಲಾಗಿದೆ.

ಈಗಾಗಲೇ ಅಧ್ಯಯನದ ಉದ್ದೇಶಗಳಲ್ಲಿ ವಿವರಿಸಿಕೊಂಡಿರುವ ಹಾಗೆ ಈ ಅಧ್ಯಯನ ಪ್ರಬಂಧವನ್ನು ಎಂಟು ಅಧ್ಯಾಯಗಳಲ್ಲಿ ಚರ್ಚಿಸಲು ಯೋಚಿಸಲಾಗಿದೆ. ಮೊದಲಿಗೆ ತೇಜಸ್ವಿಯವರ ಸಾಹಿತ್ಯವನ್ನು ಇದುವರೆಗೆ ಬಂದಿರುವ ಕೃತಿರೂಪದ, ಲೇಖನ ರೂಪದ, ಸಂಶೋಧನಾ ಅಧ್ಯಯನ ರೂಪದ ಅಧ್ಯಯನಗಳ(ಬರವಣಿಗೆಗಳ) ಸಮೀಕ್ಷೆಯನ್ನು ನಡೆಸಲಾಗುತ್ತದೆ. ಇಲ್ಲಿ ತೇಜಸ್ವಿಯವರ ಕಥನ ಸಾಹಿತ್ಯದ ಕುರಿತ ಬರವಣಿಗೆಗಳನ್ನು ಮಾತ್ರವೇ ಅಲ್ಲದೆ ಇನ್ನಿತರ ಬರವಣಿಗೆಗಳನ್ನು ಸಮೀಕ್ಷೆಯಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗುವುದು. ಆನಂತರದಲ್ಲಿ 'ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿ' ಎಂಬ ತಲೆಬರಹದಲ್ಲಿ ಶಿಕ್ಷಣ, ಜಾಗತೀಕರಣ, ವ್ಯಾಪಾರೀಕರಣ(ಸರಕು ಸಂಸ್ಕೃತಿಯ ನಿರ್ಮಾಣ) ಮೊದಲಾದುವುಗಳನ್ನು ತೇಜಸ್ವಿಯವರ ಕಥನ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸಲು ಪ್ರಯತ್ನಿಸಲಾಗುವುದು.

ಮುಂದಿನ ನಾಲ್ಕು ಅಧ್ಯಾಯಗಳಲ್ಲಿ ಕ್ರಮವಾಗಿ ರೈತ ಕಾಳಜಿ, ಪರಿಸರ ಕಾಳಜಿ, ಸೌಹಾರ್ದತೆಯ ಸಂಕಥನ, ಮಹಿಳಾ ಸಂಕಥನ ಹೀಗೆ ತೇಜಸ್ವಿಯವರ ಕಥನದ ಭಿನ್ನ

ಸಾಮಾಜಿಕ ಕಾಳಜಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗುವುದು. ಸಾಹಿತ್ಯದ ಪ್ರಸಂಗಗಳನ್ನೇ ದೃಷ್ಟಾಂತಗಳನ್ನಾಗಿ ಬಳಸಿ ಸಮಾಜದ ಅಭಿವೃದ್ಧಿ ಮೀಮಾಂಸೆ, ರೈತ, ಮಹಿಳಾ ನೆಲೆಯ ಬದಲಾವಣೆಯ ಸಂಕಥನಗಳು ಮಂಡಿತವಾಗಿರುವ ಬಗೆಯನ್ನು ಕಂಡುಕೊಳ್ಳಲು ಇಲ್ಲಿ ಯತ್ನಿಸಲಾಗುವುದು.

ಕರ್ನಾಟಕದ ರೈತ ಚಳುವಳಿ, ಸಮಾಜವಾದಿ ಚಳುವಳಿ ಮತ್ತು ಪರಿಸರ ಚಳುವಳಿಗಳ ಜೊತೆ ಸಾಕ್ಷಿಪ್ರಜ್ಞೆಯಂತೆ ಕ್ರಿಯಾಶೀಲವಾಗಿದ್ದ ತೇಜಸ್ವಿಯವರ ಸಾಹಿತ್ಯದಲ್ಲಿ ರೈತಪರ ಕಾಳಜಿಗಳು, ಪರಿಸರ ಕಾಳಜಿಗಳು ಹೇಗೆ ವ್ಯಕ್ತವಾಗಿವೆ? ಜಾತೀವಾದ, ಕೋಮುವಾದ ಮತ್ತು ಮತೀಯ ಸಂಘರ್ಷಗಳ ಎದುರು ತೇಜಸ್ವಿ ಕಥನ ನಮಗೆ ತೋರಬಹುದಾದ ಹೊರದಾರಿಗಳು ಯಾವುವು? ಹಾಗೆಯೇ ಮಹಿಳಾ ಚಳುವಳಿ ಅಥವಾ ಸ್ತ್ರೀವಾದಕ್ಕೆ ತೇಜಸ್ವಿ ಕಥನವು ಯಾವ ಎಳೆಗಳನ್ನು ಜೋಡಿಸುತ್ತದೆ? ಹಾಗೆಯೇ ತೇಜಸ್ವಿ ಕಥನವು ಮುಂಚೂಣಿಗೆ ತರುವ ಮಹಿಳಾ ವಿಷಯಗಳು ಹಾಗೂ ಮಹಿಳಾಪರ ಕಾಳಜಿಗಳು ಯಾವುವು ಎಂಬುದನ್ನು ಈ ನಾಲ್ಕು ಅಧ್ಯಾಯಗಳಲ್ಲಿ ಕಂಡುಕೊಳ್ಳಲು ಯತ್ನಿಸಲಾಗುವುದು.

ತೇಜಸ್ವಿ ಕಥನ ಸಾಹಿತ್ಯದ ಸಾಮಾಜಿಕ ಕಾಳಜಿಯ ವಿನ್ಯಾಸಗಳು ಎಂಬ ಈ ಅಧ್ಯಯನದ ಕೊನೆಯ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಆಧುನಿಕತೆಯ ಕೇಡು ಮತ್ತು ಅದರಿಂದ ತಪ್ಪಿಸಿಕೊಳ್ಳಬಹುದಾದ ದಾರಿಗಳು, ಪರಂಪರೆಯ ಒಳಿತು ಮತ್ತು ಕೆಡುಕು, ಅದನ್ನು ದೇಸಿಯ ನೆಲೆಯಲ್ಲಿ ಮರುಕಟ್ಟಿಕೊಳ್ಳುವ, ಮರು ಶೋಧಿಸಿಕೊಳ್ಳುವ ಬಗೆ, ಇವುಗಳನ್ನು ಒಳಗೊಂಡಂತೆ ಇದುವರೆಗಿನ ಎಲ್ಲಾ ಅಧ್ಯಾಯಗಳ ಫಲಿತಗಳನ್ನು ಕ್ರೋಢೀಕರಿಸಿ ನಿರೂಪಿಸಲು ಯತ್ನಿಸಲಾಗುವುದು. ಹಾಗೆಯೆ ಫಲಿತಗಳನ್ನು ಪರಿಕಲ್ಪಿಸಿ, ತಾತ್ವೀಕರಿಸಿ ನಿರೂಪಿಸಲು ಕೂಡ ಯತ್ನಿಸಲಾಗುವುದು. ಆ ಮೂಲಕ ಸಾಹಿತ್ಯ ಕಥನದ ಮುಖೇನ ಸಮಾಜದ ಗ್ರಹಿಕೆಯ ಬಗೆಗಿನ ವೈಚಾರಿಕ ಆಕೃತಿಗಳನ್ನು ಕಟ್ಟಿಕೊಳ್ಳಲೂ ಯತ್ನಿಸಲಾಗುವುದು.

ಅಧ್ಯಾಯ–೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ-೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ಕುರಿತಾಗಿ ಇದುವರೆಗೆ ಅನೇಕ ಅಧ್ಯಯನಗಳು (ಲೇಖನಗಳು ಮತ್ತು ಪುಸ್ತಕಗಳು) ಹೊರಬಂದಿವೆ. ಸದರಿ ಸಂಶೋಧನ ಅಧ್ಯಯನದ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದಿರುವ ಅಧ್ಯಯನಗಳನ್ನು ಇಲ್ಲಿ ಸಮೀಕ್ಷೆ ನಡೆಸಲಾಗಿದೆ. ನನ್ನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತಹ ಅಧ್ಯಯನಗಳನ್ನು ವಿಸ್ತಾರವಾಗಿಯೂ, ಇದಕ್ಕೆ ಹೊರತುಪಡಿಸಿದ ಅಧ್ಯಯನಗಳನ್ನು ಸಂಕ್ಷಿಪ್ತವಾಗಿಯೂ ಸಮೀಕ್ಷೆ ನಡೆಸಲಾಗಿದೆ.

ತೇಜಸ್ವಿಯವರ ಒಟ್ಟಾರೆ ಸಾಹಿತ್ಯದ ಕುರಿತಾಗಿ ಇದುವರೆಗೂ ಬಂದಿರುವ ವಿಮರ್ಶೆ, ಸಂಶೋಧನ ಅಧ್ಯಯನ, ಅಭಿನಂದನ ರೂಪಿ, ಒಡನಾಟ ರೂಪಿ ಬರವಣಿಗೆಯನ್ನು ಒಂದೆಡೆ ಸಂಕಲಿಸಿ, ಸಂಕ್ಷಿಪ್ತ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ನಡೆಸಲಾಗಿದೆ. ಬಿಡಿ ನೆಲೆಯಲ್ಲಿ ಇಲ್ಲಿನ ಸಮೀಕ್ಷೆಯು ಇದೆ. ಯಾವುದೇ ಅಧ್ಯಯನವನ್ನು ಕೈಗೊಳ್ಳುವ ಮೊದಲು ಆ ವಲಯದಲ್ಲಿ ಈಗಾಗಲೇ ಆಗಿರುವ ಅಧ್ಯಯನ ಅಭ್ಯಾಸಗಳನ್ನು ಸಮೀಕ್ಷಿಸುವುದರಿಂದ ಅಧ್ಯಯನಕ್ಕೆ ತನ್ನದೇ ಆದ ಭಿನ್ನತೆ ಮತ್ತು ವಿಶಿಷ್ಟತೆ ಒದಗುವುದು ಎಂಬ ನಂಬಿಕೆಯಿಂದ ಇಲ್ಲಿ ಈ ಸಮೀಕ್ಷೆಯನ್ನು ನಿರ್ವಹಿಸಲಾಗಿದೆ.

ಇದುವರೆಗು ತೇಜಸ್ವಿ ಸಾಹಿತ್ಯವನ್ನು ಅಧ್ಯಯನಕಾರರು ಯಾವ ಯಾವ ದೃಷ್ಟಿಕೋನಗಳಲ್ಲಿ ನೋಡಲು ಪ್ರಯತ್ನಿಸಿದ್ದಾರೆ, ಅವರ ಅಭಿಪ್ರಾಯಗಳು ಮತ್ತು ತೀರ್ಮಾನಗಳೇನು ಎಂಬುದನ್ನು 'ಇದುವರೆಗಿನ ಅಧ್ಯಯನಗಳ ಸಮೀಕ್ಷೆ' ಎಂಬ ಈ ಅಧ್ಯಾಯದಲ್ಲಿ ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ಸಮೀಕ್ಷೆಯಲ್ಲಿನ ಅಭಿಪ್ರಾಯಗಳನ್ನು ನನ್ನ ಅಧ್ಯಯನದ ಮಾನದಂಡಗಳನ್ನಾಗಿ ನಾನು ಪರಿಗಣಿಸಿರುವುದಿಲ್ಲ. ಬದಲಾಗಿ ನನ್ನ ಅಧ್ಯಯನದ ಉದ್ದೇಶಗಳಿಗೆ ತಲುಪಲು ಇವುಗಳನ್ನು ಚಿಮ್ಮುಹಲಗೆಗಳಾಗಿ ಬಳಸಲು ಉದ್ದೇಶಿಸಿಲಾಗಿದೆ.

'ಕವಲುದಾರಿಯಲ್ಲಿ ಕನ್ನಡ ಸಣ್ಣ ಕತೆ' ಎಂಬ ತಮ್ಮ ಬರೆಹದಲ್ಲಿ ಗಿರಡ್ಡಿ ಗೋವಿಂದರಾಜ ಅವರು ತೇಜಸ್ವಿಯವರ ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಮತ್ತು ನಿಗೂಢ ಮನುಷ್ಯರು ಕೃತಿಗಳ ಕುರಿತು ಚರ್ಚಿಸಿದ್ದಾರೆ. ಇಲ್ಲಿ ಇವರು ತೇಜಸ್ವಿಯ ಹೊಸ ವಿಧಾನ, ತಂತ್ರ, ಸಿದ್ಧಾಂತ, ಸಾಮಾಜಿಕ ಬದ್ಧತೆಯ ಚಿಂತನೆಗಳನ್ನೇ ಸಂಶಯದಿಂದ ನೋಡಿ ಪ್ರಶ್ನೆಗೆ ಒಳಪಡಿಸಿದ್ದಾರೆ. 'ಹುಲಿಯೂರಿನ ಸರಹದ್ದು' ಸಂಕಲನದ ಈ

ಹೆಸರಿನ ಕತೆಯನ್ನು ಹೊರತುಪಡಿಸಿ, ಉಳಿದೆಲ್ಲಾ ಕಥೆಗಳು ಅಸಂಬದ್ಧತೆಯಿಂದ ಕೂಡಿದ್ದು, ಹಾಸ್ಯಾಸ್ಪದವಾಗಿ ಕಾಣುತ್ತವೆ. ಈ ಕಥೆ ಮಾತ್ರ ಅವರ ನವ್ಯ ಚಿಂತನೆಯ ಎಲ್ಲಾ ಚಿಂತನೆಗಳನ್ನು ಹಿಡಿದಿಟ್ಟುಕೊಂಡಿದೆ. ಇಲ್ಲಿ ಬರುವ ಸೋಮು ಅವರ ಕವಿತೆಯ ಬೃಹನ್ನಳೆ ಸೋಮುವೇ ಆಗಿದ್ದು, ಅಸಂಬದ್ಧತೆ ಮತ್ತು ಭ್ರಾಂತಿಯ ಜಗತ್ತನ್ನು ನಿರ್ಮಿಸಿಕೊಂಡಿದ್ದಾನೆ. ಈ ಜಗತ್ತಿಗೆ ತಳಪಾಯವೇ ಇಲ್ಲ. ಈ ಭ್ರಾಂತಿ ಇಲ್ಲದೆ ಅವನು ಬದುಕಲಾರ ಒಂದನ್ನ ಬಿಟ್ಟು ಇನ್ನೊಂದಕ್ಕೆ ಅಂಟಿಕೊಳ್ಳುತ್ತಾನೆ. ಹಾಗೆಯೇ ಅವನ ವ್ಯಕ್ತಿತ್ವದ ಈ ಸಂಘರ್ಷದಲ್ಲಿ ಕೊನೆಗೆ ಅವನ ಬೃಹನ್ನಳೆತನವೇ ದೃಡಪಡುತ್ತದೆ ಎಂದು ಗಿರಡ್ಡಿಯವರು ವಿವರಿಸುತ್ತಾರೆ.

ಇಲ್ಲಿ ಈ ರೀತಿಯಾಗಿ ವಿವರಿಸಿಕೊಳ್ಳುತ್ತಲೇ ತೇಜಸ್ವಿಯವರ ವ್ಯಕ್ತಿತ್ವವನ್ನೇ, ಅವರ ಒಟ್ಟು ಚಿಂತನೆಗಳನ್ನೇ ಸೋಮುವಿಗೆ ಸಂಕೇತಿಸಿ ನೋಡಲು ಗಿರಡ್ಡಿಯವರು ಪ್ರಯತ್ನಿಸಿದ್ದಾರೆ. ಹಾಗೆ ಮಾಡುವ ಮೂಲಕ ತೇಜಸ್ವಿಯವರನ್ನು ಕುಟುಕಲು ಪ್ರಯತ್ನಿಸಿದ್ದಾರೆ. ಅದು ಮುಂದೆ ಸಾಬೀತಾಗುತ್ತಾ ಹೋಗುತ್ತದೆ.

ಹುಲಿಯೂರಿನ ಸರಹದ್ದು ಕತೆಯ ಸಂಕೇತಗಳ ಸಂಯೋಜನೆಯಲ್ಲಿ ಅಡಿಗರ "ಹದ್ದು" ಕವಿತೆಯ ದಟ್ಟ ಪ್ರಭಾವ ಕಾಣುತ್ತದೆ ಎಂದು ಅನುಮಾನಿಸುವ ಗಿರಡ್ಡಿಯವರು ಈ ಸಂಕಲನದ ಉಳಿದ ಕಥೆಗಳು ಬದ್ಧತೆಯಿಂದ ಕೂಡಿಲ್ಲ. ಕಥಾ ರಚನೆಯಲ್ಲಿ ಗಂಭೀರ ಚಿಂತನೆ ಕಾಣುವುದಿಲ್ಲ. ಹಾಗೆಯೇ ಓದುಗರನ್ನು ಗಂಭೀರ ಚಿಂತನೆಯಲ್ಲಿ ತೊಡಗುವಂತೆ ಮಾಡುವುದಿಲ್ಲ. ಮೇಲುಮೇಲಿನ ಸಂಗತಿಗಳಲ್ಲೇ ಅವರ ಶಕ್ತಿ ಕ್ಷೀಣವಾಗುತ್ತದೆ. ಹೀಗಾಗಿ ಅವರು ಬದುಕನ್ನು ತಮ್ಮ ಸಾಹಿತ್ಯದ ಮೂಲಕ ಗಂಬೀರವಾಗಿ ಚಿತ್ರಿಸಲು ಸೋತಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ.

ಗುಡುಗು ಹೇಳಿದ್ದೇನು ಕಥೆಯ ಕೊನೆಯ ಆಕಸ್ಮಿಕತೆ, ದೈವದ ವ್ಯಂಗ್ಯ, ಇದರ ಪರಿಣಾಮವನ್ನು ಮೂರ್ತವಾಗಿಸಲು ಬಳಸಿಕೊಂಡ ಪ್ರಜ್ಞಾಪ್ರವಾಹತಂತ್ರ, ಇವೆಲ್ಲಾ ವಸ್ತುವಿನ ಹಗುರತನದಿಂದಾಗಿ ಹಾಸ್ಯಾಸ್ಪದವೆನಿಸುತ್ತವೆ. ಪಿಂಜ್ರೊಳ್ಳಿ ಪಿಶಾಚಿ ಸವಾಲು ಕಥೆಯ ವಿನೋದವು ಅಷ್ಟೇ ಅಸಂಬದ್ಧವಾಗಿದೆ. ಕಥೆಗಾರನಿಗೆ ಇಂಥ ವಿನೋದದ ಯಶಸ್ಸಿಗೆ ಅವಶ್ಯಕವಾಗಿ ಬೇಕಾದ ಬದುಕಿನ ಅಸಂಬದ್ಧತೆಯ ಕಲ್ಪನೆಯಾಗಲೀ, ವಿನೋದ ಪ್ರಜ್ಞೆಯಾಗಲೀ ಇಲ್ಲದಿರುವುದೇ ಇದಕ್ಕೆ ಕಾರಣ." (ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ೨೦೦೯, ಪುಟ-೨೬೧.) ಹೀಗೆ ತೇಜಸ್ವಿಯವರಿಗೆ ತಮ್ಮ ಬದುಕಿನ ಬಗೆಗೇನೆ ಗಂಭೀರತೆ ಇರಲಿಲ್ಲ. ಇನ್ನು ಅವರ ಸಾಹಿತ್ಯವೂ ಸಹ ಅದೇ ರೀತಿಯಲ್ಲಿದೆ ಎಂದು ಗಿರಡ್ಡಿಯವರು ಅಭಿಪ್ರಾಯಪಡುತ್ತಾರೆ. ಈ ಅನಿಸಿಕೆ ಇಲ್ಲಿಯ ತನಕ ತೇಜಸ್ವಿಯವರ ಸಾಹಿತ್ಯ ಮತ್ತು ಬದುಕನ್ನು ಕುರಿತ ವಿಮರ್ಶೆಗಳಿಗಿಂತ ಭಿನ್ನ ರೀತಿಯ

ನಿಲುವಾಗಿದೆ. ಇಲ್ಲಿ ಗಿರಡ್ಡಿಯವರು ತೇಜಸ್ವಿಯವರ ಬದುಕು ಮತ್ತು ಬರಹಗಳ ನಡುವಿನ ಸಾಮ್ಯತೆಗಳನ್ನೇ ಪ್ರಶ್ನಿಸುತ್ತಾರೆ.

ನವ್ಯತೆಯ ಹಿಡಿತದಿಂದ ತಪ್ಪಿಸಿಕೊಳ್ಳಲೆಂಬಂತೆ 'ಅಬಚೂರಿನ ಪೋಸ್ಟಾಫೀಸು' ಕೃತಿ ಕಂಡು ಬರುತ್ತದೆ. ಹುಲಿಯೂರಿನ ಸರಹದ್ದು, ನಿಗೂಢ ಮನುಷ್ಯರು ಎರಡೂ ಅನುಕರಣಶೀಲ ಕೃತಿಗಳು, ಈ ಬಗೆಯ ಅನುಕರಣಶೀಲತೆಯಿಂದ ತಪ್ಪಿಸಿಕೊಳ್ಳಲು ಹೊಸ ವಿಧಾನವನ್ನು ತೇಜಸ್ವಿ ಅನುಕರಿಸಿದ್ದಾರೆ. ಇದಕ್ಕೆ ಕಾರಣಗಳು ಮತ್ತು ಸಮರ್ಥನೆಗಳನ್ನು ತಮ್ಮ 'ಹೊಸ ದಿಗಂತದೆಡೆಗೆ' ಎಂಬ ಮುನ್ನುಡಿಯಲ್ಲಿ ತೇಜಸ್ವಿ ನೀಡುವುದನ್ನು ಗಿರಡ್ಡಿಯವರು ಉದಾಹರಿಸುತ್ತಾರೆ.

"ಕಲಾವಿದನ ಪ್ರಜ್ಞೆಯೊಳಗೆ ವಿಕಾಸವಾಗುವ ಅಥವಾ ಕಲಾವಿದನ ಪ್ರಜ್ಞೆಯೇ ಕೇಂದ್ರವಾಗಿರುವ ಅಥವಾ ಸಾಹಿತಿಯೇ ನಾಯಕನಾದ ಆತ್ಮನಿಷ್ಠ ಬರಹಗಾರರಾದ ಅನಂತಮೂರ್ತಿ ಮತ್ತು 'ಗತಿಸ್ಥಿತಿ'ಯ ಗಿರಿ ಒಂದು ಕೊನೆಯಾದರೆ ಈ ಕಥಾ ಸಂಕಲನದ ನಾನು ಇನ್ನೊಂದು ಕೊನೆ." (ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ೨೦೦೯, ಪುಟ-೨೯೨.) ಇಲ್ಲಿ ತೇಜಸ್ವಿಯವರು ನವ್ಯವನ್ನು ತೊರೆಯಲು ನೀಡುವ ಕಾರಣಗಳು ಸಮರ್ಥನೀಯವೋ ಹಾಗೆಯೇ ಅನಂತಮೂರ್ತಿ ಮತ್ತು ಗಿರಿಯವರ ಬರವಣಿಗೆ ಅಥವಾ ಒಟ್ಟಾರೆಯಲ್ಲಿ ನವ್ಯ ಸಾಹಿತ್ಯ ಆತ್ಮನಿಷ್ಠತೆಗೆ ಅತಿ ಮಹತ್ವ ಕೊಟ್ಟು ಸಾಮಾಜಿಕ ಸ್ಥಿತಿಯಿಂದ ದೂರವಾಯಿತು ಎಂಬ ತೇಜಸ್ವಿಯವರ ನಿಲುವು ಕೂಡ ಒಪ್ಪತಕ್ಕದಲ್ಲ ಎಂದು ಅಭಿಪ್ರಾಯಪಡುವ ಗಿರಡ್ಡಿಯವರು ಈ ನಿಲುವನ್ನು ಕುರಿತು ಹಲವು ಪ್ರಶ್ನೆಗಳನ್ನು ಎತ್ತುತ್ತಾರೆ.

"ಗತಿಸ್ಥಿತಿ'ಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಅಲ್ಲಿಯ ನಾಯಕನ ಮನಃಸ್ಥಿತಿ ಇಂದಿನ ಭ್ರಷ್ಟ ಸಮಾಜದ ವಿಶಿಷ್ಟ ಸೃಷ್ಟಿಯೆಂದು ಅನಿಸುವುದಿಲ್ಲವೇ? ಹೀಗೆ ಒಂದು ಸಮಾಜದ ವಾತಾವರಣ ವ್ಯಕ್ತಿಯ ಪ್ರಜ್ಞೆಯ ಮೇಲೆ ಭಯಾನಕ ಪರಿಣಾಮವನ್ನು ಉಂಟುಮಾಡಬಹುದೆಂಬುದೇ ಇದರ ವಸ್ತುವಲ್ಲವೇ? ಇಂಥ ಒಂದು ಮನಃಸ್ಥಿತಿಗೆ ಕಾರಣವಾದ ಸಮಾಜದ ಸ್ಥಿತಿಯನ್ನು ಸಹ ಕಾದಂಬರಿ ತನ್ನ ಸಜೀವ ವಿವರಗಳಲ್ಲಿ ಕಟ್ಟಿಕೊಡುವುದಿಲ್ಲವೇ? ಅಂದ ಮೇಲೆ ಸಾಮಾಜಿಕ ಪ್ರಜ್ಞೆ ಇದರಿಂದ ಹೇಗೆ ಹೊರತಾಗುತ್ತದೆ?" (ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ೨೦೦೯, ಪುಟ-೨೯೨.)

ಹೀಗೆ ತೇಜಸ್ವಿ ನವ್ಯವನ್ನು ನಿರಾಕರಿಸಲು ನೀಡಿರುವ ಸಾಮಾಜಿಕ ಕಾಳಜಿಯ ಕಾರಣಗಳನ್ನು ಗಿರಡ್ಡಿಯವರು ಅದರಲ್ಲೇ ಹುಡುಕಿ ತೋರುತ್ತಾರೆ. ಹಾಗೆಯೇ ತೇಜಸ್ವಿಯವರ ಹೊಸ ವಿಧಾನಗಳಲ್ಲಿ ನವ್ಯತೆಯ ಅಂಶಗಳನ್ನು ಗುರುತಿಸುತ್ತಾರೆ. ಅವರು ಆಯ್ದುಕೊಂಡಿರುವ ಹೊಸ ಸೃಷ್ಟಿಯೆಂದು ಹೇಳುತ್ತಿರುವ ನಿರೂಪಣಾ ತಂತ್ರಗಳಾಗಲೀ, ಕಥೆಗಳ ವಸ್ತುಗಳಾಗಲೀ

ಕನ್ನಡ ಸಾಹಿತ್ಯಕ್ಕೆ ಹೊಸದೇನೂ ಅಲ್ಲ. ೧೯೩೩ರಲ್ಲಿ 'ಟೇಂಗ್ಸೆ ಗೋವಿಂದರಾಯ'ರ 'ಛಪ್ಪರ್ ಬಂದ್' ಕಥೆಯನ್ನು ರಂ.ಶ್ರೀ.ಮುಗಳಿಯವರು 'ನವಿಲು ಗರಿ' ಎಂದು ಸಂಪಾದಿಸಿರುವ ಕೃತಿಯಲ್ಲಿ ಈ ವಿಧಾನಗಳು ಕಂಡು ಬರುತ್ತವೆ ಎಂದು ಅಭಿಪ್ರಾಯಪಡುವ ಗಿರಡ್ಡಿಯವರು ತೇಜಸ್ವಿಯವರ ಒಟ್ಟಾರೆ ಹೊಸ ಚಿಂತನೆ ಮತ್ತು ಅಭಿವ್ಯಕ್ತಿ ವಿಧಾನಗಳನ್ನೇ ನಿರಾಕರಿಸುತ್ತಾರೆ.

ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನದ ಕಥೆಗಳಲ್ಲಿ ಆಧುನೀಕರಣದ ಪ್ರವೇಶದಿಂದಾದ ಕೌಟುಂಬಿಕ ಮತ್ತು ಸಾಮಾಜಿಕ ಪಲ್ಲಟಗಳು ಅನುಷಂಗಿಕವಾಗಿ ಬಂದಿವೆಯೇ ವಿನಃ ಕೇಂದ್ರವಸ್ತುವಾಗಿಲ್ಲ. ಅಬಚೂರಿನ ಪೋಸ್ಟಾಫೀಸು, ತುಕ್ಕೋಜಿ ಕತೆಗಳು ಆಧುನಿಕತೆಯಿಂದಾದ ಕೌಟುಂಬಿಕ ವ್ಯವಸ್ಥೆಯಲ್ಲಿನ ಪಲ್ಲಟಗಳು ಹಾಗೂ ತಲ್ಲಣಗಳನ್ನೂ ದಾಖಲಿಸುತ್ತವೆ. ಆದರೆ ಅದು ಮೊದಲ ಕತೆಯಲ್ಲಿ ಬೋಬಣ್ಣನ ವೈಯುಕ್ತಿಕ ದುರಂತದಲ್ಲಿ ಕೊನೆಗೊಂಡರೆ ಎರಡನೇ ಕಥೆಯಲ್ಲಿ ವೈಯುಕ್ತಿಕ ಭಾವಸ್ಥಿತಿಯಾಗಿ ಬಿಡುತ್ತದೆ. ಹಾಗಾಗಿ ಈ ಎರಡೂ ಕಥೆಗಳು ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವುದಿಲ್ಲ. ಮುಕ್ತಾಯದಲ್ಲಿ ಸಾಮಾಜಿಕ ಅರ್ಥವನ್ನು ಈ ಎರಡೂ ಕಥೆಗಳೂ ಕಳೆದುಕೊಂಡಿವೆ. ಎಂದು ಅಭಿಪ್ರಾಯಪಡುವ ಗಿರಡ್ಡಿಯವರು ತಾವು ಹಿಂದೆ 'ಗಿರಿ' ಕಾದಂಬರಿಯಲ್ಲಿ ಹುಡುಕಿದ, ಚಿತ್ರಿಸಿದ ಸಾಮಾಜಿಕ ಪ್ರಜ್ಞೆಯ ಅಂಶಗಳನ್ನೂ ಈ ಕತೆಗಳಲ್ಲಿ ಹುಡುಕುವುದನ್ನು ಪ್ರಜ್ಞಾಪೂರ್ವಕವಾಗಿಯೇ ಮರೆಯುತ್ತಾರೆ. ಇಲ್ಲಿ ಹುಳುಕುಗಳನ್ನು ಹುಡುಕುತ್ತಿದ್ದಾರೆಯೇ ವಿನಃ ತಕರಾರು ತೆಗೆಯುತ್ತಿಲ್ಲ. ಆದರೆ ಇನ್ನುಳಿದ ತಬರನ ಕಥೆ, ಕುಬಿ ಮತ್ತು ಇಯಾಲ ಕಥೆಗಳು ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವ ಕಥೆಗಳಾಗಿವೆ. ಒಂದು ಕಥೆ ಅಧಿಕಾರಶಾಹಿಯ ಅಮಾನುಷತೆಯನ್ನು ತೋರಿದರೆ, ಇನ್ನೊಂದು ಮೌಢ್ಯತೆಯಿಂದ ವೈಜ್ಞಾನಿಕ ಸತ್ಯಗಳನ್ನೇ ಮೂಢನಂಬಿಕೆಗಳಾಗಿಸುವ ದುರಂತವನ್ನು ಚಿತ್ರಿಸುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ತೇಜಸ್ವಿಯವರ ಈ ಕಥಾಸಂಕಲನದ ಬಹುಪಾಲು ಕಥೆಗಳು ಸಂಗ್ರಹ ನಿರೂಪಣಾ ತಂತ್ರವನ್ನೇ ಅವಲಂಬಿಸಿವೆ. ಸಹಜವಾದ ನಾಟ್ಯಮಯತೆ ಕಡಿಮೆಯಾಗಿ, ಲೇಖಕನಿಗೆ ಹೇಗೋ ಹಾಗೆಯೇ ಓದುಗನನ್ನೂ ಅನುಭವದಿಂದ ದೂರ ಮಾಡುತ್ತವೆ ಎಂದು ಗಿರಡ್ಡಿಯವರು ಅಭಿಪ್ರಾಯಪಡುತ್ತಾರೆ.

ನಿಗೂಢ ಮನುಷ್ಯರು ಕಿರುಕಾದಂಬರಿ ತೇಜಸ್ವಿಯವರು ನವ್ಯತೆಯನ್ನು ತೊರೆದ ನಂತರ ರಚನೆಯಾದ ಕೃತಿ. ಇದರ ಕುರಿತು ಚರ್ಚಿಸುವ ಗಿರಡ್ಡಿಯವರು ತೇಜಸ್ವಿಯವರು ನವ್ಯತೆಯನ್ನು ತೊರೆಯಲು ನೀಡಿದ ಎಲ್ಲಾ ಕಾರಣಗಳನ್ನು ಈ ಕೃತಿಯಲ್ಲಿ ಹುಡುಕಿ ತೆಗೆಯಲು ಪ್ರಯತ್ನಿಸುತ್ತಾರೆ. ಈ ಕೃತಿ ತೇಜಸ್ವಿಯವರ ನವೀನ ಸಿದ್ಧಾಂತಗಳಿಗೆ ಹೊಂದುವುದಿಲ್ಲ. ಸಾಂಕೇತಿಕ ಶೈಲಿಯಲ್ಲಿ ರಚನೆಯಾಗಿರುವ ಈ ಕೃತಿಯಲ್ಲಿ ಸಾಹಿತ್ಯದ ಸಾಮಾಜಿಕ ಕಾಳಜಿಯು

ಕಾಣುವುದಿಲ್ಲ. ಅವರ ಸಿದ್ಧಾಂತ, ನಂಬಿಕೆಗಳನ್ನು ಬುಡಮೇಲು ಮಾಡುವ ಬರಹ ಇದಾಗಿದೆ. ಎನ್ನುವ ಗಿರಡ್ಡಿಯವರು ಅವರದೇ ಬರಹದ ಆಧಾರ ನೀಡಿ ಸುಳ್ಳಾಗಿಸಲು ಪ್ರಯತ್ನಿಸುತ್ತಾರೆ.

"ಇದೊಂದು ನವ್ಯ ಮನೋಧರ್ಮದ ಕಥೆ. ವಾಸ್ತವದಾಚೆಗಿನ ಕಾಫ್ಕಾ-ರೀತಿಯ ದುಃಸ್ವಪ್ನದಂತೆ ಅಮೂರ್ತವಾಗಿದ್ದರೂ ಇಲ್ಲಿಯ ನಿಗೂಢ ಜನ, ಸನ್ನಿವೇಶ, ಪರಿಸರಗಳೆಲ್ಲಾ ನಿಬಿಡವಾದ ಸಾಂಕೇತಿಕತೆಯಿಂದ ತುಂಬಿವೆ. ಈ ಬಗೆಯ ಸಂಕೀರ್ಣತೆ ತೇಜಸ್ವಿಯವರ ಸಿದ್ಧಾಂತಗಳಿಗೆ ಅನುಗುಣವಾದುದಲ್ಲ. ಅವರೇ ಹೇಳುವ ಹಾಗೆ ಈ ಬಗೆಯ ಸಾಂಕೇತಿಕ ಶೈಲಿ ಮತ್ತು ತಂತ್ರ ಸಾಹಿತ್ಯದ ಅನೇಕ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಸಾಹಿತಿಗಳಿಗಿರುವ ತಿರಸ್ಕಾರವನ್ನು ಸೂಚಿಸುವುದಾದರೆ ಅದು ತೇಜಸ್ವಿಯವರಿಗೂ ಅನ್ವಯಿಸುತ್ತದೆ." (ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ೨೦೦೯, ಪುಟ-೨೯೩.)

ತೇಜಸ್ವಿ ನವ್ಯತೆಯನ್ನು ತಿರಸ್ಕರಿಸಲು ಏನೆಲ್ಲಾ ಕಾರಣಗಳನ್ನೂ, ಸಮರ್ಥನೆಗಳನ್ನೂ ನೀಡಿದ್ದರೋ ಅವೆಲ್ಲವೂ ತೇಜಸ್ವಿಯವರ ನವ್ಯೋತ್ತರ ಬರಹಗಳಲ್ಲಿ ಧಾರಾಳವಾಗಿ ಬಂದಿರುವುದನ್ನು ಗುರ್ತಿಸುತ್ತಾ ಅವರ ನಿರ್ಣಯದ ಹಿಂದಿನ ಆಧಾರಗಳೇ ಕಣ್ಮರೆಯಾಗಿವೆ; ಹಾಗಾಗಿ ಅವರ ಸಿದ್ಧಾಂತಗಳಲ್ಲಿ ಸುಸಂಗತವಾಗಿ ತರ್ಕ ಕಾಣುವುದಿಲ್ಲ ಎನ್ನುವ ಗಿರಡ್ಡಿಯವರು ಅವರ ಡೇರ್ ಡೆವಿಲ್ ಮುಸ್ತಫಾ ಕಥೆಯನ್ನು ಉದಾಹರಿಸುತ್ತಾರೆ. ಹಾಗೆಯೇ ಹಾಸ್ಯದಿಂದ ಕೂಡಿರುವ ಈ ಕಥೆಯ ಔಚಿತ್ಯವನ್ನೂ ಪ್ರಶ್ನಿಸುತ್ತಾರೆ.

"ಶೋಷಣೆ, ಬ್ರಾಹ್ಮಣರ ಸಾಂಸ್ಕೃತಿಕ ದಬ್ಬಾಳಿಕೆ, ಸಮಗ್ರಕ್ರಾಂತಿ, ಬ್ರಾಹ್ಮಣರ ರಕ್ತಹೀನ ಸಂಸ್ಕೃತಿಯ ಮುಂದೆ ಶೂದ್ರರ ವೀರ್ಯವತ್ತಾದ ಪ್ರಾಮಾಣಿಕ ಸಂಸ್ಕೃತಿಯ ಗಟ್ಟಿತನ. ಇಂಥ ಮತ್ತು ಇದಕ್ಕಿಂತ ತುರ್ತಾದ ಸಮಸ್ಯೆಗಳಿರುವಾಗ "ಡೇರ್ ಡೆವಿಲ್ ಮುಸ್ತಫಾ"ದಂಥ ಹಾಸ್ಯಕಥೆಯನ್ನು ಬರೆಯುವ ಅನಿವಾರ್ಯತೆ ಏನೆಂದು ಕೇಳಬೇಕಾಗುತ್ತದೆ." (ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ೨೦೦೯, ಪುಟ-೨೯೪.)

ಹೀಗೆ ತೇಜಸ್ವಿಯವರು ಒಂದು ಬೇಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಇನ್ನೊಂದು ಬೇಜವಾಬ್ದಾರಿಯನ್ನು ಒಪ್ಪಿಕೊಂಡಂತಾಯಿತು. ಈ ರೀತಿಯ ಬುದ್ಧಿಪೂರ್ವಕ ಸೀಮಿತ ಸಿದ್ಧಾಂತಗಳು ಸೃಷ್ಟಿಶೀಲ ಸಾಹಿತ್ಯವನ್ನು ಬಹಳ ದೂರ ಒಯ್ಯಲಾರವು. ಇಂತಹ ಉದ್ದೇಶಪೂರ್ವಕ ಮಿತಿಗಳಿಂದ ಇಡೀ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವೇ ಕುಗ್ಗುತ್ತದೆ. ವಸ್ತುವಿನ ವೈವಿಧ್ಯವೂ ಸಹ ಕಡಿಮೆಯಾಗುತ್ತದೆ ಎಂದು ಗಿರಡ್ಡಿಯವರು ತೇಜಸ್ವಿ ಸಾಹಿತ್ಯ ಚಿಂತನೆಗಳನ್ನು ಕುರಿತು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯ ಗಿರಡ್ಡಿಯವರಿಗೂ ಅನ್ವಯಿಸುವುದಿಲ್ಲವೇ..? ಎಂದರೆ ಹೌದು.

ಇಡೀ ಲೇಖನದಲ್ಲಿ ಗಿರಡ್ಡಿಯರವರು ಪೂರ್ವ ನಿರ್ಧಾರಿತವಾಗಿ ತೇಜಸ್ವಿಯವರನ್ನು, ಅವರ ಚಿಂತನೆಗಳನ್ನೂ ಟೀಕಿಸಲೆಂದೇ ವಿಮರ್ಶನಾ ಕಾರ್ಯಕ್ಕೆ ಇಳಿದಿದ್ದಾರೆ ಎಂದೆನಿಸುತ್ತದೆ. ಹಾಗಂತ ಅವರು ಹೇಳುವ, ಗುರುತಿಸುವ ಎಲ್ಲಾ ಅಂಶಗಳು ಸುಳ್ಳು ಎಂಬುದು ಇಲ್ಲಿನ ಅಭಿಪ್ರಾಯವಲ್ಲ. ಆದರೂ ಪ್ರತಿ ಹಂತದಲ್ಲೂ ಕೂಡ ತೇಜಸ್ವಿಯವರ ಹೊಸ ನಡೆಯನ್ನು ಖಂಡಿಸುವ, ನಿರಾಕರಿಸುವ ಹಾಗೂ ಅವರನ್ನು ಎಡಬಿಡಂಗಿಯನ್ನಾಗಿ ಮಾಡುವ ಅಂಶಗಳ ಹುಡುಕಾಟವಿದೆ. ಇದನ್ನು ತರ್ಕಬದ್ಧವಾಗಿಯೇ ಗಿರಡ್ಡಿಯವರು ಮಾಡುತ್ತಾರೆ. ತೇಜಸ್ವಿ ಮತ್ತು ಅವರ ಸಾಹಿತ್ಯ ಕುರಿತ ವಿಮರ್ಶೆಗಳಲ್ಲಿ ಬಹುಪಾಲು ಚಿಂತಕರು ತೇಜಸ್ವಿ ಬದುಕಿಗೂ, ಬರಹಕ್ಕೂ ವ್ಯತ್ಯಾಸಗಳು ಕಡಿಮೆ. ಸಾಮ್ಯತೆಗಳೇ ಅಧಿಕ ಎಂದಿದ್ದಾರೆ. ಹಾಗೆಯೇ ತಾವು ಬದುಕಲ್ಲಿ ಕಂಡುಂಡ ಅಂಶಗಳನ್ನು ಸಾಹಿತ್ಯವಾಗಿಸಿ ಇತರರಿಗಿಂತ ಭಿನ್ನ ಎನಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗಿರಡ್ಡಿಯವರು ಅವರ ಬರಹ ಮತ್ತು ಬದುಕಿನ ನಡುವಿನ ಕಂದರಗಳನ್ನು ಗುರುತಿಸಲು ಈ ಲೇಖನದಲ್ಲಿ ಪ್ರಯತ್ನಿಸಿ ತೇಜಸ್ವಿಯವರ ನಡೆ-ನುಡಿಗಳ ಕುರಿತು ಹೊಸ ಅಭಿಪ್ರಾಯವನ್ನೇ ಕಟ್ಟಲು ಪ್ರಯತ್ನಿಸಿದ್ದಾರೆ. ತೇಜಸ್ವಿ ಸಾಹಿತ್ಯದ ಒಳಿತುಗಳು ಮತ್ತು ಸಾಮಾಜಿಕ ಕಾಳಜಿಯ ಹುಡುಕಾಟ ಗಿರಡ್ಡಿಯವರಿಗೆ ಅನಗತ್ಯವಾಗಿ ಕಂಡು ಅದರಲ್ಲಿನ ಹುಳುಕುಗಳನ್ನು ಗುರುತಿಸಿ ಟೀಕಿಸುವುದೇ ಮುಖ್ಯ ಉದ್ದೇಶವಾದಂತಿದೆ.

ಹೀಗೆ ಗಿರಡ್ಡಿಯವರು ತಮ್ಮ ನವ್ಯ ಪ್ರೇಮವನ್ನೂ, ತೇಜಸ್ವಿಯವರ ನವ್ಯೋತ್ತರ ಚಿಂತನೆಗಳ ಖಂಡನೆಯನ್ನೂ ಒಟ್ಟಾಗಿ ವ್ಯಕ್ತಪಡಿಸಿದ್ದಾರೆ. ಹಾಗೆಯೇ ತೇಜಸ್ವಿಯವರ ಸಾಹಿತ್ಯದಲ್ಲಿ ನವ್ಯತೆಯ ಅಂಶಗಳನ್ನು ಗುರುತಿಸಿ ಟೀಕೆಗಳನ್ನೂ ಇವರು ಮಾಡುತ್ತಾರೆ.

ತೇಜಸ್ವಿಯವರ ಮಾಯಾಲೋಕ ಎಂಬ ತಮ್ಮ ಲೇಖನದಲ್ಲಿ ಡಿ.ಎಸ್. ನಾಗಾಭೂಷಣ್ ಅವರು ಪ್ರಾರಂಭದಲ್ಲೇ ಮಾಯಾಲೋಕದ ಕುರಿತು ಒಂದು ನಿರ್ಣಯಕ್ಕೆ ಬಂದು ಅದನ್ನು ಸಮರ್ಥಿಸಲು ಅಥವಾ ಸಾಬೀತುಪಡಿಸಲು ಆನಂತರ ತೊಡಗುತ್ತಾರೆ. "ಯಾವುದೇ ಪೀಠಿಕೆಯಿಲ್ಲದೆ ಈ ಕೃತಿಯ ಬಗ್ಗೆ ಹೇಳಬಹುದಾದ ಮೊದಲ ಮಾತೆಂದರೆ ಬದುಕು ಮತ್ತು ಸಮಾಜದ ಕುರಿತಂತೆ ತೇಜಸ್ವಿ ಒಂದು ನಿಲುವಿಗೆ ಬಂದಂತೆ ತೋರುತ್ತದೆ." (ನಾಗಭೂಷಣ್ ಡಿ.ಎಸ್., ಸಾಹಿತ್ಯ ವಿಮರ್ಶೆ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೮, ಪುಟ-೨೬೧.) ಅಬಚೂರಿನ ಪೋಸ್ಟಾಫೀಸು ಕೃತಿಯಿಂದ ಜುಗಾರಿಕ್ರಾಸ್‌ತನಕ ಅಂದರೆ ಮಾಯಾಲೋಕ ಕಾದಂಬರಿಯ ರಚನೆಯ ತನಕ ತೇಜಸ್ವಿ ಬದುಕು ಮತ್ತು ಸಮಾಜದ ನಡುವಿನ ಚಲನಶೀಲತೆಯ ಗುಟ್ಟುಗಳನ್ನು ಅನೇಕ ಸಮಾಜಶಾಸ್ತ್ರೀಯ(ಸಮಾಜವಾದ, ಮಾರ್ಕ್ಸ್‌ವಾದ) ಹಾಗೂ ವೈಜ್ಞಾನಿಕ(ವಿಕಾಸವಾದ, ಕ್ವಾಂಟಮ್, ಫಿಸಿಕ್ಸ್) ದೃಷ್ಟಿಯಿಂದ ಅನ್ವೇಷಿಸಿ

ಸುಸ್ತಾಗಿ ವಿಶ್ರಾಂತಿಯಂತೆ ಕೊನೆಯಲ್ಲಿ ಈ ನಿಲುವಿಗೆ ಬಂದು ತಲುಪಿದ್ದಾರೆ ಎಂದು ಡಿ.ಎಸ್ ನಾಗಭೂಷಣ್ ಅಭಿಪ್ರಾಯಪಡುತ್ತಾರೆ.

ಜಗತ್ತಿನ ಪ್ರತಿಯೊಂದು ಸಸ್ಯ, ಪ್ರಾಣಿ, ಪಕ್ಷಿ, ಕೀಟ, ಮನುಷ್ಯ ಒಂದಕ್ಕೊಂದು ಸಂಬಂಧವಿಲ್ಲದಂತೆ, ಪ್ರತ್ಯೇಕ ಜಗತ್ತುಗಳೆಂಬಂತೆ ಬದುಕುವುದು ಅಸಾಧ್ಯ. ಹಾಗೆ ನಮಗೆ ಭಾಸವಾದರೂ ಅದು ವಾಸ್ತವವಾಗಿರುವುದಿಲ್ಲ. ಒಂದು ಜೀವಿಯ ಅವನತಿಯ ಹಾದಿ ಹಲವಾರು ಜೀವ ಸಂಕುಲದ ಅವನತಿಯ ಹಾದಿಯೇ ಆಗಿರುತ್ತದೆ ಎಂಬುದು ತೇಜಸ್ವಿಯವರ ಮಾಯಾಲೋಕದ ತಾತ್ವಿಕತೆ. ಜೀವ ಜಗತ್ತಿನಲ್ಲಿ ಒಂದು ಐಕ್ಯತಾಶಕ್ತಿ ಕೆಲಸ ಮಾಡುತ್ತಿರುವುದರ ಬೆರಗಿನ ದರ್ಶನವನ್ನು ಈ ಕೃತಿ ಮೂಡಿಸುತ್ತದೆ. ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳನ್ನು ಛಿದ್ರಿಸಲಾಗದಂತೆ ಒಟ್ಟಂದದಲ್ಲಿ ಚಿತ್ರಿಸುತ್ತದೆ ಎಂದು ಡಿ.ಎಸ್.ಎನ್. ಅಭಿಪ್ರಾಯಪಡುತ್ತಾರೆ.

ಮಾಯಾಲೋಕ ಆಧುನೀಕರಣವು ಗ್ರಾಮ, ನಗರಗಳೆನ್ನದೆ ಉಂಟು ಮಾಡುತ್ತಿರುವ ತಲ್ಲಣಗಳು, ಹಿಂಸಾಚಾರಗಳನ್ನು ಶಾಂತವಾಗಿ ಕಾಣುವ ಹಳ್ಳಿಗಳ ಅಂತರ್ಯದಲ್ಲಿ ಹಚ್ಚಿರುವ ಬೆಂಕಿಯನ್ನು ಮತ್ತು ಸೃಷ್ಟಿಸಿರುವ ಹೆದ್ದೆರೆಗಳನ್ನು ತಣ್ಣಗೆ ನಮ್ಮ ಮುಂದೆ ತೆರೆದಿಡುತ್ತದೆ. ಒಂದು ವಾರದ ದಿನಚರಿಯ ಈ ಕೃತಿಯಲ್ಲಿ ಘಟನಾವಳಿಗಳು, ಗೊಂದಲಗಳು ಕಿಕ್ಕಿರಿದು ತುಂಬಿಕೊಂಡಿವೆ. ಇವುಗಳ ನಡುವೆ ತೇಜಸ್ವಿ ನಿಬ್ಬೆರಗಾಗಿ ನಿಂತುಬಿಡುತ್ತಾರೆ. ಈ ಬೆರಗಿನಲ್ಲೇ ಆಧುನೀಕರಣದ ಕಥೆಯನ್ನು ವ್ಯವಧಾನದಲ್ಲಿ ಮಂಡಿಸುವ ಹೊಸ ಕ್ರಮವನ್ನು ಕಂಡುಕೊಳ್ಳುತ್ತಾರೆ ಎಂದು ಡಿ.ಎಸ್. ನಾಗಭೂಷಣ್ ಅಭಿಪ್ರಾಯಪಡುತ್ತಾರೆ. "ಇಡೀ ಕಥೆ ಆಧುನೀಕರಣದ ಕಥೆಯ ಪುನರ್ ನಿರೂಪಣೆಯ ಕಥೆಯಾಗಿ ಮಾರ್ಪಟ್ಟು ತೇಜಸ್ವಿಯವರ ಬರವಣಿಗೆಯ ಗತಿ, ಲಯ, ಕಾಳಜಿ, ಹಾಗೂ ದೃಷ್ಟಿ–ದಿಗಂತಗಳೇ ಮುಖ್ಯ ಸ್ಥಿತ್ಯಂತರವೊಂದಕ್ಕೆ ಒಳಗಾಗುವುದನ್ನು ನಾವು ಕಾಣುತ್ತೇವೆ. ವಾಚಾಳಿತನ ಕಡಿಮೆಯಾಗಿ, ಹಾಸ್ಯ ಔಚಿತ್ಯವನ್ನು ಮೀರಿ ಹೋಗದೇ, ಮೌನ ಚಿತ್ರಗಳಿಗೆ ಅವಕಾಶವಾಗುತ್ತದೆ. ಕೃತಿಯಲ್ಲಿ ಬರುವ ಛಾಯಾಚಿತ್ರಗಳು ತಮ್ಮ ಜೀವಂತಿಕೆಯ ಮೂಲಕ ಕೃತಿಯ ಆಶಯಕ್ಕೆ ಒಂದು ವಿಶಾಲ ಭಿತ್ತಿಯನ್ನು ಒದಗಿಸುತ್ತವೆ." (ನಾಗಭೂಷಣ್ ಡಿ.ಎಸ್., ಸಾಹಿತ್ಯ ವಿಮರ್ಶೆ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೮, ಪುಟ–೨೬೨)

ಹೀಗೆ ತೇಜಸ್ವಿಯವರ ಈವರೆಗಿನ ಚಿಂತನೆಗಳು ಮತ್ತು ಅವರ ಅನ್ವೇಷಣೆಯ ಕುತೂಹಲಗಳು ಹೊಸದೊಂದು ವಿಶಾಲ ಭಿತ್ತಿಯನ್ನು ಸೃಷ್ಟಿಸಿಕೊಂಡಿವೆ. ಬದುಕನ್ನು ಕುರಿತ ಅವರ ಕುತೂಹಲದ ಹಸಿವನ್ನು ಹಾಗೂ ಆಧುನೀಕರಣ ಸೃಷ್ಟಿಸಿರುವ ಬದುಕಿನ ವಿಧ್ವಂಸಕ ಕೃತ್ಯಗಳನ್ನು ಅರಿಯಲು ತೇಜಸ್ವಿಯವರಿಗೆ ಸಾಮಾಜಿಕ ನೆಲೆ ಸಾಕಾಗುತ್ತಿಲ್ಲ. ಹಾಗಾಗಿ ಅವರು

ನಾಗರೀಕತೆಯನ್ನು ಸಹ ಎಳೆದು ತರುವ ಪ್ರಯತ್ನ ಮಾಡುತ್ತಾರೆ. ನಾಗರೀಕತೆಯ ಲಯ ಅವರ ಕುತೂಹಲವನ್ನು ಕೆರಳಿಸಿದೆ. ಈ ಕುತೂಹಲಗಳಿಂದಾಗಿಯೇ ಆಧುನೀಕರಣದ ಪರಿಣಾಮಗಳನ್ನು ಸೂಕ್ಷ್ಮ ಪರಿಶೀಲನೆಗೆ ಒಳಪಡಿಸುತ್ತಾರೆ. ಸಮಾಜದ ಅಸಮತೆಯನ್ನು ಅನಾವರಣಗೊಳಿಸಿ ಅಭಿವೃದ್ಧಿಯ ಮಾದರಿಗಳನ್ನು ತೇಜಸ್ವಿ ತಮ್ಮ ಸಾಹಿತ್ಯ ಚಿಂತನೆಗಳ ಮೂಲಕ ಪ್ರಶ್ನಿಸುತ್ತಾರೆ ಎಂದು ಡಿ.ಎಸ್. ನಾಗಭೂಷಣ್ ಅಭಿಪ್ರಾಯಪಡುತ್ತಾರೆ.

ಎಂ. ಪಿ. ಪ್ರಕಾಶ್ ಅವರು 'ತೇಜಸ್ವಿ ಒಂದು ನೆನಪು' ಎಂಬ ಲೇಖನದಲ್ಲಿ ಸಮಾಜವಾದಿ ಹೋರಾಟಗಾರರಾಗಿ ಹಾಗೂ ತಮ್ಮ ಇಡೀ ರಾಜಕೀಯ ಚಟುವಟಿಕೆಗಳ ಸಂದರ್ಭಗಳಲ್ಲಿ ತೇಜಸ್ವಿಯವರೊಂದಿಗಿನ ಒಡನಾಟದಿಂದ ಆದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ತೇಜಸ್ವಿ ಬರೀ ಸಾಹಿತಿಯಾಗಿ, ಚಿಂತಕರಾಗಿ ಮಾತ್ರ ಇರಲಿಲ್ಲ ಎಲ್ಲಾ ರೀತಿಯ ಸಾಮಾಜಿಕ ಹೋರಾಟಗಳಲ್ಲೂ ಸಕ್ರಿಯ ಕಾರ್ಯಕರ್ತರಾಗಿ ದುಡಿದವರು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಶ್ರಮಿಸಿದವರು. ಕೀರ್ತಿ, ಪ್ರತಿಷ್ಠೆಗಳಿಂದ ದೂರವಿರಲು ಪ್ರಯತ್ನಿಸಿದವರು ಎಂದು ಎಂ.ಪಿ. ಪ್ರಕಾಶ್ ಅಭಿಪ್ರಾಯಪಡುತ್ತಾರೆ.

ಎಂ.ಡಿ. ನಂಜುಂಡಸ್ವಾಮಿ, ಸುಂದರೇಶ್, ರಾಮದಾಸ್, ಲಂಕೇಶ್, ಆಲನಹಳ್ಳಿ ಕೃಷ್ಣ, ಚಂಪಾ ಮುಂತಾದ ಚಿಂತಕರ ಸಾಲಿನಲ್ಲಿ ತೇಜಸ್ವಿ ತಮ್ಮ ವೈಶಿಷ್ಟ್ಯತೆಯನ್ನು ತೋರುತ್ತಾರೆ. ಪ್ರಶಸ್ತಿ ಮತ್ತು ರಾಜಕೀಯ ಸ್ಥಾನಮಾನಗಳನ್ನು ನಿರಾಕರಿಸಿ ಇತರ ಸಾಹಿತಿಗಳಿಗಿಂತ ಸ್ವಂತ ನಿರ್ಧಾರಗಳಿಗೆ ಬದ್ಧವಾಗಿ ಬದುಕಿದವರು. ಹಾಗೆಯೇ ಹಿರಿಯ ಕಿರಿಯರೆನ್ನದೇ ಇತರರ ಅಭಿಪ್ರಾಯಗಳು ಸರಿಯೆನಿಸಿದರೆ ಯಾವುದೇ ಬಿಗುಮಾನವಿಲ್ಲದೇ ಒಪ್ಪಿಕೊಳ್ಳುತ್ತಿದ್ದುದನ್ನು ಪ್ರಕಾಶ್ ನೆನಪಿಸಿಕೊಳ್ಳುತ್ತಾರೆ. ೧೯೭೩ರಲ್ಲಿ ರಾಜ್ಯ ಮಟ್ಟದ ಸಮಾಜವಾದಿ ಪಕ್ಷದ ಸಂಘಟನೆಯ ಸಮಾವೇಶವನ್ನು ಹೂವಿನ ಹಡಗಲಿಯಲ್ಲಿ ಏರ್ಪಡಿಸಿದಾಗ ಪಕ್ಷದ ಕಾರ್ಯದರ್ಶಿಯಾಗಿದ್ದವರು ಬ್ರಾಹ್ಮಣರಾದ ದಿ. ವೆಂಕಟರಾಮ್‌ರವರು. ಇದನ್ನು ತಿಳಿದ ತೇಜಸ್ವಿ "ಪಕ್ಷದ ಎಲ್ಲಾ ತೀರ್ಮಾನ ಬರೆಯುವ, ತಾತ್ವಿಕ ಚಿಂತನೆ ಹಂಚಿಕೊಳ್ಳಲು ಅವರ ಪ್ರಭಾವಕ್ಕೆ ಪಕ್ಷ ಒಳಗಾಗಿದೆ, ಎಲ್ಲಾ ಪಕ್ಷಗಳಲ್ಲೂ ಬ್ರಾಹ್ಮಣರ ಕಾರುಬಾರು ನಡೆಯುತ್ತಿದೆ. ಹೋರಾಟದ ಹಿನ್ನಲೆಯಿಲ್ಲದೆ ಬರೀ ಬೌದ್ಧಿಕ ಚಿಂತನೆಯ ಮೂಲಕ ಪ್ರಭಾವಿಯಾಗುವ ಇಂತಹ ವರ್ಗದ ಜನರ ಬಗ್ಗೆ ಅಸಮಾಧಾನದ ಭಾಷಣ ಮಾಡಿದರು." (ಪ್ರಕಾಶ್ ಎಂ.ಪಿ., ತೇಜಸ್ವಿ ನೆನಪು, ೨೦೦೭, ಪುಟ-೦೧.)

ತೇಜಸ್ವಿಯವರ ಈ ಅಸಮಾಧಾನವನ್ನು ಜೆ.ಹೆಚ್.ಪಟೇಲರು ನಿವಾರಿಸುತ್ತಾರೆ. ವೆಂಕಟರಾಮ್‌ರವರು ಲೋಹಿಯಾ ಪ್ರಭಾವದಿಂದ ಅಬ್ರಾಹ್ಮಣರಾಗಲು ಹೊರಟಿದ್ದಾರೆ. ಇದರ ಬಗ್ಗೆ ಸಂಶಯವಿದೆಯೇ ಎಂದಾಗ ತೇಜಸ್ವಿ ಇಲ್ಲ ಎಂದು ಅವರ ಅಭಿಪ್ರಾಯವನ್ನು ಒಪ್ಪಿ

ಮುಂದೆ 'ಕರ್ನಾಟಕ ಕಲಾವಿದರ, ಬರಹಗಾರರ ಒಕ್ಕೂಟ'ದ ಪದಾಧಿಕಾರಿಗಳ ವಿಷಯದಲ್ಲಿ ಆಲನಹಳ್ಳಿ ಕೃಷ್ಣ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ತೇಜಸ್ವಿ ಅದನ್ನು ಸರಿಪಡಿಸಿ ಒಕ್ಕೂಟ ಒಡೆಯುವುದು ತಡೆದದ್ದನ್ನು ಪ್ರಕಾಶ್ ಅವರು ನೆನಪಿಸಿಕೊಂಡಿದ್ದಾರೆ.

ತೇಜಸ್ವಿಯವರ ಸಾಹಿತ್ಯ ಚಿಂತನೆ ಮತ್ತು ಬರಹಗಳನ್ನು ಕುರಿತು ಮಾತನಾಡುವ ಪ್ರಕಾಶ್‌ರವರು 'ಕರ್ವಾಲೋ' ಕಾದಂಬರಿ ಶ್ರೇಷ್ಠವಾದುದು. ಕುವೆಂಪುರವರ 'ಮದುಮಗಳು' ಕಾದಂಬರಿಯ ನಾಯಿಗುತ್ತಿ, ಐತ ಮತ್ತು ಪೀಂಚಲು ಪಾತ್ರಗಳನ್ನು ಹೇಗೆ ಮರೆಯಲು ಸಾಧ್ಯವಿಲ್ಲವೋ ಹಾಗೆಯೇ ಕರ್ವಾಲೋ ಕಾದಂಬರಿಯ ಮಂದಣ್ಣ, ಕರಿಯಪ್ಪ ಮತ್ತು ಎಂಕ್ಟರನ್ನು ಮರೆಯಲು ಸಾಧ್ಯವಿಲ್ಲ. ದೈನಂದಿನ ಜೀವನದ ಘಟನೆಗಳನ್ನು ನೈಜವಾಗಿ ವರ್ಣಿಸಿ ಓದುಗರನ್ನು ಹೊಸ ಪ್ರಪಂಚಕ್ಕೆ ಕರೆದೊಯ್ಯುತ್ತಾರೆ. ಹಾಗೆಯೇ ಅವರ ಇತರ ಸಾಹಿತ್ಯ ಕೃತಿಗಳೂ ಕೂಡ ಸಮಾಜ ಅಥವಾ ಬದುಕನ್ನು ಅರಿಯಲು ಮೂಲದ್ರವ್ಯವನ್ನು ಒದಗಿಸುತ್ತವೆ. ಎಂದು ಅಭಿಪ್ರಾಯಪಡುತ್ತಾರೆ.

ತೇಜಸ್ವಿಯವರು ಜಗತ್ತಿನ ವಿಸ್ಮಯಕಾರಿ ಘಟನೆಗಳನ್ನೂ ಸಹ ಸರಳ ನುಡಿಗಟ್ಟುಗಳ ಮೂಲಕ ಓದುಗರಿಗೆ ತಲುಪಿಸಿದವರು. ತಂತ್ರಾಂಶ ಮತ್ತು ಯಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಗಣಕಯಂತ್ರದ ಭಾಷೆಯಾಗಿ ಕನ್ನಡ ಸಶಕ್ತವಾಗಿರುವುದಕ್ಕೆ ಕಾರಣರಾಗಿದ್ದಾರೆ. ಎಂದು ಪ್ರಕಾಶ್ ಅಭಿಪ್ರಾಯಪಡುತ್ತಾರೆ. ಹೀಗೆ ಪ್ರಕಾಶರವರು ತೇಜಸ್ವಿಯವರನ್ನು ಅವರ ಸಾಹಿತ್ಯದ ತಾತ್ವಿಕತೆಯನ್ನು ಸಾಮಾಜಿಕ ಕ್ರಿಯಾಶೀಲತೆ ಹಿನ್ನೆಲೆಯಲ್ಲಿ ವಿವರಿಸಲು ಯತ್ನಿಸಿದ್ದಾರೆ. ಸಾಹಿತಿಯೊರ್ವನ ಸಾಹಿತ್ಯವು ತಾನು ಬಾಳುವ ಸಮಾಜದ ಮೂಲಕ ಮತ್ತು ವಯಕ್ತಿಕ ಬದುಕಿನ ಮೂಲಕ ಹೇಗೆ ರೂಪುಗೊಳ್ಳುತ್ತದೆ ಎಂಬ ಹಿನ್ನೆಲೆಯಲ್ಲಿ ತೇಜಸ್ವಿಯವರ ಬದುಕು ಮತ್ತು ಬರಹಗಳನ್ನು ಇವರು ಚರ್ಚಿಸಿದ್ದಾರೆ.

ಕಾದಂಬರಿ 'ಕರ್ವಾಲೋ' ತೇಜಸ್ವಿಗೆ ವಿಮರ್ಶಾ ಪತ್ರ' ಎಂಬ ಲೇಖನದಲ್ಲಿ ಪಿ. ಲಂಕೇಶ್ ತಮ್ಮ ಮೇಲೆ ನಡೆದ ವಾಟಾಳ್ ನಾಗರಾಜ್ ಕಡೆಯವರ ಹಲ್ಲೆಯ ನಂತರ ಆ ನೋವನ್ನು ಮರೆಸುವಂತೆ, ಸದಾ ಗೆಲುವಾಗಿರುವಂತೆ ಮಾಡಿದ 'ಕರ್ವಾಲೋ' ಕೃತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ವಿಶೇಷವೆಂದರೆ ತೇಜಸ್ವಿಗೆ ಬರೆದ ಪತ್ರವೇ ಈ ವಿಮರ್ಶಾ ಲೇಖನವಾಗಿದೆ. ಲಂಕೇಶರು ಕರ್ವಾಲೋ ಕೃತಿ ಹಾಸ್ಯದ ಮೂಲಕವೇ ಮನುಷ್ಯನ ನೈಜ ಬದುಕನ್ನು ಕಟ್ಟಿಕೊಡುತ್ತದೆ. ಇಲ್ಲಿ ಬರುವ ಮಂದಣ್ಣ ಪ್ರಕೃತಿಯ ಪ್ರಜ್ಞೆಯುಳ್ಳ ನಿಧಿಯಾಗಿದ್ದು, ಅದರ ಅರಿವಿಲ್ಲದ ಮುಗ್ಧ ಹಳ್ಳಿ ಗಮಾರನಂತೆ ಚಿತ್ರಣಗೊಂಡು ಜೀವನದ ಹುಚ್ಚು ಹೊಳೆಯಂತೆ ಕಂಡರೆ, ಇದಕ್ಕೆ ತದ್ವಿರುದ್ಧ ಲಕ್ಷಣಗಳುಳ್ಳ ಕರ್ವಾಲೋ ಸಹ ಪ್ರಕೃತಿಯ ಕುರಿತು ಕುತೂಹಲವನ್ನಿಟ್ಟುಕೊಂಡ, ಶಿಸ್ತುಬದ್ಧತೆ, ಮಾನವೀಯತೆಯುಳ್ಳ ಜೀವನದ ಹುಚ್ಚು ಹೊಳೆಗೆ

ಹಾಕಿದ ಅಣೆಕಟ್ಟೆಯಂತೆ ಕಾಣುತ್ತಾರೆ. ಎಂದು ಲಂಕೇಶ್ ಅಭಿಪ್ರಾಯಪಡುತ್ತಾರೆ. ಪ್ರಕೃತಿ ಪ್ರಜ್ಞೆಯುಳ್ಳ ಈ ಇಬ್ಬರೂ ಕಾದಂಬರಿಯ ಶಕ್ತಿ ಕೇಂದ್ರಗಳು. ಎಲ್ಲಾ ರೀತಿಯ ಚಲನೆಗೂ ಸಹ ಕಾರಣರಾಗುತ್ತಾರೆ. ಈ ಇಬ್ಬರ ಸಮಾಗಮ ಪ್ರಕೃತಿಯ ಮತ್ತು ಮನುಷ್ಯನ ನಡುವೆ ಇರಬೇಕಾದ ಸಂಬಂಧವನ್ನು ಮನಗಾಣಿಸುತ್ತದೆ. ಹಾಗೆಯೇ ಆಧುನಿಕ ಜ್ಞಾನ ಮತ್ತು ದೇಸಿ ಜ್ಞಾನಗಳ ನಡುವಿನ ಸಂಬಂಧದ ಚಿತ್ರಣವನ್ನು ನೀಡುತ್ತದೆ. ಈ ಇಬ್ಬರಲ್ಲೂ ಅಗಾಧ ಮಾನವೀಯತೆ ಅಡಗಿದೆ. ಕರ್ವಾಲೋವಿನದು ಅಕಾಡೆಮಿಕ್ ಜ್ಞಾನವಾದರೆ ಮಂದಣ್ಣನದು ದೇಸಿ ಜ್ಞಾನ. ಈ ಎರಡೂ ಪಾತ್ರಗಳು ಹೊಟ್ಟೆಪಾಡಿಗೆ ಪ್ರಾಣಿಶಾಸ್ತ್ರ ಕಲಿತು ಸಂಶೋಧನೆಯಲ್ಲಿ ತೊಡಗುವವರನ್ನು ಹಾಸ್ಯಾಸ್ಪದವಾಗಿಸುತ್ತವೆ. ಎಂದು ಅಭಿಪ್ರಾಯಪಡುವ ಲಂಕೇಶ್ ಈ ಕಾದಂಬರಿಯು ಇಷ್ಟವಾಗಲು ನಾಲ್ಕು ಕಾರಣಗಳನ್ನು ನೀಡುತ್ತಾರೆ. "ಹಾಸ್ಯಶೈಲಿಯಲ್ಲಿ ಬರೆಯುತ್ತಾ, ರೇಗುತ್ತಾ, ತಡವರಿಸುತ್ತಾ ಮನುಷ್ಯರ ಜೀವನವನ್ನು ಚಿತ್ರಿಸುವ ಬಗೆ. ಲಕ್ಷ್ಮಣ, ಮಂದಣ್ಣ, ಕರಿಯಣ್ಣ, ಯಂಕ್ಟ ಮುಂತಾದವರು ನಿಮ್ಮ ಶೈಲಿಯ ಮೂಲಕ ಜೀವ ಪಡೆಯುತ್ತಾರೆ.. ಕೋಟ್ಯಂತರ ವರ್ಷಗಳ ಹಿಂದಿನಿಂದ ಇರುವ ಪ್ರಾಣಿಗಳನ್ನು ಹುಡುಕುತ್ತಾ, ನೀವು ನಿಮ್ಮ ಸುತ್ತಣ ವಿವಿಧ ಮಟ್ಟದ ಜನರ ಹಲಬಗೆಯ ವಿಕಾಸ ಅಥವಾ ವಿಕಾಸಗೊಳ್ಳದಿರುವಿಕೆಯನ್ನೂ ಚಿತ್ರಿಸುವುದು.. ಮೂರನೆಯದಾಗಿ ನೀವು ತೋರುವ ಪ್ರಜ್ಞೆಯ ವಿಸ್ತಾರ ಮತ್ತು ಶೋಧನೆಯ ಸಂಭ್ರಮ.. ನಮ್ಮಲ್ಲಿ ಕೇವಲ ಸೋಷಿಯಲಿಸ್ಟನೊಬ್ಬ ಮಾತ್ರ ವರ್ಣಿಸಬಲ್ಲಂಥ ಅನೇಕ ಜಾತಿ, ಜನ ವರ್ಗಗಳನ್ನು ತಿಳಿದುಕೊಂಡು ಚಿತ್ರಿಸುವ, ಅತ್ಯಂತ ತೀವ್ರ ಆಸಕ್ತಿ ಮತ್ತು ಪ್ರೇಮದಿಂದ ಮಾತ್ರ ಕೈಗೂಡುವ ಗ್ರಹಿಕೆ." (ಲಂಕೇಶ್ ಪಿ., ತೇಜಸ್ವಿ ನೆನಪು, ೨೦೦೭, ಪುಟ-೦೫)

ಕುವೆಂಪು, ಕಾರಂತರ ತರುವಾಯ ಪ್ರಕೃತಿಯನ್ನು ಇಷ್ಟು ತೀವ್ರವಾಗಿ ಪ್ರೀತಿಸುವ ವ್ಯಕ್ತಿ ತೇಜಸ್ವಿ ಎನ್ನುವ ಲಂಕೇಶರು, ಈ ಸಮಾಜದಲ್ಲಿ ನಮ್ಮ ಹಾಸ್ಯ, ಟೀಕೆಗಳನ್ನು ಮೀರಿದ ರಾಕ್ಷಸರು ಬೆಳೆಯುತ್ತಿದ್ದಾರೆ. ನಮ್ಮ ಜನ ಹಳ್ಳಿ ಪರಿಸರಕ್ಕೆ ಮೀರಿದ ದುಷ್ಟ ಶಕ್ತಿಗಳ ಗುಲಾಮರಾಗುತ್ತಿದ್ದಾರೆ. ಈ ಎಲ್ಲವುಗಳ ನಡುವೆ ನಾನು ಮಂದಣ್ಣನಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅಭಿಪ್ರಾಯಪಡುತ್ತಾರೆ.

ತೇಜಸ್ವಿ ಲೇಖಕರಾಗಿ ನಮ್ಮೆಲ್ಲರಿಗಿಂತ ಭಿನ್ನವಾಗಿರುವುದು ಅವರ ಕುತೂಹಲ ಮತ್ತು ವಿಸ್ಮಯದ ಭಾವನೆಯಲ್ಲಿ, ಒಬ್ಬ ಒಳ್ಳೆಯ ಲೇಖಕನಲ್ಲಿ ಒಂದು ಗುಣ ಇರಬೇಕು, ಆತನ ಭಾವನಾಲೋಕ ಶುದ್ಧವಾಗಿರಬೇಕು. ತನಗೆ ಅನಿಸಿದ್ದನ್ನು ಅನಿಸಿದೆಯಂತಲೂ, ಅನಿಸದ್ದನ್ನು ಅನಿಸುತ್ತಿಲ್ಲ ಅಂತಲೂ ಹೇಳುವ ನಿರ್ಭಿಡತೆಯನ್ನು ಆತ ಹೊಂದಿರಬೇಕು. ಅದು ತೇಜಸ್ವಿಯವರಲ್ಲಿ ಎದ್ದು ಕಾಣುವ ಅಂಶವಾಗಿತ್ತು. ಎಂದು ಅವರನ್ನು ವಿದ್ಯಾರ್ಥಿ

ದೆಸೆಯಿಂದಲೂ ಬಲ್ಲಂಥ ಅನಂತಮೂರ್ತಿಯವರು 'ತೇಜಸ್ವಿ ಇಲ್ಲದ ಜಗತ್ತಿನಲ್ಲಿ ನಾನೂ ಇರಲಾರೆ' ಎಂಬ ಲೇಖನದಲ್ಲಿ ಅಭಿಪ್ರಾಯಪಡುತ್ತಾರೆ.

ತೇಜಸ್ವಿಯವರಲ್ಲಿದ್ದಂತಹ ಇನ್ನೊಂದು ಗುಣ ಕುತೂಹಲ. ಪ್ರಾಣಿ, ಪಕ್ಷಿ, ಕಾಡು, ಮನುಷ್ಯರು ಎಲ್ಲರೂ ಅವರ ಕುತೂಹಲದ ಕೇಂದ್ರಗಳಾಗಿಬಿಡುತ್ತಿದ್ದರು. ಹಾಗಾಗಿಯೇ ಅವರು ಬೇರೆಯವರಿಗಿಂತ ಭಿನ್ನವಾದುದನ್ನು ಕೊಟ್ಟರು. ಯಾರೂ ಕಾಣದ ಮನುಷ್ಯನನ್ನು ಕಂಡರು. ಆ ಕಡೆ ಗ್ರಾಮೀಣರೂ ಅಲ್ಲದ, ಈ ಕಡೆ ನಗರದವರೂ ಅಲ್ಲದ ಮನುಷ್ಯರು ಅವರ ಸಾಹಿತ್ಯದ ನಾಯಕರಾಗಿ ಕಂಡು ಬರುತ್ತಾರೆ. ಪ್ರಾಣಿ, ಪಕ್ಷಿ ಪ್ರಪಂಚ ಎಷ್ಟು ವಿಚಿತ್ರವೋ ಅವರು ಚಿತ್ರಿಸುವ ಮನುಷ್ಯ ಪ್ರಪಂಚವೂ ಅಷ್ಟೇ ವಿಚಿತ್ರ. ಇಂತಹುದು ಕಾರಂತರಲ್ಲೂ, ಕುವೆಂಪುರವರಲ್ಲೂ ಇರಲಿಲ್ಲ. ಹಾಗಾಗಿಯೇ ತೇಜಸ್ವಿ ಇತರರಿಗಿಂತ ಭಿನ್ನ ಮತ್ತು ವಿಶಿಷ್ಟ. ಅವರು ಯಾವುದನ್ನೇ ಆಗಲಿ ಕೆಟ್ಟದ್ದು, ಒಳ್ಳೆಯದು ಎಂದು ಹೇಳುತ್ತಿರಲಿಲ್ಲ. ಅವರು ಚಿತ್ರಿಸುವ ಪಾತ್ರಗಳ ಘಟಿಂಗತನಕ್ಕೆ ಅವಕಾಶಗಳ ಕೊರತೆಯೇ ಕಾರಣ ಎಂದು ಮಾನವೀಯ ನೆಲೆಯಲ್ಲಿ ಕಾಣುತ್ತಿದ್ದರು. ಹೀಗಾಗಿ ತೇಜಸ್ವಿ ಇತರರಿಗಿಂತ ಅಪ್ಪಟ ಕ್ರಿಯೇಟೀವ್ ಬರಹಗಾರ ಎಂದು ಅನಂತಮೂರ್ತಿಯವರು ಅಭಿಪ್ರಾಯಪಡುತ್ತಾರೆ.

"ಇರೋದನ್ನ ವಿವರಿಸೋದರಲ್ಲಿ ಕೆಲವರು ತೃಪ್ತರಾದರೆ, ಇಲ್ದೇ ಇರೋದನ್ನ ಸೃಷ್ಟಿಸಿ ಜನರಿಗೆ ವಿನೋದ ನಿಡೋದು ಇನ್ನು ಕೆಲವರ ಬಗೆ. ತೇಜಸ್ವಿಯದು ಈ ಎರಡೂ ಅಲ್ಲ. ಅವರು ಇರೋದನ್ನೇ ಗ್ರಹಿಸಿ ತನ್ನದೇ ಆದ ಹೊಸದನ್ನು ಅಂದರೆ ನಾವು ಕಾಣದೇ ಇರೋದನ್ನ ತೋರಿಸ್ತಾ ಇದ್ರು." (ಲಂಕೇಶ್ ಪಿ., ತೇಜಸ್ವಿ ನೆನಪು, ೨೦೦೭, ಪುಟ-೦೯)

ತೇಜಸ್ವಿಯ ವಿಸ್ಮಯಲೋಕದಲ್ಲಿ ಕುವೆಂಪುರವರ ಭಾವನಾತ್ಮಕತೆ, ಕಾರಂತರ ಶೋಧನಾತ್ಮಕತೆಗಳೆರಡೂ ಇದ್ದವು. ತೇಜಸ್ವಿಯವರಲ್ಲಿ ವಿಜ್ಞಾನ ಮತ್ತು ಕಂಪ್ಯೂಟರ್ ಬಗ್ಗೆ ತೀವ್ರತರವಾದ ಆಸಕ್ತಿಯಿತ್ತು. ಮಕ್ಕಳಿಗೆ ಅಗತ್ಯವಾದ ವಿಜ್ಞಾನದ ಪುಸ್ತಕಗಳನ್ನು ಸರಳವಾಗಿ ಬರೆದರು. ಅದು ಆತ್ಮೀಯವಾಗುವಂತೆ ಮಾಡಿದರು. ಸದಾ ವಿಸ್ಮಯಗಳಿಗೆ ತೆರೆದುಕೊಂಡಿರುತ್ತಿದ್ದರು. ಯಾವ ಜಾತಿ, ಧರ್ಮ ಪಾಲಿಸದೆ, ಕುವೆಂಪುರವರ ವಿಶ್ವಮಾನವತೆಯೆಡೆಗೆ ಚಲಿಸುತ್ತಾ ಇದ್ದರು. ಜಾತಿಯನ್ನು ಮೀರಲು, ಅಂತರಜಾತಿ ವಿವಾಹ ಆಗಲು ಪ್ರೋತ್ಸಾಹ ನೀಡುತ್ತಿದ್ದರು. ಅಂತರಜಾತಿ ವಿವಾಹವಾದವರಿಗೆ ಮೀಸಲಾತಿ ನೀಡಬೇಕು ಎಂದು ಹೇಳುತ್ತಿದ್ದರು. ಹಿಂದೂ ಧರ್ಮದವರು ಮತಾಂತರ ಮಾಡಲು ಸಾದ್ಯವಿಲ್ಲ ಏಕೆಂದರೆ ಯಾವ ಜಾತಿಗೆ ಅಂತ ಮಾಡುವುದು ಎಂದು ತಮಾಷೆ ಮಾಡುತ್ತಿದ್ದುದನ್ನು ಅನಂತಮೂರ್ತಿ ನೆನಪಿಸಿಕೊಳ್ಳುತ್ತಾರೆ.

ಜಾಗತೀಕರಣ, ಆಧುನಿಕತೆ ವಿಷಯದಲ್ಲಿ ಸಕಾರಾತ್ಮಕ ಅಭಿಪ್ರಾಯವನ್ನು ತೇಜಸ್ವಿ ಹೊಂದಿದ್ದರು. ಆದ್ದರಿಂದ ಜಾತಿ, ಧರ್ಮಗಳ ಹಿಡಿತದಿಂದ ತಪ್ಪಿಸಿಕೊಳ್ಳಬಹುದು ಎಂಬ ಆಶಯ ತೇಜಸ್ವಿಯವರದಾಗಿತ್ತು. ಹಾಗೆಯೇ ಅವರು ಎಂದೂ ಹಠವಾದಿಯಾಗಿರಲಿಲ್ಲ. ತುಂಬಾ ಸೆನ್ಸಿಬಲ್ ಆಗಿದ್ದರು. ಸೂಕ್ಷ್ಮಮತಿಯುಳ್ಳವರಾಗಿದ್ದ ತೇಜಸ್ವಿ ಸರಿ ಅನಿಸಿದ್ದನ್ನು ಒಪ್ಪುತ್ತಿದ್ದರು. ಸರಿಕಾಣದ್ದನ್ನು ಅಷ್ಟೇ ನಿರ್ಭಿಡೆಯಿಂದ ನಿರಾಕರಿಸುವ ಸ್ವಭಾವ ಹೊಂದಿದ್ದರು ಎಂಬುದು ಅನಂತಮೂರ್ತಿಯವರ ಅಭಿಪ್ರಾಯವಾಗಿದೆ.

ಪೂರ್ಣಚಂದ್ರ ತೇಜಸ್ವಿ ತಮ್ಮ ಕಾದಂಬರಿಯಲ್ಲಿ ಸಾಂಪ್ರದಾಯಿಕ ನಿರೂಪಣಾ ಶೈಲಿಯನ್ನು ಅನುಸರಿಸಿದರೂ, ನಿರೂಪಕನು ಕತೆಯಲ್ಲಿ ಬಾಗವಹಿಸುತ್ತಾ ಹೋಗುವ ಕ್ರಮ ಇಲ್ಲಿದ್ದು ಇದು ವಾಸ್ತವವಾದಿ ನೆಲೆಯಿಂದ ಕೂಡಿದೆ ಎಂದು ಕೆ.ವಿ. ನಾರಾಯಣ್ ತಮ್ಮ 'ಕರ್ವಾಲೋ: ಪೂರ್ಣಚಂದ್ರ ತೇಜಸ್ವಿ' ಎಂಬ ಲೇಖನದಲ್ಲಿ ಅಭಿಪ್ರಾಯಪಡುತ್ತಾರೆ. ಮಾನವನ ದೈನಿಕ ಬದುಕಿನ ಲಯಗಳನ್ನು ಸ್ಥೂಲವಾಗಿ ನೋಡುವ ಬದಲು ತೇಜಸ್ವಿ ಸೂಕ್ಷ್ಮಗಳಿಗೆ ತೆರೆದುಕೊಳ್ಳುತ್ತಾರೆ. ಇದರಿಂದ ಬದುಕಿನ ವಾಸ್ತವಗಳನ್ನು ನಮ್ಮ ಕಣ್ಣಿಗೆ ರಾಚುವಂತೆ ಮಾಡುತ್ತಾರೆ. ಹಾಗೆಯೇ ಇಲ್ಲಿ ಬರುವ ಪಾತ್ರಗಳ ಹೆಸರುಗಳಿಗೂ ಅವರ ಪ್ರತಿಭೆಗಳಿಗೂ ಸಾಮ್ಯತೆಗಳಿರದ ವ್ಯಂಗ್ಯವನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ಅವರ ಹೆಸರಿಗೂ ಇವರಲ್ಲಿನ ಶಕ್ತಿಗೂ ನಡುವೆ ಒಡೆದು ಕಾಣುವ ವ್ಯಂಗ್ಯವನ್ನು ತರುವ ಮೂಲಕ ವಾಸ್ತವ ಬದುಕನ್ನು ನಮ್ಮ ಮುಂದೆ ಮುಖಾಮುಖಿಯಾಗಿಸುತ್ತಾರೆಂದು ಕೆ.ವಿ.ಎನ್. ಅಭಿಪ್ರಾಯಪಡುತ್ತಾರೆ.

ಹಾರುವ ಓತಿಗೂ ಮಂದಣ್ಣನಿಗೂ ಇರುವ ಸಂಬಂಧವನ್ನು ಗುರ್ತಿಸುವ ಕೆ.ವಿ. ನಾರಾಯಣ್ ವಿಕಾಸಪಥದ ಪ್ರಜ್ಞೆಯ ಬೆಳವಣಿಗೆಯ ಒಂದು ಹಂತದಲ್ಲಿ ಸ್ಥಗಿತಗೊಂಡ ಈ ಎರಡೂ ಜೀವಿಗಳನ್ನು ಒಂದೇ ನೆಲೆಯಲ್ಲಿ ನೋಡುತ್ತಾರೆ. ಹಾಗೆಯೇ ಓತಿಯು ತಪ್ಪಿಸಿಕೊಂಡು ಹೋಗುವುದು ಸ್ಥಗಿತಗೊಂಡ ಪ್ರಜ್ಞೆಯ ಜೀವಿಗಳು ಪಡೆಯಬಹುದಾದ ಹೊಸ ಬದುಕಿನ ಸೂಚನೆ ಎಂಬುದು ಕೆ.ವಿ.ಎನ್. ಅಭಿಪ್ರಾಯವಾಗಿದೆ.

ಪೋಲಂಕಿ ರಾಮಮೂರ್ತಿಯವರು ಹೇಳುವಂತೆ ಕಾದಂಬರಿಯ ನಿರೂಪಣೆಯ ಭಾಷೆಯಲ್ಲಿ ಆಧ್ಯಾತ್ಮಿಕ ಶೋಧನೆಯನ್ನು ಕಾಣಬಹುದು ಎಂಬ ಮಾತನ್ನು ನಿಜ ಎನ್ನುವ ಕೆ.ವಿ.ಎನ್ ಈ ಶೋಧನೆಯ ಹಿಂದಿರುವ ಉದ್ದೇಶವಂತೂ ಆಧ್ಯಾತ್ಮಿಕವಲ್ಲ ಎನ್ನುತ್ತಾರೆ. ಬದುಕಿನ ಜಂಜಡಗಳನ್ನು ಗೊಂದಲಗಳನ್ನು ಚಿತ್ರಿಸುವ ತೇಜಸ್ವಿ ಅವ್ಯಕ್ತವಾದುದನ್ನು ಶೋಧಿಸುವ ಆಕಾಂಕ್ಷೆಯುಳ್ಳವರಾಗಿ ಕಂಡರೂ ಇದು ಪಲಾಯನವಲ್ಲ. ಜೀವನದ ಅರ್ಥಗಳು ಮತ್ತು ಬೆಳವಣಿಗೆಯ ಸಾಧ್ಯತೆಗಳ ಶೋಧನೆಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಹಾಗೆಯೇ ಕೆ.ವಿ.ಎನ್. ತೇಜಸ್ವಿಯವರ ಸಾಹಿತ್ಯವನ್ನು ಚಿರವಾಸ್ತವ ಮತ್ತು ಚರವಾಸ್ತವಗಳ

ಮುಖಾಮುಖಿಯಲ್ಲಿ ಚರ್ಚಿಸುವುದನ್ನು ಒಪ್ಪದೇ ಪ್ರಶ್ನಿಸುತ್ತಾರೆ. "ಹಾರುವ ಓತಿಯನ್ನೂ ಕೂಡ ಕಾದಂಬರಿಯು ಕೇವಲ ಸ್ಥಗಿತಗೊಂಡ ಆದರೆ ಚಲನೆ ಮತ್ತು ಬದಲಾವಣೆ ಸಾಧ್ಯವಿರುವ ಜೀವವೆಂದು ಪರಿಗಣಿಸುತ್ತದೆ ಎಂಬುದನ್ನು ಗಮನಿಸಿದಾಗ ಅದನ್ನು ಚಿರವಾಸ್ತವವೆಂದು ವ್ಯಾಖ್ಯಾನಿಸುವುದು ಹೇಗೆ? ಎನ್ನುವ ಪ್ರಶ್ನೆಯು ಉಂಟಾಗುತ್ತದೆ." (ನಾರಾಯಣ್ ಕೆ.ವಿ., ಬೇರು ಕಾಂಡ ಚಿಗುರು, ೧೯೯೭, ಪುಟ-೩೪೩)

ಮೌಮೌ ದುಂಬಿಗಳ ದಾಳಿಯಿಂದಾದ ಅನಿರೀಕ್ಷಿತ ಪರಿಣಾಮಗಳನ್ನು ಉದಾಹರಿಸಿ ಮಾನವನ ಬದುಕಿನ ಸೂಕ್ಷ್ಮಗ್ರಹಿಕೆಗಳು ಅವನನ್ನು ಅನಿರೀಕ್ಷಿತವಾಗಿ ಹೊಸ ಅರ್ಥವಂತಿಕೆಯತ್ತ ಮುನ್ನುಗ್ಗುವಂತೆ ಮಾಡುತ್ತವೆ. ಎಂಬುದನ್ನು ಕಾದಂಬರಿ ತಿಳಿಸಿಕೊಡುವ ವಿಧಾನ ಅನನ್ಯವಾದುದು. ಈ ಎಲ್ಲವನ್ನೂ ಕಾದಂಬರಿ ಯಾವುದೇ ರೀತಿಯ ಹೊಸತನದ ಹಂಗಿಲ್ಲದೆ ಸಾಂಪ್ರದಾಯಿಕ ಬಗೆಯಲ್ಲಿಯೇ ನಿರ್ಮಿಸಿ ತೋರಿಸಿದೆ ಎಂದು ಕೆ.ವಿ.ಎನ್. ಅಭಿಪ್ರಾಯಪಡುತ್ತಾರೆ.

'ತೇಜಸ್ವಿಯವರ ಜೊತೆ ನಾವೂ ಪಯಣಿಸುತ್ತಲೇ ಇದ್ದೇವೆ, ಕರ್ವಾಲೋ ಜೊತೆಗೆ ಮಂದಣ್ಣ ನಡೆದ ಹಾಗೆ' ಎಂಬುದು ಕಿ.ರಂ.ನಾಗರಾಜ ಅವರ ಆಪ್ತ ಬರಹ. ಇಲ್ಲಿ ತೇಜಸ್ವಿಯವರು ಮನುಷ್ಯರ ನಿಗೂಢತೆಯನ್ನು ಕೆಳಸ್ತರದ ಲಘುಹಾಸ್ಯದ ಮೂಲಕ ಬೆರಗಿನಲ್ಲಿ ಬಯಲುಗೊಳಿಸಿರುವ ಸೃಷ್ಟಿಶೀಲತೆಯನ್ನು ಇನ್ನೂ ಉಳಿಸಿಕೊಂಡಿರುವ ಚಿಂತಕರು. ಅವರು ಕಥೆ, ಕಾದಂಬರಿಕಾರರು ಮಾತ್ರ ಆಗಿರದೆ, ಸಮರ್ಥ ಕ್ರಿಯಾಶೀಲ ಸಂಯೋಜಕ ಕಲಾವಿದರಾಗಿದ್ದರು. ಚಿತ್ರಕಲೆ, ಛಾಯಾಗ್ರಹಣ, ಪರಿಸರ, ಸಂಗೀತ, ಸಾಹಸ ಮತ್ತು ವಿಜ್ಞಾನದ ನಿಗೂಢಗಳಿಗೆ ಕೈಹಚ್ಚಿ ಅನಂತರ ವಿಶ್ವವನ್ನು ಸಂಶೋಧನಾತ್ಮಕತೆಯಿಂದ ಕಥಿಸಿದವರು ಎಂದು ಕಿ.ರಂ. ನಾಗರಾಜ ಅಭಿಪ್ರಾಯಪಡುತ್ತಾರೆ.

ಸಾಮಾಜಿಕತೆಯನ್ನೇ ಕಳೆದುಕೊಂಡು ಜಡವಾಗಿರುವ ಸಾಹಿತ್ಯಕ್ಕೆ ಹೊಸ ಕಾಯಕಲ್ಪ ನೀಡಿದವರು. ಹೊಸ ಹೊಸ ಚಿಂತನೆಗಳಿಗೆ ಸಾಹಿತ್ಯ ತೆರೆದುಕೊಳ್ಳುವಂತೆ, ಕುತೂಹಲಭರಿತವಾಗಿರುವಂತೆ ಮಾಡಿದವರು. "ಕೇವಲ ಸಾಹಿತ್ಯಕ್ಕೆ ಬದ್ಧರಾಗಿ ಅದನ್ನೇ ಮತ್ತೆ ಮತ್ತೆ ತೀಡಿ ಉದ್ಗರಿಸುತ್ತಾ ಯಾವ ಜೀವಂತ ಚಲನೆಯೂ ಇಲ್ಲದೆ ಜಡವಾಗಿರುವವರ ಭೋಳೆತನದ ಮತ್ತು ಅಹಂಕಾರಗಳ ನಡುವೆ ತೇಜಸ್ವಿಯವರ ಕುತೂಹಲ, ಜಿಜ್ಞಾಸೆಗಳ ಮೂಲಕ ಹುಟ್ಟಿದ ಶೋಧನಾತ್ಮಕ ಪ್ರತಿಭೆ ಎಷ್ಟು ದಟ್ಟವಾದುದು ಎಂಬುದು ಇನ್ನು ಮುಂದೆ ನಮ್ಮ ಚಿಂತನೆಯ ಕ್ರಮದ ಮುಖ್ಯ ಧಾತು ಆಗಲಿದೆ. ತೇಜಸ್ವಿ ಸಾಂಸ್ಕೃತಿಕ ಕೇಂದ್ರದಲ್ಲಿ ನಿಂತು ವಿಕಸನ ಕ್ರಮಗಳನ್ನು ನೆಲೆಗೊಳಿಸಿದವರು." (ನಾಗರಾಜ ಕಿ.ರಂ., ತೇಜಸ್ವಿ ನೆನಪು, ೨೦೦೭, ಪುಟ-೧೩)

ಹೀಗೆ ಇತರ ವಲಯಗಳನ್ನು ಸಾಹಿತ್ಯದ ಜೊತೆ ಜೊತೆಗೆ ಸಮೀಕರಿಸಿ ಹೊಸ ಹೊಸ ಚಿಂತನೆಗಳಿಗೆ, ಜಿಜ್ಞಾಸೆಗಳಿಗೆ ಸಾಹಿತ್ಯ ತೆರೆದುಕೊಳ್ಳುವಂತೆ ಮಾಡಿದವರು ತೇಜಸ್ವಿ. ಪರಿಸರ ರಕ್ಷಣೆ, ಶಿಕ್ಷಣ ಕ್ರಮ, ಸಾಮಾಜಿಕ ಅಸಮಾನತೆಯನ್ನು ಇಲ್ಲಾವಾಗಿಸಲು ಅವರ ಚಿಂತನೆಗಳು ಹೆಚ್ಚು ಸಹಕಾರಿಯಾಗುತ್ತವೆ. ಆದರೆ ಇಂದಿನ ಆಳುವ ಸರ್ಕಾರಗಳಿಗೆ ಈ ಚಿಂತನೆಗಳು ಕೇಳದಾಗಿವೆ. ಇವರೇ ಅಲ್ಲ ಕುವೆಂಪು, ಕಾರಂತ, ಅನಂತಮೂರ್ತಿ, ದೇವನೂರು, ಲಂಕೇಶ್ ಮುಂತಾದವರ ವಿಚಾರಗಳಾವುವೂ ಸಹ ಬೇಡವಾಗಿವೆ. ಶಕ್ತಿ ರಾಜಕಾರಣದ ಪಿತೂರಿಗಳಿಗೂ ಸಾಂಸ್ಕೃತಿಕ ವಿಕಾಸದ ಜ್ವಲಂತ ಪ್ರಶ್ನೆಗಳಿಗೂ ತಾಳೆ ಹೊಂದದೆ ಪರಿಸ್ಥಿತಿ ಮೂರಾಬಟ್ಟೆಯಾಗಿದೆ ಎಂದು ಕಿ.ರಂ ವಿಷಾದ ವ್ಯಕ್ತಪಡಿಸುತ್ತಾರೆ.

ಈ ಕಾಲ ಅಸಂಖ್ಯ ತತ್ವಗಳ ಕಾಲ, ಎಲ್ಲ ತತ್ವಗಳು ಮತ್ತೆ ಮತ್ತೆ ಒಡೆದುಕೊಂಡು ವಿಭಿನ್ನ ತತ್ವಗಳು ಹುಟ್ಟುತ್ತಿರುವ ಕಾಲ. ಮಾರ್ಕ್ಸ್‌ವಾದ, ಸ್ತ್ರೀವಾದ, ಸಮಾಜವಾದ, ದಲಿತವಾದ ಹೀಗೆ ಅನೇಕವಾದಗಳನ್ನು ತುಂಬಾ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ತೇಜಸ್ವಿ ತಿಳಿದವರಾಗಿದ್ದರು. ಇವರು ಈ ಎಲ್ಲಾ ವಾದಗಳ ಇತಿ ಮಿತಿಗಳ, ಜಡತೆಯ ಮತ್ತು ಜೀವಂತಿಕೆಯ ಅಂಶಗಳ ವಿಶ್ಲೇಷಕರು, ಟೀಕಾಕಾರರೂ ಆಗಿದ್ದರು. ಹಾಗೆಯೇ ಇವರ ಪರಿಸರ ಚಿಂತನೆಯ ಮೇಲೆ ಕುವೆಂಪು, ಕಾರಂತ ಮತು ಬೇಂದ್ರೆಯವರ ದಟ್ಟ ಪ್ರಭಾವವಿದೆ. ಆದರೆ ಯಾವುದೇ ಪ್ರಭಾವಕ್ಕೂ ಸಿಕ್ಕಿಕೊಳ್ಳದೇ ತಮ್ಮದೇ ಆದ ಸ್ವಂತಿಕೆಯ ಚಿಂತನೆಯ ಹಿನ್ನಲೆಯಲ್ಲಿ ಪರಿಸರವನ್ನು ಕಂಡವರು ತೇಜಸ್ವಿ ಎಂದು ಕಿ.ರಂ ಅಭಿಪ್ರಾಯಪಡುತ್ತಾರೆ.

"ಪರಿಸರ ಚಿಂತನೆ ಹಾಯ್ದುಬಂದ ದಿಕ್ಕನ್ನು ವಿಶ್ಲೇಷಿಸುತ್ತಾ ಬಂದು ತೇಜಸ್ವಿ ತಮ್ಮ ಚಿಂತನೆಯನ್ನು ರೂಪಿಸಿಕೊಂಡವರು. ಕಾರಂತರ ನಿಸರ್ಗ ಕಲ್ಪನೆಯಲ್ಲಿನ ಮನುಷ್ಯ ಮತ್ತು ಪ್ರಕೃತಿ ಸಂಬಂಧದ ಕಲ್ಪನೆ ಒಂದು ಮಹತ್ವದ ಸ್ತರವಾದರೆ, ಕುವೆಂಪು ಬೇಂದ್ರೆಯವರ ಪ್ರಕೃತಿ ಚಿಂತನೆ–ತಾಯ್ತನದ, ಮನುಷ್ಯನನ್ನು ಪೊರೆಯುವ, ಉನ್ನತೀಕರಣದತ್ತ ಒಯ್ಯುವ ನೆಲೆಯದಾಗಿತ್ತು. ಇವುಗಳ ಮದ್ಯೆ ತೇಜಸ್ವಿ ಇಂಥ ಅಗಾಧ ಪರಿಸರವನ್ನು ಕಾಡಿನ ಚೈತನ್ಯವನ್ನು ರಕ್ಷಿಸಲೇಬೇಕಾದ ತುರ್ತು ಅಗತ್ಯವನ್ನು ಮನಗಂಡವರಾದರು. ಲಕ್ಷಾಂತರ ಹೆಕ್ಟೇರುಗಳ ಅರಣ್ಯ ಸಂಪತ್ತು ದಿನೇ ದಿನೇ ನಾಶವಾಗಿ ಹಣ ಪಿಶಾಚಿತ್ವಕ್ಕೆ ಗುರಿಯಾಗುತ್ತಿರುವುದರತ್ತ ಅವರ ಆಲೋಚನೆ ಚಲಿಸಿದೆ. ಹೀಗೆ ಕಾಡು ಕಪ್ಪು ಹಣಕ್ಕೆ, ಗುರಿರಹಿತ ಕುರುಡು ಪ್ರಗತಿಗೆ ಆಹುತಿಯಾಗುತ್ತಿರುವುದನ್ನು ಕುರಿತ ತೀವ್ರ ನೋವು ಹಾಗೂ ಆಕ್ರೋಶ ತೇಜಸ್ವಿಯವರ ಬರಹಗಳಲ್ಲಿ ವಿಶಿಷ್ಟ ತಾತ್ವಿಕ ಕೇಂದ್ರವನ್ನು ರೂಪಿಸಿದೆ." (ನಾಗರಾಜ ಕಿ.ರಂ., ತೇಜಸ್ವಿ ನೆನಪು, ೨೦೦೭, ಪುಟ–೧೪) ಪರಿಸರ ಶಕ್ತಿ ಮತ್ತು ಚೈತನ್ಯ ಮನುಷ್ಯ ಹಿಡಿತಗಳಿಗೆ ಸಿಗದೆಂಬುದನ್ನು, ಯಂತ್ರನಾಗರೀಕತೆಯ ಅವಾಂತರಗಳ ನಡುವೆಯೂ, ಅವುಗಳ ಇತಿ–ಮಿತಿಗಳನ್ನು,

ಅಂತಿಮವಾಗಿ ನಿಸರ್ಗದ ದಿಗ್ವಿಜಯವನ್ನು ಅವರ ಬರಹಗಳಲ್ಲಿ ಮನಗಾಣಿಸುತ್ತಾರೆ. ಅವರ ನಿಗೂಢ ಮನುಷ್ಯರು, ಜುಗಾರಿ ಕ್ರಾಸ್, ಚಿದಂಬರ ರಹಸ್ಯ, ಕರ್ವಾಲೋ ಮುಂತಾದುವು ಈ ದೃಷ್ಟಿಯಿಂದ ಸೃಷ್ಟಿಗೊಂಡಿರುವ ರೂಪಕಗಳು. ಇವೆಲ್ಲವೂ ಅವರ ಪರಿಸರ ಕಾಳಜಿಯನ್ನು ಸಾಕ್ಷೀಕರಿಸುತ್ತವೆ.

ತೇಜಸ್ವಿಯವರ ಒಡನಾಡಿಯಾಗಿ ಸಹಪಾಠಿಯಾಗಿದ್ದು ಈ ಎಲ್ಲಾ ಸಂದರ್ಭಗಳಲ್ಲಿ ತೇಜಸ್ವಿಯವರಲ್ಲಿ ಕಂಡುಂಡ ಸಂಗತಿಗಳನ್ನು 'ಪೂರ್ಣ ವ್ಯಕ್ತಿತ್ವದ ತೇಜಸ್ವಿ' ಎಂಬ ತಮ್ಮ ಲೇಖನದಲ್ಲಿ ಜಿ.ಎಚ್. ನಾಯಕರು ಹಂಚಿಕೊಂಡಿದ್ದಾರೆ. ಆತ್ಮೀಯನನ್ನು ಕಳೆದುಕೊಂಡ ನೋವು ಅವರ ಈ ಬರಹದಲ್ಲಿ ಕಾಣುತ್ತದೆ. ಕೆಲವು ಸಂದರ್ಭಗಳಲ್ಲಂತು ನಾಯಕರು ಭಾವುಕರಾಗುತ್ತಾರೆ. ಮೊದಲು ತೇಜಸ್ವಿಯವರನ್ನು, ಅವರ ವರ್ತನೆಗಳನ್ನು ಕಂಡು ಅಹಂಕಾರಿ, ಬೇಜವಾಬ್ದಾರಿ ಎಂದುಕೊಂಡಿದ್ದು, ನಂತರದ ಅವರ ಒಡನಾಟದಿಂದ ಅದು ಅಹಂಕಾರವಲ್ಲ, ನಿಷ್ಠುರತನವೆಂದು ತಮ್ಮ ತಪ್ಪು ಕಲ್ಪನೆಯನ್ನು ತಿದ್ದಿಕೊಳ್ಳುತ್ತಾರೆ. ಅವರೊಬ್ಬ ಮಾನವತಾವಾದಿ, ಅಪಾರ ವಿನಯವಂತರು. ನಡೆ-ನುಡಿಗಳಲ್ಲಿ ಅಗಾಧ ಸಾಮ್ಯತೆಯುಳ್ಳವರು. ತನ್ನನ್ನು ತಾನು ಎಂತಹ ಕಟು ವಿಮರ್ಶೆಗೂ ಒಳಗುಮಾಡಿಕೊಳ್ಳುವ ದಾರ್ಶನಿಕರು ಎಂದು ನಾಯಕರು ಅಭಿಪ್ರಾಯಪಡುತ್ತಾರೆ.

ವಿದ್ಯಾರ್ಥಿ ದೆಸೆಯಿಂದಲೂ ಗೆಳೆಯರ ದೊಡ್ಡ ಗುಂಪಿನ ನಡುವೆಯೇ ಇರುತ್ತಿದ್ದರು. ಅಷ್ಟು ಸಲಿಗೆ, ಆತ್ಮೀಯತೆ ಅವರಲ್ಲಿತ್ತು. ಯಾವುದೇ ವಿಷಯವನ್ನಾಗಲೀ ತನಗೆ ಪೂರ್ಣ ಒಪ್ಪಿಗೆಯಾಗದೇ ಸ್ವೀಕರಿಸುವ ಜಾಯಮಾನದವರಲ್ಲ. ಹಿರಿಯ-ಕಿರಿಯ ಎನ್ನದೇ ಎಲ್ಲರನ್ನೂ ಗೌರವಿಸುತ್ತಿದ್ದ ತೇಜಸ್ವಿ, ಬೇರೆಯವರು ಎಷ್ಟೇ ಕಟುವಾಗಿ ಟೀಕಿಸಿದರೂ ಅವರ ಟೀಕೆಯಲ್ಲಿ ಸತ್ಯವಿದ್ದರೆ ಅದನ್ನು ಸ್ವೀಕರಿಸಲು ಹಿಂಜರಿಯದವರಾಗಿದ್ದರು. ಹಾಗೆಯೇ ತಮ್ಮನ್ನು ತಾವು ನಿಷ್ಠುರ ವಿಮರ್ಶೆಗೆ ಒಳಗುಮಾಡಿಕೊಳ್ಳುವ ಗುಣವನ್ನು ಹೊಂದಿದ್ದರು ಎಂದು ನಾಯಕರು ಅಭಿಪ್ರಾಯಪಡುತ್ತಾರೆ.

"ಒಮ್ಮೆ ಅದೇನಾಯಿತೋ ಗೊತ್ತಿಲ್ಲ, ನಮ್ಮನೇಲಿ ಮಾತಿಗೆ ಕೂತಿದ್ದವರು, 'ನಾಯಕ್ರೇ. . . . . ನಾನು ಮೈಸೂರಿನಲ್ಲೇ ಕೆಲಸಕ್ಕೆ ಸೇರಿದ್ರೆ ಕನ್ನಡ ಡಿಪಾರ್ಟ್‌ಮೆಂಟ್‌ಗೆ ನನ್ನನ್ನೇ ಡೈರೆಕ್ಟರ್ ಮಾಡ್ತಿದ್ರು ಅಲ್ವಾ?' ಅಂದ್ರು 'ಯಾರ್‍ಯಾರೋ ಆಗ್ತಿದಾರೆ ತೇಜಸ್ವಿ . . . . ನೀವು ಆದರೆ ಚೆನ್ನಾಗಿರೋದು' ಅಂದೆ. 'ಹೌದು ಆಗ್ಬೋದಿತ್ತು, ಆದ್ರೆ ನಿಮ್ ಕಣ್ಣಲ್ಲಿ ನಾನು ಹೇಗೆ ಕಾಣ್ತಿದ್ದೆ?' ಎಂದು ಕೇಳಿದರು. 'ಯಾಕೆ ಹೀಗಂತೀರ?' ಎಂದೆ. 'ನೀವೇನೇ ಹೇಳಿ ನಿಮ್ಮ ಕಣ್ಣಲ್ಲಿ ನಾನು ಆಗ ಹೇಲ್‌ಗುಪ್ಪೇಥರಾ ಕಾಣಿಸ್ತಿದ್ದೆ'. ಅಂದರು. ತೇಜಸ್ವಿಯವರಿಗೆ ತಮ್ಮ ಬಗ್ಗೆಯೂ ಅಂಥ

ನಿಷ್ಠುರ ವಿಮರ್ಶೆ ಮಾಡಿಕೊಳ್ಳುವ ಛಾತಿ ಇತ್ತು!" (ನಾಯಕ್ ಜಿ.ಹೆಚ್., ತೇಜಸ್ವಿ ನೆನಪು, ೨೦೦೭, ಪುಟ-೧೮)

ಹೀಗೆ ತಮ್ಮನ್ನು ತಾವು ಸದಾ ಎಚ್ಚರಿಕೆಯಿಂದ ಗಮನಿಸುವ ಗುಣ ತೇಜಸ್ವಿಯವರಲ್ಲಿ ಜಾಗೃತವಾಗಿರುತ್ತಿತ್ತು. ಅವರು ಬೇರೆಯವರ ಸ್ವತಂತ್ರ ನಿಲುವುಗಳನ್ನು ಸದಾ ಬೆಂಬಲಿಸುತ್ತಿದ್ದರು ಮತ್ತು ಗೌರವಿಸುತ್ತಿದ್ದರು. ಅಡಿಗರು 'ಕುವೆಂಪು ಕವಿಯೇ ಅಲ್ಲ' ಎಂದ ಮಾತು ಚರ್ಚೆಗೆ ಒಳಗಾಗಿದ್ದ ಕಾಲದಲ್ಲೂ ನಾನು ಅಡಿಗರ ಗುಂಪಿನಲ್ಲಿದ್ದಾಗಲೂ ಅಡಿಗರ ಮತ್ತು ನನ್ನ ಜೊತೆ ಆತ್ಮೀಯವಾಗಿ, ಮುಕ್ತ ಮನಸ್ಸಿನವರಾಗಿಯೇ ಇದ್ದದ್ದು ತೇಜಸ್ವಿಯವರ ಹೆಚ್ಚುಗಾರಿಕೆಯಾಗಿದೆ. ತಮ್ಮ ತಂದೆಯ ವಿರುದ್ಧದ ಧ್ವನಿಯಲ್ಲಿನ ಸತ್ಯದ ಹುಡುಕಾಟ ಅವರದಾಗಿತ್ತು ಎಂದು ನಾಯಕರು ತಮ್ಮ ನೆನಪುಗಳನ್ನು ತರೆದಿಡುತ್ತಾರೆ.

ಅಡಿಗರ ನಂತರ ನಾನು ಕಂಡ ಸದಾ ಡೆಮಾಕ್ರೆಟಿಕ್ ಆಗಿದ್ದ ವ್ಯಕ್ತಿಯೆಂದರೆ ತೇಜಸ್ವಿ ಅವರ ವಿಚಾರಗಳನ್ನು ಒಪ್ಪದಿದ್ದರೂ ಅವರ ಜೊತೆ ಮುಕ್ತ ಚರ್ಚೆಗೆ ಅವಕಾಶವಿತ್ತು. ಹೋರಾಟವನ್ನು ವ್ಯಕ್ತಿತ್ವವನ್ನಾಗಿ ಮಾಡಿಕೊಳ್ಳದೆ ವ್ಯಕ್ತಿತ್ವದ ಒಂದು ಭಾಗವಾಗಿ ಸ್ವೀಕರಿಸಿದ್ದರು, ಬದುಕಿದ್ದರು. ಸದಾ ತಮ್ಮನ್ನು ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಫೋಟೋಗ್ರಫಿ, ಕನ್ನಡ ಸಾಫ್ಟವೇರ್, ಕೃಷಿ, ಹೋರಾಟ ಹೀಗೆ ಬೇರೆ ಬೇರೆ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೊಸತನಕ್ಕಾಗಿ ತುಡಿಯುತ್ತಿದ್ದರು. ಯಾವತ್ತೂ ಬೀಸು ಹೇಳಿಕೆಗಳನ್ನು ನೀಡಿದವರಲ್ಲ. ತಪ್ಪು ಅನಿಸಿದ್ದನ್ನ ಒಪ್ಪುತ್ತಿರಲಿಲ್ಲ. ಅನೇಕರು ಅವರ ಈ ವರ್ತನೆಯನ್ನು ಸಿನಿಕತನ ಎಂದು ಟೀಕಿಸುತ್ತಿದ್ದರು. ಆದರೆ ಅವರು ಕಟುವಾಸ್ತವವಾದಿ ಎಂದು ಜಿ.ಹೆಚ್. ನಾಯಕರು ಅಭಿಪ್ರಾಯಪಡುತ್ತಾರೆ.

ಪೂರ್ಣಚಂದ್ರ ತೇಜಸ್ವಿಯವರು ಪರಿಸರ ಕುರಿತು ಕುರುಡು ನಂಬಿಕೆಯುಳ್ಳವರಲ್ಲ. ಮಲೆನಾಡಿನ ದಟ್ಟ ಕಾಡು ಪರಿಸರದಿಂದ ಬಂದ ಕುವೆಂಪು ಮತ್ತು ವೈಜ್ಞಾನಿಕವಾಗಿ, ವೈಚಾರಿಕವಾಗಿ ಪರಿಸರವನ್ನು ಕಂಡ ಶಿವರಾಮ ಕಾರಂತರಿಂದ ಪ್ರಭಾವಿತರಾಗಿದ್ದರೂ ಅವರಿಗಿಂತ ವಿಭಿನ್ನ ರೀತಿಯಲ್ಲಿ ಪರಿಸರವನ್ನು ಕಂಡವರು, ಬರೆದವರು. ಕುವೆಂಪು ಮತ್ತು ಕಾರಂತರು ಹೇಗೆಲ್ಲಾ ಬದುಕಬೇಕೆಂದು ಕನಸು ಕಂಡರೊ, ಹಾಗೆಯೇ ಬರೆದರು. ಅವರ ಮುಂದುವರೆದ ಭಾಗವಾಗಿ ಬದುಕಿದವರು ತೇಜಸ್ವಿ. ಇಂದು ನಾವು ತಿಳಿದಿರುವ, ಪರಿಸರವಾದಿಗಳು ಹೇಳುತ್ತಿರುವುದು ಪರಿಸರ ಕಾಳಜಿಯಲ್ಲ. ಈ ರೀತಿಯ ಕಾಳಜಿ ಪರಿಸರ ನಾಶಕ್ಕೆ ನಾಂದಿಯಾಗುತ್ತದೆ ಎಂದು ತಮ್ಮ ಸಾಹಿತ್ಯ ಕೃತಿಗಳ ಮೂಲಕವೇ ಜನತೆಯನ್ನು ಎಚ್ಚರಿಸಿದವರು ತೇಜಸ್ವಿ. ಇವರಿಗೆ ಪರಿಸರವೆಂದರೆ ತನ್ನ ಗುಟ್ಟು ಬಿಟ್ಟುಕೊಡದ ನಿಗೂಢತೆಯನ್ನು ನಿರಂತರವಾಗಿ ಕಾಯ್ದುಕೊಂಡು ಹೋಗುವ ನಿಧಿಯಾಗಿತ್ತು.

ತೇಜಸ್ವಿಯವರ ಪರಿಸರ ಕಾಳಜಿಯನ್ನು ಹಾಗು ಪರಿಸರವಾದಿಗಳಿಗೂ ಮತ್ತು ಲೇಖಕನಿಗೂ ಇರುವ ಪರಿಸರ ಕುರಿತ ದೃಷ್ಟಿಕೋನಗಳಲ್ಲಿನ ವ್ಯತ್ಯಾಸಗಳನ್ನು ಕೆ. ಸತ್ಯನಾರಾಯಣ ಇವರು ತಮ್ಮ 'ಪರಿಸರ' ತೇಜಸ್ವಿ ದೃಷ್ಟಿಕೋನ' ಎಂಬ ಲೇಖನದಲ್ಲಿ ತೇಜಸ್ವಿ ಸಾಹಿತ್ಯದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ಪರಿಸರ ದಿನೇ ದಿನೇ ಅವನತಿಯೆಡೆಗೆ ಸಾಗುತ್ತಿದೆ. ಆಧುನಿಕತೆಯ ಒಂದು ಉತ್ಪನ್ನವೇ ಆದ ಕೈಗಾರೀಕರಣದಿಂದ ಅವನತಿಯ ಹಾದಿಯಲ್ಲಿ ಬಹುದೂರ ಸಾಗಿದೆ. ಇದು ಹೀಗೆ ಮುಂದುವರೆದರೆ ಮುಂದಿನ ಪೀಳಿಗೆ ಪರಿಸರದ ಅನುಕೂಲಗಳಿಂದ ವಂಚಿತವಾಗುತ್ತದೆ ಹಾಗೂ ಅನೇಕ ಸಂಕಷ್ಟಗಳಿಗೆ ಒಳಗಾಗುತ್ತದೆ. ಹೀಗಾಗಿ ಪರಿಸರದಿಂದ ದೊರೆಯುತ್ತಿರುವ ಅನುಕೂಲಗಳು ಮತ್ತು ಸವಲತ್ತುಗಳು ದೊರೆಯದಿರಬಹುದು ಎಂಬ ಭಯ ಮತ್ತು ಆತಂಕಗಳಿಂದ ಅನೇಕರು ಪರಿಸರದ ಬಗ್ಗೆ ಕಾಳಜಿಯನ್ನು ಬೆಳೆಸಿಕೊಂಡು ಪರಿಸರವಾದಿಗಳಂತೆ ವರ್ತಿಸುತ್ತಿದ್ದಾರೆ. ಇವರು ಪರಿಸರ ಕುರಿತು ಎಲ್ಲವನ್ನೂ ತಿಳಿದುಕೊಂಡವರಂತೆ ಮಾತನಾಡುತ್ತಾರೆ. ಆದರೆ ಪರಿಸರ ಮಾತ್ರ ಅವ್ಯಾಹತವಾಗಿ ಅವನತಿಯತ್ತ ಸಾಗುತ್ತಲೇ ಇದೆ.

"ಪರಿಸರವಾದಿಗಳು ಕಾಡು ಮತ್ತು ಪ್ರಾಣಿಗಳ ಬಗ್ಗೆ, ಅವುಗಳ ಅಸ್ತಿತ್ವದ ಬಗ್ಗೆ ತಮಗೆ ವಿಶೇಷವಾದ ಹಕ್ಕೊಂದು ಇರುವಂತೆ ಮಾತನಾಡುತ್ತಾರೆ. ತೇಜಸ್ವಿ ಸರಿಯಾದ ಕಾರಣಕ್ಕೆ ಇದನ್ನು ಒಪ್ಪುವುದಿಲ್ಲ. ಪರಿಸರದ ಬಗ್ಗೆ ವಿಶೇಷವಾದ ಹಕ್ಕನ್ನು ಬಯಸುವವರು ಕಾಡು-ಪ್ರಾಣಿ-ಮನುಷ್ಯ ಇವೆಲ್ಲವೂ ಒಟ್ಟಿಗೆ ಸೇರಿದಾಗ ಉಂಟಾಗುವ ಜೀವನ ವಿನ್ಯಾಸವನ್ನು ಒಪ್ಪುತ್ತಾರೆಯೇ ಎಂಬ ಪ್ರಶ್ನೆಯನ್ನು ತೇಜಸ್ವಿಯವರು ಓದುಗರ ಮುಂದಿಡುತ್ತಾರೆ." (ಸತ್ಯನಾರಾಯಣ ಕೆ., ತೇಜಸ್ವಿ, ಲೋಕ, ೨೦೦೭, ಪುಟ-೭೪)

ಹೀಗೆ ಪರಿಸರ ಕುರಿತ ಭಾಷಣಗಳಿಂದ, ಬರೆಹಗಳಿಂದ, ಹೋರಾಟಗಳಿಂದ, ಚಳುವಳಿಗಳಿಂದ ಮತ್ತು ಆತಂಕ-ಭಯಗಳಿಂದ ಪರಿಸರ ರಕ್ಷಣೆಯಾಗುತ್ತಿಲ್ಲ, ಜಾಗೃತಿ ಮೂಡುತ್ತಿಲ್ಲ. ಕಾರಣಗಳೇನು ಎನ್ನುವಾಗ ಇದಕ್ಕೆ ಪರ್ಯಾಯ ಮಾರ್ಗಗಳನ್ನು ತೇಜಸ್ವಿ ಸಾಹಿತ್ಯ ಕೊಡುತ್ತದೆ ಎಂದು ಸತ್ಯನಾರಾಯಣ ಅಭಿಪ್ರಾಯಪಡುತ್ತಾರೆ.

ತೇಜಸ್ವಿಯವರ ಬರಹಗಳು ಎಲ್ಲಿಯೂ ಪ್ರಕೃತಿ ಪ್ರೇಮವನ್ನು ನೇರವಾಗಿ ಪ್ರತಿಪಾದಿಸುವುದಿಲ್ಲ. ಹಾಗೆಯೇ ಪರಿಸರವನ್ನು ಒಂದು ಸಿದ್ಧಾಂತಕ್ಕೆ, ತತ್ವಕ್ಕೆ ಒಳಗು ಮಾಡಿ ನೋಡುವುದಿಲ್ಲ. ತಮ್ಮ ಕಥೆ-ಕಾದಂಬರಿಗಳ ಮೂಲಕ ಪ್ರಕೃತಿಯಲ್ಲಿ ತಾವು ಕಂಡುಂಡ ಸಂಗತಿ ಮತ್ತು ವಾಸ್ತವವನ್ನು ಚಿತ್ರಿಸುತ್ತಾರೆ. ತಮ್ಮ ಅರಿವಿಗೆ ಬಂದಂತಹ ಸಂಗತಿಗಳನ್ನು ಬರೆಯುತ್ತಾರೆ. ಅದರ ಮೂಲಕವೇ ಈ ಪರಿಸರದಲ್ಲಿನ ಜೀವ ವೈವಿಧ್ಯತೆಯ ಸಹಸಂಬಂಧಗಳನ್ನು ಚಿತ್ರಿಸುವ ಮೂಲಕ ಓದುಗರಲ್ಲಿ ಪರಿಸರ ಕಾಳಜಿಯ ಪ್ರಜ್ಞೆಯನ್ನುಂಟುಮಾಡುತ್ತಾರೆ. ಅಂಕಿ-ಅಂಶಗಳಿಂದ,

ತತ್ವ-ಸಿದ್ಧಾಂತಗಳಿಂದ, ಭಯದಿಂದ ಹುಟ್ಟಿದ ಪ್ರೀತಿಯಿಂದ ಪರಿಸರ ರಕ್ಷಣೆ ಅಸಾಧ್ಯ ಎಂಬುದನ್ನು ತೇಜಸ್ವಿ ಸಾಹಿತ್ಯ ಮನಗಾಣಿಸುತ್ತದೆ.

ಯಾರಿಗೇ ಆಗಲಿ ಪರಿಸರದ ಬಗ್ಗೆ ಸಂಪೂರ್ಣ ಅರಿವಿದೆ ಎಂಬುದನ್ನು ತೇಜಸ್ವಿ ಒಪ್ಪುವುದಿಲ್ಲ. ಹಾಗೆಯೇ ಅದನ್ನು ರಕ್ಷಿಸಲು ಯೋಜನೆಗಳನ್ನು, ಕಾನೂನು ಕಟ್ಟಳೆಗಳನ್ನು ರೂಪಿಸಲು ಮುಂದಾಗುವುದನ್ನು ನಿರಾಕರಿಸುತ್ತಾರೆ. ಪರಿಸರವನ್ನು ಅಲ್ಲಿನ ಜೀವ ಸಂಕುಲವನ್ನು ನಮ್ಮಿಷ್ಟದಂತೆ ಬದಲಿಸಲು ಪ್ರಯತ್ನಿಸಬಾರದು. ಅದು ಇದ್ದಂತಯೇ ಸ್ವೀಕರಿಸಬೇಕು. ಪ್ರತಿಯೊಂದು ಪ್ರಾಣಿ-ಪಕ್ಷಿಗಳ ಜೀವನಶೈಲಿ, ಆಹಾರ ಪದ್ಧತಿ, ರೂಢಿ ರಿವಾಜುಗಳು, ಮತ್ತು ಔಷಧ ಪದ್ಧತಿ ಬೇರೆ ಬೇರೆಯಾಗಿರುತ್ತದೆ. ಆದರೆ ನಾವು ಅವುಗಳನ್ನು ನಮ್ಮಂತೆ ಬದಲಿಸಲು ಪ್ರಯತ್ನಿಸುತ್ತೇವೆ. ಅವುಗಳ ಮೇಲೆ ಮಾನವೀಯತೆಯನ್ನು ಆರೋಪಿಸುತ್ತೇವೆ. ಇದೇ ಪರಿಸರ ನಾಶಕ್ಕೆ ಬಹು ಮುಖ್ಯವಾದ ಕಾರಣ ಎಂಬುದೇ ತೇಜಸ್ವಿ ಸಾಹಿತ್ಯದ ತಿರುಳು ಎಂದು ಸತ್ಯನಾರಾಯಣ ಅಭಿಪ್ರಾಯಪಡುತ್ತಾರೆ.

ಭವಿಷ್ಯದ ಭಯದಿಂದ ಹುಟ್ಟುವ ಪ್ರೀತಿ ಕುರುಡುತನದಿಂದ ಕೂಡಿರುವಂತಹುದು. ಪ್ರಾಣಿ-ಪಕ್ಷಿಗಳ ಕುರಿತು ವಸ್ತುನಿಷ್ಠ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ಅದೇ ನಿಜವಾದ ಕಾಳಜಿ. ಇನ್ನಾವುದೇ ಯೋಜನೆಗಳಿಂದ, ಕಾನೂನುಗಳಿಂದ, ಚಾರಣ ಮಾಡುವುದ್ದರಿಂದ, ಹೋರಾಟ-ಚಳುವಳಿ-ಸತ್ಯಾಗ್ರಹಗಳಿಂದ ಪರಿಸರ ರಕ್ಷಣೆ ಅಸಾಧ್ಯ. ಪರಿಸರವನ್ನು ಅದರ ಜೀವ ವೈವಿಧ್ಯತೆಗಳನ್ನು ಒಪ್ಪಿಕೊಂಡಾಗ ಮಾತ್ರ ಪರಿಸರ ರಕ್ಷಣೆ ಸಾಧ್ಯ ಎಂಬುದು ತೇಜಸ್ವಿ ಸಾಹಿತ್ಯದ ಒಟ್ಟಾರೆ ಅಭಿಪ್ರಾಯವಾಗಿದೆ ಎಂದು ಇವರು ಅಭಿಮತ ವ್ಯಕ್ತಪಡಿಸುತ್ತಾರೆ.

ಇಂದು ಪರಿಸರ ದೃಷ್ಟಿಯಿಂದ ರೂಪಿಸುತ್ತಿರುವ ಕಾಯ್ದೆ ಕಾನೂನುಗಳು, ಯೋಜನೆಗಳು ಪರಿಸರವನ್ನು ದೋಚುವವರಿಗೆ ಕಾನೂನು ರಕ್ಷಣೆಯನ್ನು ನೀಡುತ್ತಿವೆ. ಹೋರಾಟ ಚಳುವಳಿಗಳು ಬೆಲೆ ಕಳೆದುಕೊಳ್ಳುತ್ತಿವೆ. ಏನೆಲ್ಲಾ ಅಡೆತಡೆಗಳಿದ್ದರೂ ಪರಿಸರ ನಾಶ ನಿರಂತರತೆಯನ್ನು ಕಾಯ್ದುಕೊಂಡಿರುವುದು ತೇಜಸ್ವಿಯವರ ಈ ನಿಲುವುಗಳನ್ನು ಪುಷ್ಟೀಕರಿಸುತ್ತದೆ.

'ಪೂರ್ಣಚಂದ್ರ ತೇಜಸ್ವಿ ಮತ್ತು ಪರಿಸರ' ಎಂಬ ಲೇಖನದಲ್ಲಿ ಕೃಷ್ಣಮೂರ್ತಿ ಹನೂರರು ಮೊದಲಿಗೆ ತೇಜಸ್ವಿಯವರ ಆರಂಭದ ಕೆಲವು ಕತೆಗಳನ್ನು ಬಿಟ್ಟರೆ ತದನಂತರದ ಬಹುತೇಕ ಬರೆವಣಿಗೆಗಳು ಪ್ರಕೃತಿ ಮೂಲದ ಬರೆವಣಿಗೆಗಳಾಗಿದ್ದು, ಪ್ರಕೃತಿಯನ್ನು ತಮ್ಮ ಭಿತ್ತಿಯನ್ನಾಗಿ ಬಳಸಿಕೊಂಡಿದ್ದಾರೆ. ಆ ಮಟ್ಟಿಗೆ ತೇಜಸ್ವಿಯವರನ್ನು ಪರಿಸರ ಆವರಿಸಿಕೊಂಡಿದೆ ಎನ್ನುತ್ತಾರೆ. ಕುವೆಂಪು ಕಾದಂಬರಿಯ ಕೆಲವು ಪಾತ್ರಗಳನ್ನು ಕರ್ವಾಲೋ ಕಾದಂಬರಿಯ ಕೆಲ

ಪಾತ್ರಗಳೊಂದಿಗೆ ಹೋಲಿಸಿ ನೋಡಲು ಪ್ರಯತ್ನಿಸುತ್ತಾರೆ. ಹಾಗೆ ಮಾಡುವ ಮೂಲಕ ಕುವೆಂಪುರವರ ಮುಂದುವರೆದ ಚಿಂತನೆಗಳಾಗಿ ತೇಜಸ್ವಿ ಸಾಹಿತ್ಯ ಮೂಡಿ ಬಂದಿದೆ ಎಂಬ ನಿರ್ಧಾರಕ್ಕೆ ಬಂದು ತಲುಪುತ್ತಾರೆ. ಅವರೇ ಹೇಳುವಂತೆ "ಕುವೆಂಪು ಅವರ ಬರೆವಣಿಗೆ ಸಮೃದ್ಧಗೊಳ್ಳುವುದು ಪ್ರಕೃತಿಯ ಜೀವಂತ ವಿವರಗಳಿಂದ ಕುವೆಂಪುರವರಿಗೆ ಕಾಣದ ಸೌಂದರ್ಯ ಮತ್ತು ಧ್ವನಿ ಭಾವನಾತ್ಮಕವಾಗಿ ಮುಖ್ಯವೆನಿಸಿದರೆ ತೇಜಸ್ವಿಯವರಿಗೆ ಕಾಣದ ಬದುಕಿನ ವಿವರಗಳು ಅದರ ಸ್ವರೂಪದ ವಿವರಣೆಗಳಲ್ಲಿ ಹೆಚ್ಚು ಆಸಕ್ತಿ.... ಮದುಮಗಳು ಕೃತಿಯ ನಾಯಿಗುತ್ತಿಯ ಪಾತ್ರ ಈ ಪರಿಸರಕ್ಕೆ ಮೂಡಿಬಂದ ವ್ಯಕ್ತಿಯಾದರೆ ಕರ್ವಾಲೋ ಕಾದಂಬರಿಯಲ್ಲಿನ ಮಂದಣ್ಣ ಪ್ರಕೃತಿಯ ಶಿಶುವೇ ಆಗಿದ್ದಾನೆ. ಗುತ್ತಿ ಪ್ರಕೃತಿಯ ನಡುವೆ ಪ್ರಯಾಣ ಮಾಡುವ ಪಾತ್ರವಷ್ಟೇ, ಮಂದಣ್ಣ ತನಗರಿಯದಂತೆಯೇ ಪ್ರಕೃತಿ ವಿಜ್ಞಾನ ಬಲ್ಲವನು.... ಕುವೆಂಪು ಚಿತ್ರಿಸುವ ಗುತ್ತಿಯ ನಾಯಿಯ ಹೆಸರು 'ಹುಲಿಯ'. ಇದು ಗುತ್ತಿಯ ಸಹಾಯಕ, ಸಹಚರ. ಈ ನಾಯಿಯನ್ನು ಕುವೆಂಪು ಭಾವುಕತೆ ಮತ್ತು ಸಹಜ ಪ್ರೀತಿಯಿಂದ ಕಾಣುವ ಮಾದರಿ ಒಂದು ಬಗೆಯಾದರೆ ತೇಜಸ್ವಿಯವರು ಕರ್ವಾಲೋ ಕಾದಂಬರಿಯಲ್ಲಿ ಒಂದು ಪಾತ್ರವಾಗಿಯೇ ಕಂಡಿರುವ ನಾಯಿಗೆ ಇಟ್ಟ ಹೆಸರು 'ಕಿವಿ'. ಕುವೆಂಪು ಅವರಿಗೆ ಹುಲಿಯ ರೂಪಗಮ್ಯವಾದರೆ ಕರ್ವಾಲೋದ ಕಿವಿ ಇಂದ್ರಿಯಗಮ್ಯವಾದುದು. ಮದುಮಗಳು ಕೃತಿಯ ಹುಲಿಯನ ಪಾತ್ರ ಚಿತ್ರವತ್ತಾದುದಾದರೆ ಕರ್ವಾಲೋದ ಕಿವಿ ಹೆಚ್ಚು ಸೂಕ್ಷ್ಮಸಂವೇದಿಯಾದದ್ದು." (ಕೃಷ್ಣಮೂರ್ತಿ ಹನೂರು, ತೇಜಸ್ವಿ–ಸಾಹಿತ್ಯ ಕೃಷಿ, ೨೦೦೭, ಪುಟ–೫೬ & ೫೭)

ಹೀಗೆ ಕೃಷ್ಣಮೂರ್ತಿಯವರು ಇಬ್ಬರೂ ಸಾಹಿತಿಗಳು ಚಿತ್ರಿಸುವ ಕೆಲಪಾತ್ರಗಳನ್ನು ಹೋಲಿಸಿ ತೇಜಸ್ವಿಯವರನ್ನು ಪ್ರಸ್ತುತಗೊಳಿಸುತ್ತಾರೆ. ಆದರೆ ಇಲ್ಲಿ ಕುವೆಂಪು ಇದ್ದ ಕಾಲ ಸಂದರ್ಭಗಳೂ ಇದಕ್ಕೆ ಕಾರಣವಿರಬಹುದಲ್ಲವೇ? ಇದನ್ನು ವಿಮರ್ಶಕರು ನಿರಾಕರಿಸುವುದಿಲ್ಲ.

ಹನೂರರು ತಮ್ಮ ಅಧ್ಯಯನವನ್ನು ಕರ್ವಾಲೋ ಕೃತಿಗೆ ಸೀಮಿತಗೊಳಿಸಿಕೊಂಡು ಮಾತನಾಡುತ್ತಾರೆ. ಇತರ ಎಲ್ಲಾ ಕಾದಂಬರಿಗಳಿಗಿಂತ ಕರ್ವಾಲೋ ಕಾದಂಬರಿ ತನ್ನ ರಚನಾ ಕ್ರಮದಲ್ಲಿ ಮಹತ್ವದೆನಿಸುತ್ತದೆ. ಕಾದಂಬರಿಗೆ ಯಾವುದೇ ರೀತಿಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳದೆ (ಮದುಮಗಳು ಕಾದಂಬರಿಯಂತೆ) ಸರಳವಾಗಿ ತಮ್ಮ ಅನುಭವಗಳನ್ನು ವಿವರಿಸುತ್ತಾ ಹೋಗುತ್ತಾರೆ. ಆದರೆ ಯಾವುದೇ ಕಾದಂಬರಿ ಹೇಳದ ಅಚ್ಚರಿಯ ಸಂಗತಿಗಳನ್ನು ಈ ಕೃತಿ ಹೇಳುತ್ತದೆ. ಇದೊಂದು ಜನಪದ ಕಥೆಯಂತೆ ರಚನೆಯಾಗಿದೆ ಎಂದು ಹನೂರರು ಅಭಿಪ್ರಾಯಪಡುತ್ತಾರೆ.

ಹಾಗೆಯೇ ತೇಜಸ್ವಿ ಇಡೀ ತಮ್ಮ ಬದುಕನ್ನು ಪ್ರಕೃತಿಯ ಮಡಿಲಲ್ಲೇ ಕಳೆದ ಕಾಡು ಜೀವಗಳಾದ ಮಂದಣ್ಣ, ಕರಿಯಪ್ಪ, ಹಾವುಗೊಲ್ಲರ ಎಂಕ್ಟ ಮುಂತಾದವರನ್ನು ಒಂದು ಕಡೆ ಇರಿಸಿ, ಈ ಪರಿಸರವನ್ನು ಅಧ್ಯಯನದ ವಸ್ತುವನ್ನಾಗಿ ಗ್ರಹಿಸಿ ಹೊರಗಿನಿಂದ ಬಂದ ಅಧ್ಯಯನ ವಿಜ್ಞಾನಿಗಳನ್ನು ಮತ್ತೊಂದು ಕಡೆ ನಿಲ್ಲಿಸಿ ಈ ಎರಡೂ ಗುಂಪುಗಳ ಪರಿಸರ ಸಾಮರ್ಥ್ಯವನ್ನು ಪರೀಕ್ಷಿಸುವ ಕೆಲಸವನ್ನು ಮಾಡುತ್ತಾರೆ. ಹೀಗೆ ಪರೀಕ್ಷಿಸುವುದರ ಮೂಲಕ ಈ ಕಾಡು ಜೀವಗಳ ಮಹತ್ವವನ್ನು ಓದುಗರ ಮುಂದೆ ತೆರೆದಿಡುತ್ತಾರೆ ಎಂದು ಅಭಿಪ್ರಾಯಪಡುವ ಹನೂರರು ಮಂದಣ್ಣ, ಕರಿಯಪ್ಪ, ಎಂಕ್ಟರನ್ನು ವಿಜ್ಞಾನಿಗಳೆಂದೇ ಕರೆಯುತ್ತಾರೆ.

ಹೊರಗಿನಿಂದ ಬಂದ ಕರ್ವಾಲೋ, ನಿರೂಪಕನಿಗೆ ಪ್ರಕೃತಿಯ ಜೀವ ಜಗತ್ತು ಅದ್ಭುತ, ಆಶ್ಚರ್ಯವನ್ನು ಉಂಟುಮಾಡಿದರೆ, ಅತಿ ಮಹತ್ವದ್ದು ಎನಿಸಿದರೆ ಜನಪದ ತಜ್ಞರಾದ ಮಂದಣ್ಣ, ಕರಿಯಪ್ಪ, ಎಂಕ್ಟರಿಗೆ ಅವು ಸರಳ ಸಾಮಾನ್ಯ ಸಂಗತಿಗಳಂತೆ ಭಾಸವಾಗುತ್ತವೆ. ಅವರಿಗೆ ಪ್ರಕೃತಿಯ ಈ ಜೀವಜಾಲ ರಹಸ್ಯಮಯ ಸಂಗತಿಯಾಗಿ ಕಾಣುವುದೇ ಇಲ್ಲ. ಇದು ತೇಜಸ್ವಿಯವರು ಅನುಭವದಿಂದ ಪಡೆದಿರುವ ವಾಸ್ತವ ಸತ್ಯ ಎಂದು ಇವರು ಅಭಿಪ್ರಾಯಪಡುತ್ತಾರೆ. ಇಲ್ಲಿ ತೇಜಸ್ವಿ ಆಧುನಿಕ ಶಿಕ್ಷಣ ಮತ್ತು ಪರಿಸರದ ನೈಜಶಿಕ್ಷಣದ ವ್ಯತ್ಯಾಸಗಳನ್ನು ತಿಳಿಸುತ್ತಿದ್ದಾರೆ.

ಈ ಜನಪದ ವಿಜ್ಞಾನಿಗಳ ಜೊತೆ ಆಧುನಿಕ ವಿಜ್ಞಾನಿಗಳು ವಿಶ್ವದ ಅಸಾಮಾನ್ಯ ಜೀವಿ ಓತಿಕ್ಯಾತನ ಹುಡುಕಾಟಕ್ಕೆ ಎತ್ತಿನ ಗಾಡಿಯಲ್ಲಿ ಹೊರಡುತ್ತಾರೆ. ಇದನ್ನು ಉದಾಹರಿಸುವ ಹನೂರರು ಇದು ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಾಮರಸ್ಯದ ಅನಿವಾರ್ಯತೆಯನ್ನು ಸಾರುತ್ತದೆ ಎಂದಿದ್ದಾರೆ. ಅಂದರೆ ಆಧುನಿಕತೆ ಮಂದಿ ಮುಂದುವರೆದವರು ಎಂದು ಹೇಳಿದರೂ ಅವರಿಗೆ ಪರಂಪರೆಯ ಬಲ ಅಗತ್ಯ ಎಂಬ ಸಂದೇಶವನ್ನು ತೇಜಸ್ವಿ ಮಾರ್ಮಿಕವಾಗಿ ತಿಳಿಸುತ್ತಿದ್ದಾರೆ ಎಂದು ಅಭಿಪ್ರಾಯಪಡುವ ಕೃಷ್ಣಮೂರ್ತಿ 'ಕರ್ವಾಲೋ' ಕೃತಿಗೆ ಸಮೀಕರಿಸಬಹುದಾದ ಮತ್ತೊಂದು ಕೃತಿ ತೇಜಸ್ವಿಯವರಿಂದ ಮೂಡಿ ಬರಲಿಲ್ಲ. ಅವರ ಚಿದಂಬರ ರಹಸ್ಯ, ಮತ್ತು ಜುಗಾರಿ ಕ್ರಾಸ್ ಕೂಡ ಪ್ರತ್ಯೇಕವಾಗಿ ನಿಲ್ಲುತ್ತವೆ ಎಂದಿದ್ದಾರೆ.

ಕೃಷ್ಣಮೂರ್ತಿಯವರ ಬಹುಪಾಲು ಅಭಿಪ್ರಾಯಗಳನ್ನು ಒಪ್ಪಬಹುದಾದರೂ ತೇಜಸ್ವಿಯವರ ಕಾದಂಬರಿ ರಚನೆಯ ಪೂರ್ವ ಸಿದ್ಧತೆಗಳ ಕುರಿತು ಗಂಭೀರವಾಗಿಲ್ಲದಿದ್ದರೂ ಸೌಮ್ಯವಾಗಿಯೇ ಪ್ರಶ್ನೆಗಳನ್ನು ಎತ್ತುತ್ತಾರೆ. ಆದರೆ ಇದನ್ನು ಒಪ್ಪಲು ಆಗದು. ಮದುಮಗಳು ಕಾದಂಬರಿಯ ವಸ್ತುವಿನ್ಯಾಸ ಅದರಲ್ಲಿನ ಪಾತ್ರಗಳು ಸ್ಥಳಗಳು ಸಂಬಂಧಗಳ ದಟ್ಟಣೆಗೆ

ತೀವ್ರತರವಾದ ಪೂರ್ವಸಿದ್ಧತೆಯ ಅಗತ್ಯವಿರಬಹುದು. ಆದರೆ ಅಷ್ಟೇ ತೀವ್ರತರವಾದ ಸಿದ್ಧತೆಗಳು ಕರ್ವಾಲೋ ಕಾದಂಬರಿಗೆ ಅಗತ್ಯವೇನಿಲ್ಲ ಎನಿಸುತ್ತದೆ.

ರಹಮತ್ ತರೀಕೆರೆಯವರು 'ತೇಜಸ್ವಿಯವರ ಮಾಯಾಲೋಕ' ಎಂಬ ತಮ್ಮ ಬರಹದಲ್ಲಿ ತೇಜಸ್ವಿಯವರ ಪರಿಸರ ಕಾಳಜಿಯ ಹುಡುಕಾಟವನ್ನು 'ಮಾಯಾಲೋಕ' ಕೃತಿಗೆ ಸೀಮಿತಗೊಳಿಸಿಕೊಂಡು ಮಾತನಾಡುತ್ತಾರೆ. ನಮ್ಮ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಎಲ್ಲಾ ಪ್ರಕಾರಗಳಲ್ಲಿ ಅಥವಾ ಹಲವಾರು ಪ್ರಕಾರಗಳಲ್ಲಿ ಬರೆಯುವವರು ಶ್ರೇಷ್ಠ ಸಾಹಿತಿ ಎಂದು ಭಾವಿಸುತ್ತೇವೆ. ಹೀಗೆ ಹಲವಾರು ಪ್ರಕಾರಗಳಲ್ಲಿ ಬರೆದು ಶ್ರೇಷ್ಠ ಸಾಹಿತಿ ಎನಿಸಿಕೊಂಡವರು ತೇಜಸ್ವಿ ಎನ್ನುವುದಲ್ಲದೆ ಅವರು ಕಟ್ಟಿಕೊಡುವ ಕಥನಕ್ರಮ ಸಾಹಿತ್ಯಕ್ಕೆ, ಸಹಜ ರಚನೆಯ ಪೀಳಿಗೆಗೆ ದೊಡ್ಡ ಶಕ್ತಿಯನ್ನು ಸೇರ್ಪಡೆ ಮಾಡಿದಂತಾಯಿತು ಎಂದು ಅಭಿಪ್ರಾಯಪಡುತ್ತಾರೆ. ತೇಜಸ್ವಿ ಏನೇ ಬರೆದರೂ ಅದಕ್ಕೆ ಸಾಹಿತ್ಯದ ಪರಿವೇಷ ತೊಡಿಸಿಬಿಡುತ್ತಾರೆ ಅಥವಾ ಕಥೆ–ಕಾದಂಬರಿಗಳ ಛಾಯೆ ಇದ್ದೇ ಇರುತ್ತದೆ. ಹಾಗೆಯೇ ಹಲವಾರು ಪ್ರಕಾರಗಳನ್ನು ಸಂಕರಗೊಳಿಸಿ ಮತ್ತೊಂದು ಹೊಸ ಪ್ರಕಾರವನ್ನು ತಂದುಬಿಡುವ ಸಾಮರ್ಥ್ಯವು ತೇಜಸ್ವಿಗೆ ಇದೆ ಎಂದು ಅಭಿಪ್ರಾಯಪಡುತ್ತಾರೆ.

ತೇಜಸ್ವಿಯವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಬಳಸುವ ಪರಿಭಾಷೆಗಳ ಆಧಾರದಿಂದ, ಅವರು ತರುವ ದಟ್ಟವಾದ ಪರಿಸರ ಜೀವಿಗಳ ಚಿತ್ರಣಗಳಿಂದ ಪರಿಸರ ಕಾಳಜಿಯನ್ನು ಇವರು ಗುರುತಿಸಲು ಪ್ರಯತ್ನಿಸುತ್ತಾರೆ. "ಸಾಹಿತಿಗಳು ತಮ್ಮ ಅನುಭವ ಹೇಳಲು ತತ್ವಶಾಸ್ತ್ರ, ಪುರಾಣ, ಮನಃಶಾಸ್ತ್ರ, ಮಹಾಕಾವ್ಯಗಳನ್ನು ಉಪಯೋಗಿಸುವಂತೆ ತೇಜಸ್ವಿ ಕಥೆ ಕಾದಂಬರಿಗಳಲ್ಲಿ ಕೀಟಶಾಸ್ತ್ರ, ಪ್ರಾಣಿಶಾಸ್ತ್ರ, ಪಕ್ಷಿಶಾಸ್ತ್ರ ಮುಂತಾದವುಗಳನ್ನು ಉಪಯೋಗಿಸುತ್ತಾರೆ." (ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ೨೦೦೪, ಪುಟ–೩೮)

ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಮೇಲೆ ಪರಿಸರ ಮಾಡಿರುವ ದಟ್ಟ ಪ್ರಭಾವವನ್ನು ನೋಡಬಹುದು. ಹಾಗೆಯೇ ವಿಮರ್ಶಕರು ಪರಿಸರ ಪ್ರಜ್ಞೆಯಿಂದ ಕೂಡಿದ ತೇಜಸ್ವಿಯವರ ಈ ಕಥನಕ್ರಮ ಮೊದಲು ಅನುಸರಿಸಿ ಬಂದ ಎರಡು ಹಂತಗಳನ್ನು ಪ್ರಸ್ತಾಪಿಸುತ್ತಾರೆ. ಒಂದನೆಯದು ಪ್ರಾರಂಭದ ಕಥಾ ಸಂಕಲನ ಹುಲಿಯೂರಿನ ಸರಹದ್ದು ಕೃತಿಯಲ್ಲಿನ ವ್ಯಕ್ತಿವಿಶಿಷ್ಟವಾದಿ ನೆಲೆಯ ಕಥನಕ್ರಮ. ಎರಡನೆಯದು, ಅಬಚೂರಿನ ಪೋಸ್ಟಾಫೀಸು ಕೃತಿಯ ಸಾಮಾಜಿಕ ಪ್ರಜ್ಞೆಯ ಮನುಷ್ಯರ ವೇದನೆ, ಸಂತೋಷ ಸಂಕಟಗಳ ಸಮಾಜವಾದಿ ವಿಸ್ತರಣೆಯ ಕಥನಕ್ರಮ. ಕೊನೆಯದು ಕರ್ವಾಲೋ ಕೃತಿಯಿಂದ ಪ್ರಾರಂಭವಾದ ಮನುಷ್ಯರ ಜೊತೆ ನಿಸರ್ಗದ ಹಕ್ಕಿ,ಪ್ರಾಣಿ, ಗಿಡ, ಮರ, ಬಳ್ಳಿ, ಹಳ್ಳ,ಕೀಟ, ಮಳೆ, ಗಾಳಿ ಸಮಸ್ತ ಚರಾಚರಗಳನ್ನು ಒಟ್ಟಿಗೆ ನೋಡುತ್ತಾ ಬರೆಯುವ ಜೀವಕೇಂದ್ರಿತ ಕಥನಕ್ರಮ. ಅವರು ನಿಜವಾಗಿಯೂ ತಮ್ಮ

ಶಕ್ತಿಯನ್ನು ಪ್ರದರ್ಶಿಸಿದ್ದೇ ಈ ಜೀವಕೇಂದ್ರಿತ ನೆಲೆಯ ರಚನೆಯಲ್ಲಿ. ಅವರು ನೀಡುವ ಶೀರ್ಷಿಕೆಗಳೂ ಸಹ ಅವರ ಪರಿಸರ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಚೇಂಕ್ರ ಮೇಸ್ತ್ರಿ ಮತ್ತು ಹಾವು ಮೀನು, ಮಾನೀಟರ್, ಸುಶ್ಮಿತ ಮತ್ತು ಹಕ್ಕಿಮರಿ, ಮೂಲಿಕೆ ಬಳ್ಳಿಯ ಸುತ್ತ ಇತ್ಯಾದಿ. ಹಾಗೆಯೇ ನೂರಾರು ಮಾನವ ಪಾತ್ರಗಳ ಜೊತೆ ಹುಂಡು ಕೋಳಿಯ ಜೀವನಕ್ರಮ, ಮಂಗ, ಚಿಟ್ಟುಕೋಳಿ, ಮೀನು, ಏಡಿ, ಹಾವು, ಅಳಿಲು, ನವಿಲು, ಕಾಡುಹಂದಿ, ಜೇಡ, ಪ್ರಾಣಿಜಗತ್ತು; ದಾಸವಾಳ, ಜೊಂಡು, ಅಡಿಕೆ, ಮೆಣಸಿನ ಗಿಡ ಮುಂತಾದ ಸಸ್ಯ ಜಗತ್ತು ಧಾರಾಳವಾಗಿ ಬರುತ್ತವೆ. ಇಷ್ಟೇ ಅಲ್ಲ ಅವರ ಕಥೆ ಪ್ರಾರಂಭವಾಗುವುದೇ ನಾಯಿಯ ಮೂಲಕ. ಸಸ್ಯ, ಪ್ರಾಣಿ, ಕೀಟಗಳು ಮತ್ತು ಮನುಷ್ಯ ಲೋಕಗಳು ಏಕೀಭವಿಸಿದ ಜಗತ್ತು ಇವರ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಹಕ್ಕಿ ,ಪ್ರಾಣಿ, ನದಿ, ಗಿಡ, ಮರ, ಎಲ್ಲವೂ ಸೇರಿ ಪರಸ್ಪರ ಸಂಘರ್ಷ ಮತ್ತು ಸಹಬಾಳ್ವೆ ನಡೆಸುತ್ತಿರುವ ಹೊಸ ಜೀವಸತ್ವವನ್ನು ತಮ್ಮ ಸಾಹಿತ್ಯದ ಮೂಲಕ ಮನಗಾಣಿಸುತ್ತಾರೆ. ಇದು ತೇಜಸ್ವಿಯವರ ಪರಿಸರ ಕಾಳಜಿಗೆ ಸಾಕ್ಷಿಯಾಗಿದೆ. ಇದು ತೇಜಸ್ವಿಯವರ ಪರಿಸರ ಪ್ರಜ್ಞೆಯನ್ನು ಅನಾವರಣಗೊಳಿಸುತ್ತದೆ ಎಂದು ರಹಮತ್ ತರೀಕೆರೆಯವರು ಅಭಿಪ್ರಾಯಪಡುತ್ತಾರೆ.

ತೇಜಸ್ವಿ ಮಾನವ ಮತ್ತು ಮಾನವೇತರ ಪ್ರಪಂಚವನ್ನು ನೋಡುವ ದೃಷ್ಟಿಕೋನಗಳಲ್ಲಿ ತರೀಕೆರೆಯವರು ವ್ಯತ್ಯಾಸಗಳನ್ನು ಗುರುತಿಸುತ್ತಾರೆ. "ನಿಸರ್ಗವನ್ನು ವರ್ಣಿಸುವಾಗ ಇವರ ಕಥನವು ರಮ್ಯಕವಿಯ ಕಾವ್ಯದ ಹಾಗೆ ತನ್ಮಯವಾಗಿ ಮೈಮರೆಯುತ್ತದೆ. ಆದರೆ ಈ ತನ್ಮಯತೆ ಮಾನವ ಸಮಾಜ ಬಂದಾಗ ಕಾಣುವುದಿಲ್ಲ. ಅಲ್ಲೊಂದು ಬಗೆಯ ಬಿರುಸು ಕಾಣಿಸುತ್ತದೆ. ನಿಸರ್ಗದ ವಿಷಯದಲ್ಲಿ ಯಥಾಸ್ಥಿತಿವಾದಿ ನಿಲುವನ್ನು ಬಳಸುವ ತೇಜಸ್ವಿ ಕಥನ, ಸಮಾಜದ ವಿಷಯದಲ್ಲಿ ವಿಮರ್ಶಾತ್ಮಕ ಹಾಗೂ ವೈಚಾರಿಕ ನಿಲುವನ್ನು ಬಳಸುತ್ತದೆ. ಪ್ರಾಣಿ ಸಸ್ಯ ಇರುವ ಜಗತ್ತನ್ನು ಆಪ್ತತೆಯಿಂದ ನೋಡಿದರೆ, ಮನುಷ್ಯರು ವಾಸಿಸುವ ಸಮಾಜವನ್ನು ಕಟುವಾಗಿ ಗಮನಿಸುತ್ತದೆ. ತೇಜಸ್ವಿ ಕಥನ ನಡೆವ ಊರುಗಳ ಹೆಸರುಗಳನ್ನು ಗಮನಿಸಿ. ಹುಲಿಯೂರಿನ ಸರಹದ್ದು ಕತೆಯ ಹುಲಿಯೂರು; ಚಿದಂಬರ ರಹಸ್ಯದ ಕೆಸರೂರು; ಮಾಯಾಲೋಕದ ಗೊಂದಲಗೇರಿ" (ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ೨೦೦೪, ಪುಟ-೪೨) ಹಾಗೆಯೇ, ಭೀಕರ ಬಿರುಗಾಳಿ, ನಿಯಂತ್ರಿಸಲಾಗದ ಕಾಡ್ಗಿಚ್ಚು, ಬರಗಾಲ, ಮಳೆ, ಪ್ರವಾಹ ಮುಂತಾದ ನಿಸರ್ಗದ ವಿದ್ಯಮಾನಗಳನ್ನು ಉದ್ದೇಶಪೂರ್ವಕವಾಗಿಯೇ ತರುತ್ತಾರೆ. ಮಾನವ ಸಮಾಜಕ್ಕೆ ಎಚ್ಚರ ಮತ್ತು ಅರಿವನ್ನು ಮಾನವೇತರ ಶಕ್ತಿಗಳ ಆಕ್ರಮಣದ ಮೂಲಕ ಒದಗಿಸುವ ಪರಿಯು ತೇಜಸ್ವಿಯವರ ಪರಿಸರ ನಂಬಿಕೆಯನ್ನು ದರ್ಶಿಸುತ್ತದೆ. ಹೀಗೆ ತೇಜಸ್ವಿಯವರ ಪರಿಸರ ಕಾಳಜಿಯ ಹಲವಾರು ಮುಖಗಳನ್ನು ಅನಾವರಣಗೊಳಿಸುವ ತರೀಕೆರೆಯವರು

ಕೊನೆಯಲ್ಲಿ "ಮಾಯಾಲೋಕವು ತೇಜಸ್ವಿಯವರ ಯಶಸ್ಸಿಗಿಂತ ಬಿಕ್ಕಟ್ಟುಗಳನ್ನೇ ಕಾಣಿಸುತ್ತಿದೆ ಅನಿಸುತ್ತದೆ" (ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ೨೦೦೪, ಪುಟ-೪೬) ಎಂದಿದ್ದಾರೆ.

ಸದಾ ಗೆಲ್ಲುವ, ಎಲ್ಲಾ ವೇದಿಕೆಗಳಿಗೂ ಸಲ್ಲುವ ಸಾಹಿತಿಗಳ ಸಾಹಿತ್ಯ ಭಂಡಾರದಲ್ಲಿ ಬಿಕ್ಕಟ್ಟುಗಳಿರುವುದಿಲ್ಲ. ಸೃಜನಶೀಲರು, ತಮ್ಮ ಅನುಭವಗಳನ್ನೇ ಬರೆಹವಾಗಿ ಅಭಿವ್ಯಕ್ತಿಸುವ, ನಡೆ-ನುಡಿಯಲ್ಲಿ ವ್ಯತ್ಯಾಸಗಳಿಗಿಂತ ಸಾಮ್ಯತೆಗಳೇ ಹೆಚ್ಚಿರುವ ತೇಜಸ್ವಿಯಂತವರಿಗೆ ಬಿಕ್ಕಟ್ಟುಗಳಿದ್ದೇ ಇರುತ್ತವೆ. ಇದೇ ಅಲ್ಲವೇ ಜೀವಕೇಂದ್ರಿತ ನೆಲೆ. ಇತರ ಸಾಹಿತಿಗಳಿಗಿಂತ ತೇಜಸ್ವಿ ಪ್ರತ್ಯೇಕವಾಗಿ ನಿಲ್ಲುವುದೇ ಈ ಕಾರಣಗಳಿಂದ. ತೇಜಸ್ವಿಯವರ ಬರೆಹಗಳು ಸಾಹಿತ್ಯ ಮೀಮಾಂಸೆಯ ಕಟ್ಟುಗಳನ್ನು ಸದಾ ಮೀರುತ್ತಲೇ ಇರುತ್ತವೆ.

ತೇಜಸ್ವಿಯವರ ಪರಿಸರ ಪ್ರಜ್ಞೆಯನ್ನು ಚಿಂತಕ ಚಂದ್ರಶೇಖರ ನಂಗಲಿಯವರು 'ನೆಲ ಮುಟ್ಟುವ ಪ್ರೀತಿ' ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಸಾಂಪ್ರದಾಯಿಕ ರೂಡಿಗತ ಅರ್ಥದಲ್ಲಿ ಮಾತ್ರ ಗ್ರಹಿಸದೇ, ನಮ್ಮ ಬದುಕನ್ನು ಆವರಿಸಿಕೊಂಡಿರುವ ಸಾಮಾಜಿಕ ಶೈಕ್ಷಣಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ವಾಣಿಜ್ಯಾತ್ಮಕ ನೆಲೆಗಳೆಲ್ಲಕ್ಕೂ ಅನ್ವಯಿಸುತ್ತಾರೆ. ಇವರಿಗೆ ಪರಿಸರ ಕಾಳಜಿಯೆಂದರೆ ಸ್ಥಳೀಯ ಭೂಗೋಳದ ಜೀವಜಾಲ ಮತ್ತು ಜೀವನಾನುಭವವನ್ನು ಬಿಂಬಿಸುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರನ್ನು ಮುಖ್ಯವಾಗಿ ಕಂಡು, ಅವರ ಸಾಹಿತ್ಯವನ್ನು ಚಾರಣದ ದೃಷ್ಟಿಕೋನದಲ್ಲಿ ಹಿಡಿಯಲು ಚಂದ್ರಶೇಖರ ನಂಗಲಿ ಪ್ರಯತ್ನಿಸಿದ್ದಾರೆ.

ನಿಸರ್ಗ ಮತ್ತು ಮಾನವ ಸಂಬಂಧಗಳನ್ನು ತೇಜಸ್ವಿ ಸಾಹಿತ್ಯದ ಹಿನ್ನಲೆಯಲ್ಲಿ ನೋಡುವಾಗ ನಂಗಲಿ ಮಾನವ ಮತ್ತು ನಿಸರ್ಗದ ಹೊಕ್ಕು-ಬಳಕೆ ಸಂಬಂಧಗಳ ಅಗತ್ಯವನ್ನು ಮನಗಾಣಿಸುತ್ತಾರೆ. ನಿಸರ್ಗದೊಂದಿಗೆ ಮಾನವನ ಮಧ್ಯಪ್ರವೇಶ ಎಲ್ಲಾ ಸಂದರ್ಭಗಳಲ್ಲೂ ಹಿಂಸಾತ್ಮಕವಾಗಿಯೇನೂ ಇರಲಾರದು ಎನ್ನುವ ಇವರು ಬುಡಕಟ್ಟು ಸಮುದಾಯಗಳು, ಆದಿವಾಸಿಗಳ ಜೀವನ ಕ್ರಮಗಳನ್ನು ಉದಾಹರಿಸುತ್ತಾರೆ. ಆದರೆ ಮನುಷ್ಯನ ಮಧ್ಯಪ್ರವೇಶ ಯಾವಾಗ ಹಿಂಸಾತ್ಮಕವಾಗಿ ಪರಿಣಮಿಸುತ್ತದೆಂದರೆ, ಆಧುನಿಕ ಪ್ರಕ್ರಿಯೆಗೆ ಚಾಲನೆ ನೀಡಿ ಪರಿಸರದ ದಿಕ್ಕು ದೆಸೆಗಳನ್ನು ನಿಯಂತ್ರಿಸಲು ಮತ್ತು ಪರಿವರ್ತಿಸಲು ಪ್ರಯತ್ನಿಸಿದಾಗ ಮತ್ತು ವಿಜ್ಞಾನ-ತಂತ್ರಜ್ಞಾನ ಪ್ರವೇಶವಾದಾಗ ಅನಿವಾರ್ಯವಾಗಿ ಹಿಂಸೆಯ ಕಥನಗಳು ಪ್ರಾರಂಭವಾಗುತ್ತವೆ ಎಂದು ಚಂದ್ರಶೇಖರ ನಂಗಲಿ ಅಭಿಪ್ರಾಯಪಡುತ್ತಾರೆ.

ನಿಸರ್ಗ ಮತ್ತು ಮಾನವನ ನಡುವೆ ಕೊಡು-ಕೊಳ್ಳುವಿಕೆ ಸಂಬಂಧ ಒಂದು ಹಂತಕ್ಕೆ ಸೀಮಿತಗೊಂಡಿದ್ದಾಗ ಮಾತ್ರ ಅದು ಅಹಿಂಸೆಯ ರೂಪ ತಾಳುತ್ತದೆ. ಯಾವಾಗ ಮಾನವ ತನ್ನ ಯಾಜಮಾನ್ಯವನ್ನು ನಿಸರ್ಗದ ಮೇಲೆ ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಾನೊ ಆಗ ಹಿಂಸೆಯಿಂದ

ಕೂಡಿದ ಪರಿಸರದ ಅವನತಿ ಪ್ರಾರಂಭವಾಗುತ್ತದೆ. ಈ ಮಾನವ ಹಿಡಿತಗಳನ್ನು ಛಿದ್ರಗೊಳಿಸುವ ಕಾರ್ಯವನ್ನು ನಿಸರ್ಗ ಮಾಡುತ್ತಲೇ ಬಂದಿದೆ. ಇದನ್ನು ತೇಜಸ್ವಿ ಕರ್ವಾಲೊ ಕಾದಂಬರಿಯಲ್ಲಿ ಮೌಮೌ ದುಂಬಿಗಳ ಮೂಲಕ ಸಾಕ್ಷೀಕರಿಸುತ್ತಾರೆ. ಇದು ತೇಜಸ್ವಿಯವರು ಮಾನವ ಕುಲಕ್ಕೆ ನೀಡುತ್ತಿರುವ ಎಚ್ಚರಿಕೆಯಾಗಿದೆ. ಹೀಗೆ ಮಾನವನ ಎಲ್ಲಾ ಹಿಡಿತಗಳನ್ನು ನಿಸರ್ಗ ಕಾಲಕಾಲಕ್ಕೆ ಛಿದ್ರಗೊಳಿಸುತ್ತಲೇ ಅವನ ಯಜಮಾನ್ಯದ ಭ್ರಮೆಗಳನ್ನು ಬೆತ್ತಲೆಗೊಳಿಸುತ್ತಲೇ ಇರುತ್ತದೆ. ಎಂಬುದು ತೇಜಸ್ವಿಯವರ ಸಾಹಿತ್ಯದ ಕೇಂದ್ರಪ್ರಜ್ಞೆ ಎಂದು ನಂಗಲಿಯವರು ಅಭಿಪ್ರಾಯಪಡುತ್ತಾರೆ.

ಕರ್ವಾಲೊ ಕಾದಂಬರಿಯ ಮುಖ್ಯ ಧಾತು ಮತ್ತು ಅಪರೂಪದ ಜೀವಿ ಹಾರುವ ಓತಿ. ಇದು ಕೊನೆಯಲ್ಲಿ ಕೈಗೆ ಸಿಗದೆ ಮಾಯವಾಗುವ ಪ್ರಸಂಗವನ್ನು ನಂಗಲಿಯವರು ಮನುಷ್ಯನು ನಿಸರ್ಗದ ಜೊತೆ ಪ್ರಜ್ಞಾಪೂರ್ವಕವಾಗಿ ವ್ಯವಹರಿಸಬೇಕೆಂಬ ತೇಜಸ್ವಿಯವರ ಎಚ್ಚರಿಕೆಯಾಗಿದೆ ಎಂದು ಅರ್ಥೈಸುತ್ತಾರೆ. ಪರಿಸರ ಕಾಳಜಿಯೆಂದರೆ ಹೋರಾಟ ಚಳುವಳಿ ಅಂಕಿ ಅಂಶಗಳಷ್ಟೇ ಅಲ್ಲ ಪ್ರಕೃತಿಯೊಡನೆ ಸುಖ ದುಃಖದ ಸಂವಾದದ ಸಂಬಂಧ. ಹಾಗೆಯೇ ನಮ್ಮ ಸುತ್ತಲಿನ ಬದುಕು ಮತ್ತು ಪರಿಸರದಲ್ಲಿನ ಸೂಕ್ಷ್ಮ ವಿವರಗಳನ್ನು ಕಾಣಿಸುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಸಾಹಿತ್ಯ ಈ ಕಾರ್ಯವನ್ನು ಸಮರ್ಥವಾಗಿ ಮಾಡುತ್ತದೆ ಎಂದು ನಂಗಲಿಯವರು ಅಭಿಪ್ರಾಯಪಡುತ್ತಾರೆ.

ಪರಿಸರ ಕಾಳಜಿಯನ್ನು ಪ್ರವಾಸ ಮತ್ತು ಚಾರಣ ಕೈಗೊಳ್ಳುವುದರಿಂದ ಗಳಿಸಲು ಅಸಾದ್ಯ. ತಾವಿರುವಲ್ಲೇ ಜಗತ್ತಿನ ವಿಸ್ತಾರವನ್ನು ಗ್ರಹಿಸಬೇಕು. ಇದನ್ನು ನಂಗಲಿ ವಿನಾಯಕ ಪ್ರಜ್ಞೆ ಎನ್ನುತ್ತಾರೆ. ಈ ವಿನಾಯಕ ಪ್ರಜ್ಞೆ ತೇಜಸ್ವಿಯವರ ಸಮಗ್ರ ಸಾಹಿತ್ಯದಲ್ಲಿ ಕೇಂದ್ರ ಪ್ರಜ್ಞೆಯಾಗಿ ಕಂಡು ಬರುತ್ತದೆ. ಯಾರಿಗೆ ತಾವಿರುವಲ್ಲಿ ಸಂತೋಷ, ಉತ್ಸಾಹ, ಕುತೂಹಲಗಳು ಇರುವುದಿಲ್ಲವೊ ಅವರು ಪ್ರವಾಸ ಮತ್ತು ಚಾರಣ ಹೋದರೂ ವ್ಯರ್ಥ ಎಂಬುದು ನಂಗಲಿಯವರ ಅಭಿಮತವಾಗಿದೆ.

ನಿಸರ್ಗ ಮತ್ತು ಅದರಲ್ಲಿನ ಜೀವಜಾಲ ಯಾರ ಹಿಡಿತಕ್ಕೂ, ಯಾರ ಮಾನವೀಯತೆಗೂ ದಕ್ಕುವುದಿಲ್ಲ. ಹಾಗೆಯೇ ಮಾನವನ ಜೀವನ ವಿಧಾನಗಳಿಗೆ ಬಗ್ಗಿಸಲೂ ಆಗುವುದಿಲ್ಲ. ಅದು ಸ್ವತಂತ್ರ ಮತ್ತು ಸ್ವಚ್ಛಂದ. ಇದನ್ನು ಮೀರಿ ಮಾನವ ಮಧ್ಯಪ್ರವೇಶ ಮಾಡಿದ್ದೇ ಆದರೆ ಪರಿಸರ ದಾರುಣ ರೀತಿಯಲ್ಲಿ ಅವನತಿ ಹೊಂದುತ್ತದೆ. ತಾವು ಮೈ ಸವರಿ ಬಿಟ್ಟ ಅಳಿಲನ್ನು ಅದರ ತಾಯಿ ಕೊಂದು ಹಾಕುವ ಪ್ರಸಂಗ, ಸುಶ್ಮಿತ ಮತ್ತು ಹಕ್ಕಿಮರಿ, ನಾವು ಕೊಂದ ಹಕ್ಕಿ ಕಥೆ ಇತ್ಯಾದಿ ಕಥೆಗಳ ಮೂಲಕ ಮಾನವನ ಮಧ್ಯಪ್ರವೇಶದ ಬಹುರೂಪಿ ನೆಲೆಗಳನ್ನು ಬಹು ಬಗೆಗಳಲ್ಲಿ ತೇಜಸ್ವಿ ಮನಗಾಣಿಸುತ್ತಾರೆ. ಮನುಷ್ಯನ ಪ್ರೀತಿ, ಸ್ನೇಹ,

ವಿಶ್ವಾಸಗಳೂ ಕಾಡಿನ ಪ್ರಾಣಿಗಳಿಗೆ ಕ್ರೌರ್ಯ, ದ್ರೋಹಗಳಷ್ಟೇ ಅಪಾಯಕಾರಿ (ನಾವು ಕೊಂದ ಹಕ್ಕಿ ಕಥೆ) ಹಾಗೂ ಮನುಷ್ಯ ಕೂಡ ಅಪಾಯಗಳಗೆ ಒಳಗಾಗುವ ಪ್ರಸಂಗಗಳೂ (ಗಾಡ್ಲಿ ಕಥೆ) ಬರುತ್ತವೆ. ಎಂಬುದನ್ನು ತೇಜಸ್ವಿ ಕಥನದ ಮೂಲಕವೇ ನಂಗಲಿಯವರು ಕಂಡುಕೊಳ್ಳುತ್ತಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ತುಂಬಾ ನಿರ್ಭಾವುಕವಾಗಿ ವರ್ತಿಸುತ್ತಿವೆ. ಇವು ಶ್ರೀಸಾಮಾನ್ಯನಿಗೆ ಅನುಕೂಲಗಳಿಗಿಂತ ಅನಾನುಕೂಲಗಳೇ ಆಗಿ ಪರಿಣಮಿಸುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ನಿರ್ಮಿತಿಯ ಉದ್ದೇಶ ಸಮಸ್ತ ಜನತೆಯ ಅನುಕೂಲವೇ ಆದರೂ ಕೆಲವೇ ಮಂದಿಯ ಹಿತವನ್ನು ಇವು ಕಾಯುತ್ತಿವೆ. ಉಳ್ಳವರು ಮತ್ತು ಅಧಿಕಾರಿಗಳು ದೋಚುವ ಮಾಧ್ಯಮವಾಗಿ ಬಳಕೆಯಾಗುತ್ತ ಕೆಲವೇ ಮಂದಿ ತಮ್ಮ ಲಾಭಕೋರತನದಿಂದಾಗಿ ಬಹುಮಂದಿಯ ಮೇಲೆ ಒತ್ತಾಯಪೂರ್ವಕವಾಗಿ ಇವನ್ನು ಹೇರುತ್ತಿದ್ದಾರೆ. ಅನ್ಯಾಯದ ವಿರುದ್ಧ ಪ್ರಶ್ನಿಸಿದವರ ಬಾಯಿ ಮುಚ್ಚಿಸಲು ಕೂಡ ಇವು ಬಳಕೆಯಾಗುತ್ತಿವೆ. ಇಂದಿನ ಅಭಿವೃದ್ಧಿಯ ಅನಾಚಾರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಪ್ರಮುಖವಾಗಿ ಕಂಡು ಬರುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಶಯದಿಂದಲೇ ಕಾಣಲಾಗುತ್ತಿದೆ. ಈ ಜಾಗತೀಕರಣ ಸಂದರ್ಭದ ಮಾನವ ಮತ್ತು ನೈಸರ್ಗಿಕ ಪರಿಸರದಲ್ಲಿ ಆಗುತ್ತಿರುವ ನೇತ್ಯಾತ್ಮಕ ಪಲ್ಲಟಗಳಿಂದಾಗಿ ತಂತ್ರಜ್ಞಾನದ ಪಾತ್ರವನ್ನು ತೀವ್ರವಾಗಿ ಚರ್ಚಿಸಲಾಗುತ್ತಿದೆ. ಹಾಗೆಯೇ ವಿಜ್ಞಾನದಲ್ಲಿ ಜೀವ ಕೇಂದ್ರಿತ ನೆಲೆಯಿಂದ ಅನೇಕ ಸಿದ್ಧಾಂತಗಳು ರೂಪುಗೊಂಡಿವೆ. ಅವುಗಳನ್ನು ಸಾಹಿತ್ಯವಲಯ ಸಂಶಯದಿಂದ ಕಾಣುತ್ತ; ದೂರವಿಟ್ಟಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಎನ್ನುವುದು ಸಾಹಿತ್ಯದಿಂದ ಭಿನ್ನವಾದ ಶಾಖೆ. ಅದಕ್ಕೂ ಸಾಹಿತ್ಯಕ್ಕೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದೆ. ಹಾಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ದೃಷ್ಟಿಯಿಂದ ಕನ್ನಡ ಸಾಹಿತ್ಯ ತುಂಬಾ ಹಿಂದುಳಿದಿದೆ. ಇದಕ್ಕೆ ಅಪವಾದವೆಂಬಂತೆ ವಿಜ್ಞಾನ ಬರಹಗಳನ್ನು ಬರೆದವರು ಶಿವರಾಮ ಕಾರಂತರು. ಇವರ ನಂತರ ವಿಜ್ಞಾನದ ಸಿದ್ಧಾಂತಗಳನ್ನು ಸಾಹಿತ್ಯದ ಮೂಲ ಧಾತುವನ್ನಾಗಿ ಬಳಸಿಕೊಂಡು ಅದನ್ನು ಕಲಾಭಿವ್ಯಕ್ತಿಯ ಮಾಧ್ಯಮವಾಗಿ ಮಾಡಿದ ಕೀರ್ತಿ ಪೂರ್ಣಚಂದ್ರ ತೇಜಸ್ವಿಯವರಿಗೆ ಸಲ್ಲುತ್ತದೆ.

ಈ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಎಲ್ಲರಿಗಿಂತ ಭಿನ್ನವಾಗಿ ತಮ್ಮ ಕಥನಗಳಲ್ಲಿ ತರುವ ತೇಜಸ್ವಿ ಅವುಗಳನ್ನು ಸರಳವಾಗಿ ಓದಿ ಅರ್ಥೈಸಿಕೊಳ್ಳುವ ಜ್ಞಾನವನ್ನಾಗಿಸಿದರು. ಕೆಲವೇ ಜನರಿಗೆ ಸೀಮಿತವಾಗಿದ್ದ ಈ ಜ್ಞಾನವನ್ನು ಶ್ರೀಸಾಮಾನ್ಯನಿಗೂ ತಲುಪುವಂತೆ ನೋಡಿಕೊಂಡರು. ನಮ್ಮ ಅನುಭವಗಳನ್ನು ವಿಜ್ಞಾನದ ಸಿದ್ಧಾಂತಗಳ ಮೂಲಕ ಹೇಗೆಲ್ಲಾ ಚರ್ಚಿಸಬಹುದು ಎಂಬುದನ್ನು ಸಾಹಿತ್ಯಲೋಕಕ್ಕೆ ತೋರಿಸಿಕೊಟ್ಟರು. ನಾವು ವಿಜ್ಞಾನ

ಮತ್ತು ತಂತ್ರಜ್ಞಾನವನ್ನು ಎಷ್ಟೇ ದೂರವಿಟ್ಟಿದ್ದರೂ ಅದು ನಮ್ಮ ಬದುಕಿನ ವಿಧಾನಗಳಲ್ಲಿ ಹೇಗೆ ಸಂಕರಗೊಂಡು ಬಳಕೆಯಾಗುತ್ತಿದೆ ಎಂಬುದನ್ನು ಗುರ್ತಿಸಿಕೊಳ್ಳುವಂತೆ ಮಾಡಿದರು. ಯಾರು ಏನೇ ಹೇಳಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಇಡೀ ಸಮಾಜದ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿವೆ ಎಂಬುದರಲ್ಲಿ ಸಂಶಯವಿಲ್ಲ. ವಿಜ್ಞಾನ ಸಾಹಿತ್ಯ ಬರೆಹಗಳಿಂದ ದೂರವಾಗಿರಬಹುದು, ಆದರೆ ಮಾನವನ ಬದುಕಿನಿಂದ ದೂರವಾಗಿಲ್ಲ ಎಂಬುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಹಲವಾರು ವಿಮರ್ಶಕರು ತೇಜಸ್ವಿಯವರ ಸಾಹಿತ್ಯವನ್ನು ವೈಜ್ಞಾನಿಕ ದೃಷ್ಟಿಯಲ್ಲಿ ನೋಡಲು ಪ್ರಯತ್ನಿಸಿದ್ದಾರೆ. ಅವರ ನಿಲುವುಗಳೇನು ಎಂಬುದನ್ನು ಕೆಲವು ಮುಖ್ಯ ಲೇಖಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಸಮೀಕ್ಷಿಸಲಾಗಿದೆ. ತೇಜಸ್ವಿಯವರ ಸಾಹಿತ್ಯವನ್ನು ವೈಜ್ಞಾನಿಕ ದೃಷ್ಟಿಯಲ್ಲಿ ಚರ್ಚಿಸುವ ಕೆ.ಪುಟ್ಟಸ್ವಾಮಿಯವರು 'ತೇಜಸ್ವಿ ಸಾಹಿತ್ಯ ಮತ್ತು ವೈಜ್ಞಾನಿಕತೆ' ಎಂಬ ಲೇಖನದಲ್ಲಿ ಮೊದಲಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ತತ್ವಜ್ಞಾನಗಳ ನಡುವಿನ ವ್ಯತ್ಯಾಸ ಮತ್ತು ಸಾಮ್ಯತೆಗಳನ್ನು ಸ್ಪಷ್ಟಪಡಿಸುತ್ತಾರೆ. ವಿಜ್ಞಾನ ಅರಿವನ್ನು ಮೂಡಿಸಿದರೆ, ತತ್ವಶಾಸ್ತ್ರ ಅರಿವನ್ನು ಬಳಸುವ ವಿವೇಕವನ್ನು ಮೂಡಿಸುತ್ತದೆ. ವಿಜ್ಞಾನ ಜಗತ್ತಿನಾದ್ಯಂತ ಒಂದೇ ಪರಿಭಾಷೆಯನ್ನು ಹೊಂದಿದ್ದು ಏಕರೂಪದ ಪರಿಣಾಮವನ್ನು ಬೀರುತ್ತದೆ. ಇದನ್ನು ಚಿಂತಕ ಡಿ.ಆರ್.ನಾಗರಾಜ ಜಾಗತಿಕ ಧರ್ಮ, ಜಾಗತಿಕ ಜಾತಿ ಎಂದು ಕರೆದಿರುವುದು ಉತ್ಪ್ರೇಕ್ಷೆಯೆನಿಸುವುದಿಲ್ಲ ಎಂದು ಪುಟ್ಟಸ್ವಾಮಿ ಅಭಿಪ್ರಾಯಪಡುತ್ತಾರೆ.

ಪರಿಶುದ್ಧ ವಿಜ್ಞಾನವು ಕುವೆಂಪು ಸಾಹಿತ್ಯದಲ್ಲಿ ಅಪ್ರಜ್ಞಾಪೂರ್ವವಾಗಿ ಬಂದರೆ ತೇಜಸ್ವಿ ಸಾಹಿತ್ಯದಲ್ಲಿ ಪ್ರಜ್ಞಾಪೂರ್ವಕವಾಗಿಯೇ ಬರುತ್ತದೆ. ಅವರ ಕೃತಿಗಳಲ್ಲಿ ವೈಜ್ಞಾನಿಕ ಚಿಂತನೆ ಫಿಲಾಸಫಿಯಾಗಿ ಪ್ರಾರಂಭವಾಗಿ ಕಲೆಯಲ್ಲಿ ಅಂತ್ಯವನ್ನು ಕಾಣುತ್ತದೆ. ಹಾಗಂತ ತೇಜಸ್ವಿ ವಿಜ್ಞಾನ ಸಾಹಿತಿ ಅಲ್ಲ. ವಿಜ್ಞಾನದ ಚಿಂತನೆಗಳನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾರೆ ಎನ್ನುವ ಇವರು ತೇಜಸ್ವಿಯವರ ಕರ್ವಾಲೋ ಮತ್ತು ಚಿದಂಬರ ರಹಸ್ಯ ಕಾದಂಬರಿಗಳನ್ನು ವೈಜ್ಞಾನಿಕ ಚರ್ಚೆಗೆ ಒಳಗುಮಾಡಿದ್ದಾರೆ.

ಡಾರ್ವಿನ್ 'ವಿಕಾಸವಾದ' ಮತ್ತು ಐನ್‌ಸ್ಟೀನ್ ಹಾಗೂ ಇತರ ಭೌತ ವಿಜ್ಞಾನಿಗಳ 'ಕ್ವಾಂಟಮ್ ಮೆಕಾನಿಕ್ಸ್' ಸಿದ್ಧಾಂತಗಳು ತುಂಬಾ ಗಾಢವಾಗಿ ತೇಜಸ್ವಿಯವರ ಕೃತಿಗಳಲ್ಲಿ ಕಂಡುಬರುತ್ತವೆ. ಅವರ ಕೃತಿಗಳಲ್ಲಿನ ನಿಗೂಢತೆ, ರಹಸ್ಯಮಯತೆ ಮತ್ತು ಉತ್ಪ್ರೇಕ್ಷಿತ ದೃಷ್ಟಿಗಳು ಈ ಸಿದ್ಧಾಂತಗಳ ಪ್ರಭಾವದಿಂದ ಮೂಡಿಬಂದಿವೆ. ಈ ಸಿದ್ಧಾಂತಗಳನ್ನು ತತ್ವಜ್ಞಾನದ ಮಟ್ಟಕ್ಕೇರಿಸಿದ ಕೀರ್ತಿ ತೇಜಸ್ವಿಯವರಿಗೆ ಸಲ್ಲುತ್ತದೆ. ಎಂದು ಪುಟ್ಟಸ್ವಾಮಿ ವಿಶ್ಲೇಷಿಸುತ್ತಾರೆ.

ಜೀವ ವಿಕಾಸದ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಜೀವಿಯು ಅನಿವಾರ್ಯವಾಗಿ ಪರಿವರ್ತನೆಗೆ ಒಳಗಾಗಲೇಬೇಕು. ಯಾವುದು ಪರಿವರ್ತನೆಗೆ ತನ್ನನ್ನು ಒಡ್ಡಿಕೊಳ್ಳುವುದಿಲ್ಲವೋ ಅದು ಅವನತಿಯನ್ನು ಕಾಣುತ್ತದೆ. ಇದು ಡಾರ್ವಿನ್ ವಿಕಾಸವಾದದ ತಿರುಳು. ತೇಜಸ್ವಿ ಇದೇ ಸಿದ್ಧಾಂತವನ್ನು ಬಳಸಿಕೊಂಡು ಕರ್ವಾಲೋ ಕಾದಂಬರಿಯ ಪಾತ್ರಗಳನ್ನು ಹೆಣೆದಿದ್ದಾರೆ.

ವಿಕಾಸಪಥದಲ್ಲಿ ರೆಕ್ಕೆ ಮೂಡಿಸಿಕೊಳ್ಳಲಾಗದ ಓತಿ ವಿನಾಶದ ಅಂಚಿನಲ್ಲಿದ್ದು ಅದರ ಶೋಧ ಕಾದಂಬರಿಯಲ್ಲಿ ನಿಗೂಢದ ಧಾತುವಾಗಿ ಕಂಡುಬರುತ್ತದೆ. ಒಂದು ಜೀವಿ ಈ ಭೂಮಿಯಿಂದ ಅವನತಿಯನ್ನು ಹೊಂದಿದರೆ ಬರಿ ಆ ಜೀವಿ ಮಾತ್ರ ನಾಶವಾಗುವುದಿಲ್ಲ. ಆ ಜಾತಿಯ ಜೀವಿಯು ಅನೇಕ ವರ್ಷಗಳಿಂದ ಗಳಿಸಿಕೊಂಡಿದ್ದ ಜ್ಞಾನ, ಕೌಶಲ್ಯ ಮತ್ತು ಜಾತಿಯ ಗುಣಗಳೆಲ್ಲ ನಿರ್ನಾಮವಾಗುತ್ತವೆ. ಈ ಹಿನ್ನೆಲೆಯಲ್ಲಿ ತೇಜಸ್ವಿ ಕಥನ ಹಾರುವ ಓತಿಯ ಮೂಲಕ ಇಡೀ ಜನಪದ ಸಮಾಜವನ್ನೇ ಸಮೀಕರಿಸಿ ತಂದು ಬಿಡುತ್ತದೆ. "ಪ್ರಿಮಿಟಿವ್ ಹಂತದಲ್ಲಿ ಉಳಿದಿರುವ ಅದ್ಭುತ ಜೀವ ವಿಜ್ಞಾನಿ ಮಂದಣ್ಣ, ಕರಿಯ, ಹಾವುಗೊಲ್ಲರ ಎಂಕ್ಟ, ಹಾರುವ ಓತಿಯಂತೆಯೇ ವಂಶನಾಶದ ಅಂಚಿಗೆ ಬಂದಿರುವವರು. ವಿಕಾಸ ಪ್ರಕ್ರಿಯೆಯಲ್ಲಿ ಹಾರುವ ಓತಿಯಂತೆ ರೆಕ್ಕೆ ಮೂಡಿಸಿಕೊಳ್ಳಲಾಗದೆ ಸಂಕ್ರಮಣ ಸ್ಥಿತಿಯಲ್ಲಿರುವವರು... ಮಂದಣ್ಣ, ಎಂಕ್ಟ, ಕರಿಯಣ್ಣ ಇವರೆಲ್ಲಾ ಸಹಸ್ರಾರು ವರ್ಷಗಳಿಂದ ಸಂಚಯನಗೊಂಡ ದೇಸೀ ವಿಜ್ಞಾನದ ಕೌಶಲ್ಯಗಳನ್ನು ಹೊಂದಿರುವವರು. ಅವರು ನಿರ್ನಾಮವಾದರೆ ಇಡೀ ಕೌಶಲ್ಯವೇ ನಾಮಾವಶೇಷವಾಗುತ್ತದೆ." (ಪುಟ್ಟಸ್ವಾಮಿ ಕೆ., ಸಂಚಯ, (ಸಂಚಿಕೆ:೪(೫೭), ಜೂನ್-೨೦೦೨, ಪುಟ-೬೯)

ಭೌತವಿಜ್ಞಾನಿ 'ಐನ್‌ಸ್ಟೀನ್'ರ 'ಕ್ವಾಂಟಮ್ ಮೆಕಾನಿಕ್ಸ್' ಸಿದ್ಧಾಂತದ ದ್ವಂದ್ವರೂಪತೆಯನ್ನು 'ಚಿದಂಬರ ರಹಸ್ಯ' ಕಾದಂಬರಿಯ ಕಥಾನಿರೂಪಣಾ ಕ್ರಮದಲ್ಲಿ ಬಳಸಿಕೊಂಡಿರುವುದನ್ನು ಇವರು ಗುರುತಿಸುತ್ತಾರೆ. "ಪ್ರತಿಯೊಂದು ವಸ್ತುವಿನಲ್ಲೂ ಇರುವ ಅಣು, ಪರಮಾಣುಗಳಲ್ಲೂ ಸುತ್ತುವ ಕ್ವಾಂಟಮ್ ಕಣ ಅಥವಾ ಪ್ರೋಟಾನ್, ಎಲೆಕ್ಟ್ರಾನ್‌ಗಳಿಂದ ಹೊಮ್ಮುವ ಮನುಷ್ಯ ಪ್ರಜ್ಞೆ ಸ್ವತಂತ್ರವೋ ಅಥವಾ ನಿಯಮಗಳಿಗೆ ಅಧೀನವೋ ಎಂಬ ಪ್ರಶ್ನೆಯನ್ನು ಎತ್ತುತ್ತಲೇ ಕೆಸರೂರು ಅವನತಿಯತ್ತ ಸಾಗುವ ದುರಂತವನ್ನು ಚಿತ್ರಿಸುತ್ತಾರೆ... ಯುವಕನ ದೃಷ್ಟಿಯಲ್ಲಿ ಚಿಕ್ಕಮಗಳೂರಿನ ದುರಂತ ಕಾಫೀ ಕಲ್ಚರ್‌ನಲ್ಲಿ ಅಡಗಿದ್ದರೆ, ಇತರರ ದೃಷ್ಟಿಯಲ್ಲಿ ಕಾಡನ್ನು ಬತ್ತಲುಗೊಳಿಸುವ ಬ್ಯಾರಿಗಳು, ಕಂಟ್ರ್ಯಾಕ್ಟರ್‌ಗಳು, ವನ್ಯಜೀವಿಗಳನ್ನು ಹಾಳುಮಾಡುವ ಗೋಸಾಯಿಗಳು, ಮೂಢನಂಬಿಕೆಯಲ್ಲೇ ಹೂತುಹೋಗಿರುವ ಜನರು, ಜಾತೀಯತೆ, ಮತೀಯವಾದ ಹೀಗೆ ಭಿನ್ನ ದೃಷ್ಟಿಯಿಂದ ಕೆಸರೂರಿನ ಅವನತಿಗೆ ಕಾರಣಗಳು ಸಿಗತೊಡಗುತ್ತವೆ. ಹಾಗೆಯೇ ಜೋಗಿಹಾಳರ ಸಾವಿನ ಹಿನ್ನೆಲೆ ವಿವಿಧ ಜನರ ಗ್ರಹಿಕೆಗೆ ತಕ್ಕಂತೆ

ರೂಪುಪಡೆಯುತ್ತಾ ಹೋಗುತ್ತದೆ." (ಪುಟ್ಟಸ್ವಾಮಿ ಕೆ., ಸಂಚಯ, (ಸಂಚಿಕೆ:೪(೫೭), ಜೂನ್-೨೦೦೨, ಪುಟ-೭೦)

ವಸ್ತುಸ್ಥಿತಿ ಎನ್ನುವುದು ಸಾಪೇಕ್ಷ. ಅದು ನೋಡುಗನ ಗ್ರಹಿಕೆಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಸತ್ಯಕ್ಕೆ ಬಹುಮುಖತೆ ಪ್ರಾಪ್ತವಾಗುತ್ತದೆ. 'ಕ್ವಾಂಟಮ್ ಮೆಕಾನಿಕ್ಸ್' ಬೆಳಕಿನ ದ್ವಂದ್ವರೂಪತೆಯನ್ನು ಮುಂದಿಟ್ಟಾಗ ಸತ್ಯದ ಹೊಸ ದರ್ಶನ ಗೋಚರಿಸುತ್ತದೆ. ಇದನ್ನೇ ಬಳಸಿಕೊಂಡ ತೇಜಸ್ವಿ ಕೆಸರೂರಿನ ಅವನತಿಗೆ ಒಬ್ಬೊಬ್ಬರಿಗೆ ಒಂದೊಂದು ಕಾರಣ ಗೋಚರಿಸುವಂತೆ ಮಾಡಿಬಿಡುತ್ತಾರೆ. ಅದು ಜನರ ಗ್ರಹಿಕೆಗೆ ತಕ್ಕಂತೆ ರೂಪು ಪಡೆಯುತ್ತದೆ. ವಿಜ್ಞಾನ ಅಖಂಡತ್ವವನ್ನು ಒಡೆದು ಭಾಗಗಳನ್ನಾಗಿ ಅಧ್ಯಯನ ಮಾಡುತ್ತದೆ. ಇದೇ ವಿಧಾನ ತೇಜಸ್ವಿಯವರ ಚಿದಂಬರ ರಹಸ್ಯದಲ್ಲಿ ಕಂಡುಬರುತ್ತದೆ. ಕೆಸರೂರಿನ ದುರಂತಕ್ಕೆ ಭಿನ್ನ ಮಗ್ಗಲುಗಳನ್ನು ಅನ್ವೇಷಿಸಿ ಅದರ ಗಾಢತೆಯನ್ನು ಕಟ್ಟಿಕೊಡುವ ಬಗೆ ಅನನ್ಯವಾದುದು. ಇಲ್ಲಿ ಕೆಸರೂರು ತೆಗೆದು ಭಾರತ ಎಂದು ಹಾಕಿಕೊಂಡಲ್ಲಿ ಒಂದು ಪೂರ್ಣತ್ವವನ್ನು ನಿರ್ಮಿಸಬಹುದು ಎಂದು ಪುಟ್ಟಸ್ವಾಮಿ ಅಭಿಪ್ರಾಯಪಡುತ್ತಾರೆ.

ಜೀವ ವಿಕಾಸದ ಹಂತಗಳಲ್ಲಿ ಬದಲಾಗದ ಜೀವಿಗಳು ಅವನತಿಯಾಗಿ ಹೊಸ ಜೀವಿಗಳು ಉಗಮವಾದವು. ಹಾಗೆಯೇ ಚಿದಂಬರ ರಹಸ್ಯದಲ್ಲಿ ಈ ಹೊಸ ಚೇತನಗಳಾಗಿ ರಫಿ-ಜಯಂತಿ ಪಾತ್ರಗಳನ್ನು ತೇಜಸ್ವಿ ಮೂಡಿಸುತ್ತಾರೆ. ಇವರ ಅವನತಿ, ಕುಬಿ ಮತ್ತು ಇಯಾಲ, ತಬರನ ಕಥೆ ಮುಂತಾದ ಕಥೆಗಳಲ್ಲಿನ ಹಲವಾರು ಪಾತ್ರಗಳನ್ನು ವೈಜ್ಞಾನಿಕ ಚಿಂತನೆಗಳ ಹಿನ್ನಲೆಯಲ್ಲಿಯೇ ಚಿತ್ರಿಸಿದ್ದಾರೆ ಎಂಬುದು ಪುಟ್ಟಸ್ವಾಮಿಯವರ ಅಭಿಮತವಾಗಿದೆ.

ತೇಜಸ್ವಿಯವರಿಗೆ ತನ್ನ ಸುತ್ತಲಿನ ಮಿತಿಗಳನ್ನು ಮೀರಲು ಮತ್ತು ಅದರ ಅರಿವನ್ನು ಪಡೆಯಲು ವಿಜ್ಞಾನ ಅಥವಾ ವೈಜ್ಞಾನಿಕ ಮಾಹಿತಿಗಳು ಪರಿಕರಗಳಾಗಿವೆ ಎಂದು 'ನಿಗೂಢದ ಭಾಗಿಯಾದ ವೈಜ್ಞಾನಿಕ ವಿಸ್ಮಯ' ಎಂಬ ಲೇಖನದಲ್ಲಿ ಎಸ್.ಆರ್.ವಿಜಯಶಂಕರ ಅಭಿಪ್ರಾಯಪಡುತ್ತಾರೆ. ತೇಜಸ್ವಿಯವರಿಗೆ ಸಾಹಿತ್ಯ ಕೃತಿಗಳ ಸೃಷ್ಟಿಯಲ್ಲಿ ವಿಜ್ಞಾನದ ಅರಿವೇ ತಾತ್ವಿಕ ಗ್ರಹಿಕೆಯ ನಿಲುವಾಗಿದೆ. ಪರಿಸರವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮೇಲಿಂದ ಮೇಲೆ ಬರುತ್ತದೆ. ತಾವು ಪಡೆದ ವೈಜ್ಞಾನಿಕ ಅನುಭವಗಳನ್ನು ಕಲಾನುಭವವಾಗಿ ಪರಿವರ್ತಿಸುವಲ್ಲಿ ತೇಜಸ್ವಿಯವರ ಕೌಶಲ್ಯ ಹಾಗೂ ಜೀವನ ದರ್ಶನ ಎರಡೂ ಸೇರಿಕೊಂಡಿವೆ ಎಂದು ಅಭಿಪ್ರಾಯಪಡುವ ವಿಜಯಶಂಕರ, ಇಂದು ಮಾನವ ಹುಟ್ಟಿನಿಂದಲೇ ವೈಜ್ಞಾನಿಕ ಸಂಶೋಧನೆಗಳ ಪ್ರತಿಫಲವಾದ ಆಧುನಿಕ ಸವಲತ್ತುಗಳನ್ನು ಪಡೆಯುತ್ತಿರುವ ಈತ ತನ್ನ ಸುತ್ತ ತಪ್ಪಿಸಿಕೊಳ್ಳಲಾಗದಂತೆ ಬಲೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾನೆ. ಈ ಬಂಧನಗಳಿಂದ ಮುಕ್ತವಾಗಲು ವಿಜ್ಞಾನದ ಅರಿವು ಅನಿವಾರ್ಯ ಎಂಬುದೇ ತೇಜಸ್ವಿ ಸಾಹಿತ್ಯದ ತಿರುಳು

ಎನ್ನುತ್ತಾರೆ. "ಹುಟ್ಟು ನಮ್ಮನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗದ ಒಂದು ಜೀವಜಾಲದಲ್ಲಿ ಕೆಡಹುತ್ತದೆ. ನಾವು ನಿರ್ಮಿಸಿಕೊಂಡ ಸಮಾಜ ಮತ್ತು ವೈಜ್ಞಾನಿಕ ಸಂಶೋಧನೆಗಳಿಂದ ಪಡೆದ ಆಧುನಿಕ ಅನುಕೂಲತೆಗಳು ನಮ್ಮ ಸುತ್ತ ತಪ್ಪಿಸಿಕೊಳ್ಳಲಾರದಂತೆ ನಾವೇ ಹೆಣೆದುಕೊಂಡ ಬಲೆಗಳು. ಜುಗಾರಿಕ್ರಾಸ್‌ನಲ್ಲಿ ದೇವಪುರಕ್ಕೆ ಬಂದ ಟೆಲಿಫೋನಿನ ವಿವರಗಳು ಸೂಚಿಸುವುದು ಇದನ್ನೇ." (ವಿಜಯಶಂಕರ್ ಎಸ್.ಆರ್., ಒಡನಾಡಿ, ೨೦೦೭, ಪುಟ-೫೫)

ವಿಜ್ಞಾನದ ಮೂಲದಿಂದ ಪಡೆದ ತಿಳುವಳಿಕೆ ಹಾಗೂ ಮಾಹಿತಿ, ಸಮಾಜ ಮೂಲದ ನಿಲುವುಗಳ ಸಂಶ್ಲೇಷಣೆಯಿಂದ ತೇಜಸ್ವಿ ತಮ್ಮ ದರ್ಶನವನ್ನು ಕಾಣಿಸಲು ಪ್ರಯತ್ನಿಸುತ್ತಾರೆ. ಅವರಿಗೆ ವಿಜ್ಞಾನವೂ ತಾರ್ಕಿಕತೆಗೆ ಮೀರಿದ ನಿಗೂಢ ಭಾಗದಂತೆ ಒಂದು ವಿಸ್ಮಯವೇ ಆಗಿದೆ. ಹೀಗೆ ವಿಜ್ಞಾನ ವಲಯವನ್ನು ಸಂಶಯದಿಂದ ನೋಡುತ್ತಿದ್ದ ಸಾಹಿತ್ಯ ವಲಯಕ್ಕೂ, ವಿಜ್ಞಾನ ವಿಷಯವನ್ನು ಕಬ್ಬಿಣದ ಕಡಲೆಯೆಂದು ಭಾವಿಸಿದ್ದ ಓದುಗ/ಅಧ್ಯಯನ ವರ್ಗಕ್ಕೂ ಹೇಗೆ ವಿಜ್ಞಾನ ವಿಷಯಗಳನ್ನು ಕಲಾನುಭವವಾಗಿ ಪರಿವರ್ತಿಸಿ ಸರಳ ರೀತಿಯಲ್ಲಿ ತಲುಪಬಹುದು ಎಂಬುದನ್ನು ತೇಜಸ್ವಿ ತೋರಿಸಿದ್ದಾರೆ ಎಂದು ವಿಜಯಶಂಕರ ಅಭಿಪ್ರಾಯಪಡುತ್ತಾರೆ.

'ತೇಜಸ್ವಿ ಕಥನ ಮತ್ತು ಮಹಿಳಾ ಲೋಕ: ಕಂಡು ಕಾಣದ ನೋಟ' ಎಂಬ ಲೇಖನದಲ್ಲಿ ಎಂ.ಎಸ್. ಆಶಾದೇವಿಯವರು ತೇಜಸ್ವಿಯವರ ಒಟ್ಟಾರೆ ಕಥನದ ವಸ್ತುವಿನ ಆಯ್ಕೆ, ಅಭಿವ್ಯಕ್ತಿ ವಿಧಾನ, ತಾತ್ವಿಕ ನಿಲುವುಗಳ ಹಿಂದಿರುವ ಪ್ರಭಾವ ಮತ್ತು ಆಶಯಗಳನ್ನು ಕುರಿತು ಚರ್ಚಿಸುತ್ತಾರೆ. ಕುವೆಂಪು, ಕಾರಂತ, ಲೋಹಿಯಾ ಇವರ ಪ್ರಭಾವ; ಸಮಾಜವಾದಿ, ಪರಿಸರವಾದಿ ನಿಲುವುಗಳ ಪ್ರಭಾವ ಇವರ ತಾತ್ವಿಕತೆಯ ಹಿಂದೆ ಇರುವುದನ್ನು ಇವರು ಗುರುತಿಸುತ್ತಾರೆ.

ತೇಜಸ್ವಿಯವರ ಒಟ್ಟಾರೆ ಬರವಣಿಗೆ ಬದುಕಿನ ಅಸಂಗತತೆಯಿಂದ ಅತಾರ್ಕಿಕತೆಯೆಡೆಗೆ, ಮೂರ್ತ ನೆಲೆಯಿಂದ ಅಮೂರ್ತತೆ, ನಿಗೂಢತೆ, ವಿಸ್ಮಯದ ಕಡೆಗೆ ಚಲಿಸುವಂತೆ ಕಾಣುತ್ತದೆ. ಇದು ಅನುಭಾವಿ ನೆಲೆಯ ಕಡೆಗಿನ ಚಲನೆ ಅಥವಾ ತುಡಿತವೂ ಆಗಿದೆ ಎಂದು ಆಶಾದೇವಿಯವರು ಅಭಿಪ್ರಾಯಪಡುತ್ತಾರೆ. ಕಣ್ಣಿಗೆ ಕಾಣುವ ಅಥವಾ ಇಂದ್ರಿಯಗ್ರಾಹ್ಯವಾದ ಎಲ್ಲವನ್ನೂ ಯತಾವತ್ತು ಒಪ್ಪದ ತೇಜಸ್ವಿಯವರ ಬರಹವು ಅದರ ಒಳಹೊಕ್ಕು ಅದರ ನಿಗೂಢತೆ, ವಿಸ್ಮಯ, ವಿರೋಧಾಭಾಸಗಳನ್ನು, ಅದರ ಶಕ್ತಿ-ಸಾಧ್ಯತೆಗಳನ್ನು ಗುರುತಿಸುತ್ತದೆ. ಇದು ತೇಜಸ್ವಿಯವರು ಬದುಕಿನ ಕುರಿತಾಗಿ ನೀಡುವ ದರ್ಶನವೂ ಆಗಿದೆ ಎಂದು ಆಶಾದೇವಿಯವರು ಅಭಿಪ್ರಾಯಪಡುತ್ತಾರೆ.

ಕರ್ವಾಲೋ ಕಾದಂಬರಿಯ ಪ್ಯಾರ ನಿರೂಪಕನಿಗೆ ಹೇಳುವ "ಕಾಣ್ತೀತೆ ಸ್ವಾಮಿ ಆದರೆ ಕಾಣಾಕಿಲ್ಲ" ಎಂಬ ಮಾತಿನ ಮೂಲಕ ತೇಜಸ್ವಿಯವರ ಸಾಹಿತ್ಯದ ಪ್ರಬಂಧ ಧ್ವನಿಯನ್ನು ಗುರುತಿಸಲು ವಿಮರ್ಶಕರು ಯತ್ನಿಸಿದ್ದಾರೆ. ಪ್ಯಾರ "ಈ ಮಾತುಗಳನ್ನು ಹೇಳುವುದು ಕಾಡಿನ ಪರಿಸರ ಕಣ್ಣೆದುರಿಗೆ ಅದರೆಲ್ಲ ಮೂರ್ತ ವಿವರಗಳಲ್ಲಿ ಸ್ಥಾಪಿತವಾಗಿರುವ, ಅಂದರೆ ಇಂದ್ರಿಯಗ್ರಾಹ್ಯವಾಗಿರುವ ಈ ಕಾಡು, ಅದರ ಪರಿಸರವನ್ನು ಉದ್ದೇಶಿಸಿ. ನಿಜದಲ್ಲಿ ಕಾಡು ಮೂಲವಾದ ಇಡೀ ಪ್ರಕೃತಿಯೇ ಮನುಷ್ಯನ ತಿಳುವಳಿಕೆಯನ್ನು, ಅಹಂಕಾರವನ್ನು, ದುರಾಸೆಯನ್ನು ಪ್ರಶ್ನಿಸುವ, ಅದನ್ನು ತಿರಸ್ಕರಿಸುವ ಶಕ್ತಿಯದು. ಮನುಷ್ಯನ ಎಲ್ಲಾ ಜ್ಞಾನ ಮೂಲಗಳನ್ನೂ, ಗ್ರಹಿಕೆಯ ಕ್ರಮಗಳನ್ನೂ, ಮಿಕ್ಕು ಮೀರಿರುವ ಪರಿಸರದ ಬಗ್ಗೆ ಹೇಳಬಹುದಾದ ಪರಮ ಸತ್ಯದ ಹೇಳಿಕೆ ಇದು. ತೀರ ಸರಳವಾದ ದೈನಂದಿನ ಉದ್ಗಾರದಂತೆ ಕಾಣಿಸುವ ಈ ಮಾತು ತನ್ನೊಳಗೆ ತಾತ್ವಿಕ ಭಿತ್ತಿಯೊಂದನ್ನು ಧ್ವನಿಸುವ ಶಕ್ತಿ ಪಡೆದಿದೆ." (ನಡುವೆ ಸುಳಿವ ಆತ್ಮ, ೨೦೧೧, ಪುಟ-೬೩) ಹೀಗೆ ಎಲ್ಲವನ್ನೂ ತನ್ನ ಅಂಕೆಯಲ್ಲಿಟ್ಟುಕೊಳ್ಳಲು, ನಿಯಂತ್ರಿಸಲು, ತನ್ನ ಯಾಜಮಾನ್ಯವನ್ನು ಹೇರಲು ಯತ್ನಿಸುವ ಮನುಷ್ಯನ ಅಹಂಕಾರವನ್ನು ಪರಿಸರ ಕಾಲಕಾಲಕ್ಕೆ ಛಿದ್ರಗೊಳಿಸುತ್ತದೆ; ಮನುಷ್ಯನನ್ನು, ಅವನ ಆಲೋಚನೆಗಳನ್ನು ಸದಾ ಮೀರುತ್ತಲೇ ಇರುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ಇದೇ ಹಿನ್ನೆಲೆಯಲ್ಲಿ ಮನುಷ್ಯ ಅಪಾರ ಶ್ರದ್ಧೆಯಿಂದ ನಿರ್ಮಿಸಿಕೊಂಡಿರುವ ಸಾಂಸ್ಥಿಕ ಸಂಸ್ಥೆಗಳಾದ ಪ್ರಭುತ್ವ, ರಾಜಕಾರಣ, ನ್ಯಾಯಾಂಗ, ಕುಟುಂಬ, ದಾಂಪತ್ಯ, ಶಿಕ್ಷಣ ಮುಂತಾದವುಗಳನ್ನು ತೇಜಸ್ವಿಯವರ ಸಾಹಿತ್ಯ ತೀವ್ರತರವಾದ ಶೋಧನೆಗೆ ಒಳಗು ಮಾಡುತ್ತದೆ ಎನ್ನುವ ಆಶಾದೇವಿಯವರು ಇದರ ಹಿಂದೆ ಪೂರ್ವನಿರ್ಧಾರಿತ ಆಲೋಚನೆಗಳಿಲ್ಲ ಎನ್ನುತ್ತಾರೆ.

ಆಶಾದೇವಿಯವರು ಈ ಸಾಂಸ್ಥಿಕ ಸಂಸ್ಥೆಗಳಲ್ಲಿ ಕುಟುಂಬ ಮತ್ತು ದಾಂಪತ್ಯವನ್ನು ಕುರಿತ ಅಥವಾ ನಿರ್ದಿಷ್ಟವಾಗಿ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತಂತೆ ತೇಜಸ್ವಿ ಚರ್ಚೆ ಮಾಡುವುದು ಅವರ ಒಟ್ಟು ಸಾಹಿತ್ಯದ ದೃಷ್ಟಿಯಿಂದ ತುಂಬಾ ಕಡಿಮೆ. ಅವರ ಓರಗೆಯ ಲೇಖಕರಾದ ಲಂಕೇಶ್, ಅನಂತಮೂರ್ತಿ, ಶಾಂತಿನಾಥ ದೇಸಾಯಿ-ಇವರ ಕೃತಿಗಳಲ್ಲಿ ಮತ್ತೆ ಮತ್ತೆ ದಾಂಪತ್ಯವನ್ನು ಕುರಿತ ಚರ್ಚೆಗಳು ಬರುತ್ತವೆ. ಅಷ್ಟೇ ಅಲ್ಲ ತೇಜಸ್ವಿಯವರು ತಾನು ಪ್ರಭಾವಿತನಾಗಿದ್ದೇನೆ ಎಂದು ಹೇಳುವ ಕುವೆಂಪು, ಕಾರಂತ, ಲೋಹಿಯಾ ಇವರುಗಳು ಹೆಣ್ಣಿನ ಬಗೆಗೆ, ಅವಳ ಸ್ಥಿತಿಗತಿಯ ಬಗೆಗೆ, ಅದರಲ್ಲಾಗಬೇಕಾದ ಪಲ್ಲಟಗಳ ಬಗೆಗೆ ಆಳವಾಗಿ, ತೀವ್ರವಾಗಿ ಚಿಂತಿಸಿದವರು ಮತ್ತು ಪ್ರತಿಪಾದಿಸಿದವರು. ಆದರೆ ಈ ಬಗೆಯ ತೀವ್ರತರವಾದ ಯಾವ ಒತ್ತಡಗಳು, ತವಕಗಳು ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವುದಿಲ್ಲವೆಂದು ಆಶಾದೇವಿಯವರು ಅಭಿಪ್ರಾಯಪಡುತ್ತಾರೆ.

ಕಿರಗೂರಿನ ಗಯ್ಯಾಳಿಗಳು ಕಥೆಯನ್ನು ನಿರ್ದಿಷ್ಟವಾಗಿ ಚರ್ಚಿಸುವ ಆಶಾದೇವಿಯವರು ಇಲ್ಲಿ ಕಥೆಯ ಶೀರ್ಷಿಕೆ ಮತ್ತು ಅರ್ಪಣೆಯ ನಡುವೆ ಸಂಭಾಷಣೆಯೊಂದು ಏರ್ಪಡುವುದನ್ನು ಗುರುತಿಸುತ್ತಾರೆ. ಇಡೀ ಕಥೆಯಲ್ಲಿ ರೂಢಿಗತ ಸಂಪ್ರದಾಯಗಳಿಗೆ ಪ್ರತಿರೋಧವನ್ನು ಗಮನಿಸಬಹುದು. "ಗಯ್ಯಾಳಿಗಳು ಎನ್ನುವುದು ಹೆಣ್ಣಿನ ಬಗೆಗಿನ ನೇತ್ಯಾತ್ಮಕವಾದ ಗ್ರಹಿಕೆ. ತನ್ನ ಆಯ್ಕೆಯ ಅಥವಾ ವಿರೋಧದ ನಿಲುವುಗಳನ್ನು ಅಭಿವ್ಯಕ್ತಿಸುವುದರಿಂದ ಹಿಡಿದು ಸ್ವರ ಏರಿಸಿ ಮಾತನಾಡುವ ತನಕ ಗಯ್ಯಾಳಿ ಪದದ ಅರ್ಥವ್ಯಾಪ್ತಿ ಇದೆ. ಈ ಕೃತಿಯಲ್ಲಿ ಈ ಎಲ್ಲಾ ದಾರಿಗಳನ್ನೂ ಮಹಿಳೆಯರು ಬಳಸುತ್ತಾರೆ. ಹೀಗಿದ್ದೂ ಇಲ್ಲಿನ ಪಾತ್ರಗಳು ಗಯ್ಯಾಳಿಗಳು ಪದದ ಅರ್ಥವ್ಯಾಪ್ತಿಯಲ್ಲಿ ಪಲ್ಲಟವನ್ನು ತರುವಲ್ಲಿ ಯಶಸ್ವಿಯಾಗುತ್ತವೆ ಎಂದು ಹೇಳಲಾಗುವುದಿಲ್ಲ." (ನಡುವೆ ಸುಳಿವ ಆತ್ಮ, ೨೦೧೧, ಪುಟ-೬೭) ಎನ್ನುವ ಆಶಾದೇವಿಯವರು ಅರ್ಪಣೆ ಹಾಗೂ ಆಶಯವು ಸಾಧ್ಯವಾಗಿರುವ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುತ್ತಾರೆ.

ಕಥೆಯ ಅಂತ್ಯದ ಪಂಚಾಯಿತಿಯಲ್ಲಿ ದಾನಮ್ಮ 'ಸೊಂಟ ಬಿದ್ದು ಹೋದ ಗಂಡಸರ ಜೊತೆ ಸಂಸಾರ ಮಾಡೋದೇನ್ನ' ಎಂದು ಕೇಳುವ ಪ್ರಶ್ನೆ, ಅಲ್ಲಿನ ಹೆಣ್ಣುಮಕ್ಕಳಿಗೆ 'ಯಾರೆಂದರೆ ಅವರನ್ನು ಕಟ್ಟಿಕೊಂಡು ಎತ್ಲಾಗೆಂದರೆ ಅತ್ಲಾಗೆ ಹೋಗಿಬಿಡಬೇಕು' ಎನಿಸುವುದು ಇವೆಲ್ಲಾ ತಕ್ಷಣಕ್ಕೆ ಹಾದು ಹೋಗುವ ಅಥವಾ ಕೋಪದಿಂದ ಆಡಿದ ಮಾತುಗಳಾಗಿದ್ದು, ಪಂಚಾಯಿತಿಯಿಂದ ಆಚೆಗೆ ಆ ಹೆಣ್ಣುಮಕ್ಕಳ ಬದುಕಲ್ಲಿ ಯಾವ ಬದಲಾವಣೆಯನ್ನು ತರುವುದಿಲ್ಲ. ಅವರ ಬದುಕು ಮತ್ತದೇ ಪುರುಷ ಸಮಾಜದ ಚೌಕಟ್ಟಿನಲ್ಲೇ ಮುಂದುವರೆಯುತ್ತದೆ. ಮಹಿಳಾ ಹೋರಾಟಗಳು ಯಾವ ಬದಲಾವಣೆಯನ್ನು ಕಾಣದೆ ಹೀಗೆ ಅನೇಕ ಸವಾಲಿನ ಮತ್ತು ಸೋಲಿನ ಜೊತೆಯಲ್ಲಿ ನಿರಂತರವಾಗಿ ಸಾಗುತ್ತಿವೆ. ಈ ಕೃತಿಯೂ ಸಹಾ ಇದೇ ಸವಾಲನ್ನು, ಸೋಲನ್ನು ಮುಂದುವರೆಸಿಕೊಂಡು ಹೋಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ಇಲ್ಲಿ ಆಶಾದೇವಿಯವರು ಮಹಿಳಾ ಹೋರಾಟಗಳು, ಅವರ ಪ್ರತಿರೋಧಗಳು ಯಾವ ಬದಲಾವಣೆಯನ್ನು ತರದೆ ಅವರನ್ನು ಯಥಾಸ್ಥಿತಿಯನ್ನಾಗಿ ಉಳಿಸಿವೆ. ಈ ಕಥೆಯೂ ಸಹಾ ಯಥಾಸ್ಥಿತಿವಾದವನ್ನೇ ಪ್ರತಿಪಾದಿಸುತ್ತದೆ ಎಂದು ಹತಾಶೆಯನ್ನು ವ್ಯಕ್ತಪಡಿಸುತ್ತಾರೆ. ತೇಜಸ್ವಿಯವರ ಸಾಹಿತ್ಯದಲ್ಲಿ ಎಲ್ಲಾ ಜೀವಿಗಳಿಗೂ ಒಂದು ಅಧಿಕೃತತೆ ಇದೆ. 'ಜೀವಿಗಳ ಸಮಾನ ಪಾತಳಿ'ಯೊಂದನ್ನು ನಿರ್ಮಿಸುವಲ್ಲಿ ಅವರ ಸಾಹಿತ್ಯ ಯಶಸ್ಸು ಪಡೆದಿದೆ ಎನ್ನುವ ಆಶಾದೇವಿಯವರಿಗೆ ತೇಜಸ್ವಿಯವರ ಮಹಿಳಾ ಕಾಳಜಿಯ ಬಗ್ಗೆ ಸಂಶಯ ಮೂಡಿರುವುದು ವಿಪರ್ಯಾಸ. ಹಾಗೆಯೇ ಕಿರಗೂರಿನ ಪಂಚಾಯಿತಿಯ ಘಟನೆಯು ಮುಂದುವರೆದು ಮದ್ಯಪಾನ ನಿಷೇದ ಹೋರಾಟ, ರೈತ ಚಳುವಳಿ, ಭೂ ಚಳುವಳಿ ಮುಂತಾದ ಹೋರಾಟಗಳಿಗೆ

ಕಾರಣವಾದ ಬಗ್ಗೆ, ಈ ಘಟನೆಯು ಇತರೆ ಚಳುವಳಿಗಳಿಗೆ-ಹೋರಾಟಗಳಿಗೆ ಸ್ಫೂರ್ತಿಯಾಗಿ ಸಮಾಜದ ಆಂತರ್ಯದಲ್ಲಿ ಉಂಟುಮಾಡಿರಬಹುದಾದ ಪಲ್ಲಟಗಳನ್ನು ಆಶಾದೇವಿಯವರು ಗ್ರಹಿಸದಿರುವುದು ಕೂಡ ವಿಪರ್ಯಾಸ.

ಪೂರ್ಣಚಂದ್ರ ತೇಜಸ್ವಿಯವರ ಬದುಕಿನ ಹಲವು ಘಟನೆಗಳನ್ನು ಮತ್ತು ಅವರ ಒಟ್ಟಾರೆ ಬರಹಗಳನ್ನು ಕುರಿತು ಕರೀಗೌಡ ಬೀಚನಹಳ್ಳಿ ಇವರು ಬರೆದಿರುವ ಕೃತಿಯೇ 'ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಬದುಕು-ಬರಹ.' ಈ ಕೃತಿಯು ತೇಜಸ್ವಿಯವರ ಒಟ್ಟು ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಕ್ರೋಡೀಕರಿಸಿ ವಿವರಿಸುತ್ತದೆ. ಇಲ್ಲಿನ ಬರಹ ಮತ್ತು ಭಾಷೆ ತುಂಬಾ ಸರಳವಾಗಿದ್ದು, ಓದುಗರನ್ನು ಯಾವುದೇ ಒಳನೋಟಗಳಿಗೆ, ವಿಮರ್ಶೆಯ ಹತಾರಗಳಿಗೆ ಒಳಗುಮಾಡುವುದಿಲ್ಲ. ಆದರಿಂದ ಈ ಕೃತಿಯು ಓದುಗರಿಗೆ ಸುಲಭಗ್ರಾಹ್ಯವಾಗಿದೆ. ಪರಿಚಯಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿರುವ ಕೃತಿಯ ಬರಹಗಳು ತೇಜಸ್ವಿಯವರ ಅಗಾಧ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡಲು ಯತ್ನಿಸಿವೆ. ಈ ಕೃತಿ ಅವರ ವಿಚಾರಗಳನ್ನು ನವಿರಾದ, ಸರಳವಾದ, ವಿವರಣಾತ್ಮಕ ನಿರೂಪಣಾ ಶೈಲಿಯನ್ನು ಅನುಸರಿಸಿರುವುದರಿಂದ ಹೊಸ ಓದುಗರನ್ನು ತೇಜಸ್ವಿಯವರ ಸಾಹಿತ್ಯದ ಕಡೆ ಸೆಳೆಯಲು ಸಹಕಾರಿಯಾಗಿದೆ.

ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ 'ನಮ್ಮ ನಡುವಿನ ತೇಜಸ್ವಿ' ಎಂಬ ಕಿರುಹೊತ್ತಿಗೆಯು ಪ್ರಸಾದ್ ರಕ್ಷಿದಿ ಅವರ ತೇಜಸ್ವಿಯವರೊಂದಿಗಿನ ಒಡನಾಟವನ್ನು ಕುರಿತ ಬರಹವಾಗಿದೆ. ಲೇಖಕರು ಮೊದಲಿಗೆ ತೇಜಸ್ವಿಯವರನ್ನು ಅವರ ಬರಹಗಳ ಮುಖಾಂತರ ಪರಿಚಯಿಸಿಕೊಂಡು ಆನಂತರ ಅವರ ಪ್ರಭಾವಲಯದಲ್ಲಿ ಗುರುತಿಸಿಕೊಳ್ಳುತ್ತಾರೆ. ಹೀಗೆ ಅವರ ಬರಹಗಳಿಂದ ಪ್ರಭಾವಿತರಾಗಿ ಅವರೊಂದಿಗಿನ ಒಡನಾಟದ ಚಿತ್ರಣಗಳನ್ನು ಈ ಕೃತಿಯಲ್ಲಿ ಕಟ್ಟಿಕೊಡುತ್ತಾರೆ. ಈ ಪುಸ್ತಕವು ಲೇಖಕರ ಒಡನಾಟದ ಅನುಭವಗಳನ್ನು ಮಾತ್ರ ಕಟ್ಟಿಕೊಡದೆ ಈ ಒಡನಾಟದ ಅವಧಿಯಲ್ಲಿ ತಾವು ಕಂಡ ತೇಜಸ್ವಿಯವರ ಹವ್ಯಾಸಗಳ ಜೊತೆಗೆ ರೈತ ಸಂಘ, ರೈತ ಚಳುವಳಿ, ಕೃಷಿ, ಮಾರುಕಟ್ಟೆ ವ್ಯವಸ್ಥೆ, ರಾಜಕಾರಣ, ನಕ್ಸಲಿಸಂ, ಶಿಕ್ಷಣ, ರಣಗಭೂಮಿ ಮುಂತಾದವುಗಳನ್ನು ಪ್ರಸ್ತಾಪಿಸುವ ಮೂಲಕ ಇವುಗಳಿಗೆ ತೇಜಸ್ವಿಯವರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ; ಅವರು ತೋರುವ ಪರ್ಯಾಯ ಮಾರ್ಗಗಳು ಯಾವುವು ಎಂಬುದನ್ನೂ ಸಹಾ ಚರ್ಚಿಸುತ್ತದೆ. ರೈತ ಸಂಘದ ಕಾರ್ಯಕ್ರಮಗಳಲ್ಲಿ, ಅಲ್ಲಿನ ಅಧ್ಯಯನ ಶಿಬಿರಗಳಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ತೇಜಸ್ವಿಯವರು ರೈತ ಸಂಘದ ಚಟುವಟಿಕೆಗಳನ್ನು ತೀಕ್ಷ್ಣ ವಿಮರ್ಶೆಗೆ ಒಳಗುಮಾಡುತ್ತಿದ್ದದ್ದನ್ನು ಲೇಖಕರು ಗುರುತಿಸುತ್ತಾರೆ. ರೈತ ಸಂಘದ ಸದಸ್ಯರನ್ನು ಕುರಿತು "ಕಾನೂನುಭಂಗದಂತಹ ಚಳುವಳಿಗಳನ್ನು ನೀವು ಕೈಗೆತ್ತಿಕೊಂಡಾಗ

ನಿಮ್ಮಲ್ಲಿ ಸ್ಪಷ್ಟತೆ ಮತ್ತು ಸಮರ್ಥ ನಾಯಕತ್ವ ಎರಡೂ ಇಲ್ಲದಿದ್ದರೆ ಖಂಡಿತವಾಗಿಯೂ ಅರಾಜಕತೆಯನ್ನು ಸೃಷ್ಟಿಸುತ್ತೀರಿ, ನಿಮ್ಮ ಉದ್ದೇಶವೂ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು" (ನಮ್ಮ ನಡುವಿನ ತೇಜಸ್ವಿ, ೨೦೧೦, ಪುಟ-೦೫) ಎನ್ನುವುದನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಅವರ ಈ ಎಚ್ಚರಿಕೆಯ ಮಾತುಗಳು ಮಲೆನಾಡಿನಲ್ಲಿ ನಿಜವಾಗುವುದನ್ನು ಲೇಖಕರು ಗುರುತಿಸುತ್ತಾರೆ ಇದು ರೈತ ಸಂಘ ಮತ್ತು ಚಳುವಳಿಯ ಬಗ್ಗೆ ತೇಜಸ್ವಿಯವರಿಗಿದ್ದ ಸ್ಪಷ್ಟ ನಿಲುವಾಗಿದೆ.

ವೈಜ್ಞಾನಿಕ ಮತ್ತು ಸಾವಯವ ಕೃಷಿಯ ಬಗೆಗೆ ತೇಜಸ್ವಿಯವರಿಗೆ ಸ್ಪಷ್ಟತೆಯಿತ್ತು, ಅವರು ಯಾವುದನ್ನೇ ಆಗಲಿ ಯತಾವತ್ತು ಒಪ್ಪುತ್ತಿರಲಿಲ್ಲ. ಯಾವುದೇ ಹೊಸ ಪ್ರಯೋಗವಾದರೂ ರೈತನ ಅನುಭವದ ಪ್ರಯೋಗಶಾಲೆಯಲ್ಲಿ ಮೌಲ್ಯಮಾಪನ ನಡೆಯಬೇಕು ಮತ್ತು ಅಗತ್ಯ ಬದಲಾವಣೆಗಳು ಆಗಬೇಕು ಎಂದು ಪ್ರತಿಪಾದಿಸುತ್ತಿದ್ದರು "ಆಧುನಿಕ ಕೃಷಿಯ ಮತ್ತು ಆಧುನಿಕ ವಿಜ್ಞಾನದ ಅನಾಹುತಗಳ ಬಗ್ಗೆ ಎಚ್ಚರಿಕೆಯಿಂದಿರಬೇಕಾದ ನಾವು ವೈಜ್ಞಾನಿಕ ದೃಷ್ಟಿಕೋನವನ್ನೇ ನಿರಾಕರಿಸುವಂತಾಗಬಾರದು, ಕೃಷಿ ವಿಜ್ಞಾನಿಗಳಿಗಿಂತ ಕೃಷಿಕ ವಿಜ್ಞಾನಿಯಾಗುವುದು ಮುಖ್ಯ" (ನಮ್ಮ ನಡುವಿನ ತೇಜಸ್ವಿ, ೨೦೧೦, ಪುಟ-೧೯) ಎನ್ನುವ ಮೂಲಕ ರೈತರನ್ನು, ಕೃಷಿ ವಿಜ್ಞಾನಿಗಳನ್ನು ಎಚ್ಚರಿಸುವ ಕೆಲಸವನ್ನು ತೇಜಸ್ವಿಯವರು ಮಾಡುತ್ತಿದ್ದದ್ದನ್ನು ಲೇಖಕರು ತಮ್ಮ ಒಡನಾಟದ ಅನುಭವದ ಮೂಸೆಯಿಂದ ಹೆಕ್ಕಿ ತೆಗೆಯುತ್ತಾರೆ.

ಬ್ಯಾಂಕುಗಳು ರೈತರನ್ನು ಸುಲಿಯುತ್ತಿವೆ ಮತ್ತು ಶೋಷಿಸುತ್ತಿವೆ ಎನ್ನುವ ಏಕಮುಖಿ ಅಭಿಪ್ರಾಯಕ್ಕಿಂತ ಭಿನ್ನವಾಗಿ ಚಿಂತಿಸುವ ತೇಜಸ್ವಿಯವರು ರೈತರ ಸ್ವಾರ್ಥ, ಜೂಜಾಟ ಮುಂತಾದ ಬೇರೆ ಬೇರೆ ದುರಾಭ್ಯಾಸಗಳಿಂದ ಸಾಲ ನೀಡಿದ ಬ್ಯಾಂಕುಗಳನ್ನು ಶೋಷಿಸುತ್ತಿರುವುದನ್ನು ತೇಜಸ್ವಿ ಗುರುತಿಸಿ ಖಂಡಿಸುತ್ತಿದ್ದರು. ಅದನ್ನು ರೈತ ನಾರಾಯಣಗೌಡನ ಪ್ರಸಂಗದ ಮೂಲಕ ಲೇಖಕರು ಗುರುತಿಸುತ್ತಾರೆ. ನಕ್ಸಲರನ್ನು, ಅವರ ಕೃತ್ಯಗಳನ್ನು ಕೆಲವರು ಸಮರ್ಥಿಸಿದಾಗ ಅದನ್ನು ಖಂಡಿಸುವ ತೇಜಸ್ವಿಯವರು ನಾವು ಜವಾಬ್ದಾರಿಯಿಂದ ಮಾತಾಡಬೇಕು. ಪಾಪ ಸಣ್ಣ ವಯಸ್ಸಿನ ಹುಡುಗರು ಈ ತರಹದ ಮಾತುಗಳಿಗೆ ಪ್ರಭಾವಿತರಾಗಿ ಕಾಡು ಸೇರಿ ಗುಂಡೇಟಿಗೆ ಬಲಿಯಾಗುತ್ತಿದ್ದಾರೆ. ಅವರನ್ನು ಕಾಡು ಬಿಟ್ಟು ಬರುವಂತೆ ಮಾಡುವವರು ಯಾರು, ಹೋರಾಟಕ್ಕೆ ಬೇರೆ ದಾರಿಗಳಿವೆ ಎಂದು ಹೇಳುವವರು ಯಾರು ಎಂಬ ತೇಜಸ್ವಿಯವರ ಮಾತುಗಳ ಮೂಲಕ ನಕ್ಸಲ್ ಚಳುವಳಿಯ ಕುರಿತ ಅವರ ಅಭಿಪ್ರಾಯವನ್ನು ಲೇಖಕರು ಗುರುತಿಸುತ್ತಾರೆ.

ಹೀಗೆ ಪ್ರಸಾದ್ ರಕ್ಷಿದಿಯವರು ತೇಜಸ್ವಿಯವರೊಂದಿಗಿನ ತಮ್ಮ ಒಡನಾಟದ ಅನುಭವಗಳ ಜೊತೆಜೊತೆಗೆ ತೇಜಸ್ವಿಯವರ ಸಾಮಾಜಿಕ ಬದ್ದತೆ ಮತ್ತು ನಿಲುವುಗಳನ್ನು

ಗುರುತಿಸುತ್ತಾರೆ. ಇದೊಂದು ಅನುಭವ ಕಥಾನಕ ಆಗಿರುವುದರಿಂದ ಇಲ್ಲಿ ಲೇಖಕರು ತೇಜಸ್ವಿಯವರ ಅಭಿಪ್ರಾಯಗಳನ್ನು ಅನಿಸಿಕೆಗಳನ್ನು ವಿಮರ್ಶೆಗೆ ಒಳಗು ಮಾಡದೇ, ತಕರಾರಿಲ್ಲದೆ ಸಂಪೂರ್ಣ ಒಪ್ಪುತ್ತಾರೆ. ಇಲ್ಲಿ ತೇಜಸ್ವಿಯವರನ್ನು ಕುರಿತು ಆರಾಧನಾ ಮನೋಭಾವ ಕಾಣುತ್ತದೆ.

ಪೂರ್ಣಚಂದ್ರ ತೇಜಸ್ವಿ ಅವರೊಂದಿಗೆ ಒಡನಾಡಿದ ಗೆಳೆಯರು ಕಂಡುಂಡ ಅನುಭವಗಳ ಸಂಗ್ರಹ ರೂಪವೇ 'ತೇಜಸ್ವಿ ಬದುಕಿದ್ದಾರೆ' ಕೃತಿ. ಈ ಪುಸ್ತಕವನ್ನು ಪರ್ತಕರ್ತ ಕೀರ್ತಿ ಕೋಲ್ಗಾರ ಅವರು ನಿರೂಪಿಸಿದ್ದಾರೆ. ತೇಜಸ್ವಿಯವರು ಜನತೆಯ ಬಾಯಲ್ಲಿ ದಂತಕಥೆಯಾಗಿ ಹರಿದಾಡುತ್ತಿದ್ದು ಇದರಿಂದ ಕುತೂಹಲಗೊಂಡ ಲೇಖಕರು ಕನ್ನಡಪ್ರಭ ಪತ್ರಿಕೆಯ ಪುರವಣೆಗಾಗಿ ತೇಜಸ್ವಿಯವರನ್ನು ಹತ್ತಿರದಿಂದ ಬಲ್ಲವರನ್ನು, ಅವರೊಂದಿಗೆ ಒಡನಾಡಿದವರನ್ನು ಮತ್ತು ಅವರ ಆತ್ಮೀಯರನ್ನು ಸಂದರ್ಶಿಸಿ ಒಟ್ಟು ಮಾಡಿದ ಬರಹಗಳ ಗುಚ್ಚವೇ ಈ ಕೃತಿ.

ಸುಮಾರು ಹದಿನಾರು ಲೇಖನಗಳಿರುವ ಈ ಕೃತಿಯಲ್ಲಿ ತೇಜಸ್ವಿಯವರ ಒಡನಾಡಿಗಳೂ, ಗೆಳೆಯರೂ, ಪರಿಚಿತರೂ ಆದ ರವಿವರ್ಮಕುಮಾರ್, ಬಿ.ಎನ್. ಶ್ರೀರಾಮ್, ಕಡಿದಾಳ್ ಶಾಮಣ್ಣ, ಚಂದ್ರಶೇಖರ್, ಇಕ್ಬಾಲ್ ಅಹಮದ್, ಸುರೇಶ್ಚಂದ್ರ ದತ್ತ, ಪ್ರದೀಪ್ ಕೆಂಜಿಗೆ, ನರೇಂದ್ರ ರೈ ದೇರ್ಲ ಮುಂತಾದವರು ತೇಜಸ್ವಿ ಅವರೊಂದಿಗೆ ಒಡನಾಡಿದ ಅನುಭವಗಳನ್ನು ಇಲ್ಲಿನ ಲೇಖನಗಳು ನೀಡುತ್ತವೆ. ಈ ಬರಹಗಳಲ್ಲಿ ತೇಜಸ್ವಿಯವರ ಮೀನು ಶಿಕಾರಿ, ಪಕ್ಷಿಪ್ರೀತಿ, ಪ್ರವಾಸ, ಕಾಡು, ಚಿತ್ರಕಲೆ, ಟ್ರಕ್ಕಿಂಗ್, ರಾಜಕಾರಣ, ಹೋರಾಟ, ರೈತ ಮತ್ತು ಕೃಷಿಯ ಕುರಿತ ಪ್ರತಿಕ್ರಿಯೆಗಳು, ಅಭಿಪ್ರಾಯಗಳು ಅನಾವರಣಗೊಂಡಿವೆ. ಇಲ್ಲಿನ ಎಲ್ಲಾ ಕಥಾನಕಗಳು ತೇಜಸ್ವಿಯವರ ಬರಹ ಮತ್ತು ಬದುಕಿನ ನಡುವಿನ ಗೆರೆಯನ್ನೇ ಅಳಿಸಿ, ಇವುಗಳ ನಡುವೆ ಗಾಢವಾದ ಸಾಮ್ಯತೆ ಇರುವುದನ್ನು ಪ್ರತಿಪಾದಿಸುತ್ತವೆ. ತೇಜಸ್ವಿಯವರು ತಾವು ಬದುಕುತ್ತಿರುವುದನ್ನೇ ಬರಹವಾಗಿಸಿದ ಕನ್ನಡದ ಕೇಲವೇ ಕೆಲವು ಸಾಹಿತಿಗಳಲ್ಲಿ ಪ್ರಮುಖರಾಗಿ ನಿಲ್ಲುತ್ತಾರೆ ಎಂಬ ನಿಲುವನ್ನು ಇಲ್ಲಿ ಬರಹಗಳು ಕಾಣಬಹುದು.

ಪೂರ್ಣಚಂದ್ರ ತೇಜಸ್ವಿಯವರ ಕಥೆ, ಕಾದಂಬರಿ, ಪ್ರವಾಸ ಕಥನ, ಪ್ರಬಂಧ, ಆತ್ಮಕಥನದ ಬರಹಗಳನ್ನು ಇಟ್ಟುಕೊಂಡು ಅವರ ಕಥನವು ಕಟ್ಟಿಕೊಡುವ ಜಗತ್ತು ಮತ್ತು ನೀಡುವ ವಿವೇಕವನ್ನು ಕುರಿತು ಟಿ.ಪಿ.ಅಶೋಕ್ ಅವರು ನಡೆಸಿರುವ ಚರ್ಚೆ ಮತ್ತು ಸಂವಾದಗಳ ಪುಸ್ತಕ ರೂಪವೇ 'ತೇಜಸ್ವಿ ಕಥನ' ಕೃತಿ. ಇಲ್ಲಿ ಲೇಖಕರು ತೇಜಸ್ವಿಯವರ ಕಥನವನ್ನು ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನದಲ್ಲಿ ನೋಡುತ್ತಲೇ ಅವರ

ಸಾಹಿತ್ಯವು ಇಂದಿನ ಸಾಮಾಜಿಕ ಸಂಕಟಗಳಿಗೆ ನೀಡುವ ಪರಿಹಾರೋಪಾಯಗಳ ದರ್ಶನವನ್ನೂ ಮೂಡಿಸಲು ಯತ್ನಿಸಿದ್ದಾರೆ.

ಟಿ.ಪಿ.ಅಶೋಕ್ ಅವರು ಈ ಕೃತಿಯ ಮೊದಲನೇ ಭಾಗದಲ್ಲಿ ತೇಜಸ್ವಿಯವರ ಒಟ್ಟಾರೆ ಕಥನವನ್ನು ಸಂಕ್ಷಿಪ್ತವಾಗಿ ಚರ್ಚೆ ಮಾಡಿದರೆ, ಎರಡನೆಯ ಭಾಗದಲ್ಲಿ ಪ್ರತಿಯೊಂದು ಕೃತಿಯನ್ನೂ ಪ್ರತ್ಯೇಕವಾಗಿ ವಿಮರ್ಶೆ ಹಾಗೂ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ತೇಜಸ್ವಿಯವರ ಕಥನವನ್ನು ಪ್ರಕಾರ ನಿಷ್ಠೆಯನ್ನು ಮೀರಿ ಓದಲು ಸಾಧ್ಯವಿದೆ ಎನ್ನುವ ಟಿ.ಪಿ.ಅಶೋಕ "ಚಿದಂಬರ ರಹಸ್ಯ, ಜುಗಾರಿಕ್ರಾಸ್, ಕಾದಂಬರಿಗಳ ಅಧ್ಯಾಯಗಳನ್ನು ಬಿಡಿಬಿಡಿಯಾಗಿಯೂ ಓದಬಹುದು. ಅವುಗಳ ಅಂತರ್ಸಂಬಂಧದಲ್ಲಿಯೂ ಓದಬಹುದು. ಪರಿಸರ ಕಥೆ ಸಂಕಲದಲ್ಲಿಯಂತೂ ತೇಜಸ್ವಿ ಪ್ರಕಾರ ನಿಷ್ಟೆಯನ್ನೂ ಬಿಟ್ಟುಕೊಟ್ಟರು. ಅದನ್ನು ಕಥೆಗಳೆಂದೂ, ಪ್ರಬಂಧಗಳೆಂದೂ, ಚಿಂತನ ಬರಹಗಳೆಂದೂ, ಅಥವಾ ಲೇಖಕರ ಆತ್ಮಚರಿತ್ರೆಯ ಪುಟಗಳೆಂದೂ ಬಗೆಬಗೆಯಾಗಿ ಓದಬಹುದು" (ತೇಜಸ್ವಿ ಕಥನ, ೨೦೦೪, ಪುಟ-೧೯) ಎಂದು ಅಭಿಪ್ರಾಯಪಡುತ್ತಾರೆ. ಹೀಗೆ ತೇಜಸ್ವಿಯವರು ಸೃಜನ-ಸೃಜನೇತರ, ಸಾಹಿತ್ಯ-ಸಾಹಿತ್ಯೇತರ, ಕಥೆ- ಪ್ರಬಂಧ, ಕಾವ್ಯ-ಶಾಸ್ತ್ರ ಎಂಬೆಲ್ಲಾ ವರ್ಗೀಕರಣವನ್ನು ದಾಟಿ, ಸಾಹಿತ್ಯದ ಕಟ್ಟುಪಾಡುಗಳನ್ನು ಮೀರಿದ ಹದವೊಂದನ್ನು ಸಾಧಿಸಿದ್ದಾರೆ ಎಂದು ಅಶೋಕ್ ಅಭಿಪ್ರಾಯಪಡುತ್ತಾರೆ.

ತೇಜಸ್ವಿ ಕಥನದಲ್ಲಿನ ಪಾತ್ರಗಳು, ಸನ್ನಿವೇಶಗಳು ಭಾವಾವೇಶಕ್ಕಾಗಲಿ, ಹುಂಬ ಆಶಾವಾದಕ್ಕಾಗಲಿ ಅಥವಾ ಕ್ರಿಯಾಹೀನತೆಗಾಗಲಿ ಒಳಗಾಗುವುದಿಲ್ಲ. ಹಾಗೆಯೇ ಸಮಾಜವನ್ನಾಗಲಿ ಅಲ್ಲಿನ ಸಮಸ್ಯೆಗಳು ಹಾಗೂ ಸಂಕಟಗಳನ್ನಾಗಲಿ ಚಿತ್ರಿಸುವಾಗ ಅಲ್ಲಿನ ಬರವಣಿಗೆ ಮತ್ತು ನಿರೂಪಣಾ ಶೈಲಿ ಓದುಗರ ಭಾವನೆಗಳನ್ನು ಉದ್ದೀಪಿಸುವಂತಿಲ್ಲ. ಜುಗಾರಿಕ್ರಾಸಿನ ಕ್ರಿಮಿನಲ್ ಜಗತ್ತನ್ನಾಗಲಿ ಹಾಗೂ ಚಿದಂಬರ ರಹಸ್ಯದ ಜಾತಿ ಮತ್ತು ಮತಾಂಧ ಕ್ರೂರ ಸಮಾಜ ಅಥವಾ ಕಠೋರ ವಾಸ್ತವವನ್ನು ಚಿತ್ರಿಸುವಾಗಲೂ ಕೂಡ ಸಂಯಮ ಕಳೆದುಕೊಳ್ಳದ ಅವರ ನಿರೂಪಣೆ ಒಂದು ಬಗೆಯ ಕಾಮಿಕ್ ಶೈಲಿಯನ್ನು ಅನುಸರಿಸುತ್ತದೆ ಎಂದು ಅಶೋಕ್ ಅಭಿಪ್ರಾಯಪಡುತ್ತಾರೆ. ತೇಜಸ್ವಿಯವರು ಕಥನವು ಜಾತಿ, ಧರ್ಮ, ಆಧುನಿಕತೆ, ಪರಂಪರೆ, ಗ್ರಾಮ, ನಗರ, ಕೃಷಿ, ರೈತ, ಆಧುನಿಕ ಶಿಕ್ಷಣ, ಸಾಂಪ್ರದಾಯಿಕ ಜ್ಞಾನ, ವಿಜ್ಞಾನ-ತಂತ್ರಜ್ಞಾನ ಮುಂತಾದವುಗಳ ನಿರ್ವಹಣೆಯಲ್ಲಿ ಏಕಮುಖವಾಗಿ ತೀರ್ಮಾನಗಳನ್ನು ನೀಡುವುದಾಗಲಿ ಅಥವಾ ಆದರ್ಶೀಕರಿಸುವಾದಗಲಿ ಇಲ್ಲವೇ ತಿರಸ್ಕರಿಸುವುದಾಗಲಿ ಮಾಡುವುದಿಲ್ಲ. ಈ ಬಗೆಯ ದ್ವಿದಳ ವಿಭಜನೆಯಲ್ಲಿ ಅವರ ಕಥನವು ಆಸಕ್ತಿಯನ್ನು ತೋರುವುದಿಲ್ಲ. ಯಾವೊಂದರ ಪರವಾಗಿಯೂ, ವಿರುದ್ಧವಾಗಿಯೂ ಮಾತನಾಡುವುದಿಲ್ಲ.

ಇವೆಲ್ಲವುಗಳ ಒಳಿತು ಮತ್ತು ಕೇಡುಗಳನ್ನು ಒಟ್ಟೊಟ್ಟಿಗೆ ಕಟ್ಟಿಕೊಡುತ್ತಲೇ ತೀರ್ಮಾನಗಳನ್ನು ಓದುಗರಿಗೆ ಬಿಡುತ್ತದೆ ಎಂದು ಅಶೋಕ್ ಅಭಿಪ್ರಾಯಪಡುತ್ತಾರೆ.

ಹೆಚ್. ಶಶಿಕಲಾ ಅವರ 'ಏಕ-ಅನೇಕ' ಕೃತಿಯು ಮೂಲತಃ ತೇಜಸ್ವಿಯವರ ಕಥನ ಸಾಹಿತ್ಯವನ್ನು ಕುರಿತ ಸಂಶೋಧನ ಅಧ್ಯಯನವಾಗಿದೆ. ತೇಜಸ್ವಿಯವರ ಕಥನವನ್ನು ಮೂಲಭಿತ್ತಿಯನ್ನಾಗಿ ಇಟ್ಟುಕೊಂಡು ಅವರ ಸಮಕಾಲಿನರೂ, ಅದೇ ಕಾಲಘಟ್ಟದ ನವ್ಯ ಸಾಹಿತ್ಯ ಚಳುವಳಿಯ ಭಾಗವಾಗಿದ್ದ ಅನಂತಮೂರ್ತಿ, ಲಂಕೇಶ್, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಗಿರಿ ಹಾಗೂ ದೇವನೂರು ಮಹದೇವ ಇವರ ಕಥನ ಸಾಹಿತ್ಯವನ್ನು ಇಲ್ಲಿ ತೌಲನಿಕವಾಗಿ ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಈ ಅಧ್ಯಯನವು ವ್ಯಕ್ತಿಕೇಂದ್ರಿತ ಸೃಜನಶೀಲತೆಯ ಅಧ್ಯಯನದ ಜೊತೆಗೆ ಸಮಕಾಲೀನ ಭಿನ್ನ ಲೇಖಕರ ಸೃಜನಶೀಲತೆಯ ಸ್ವರೂಪಗಳನ್ನು ತೌಲನಿಕವಾಗಿ ಅಧ್ಯಯನ ಮಾಡುತ್ತದೆ.

ಸ್ವಾತಂತ್ರ್ಯೋತ್ತರದ ಕನ್ನಡದ ಸಾಹಿತ್ಯವನ್ನು ಪ್ರಥಮ ಘಟ್ಟ, ದ್ವಿತೀಯ ಘಟ್ಟ, ತೃತೀಯ ಘಟ್ಟ ಎಂದು ಮೂರು ಭಾಗಗಳಾಗಿ ವಿಭಜಿಸಿಕೊಂಡು ಇಲ್ಲಿ ಅಧ್ಯಯನವನ್ನು ನಡೆಸಲಾಗಿದೆ. ಈ ಅಧ್ಯಯನದಲ್ಲಿ ಈ ಮೂರು ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿದ, ಆ ಮೂಲಕ ಸಾಹಿತ್ಯವು ಸಾಮಾಜಿಕ ಬದುಕನ್ನು ರೂಪಿಸಿದ ಬಗೆಯನ್ನು ಸಾಹಿತ್ಯಕ ಪರಿಕಲ್ಪನೆ ಅಥವಾ ಪ್ರಮೇಯಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಲು ಯತ್ನಿಸಲಾಗಿದೆ.

ಸ್ವಾತಂತ್ರ್ಯೋತ್ತರದ ಪ್ರಥಮ ಘಟ್ಟದಲ್ಲಿ ಸಾಹಿತ್ಯದ ಧೋರಣೆಗಳಾಗಿದ್ದ ಅಸ್ತಿತ್ವವಾದ, ಪರಕೀಯತೆ, ಸಾಂಕೇತಿಕತೆ, ದೇಹ ಮತ್ತು ಪ್ರಜ್ಞೆಯ ಸಂಘರ್ಷ, ಸ್ವಪ್ರಜ್ಞೆ ಮುಂತಾದ ಪರಿಕಲ್ಪನೆಗಳ ಮೂಲಕ ತೇಜಸ್ವಿ ಮತ್ತು ಸಮಕಾಲೀನ ಲೇಖಕರ ಸಾಹಿತ್ಯವನ್ನು ಚರ್ಚೆಗೆ ಒಳಪಡಿಸಲಾಗಿದೆ. ಸ್ವಾತಂತ್ರ್ಯೋತ್ತರದ ಎರಡನೇ ಘಟ್ಟದಲ್ಲಿ ಸಮಾಜದ ಹಸಿವು, ಬಡತನ, ಬ್ರಾಹ್ಮಣ ಮತ್ತು ಶೂದ್ರ ಕಲ್ಪನೆ, ಲಿಂಗ ಅಸಮಾನತೆ, ಗ್ರಾಮ ಮತ್ತು ನಗರ ವೈರುಧ್ಯಗಳು ಮುಂತಾದ ಪ್ರಮೇಯಗಳ ಮೂಲಕ ಕಥನವನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಸ್ವಾತಂತ್ರ್ಯೋತ್ತರದ ಮೂರನೇ ಕಾಲಘಟ್ಟದಲ್ಲಿ ತಳ ಸಮುದಾಯಗಳ ಶೋಷಣೆ, ಪ್ರತಿಭಟನೆ, ಆಧುನಿಕತೆ, ಪರಿಸರ ನವವಸಾಹತುಶಾಹಿ ಮುಂತಾದ ಪರಿಕಲ್ಪನೆಗಳ ಮೂಲಕ ಸಾಹಿತ್ಯವನ್ನು ತೌಲನಿಕವಾಗಿ, ಲೇಖಕ ಕೇಂದ್ರಿತವಾಗಿ ಅಧ್ಯಯನ ಮಾಡಲಾಗಿದೆ.

ಒಟ್ಟಾರೆ ಶಶಿಕಲಾ ಅವರು ತೇಜಸ್ವಿಯವರ ಕಥನವನ್ನು ಕೇಂದ್ರವಾಗಿಟ್ಟುಕೊಂಡು ಅವರ ಸಮಕಾಲೀಸ ಲೇಖಕರ ಕಥನ ಸಾಹಿತ್ಯವನ್ನು ಸ್ವಾತಂತ್ರ್ಯೋತ್ತರದ ಮೂರು

ಕಾಲಘಟ್ಟಗಳಲ್ಲಿ ಪ್ರವರ್ಧಮಾನಕ್ಕೆ ಬಂದ ಸಾಹಿತ್ಯಕ ಪ್ರಮೇಯಗಳ ಮೂಲಕ ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ.

ಹೀಗೆ ತೇಜಸ್ವಿಯವರ ಸಾಹಿತ್ಯವನ್ನು ಕುರಿತ ವಿಮರ್ಶೆಯಲ್ಲಿ ಹಲವು ದೃಷ್ಟಿಕೋನಗಳು, ಸಾಹಿತ್ಯ ವಿಶ್ಲೇಷಣೆಯ ವಿಧಾನಗಳು ಮಂಡಿತವಾಗಿವೆ. ವಸ್ತುನಿಷ್ಠತೆಯ ನೆಪದಲ್ಲಿ ವೈಯಕ್ತಿಕ ದಾಳಿ ಮಾಡುವ ಮತ್ತು ಪಾಂಥಿಕ ನಂಬಿಕೆಗಳ ಸಂಘರ್ಷಕ್ಕೆ ತಾತ್ವಿಕ ರೂಪ ಕೊಡುವ ಸಾಧನವಾಗಿ ಸಾಹಿತ್ಯ ವಿಮರ್ಶೆಯನ್ನು ಇಲ್ಲಿ ಬಳಸಲಾಗಿದೆ. ಇದು ಗಿರಡ್ಡಿಯವರ ನವ್ಯ ಪಂಥದ ಕಟ್ಟಾ ಅಭಿಮಾನವುಳ್ಳ ವಿಮರ್ಶೆಗೆ ಉದಾಹರಣೆಯಾಗಿದೆ. ಸಾಹಿತ್ಯಕ್ಕಿಂತಲೂ ಸಾಹಿತಿಯ ವ್ಯಕ್ತಿತ್ವವನ್ನು ಮತ್ತು ಅವರೊಂದಿಗಿನ ಒಡನಾಟದ ವಿವರಗಳನ್ನು ಹಲವು ಬರಹಗಳು ಮಂಡಿಸುತ್ತವೆ. ಸಾಹಿತಿಯ ಬದುಕು ಮತ್ತು ಆತನ ಬರಹಗಳ ನಡುವಣ ಸಂಬಂಧಗಳ ಚರ್ಚೆ ಹಾಗೂ ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧಗಳ ಚರ್ಚೆಗಳೂ ಕೂಡ ಇಲ್ಲಿ ಮಂಡಿತವಾಗಿವೆ. ಅನಂತಮೂರ್ತಿ, ಜಿ.ಹೆಚ್. ನಾಯಕ್, ಎಂ.ಪಿ.ಪ್ರಕಾಶ್ ಮೊದಲಾದವರ ಬರವಣಿಗೆಗಳು ಇದಕ್ಕೆ ಸಾಕ್ಷಿ. ಪರಿಸರ ದೃಷ್ಟಿ, ಮಹಿಳಾ ದೃಷ್ಟಿ, ವೈಜ್ಞಾನಿಕ ದೃಷ್ಟಿ ಹೀಗೆ ಹಲವು ಅಂತರಶಿಸ್ತೀಯ ದೃಷ್ಟಿಕೋನದ ಓದುಗಳು ಕೂಡ ತೇಜಸ್ವಿ ಕುರಿತ ವಿಮರ್ಶೆಯಲ್ಲಿ ಮಂಡನೆಯಾಗಿವೆ. ಕೆ. ಪುಟ್ಟಸ್ವಾಮಿ, ಎಸ್. ಆರ್. ವಿಜಯಶಂಕರ್, ಚಂದ್ರಶೇಖರ ನಂಗಲಿ ಮೊದಲಾದವರ ಬರಹಗಳು ಈ ರೀತಿಯ ಓದಿಗೆ ಉದಾಹರಣೆಗಳಾಗಿವೆ. ಸಾಮಾಜಿಕ ಚಳುವಳಿಗಳ ಮತ್ತು ಸಾಹಿತ್ಯದ ಅಂತರ್ಸಂಬಂಧ, ಸಾಮಾಜಿಕ ಬದಲಾವಣೆಯಲ್ಲಿ ಸಾಹಿತ್ಯವು ವಹಿಸುವ ಪಾತ್ರವನ್ನು ಶೋಧಿಸುವ ಓದುಗಳು ಮತ್ತು ರೂಪಕ ನೆಲೆಯ ಸಾಹಿತ್ಯದ ಓದುಗಳೂ ಕೂಡ ಇಲ್ಲಿ ಮಂಡನೆಯಾಗಿವೆ. ಇವಲ್ಲದೆ ಸಂಶೋಧನಾತ್ಮಕ ಅಧ್ಯಯನಗಳು, ತೌಲನಿಕ ಅಧ್ಯಯನಗಳು, ಅಭಿನಂದನ ರೂಪದ ಬರವಣಿಗೆಗಳು ಹೀಗೆ ಹಲವು ಬಗೆಯ ಬರವಣಿಗೆಗಳು ಇಲ್ಲಿವೆ.

ಅಧ್ಯಾಯ-೩

ತೇಜಸ್ವಿ ಕಥನ : ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿ

ಅಧ್ಯಾಯ-೩

ತೇಜಸ್ವಿ ಕಥನ : ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿ

ಆಧುನಿಕತೆಯ ಅರ್ಥವನ್ನು ಒಂದು ವ್ಯಾಖ್ಯಾನದಲ್ಲಿ ಹಿಡಿದಿಡುವುದು ಕಷ್ಟಸಾಧ್ಯವಾದರೂ, ಸಂಸ್ಕೃತಿ ಮತ್ತು ಸಾಮಾಜಿಕ ಅಧ್ಯಯನಗಳಲ್ಲಿ ಪರಂಪರೆಗಿಂತ ಭಿನ್ನವಾದದ್ದು ಅಥವಾ ವಿರುದ್ಧವಾದುದ್ದನ್ನು ಆದುನಿಕತೆಯ ಹೆಸರಿನಲ್ಲಿ ಗುರುತಿಸಲಾಗುತ್ತದೆ. ಆಧುನಿಕತೆಯನ್ನು ನಾವಿರುವ ವರ್ತಮಾನವಾಗಿಯೂ, ಪರಂಪರೆಯನ್ನು ಕಳೆದುಹೋದ ನೆನ್ನೆಯ ಭೂತಕಾಲವಾಗಿಯೂ ಗುರುತಿಸುವ ಕ್ರಮವೂ ನಮ್ಮಲ್ಲಿದೆ. ಹಾಗಾಗಿ ಕಾಲ, ಮನೋಭಾವ, ಸಾಮಾಜಿಕವಾಗಿ ಸಂಭವಿಸಿದ ಪಲ್ಲಟಗಳ ರೂಪದಲ್ಲಿಯೂ ಆಧುನಿಕತೆಯನ್ನು ಗುರುತಿಸಲಾಗುತ್ತಿದೆ. ಆಧುನಿಕತೆ ಎಂಬ ಪದದ ಇತಿಹಾಸವನ್ನು ನೋಡಿದರೆ "ಇಂಗ್ಲೀಷ್‌ನ ಮಾಡರ್ನಿಟಿ ಎಂಬ ಪದ ೧೫ನೇ ಶತಮಾನದ ಲ್ಯಾಟೀನ್ ಭಾಷೆಯ ಮಾಡರ್ನಸ್ ಎಂಬ ಪದದಿಂದ ರೂಪುಗೊಂಡಿದೆ. ಲ್ಯಾಟೀನ್ ಬಳಕೆಯಲ್ಲಿ ಮಾಡರ್ನಸ್ ಎಂಬ ಪದವನ್ನು ೧೫ನೇ ಶತಮಾನದ ಕ್ರಿಶ್ಚಿಯನ್ ಘಟ್ಟವನ್ನು ರೋಮನ್ನರ ಕ್ಷುದ್ರ ಧರ್ಮಗಳ ಭೂತಕಾಲದಿಂದ ಪ್ರತ್ಯೇಕಿಸಲು ಬಳಸಲಾಯಿತು. ಮಧ್ಯಯುಗದಲ್ಲಿ ಮಾಡರ್ನ್ ಎಂಬ ಪದವನ್ನು 'ಪ್ರಾಚೀನ' ಎಂಬ ಹಂತದಿಂದ ಸಮಕಾಲೀನ ಘಟ್ಟವನ್ನು ಪ್ರತ್ಯೇಕಿಸಲು ಬಳಸಲಾಯಿತು. ಕ್ರಮೇಣ ಮಾಡರ್ನಿಟಿ ಎಂಬ ಪದ ೧೬ನೇ ಶತಮಾನದ ಹೊತ್ತಿಗೆ ಯೂರೋಪಿನಲ್ಲಿ ಹುಟ್ಟಿದ ಸಾಮಾಜಿಕ ಸಂಸ್ಥೆಗಳನ್ನು ವಿವರಿಸಿಕೊಳ್ಳಲು ಹೆಚ್ಚು ಬಳಕೆಗೆ ಬಂದಿತು. ಯೂರೋಪು ಭೂಮಂಡಲವನ್ನು ಹೊಸದಾಗಿ ಶೋಧಿಸುವ ಹಾಗೂ ವಸಾಹತೀಕರಿಸುವ ಕೆಲಸದಲ್ಲಿ ತೊಡಗಿದಾಗ ಈ ಸಾಮಾಜಿಕ ಸಂಸ್ಥೆಗಳು ಮಾಡರ್ನಿಟಿಯನ್ನು ಎಲ್ಲೆಡೆ ಹಬ್ಬಿಸತೊಡಗಿದವು ಎಂದು ಮಾಡರ್ನಿಟಿ ಶಬ್ದದ ಚರಿತ್ರೆ ಹೇಳುತ್ತದೆ." (ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ೨೦೦೪, ಪುಟ-೧೩೨)

ಪಾರಂಪರಿಕ ಸಮಾಜದಲ್ಲಾದ ಪರಂಪರೆಯ ವಿರುದ್ಧದ ಬದಲಾವಣೆಗಳು, ಹೊಸ ಜೀವನ ವಿಧಾನ, ಆಲೋಚನಾ ಕ್ರಮ, ಕಾಲಾತೀತ ಮತ್ತು ಜಾತ್ಯತೀತ ನಿಲುವುಗಳು, ಮತ್ತು ಸೃಜನಶೀಲ ಸಂವೇದನೆಗಳನ್ನೇ ಆಧುನಿಕತೆಯೆಂದು ಗ್ರಹಿಸಲಾಗುತ್ತದೆ. ಸಾಂಪ್ರದಾಯಿಕವಾಗಿ ಅನುಸರಿಸಿಕೊಂಡು ಬರುತ್ತಿರುವ ಮೌಢ್ಯಗಳನ್ನು ಪ್ರಶ್ನಿಸುವ ಮನೋಧರ್ಮ, ಅನ್ಯಸಂಸ್ಕೃತಿಯ ಅನುಕರಣೆ, ಇಲ್ಲಿಯ ತನಕ ಬದುಕಿದ ಬದುಕಿಗಿಂತ ಭಿನ್ನ ರೀತಿಯಲ್ಲಿ ಬದುಕಬಹುದಾದ ದಾರಿಗಳು ಇರುವ ಬದುಕಿನ ಕ್ರಮವನ್ನು ಅದರಿಂದ ಹೊರಗೆ ನಿಂತು ನೋಡಿದ ಹೊಸತನದ ದೃಷ್ಟಿಕೋನಗಳು, ವಸಾಹತುಶಾಹಿಯ ಪ್ರಭಾವದಿಂದ ಉಂಟಾದ ಮಾರುಕಟ್ಟೆ, ಅರ್ಥವ್ಯವಸ್ಥೆ,

ಇಂಗ್ಲೀಷ್ ಶಿಕ್ಷಣ, ಕಾನೂನುಗಳು, ಪ್ರಜಾಪ್ರಭುತ್ವ, ವಿಶಾಲ ರಸ್ತೆಗಳು, ಗಗನಚುಂಬಿ ಕಟ್ಟಡಗಳು, ಅಣೆಕಟ್ಟುಗಳು, ಕೈಗಾರಿಕೆಗಳು, ಸೇತುವೆಗಳು ಮುಂತಾದ ಅಭಿವೃದ್ಧಿಯ ಮಾದರಿಗಳು, ಆಸ್ಪತ್ರೆಗಳು, ವಾಣಿಜ್ಯ ಕೃಷಿ, ಹೊಸ ರೀತಿಯ ರಾಜಕೀಯ ನೋಟ ಮುಂತಾದವುಗಳ ಮೂಲಕವೂ ಸಹ ಆಧುನಿಕತೆಯನ್ನು ಗುರುತಿಸಲಾಗುತ್ತಿದೆ.

ಆಧುನಿಕತೆಯನ್ನು ಭೌತಿಕ ಮತ್ತು ಭೌದ್ಧಿಕ ತತ್ವಗಳ ಮೂಲಕವೂ ಸಹ ಗುರುತಿಸಲಾಗುತ್ತದೆ. ಆದರೆ ಭೌದ್ಧಿಕ ಬದಲಾವಣೆಗಳೇ ಭೌತಿಕ ಬದಲಾವಣೆಗೆ ಕಾರಣವಾಗಿವೆ. ಆಂತರಿಕವಾಗಿ ನಮ್ಮ ಆಲೋಚನೆಗಳಲ್ಲಾದ ಹೊಸ ಚಿಂತನೆಗಳ ಪ್ರವೇಶ ಭೌತಿಕ ಪ್ರಕ್ರಿಯೆಗಳಿಗೆ ಪ್ರೇರಣೆಯಾಗುತ್ತದೆ. ಒಟ್ಟಾರೆ ಇಲ್ಲಿಯ ತನಕ ನಂಬಿದ್ದ ಬದುಕಿನ ವಿಧಾನಗಳನ್ನು ಪ್ರಶ್ನಿಸುವ, ತಿರಸ್ಕರಿಸುವ, ಅವುಗಳ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳುವ ಮನೋಭಾವವನ್ನೇ ಆಧುನಿಕತೆಯೆಂದು ಭಾವಿಸಲಾಗುತ್ತಿದೆ. ಹಾಗೆ ನೋಡಿದರೆ ಪರಂಪರೆ ಎಂಬುದು ಚರಿತ್ರೆಯೇ ವರ್ತಮಾನದಲ್ಲಿ ಬಂದು ಯಥಾವತ್ತು ಕೂತಂತೆ ಚಲಾವಣೆಯಲ್ಲಿ ಇರುವುದಿಲ್ಲ. ನಿತ್ಯವೂ ಹಳತು ಹೊಸತರ ಸಂಘರ್ಷದಿಂದ ಬದಲಾವಣೆ ಸಂಭವಿಸುತ್ತಾ ಇರುವುದರಿಂದ ಪರಂಪರೆಯೂ ಸಹ ರೂಪಾಂತರಗಳಿಗೆ ಗುರಿಯಾಗುತ್ತ ಇರುತ್ತದೆ. ಇವೆರಡೂ ಹೀಗೆ ಪರಸ್ಪರಾವಲಂಬಿ ಮತ್ತು ಚಲನಶೀಲ ಬೌದ್ಧಿಕ ಮತ್ತು ಭೌತಿಕ ಸ್ಥಿತಿಗಳು

ಭೂತ ಮತ್ತು ವರ್ತಮಾನಗಳ ನೆಲೆಯಿಂದಲೂ ಆಧುನಿಕತೆಯನ್ನು ಗುರುತಿಸುವ ವಿಧಾನಗಳು ನಮ್ಮಲ್ಲಿವೆ. ನಟರಾಜ್ ಹುಳಿಯಾರ್‌ರವರು ಒಂದು ಕಾಲದ ಜನ

೧. ಭೂತದೊಂದಿಗೆ ತಮ್ಮ ಸಂಬಂಧವನ್ನು ಪುನರ್ ವ್ಯಾಖ್ಯಾನಿಸಿ ಕೊಂಡಾಗ ಅಥವಾ
೨. ಭೂತದಿಂದ ತಮ್ಮನ್ನು ತಾವು ಕಡಿದುಕೊಂಡಾಗ ಅಥವಾ
೩. ಭೂತದಿಂದ ಕಡಿದುಹೋದ ಸಂಬಂಧವನ್ನು ಪುನರ್ ಸ್ಥಾಪಿಸಲೆತ್ನಿಸಿದಾಗ

ಈ ಮೂರು ಹಂತಗಳಲ್ಲಿ ಆಧುನಿಕತೆ ಚಾಲ್ತಿಯಲ್ಲಿರುತ್ತದೆ ಎಂದಿದ್ದಾರೆ. (ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ೨೦೦೪, ಪುಟ-೧೩೨)

ಆಧುನಿಕತೆಯು ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಎರಡೂ ನೆಲೆಗಳಲ್ಲಿ ಬಳಕೆಯಾಗಿದೆ. ಆಧುನಿಕತೆಯು ಪರಂಪರೆಯ ಯಾಜಮಾನ್ಯವನ್ನು ಪ್ರಶ್ನಿಸುವ ಮೂಲಕ ವಿರೋಧಿಗಳನ್ನೂ, ಪರಂಪರೆಯು ಇಲ್ಲಿಯ ತನಕ ನಡೆಸಿದ ದಮನಕಾರಿ ನೀತಿಗಳಿಂದ ಬಿಡುಗಡೆಗೊಳಿಸಿದ ಕಾರಣಗಳಿಂದ ಪರವಾದಿಗಳನ್ನೂ ಏಕಕಾಲಕ್ಕೆ ಸೃಷ್ಟಿಸಿಕೊಂಡಿದೆ. ಹಾಗೆಯೇ ಪರಂಪರೆಯ ಹಿಂಸೆ, ಯಜಮಾನಿಕೆ, ಮೌಢ್ಯ, ಸಂಪ್ರದಾಯಗಳನ್ನು ದೊಡ್ಡದು ಮಾಡಿ ತನ್ನ ಆಳ್ವಿಕೆಯನ್ನು

(ಪ್ರವೇಶವನ್ನು) ಸಮರ್ಥಿಸುತ್ತಿದೆ. ಅದೇ ರೀತಿ ಪರಂಪರೆಯೂ ಸಹ ಆಧುನಿಕತೆಯ ಹೊಸ ರೀತಿಯ ಹಿಂಸೆ, ಯಜಮಾನಿಕೆ, ದೇಸೀ ಸಂಸ್ಕೃತಿಯ ನಾಶ, ಅನ್ಯ ಸಂಸ್ಕೃತಿಯ ಒತ್ತಾಯ ಪೂರ್ವಕ ಹೇರಿಕೆ, ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳಲ್ಲಿ ಉಂಟಾದ ವಿಘಟನೆ, ವ್ಯಾಪಾರಿಬುದ್ಧಿ, ಲಾಭಕೋರತನಗಳನ್ನೇ ದೊಡ್ಡದು ಮಾಡಿ ತನ್ನ ಆಳ್ವಿಕೆಯನ್ನು ಸಮರ್ಥಿಸುತ್ತಿದೆ. ಇದು ಜನತೆಯಲ್ಲಿ ಗೊಂದಲಗಳನ್ನು ಮತ್ತು ಆತಂಕಗಳನ್ನು ಸೃಷ್ಟಿಸಿರುವುದಂತೂ ನಿಜ.

ಆಧುನಿಕತೆ ಮೂಲತಃ ಪರಕೀಯ ನೋಟಕ್ರಮವಾಗಿದೆ. ಇದು ಕೆಲವರಿಗೆ ಕಲಿಗಾಲದ ದುಷ್ಫಲವಾಗಿಯೂ, ವಿನಾಶಕಾರಿ ಶಕ್ತಿಯಾಗಿಯೂ, ದೇಸೀ ಸಂಸ್ಕೃತಿಗಳು ಹಾದಿ ಕಳೆದುಕೊಂಡು ದಿಕ್ಕೆಡುವ ಅನುಭವವಾಗಿಯೂ, ಸಂಪ್ರದಾಯವಾದಿಗಳಿಗೆ ಭಯಾನಕವಾಗಿಯೂ, ಮಾನವ ಸಂಬಂಧಗಳ ಬಗೆಗೆ ಆಸ್ಥೆ ಇರುವವರಿಗೆ ವಿಘಟನೆಯ ಮಾರಿಯಾಗಿಯೂ, ವ್ಯವಸ್ಥೆಯ ಬರ್ಬರತೆಯ ಸಂಕೇತವಾಗಿಯೂ, ಅನಗತ್ಯ ವೇಗ ಮತ್ತು ಅಪಾಯಕಾರಿ ಸ್ಪರ್ಧೆಯ ಯುಗವಾಗಿಯೂ, ಮಾನವೀಯ ಮೌಲ್ಯಗಳು ಮತ್ತು ಸಾಂಪ್ರದಾಯಿಕ ನಂಟುಗಳನ್ನು ನಾಶಮಾಡುವ ವಿಚ್ಛಿದ್ರಕಾರಿ ಶಕ್ತಿಯಾಗಿಯೂ, ಗ್ರಾಮ ಸೌಂದರ್ಯ, ಸಮುದಾಯ ಜೀವನ, ಸಹಕಾರ ಮನೋಭಾವವನ್ನು ತಲೆಗೆಳಗು ಮಾಡುವ ಅನಾಹುತವಾಗಿಯೂ, ಪಾರಂಪರಿಕ ಜೀವನ ವಿಧಾನಗಳೇ ಆಗಿದ್ದ ದೇಸೀ ಕಲೆ, ಮೂಲ ಕಸುಬುಗಳನ್ನು ಕಿತ್ತುಕೊಂಡು ಸಮುದಾಯವನ್ನು ಭಿಕಾರಿಗಳನ್ನಾಗಿ ತಯಾರುಮಾಡುವ ನಿರ್ನಾಮದ ಭೂತವಾಗಿಯೂ, ನೆಮ್ಮದಿ ಶಾಂತಿಯನ್ನು ನಾಶಮಾಡಿಬಿಡುವ ಆಗಂತುಕನಾಗಿಯೂ ಕಂಡರೆ ಇನ್ನು ಕೆಲವರಿಗೆ ಪರಂಪರೆಯ ದಮನಕಾರಿ ನೀತಿಗಳಿಗೆ ಉತ್ತರವಾಗಿಯೂ, ದಮನಿತ ದನಿಗಳಿಗೆ ಬಿಡುಗಡೆಯ ಮಾರ್ಗವಾಗಿಯೂ, ಮೌಢ್ಯ ಸಂಪ್ರದಾಯಗಳ ದಮನಕಾರಿ ಶಕ್ತಿಯಾಗಿಯೂ, ವ್ಯವಸ್ಥೆಯನ್ನು ಸುಧಾರಿಸುವ ಸುಧಾಕರನಾಗಿಯೂ, ಪರಂಪರೆಯ ಯಾಜಮಾನ್ಯ ಪ್ರಭುಗಳ ಹಿಡಿತದಿಂದ ಬಿಡುಗಡೆಗೊಳಿಸಿ ಬಯಸಿದ್ದನ್ನು ಕೊಡುವ ಮಾಯಾವಿಯಾಗಿಯೂ, ಜಾತಿಪದ್ಧತಿಯ ಹಿಂಸೆಯಿಂದ ಪಾರುಮಾಡಬಲ್ಲ ಶಕ್ತಿಯಾಗಿಯೂ, ಸ್ವಾತಂತ್ರ್ಯದ ಸ್ವಾಭಿಮಾನದ ಸಂಕೇತವಾಗಿಯೂ, ಎಲ್ಲಾ ರೀತಿಯ ಕೀಳರಿಮೆಯಿಂದ ದೂರಮಾಡಿಬಿಡುವ ನವನಾಗರೀಕತೆಯಾಗಿಯೂ, ಅಧಿಕಾರ ವಿಕೇಂದ್ರೀಕರಣದ ಮೂಲಕ ಸಮಾನತೆಯನ್ನು ಸಾಧಿಸುವ ಅಸ್ತ್ರವಾಗಿಯೂ, ಕಂಡು ತನ್ನ ವ್ಯಾಪ್ತಿಯನ್ನು ದಿನೇದಿನೇ ವಿಸ್ತರಿಸಿಕೊಂಡು ಬೃಹದಾಕಾರವಾಗಿ ಬೆಳೆದು ನಿಂತಿದೆ.

ಆಧುನಿಕತೆಯನ್ನು ಪ್ರಪಂಚದ ಎಲ್ಲಾ ಸಮುದಾಯಗಳು ತನ್ನದೇ ಆದ ರೀತಿಯಲ್ಲಿ ಗ್ರಹಿಸುತ್ತವೆ. ಆದರೆ ಆಧುನಿಕತೆ ಮತ್ತು ಪರಂಪರೆಗಳು ಪರಸ್ಪರ ವಿರೋಧಿಗಳಾಗಿ ಮಾತ್ರ

ಇರುವುದಿಲ್ಲ. ಪರಸ್ಪರ ಕೊಡುಕೊಳ್ಳುವಿಕೆಯೂ, ಪರಸ್ಪರ ತಿದ್ದುವ ಪ್ರಕ್ರಿಯೆಯೂ ಅಲ್ಲಿ ನಡೆಯುತ್ತಿರುತ್ತದೆ. ಆಧುನಿಕತೆಯು ಪರಂಪರೆಯ ತಿಳುವಳಿಕೆಯನ್ನು ಸಂಪೂರ್ಣ ನಿರಾಕರಿಸುವುದಿಲ್ಲ. ಒಂದಕ್ಕೊಂದು ಬೆರೆಯುವ ಸಹಿಸಿಕೊಳ್ಳುವ ಬದಲಿಸುವ ಪ್ರಭುತ್ವವನ್ನು ಸಾಧಿಸಲು ತಂತ್ರ ಕುತಂತ್ರಗಳನ್ನು ಬಳಸುವ ಕ್ರಿಯೆಗಳು ನಿರಂತರ ಅವುಗಳ ಮಧ್ಯೆ ನಡೆಯುತ್ತಿರುತ್ತದೆ. ಈ ಎಲ್ಲಾ ಪ್ರಕ್ರಿಯೆಗಳಿಂದಾಗಿ ಆಧುನಿಕತೆಯು ಪರಂಪರೆಯ ಗುಡಿಯೊಳಗೆ ನುಗ್ಗಿ ಅದರ ಅಧಿಕಾರದ ಹಿಡಿತಗಳನ್ನು ಸಡಿಲಗೊಳಿಸುತ್ತದೆ.

ಪರಂಪರೆಯ ಹಿಡಿತಗಳಾದ ಜಾತೀಯತೆ, ಕೌಟುಂಬಿಕ ಹಿಂಸೆ, ಮೌಢ್ಯ ಆಚರಣೆಗಳ ಮೂಲಕ ಸಾಧಿಸಿದ ಯಾಜಮಾನ್ಯದ ಹಿಡಿತಗಳು ಆಧುನಿಕತೆಯ ಪ್ರವೇಶದಿಂದ ಸಡಿಲಗೊಂಡಿವೆ. ಇವುಗಳ ಜೊತೆಗೆ ಸಮೂಹದ ಬದಲಿಗೆ ವ್ಯಕ್ತಿ ಸಮಾಜದ ಪ್ರಾಥಮಿಕ ಘಟಕವಾಗುತ್ತಾನೆ. ವ್ಯಕ್ತಿಯ ಅಸ್ತಿತ್ವ, ಸಾಧನೆ ಹುಟ್ಟಿನಿಂದಲ್ಲದೆ ಸಾಧಿಸಿದ್ದಾಗುತ್ತದೆ. ಬಾಲ್ಯ ಮತ್ತು ವೃದ್ಧಾಪ್ಯಕ್ಕಿಂತ ಯೌವನಕ್ಕೆ ಪ್ರಾಮುಖ್ಯತೆ ದೊರೆಯುತ್ತದೆ. ಅಧಿಕಾರಗಳು, ಸ್ಥಾನಮಾನಗಳು, ಜಾತಿ, ಧರ್ಮ ಮತ್ತು ವರ್ಗಗಳನ್ನು ಮೀರಿ ವಿಕೇಂದ್ರೀಕರಣಗೊಳ್ಳುತ್ತವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಪ್ರಬಲಗೊಂಡು ನಿರ್ಧಾರಕ ಮತ್ತು ನಿರ್ಮಾಣದ ಕೇಂದ್ರಸ್ಥಾನಗಳಾಗುತ್ತವೆ. ಇವೆಲ್ಲವುಗಳು ಪರಂಪರೆಯ ಎಲ್ಲಾ ಹಿಡಿತಗಳನ್ನು ಪ್ರಶ್ನಿಸತೊಡಗುತ್ತವೆ. ಹೀಗಾಗಿ ಪರಂಪರೆಯು ಸಹ ಪ್ರಸ್ತುತ ಕಾಲಸಂದರ್ಭಕ್ಕೆ ಅನುಗುಣವಾಗಿ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ತನ್ನ ನಿಲುವುಗಳು ಮತ್ತು ಧೋರಣೆಗಳನ್ನು ಬದಲಿಸಿಕೊಂಡು ವರ್ತಿಸುತ್ತದೆ. ಹಾಗಾಗಿ ಪರಂಪರೆಯು ಪರಂಪರೆಯಾಗಿ, ಆಧುನಿಕತೆಯು ಆದುನಿಕತೆಯಾಗಿ ಉಳಿದಿರುವುದಿಲ್ಲ. ಈ ಎರಡೂ ದ್ವಿಮಾನ ವೈರುಧ್ಯಗಳ ನಡುವೆ ಪರಸ್ಪರ ವಿನಿಮಯ ಕಾರ್ಯವೂ ನಡೆಯುತ್ತಿರುತ್ತದೆ. ಕೆಲವೊಂದು ಬಾರಿ ಪರಂಪರೆ ಮತ್ತು ಆಧುನಿಕತೆಗಳು ಸೃಷ್ಟಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರೋಗಗಳಿಗೆ ಪರಸ್ಪರ ಔಷಧ ರೂಪಗಳಾಗಿಯೂ ಸಹ ಇವು ಬಳಕೆಯಾಗುತ್ತಿರುತ್ತವೆ. ಹಾಗೆಯೇ ಈ ಔಷಧೋಪಚಾರದ ಪ್ರಕ್ರಿಯೆಯಲ್ಲಿ ಉಂಟಾಗುವ 'ಸೈಡ್ ಎಫೆಕ್ಟ್'ಗಳನ್ನು ಹಿರಿದು ಮಾಡಿ ತೋರಿಸಿ, ಪರಸ್ಪರ ಸಮುದಾಯಗಳ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿರುತ್ತವೆ. ಈ ಎರಡೂ ಹಾದಿಗಳೂ ಅಪಾಯಕಾರಿ ಆದವುಗಳೇ ಆಗಿವೆ.

ಆಧುನಿಕತೆಯು ಪರಂಪರೆಯ ಒಟ್ಟು ನಂಬಿಕೆಗಳ ಕುರಿತು ನಿರ್ಲಕ್ಷ, ಅನುಮಾನ, ತಿರಸ್ಕಾರಗಳನ್ನು ತಾಳಿ ಸಮುದಾಯವನ್ನು ಈ ನೆಲದಿಂದ ದೂರ ಮಾಡಲು ಪ್ರಯತ್ನಿಸುತ್ತಿರುತ್ತದೆ. ಕ್ರೈಸ್ತ ಮಿಷನರಿಗಳು ಪ್ರಾರಂಭದಲ್ಲಿ ಮಾಡಿದ ತಂತ್ರಗಳು ಇದೇ ರೀತಿಯಾಗಿದ್ದವು. ತನ್ನ ನೆಲದಿಂದ ದೂರವಾದ ಸಮುದಾಯವನ್ನು ತನ್ನ ತೆಕ್ಕೆಗೆ ಸೆಳೆಯುವುದು

ಸುಲಭ ಎನ್ನುವುದು ಅದರ ಉದ್ದೇಶ. ಆದರೆ ಈ ತಂತ್ರಗಳಿಗೆ ಪರಂಪರೆಯು ತನ್ನ ಜಿಗುಟುತನದಿಂದ ಸಂಸ್ಕೃತಿ ನಾಶ, ಮೌಲ್ಯ ನಾಶ, ಆದರ್ಶ, ದೇಶದ ಸ್ವಾಭಿಮಾನದ ಪ್ರಶ್ನೆಗಳನ್ನು ಮುಂದಿಟ್ಟು ಇಲ್ಲವೇ ಹಿಂಸೆಯ ಮೂಲಕ ನಿಯಂತ್ರಿಸಲು ಅಥವಾ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುತ್ತದೆ. ಹಾಗಾಗಿಯೇ ಪರಂಪರೆ ಹಾಗೂ ಆಧುನಿಕತೆಗಳೆರಡೂ ಸಂಪೂರ್ಣ ಸುಳ್ಳೂ ಅಲ್ಲ, ನಿಜವೂ ಅಲ್ಲ. ಈ ಎರಡೂ ವ್ಯವಸ್ಥೆಗಳ ಒಳಿತಿನ ಅಂಶಗಳನ್ನು ಕೂಡಿಸಿಕೊಂಡು ಬಳಸಿ ಬದುಕಿದಾಗ ಮಾತ್ರ ಆರೋಗ್ಯಕರವಾದ ನವ ಸಮಾಜ ನಿರ್ಮಾಣ ಸಾಧ್ಯ. ಈ ಹಿನ್ನೆಲೆಯಲ್ಲಿ 'ಕುವೆಂಪು'ರವರು ಆಧುನಿಕತೆಯನ್ನು ಕುರಿತು "ಪ್ರಾಚೀನ ಶಾಶ್ವತ ಮೌಲ್ಯದ ಸಾರಸರ್ವಸ್ವವನ್ನು ಹೀರಿಕೊಂಡು ಅರ್ವಾಚೀನರ ಜಗದ ವಿಶಾಲ ವೈಜ್ಞಾನಿಕ ದೃಷ್ಟಿಯಿಂದ ಪೋಷಿತವಾಗಿ ಆಗಮಿಕದತ್ತ ಸಾಗಿ, ನೂತನ ಮೌಲ್ಯಗಳನ್ನು ಸಾಧಿಸುವಾತನೇ ನವೀನ ಅಥವಾ ನಿಜವಾದ ಮಾನವನಾಗುತ್ತಾನೆ." (ಕುವೆಂಪು, ನೆನಪಿನ ದೋಣಿಯಲ್ಲಿ, ೧೯೯೩, ಪುಟ-೭೪೪) ಎಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಗಳು ಅವರ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳ ಹೂವಯ್ಯ ಮತ್ತು ಮುಕುಂದಯ್ಯನಲ್ಲಿ ಕಾಣಬಹುದು. ಆಧುನಿಕ ಶಿಕ್ಷಣವನ್ನು ಪಡೆದ ಈ ಇಬ್ಬರೂ ಪರಂಪರೆಯ ಸತ್ವವನ್ನು ತುಂಬಿಕೊಂಡವರು. ಆದರೆ ಹೂವಯ್ಯನಿಗಿಂತ ಮುಕುಂದಯ್ಯನಿಗೆ ಕುವೆಂಪುರವರ ಮಾತುಗಳು ಹೆಚ್ಚು ಅನ್ವಯವಾಗುತ್ತವೆ. ಏಕೆಂದರೆ ಅನ್ಯ ಮತ್ತು ಸ್ವ ಸಂಸ್ಕೃತಿಗಳೆರಡನ್ನೂ ಅಳವಡಿಸಿಕೊಂಡು ಅದರೊಳಗೆ ಬಿಡುಗಡೆಯ ಹಾದಿಯನ್ನು ಕಂಡುಕೊಳ್ಳುವಲ್ಲಿ ಹೂವಯ್ಯನಿಗಿಂತ ಮುಕುಂದಯ್ಯನ ಪಾತ್ರ ಹೆಚ್ಚು ಅರ್ಥಪೂರ್ಣವಾಗಿ ಮೂಡಿ ಬಂದಿದೆ.

ಹೀಗೆ ಇಂದು ಪರಂಪರೆ ಮತ್ತು ಆಧುನಿಕತೆಯಲ್ಲಿನ ಒಳಿತುಗಳನ್ನು ಅಳವಡಿಸಿಕೊಂಡು, ಅವುಗಳ ಯಜಮಾನ್ಯದ ಹಿಡಿತಗಳಲ್ಲಿ ಸಿಕ್ಕಿಕೊಳ್ಳದೆ, ಬಿಡುಗಡೆಯ ಹಾದಿಗಳನ್ನು ಕಂಡುಕೊಳ್ಳುವುದು ಸ್ವಂತಿಕೆ ಮತ್ತು ಸೃಜನಶೀಲತೆಯ ಲಕ್ಷಣವಾಗಿದೆ. ಹಾಗಾದಾಗ ಮಾತ್ರವೇ ಈ ಎರಡೂ ವ್ಯವಸ್ಥೆಗಳಿಗೆ ಬಲಿಪಶುವಾಗದೆ ಬಿಡುಗಡೆಗೊಳ್ಳಲು ಸಾಧ್ಯ ಹಾಗೂ ನಿಜ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಾಗುತ್ತದೆ.

ತೇಜಸ್ವಿ ಕಥನದಲ್ಲಿ ಆಧುನಿಕತೆ ಮತ್ತು ಪರಂಪರೆ ಮುಖಾಮುಖಿ

ತೇಜಸ್ವಿಯವರ ಆರಂಭದ ಕಥನವು ಪರಂಪರೆಯ ಹಿಡಿತಗಳನ್ನು ಜಾತೀಯತೆಯ ಕರಾಳಮುಖಗಳು ಮತ್ತು ಕೌಟುಂಬಿಕ ಕ್ರೌರ್ಯಗಳ ಹಿನ್ನೆಲೆಯಲ್ಲಿ ಗುರುತಿಸುತ್ತದೆ. ಪ್ರತಿಯೊಂದು ಹಂತದಲ್ಲೂ ಇವರ ಕಥನವು ಆಧುನಿಕತೆಯನ್ನು ಜಾತಿಯಿಂದ, ವರ್ಗದಿಂದ ಅಧಿಕಾರದ ದುರಾಸೆಯಿಂದ ದಲ್ಲಾಳಿಗಳಂತೆ ಇಡೀ ಸಮಾಜವನ್ನು ಮೌಢ್ಯದ ಕೂಪಕ್ಕೆ ತಳ್ಳಿ

ಲಾಭ ಮಾಡುತ್ತಿರುವ ಪರಂಪರೆಯ ಯಾಜಮಾನ್ಯವನ್ನು ಒದ್ದೋಡಿಸುವ ಅಸ್ತ್ರವಾಗಿ, ಬಿಡುಗಡೆಯ ಶಕ್ತಿಯಾಗಿ ಕಾಣುತ್ತದೆ. ಪರಂಪರೆಯು ಉಂಟುಮಾಡಿರುವ ಸಾಮಾಜಿಕ ರೋಗಗಳಿಗೆ ಆಧುನಿಕತೆಯೇ ಮದ್ದು ಎಂದು ಇವರ ಕಥನ ಭಾವಿಸುತ್ತದೆ. ಇದು ಅವರ ಆರಂಭದ ಕಥಾ ಸಂಕಲನ ಹುಲಿಯೂರಿನ ಸರಹದ್ದು ಕೃತಿಯಲ್ಲಿನ ಕಥೆಗಳ ಸಾರದಲ್ಲಿ ಧ್ವನಿತವಾಗುತ್ತದೆ.

ಆಧುನಿಕತೆ ಮತ್ತು ಪರಂಪರೆ ಎರಡನ್ನೂ ಬೈನರಿ ವಿರೋಧಿ ಸಂಗತಿಗಳು ಎಂಬ ದೃಷ್ಟಿಯನ್ನು ಅವರ ಪ್ರಾರಂಭದ ಬರಹಗಳಲ್ಲಿ ಕಾಣಬಹುದು. ಆದರೆ ಈ ಎರಡರಲ್ಲೂ ಇರುವ ಒಳಿತು ಮತ್ತು ಕೇಡು ಎರಡನ್ನೂ ಕಾಣುವ ದೃಷ್ಟಿಯುಅವರ ಆನಂತರದ ನಿರೂಪಣೆಗಳಲ್ಲಿ ಕಾಣುತ್ತದೆ. ಮೊದಮೊದಲು ಆಧುನೀಕರಣ ಮತ್ತು ಜಾಗತೀಕರಣವನ್ನು ಸಮರ್ಥಿಸುವ ಮಾತುಗಳು ಬಂದರೂ ಆನಂತರದಲ್ಲಿ ಅದರ ಕರಾಳ ಮುಖಗಳು ಒಂದೊಂದಾಗಿ ಅನಾವರಣ ಆಗುವುದನ್ನು ನೋಡಬಹುದು. “ಮಲೆನಾಡು ಹಾಳಾಯ್ತು, ಈ ಕೃಷಿ ಮಾರ್ಕೆಟ್‌ನ ನಂಬ್ಕೊಂಡು ಬಯಲು ಸೀಮೆ ರೈತರು ಮಾನ ಮುಚ್ಕಳಕ್ಕೆ ಬಟ್ಟೆಕೊಳ್ಳಲು ಆಗದಂತಹ ಪರಿಸ್ಥಿತಿ ಬಂದಿದೆ. ಇಂಥದ್ರಲ್ಲಿ ಹೊಸ ಮಾರ್ಕೆಟ್, ಹೊಸ ಸವಾಲು ಸೃಷ್ಟಿಯಾಗಲಿ ಬಿಡೋ. ಜಾಗತೀಕರಣದಿಂದ ಸಂಸ್ಕೃತಿ ಹಾಳಾಗುತ್ತೆ, ಬದುಕು ಹಾಳಾಗುತ್ತೆ ಅಂತ ಬೊಬ್ಬೆ ಹಾಕ್ತೀರಲ್ಲ ಯಾವ್ದೂ ಹಾಳಾಗಲ್ಲ ತಿಳ್ಕಳ್ಳಿ, ಕೊಡೋದು, ತಗೊಳ್ಳೋದು ಜ್ಞಾನದ ವಿಚಾರದಲ್ಲಾಗ್ಲಿ, ವಸ್ತುಗಳ ವಿಚಾರದಲ್ಲಾಗ್ಲಿ ನಡೀಬೇಕು ಎಂದರು.... ಇದು ಕೊಂಡ್ಕೊಳ್ಳೋ ವ್ಯಾಪಾರ ಅಲ್ಲ ಅನ್ಸುತ್ತೆ ಕಣೋ, ಇದು ತಿನ್ನೋ ಮಾರಿ ಇದ್ದಂಗೇಂತ ಡೌಟಾಗುತ್ತೆ ಎಂದರು.” (ಮಂಜುನಾಥ ಅದ್ದೆ, ತೇಜಸ್ವಿ ನೆನಪು, ೨೦೦೭, ಪುಟ-೧೨೫.)

ಜಾತಿ, ಮನೆತನ, ಸಂಪ್ರದಾಯ ಎಲ್ಲವೂ ಬ್ರಾಹ್ಮಣರ ಬೊಗಳೆ ಎಂಬ ತಿಳುವಳಿಕೆ ಇರುವ ತೇಜಸ್ವಿಯವರ ಕಥನ ಕೊನೆಗೆ ಜಾತಿಯ ಬಗೆಗಿನ ಧೋರಣೆಗಳಿಂದ ಹೊರ ಬಂದಿದೆ. ಹಾಗೆಯೇ ಇಂಗ್ಲೀಷ್ ಶಿಕ್ಷಣವೇ ಪರಂಪರೆಯ ಎಲ್ಲಾ ಹಿಡಿತಗಳಿಂದ ಮುಕ್ತಗೊಳಿಸುವ ಮಾರ್ಗ ಎಂಬ ನಂಬಿಕೆ ಮತ್ತು ಶಿಕ್ಷಣದ ಮೂಲಕ ಈ ನೆಲವನ್ನು ನೋಡುವ ಕ್ರಮದಿಂದಲೂ ಹೊರಬಂದಿದೆ. ಹೀಗೆ ಪರಂಪರೆಯನ್ನು ದೋಷಿ ಸ್ಥಾನದಲ್ಲಿ ನಿಲ್ಲಿಸಿ ನೋಡುವ ಅವರ ಪ್ರಾರಂಭದ ಸಾಹಿತ್ಯ ಸನಾತನಿ ಸಂಸ್ಕೃತಿಯ ಹಿಂಸೆಯನ್ನು ಹೆಚ್ಚಾಗಿಯೇ ಕಾಣಿಸುತ್ತದೆ. ಇದಕ್ಕೆಲ್ಲಾ ಆಧುನಿಕತೆಯೇ ಪರಿಹಾರ ಎಂದುಕೊಂಡಿದ್ದರೂ ಅದೂ ಸಹ ಜಡಗೊಳ್ಳುವ ಮತ್ತು ಪರ್ಯಾಯ ಯಾಜಮಾನ್ಯವನ್ನೇ ಸ್ಥಾಪಿಸುತ್ತಿರುವ ಅಪಾಯವನ್ನು ಆನಂತರ ತೇಜಸ್ವಿ ಕಥನ ಮನಗಂಡಿದೆ.

ಪರಂಪರೆಯ ಯಾವ ವಿಚಾರಗಳು ಸಮಾಜದ ಜಡತೆಗೆ ಕಾರಣವಾಗಿವೆಯೋ ಅವೇ ಆಧುನಿಕತೆಯನ್ನು ತನ್ನಿಚ್ಛೆಯಂತೆ ಬಳಸಿಕೊಂಡು ಜಡಗೊಳಿಸುವುದನ್ನು ತೇಜಸ್ವಿ ಕಥನದಲ್ಲಿ ಕಾಣಬಹುದು. ಈ ಜಡಗೊಂಡ ಸಮಾಜ ಚಲನಶೀಲತೆಯನ್ನು ಪಡೆಯಬೇಕೆಂದರೆ ಆಧುನಿಕ ಸಾಧನ ಸಾಮಾಗ್ರಿಗಳಿಗಿಂತ ಆಧುನಿಕ ಪ್ರಜ್ಞೆಯುಳ್ಳ, ಸ್ಥಳೀಯತೆಯನ್ನು ಕುರಿತು ಗೌರವವುಳ್ಳ ವ್ಯಕ್ತಿಗಳ ಪ್ರವೇಶ ಬೇಕಾಗುತ್ತದೆ. ಸ್ಥಗಿತಗೊಂಡ ಈ ಸಮಾಜವನ್ನು ನಿರ್ಲಕ್ಷಿಸದೆ ಕಣ್ಣು ತೆರೆದು ನೋಡುವಂತೆ ಅದರಲ್ಲಿನ ಜೀವಾತ್ಮಗಳನ್ನು ಗುರುತಿಸುವಂತೆ ಇವರ ಕರ್ವಾಲೋ, ಕುಬಿ ಪಾತ್ರಗಳು ಮಾಡುತ್ತವೆ. ಇವರು ಜಡಗೊಂಡ ಸಮಾಜಕ್ಕೆ ಚಾಲಕ ಶಕ್ತಿಯಾಗಿ ಕಾಣುತ್ತಾರೆ. ಇದು ತೇಜಸ್ವಿ ಕಥನವು ಆಧುನಿಕತೆ ಮತ್ತು ಪರಂಪರೆಯನ್ನು ಗ್ರಹಿಸುವ ವಿಧಾನವಾಗಿದೆ. ಪರಂಪರೆಯು ಕಾಲೋಪಾದಿಯಾಗಿ ಹರಿಯುವಾಗ ಅದನ್ನು ನಿರ್ದಿಷ್ಟ ದಿಕ್ಕಿನೆಡೆಗೆ ತಿರುಗಿಸಿ ಅದರ ಮೌಲ್ಯಗಳು ಉಳಿಯುವಂತೆ ಮಾಡುವ ಹೊಸತನವನ್ನು ಆಧುನಿಕತೆ ನೀಡಬೇಕು; ಪರಂಪರೆ ಸಂಪೂರ್ಣ ಜಡತೆಯಿಂದ ಕೂಡಿರುವುದಿಲ್ಲ ಅದರ ಆಂತರ್ಯದಲ್ಲಿ ನಿಧಾನಗತಿಯ ಚಲನೆ ಇದ್ದೇ ಇರುತ್ತದೆ. ಅದರ ಧನಾತ್ಮಕ ವೇಗವನ್ನು ಹೆಚ್ಚಿಸುವ ಕಾರ್ಯವನ್ನು ಆಧುನಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಮಾಡಬೇಕು ಎಂಬುದು ತೇಜಸ್ವಿ ಕಥನದ ಇಂಗಿತವಾಗಿದೆ.

ಹೀಗೆ ಪರಂಪರೆಯನ್ನು ಸಂಪೂರ್ಣ ನಿರಾಕರಿಸದೆ, ಜಡವೆಂದು ತಿರಸ್ಕರಿಸದೆ, ಆಧುನಿಕತೆಯನ್ನು ಕುರುಡಾಗಿ ಅಪ್ಪಿಕೊಳ್ಳದೆ ಎರಡರಿಂದಲೂ ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡು ನಡೆಯಬೇಕಾದ ಪರ್ಯಾಯಗಳ ಹುಡುಕಾಟವನ್ನು ತೇಜಸ್ವಿ ಕಥನ ನಡೆಸುತ್ತದೆ. ಕರ್ವಾಲೋ, ಜುಗಾರಿಕ್ರಾಸ್ ಕಾದಂಬರಿಗಳು ಇದಕ್ಕೆ ಉದಾಹರಣೆಗಳಾಗಿವೆ. ಆಧುನಿಕತೆಯು ಗ್ರಾಮಗಳಲ್ಲಿ ಉಂಟುಮಾಡುತ್ತಿರುವ ಅಶಾಂತಿ ಮತ್ತು ವಿಘಟನೆಗಳಿಗೆ ಪರಂಪರೆಯನ್ನೂ, ಪರಂಪರೆಯ ಜಡ್ಡುಗಟ್ಟುವಿಕೆಗೆ ಆಧುನಿಕತೆಯನ್ನು ಔಷಧಿಯಾಗಿ ಅಥವ ಪರಿಹಾರವಾಗಿ ಪರಿಗಣಿಸುವ ತೇಜಸ್ವಿ ಕಥನ, ಯಾವುದನ್ನೂ ನಿರಾಕರಿಸದೆ, ಸಂಪೂರ್ಣ ಒಪ್ಪಿ ಅಪ್ಪಿಕೊಳ್ಳದೆ ಈ ಎರಡಕ್ಕಿಂತ ಭಿನ್ನ ಹಾದಿಗಳನ್ನು ಅವುಗಳಲ್ಲೇ ಕಾಣಲು ಯತ್ನಿಸುತ್ತದೆ.

ಬದುಕಿಗೊಂದು ಉದ್ದೇಶವೇ ಇಲ್ಲದಿರುವಾಗ ಯಾವುದೋ ಒಂದು ಗುರಿ ಸಾಧನೆಗಾಗಿ ಬದುಕುತ್ತಾ ಹೋಗುವುದಕ್ಕಿಂತ ಸುತ್ತಲಿನ ಜಗತ್ತಿನ ಕಡೆ ಕಣ್ಣು ತೆರೆದು ನೋಡುತ್ತಾ ತನ್ನ ಅವಶ್ಯಕತೆಗೆ ಬೇಕಾದಷ್ಟನ್ನು ಪಡೆದುಕೊಂಡು ಸಾಗುವ ದೃಷ್ಟಿ ಬೆಳೆಸಿಕೊಳ್ಳುವುದು ಉತ್ತಮ ಎಂಬುದು ತೇಜಸ್ವಿಯವರ ಕಥನದ ತತ್ವವಾಗಿದ್ದು, ಎಲ್ಲವನ್ನೂ ಪಡೆದುಕೊಳ್ಳುತ್ತೇನೆ, ಎಲ್ಲವನ್ನೂ ಗ್ರಹಿಸುತ್ತೇನೆ ಎಂದುಕೊಳ್ಳುತ್ತಾ ಬದುಕನ್ನು ನಿರರ್ಥಕಗೊಳಿಸುವುದಕ್ಕಿಂತ ವ್ಯಕ್ತಿ ತನ್ನಿಂದ, ತನ್ನ ಅತಿಯಾದ ಮಹತ್ವಾಕಾಂಕ್ಷೆಗಳಿಂದ ಬಿಡುಗಡೆ ಪಡೆಯುವುದು ಮುಖ್ಯ ಎಂಬ ನಿಲುವಿನಲ್ಲಿ ಅವರ ಕಥನ ಆಧುನಿಕತೆಯನ್ನು ಗುರುತಿಸಿಕೊಳ್ಳುತ್ತದೆ. ಆಧುನಿಕ ಸಂವೇದನೆಯುಳ್ಳ ಮನುಷ್ಯ

ಎಲ್ಲವನ್ನೂ ತಡೆಯುತ್ತೇನೆ, ನಿಯಂತ್ರಿಸುತ್ತೇನೆ ಎಂದು ಸಾಗಿ ಪ್ರಕೃತಿಯ ನಿಗೂಢದ ನಡುವೆ ವಿಫಲನಾಗುವುದನ್ನು ಕಾಣಿಸುವ ಇವರ ಕಥನ ಯಾರನ್ನೂ, ಯಾವುದನ್ನೂ ನಿಯಂತ್ರಿಸದೆ ಅದರೊಂದಿಗೆ ಸಾಗುವುದರಲ್ಲಿ ಆಧುನಿಕತೆಯನ್ನು ಕಂಡುಕೊಳ್ಳಬೇಕಾಗಿದ್ದು, ಆಧುನಿಕ ಶಿಕ್ಷಣ ಮತ್ತು ಅದರ ಇತರ ಪರಿಕರಗಳು ಕಲಿಸದ ಜೀವನ ಪಾಠವನ್ನು ಪರಿಸರ ಕಲಿಸುತ್ತದೆ ಎಂಬ ಅಭಿಪ್ರಾಯಕ್ಕೆ ಬರುತ್ತದೆ.

ಸಾಮಾಜಿಕ ಅಧ್ಯಯನಗಳಲ್ಲಿ ಪರಂಪರೆಯೊಳಗಿನ ಜಾತಿಪದ್ಧತಿ, ಮೂಢನಂಬಿಕೆಗಳು, ಪಾರಂಪರಿಕ ಯಾಜಮಾನ್ಯ, ಕೌಟುಂಬಿಕ ಕ್ರೌರ್ಯ ಮತ್ತು ಹಿಡಿತಗಳ ವಿರುದ್ಧದ ಧ್ವನಿಯನ್ನು ಆಧುನಿಕತೆಯ ರೂಪದಲ್ಲಿ ಕಾಣಲಾಗುತ್ತದೆ. ಪರಂಪರೆಯ ಎಲ್ಲಾ ದಮನಕಾರಿ ಚಟುವಟಿಕೆಗಳನ್ನು ಮೀರಲು ಆಧುನಿಕ ಪ್ರಜ್ಞೆಯ ಅನಿವಾರ್ಯತೆಯನ್ನು ಬಯಸುತ್ತೇವೆ. ಆದರೆ ತೇಜಸ್ವಿ ಕಥನವು ಪರಂಪರೆ ಮತ್ತು ಆಧುನಿಕತೆಗಳೆರಡನ್ನೂ ಗ್ರಹಿಸುವ ವಿಧಾನಗಳೇ ಬೇರೆ. ಈ ಎರಡೂ ತಮ್ಮೊಳಗೆ ಹುದುಗಿಸಿಕೊಂಡಿರುವ ಯಾಜಮಾನ್ಯ-ಗುಲಾಮ ಅಥವಾ ಶೋಷಕ-ಶೋಷಿತ ಅಥವಾ ಮೇಲು-ಕೀಳು ಭೇದಗಳನ್ನು ಅದು ಗುರುತಿಸುತ್ತದೆ. ಆಧುನಿಕತೆ ಮತ್ತು ಪರಂಪರೆಗಳು ಪರಸ್ಪರ ಯಾವುದನ್ನು ಖಂಡಿಸಿ ಬಿಡುಗಡೆಯನ್ನು ಬಯಸುತ್ತವೆಯೋ ಅದೇ ಅಂಶಗಳನ್ನು ತನ್ನೊಡಲಿನಲ್ಲಿ ಅಡಗಿಸಿಕೊಂಡಿರುವುದನ್ನೂ ಗುರುತಿಸುವ ತೇಜಸ್ವಿ ಕಥನ ಅದಕ್ಕೆ ಪರಿಹಾರಗಳನ್ನು ಅಲ್ಲಿಯೇ ಕಾಣಿಸುತ್ತದೆ.

ಆಧುನಿಕತೆ ಮತ್ತು ಪರಂಪರೆಯೊಳಗಿನ ಯಾಜಮಾನ್ಯದ ಹಿಡಿತ ಅಥವಾ ದೌರ್ಜನ್ಯಗಳನ್ನು ಕೆಳವರ್ಗಗಳು ನೇರವಾಗಿ ಪ್ರತಿಭಟಿಸಲಾಗದೆ ತಮ್ಮದೇ ನೆಲೆಗಳಲ್ಲಿ ಪರ್ಯಾಯಗಳನ್ನು ಕಂಡುಕೊಳ್ಳುತ್ತಿರುವುದನ್ನೂ ತೇಜಸ್ವಿ ಕಥನ ಗುರುತಿಸುತ್ತದೆ. ಇದು ನಿರಂತರ ನಡೆಯಬೇಕಾದ ಪ್ರಕ್ರಿಯೆಯಾಗಿದೆ. ಲಿಂಗ ಬಂದ ಕಥೆಯಲ್ಲಿ ಲಿಂಗನೊಳಗಿನ ಶೋಷಣೆಯ ವಿರುದ್ಧದ ಧ್ವನಿಯನ್ನು ಈ ರೀತಿ ಕಾಣಿಸುತ್ತಾರೆ. "ಲಿಂಗ ಬೆಚ್ಚಗೆ ಇಹ-ಪರಗಳ ಪರಿವೆಯಿಲ್ಲದೆ ಬೆಂಕಿಯನ್ನೇ ನೋಡುತ್ತಾ ಕುಳಿತಿದ್ದ. ಅವನ ತೆರೆದ ಎರಡೂ ಕಣ್ಣುಗಳಲ್ಲಿಯೂ ಒಲೆಯ ಬೆಂಕಿ ಪ್ರತಿಬಿಂಬಿತವಾಗಿ ಎರಡೂ ಚಿಕ್ಕ ಬೆಂಕಿಗಳು ಉರಿಯುತ್ತಿದ್ದವು. ಅವು ಒಲೆಯ ಬೆಂಕಿ ಓಲಾಡಿಸಿದಾಗ ಓಲಾಡಿ, ಧಗಧಗಿಸಿದಾಗ ಧಗಧಗಿಸಿ, ಕಿಡಿಕಾರಿದಾಗ ಕಿಡಿಕಾರುತ್ತಿದ್ದವು." (ಹುಲಿಯೂರಿನ ಸರಹದ್ದು ಕಥಾ ಸಂಕಲನ, ೨೦೦೪, ಪುಟ-೦೪)

ಹೀಗೆ ಪರಂಪರಾಗತವಾಗಿ ಯಾಜಮಾನ್ಯ ಸಮುದಾಯವು ನಡೆಸುತ್ತಿರುವ ದಬ್ಬಾಳಿಕೆಯನ್ನು ಸಹಿಸಲಾಗದ ಕೆಳಜಾತಿ ವರ್ಗಗಳ ಜನ ತಮ್ಮಲ್ಲಿ ತುಂಬಿಕೊಂಡಿರುವ ರೋಷದ ಬೆಂಕಿಯನ್ನು ತಮ್ಮ ಕಣ್ಣುಗಳಲ್ಲಿ ವ್ಯಕ್ತಪಡಿಸುವ ರೂಪಕವನ್ನು ತೇಜಸ್ವಿಯವರು ಕಾಣಿಸುತ್ತಾರೆ. ದಬ್ಬಾಳಿಕೆ ಅತಿಯಾದಾಗ ಸೌಮ್ಯ ರೀತಿಯಲ್ಲಿಯೇ ಪರ್ಯಾಯಗಳನ್ನು

ಕಂಡುಕೊಳ್ಳುವ ವಿಧಾನಗಳು ಆಧುನಿಕತೆಯ ಹಿಂಸೆಯ ಪರಿಹಾರಕ್ಕಿಂತ ಮೇಲೆನಿಸುತ್ತವೆ. ಲಿಂಗ ಬೆಂಕಿ ಕಾಯಿಸುತ್ತಾ ಕುಳಿತಿದ್ದಾಗ ಅಲ್ಲಿಗೆ ಬಂದ ಕಿಟ್ಟಿ ಸರಿದು ಕೂರುವಂತೆ ಹೇಳುತ್ತಾನೆ. ಅದು ಮತ್ತೆ ಮತ್ತೆ ಪುನರಾವರ್ತನೆಯಾಗುತ್ತದೆ. ಹೀಗೆ ಸರಿದು ಸರಿದು ಮಳೆಯ ಇರಿಚಲಿಗೆ ಹೋಗಬೇಕಾದ ಸಂದರ್ಭದಲ್ಲಿ ಇದನ್ನು ನೇರವಾಗಿ ಪ್ರತಿಭಟಿಸಲು ಲಿಂಗನಿಗೆ ಹಿಂಜರಿಕೆ, ಏಕೆಂದರೆ ಕಿಟ್ಟಿ ಯಜಮಾನರ ಮಗ. ಹಾಗಾಗಿ ಲಿಂಗ ಒಂದು ಕಥೆಯನ್ನ ಸೃಷ್ಟಿಸಿ ತನ್ನ ಸಮಸ್ಯೆಯನ್ನು ನಿವಾರಿಸಿಕೊಳ್ಳುತ್ತಾನೆ. "ನಿಮ್ಮಂಗೇ ಇಂಗ್ಲಾಂದೀಲಿ ಒಬ್ಬ ಹಳೇ ಪೈಕದೋನು ನಂಗೆ ಅನ್ನ ಹೆಚ್ಗೆಬೇಕು, ಊಟ ಹೆಚ್ಗೆಬೇಕು, ಗದ್ದೆ ಮಾಡಕ್ಕೆ ಜಾಗ ಹೆಚ್ಗೆಬೇಕು, ಅಂತ ಸಿಕ್ಕಿಸಿಕ್ಕಿದಕ್ಕೆಲ್ಲಾ ಹೆಚ್ಗೆಬೇಕು ಅನ್ತಿದ್ದ ನೋಡಿ ಒಂದಿವಸ ಅವನ್ಹೆಣ್ತೀಗೆ..." (ಹುಲಿಯೂರಿನ ಸರಹದ್ದು ಕಥಾ ಸಂಕಲನ, ೨೦೦೪, ಪುಟ-೦೪) ಹೀಗೆ ಈ ಕಥೆ ಕಿಟ್ಟಿ ತನ್ನ ತಂಗಿಗೆ ಹೇಳುವ ಮೂಲಕ ಮುಂದುವರೆಯುತ್ತದೆ. ಅವನ ಹೆಂಡತಿಗೆ ಒಂದು ಮಗು ಜನಿಸಿ ಅದು ದಿನೇ ದಿನೇ ರಾಕ್ಷಸಾಕಾರವಾಗಿ ಬೆಳೆಯುತ್ತಿರುತ್ತದೆ. ಇದನ್ನು ಕಂಡ ಕೇರಿಯ ಜನ ಭಯಗೊಳ್ಳುತ್ತಾರೆ. ಕೊನೆಗೆ ಲಿಂಗನ ಅಜ್ಜ ಅದನ್ನು ಸಂಹಾರ ಮಾಡಿ ಜನತೆಯ ಭಯವನ್ನು ನಿವಾರಿಸುತ್ತಾನೆ. ಹೀಗೆ ಪರಂಪರೆಯೊಳಗಿನ ದಬ್ಬಾಳಿಕೆಯ ವಿರುದ್ಧ ಕೆಳ ಸಮುದಾಯಗಳು ಜನಪದ ಕಥೆಗಳನ್ನು ಸೃಷ್ಟಿಸಿ ಪರಿಹಾರಗಳನ್ನು ಕಂಡುಕೊಳ್ಳುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ. ಇಲ್ಲಿ ಮೇಲ್ಜಾತಿ, ಮೇಲ್ವರ್ಗಗಳು ಕಟ್ಟಿರುವ ಹುಸಿ ಸತ್ಯಗಳಿಂದ ಕೂಡಿದ ಚರಿತ್ರೆಯನ್ನು ಜನಪದ ಆಕರಗಳ ಮೂಲಕ ಮರುಕಟ್ಟಿಕೊಳ್ಳುವ ಅಗತ್ಯವಿದೆ ಹಾಗೇ ಕಟ್ಟಿಕೊಳ್ಳುವ ಚರಿತ್ರೆ ವಾಸ್ತವಕ್ಕೆ ಹೆಚ್ಚು ಸನಿಹವಾಗಿರುತ್ತದೆ ಎಂಬ ಧ್ವನಿಯೂ ಇದೆ.

ಪರಂಪರೆಯ ಎಲ್ಲಾ ರೋಗಗಳಿಗೂ ಆಧುನಿಕತೆಯೇ ಮದ್ದು ಎಂದು ಭಾವಿಸುವ ಸಮುದಾಯಕ್ಕೆ ಪರಂಪರೆಯೊಳಗಿನ ಜನ ಕಂಡುಕೊಂಡಿದ್ದ ಪರ್ಯಾಯಗಳನ್ನು ಮನಗಾಣಿಸಲು ತೇಜಸ್ವಿ ಕಥನ ಯತ್ನಿಸುತ್ತದೆ. ಹಾಗೆಯೇ ಇಂದಿನ ಆಧುನಿಕತೆ ಉಂಟುಮಾಡುತ್ತಿರುವ ದುರಾಸೆ, ಕೊಳ್ಳುಬಾಕ ಸಂಸ್ಕೃತಿಗಳಿಗೂ ಪರಂಪರೆಯ ಈ ಕಥೆ ಎಚ್ಚರಿಕೆಯನ್ನು ನೀಡುವಂತಿದೆ. ಆಧುನಿಕತೆ ಪ್ರವೇಶದಿಂದ ಗ್ರಾಮ ಸಮುದಾಯಗಳಲ್ಲಿ ಉಂಟಾಗಿರುವ ತಲ್ಲಣಗಳು, ಅವಕಾಶವಾದಿ ರಾಜಕಾರಣ, ಭ್ರಷ್ಟ ಪಂಚಾಯ್ತಿ ವ್ಯವಸ್ಥೆ, ಹಿಂಸೆಯ ಮತ್ತೊಂದು ರೂಪವೇ ಆಗಿರುವ ನಮ್ಮ ಪೋಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆ ಮುಂತಾದ ಸಮಸ್ಯೆಗಳಿಂದ ಕೂಡಿರುವ ಬೈರಾಪುರ ಎಂಬ ಗ್ರಾಮಕ್ಕೆ ವೈದ್ಯರಾಗಿ ಬಂದ ದೇಸೀ ಸತ್ವವುಳ್ಳ ಆಧುನಿಕ ತಿಳುವಳಿಕೆಯ ಕುಬಿ ಪರಿಹಾರವಾಗಿ ಕಾಣುತ್ತಾನೆ. ಅವನ ನಿರಂತರ ಪ್ರಯತ್ನ ಆ ಗ್ರಾಮದ ನೊಂದ ಸಮುದಾಯಕ್ಕೆ ಒಂದಷ್ಟು ನೆಮ್ಮದಿಯನ್ನಾದರೂ ನೀಡುತ್ತದೆ.

ಕರ್ವಾಲೋ ಕಾದಂಬರಿಯಲ್ಲಿ ಮಂದಣ್ಣನಿಗೆ ಜವಾನ ಕೆಲಸ ನೀಡದೇ ಅವನನ್ನು ಒಬ್ಬ ಪರಿಸರ ವಿಜ್ಞಾನಿಯಂತೆ ಕರ್ವಾಲೋ ಭಾವಿಸುತ್ತಾರೆ. ಇದು ತೇಜಸ್ವಿಯವರ ಕಥನವು ಆಧುನಿಕ ಜ್ಞಾನ ಮತ್ತು ದೇಸೀ ಜ್ಞಾನವನ್ನು ನೋಡಬೇಕಾದ ದೃಷ್ಟಿಕೋನವನ್ನು ಸಂಕೇತಿಸಿದಂತಿದೆ. ಹಾಗಾಗಿ ಕರ್ವಾಲೋ ದೇಸೀ ಮತ್ತು ಆಧುನಿಕ ಜ್ಞಾನಗಳ ಪ್ರತೀಕದಂತೆ ಅವರ ಕಥನ ಕಾಣುತ್ತದೆ. ಕುಬಿ ಮತ್ತು ಮಂದಣ್ಣ ಹಾಗೂ ಕರ್ವಾಲೋ ಪಾತ್ರಗಳ ಮೂಲಕ ತೇಜಸ್ವಿ ಕಥನವು ಪರಂಪರೆಯ ಜ್ಞಾನ ಮತ್ತು ಆಧುನಿಕ ತಿಳುವಳಿಕೆಗಳು ಸಮಾಜದ ಒಳಿತಿಗಾಗಿ ಹೇಗೆ ಒಟ್ಟಾಗಿ ಸಾಗಬೇಕು ಎಂಬ ತತ್ವಜ್ಞಾನವನ್ನು ಪ್ರತಿಪಾದಿಸುತ್ತದೆ. ಪರಂಪರೆಯ ಮೌಢ್ಯದ ಜೊತೆಗೆ ಅಲ್ಲಿರುವ ಶಕ್ತಿ ಸಾಧ್ಯತೆಗಳನ್ನು ಸಮಾನ ನೆಲೆಯಲ್ಲಿ ಗ್ರಹಿಸುತ್ತ; ಆದುನಿಕತೆಯೊಂದಿಗೆ ಅದನ್ನು ಒಳಗೊಳ್ಳುತ್ತ ಹೋಗುವುದು ತೇಜಸ್ವಿ ಕಥನದ ಮಾರ್ಗವಾಗಿದೆ. ಆಧುನಿಕತೆಯನ್ನಾಗಲಿ ಅಥವಾ ಪರಂಪರೆಯನ್ನಾಗಲಿ ಸಂಪೂರ್ಣವಾಗಿ ಕೇಡಿನ ಕೂಪವಾಗಿ ಕಾಣದೆ, ಪರಸ್ಪರ ವೈರಿ ನೆಲೆಗಳಾಗಿಯೂ ಕಾಣದೆ, ನಿರಂತರ ಸಂಘರ್ಷದ ಮತ್ತು ಬದಲಾವಣೆಯ ನೆಲೆಗಳಾಗಿ ತೇಜಸ್ವಿ ಕಥನವು ಕಾಣುತ್ತದೆ.

ತೇಜಸ್ವಿಯವರ ಕಥನವು ಪರಂಪರೆ ಮತ್ತು ಆಧುನಿಕತೆಯನ್ನು ನೋಡುವ, ಗ್ರಹಿಸುವ ಹಾಗೂ ಕಟ್ಟಿಕೊಡುವ ಕ್ರಮವೇ ವಿಭಿನ್ನವಾದುದು ಮತ್ತು ಸಮಂಜಸವಾದುದು ಕೂಡ. ಸಮಸ್ಯೆಗಳು ಎಲ್ಲಿ ಉದ್ಭವಿಸುತ್ತದೆಯೋ ಅಲ್ಲಿಯೇ ಅದಕ್ಕೆ ಪರಿಹಾರಗಳು ಇರುತ್ತವೆ. ಆದರೆ ಅವುಗಳನ್ನು ಕಾಣುವ ನಮ್ಮ ಸುತ್ತಲಿನ ಸಮಾಜವನ್ನು ತೆರೆದ ಕಣ್ಣಿನಿಂದ ನೋಡುವ ದೃಷ್ಟಿಕೋನ ನಮ್ಮಲ್ಲಿರಬೇಕು ಮತ್ತು ರೂಪಿಸಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ಅವರ ಕಥನ ವ್ಯಕ್ತಪಡಿಸುತ್ತದೆ.

ಮನುಷ್ಯನ ಎಲ್ಲಾ ಚಿಂತನೆಗಳ ಮೂಲಭೂತ ಉದ್ದೇಶ ಎಲ್ಲಾ ರೀತಿಯ ಹಿಡಿತಗಳಿಂದ ಬಿಡಿಸಿಕೊಂಡು ಹೊರ ಬರುವುದು. ಅದಕ್ಕಾಗಿ ಅವನು ನಿರಂತರ ಚಿಂತಿಸಿ ಶ್ರಮಿಸುತ್ತಿರುತ್ತಾನೆ. ಹಿತವಾದ ಹಿಡಿತವೂ ಸಹ ಅತಿಯಾದಾಗ ಉಸಿರುಗಟ್ಟಿಸುತ್ತದೆ. ಹುಲಿಯೂರಿನ ಸರಹದ್ದು ಕಥೆಯಲ್ಲಿ ಸೋಮುವಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಹುಲಿಯೂರಿನ ಮೌಢ್ಯ ಪರಿಸರ, ಸಂಪ್ರದಾಯಗಳು, ಜಾತಿತಾರತಮ್ಯ, ಕೌಟುಂಬಿಕ ಹಿಡಿತಗಳಿಂದ ಬೇಸತ್ತು ಅದರಿಂದ ಹೊರಬರುವುದೇ ತನ್ನ ಮೂಲ ಗುರಿ ಎಂದು ಭಾವಿಸಿ ಹೊರ ಬರಲು ಪ್ರಯತ್ನಿಸುತ್ತಿರುತ್ತಾನೆ. ಇಲ್ಲಿ ಸನಾತನಿ ಆಲೋಚನೆಗಳು ಮತ್ತು ಕ್ರಿಯೆಗಳ ಹಿಡಿತ ಬಲವಾಗಿದೆ. ಅದನ್ನು ತಿದ್ದಲು ಅಸಾಧ್ಯ. ಹಾಗಾಗಿ ಅದರಿಂದ ಹೊರಬರುವುದೇ ಅದಕ್ಕಿರುವ ಪರಿಹಾರ ಎಂದು ಸೋಮು ನಿರ್ಧರಿಸುತ್ತಾನೆ. ಈ ಕಥೆಯಲ್ಲಿ ಬರುವ ಗರುಡ ಈ ಎಲ್ಲಾ ಹಿಡಿತಗಳಿಂದ ಸ್ವತಂತ್ರಗೊಳಿಸುವ ಅಸ್ತ್ರದಂತೆ ಕಾಣುತ್ತದೆ. ಹುಲಿಯೂರಿನ ಸಾಂಪ್ರದಾಯಿಕ ಪರಿಸರ, ಜಾತಿ, ಕೌಟುಂಬಿಕ

ಸಂಬಂಧಗಳು ತನ್ನನ್ನು ಬಂಧಿಸಿ ತಿಂದು ಮುಗಿಸುತ್ತವೆ ಎಂದು ಭಾವಿಸುತ್ತಾನೆ. ಇಲ್ಲಿನ ಇಡೀ ವ್ಯವಸ್ಥೆಯನ್ನು ಅವಲೋಕಿಸುತ್ತಾನೆ. ಈ ಅವಲೋಕನದಲ್ಲಿ ಒಂದು ಜೀವಿ ಮತ್ತೊಂದು ಜೀವಿಯನ್ನು ಬಲಿತೆಗೆದುಕೊಳ್ಳುವುದು ಕಾಣುತ್ತದೆ. ಹೆಂಟೆಯೊಂದು ತನ್ನ ಮರಿಗಳನ್ನು ಕಳೆದುಕೊಂಡು ಮರಿಯ ಸತ್ತ ದೇಹದ ಮುಂದೆಯೇ ಗೆದ್ದಲು ಹುಳುಗಳನ್ನು ತಿನ್ನುತ್ತಿರುತ್ತದೆ. ಇದು ಇಡೀ ಪರಂಪರೆಯು ತನ್ನ ಮೌಲ್ಯಗಳನ್ನು ಕಳೆದುಕೊಂಡು ಕೊಳೆತ ಶವದಂತೆ ನಾರುತ್ತಿದ್ದರೂ ತನ್ನ ಅಸ್ತಿತ್ವಕ್ಕಾಗಿ ಇನ್ನೊಂದು ಜೀವಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿರುವುದರ ಸಂಕೇತವಾಗಿದೆ. "ಅಲ್ಲೇ ತಾಯಿ ಹೆಂಟೆ ಶಿಶುವಿನ ಶವದ ಇದಿರೇ ಮಳೆ ಹುಳು ಮತ್ತು ಗೆದ್ದಲು ಹುಳುಗಳು ಬುಳು ಬುಳು ಹೊರನುಗ್ಗುತ್ತಿದ್ದ ತೂತೊಂದರ ಬಳಿ ನಿಂತು ಆ ಹುಳುಗಳೆನ್ನೆಲ್ಲಾ ಒಂದೇ ಸಮನೆ ಗುಳುಂ ಎಂದು ಗುಳುಕಾಯಿಸುತ್ತಿತ್ತು." (ಹುಲಿಯೂರಿನ ಸರಹದ್ದು, ೨೦೦೪, ಪುಟ-೩೭)

ಇಡೀ ಪರಂಪರೆಯು ತನ್ನಲ್ಲಿನ ಕೇಡುಗಳನ್ನು ಮುಚ್ಚಿಕೊಳ್ಳುತ್ತಾ, ಚಲನಶೀಲತೆಯ ಎಲ್ಲಾ ಸಾಧ್ಯತೆಗಳನ್ನು ನಿರ್ನಾಮ ಮಾಡುತ್ತಾ ತನ್ನ ಅಧಿಕಾರದ ಹಿಡಿತಗಳನ್ನು ಬಲಗೊಳಿಸಿಕೊಳ್ಳುವಲ್ಲಿ ನಿರತವಾಗಿದೆ. ಅಧಿಕಾರ ದಾಹದಿಂದ ತನ್ನ ಕ್ರೌರ್ಯವನ್ನು ವಿಸ್ತರಿಸಿಕೊಳ್ಳುತ್ತಿದೆ. ಹೊಸತನವನ್ನು ಶತ್ರುವಾಗಿ ಪರಿಗಣಿಸಿದೆ. ಈ ಎಲ್ಲವುಗಳಿಂದ ರೋಸಿಹೋಗಿರುವ ಸೋಮು ಎಂಬ ಆಧುನಿಕ ಸಮುದಾಯಕ್ಕೆ ಈ ಗರುಡನೇ ಬಿಡುಗಡೆಯ ಸೂಚಕವಾಗಿ ಅದನ್ನು ಆಹ್ವಾನಿಸುತ್ತಾನೆ. ಆದರೆ ಈ ಗರುಡನೇ ತನ್ನ ಕಾಲಿನ ಉಗುರುಗಳನ್ನು ಅಂಗೈಯೊಳಗೆ ಸೇರಿಸಿ ಹಿಂಸೆ ನೀಡುವುದು. ನೋವು ತಾಳಲಾರದೆ ಸೋಮು ಗರುಡನನ್ನು ಬಾಯಲ್ಲಿ ಕಚ್ಚಿ ಕೊಲ್ಲುವುದು ವಿಪರ್ಯಾಸ. ಅನ್ಯರ ಮೂಲಕ ಬಿಡುಗಡೆ ಪರಂಪರೆಗಿಂತಲೂ ಹಿಂಸಾತ್ಮಕವಾದುದು ಹಾಗಾಗಿ ಪರಂಪರೆಯಲ್ಲಿಯೇ ಪರ್ಯಾಯಗಳನ್ನು ಹುಡುಕಬೇಕು ಎಂಬುದು ತೇಜಸ್ವಿ ಕಥನವು ನೀಡುವ ತಿಳುವಳಿಕೆಯಾಗಿದೆ. ಇಲ್ಲಿ ಪರಂಪರೆ, ಆಧುನಿಕತೆ ಮತ್ತು ಇವೆರಡರ ನಡುವೆ ಸಿಕ್ಕಿ ನರಳುತ್ತಿರುವ ಸಮುದಾಯವನ್ನು ಹೇಂಟೆ, ಗರುಡ ಮತ್ತು ಗೆದ್ದಲು ಹುಳುಗಳ ಮೂಲಕ ಸಂಕೇತಿಸಲಾಗಿದೆ. ಸೋಮುವಿಗೆ ಕೊನೆಗೆ ಪ್ರೀತಿಯೂ ಸಹಾ ಬಿಡುಗಡೆಗೆ ಅಡ್ಡಿಯಂತೆ ತೋರಿ ಪ್ರೀತಿಯ ನಳಿನಾಕ್ಷಿಗಿಂತ ಹುಲಿಯೂರಿನ ಸರಹದ್ದಿನಿಂದ ಬಿಡುಗಡೆಗೊಳ್ಳುವುದೇ ಮುಖ್ಯವಾಗುತ್ತದೆ. ಇಲ್ಲಿ ಆಧುನಿಕ ಮನಸ್ಥಿತಿಯ ಸೋಮು ತನ್ನ ನೆಲದಿಂದ ಪರಕೀಯನಂತಾಗಿ ಅಲ್ಲಿಂದ ಪಲಾಯನ ಮಾಡಲು ಯತ್ನಿಸುವುದನ್ನು ನೋಡಬಹುದು.

"ಹುಲಿಯೂರಿನ ಸರಹದ್ದಿನಿಂದ ಪಾರಾಗಲೇಬೇಕು, ಅಯ್ಯೋ ನನ್ನ ನಳಿನಾಕ್ಷಿಯನ್ನು ನಾನು ಪ್ರೀತಿಸುತ್ತೇನೆ ನಿಜ. ಆದರೆ ಅವಳಿಗೆ ಅಂಥ ಪ್ರೇಮ ಇದ್ದರೆ ನನ್ನೊಡನೆ ಬರಲಿ,

ಬಂಧು-ಬಾಂಧವರ ವೃತ್ತವನ್ನು ಕಿತ್ತೊಗೆಯುವುದು ಅವಳ ಹಣೆಬರಹ, ಹೋಗಬೇಕು ದೂರ. ಈ ಹುಲಿಯೂರಿನಿಂದ ದೂರ, ನಾನು ದುಡಿದು ಬದುಕುವಂತಹ ಜಾಗ ಎಲ್ಲೋ ಇದೆ." (ಹುಲಿಯೂರಿನ ಸರಹದ್ದು, ೨೦೦೪, ಪುಟ-೪೪) ಪರಂಪರೆಯ ಜಾತಿ, ಕುಟುಂಬ, ಮೌಢ್ಯ, ಸಂಪ್ರದಾಯಗಳು ಹೊಸ ಸಂವೇದನೆಯುಳ್ಳ ಸಮಾಜಕ್ಕೆ ಉಸಿರುಕಟ್ಟಿಸುತ್ತವೆ. ಅದರಿಂದ ಬಿಡುಗಡೆಗೊಳ್ಳಲು ಆಧುನಿಕತೆಯೇ ಪ್ರಮುಖ ಅಸ್ತ್ರವಾಗಿದೆ. ತೇಜಸ್ವಿ ಕಥನವು ಇಂತಹ ಬಿಡುಗಡೆಯನ್ನು ಬಯಸಿದರೂ ಆಧುನಿಕತೆಯ ಕುರಿತು ಕುರುಡಾಗುವುದರ ಬಗ್ಗೆಯೂ ಸಹಾ ಎಚ್ಚರಿಸುತ್ತದೆ.

ಹುಲಿಯೂರಿನ ಸರಹದ್ದು ಕಥಾ ಸಂಕಲನ ವ್ಯಕ್ತಿಯ ವೈಯುಕ್ತಿಕ ಬದುಕು ಮತ್ತು ಕುಟುಂಬ ವ್ಯವಸ್ಥೆಯ ಮೂಲಕ ಸಮಾಜವನ್ನು ಗ್ರಹಿಸಲು ಪ್ರಯತ್ನಿಸುತ್ತದೆ. ಸಾಮಾಜಿಕವಾಗಿ ಬೇರೂರಿ ನಿಂತಿರುವ ಕಂದಾಚಾರಗಳಿಂದ ಬಿಡುಗಡೆಗೊಳ್ಳಲು ಆಧುನಿಕ ಪ್ರಜ್ಞೆ ಅನಿವಾರ್ಯ ಎಂಬ ಅನಿಸಿಕೆಯು ಈ ಸಂಕಲನದ ಮೂಲಕ ವ್ಯಕ್ತವಾಗುತ್ತದೆ. ಕಂದಾಚಾರ, ಮೂಡನಂಬಿಕೆಗಳು ಮತ್ತು ಹಿಂಸೆಯ ಕೂಪವಾಗಿ ಪರಂಪರೆಯನ್ನು ಕಂಡು ಅದರಿಂದ ಬಿಡುಗಡೆಗೊಳಿಸುವ ಮಾರ್ಗವಾಗಿ ಆಧುನಿಕತೆಯನ್ನು ತೇಜಸ್ವಿಯವರ ಮೊದಲ ಸಂಕಲನವು ಕಾಣುತ್ತದೆ.

ಅಬಚೂರಿನ ಪೋಸ್ಟಾಫೀಸು ಎಂಬ ಎರಡನೇ ಕಥಾ ಸಂಕಲನದಲ್ಲಿ ತೇಜಸ್ವಿಯವರ ಆಲೋಚನೆ ಮತ್ತು ಚಿಂತನೆಗಳಲ್ಲಿ, ಅವರು ಸಮಾಜವನ್ನು ನೋಡುವ ಹಾಗೂ ಗ್ರಹಿಸುವ ದೃಷ್ಟಿಕೋನಗಳಲ್ಲಿ ಆಗಾಧ ಬದಲಾವಣೆಗಳು ಆಗಿರುವುದನ್ನು ಕಾಣಬಹುದು. ಇದಕ್ಕೆ ಇದೇ ಸಂಕಲನದ 'ಹೊಸ ದಿಗಂತದೆಡೆಗೆ' ಎಂಬ ಮುನ್ನುಡಿಯಲ್ಲಿ ಅವರೇ ಹೇಳುವಂತೆ ಈ ಹೊಸ ಆಲೋಚನೆ ಮತ್ತು ಚಿಂತನೆಗಳಿಗೆ ಲೋಹಿಯಾರವರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲ ಪ್ರಭಾವಗಳು ಕಾರಣವಾಗಿವೆ. ಇಲ್ಲಿಯತನಕ ಪರಂಪರೆಯ ಸಮಸ್ಯೆಗಳಿಗೆ ಆಧುನಿಕತೆಯೇ ಪರಿಹಾರವೆಂದು ಭಾವಿಸಿದ್ದ ತೇಜಸ್ವಿ ಕಥನ ಆಧುನಿಕತೆ ಉಂಟುಮಾಡಿರುವ ಸಾಮಾಜಿಕ ತಲ್ಲಣಗಳು, ಹಿಂಸೆಯ ಕರಾಳ ರೂಪಗಳು, ವಿಘಟನೆಗೊಳ್ಳುತ್ತಿರುವ ಮನುಷ್ಯ ಸಂಬಂಧಗಳನ್ನು ಕಂಡು ದಿಗ್ಭ್ರಮೆಗೊಳ್ಳುವ ಚಿತ್ರಣಗಳು ಕಾಣುತ್ತವೆ. ಇವು ಅವರ ಎರಡನೇ ಕಥಾ ಸಂಕಲನದಲ್ಲಿ ಮುಖ್ಯ ಧಾತುವಾಗಿ ಚಿತ್ರಣಗೊಂಡಿವೆ. ಈ ಕೃತಿಯ ಮುಖ್ಯ ವಸ್ತು ಆಧುನಿಕತೆಯ ಕರಾಳ ಮುಖಗಳ ಅಭಿವ್ಯಕ್ತಿಯೇ ಆದಂತಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಆಧುನಿಕತೆಯು ಹೇಗೆ ತನ್ನ ಕಬಂಧ ಬಾಹುಗಳನ್ನು ಚಾಚಿ ತನ್ನ ನೆಲೆಗಳನ್ನು ಬಲಗೊಳಿಸಿಕೊಂಡು ಹಿಡಿತ ಸಾಧಿಸುತ್ತದೆ ಎಂಬ ವಿಚಾರಗಳು ಅವರ ಕಥೆಗಳಲ್ಲಿ

ದಾಖಲಾಗಿವೆ. ಹಾಗಾಗಿಯೇ ಅಬಚೂರಿನ ಪೋಸ್ಟಾಫೀಸು ಕಥಾಸಂಕಲನ ಅವರ ಒಟ್ಟು ಚಿಂತನೆಗಳು ವಿಭಿನ್ನ ತಿರುವು ಪಡೆದುಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

ವ್ಯಕ್ತಿಯ ಸಮಸ್ಯೆಗಳು ವೈಯುಕ್ತಿಕವಾದರೂ ಅವು ಸಮಾಜದ ಸಮಸ್ಯೆಗಳೇ ಆಗಿವೆ. ಸಮಾಜದಲ್ಲಾದ ಬದಲಾವಣೆಗಳು ವ್ಯಕ್ತಿಯಲ್ಲಿ, ವ್ಯಕ್ತಿಯಲ್ಲಾದ ಬದಲಾವಣೆಗಳು ಸಮಾಜದಲ್ಲಿನ ಪಲ್ಲಟಗಳಿಗೆ ಕಾರಣವಾಗುವುದನ್ನು ಅಬಚೂರಿನ ಪೋಸ್ಟಾಫೀಸು ಕೃತಿ ಸೆರೆಹಿಡಿಯುತ್ತದೆ. ಹೊಸ ವಿದ್ಯಮಾನಗಳ ಪ್ರವೇಶದ ಪರಿಣಾಮವಾಗಿ ಹಿಂದಿನ ಜೀವನ ಕ್ರಮಗಳಲ್ಲಾದ ಪಲ್ಲಟಗಳು, ಎದುರಿಸಲೇಬೇಕಾಗಿ ಬಂದ ಸಮಸ್ಯೆ ಮತ್ತು ಸವಾಲುಗಳು ಮನುಷ್ಯ ಸಂಬಂಧಗಳನ್ನೇ ಅಲ್ಲಾಡಿಸಿಬಿಡುವುದನ್ನು ಈ ಕಥಾ ಸಂಕಲನ ಸೆರೆಹಿಡಿಯುತ್ತದೆ. ವ್ಯಕ್ತಿ ತನಗೆ ಅರಿವೇ ಇಲ್ಲದೆ, ಯಾವುದೇ ಬಗೆಯ ತಪ್ಪನ್ನೂ ಮಾಡದೆ, ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಬಿದ್ದು ನರಳುತ್ತಾನೆ.ಆ ಸಮಸ್ಯೆಗಳ ಸುಳಿಯಿಂದ ಬಿಡಿಸಿಕೊಂಡು ಹೊರಬರಲು ಯತ್ನಿಸುವ ಮಾನವ ಸಮಾಜ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಆಧುನಿಕ ಅಭಿವೃದ್ಧಿಯ ಮಾದರಿಗಳು ಉಂಟುಮಾಡಿರುವ ತಲ್ಲಣಗಳು, ಆತಂಕಗಳು, ಅತಿರೇಕಗಳನ್ನೂ ಮತ್ತು ಗ್ರಾಮ ಸಮುದಾಯದ ನೆಮ್ಮದಿಯನ್ನು ಹಾಳುಮಾಡುತ್ತಿರುವ ಅನಾಹುತಗಳನ್ನು ಈ ಸಂಕಲನದ ಕಥೆಗಳು ತೆರೆದು ತೋರುವಲ್ಲಿ ಯಶಸ್ವಿಯಾಗಿವೆ. ನವ್ಯದ ಸಾಹಿತ್ಯ ಗ್ರಹಿಕೆಗಳಿಂದ ಬಿಡುಗಡೆ ಪಡೆಯಬೇಕು. ಹೊಸ ರೀತಿಯಲ್ಲಿ ಬರವಣಿಗೆಯನ್ನು ಮಾಡಬೇಕು ಎಂಬ ನಿರ್ಧಾರವು ಪರಂಪರೆಯ ಯಾವುದೇ ಜಡಗೊಂಡ ದಾರಿಗಳನ್ನು ಮುಲಾಜಿಲ್ಲದೆ ನಿರಾಕರಿಸುವ ನಿರ್ಧಾರವಾಗಿದೆ. ಇದು ಕೇವಲ ಪರಂಪರೆಯ ಕುರುಡು ನಿರಾಕರಣೆಯಲ್ಲ. ನಿತ್ಯ ನಿರಂತರ ಹೊಸತನವನ್ನು ಅನ್ವೇಷಿಸುವ ಹುಡುಕಾಟದ ಜೊತೆಜೊತೆಗೆ ಸಮಾಜದ ವಾಸ್ತವ ಚಿತ್ರಣವನ್ನು ಕಟ್ಟಿಕೊಡುವುದೇ ಆಗಿದೆ. ಹಾಗೆಯೆ ಸಮಾಜವು ತಾನೇ ಹಾಕಿಕೊಂಡ ಕಟ್ಟುಕಟ್ಟಳೆಗಳಿಂದ, ಚೌಕಟ್ಟುಗಳಿಂದ ಮತ್ತು ಜಡಗೊಂಡ ಮಾರ್ಗಗಳಿಂದ ನಿರಂತರವಾಗಿ ಪರ್ಯಾಯಗಳತ್ತ ಚಲಿಸುತ್ತಿರಬೇಕು ಎಂಬುದರ ಪ್ರತೀಕವಾಗಿದೆ.

ಆಧುನಿಕತೆಯ ಮೋಹದ ಬಲೆಗೆ ಸಿಕ್ಕಿ ಮನುಷ್ಯ ನರಳುವುದಕ್ಕೆ ಉದಾಹರಣೆಯಾಗಿ ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಗೋಪಾಲಯ್ಯ ಜಗನ್ನಾಥನಿಗೆ ನಿರೂಪಿಸುವ ಒಂದು ಪ್ರಸಂಗವನ್ನು ನೋಡಬಹುದು. "ಕುಳುಪ ಮೊನ್ನೆ ಒಂದು ತಮಾಷೆ ತೋರಿಸಿದ ಬಸಿರಿ ಮರದ ಹಾಲನ್ನು ಒಂದು ಕಡ್ಡಿ ತುದಿಗೆ ಮೆತ್ತಿ ಗದ್ದೆ ಮದ್ಯೆ ನೆಟ್ಟು ಬಿಡುತ್ತಿದ್ದ. ಈ ಹಕ್ಕಿಗಳು ಗದ್ದೆ ಬಯಲಿನಲ್ಲಿ ಕುಳಿತುಕೊಳ್ಳಲು ಕೋಲಿನ ತುದಿ ಪ್ರಶಸ್ತ ಸ್ಥಳವೆಂದು ಬಂದು ಕೂರುತ್ತವೆ. ತಕ್ಷಣ ಅದರ ಕಾಲು ಅಂಟಿಕೊಳ್ಳುತ್ತದೆ. ಆನಂತರ ಅಂಟನ್ನು ತೆಗೆಯಲು ಕೊಕ್ಕಿನಿಂದ ಕುಕ್ಕುತ್ತದೆ. ಆಗ ಕೊಕ್ಕು ಸಿಕ್ಕಿಕೊಳ್ಳುತ್ತದೆ. ಕೊನೆ ಪ್ರಯತ್ನವಾಗಿ ಹಾರಿಯಾದರೂ ಹೋಗೋಣೆಂದು ರೆಕ್ಕೆ

ಬಡಿಯುತ್ತದೆ. ಕೆಲವೇ ಕ್ಷಣದಲ್ಲಿ ಆ ಹಕ್ಕಿ ಒಂದು ಉಂಡೆಯಾಗಿ ಗದ್ದೆ ನೀರಿಗೆ ಉರುಳುತ್ತದೆ. ಕೆಳಕೆಳಗಿಳಿಯುತ್ತಾ ಅನುಭವದ ಅಯಸ್ಕಾಂತ ಶಕ್ತಿಯಲ್ಲಿ ತತ್ತರಿಸಿಬಿಟ್ಟು ಚೇತನಕ್ಕೆ ಮಂಕು ಹಿಡಿಯುತ್ತದೆ ಜಗನ್ನಾಥ." (ಹುಲಿಯೂರಿನ ಸರಹದ್ದು ಕಥಾ ಸಂಕಲನ, ೨೦೦೪, ಪುಟ-೧೨೬) ಈ ಪ್ರಸಂಗವು ಆಧುನಿಕತೆ ಎಂಬ ನವ ನಾಗರೀಕತೆಯ ಕಪಿಮುಷ್ಠಿಯಿಂದ ಅಮಾಯಕರು ಬಿಡಿಸಿಕೊಳ್ಳಲಾಗದೆ ಅಂತ್ಯ ಕಾಣುವುದನ್ನು ಸಂಕೇತಿಸುತ್ತದೆ. ಪರಂಪರೆಯ ಹಿಡಿತಗಳಿಂದ ಬಿಡಿಸಿಕೊಂಡಷ್ಟು ಸುಲಭವಾಗಿ ಆಧುನಿಕತೆಯಿಂದ ಬಿಡಿಸಿಕೊಳ್ಳಲಾಗುವುದಿಲ್ಲ ಎಂಬ ತಿಳುವಳಿಕೆ ಈ ಪ್ರಸಂಗದಲ್ಲಿ ವ್ಯಕ್ತವಾಗುತ್ತದೆ.

ಇಂದು ಆಧುನಿಕತೆ ಎಂಬ ಮಾಯೆ ಉಂಟು ಮಾಡುತ್ತಿರುವ ಮಹತ್ವಾಕಾಂಕ್ಷೆ ಹಾಗೂ ಆಕರ್ಷಣೆಯು ಕೊನೆಗೆ ನಮ್ಮನ್ನು ಎಲ್ಲಿಗೆ ತಲುಪಿಸುತ್ತದೆ ಎಂಬುದನ್ನು ಅಬಚೂರಿನ ಪೋಸ್ಟಾಫೀಸು ಕಥೆ ವಿವರಿಸುತ್ತದೆ. ನೆಮ್ಮದಿಯ ನೆಲೆಯಾಗಿದ್ದ ಅಬಚೂರಿಗೆ ಪೋಸ್ಟಾಫೀಸು ಬಂದ ಸಂದರ್ಭದಲ್ಲಿ ಪೋಸ್ಟ್ ಮಾಸ್ಟರ್ ಆದ ಬೋಬಣ್ಣನಿಗೆ ಇಡೀ ಗ್ರಾಮಕ್ಕೆ ನಾನೇ ಶ್ರೇಷ್ಠ ಎಂಬ ಭ್ರಮೆಯುಂಟಾಗಿತ್ತು. "ಪೋಸ್ಟಾಫೀಸು ಆರಂಭವಾಯಿತು. ಎಲ್ಲರೂ ಬೋಬಣ್ಣನನ್ನು ಪೋಸ್ಟ್ ಮಾಸ್ಟರೇ ಎಂದು ಗೌರವದಿಂದ ಕರೆಯುತ್ತಿದ್ದರು. ಬೋಬಣ್ಣನಿಗೆ ತಾನೊಬ್ಬ ದಿಲ್ಲಿಯೊಡನೆ ಸಂಪರ್ಕ ಹೊಂದಿರುವ ಭಾರತದ ಪ್ರಜೆ ಎಂಬ ಹೆಮ್ಮೆಯುಂಟಾಗತೊಡಗಿತು." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ-೦೧) ಅಲ್ಲೀಜಾನ್ ಸಾಬರ ತೋಟದ ರೈಟರ್ ಕೆಲಸದ ಬೇಸರದ ನಡುವೆ ಪೋಸ್ಟ್ ಮಾಸ್ತರ ಹುದ್ದೆ ಬೋಬಣ್ಣನಲ್ಲಿ ಹೊಸ ಉತ್ಸಾಹವನ್ನು ತಂದಿರುತ್ತದೆ. ಇದರ ನಡುವೆ ಪತ್ರ ವ್ಯವಹಾರವನ್ನು ಹೆಚ್ಚಿಸಲು ಅನಕ್ಷರಸ್ತರ ಅಗತ್ಯದ ಪತ್ರಗಳನ್ನು ತಾನೇ ಬರೆಯುವ, ಅವರಿಗೆ ಬಂದ ಪತ್ರಗಳನ್ನು ಓದಿ ತಿಳಿಸುವ ಕೆಲಸವನ್ನೂ ಸಹಾ ಈತ ನಿರ್ವಹಿಸುತ್ತಿರುತ್ತಾನೆ. ಹೀಗಾಗಿ ಸುತ್ತಲಿನ ಗ್ರಾಮಗಳ, ಕುಟುಂಬಗಳ ಎಲ್ಲಾ ಗೌಪ್ಯ ವಿಷಯಗಳೂ ಇವನಿಗೆ ತಿಳಿಯುತ್ತಿರುತ್ತವೆ. ಇದರ ಜೊತೆಗೆ ಅಜೀಜನಿಗೆ ಬಂದ ಹೆಣ್ಣಿನ ಬೆತ್ತಲೆ ಚಿತ್ರವು ಮನದಲ್ಲಿ ತುಂಬಿ ಅವನ ಮನಸ್ಸು ಗೊಂದಲದ ಗೂಡಾಗುತ್ತದೆ. ಇದರಿಂದ ಮನದಲ್ಲಿ ಇಲ್ಲಿಯತನಕ ತನಗೇ ತಿಳಿಯದಂತೆ ಸುಪ್ತವಾಗಿದ್ದ ಹೊಸ ಹೊಸ ಕಾಮನೆಗಳು ತಲೆ ಎತ್ತಿ ಕಾಡತೊಡಗುತ್ತವೆ. ಇವೆಲ್ಲವೂ ಸೇರಿ ಬೋಬಣ್ಣನ ಮನಃಶಾಂತಿಯನ್ನು ನಾಶ ಮಾಡಿಬಿಡುತ್ತವೆ.

"ಸುಮಾರು ಮೂರು-ನಾಲ್ಕು ವರ್ಷಗಳವರೆಗೆ ನೆಮ್ಮದಿಯಾಗಿದ್ದ ಬೋಬಣ್ಣ ಇಂದು ಅತ್ಯಂತ ಅಸಂತುಷ್ಟನೂ ದುಃಖಿಯೂ ಆಗಿದ್ದನು. ಏಕೆ ಸಂಕಟಗ್ರಸ್ತನಾಗಿದ್ದೇನೆಂದು ಅವನಿಗೆ ಬಗೆಹರಿಯದಾಯಿತು. ಸಂಕಟಗಳಿಗೆ ಅವನು ಕಾರಣ ಕಂಡುಹಿಡಿಯುವುದಿರಲಿ ಸಂಕಟಗಳೇ ಏನೆಂದು ಅವನಿಗೆ ಅರ್ಥವಾಗಿರಲಿಲ್ಲ." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ-೦೨) ಹೊಸ ನಾಗರೀಕತೆಯ ರೂಪವಾದ ಪೋಸ್ಟಾಫೀಸಿನ ಆಗಮನ ಬೋಬಣ್ಣನ ತಪ್ಪಿಲ್ಲದೆಯೇ

ಅವನನ್ನು ಅನೇಕ ಸಮಸ್ಯೆಗಳಿಗೆ ಸಿಲುಕಿಸುತ್ತದೆ. ಅವನ ಮನಸ್ಸು, ಮನೆ, ಸಂಬಂಧಗಳು ಛಿದ್ರಗೊಳ್ಳುತ್ತವೆ. ಇದರಿಂದ ಬೋಬಣ್ಣ ಏನೊಂದೂ ಅರ್ಥವಾಗದೆ, ತನ್ನ ಅಸಂತೋಷಕ್ಕೆ ಕಾರಣವೇ ತಿಳಿಯದೆ ಅಸಹಾಯಕತೆಯಿಂದ ನರಳುತ್ತಾನೆ. ಬೋಬಣ್ಣನ ಈ ಅಸಹಾಯಕ ಸ್ಥಿತಿ ನವನಾಗರೀಕತೆಯ ಜುಗಾರಿಯಲ್ಲಿ ಸಿಕ್ಕಿಬಿದ್ದಿರುವ ಸಮಾಜದ ಅಸಹಾಯಕತೆಯೇ ಆಗಿದೆ. ಹೊಸ ಬದಲಾವಣೆಗೆ ಕುರುಡಾಗಿ ತೆರೆದುಕೊಳ್ಳುವ ಸಮಾಜತನ್ನ ಇತಿಮಿತಿಗಳನ್ನು ಗುರುತಿಸಿಕೊಂಡಿರುವುದಿಲ್ಲ. ಈ ಎಚ್ಚರಿಕೆಯೂ ಅದಕ್ಕೆ ಇರುವುದಿಲ್ಲ. ಹೀಗಾಗಿ ಸಮಾಜ ಅನುಭವಿಸುವ ಸಂಕಟಗಳಿಗೆ ಇತಿಮಿತಿಗಳಿರುವುದಿಲ್ಲ ಮತ್ತು ಅವು ಅವರಿಗೆ ಅರ್ಥವೂ ಆಗುವುದಿಲ್ಲ.

"ಬೋಬಣ್ಣನಿಗೆ ಈ ರೀತಿ ಅವರಿವರ ಕಾರ್ಡುಗಳನ್ನು ಓದುವುದು, ಯಾರಿಗಾದರೂ ಯಾವುದಾದರೂ ಪುಸ್ತಕ ಬಂದರೆ ಅದನ್ನು ಉಪಾಯವಾಗಿ ಬಿಚ್ಚಿ ಓದುವುದು, ಅನಂತರ ಅದನ್ನು ತಲುಪಿಸುವುದು ಮುಂತಾದ ಚೇಷ್ಟೆಗಳು ಸಪ್ಪೆಯಾದ ಪೋಸ್ಟಾಫೀಸಿನ ಕೆಲಸದಲ್ಲಿ ಒಂದು ಬಗೆಯ ಮನರಂಜನೆಯನ್ನು ಒದಗಿಸುತ್ತಿದ್ದವು. ಅಜೀಜನಿಗೆ ಬಂದ ನಗ್ನ ಚಿತ್ರ ನೋಡಿದ ಮೇಲಂತೂ ಕವರಿನೊಳಗೆ ಸುತ್ತಿ ಬಂದುದೆಲ್ಲಾ ನಗ್ನ ಚಿತ್ರವೇ ಎಂದು ತಿಳಿಯುತ್ತಿದ್ದನು. ಮಾಸಿಕಗಳೋ, ವಾರಪತ್ರಿಕೆಗಳೋ ಯಾರಿಗಾದರೂ ಬಂದರೆ ಅದರ ಮೂಲೆ ಮೂಲೆಗಳಲ್ಲೂ ನಗ್ನ ಚಿತ್ರಗಳಿಗಾಗಿ ಹುಡುಕುತ್ತಿದ್ದನು." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ-೦೬) ಆಧುನಿಕತೆಯು ಉಂಟುಮಾಡುವ ದುರಾಸೆಗಳು, ಕಾಮನೆಗಳು ಇಡೀ ಮಾನವ ಬದುಕನ್ನು ಅವನತಿಯ ಹಾದಿಗೆ ತಂದು ನಿಲ್ಲಿಸುತ್ತವೆ. ಅಜೀಜನಿಗೆ ಬಂದ ನಗ್ನ ಬೋಬಣ್ಣ ಮತ್ತು ಆತನ ಪತ್ನಿ, ಅತ್ತೆಯ ನಡುವೆ ಸಂಬಂಧ ಮುರಿದುಬೀಳಲು ಕಾರಣವಾಗುತ್ತದೆ. ಆಧುನಿಕತೆ ಸೃಷ್ಟಿಸುವ ಇಂತಹ ಆಸೆಗಳು ಸ್ವಂತ ಸುಖಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ನೀಡಿ ಮನುಷ್ಯ ಸಂಬಂಧಗಳನ್ನು ಛಿದ್ರಗೊಳಿಸುತ್ತವೆ. ಈ ಆಸೆಗಳು ಬೋಬಣ್ಣನಲ್ಲಿ ಹೊಸ ರೀತಿಯ ಚೇಷ್ಟೆಗಳಿಗೆ ಕಾರಣವಾಗಿ ಅವನನ್ನೂ ಅಶಾಂತಿಯ ಕಡಲಲ್ಲಿ ಮುಳುಗಿಸುತ್ತವೆ. ಉಲ್ಲಾಸದ ಕಾರ್ಯವಾಗಿದ್ದ ಪೋಸ್ಟ್ ಮಾಸ್ತರಿಕೆ ಆತನನ್ನು ಗರ್ತಿಸಿಕೊಳ್ಳಲು ಸಾಧ್ಯವಾಗದ ಮಾನಸಿಕ ವ್ಯಸನದಲ್ಲಿ ನರಳುವಂತೆ ಮಾಡುತ್ತದೆ.

ಪರಂಪರೆಯ ಹಿಡಿತಗಳಿಂದ ಆಧುನಿಕ ಜ್ಞಾನ ಬಿಡುಗಡೆಗೊಳಿಸಿದಷ್ಟು ಸುಲಭವಾಗಿ ಆಧುನಿಕತೆಯ ಹಿಡಿತಗಳಿಂದ ಬಿಡುಗಡೆಗೊಳ್ಳಲು ಸಾಧ್ಯವಾಗದ್ದನ್ನು ಅಂತಿಮವಾಗಿ ಬೋಬಣ್ಣನ ಪಲಾಯನ ಸಂಕೇತಿಸುತ್ತದೆ. ಆಧುನಿಕ ಲೋಕ ಸೃಷ್ಟಿಸಿರುವ ಈ ವಾಂಛೆಗಳು ಜನಸಮುದಾಯದಲ್ಲಿ ಏರು-ಪೇರುಗಳನ್ನು ಸೃಷ್ಟಿಸಿರುವುದು ಮಾತ್ರವಲ್ಲ, ಅವರನ್ನು ಮಾದಕ ವ್ಯಸನಿಗಳಂತೆ ತಯಾರುಮಾಡುತ್ತಿವೆ. ತಮಗೇ ಅರಿವಿಲ್ಲದೆ ಈ ಹೊಸ ಬಗೆಯ ಆಕರ್ಷಣೆಗಳಿಗೆ

ವ್ಯಸನಗಳಿಗೆ ಬಲಿಯಾದ ಸಮುದಾಯ ಪರಂಪರೆಯ ಎಲ್ಲಾ ಕಟ್ಟುಪಾಡುಗಳನ್ನು ಧಿಕ್ಕರಿಸುತ್ತದೆ. ಪರಂಪರೆಯ ಸಂಕೇತವಾದ ಮಾಚಮ್ಮ ತನ್ನ ಹಿಡಿತ ಸಡಿಲಗೊಳ್ಳುತ್ತಿರುವುದರ ಕುರಿತು ತಲ್ಲಣಗೊಂಡಿರುವುದಕ್ಕೆ, ಬೋಬಣ್ಣನ ಚೇಷ್ಟೆಗಳಿಂದ ಭಯಗೊಂಡಿರುವುದಕ್ಕೆ ಇದೇ ಕಾರಣ. "ಮಾಚಮ್ಮ ಹಲವಾರು ಬಾರಿ ಸೂಕ್ಷ್ಮವಾಗಿ ಬೋಬಣ್ಣನ ಈ ಬಗೆಯ ಚರ್ಯೆಗಳನ್ನು ಗಮನಿಸಿದ್ದಳು. ಅವಳಿಗೆ ತಾನು ವಯಸ್ಸಾದವಳು, ಬೋಬಣ್ಣ ತನ್ನನ್ನು ಗೌರವಿಸಬೇಕೆಂದು ಇಷ್ಟವಿದ್ದಿತು. ಅವಳು ತನ್ನ ಗಂಡನ ಮರಣಾನಂತರ ಏಕಾಂಗಿಯಾಗಿ ದುಡಿದು ಕಾವೇರಿಯನ್ನು ಸಾಕಿದಳು. ಅದಕ್ಕಿಂತ ಮಿಗಿಲಾಗಿ ಕಾವೇರಿ ಮದುವೆಯಾದ ನಂತರ ಗಂಡನ ಮಾತನ್ನೇ ಕಟ್ಟಿಕೊಂಡು ಅವನನ್ನೇ ಓಲೈಸುತ್ತಾ ಬೇರೆ ಹೋದರೆ ಈ ಮುಪ್ಪಿನಲ್ಲಿ ತಾನೇನು ಮಾಡುವುದು ಎಂಬ ಭಯವಿದ್ದಿತು.... ಬೋಬಣ್ಣನ ಚೇಷ್ಟೆ, ಅವನ ಕಾಮುಕತೆಗಳು ಮಾಚಮ್ಮನಿಗೆ ಭಯಂಕರ ಅಧಿಕ ಪ್ರಸಂಗಗಳಾಗಿ ಕಂಡವು. ಇದು ಹೀಗೆ ಮುಂದುವರೆದರೆ ಬೋಬಣ್ಣ ತನ್ನ ಮನೆಯಲ್ಲೇ ಉಳಿದರೂ ಕೂಡ ತನ್ನ ಯಜಮಾನಿಕೆಗೆ ಸಂಚಕಾರ ಬರುತ್ತದೆ ಅಥವಾ ಬೋಬಣ್ಣ ಕಾವೇರಿಯನ್ನು ಕರೆದೊಯ್ದು ತನ್ನನ್ನು ಅನಾಥೆಯನ್ನಾಗಿ ಮಾಡುತ್ತಾನೆ. ಈ ಎರಡರಲ್ಲಿ ಒಂದು ಆಗುತ್ತದೆ ಎಂದು ಬಗೆದಳು." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ-೦೫)

ಲಾಗಾಯ್ತಿನಿಂದಲೂ ತಮ್ಮ ಅಧಿಕಾರಗಳಿಂದ ಸುಖ ಸವಲತ್ತುಗಳನ್ನು ಪಡೆಯುತ್ತಾ, ಗೌರವ ಸ್ಥಾನಮಾನಗಳನ್ನು ಗಳಿಸುತ್ತಾ ಬಂದ ಪರಂಪರೆಯ ಒಡೆಯರಿಗೆ ಆಧುನಿಕತೆಯ ವ್ಯಾಮೋಹಿಗಳು ಎತ್ತುವ ಪ್ರಶ್ನೆಗಳಿಗೆ ಉತ್ತರಿಸಲು ಸಾದ್ಯವಾಗುವುದಿಲ್ಲ. ಉತ್ತರಿಸದಿದ್ದರೆ ಅಸ್ತಿತ್ವ ಉಳಿಯುವುದಿಲ್ಲ. ಸುಖ ಸೇವೆಗಳಿಂದ ವಂಚಿತವಾಗುವ ಭಯದಿಂದ ಸೋಮಾರಿಗಳಾದ ಮೇಲ್ಜಾತಿ-ಮೇಲ್ವರ್ಗದ ಜನ ಕುತಂತ್ರಗಳನ್ನು ಹೆಣೆಯುತ್ತಾರೆ. ಬೋಬಣ್ಣನು ಆಧುನಿಕತೆಯಿಂದ ಪಡೆದ ಹೊಸ ಆಸೆ-ಆಕಾಂಕ್ಷೆಗಳು ಮಾಚಮ್ಮನನ್ನು ಇನ್ನಿಲ್ಲದ ಭಯದಿಂದ ಕಾಡುತ್ತವೆ. "ಕಾವೇರಿ ನಿನಗೆ ಬಾಳ ದಿನದಿಂದ ಹೇಳಬೇಕೆಂದಿದ್ದೆ. ಬೋಬಣ್ಣ ಹಾಗೇಕೆ ಚೆಲ್ಲು ಚೆಲ್ಲಾಗಿ ಮಾಡುತ್ತಾನೆ. ಮಕ್ಕಳ ಎದುರು, ದೇವರ ಎದುರು ಎಲ್ಲಾ ಒಂದೇ ತರ ಮಾಡೋದೆ. ನಿನಗೆ ನಾನೇನು ಹೇಳಬೇಕಾಗಿಲ್ಲ. ನೀನು ಕಷ್ಟ-ಸುಖ ನೋಡಿದವಳು. ಅವರು ತೀರಿಕೊಂಡ ಮೇಲೆ ನಾನು ಏನೇನು ಕಷ್ಟ ಪಟ್ಟಿದ್ದೇನೆ, ನಿನ್ನನ್ನು ಹೇಗೆ ಸಾಕಿದೆ ನೀನೆ ನೋಡಿದ್ದೀಯೆ. ಹಾಗೆಯೇ ನಿನ್ನ ಮಕ್ಕಳನ್ನೂ ನೀನೂ ಮುಂದೆ ತರಬೇಕು." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ-೦೫) ಹೀಗೆ ಮಾಚಮ್ಮ ಮಗಳ ಬಾಳು ಹಾಳಾಗುತ್ತದೆ ಎಂಬ ಅರಿವಿದ್ದರೂ ತನ್ನ ಯಾಜಮಾನ್ಯ ಹಿಡಿತ ಮತ್ತು ಸುಖಕ್ಕಾಗಿ ಋಣದ ನೆನಪು ಮಾಡಿ ಬೋಬಣ್ಣ ಮತ್ತು ಕಾವೇರಿಯ ನಡುವೆ ಬಿರುಕನ್ನು ಸೃಷ್ಟಿಸಿ ಅವರ ಸಂಸಾರವನ್ನು ಛಿದ್ರಗೊಳಿಸುತ್ತಾಳೆ.

ಪರಂಪರೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ದೇವರು, ಧರ್ಮ, ಋಣ, ಸಂಸ್ಕೃತಿ ಮುಂತಾದ ಮೌಢ್ಯಗಳನ್ನು ನೆಪವಾಗಿಟ್ಟುಕೊಂಡು ಜನತೆಯಲ್ಲಿ ಸಂಘರ್ಷಗಳನ್ನು ಸೃಷ್ಟಿಸಿ ಲಾಭ ಪಡೆಯಲು ಹವಣಿಸುತ್ತದೆ. ಹೀಗಾಗಿಯೇ ಸಮಾಜದಲ್ಲಿ ಕೋಮು ಸಂಘರ್ಷಗಳು, ಜಾತಿ ಸಂಘರ್ಷಗಳು, ಸಂಸ್ಕೃತಿ ವಿನಾಶದ ನೆಪದಲ್ಲಿ ದಾಳಿಗಳು ನಡೆಯುತ್ತವೆ. ಈ ಸಂಘರ್ಷಗಳಿಂದಲೇ ಅಧಿಕಾರಕ್ಕೆ ಬಂದ ಪ್ರಭುಗಳು ಸಮಾಜದ ಮೌಢ್ಯತೆ ಹೆಚ್ಚುವಂತೆ, ಜನ ದೈವ, ಧರ್ಮ, ಮೇಲ್ಜಾತಿ, ವರ್ಣಗಳಿಗೆ ಭಯಗೊಳ್ಳುವಂತೆ ನೋಡಿಕೊಳ್ಳುತ್ತಾರೆ. 'ಮಡೇಸ್ನಾನ'ದಂತಹ ಹೀನ ಕಾರ್ಯವನ್ನೂ ಸಹ ಸಮ್ಮತಿಸುತ್ತಾರೆ! ತನ್ನ ಲಾಭಕ್ಕಾಗಿ, ಅಸ್ತಿತ್ವಕ್ಕಾಗಿ ಪರಂಪರೆಯ ಯಾಜಮಾನ್ಯ ಸಮುದಾಯ ಎಂತಹ ಹೀನ ಕಾರ್ಯಕ್ಕೂ, ಯಾರನ್ನು ಬೇಕಾದರೂ ಬಲಿಕೊಡಲಿಕ್ಕೂ ಸದಾ ತಯಾರಾಗಿ ನಿಲ್ಲುತ್ತದೆ. ಇವರಿಗೆ ಪರ–ವಿರೋಧ ಎಂಬ ಬೇಧವಿಲ್ಲ. ಆಧುನಿಕರಂತೆ ಇವರಿಗೂ ಸಹ ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ವಸ್ತುವೂ ಲಾಭದ ಸರಕಾಗಿಯೇ ತೋರುತ್ತದೆ. ಸಮಾಜದ ಸಮುದಾಯಗಳ ನಡುವೆ ಒಡೆದು ಆಳುವ ನೀತಿಯನ್ನು ಯಜಮಾನ ಸಮುದಾಯವು ಅನುಸರಿಸಿ ತಮ್ಮ ಸ್ವಹಿತವನ್ನು ಹಾಗೂ ತನ್ನ ಯಾಜಮಾನ್ಯದ ಹಿಡಿತಗಳನ್ನು ನಿರಂತರ ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಈ ಕಥೆಯ ಅಂತ್ಯದಲ್ಲಿ ಬೋಬಣ್ಣನ ಪಲಾಯನದ "ಮಾರನೆ ದಿನ ಪೋಸ್ಟಾಫೀಸನ್ನು ವಿಧ್ಯುಕ್ತವಾಗಿ ಮುಚ್ಚಲಾಯಿತು. ಕಾವೇರಿ ಮಾಚಮ್ಮನೊಂದಿಗೆ ತೊಟದ ಕೆಲಸಕ್ಕೆ ಹೋಗತೊಡಗಿದಳು." (ಅಬಚೂರಿನ ಪೋಸ್ಟಾಫೀಸು, ೨೦೦೯, ಪುಟ–೧೬) ಇದು ಪರಂಪರೆ ತನ್ನ ಯಾಜಮಾನ್ಯವನ್ನು ಮರಳಿ ಪ್ರತಿಷ್ಠಾಪಿಸುವುದನ್ನು ಸಂಕೇತಿಸುತ್ತದೆ. ಹೀಗೆ ಆಧುನಿಕತೆಯು ಉಂಟು ಮಾಡುತ್ತಿರುವ ತಲ್ಲಣಗಳು, ಅದಕ್ಕೆ ಪರಂಪರೆಯ ಯಾಜಮಾನ್ಯಗಳು ತೋರುವ ಪ್ರತಿರೋಧಗಳ ನಡುವೆ ಸಾಮಾನ್ಯ ಜನ ನರಳುತ್ತಿರುವುದನ್ನು ಬೋಬಣ್ಣನು ಓಡಿ ಓಡಿ ಮರೆಯಾಗುವುದರ ಮೂಲಕ ಇಲ್ಲಿ ಸಂಕೇತಿಸಲಾಗಿದೆ.

ಗುರುಗಳ್ಳಿಯು ಒಂದು ಕಾಲಕ್ಕೆ ಹಳ್ಳಿಯಾಗಿದ್ದು, ನಾಗರೀಕತೆಯ ವಿಕಾಸದಿಂದಾಗಿ ಹೋಟೆಲ್, ಆಸ್ಪತ್ರೆ, ಪೊಲೀಸ್ ಸ್ಟೇಷನ್, ಪೋಸ್ಟಾಫೀಸು, ಬಸ್ ಸ್ಟಾಂಡ್, ರೈಲ್ವೆ ನಿಲ್ದಾಣ ಹೀಗೆ ಹತ್ತು ಹಲವು ಸೇರಿಕೊಂಡು ಪೇಟೆಯಾಗಿ ಬದಲಾಗುತ್ತದೆ. ಹಾಗೆ ಅಲ್ಲಿನ ಜನರ ಬದುಕಲ್ಲೂ ಬದಲಾವಣೆಗಳಾಗುತ್ತವೆ. ನಾಗರೀಕತೆ ತರುವ ಹೊಸ ಸವಲತ್ತುಗಳೊಂದಿಗೆ ಆಸೆ–ಆಕಾಂಕ್ಷೆಗಳನ್ನು, ಸಂಕಷ್ಟಗಳನ್ನು ತಂದು ತುಂಬುತ್ತದೆ. ಗುರುಗಳ್ಳಿಯ ಈ ನಾಗರೀಕತೆಯ ವಿಕಾಸವು ದರ್ಜಿ ತುಕ್ಕೋಜಿಯ ಸಂಸಾರದಲ್ಲೂ ಇದೇ ಬಗೆಯ ತಲ್ಲಣಗಳನ್ನು ಉಂಟುಮಾಡುತ್ತದೆ. ಪ್ರೀತಿಸಿ ಆದರ್ಶವಾಗಿ ಮದುವೆಯಾದ ತುಕ್ಕೋಜಿ–ಸರೋಜಳ ದಾಂಪತ್ಯದಲ್ಲಿ ಈ ಹೊಸ ಸಂವೇದನೆ ಬಿರುಕುಗಳನ್ನು ಸೃಷ್ಟಿಸುತ್ತದೆ.

ಬೋಬಣ್ಣನಂತೆ ತುಕ್ಕೋಜಿ ಮತ್ತು ಸರೋಜ ಇಬ್ಬರೂ ಅಸಂತುಷ್ಟತೆಯಿಂದ ನರಳುತ್ತಾರೆ. ಗುರುಗಳ್ಳಿ ಪೇಟೆಯಾದ ನಂತರ ಹೊಸ ಜನರ ಪ್ರವೇಶ, ಅವರ ವೇಷಭೂಷಣಗಳು, ಅವರ ಬದುಕಿನ ಶೈಲಿ, ಜೀವನ ವಿಧಾನಗಳು ಸರೋಜಳಲ್ಲಿ ಹೊಸ ಆಸೆ, ಆಕಾಂಕ್ಷೆಗಳನ್ನು ಉಂಟುಮಾಡುತ್ತವೆ. ಇದನ್ನು ಗುರುತಿಸದ, ಸ್ಪಂದಿಸದ ಸದಾ ದರ್ಜಿ ಕೆಲಸದಲ್ಲಿ ನಿರತನಾಗುವ ತುಕ್ಕೋಜಿಯ ಬಗ್ಗೆ ಅವಳಿಗೆ ಸಹಜವಾಗಿ ಬೇಸರ ಉಂಟಾಗುತ್ತದೆ. ತುಕ್ಕೋಜಿಯೂ ಸಹ ಯಾಂತ್ರಿಕ ಕೆಲಸದ ಒತ್ತಡವನ್ನು ಸಹಿಸಿಕೊಳ್ಳಲಾಗದೆ, ನಗರ ಬದುಕಿನ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲೂ ಆಗದೆ ತೊಳಲಾಡುತ್ತಾನೆ. ಇಲ್ಲಿ ಆಧುನಿಕತೆ ಮತ್ತು ಪರಂಪರೆ ಮುಖಾಮುಖಿಯಾಗುವುದಿಲ್ಲ. ಇಲ್ಲಿ ಆಧುನಿಕತೆಯ ವೇಗಕ್ಕೆ ಸ್ಪಂದಿಸಲಾಗದ ತುಕ್ಕೋಜಿ ಕುಟುಂಬದ ಅಸಹಾಯತೆ ಎದ್ದು ಕಾಣುತ್ತದೆ.

ಅವನತಿ ಕಥೆಯು ಪರಂಪರೆಯ ನಾಗರೀಕತೆಯೆಡೆಗಿನ ಸೃಜನಶೀಲ ಚಲನೆಯನ್ನೇ ನಿರಾಕರಿಸುತ್ತದೆ. ಕಲೆ ಮತ್ತು ಸೌಂದರ್ಯದ ಮಾನ್ಯತೆ ಇಲ್ಲದೆ, ಇಸ್ಲಾಪುರ ಎಂಬ ಜಡಗೊಂಡ ಪರಂಪರೆಯ ಕೂಪದಿಂದ ಸಮಾಜವು ಹೊರಬರಲಾಗದೆ ಅವನತಿ ಕಾಣುವುದು ಈ ಕಥೆಯ ಸಾರವಾಗಿದೆ. ತೇಜಸ್ವಿಯವರ ಅವನತಿ ಕಥೆ ಇತರೆ ಕಥೆಗಳಿಗಿಂತ ಭಿನ್ನವಾದುದು. ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸ್, ತುಕ್ಕೋಜಿ, ಕುಬಿ ಮತ್ತು ಇಯಾಲ ಮುಂತಾದ ಕಥೆಗಳು, ಜುಗಾರಿ ಕ್ರಾಸ್, ಕರ್ವಾಲೋ, ಚಿದಂಬರ ರಹಸ್ಯ ಮುಂತಾದ ಕಾದಂಬರಿಗಳು ಆಧುನಿಕತೆ ಮತ್ತು ಪರಂಪರೆಗಳ ಪರಸ್ಪರ ಮುಖಾಮುಖಿಯಿಂದಾಗುವ ಪಲ್ಲಟಗಳನ್ನು, ತಲ್ಲಣಗಳನ್ನು ಕಟ್ಟಿಕೊಟ್ಟರೆ. ಅವನತಿ ಕಥೆ ಆಧುನಿಕತೆಯ ಪ್ರವೇಶವನ್ನೇ ಪಡೆಯದೆ, ನಾಗರೀಕತೆಯೆಡೆಗೆ ತುಡಿಯುವ ಮನಸ್ಸುಗಳು ಪರಂಪರೆಯ ಹಿಡಿತಗಳಿಂದ ಬಿಡಿಸಿಕೊಳ್ಳಲಾಗದೆ ನರಳಿ ನಾಶವಾಗುವುದನ್ನು ಚಿತ್ರಿಸುತ್ತದೆ.

ಹೊಯ್ಸಳ ದೇವಾಲಯಗಳನ್ನು ಕೆತ್ತನೆ ಮಾಡಿದ್ದ ಪನ್ನಾಥಪುರದ ಮನೆತನದವನಾದ ಶಿಲ್ಪಿ ಸೂರಾಚಾರಿ ಮಹಾನ್ ಕಲಾವಿದನಾಗಿದ್ದ. ಈಶ್ವರ ದೇವಾಲಯದ ಕೆತ್ತನೆ ಕೆಲಸಕ್ಕೆ ಇಸ್ಲಾಪುರಕ್ಕೆ ಬಂದವನು ದೇವಾಲಯದ ಕೆಲಸ ರದ್ದಾಗಿದ್ದರಿಂದ ಅಲ್ಲಿಯೇ ಉಳಿಯಬೇಕಾಯಿತು. ಆದರೆ ಸೂರಾಚಾರಿ ತನ್ನ ಕಲೆಗೆ ಮಾನ್ಯತೆ ದೊರಕಿಸಿಕೊಳ್ಳಲು ಗಿಡ್ಡಿ ಗಡಿಯನ್ನು ದಾಟಲು ಸಾಧ್ಯವಾಗದೇ ಪರಂಪರೆಯ ಸಿಕ್ಕುಗಳಲ್ಲಿ ಸಿಲುಕಿ ಮಾರಿ ಗೊಂಬೆಗಳನ್ನು ಕೆತ್ತುವುದು, ಕೃಷ್ಣೇಗೌಡರ ಸಾಲ ವಸೂಲಾತಿ ಕೆಲಸ, ಭತ್ತದ ವ್ಯಾಪಾರ, ಎತ್ತುಗಳ ವ್ಯಾಪಾರ, ಮಂತ್ರ-ತಂತ್ರ, ತಾಯತ ಕಟ್ಟುವುದು ಹೀಗೆ ತನ್ನ ಮೂಲ ವೃತ್ತಿಗೆ ಸಂಬಂಧವೇ ಇಲ್ಲದ ಕೆಲಸ ಕಾರ್ಯಗಳನ್ನು ಮಾಡುತ್ತಾ ಅವನತಿಯಾಗುವುದನ್ನು ಈ ಕಥೆ ಕಟ್ಟಿಕೊಡುತ್ತದೆ. ಇಲ್ಲಿ ಸಮಾಜ ಗುರುತಿಸಿ ಪ್ರೋತ್ಸಾಹಿಸಬೇಕಾದ ಸೃಜನಶೀಲ ಕಲೆ ಕೊಲ್ಲಲ್ಪಡುತ್ತದೆ.

ಇದೇ ಕಥೆಯ ಮತ್ತೊಂದು ಅದ್ಭುತ ಇತ್ತಾವರದ ಸುಬ್ಬಯ್ಯನ ಹೆಂಡತಿ ಗೌರಿ. ಈಕೆ "ಆಶ್ಚರ್ಯಾದ್ಭುತವಾಗಿದ್ದಳು. ಸೌಂದರ್ಯದಲ್ಲಿ ಸಕಲ ಶಿಲ್ಪಶಾಸ್ತ್ರ ಲಕ್ಷಣಗಳ ಅವತಾರದಂತೆ ಕಾಣುತ್ತಿದ್ದಳು. ಮೂಗು ಕಣ್ಣು ಹುಬ್ಬು ಕೂದಲು ತುಟಿ ರೇಖೆಗಳು ಕತ್ತು ಸ್ತನಗಳು ನಡು ಕಾಲು ಎಲ್ಲ ಇನ್ನೇನು ಮಾಡಿಯೂ ಅವಳ ಸೌಂದರ್ಯವನ್ನು ಹೆಚ್ಚಿಸದಷ್ಟು ಅದ್ಭುತ ಸಾಮರಸ್ಯದಲ್ಲಿ ಮಿಳಿತವಾಗಿದ್ದುವು. ಅದಕ್ಕಿಂತ ಮಿಗಿಲಾಗಿ ಆಕೆಯ ನಡೆ, ಚರ್ಯೆ, ನಿಲ್ಲುವ ನಡೆಯುವ ಭಂಗಿ ಇವುಗಳ ವಿನ್ಯಾಸವಂತೂ ಸೌಂದರ್ಯವೇ ಛಂದೋಬದ್ಧವಾದಂತೆ ಕಾಣುತ್ತಿತ್ತು. ಕುಳಿತರೆ, ನಿಂತರೆ, ನಕ್ಕರೆ ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರವಾದಂತಾಗುತ್ತಿತ್ತು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೨೫) ಆದರೆ ಯಾರಿಗೆ ಈ ಸಾಕ್ಷಾತ್ಕಾರವಾಗುತ್ತಿತ್ತು ಎನ್ನುವುದು ಮಾತ್ರ ಸಂಶಯಾತ್ಮಕವಾದುದು. ಪರಂಪರೆಯ ಕೂಪದಲ್ಲಿ ಮುಳುಗಿರುವ ಈ ಹಳ್ಳಿಗಳಲ್ಲಿ ಗೌರಿಯ ಸೌಂದರ್ಯವನ್ನು ಗುರುತಿಸುವ, ಆಸ್ವಾದಿಸುವ ಮನಸ್ಸುಗಳನ್ನು ನಿರೀಕ್ಷಿಸಲು ಸಾಧ್ಯವೇ? ಇಷ್ಟೆಲ್ಲಾ ಅಪ್ರತಿಮ ಸುಂದರಿಯಾದ ಗೌರಿಗೆ ಜನಿಸಿದ ಮೂರು ಮಕ್ಕಳು ಮಲೆನಾಡಿನ ಶೀತದ ಕಾರಣದಿಂದ ಹುಟ್ಟಿದ ಕೆಲವೇ ವಾರಗಳಲ್ಲಿ ತೀರಿಕೊಂಡಿದ್ದವು. ಇದಾವುದನ್ನೂ ಅರಿಯದೇ, ಆಲೋಚಿಸದೇ ಆಕೆಯ ಮೊಲೆಯಲ್ಲಿ ದೋಷವನ್ನು ಕಾಣುವ ಹಾಗೂ ಅದನ್ನು ಸುಡುವ ಮೂಲಕ ಆಕೆಯ ಸೌಂದರ್ಯವನ್ನು ನಾಶಗೊಳಿಸಲು ಯತ್ನಿಸುವುದು ಪಾರಂಪರಿಕ ಸಮಾಜದ ವ್ಯಂಗ್ಯ. ಇನ್ನೂ ವಿಚಿತ್ರವೆಂದರೆ ಚಲನೆಯನ್ನೇ ಕಳೆದುಕೊಂಡು ಕತ್ತಲೆಯಲ್ಲಿರುವ, ಈ ಜಡಗೊಂಡ ವ್ಯವಸ್ಥೆಯಿಂದ ಹೊರಬರಲು ಸದಾ ಪ್ರಯತ್ನಿಸುತ್ತಿರುವ ಅಪ್ರತಿಮ ಶಿಲ್ಪಿ ಸೂರಾಚಾರಿಯ ಮೂಲಕವೇ ಗೌರಿಯ ಸೌಂದರ್ಯವನ್ನು ನಾಶಗೊಳಿಸುವುದು ಇಲ್ಲಿನ ಮತ್ತೊಂದು ದೊಡ್ಡ ವ್ಯಂಗ್ಯವಾಗಿದೆ. ಗ್ರಾಮೀಣ ಪರಿಸರದಲ್ಲಿ ಬದುಕೇ ಒಂದು ಹೋರಾಟ. ಕೃಷಿಯಿಂದ ಜೀವನ ಸಾಗಿಸುವ ರೈತರದ್ದು ಒಂದು ಬಗೆಯ ಬವಣೆಯಾದರೆ, ಕರಕುಶಲ ಕಲೆಗಳಿಂದ ಜೀವನ ಸಾಗಿಸುವ ಸೂರಾಚಾರಿಯಂತಹ ಶಿಲ್ಪಿಗಳದ್ದು ಮತ್ತೊಂದು ರೀತಿಯ ಬವಣೆ. ಇಲ್ಲಿ ಕಲೆಯಾಗಲಿ, ಕೃಷಿಯಾಗಲಿ, ವ್ಯಾಪಾರವಾಗಲಿ ಎಲ್ಲವೂ ಹೊಟ್ಟೆ ಪಾಡಿನ ದಾರಿಗಳೇ ವಿನಹ ಅಲ್ಲಿ ಸೌಂದರ್ಯಾತ್ಮಕ ನೆಲೆ ಅಮುಖ್ಯವಾದುದು. ಹಾಗೆಯೇ ಸಿರಿಸಂಪತ್ತಿನ ದೃಷ್ಟಿ ಕೂಡ ಮುಖ್ಯವಲ್ಲ. ನೂರಾರು ಸಾವಿರಾರು ವರ್ಷಗಳಿಂದ ಜಾರಿಯಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆ, ಜಾತಿವ್ಯವಸ್ಥೆ, ಕಂದಾಚಾರ, ಮೌಢ್ಯಗಳು ಬದಲಾಗದೆ ಇರುವ, ಬದುಕು ಮತ್ತಷ್ಟು ಮಗದಷ್ಟು ದರಿದ್ರವೂ, ಕಷ್ಟಕರವೂ, ಮೌಢ್ಯವೂ ಆಗುವುದರ ಕಡೆಗಿನ ಬದಲಾವಣೆಯನ್ನೇ ಇಲ್ಲಿ ಅವನತಿ ಎನ್ನಲಾಗಿದೆ. ಸಮಾಜದಲ್ಲಿ ಘಟಿಸುವ ಕೆಲವು ಬದಲಾವಣೆಗಳು ಪ್ರಗತಿ ಎನಿಸಿಕೊಂಡರೆ, ಕೆಲವು ಬದಲಾವಣೆಗಳು ಅವನತಿ ಎನಿಸಿಕೊಳ್ಳುತ್ತವೆ. ಯಾವುದು ಪ್ರಗತಿ ಮತ್ತು ಯಾವುದು

ಅವನತಿ ಎನ್ನುವುದನ್ನು ಗುರುತಿಸುವ ಪ್ರಜ್ಞೆ, ವಿವೇಕ ನಮ್ಮಲ್ಲಿ ಜಾಗೃತವಾಗಿರಬೇಕು ಎಂಬ ಎಚ್ಚರಿಕೆಯನ್ನು ತೇಜಸ್ವಿಯವರ ಅವನತಿ ಕಥೆ ನೀಡುತ್ತದೆ. ಇವರ ಮಾಯಾಲೋಕ, ಜುಗಾರಿ ಕ್ರಾಸ್ ಕಾದಂಬರಿಗಳು ಕೂಡ ಇಂತಹ ತತ್ವದ ವಿಸ್ತರಣೆಗಳೇ ಆಗಿವೆ. ಇಲ್ಲಿ ಪ್ರಗತಿ ಎನ್ನುವುದು ಆಧುನಿಕತೆ ಕಡೆಗಿನ ಚಲನೆ ಅಲ್ಲ. ಹಾಗೆಯೆ ಅದು ಪ್ರಾಚೀನತೆಯ ಕುರಿತ ಪ್ರತಿರೋಧವೂ ಅಲ್ಲ; ಮೆಚ್ಚುಗೆಯೂ ಅಲ್ಲ. ಈ ಅವಳಿ ಬೈನರಿಗೆ ಸಿಲುಕದ ಸಮುದಾಯಿಕ ಆಂತರ್ಯದ ವಿವೇಕ.

ಆಧುನಿಕತೆಯ ಸಂಕೇತವಾದ ಅಭಿವೃದ್ಧಿ, ಕೈಗಾರಿಕರಣದ ನೆಪದಲ್ಲಿ ಗ್ರಾಮಗಳ ಹೊಲ, ಗದ್ದೆ, ಕೆರೆ, ಕುಂಟೆ ಮತ್ತು ತೋಟಗಳು ರಿಯಲ್ ಎಸ್ಟೇಟ್ ಮಾಪಿಯಾಗಳ ಕೈಯಲ್ಲಿ ಸಿಕ್ಕಿಕೊಂಡಿವೆ. ಅವೆಲ್ಲಾ ಎಸ್ಟೇಟುಗಳು, ಸೈಟುಗಳಾಗಿ ಪರಿವರ್ತಿತಗೊಳ್ಳುತ್ತಿವೆ. ಈ ಎಲ್ಲಾ ಕಾರಣಗಳಿಂದ ಯುವಕರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹಳ್ಳಿಯಲ್ಲಿ ರೈತ ಬದುಕಿಗಿಂತ ನಗರದ ಕೂಲಿ ಕೆಲಸ ಉತ್ತಮ ಎಂಬ ಅಭಿಪ್ರಾಯಕ್ಕೆ ಗ್ರಾಮೀಣ ಜನ ಬಂದು ತಲುಪಿದ್ದಾರೆ. ಕರ್ವಾಲೋ ಕಾದಂಬರಿಯ ನಿರೂಪಕ ರೈತರ ಬದುಕಿನ ಬವಣೆಗಳಿಂದ ಬೇಸತ್ತು ಈ ರೀತಿ ವಿವರಿಸುತ್ತಾನೆ. "ವ್ಯಸಾಯದಿಂದ ಲಾಭ ಬರುವುದೆಂಬ ನಂಬಿಕೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಕಟ್ಟುತ್ತಾ ಹೆಚ್ಚೂ ಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರು ಪರಿವರ್ತಿತರಾಗಿದ್ದರು. ಹಾಕಿದ ಲೆಕ್ಕಾಚಾರ ಒಂದೂ ಗುರಿ ತಲುಪುತ್ತಲೇ ಇರಲಿಲ್ಲ. ಅಕಸ್ಮಾತ್ ಕೊಂಚ ಕರಾರುವಕ್ಕಾಗಿ ಬೆಳೆ ಬಂದರೂ ಆ ವೇಳೆಗಾಗಲೇ ಹಣದುಬ್ಬರ, ಏರಿದ ಸಾಮಾನಿನ ಬೆಲೆಗಳು, ವಿಷದಂತೆ ಏರುತ್ತಿದ್ದ ಬ್ಯಾಂಕ್ ಬಡ್ಡಿ ದರ, ಅದನ್ನು ಕಬಳಿಸಿ ಬಿಡುತ್ತಿದ್ದವು. ಹಿಗಾಗಿ ಸದಾ ಮುಂದೆ ಸಿಕ್ಕುವ ಲಾಭದ ಮರೀಚಿಕೆಯ ಹಿಂದೆ ಆರ್ಥಿಕ ಬಿಕ್ಕಟ್ಟಿನ ಮರಳುಗಾಡಿನಲ್ಲಿ ಸಾಗುತ್ತಿದ್ದೆ." (ಕರ್ವಾಲೋ, ೨೦೦೯, ಪುಟ-೨೪ & ೨೫) ಈ ಎಲ್ಲಾ ಕಾರಣಗಳಿಂದ ನಿರೂಪಕ ವ್ಯವಸಾಯದಿಂದ ಲಾಭ ಇರಲಿ, ಬದುಕಲೂ ಸಾಧ್ಯವಾಗುತ್ತಿಲ್ಲ ಎಂದು ತೋಟ ಮಾರುವ ನಿರ್ಧಾರಕ್ಕೆ ಬರುತ್ತಾನೆ.

ಹಳ್ಳಿಯ ಬದುಕು ಬಯಸುವವರನ್ನು ವಿಚಿತ್ರವಾಗಿ ನೋಡುವ, ಅವಮಾನಿಸುವುದು, ಸ್ಥಳೀಯ ಬದುಕನ್ನು ಅನುಮಾನದಿಂದ, ತಿರಸ್ಕಾರದಿಂದ, ಉಪೇಕ್ಷೆಯಿಂದ ನೋಡುವುದು, ಇಲ್ಲವೇ ಸನಾತನ ಸಂಸ್ಕೃತಿ ಎಂದು ಅತಿಯಾಗಿ ಆದರ್ಶೀಕರಿಸುವುದನ್ನು ಇಂದು ನಾವು ನೋಡುತ್ತಿದ್ದೇವೆ. ತೇಜಸ್ವಿಯವರ ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಕಾರಿನಲ್ಲಿ ನುಗುಬೀಡಿನ ಕಡೆ ಹೋಗುವಾಗ ರಂಗಪ್ಪನಿಗೆ "ಜಗನ್ನಾಥ 'ಇಲ್ಲೆ ಎಲ್ಲಾದರೂ ಭೂಮಿ ಕೊಡಿಸಯ್ಯಾ' ಎಂದು ಹಿಡಿದುಕೊಂಡ. ರಂಗಪ್ಪನಿಗೂ ಮತ್ತೂ ಆಶ್ಚರ್ಯವಾಯ್ತು!" ಇದಕ್ಕೆ ರಂಗಪ್ಪ "ಹೇಗೆನ್ನಿಸುತ್ತದೆ ನಿನಗೆ? ಈ ರಸ್ತೆಗಳಲ್ಲೇ ಕೀಲು ಮುರಿದುಕೊಳ್ಳುತ್ತಾ ಬದುಕೋದು

ಬೆಂಗಳೂರು ಪೇಟೆಗಿಂತ ವಾಸಿ ಎನಿಸುತ್ತದೆಯೋ.?" (ಹುಲಿಯೂರಿನ ಸರಹದ್ದು ಕಥಾ ಸಂಕಲನ, ೨೦೦೭, ಪುಟ-೯೧)

ಕುಬಿ ಮತ್ತು ಇಯಾಲ ಕಥೆಯಲ್ಲಿ ಭೈರಾಪುರಕ್ಕೆ ರಸ್ತೆ ಬರುವುದು, ಹದಗೆಟ್ಟ ರಸ್ತೆ ದುರಸ್ತಿಗೊಳ್ಳುವುದು ಯಾರಿಗೂ ಇಷ್ಟವಿಲ್ಲ. "ಭೈರಾಪುರದ ಜನರಿಗೆ ಒಂದು ಬಗೆಯ ಗೂಢ ದ್ವೇಷ ಆ ಹೊಸ ರಸ್ತೆಯ ಮೇಲೆ ಮೂಡತೊಡಗಿತ್ತು. ಆ ರಸ್ತೆಯಾದ ಮೇಲೆ ಹಾಸನದಿಂದ ಲೆವಿ ಭತ್ತ, ಸಾಲ ಮುಂತಾದುವುಗಳ ವಸೂಲಿಗೆ ಡೆಪ್ಯೂಟಿ ಕಮೀಷನರ್, ತಹಶೀಲ್ದಾರ್ ಮೊದಲಾದ ಅಧಿಕಾರಿಗಳು ಬರತೊಡಗಿದ್ದರು. ಯಾವುಯಾವುವೋ ನಿಧಿಗಳಿಗೆ ವಂತಿಗೆ ಕೂಡಿಸುವವರೂ ಅಲ್ಲಿಯ ರಸ್ತೆ ನೋಡಿ ದಿಕ್ಕು ಬದಲಾಯಿಸಿ ಇತ್ತ ಬರತೊಡಗಿದರು. ನೆಂಟರಿಷ್ಟರ ಓಡಾಟವೂ ಹೆಚ್ಚತೊಡಗಿತು. ಕಾಫಿ ಹಾಲು ಇತ್ಯಾದಿಗಳೂ ಎಲ್ಲರ ಮನೆಯಲ್ಲಿ ಹೆಚ್ಚು ಖರ್ಚಾಗತೊಡಗಿತು. ಆಗಿಂದಾಗ್ಗೆ ಶರಾಬು ಕಂಟ್ರಾಕ್ಟರು ವೆಂಕಟಶೆಟ್ಟಿಯ ಕಡೆಯ ಎಕ್ಸೈಸ್ ಪೊಲೀಸಿನವರೂ, ಗೂಂಡಾಗಳೂ, ಗುಮಾನಿ ಇದ್ದ ಮನೆಗಳ ಮೇಲೆಲ್ಲಾ ದಾಳಿ ಮಾಡತೊಡಗಿದರು. ಕಳ್ಳಭಟ್ಟಿ ಉಪಕರಣಗಳ ಜೊತೆಗೆ ಸಿಕ್ಕಿದ್ದನ್ನೆಲ್ಲಾ ದೋಚತೊಡಗಿದರು. ಕಾಫಿ ಕಳ್ಳ ಸಾಗಾಣಿಕೆ ಹಿಡಿಯುವವರು ಸಹ ವಕ್ಕರಿಸಿ ಹಿತ್ತಲಲ್ಲಿದ್ದ ಮೂಟೆ ಬಿಚ್ಚಿಸತೊಡಗಿದರು. ಇವುಗಳೆಲ್ಲದರ ದೆಸೆಯಿಂದ ಅಪ್ರಜ್ಞಾಪೂರ್ವಕವಾಗಿ ಭೈರಾಪುರದ ಜನ ಆ ಹೊಸ ರಿಪೇರಿಯಾದ ರಸ್ತೆಯನ್ನು ದ್ವೇಷಿಸತೊಡಗಿದರು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೦೧) ಹೀಗೆ ಮೂಲಭೂತ ಸೌಲಭ್ಯವಾದ ರಸ್ತೆಯ ಅಭಿವೃದ್ಧಿಯೂ ಸಹ ಸುಲಿಯುವ ಹಾದಿಗಳನ್ನು ತೆರೆದು ಗ್ರಾಮೀಣ ಜನರನ್ನು ಮತ್ತಷ್ಟು ಸಂಕಷ್ಟಗಳಿಗೆ ನೂಕಿದೆ ಎಂಬ ಅಭಿಪ್ರಾಯವನ್ನು ತೇಜಸ್ವಿ ಕಥನ ವ್ಯಕ್ತಪಡಿಸುತ್ತದೆ. ಆಧುನಿಕತೆಯ ರೂಪವಾದ ರಸ್ತೆ ತನ್ನೊಂದಿಗೆ ಎಂತೆಂಥ ಕೇಡುಗಳನ್ನು ತರಬಲ್ಲದು! ಆಧುನಿಕತೆ ಒಳಗೆ ಕೇಡು ಇದೆಯೋ ಅಥವಾ ಅದನ್ನು ಜನ ಬಳಸುವ ವಿಧಾನದಲ್ಲಿ ಕೇಡಿದೆಯೋ? ಇಂತಹ ಪ್ರಶ್ನೆಗಳನ್ನು ತೇಜಸ್ವಿ ಕಥನ ಹುಟ್ಟಿಸುತ್ತದೆ.

ಆಧುನಿಕ ಮನಃಸ್ಥಿತಿ ಎಂಬ ಮಾಯೆ ಯಾವ ರೀತಿ ಆವರಿಸಿಕೊಂಡಿದೆಯೆಂದರೆ ಭಾರತದ ಜೀವನಾಡಿಗಳಾದ ಹಳ್ಳಿಗಳು ಹಾಳೂರುಗಳಾಗಿ, ಮಸಣಗಳಾಗಿ ಪರಿವರ್ತಿತಗೊಂಡಿವೆ. ಹಳ್ಳಿಗಳ ಬದುಕೇ ಆಗಿದ್ದ ಗ್ರಾಮೋದ್ಯೋಗಗಳು, ಗ್ರಾಮ ಕಸುಬುಗಳು ಇಲ್ಲವಾಗಿವೆ. ಇಲ್ಲವೇ ಹೀನ, ಲಾಭವಿಲ್ಲದ ಕೆಲಸಗಳು ಎಂಬಂತೆ ಬಿಂಬಿತವಾಗಿವೆ. ನಮ್ಮ ಸರ್ಕಾರಗಳೂ ಸಹಾ ಗ್ರಾಮಗಳನ್ನು ನಿರಂತರವಾಗಿ ನಿರ್ಲಕ್ಷಿಸುತ್ತಾ ಬಂದಿವೆ. ಅಗತ್ಯ ಕನಿಷ್ಟ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ನಿರ್ಲಕ್ಷಿಸಿರುವುದೂ ಸಹಾ ಹಳ್ಳಿಗಳ ಅವನತಿಗೆ ಕಾರಣವಾಗಿದೆ. ಆಧುನಿಕತೆಯ ಉತ್ಪನ್ನಗಳು ಗ್ರಾಮ ಕಸುಬುಗಳನ್ನು ಅವನತಿಯ ಹಾದಿಗೆ

ತಂದು ನಿಲ್ಲಿಸಿವೆ. ಒಂದು ಸಂದರ್ಭದಲ್ಲಿ ಆಧುನಿಕ ಉತ್ಪನ್ನವಾದ ಪ್ಲಾಸ್ಟಿಕ್, ಯೂರೋಪಿಯನ್ನರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ಮೇದರಹಳ್ಳಿ ಕಾಫಿ ತೋಟದ ದೊರೆಗಳಿಗೆ ಬೇಕಾದ ಬಿದಿರಿನ ಚಿಕ್ಕ ಚಿಕ್ಕ ಕುಕ್ಕೆಗಳನ್ನು ಸರಬರಾಜು ಮಾಡುತ್ತಿತ್ತು. ದೊಡ್ಡ ದೊಡ್ಡ ಯೂರೋಪಿಯನ್ ದೊರೆಗಳು ಮೇದರಹಳ್ಳಿಗೆ ಬೇಟಿಕೊಡುತ್ತಿದ್ದರು. ಎಲ್ಲೇ ಹೋದರೂ ಮೇದರಹಳ್ಳಿಯ ಮೇದರಿಗೆಲ್ಲಾ ಬಹುವಚನ ಸೂಚಕ ಗೌರವ ದೊರೆಯುತ್ತಿತ್ತು. ಹೀಗೆ ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದ್ದ ಮೇದರಹಳ್ಳಿಯನ್ನು ಪ್ಲಾಸ್ಟಿಕ್ ಹೇಗೆಲ್ಲಾ ಆಪೋಷನ ತೆಗೆದುಕೊಂಡಿತು ಎಂಬುದನ್ನು ತೇಜಸ್ವಿಯವರ ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ಗಮನಿಸಬಹುದು.

"ನಾಗರೀಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳನೆಯ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ. ಅನೇಕ ಹಳ್ಳಿ, ಮನೆತನ, ಬುಡಕಟ್ಟುಗಳ ನಿರ್ನಾಮಕ್ಕೆ ಇದು ಕಾರಣವಾದೀತೆಂದು ಯಾರೂ ಕನಸು ಮನಸಿನಲ್ಲಿಯೂ ಊಹಿಸಿರಲಿಲ್ಲ. ಖಾಲಿ ಜಾಗಗಳ ಸಂದುಗೊಂದುಗಳೊಳಗೆಲ್ಲಾ ಹಬ್ಬಿ ಆಕ್ರಮಿಸುವ ಪಾರ್ಥೇನಿಯಮ್, ಯುಪೆಟೋರಿಯಮ್ ಕಳೆಗಳಂತೆ ಪ್ಲಾಸ್ಟಿಕ್, ಪಾಲಿಯುರಿಥೇನ್, ಪಾಲಿಎಥಲೀನ್, ಪಾಲಿಫೈಬರ್, ಪಾಲಿಮಾರ್, ಹೀಗೆ ನಾನಾ ಅವತಾರಗಳನ್ನೆತ್ತಿ ಮಾರುಕಟ್ಟೆಯ ಎಲ್ಲಾ ಕ್ಷೇತ್ರಗಳಿಗೆ, ಎಲ್ಲಾ ಅವಕಾಶಗಳಿಗೆ ಮುತ್ತಿಗೆ ಹಾಕಿತು." (ಜುಗಾರಿ ಕ್ರಾಸ್, ೨೦೦೯, ಪುಟ-೧೦)

ಹೀಗೆ ಅವನತಿಯನ್ನು ಕಂಡ ಮೇದರಹಳ್ಳಿಯ ಪ್ರಸ್ತುತ ಸ್ಥಿತಿ ಈ ರೀತಿ ಇದೆ. "ಮೇದರಹಳ್ಳಿಯ ಸುತ್ತಮುತ್ತ ಎಲ್ಲಿ ನೋಡಿದರೂ ಆಯಸ್ಸು ಮುಗಿದು ಸತ್ತು ನಿಂತಿದ್ದ ದೊಡ್ಡ ದೊಡ್ಡ ರಾಕ್ಷಸಾಕಾರದ ಬಿದಿರು ಹಿಂಡಿಲುಗಳು! ಕೆಲವು ಕುಂಬಾಗಿ ಕುಸಿಯುತ್ತಿದ್ದರೆ, ಕೆಲವು ಮಳೆ ಗಾಳಿಗಳ ತುಯ್ದಾಟದಲ್ಲಿ ಅಡ್ಡಡ್ಡಲಾಗಿ ಬುಡಸಮೇತ ಮುಗುಚಿ ಬಿದ್ದಿದ್ದವು. ಮೇದರಹಳಿಯ ಅವಸಾನವೂ ಅಷ್ಟೇ ವೇಗವಾಗಿ ಕ್ಷಿಪ್ರವಾಗಿ ಸಂಭವಿಸಿತು.... ಮೇದರಹಳ್ಳಿಯ ಅವಸಾನದೊಂದಿಗೆ ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೂ ಆ ಇಡೀ ಪ್ರಾಂತ್ಯ ಅನೇಕಾನೇಕ ಕಾಳ ದಂಧೆಗಳ ತವರು ಮನೆಯಾಯ್ತು... ಮೇದರಹಳ್ಳಿಯ ಜನ ಅದರಲ್ಲೂ ಯುವಕರು ಹೇಳಹೆಸರಿಲ್ಲದೇ ಚೆಲ್ಲಾಪಿಲ್ಲಿಯಾದರು. ನಗರಗಳಲ್ಲಿ... ಕಸದ ತೊಟ್ಟಿಗಳಿಂದ ಗುಜರಿ ಸಾಮಾನು ಸಂಗ್ರಹಿಸುವ ಕೆಲಸಕ್ಕೆ ಇಳಿದು ಕೆಲವು ಮೇದರ ಹುಡುಗರು ಬೊಂಬಾಯಿಯವರೆಗೂ ಅಡ್ಡಾಡಿ ಮಾದಕ ವಸ್ತು ಸಾಗಾಣಿಕೆ ಜಾಲದೊಳಗೆ ಸೇರಿಬಿಟ್ಟರು." (ಜುಗಾರಿ ಕ್ರಾಸ್, ೨೦೦೯, ಪುಟ-೧೨) ಹೀಗೆ ಆಧುನಿಕತೆಯ ಪ್ರವೇಶ ಭಾರತೀಯ ಗ್ರಾಮಗಳನ್ನು, ಗ್ರಾಮ ಕಸುಬುಗಳನ್ನು, ಅಲ್ಲಿನ ಜನರನ್ನು ಚೆಲ್ಲಾಪಿಲ್ಲಿಯಾಗುವಂತೆ, ಅದರಲ್ಲೂ

ಯುವಕರು ದಿಕ್ಕುತಪ್ಪುವಂತೆ, ಸಮಾಜದ್ರೋಹ ಕೃತ್ಯಗಳಲ್ಲಿ ಭಾಗಿಯಾಗುವಂತೆ ಮಾಡಬಲ್ಲದು ಎಂಬ ಇಂಗಿತವನ್ನು ತೇಜಸ್ವಿ ಕಥನ ಸೂಚಿಸುತ್ತದೆ. ಈ ಬಗ್ಗೆ ನಮ್ಮನ್ನು ಗಾಢವಾಗಿ ಚಿಂತಿಸುವಂತೆ ಪ್ರೇರೇಪಿಸುತ್ತದೆ.

ಆಧುನಿಕತೆಯ ಮತ್ತೊಂದು ಪರಿಕರವಾದ ಶಿಕ್ಷಣದ ಅನುಭವಗಳು ಪಾರಂಪರಿಕ ಯಾಜಮಾನ್ಯದ ಕಪಿಮುಷ್ಠಿಯಿಂದ ನಮ್ಮನ್ನು ಬಿಡುಗಡೆಗೊಳಿಸಿವೆ ನಿಜ; ಆದರೆ ತಾನು ನಿಂತಿರುವ ಈ ನೆಲದಿಂದ ಅತಂತ್ರನನ್ನಾಗಿ, ಪರಕೀಯರನ್ನಾಗಿ ಮಾಡಿವೆ. ಆಧುನಿಕ ಶಿಕ್ಷಣದ ಅನುಭವಗಳು ಈ ಸಮಾಜವನ್ನು ಮತ್ತಷ್ಟು ಆಳವಾಗಿ ಅರಿಯಲು, ನಾವು ಮತ್ತಷ್ಟು ಪ್ರಬುದ್ಧರಾಗಲು, ನಮ್ಮ ಮನುಷ್ಯ ಸಂಬಂಧಗಳು ಮತ್ತಷ್ಟು ಬಲಗೊಳ್ಳಲು, ದಿಕ್ಕು ತಪ್ಪಿರುವ ಪಾರಂಪರಿಕ ಸಮಾಜವನ್ನು ಸರಿದಾರಿಗೆ ತರಲು ಸಹಾಯವಾಗಬೇಕಿತ್ತು ಆದರೆ ಹಾಗಾಗುತ್ತಿಲ್ಲ.

ಆಧುನಿಕ ಶಿಕ್ಷಣದ ಜ್ಞಾನ ಈ ವ್ಯವಸ್ಥೆಯ ಕುರಿತು ಜಿಗುಪ್ಸೆಯನ್ನು, ಅಸಹಾಯಕತೆಯನ್ನು, ಆಸೆಬುರುಕುತನವನ್ನು, ಮೋಸ-ವಂಚನೆಗಳ ದುಷ್ಟ ಬುದ್ಧಿಯನ್ನು, ಮನುಷ್ಯ ಮನುಷ್ಯರ ನಡುವೆ ಕಂದಕಗಳನ್ನು, ಗೊಂದಲ-ಗಾಬರಿಗಳನ್ನು, ಪರಕೀಯತೆಯನ್ನು ತಂದೊಡ್ಡಿದೆ.ಇದು ಈ ನೆಲದಿಂದ ಅಥವಾ ತನ್ನ ಸುತ್ತಲಿನ ಪರಿಸರದಿಂದ ದೂರವಾಗುವಂತೆ ಮಾಡುತ್ತಿದೆ. ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಆಧುನಿಕ ವ್ಯವಸ್ಥೆಯಲ್ಲಿನ ಶಿಕ್ಷಿತರಾದ ಗೋಪಾಲಯ್ಯ, ಜಗನ್ನಾಥ, ರಂಗಪ್ಪ ಇವರು ಪರಸ್ಪರ ನಡೆದುಕೊಳ್ಳುವ, ವರ್ತಿಸುವ, ನಿಗೂಢವಾಗುವ, ವಾಸ್ತವಗಳನ್ನು ಪರಸ್ಪರ ಮರೆಮಾಚುವ ಹಾಗೂ ಸಂಶಯದಿಂದ ನೋಡುವ ಸಂಗತಿಗಳು ಅವರೆಲ್ಲರೂ ಈ ನೆಲದಿಂದ ಮನುಷ್ಯ ಸಂಬಂಧಗಳಿಂದ ದೂರವಾಗುತ್ತಿರುವುದರ ಸಂಕೇತವಾಗಿದೆ. ಅವರೆಲ್ಲರೂ ಸರಿಯುತ್ತಿರುವಂತೆ ಬಾಸವಾಗುತ್ತಿರುವ ಉಗ್ರಗಿರಿ, ಸದಾ ಸುರಿಯುತ್ತಿರುವ ಮಳೆ, ಗಾಳಿ, ಮೋಡ, ಪ್ರವಾಹ, ಭೂಕಂಪ-ಇವೆಲ್ಲವೂ ಪ್ರಾರಬ್ಧವೂ, ಅಸಹಜವೂ, ವಿಶಿಷ್ಟವೂ, ನಿಗೂಢವೂ ಎಂಬಂತೆ ಭ್ರಮಿಸಿತಾವು ನಿಂತಿರುವ ನೆಲದಿಂದ ಪರಕೀಯತೆಯನ್ನು ಅನುಭವಿಸುತ್ತಾರೆ. ಸಹಜತೆಯನ್ನು ಕಳೆದುಕೊಂಡವರಂತೆ ವರ್ತಿಸುತ್ತಾರೆ. ನಾವು ಯಾವುದೋ ಅವಾಸ್ತವ ಪ್ರಪಂಚದಲ್ಲಿ ಸಿಕ್ಕಿಬಿದ್ದಿದ್ದೇವೆ ಎಂದು ಭಾವಿಸಿ ಆ ವ್ಯವಸ್ಥೆಯಿಂದ ಪಲಾಯನ ಮಾಡುತ್ತಾರೆ.

ಆದರೆ ಅದೇ ಕಾದಂಬರಿಯ ಕಾಂಪ್ರ, ಕುಳುಪ, ಲೋರಿ, ಮರಸರಿಗೆ ಈ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದ ವ್ಯಾಪಾರಗಳು ಯಾವುದೇ ರೀತಿಯ ಅಸಹಜವೂ, ವಿಶಿಷ್ಟವೂ, ನಿಗೂಢವೂ ಆಗಿ ಕಾಣುವುದಿಲ್ಲ. ಅವರು ಇವೆಲ್ಲವನ್ನೂ ಸಹಜ ವ್ಯಾಪಾರದಂತೆ ಭಾವಿಸಿ ಜೀವಿಸುತ್ತಾರೆ. ಅವರನ್ನೆಂದೂ ಈ ಪರಕೀಯತೆಯ ಅನುಭವ ಕಾಡುವುದಿಲ್ಲ. ಅವರೆಂದೂ ನಾವು ನಿಂತಿರುವ ವಾಸ್ತವದಿಂದ ಪಲಾಯನ ಮಾಡುವುದಿಲ್ಲ. ಕಾಂಪ್ರ, ಕುಳುಪ, ಲೋರಿ,

ಮರಸರ ಇವರೆಲ್ಲರ ಬದುಕಿನ ಶೈಲಿ, ನಂಬಿಕೆಗಳು, ಆಚರಣೆಗಳು ಹಾಗೂ ವ್ಯವಹಾರಗಳ ಲೋಕ ಗೋಪಾಲಯ್ಯ, ಜಗನ್ನಾಥ, ರಂಗಪ್ಪನವರಿಗೆ ಕಿರಾತ, ಪಿಶಾಚ, ಪೈಶಾಚಿಕ ಹಾಗೂ ನರಭಕ್ಷಕ ಪ್ರಪಂಚವಾಗಿ ಕಾಣುತ್ತದೆ. ಆಧುನಿಕ ಶಿಕ್ಷಣದಿಂದ ಈ ಸಮಾಜವನ್ನು ನೋಡುವ ಕ್ರಮದಿಂದಲೇ ಈ ಬಗೆಯ ಪರಕೀಯತೆ, ಅಸಹಾಯಕತೆ ಕಾಡುತ್ತಿದೆ. ಇಲ್ಲಿ ಆಧುನಿಕ ಜ್ಞಾನ ಮತ್ತು ಪಾರಂಪರಿಕ ಜ್ಞಾನಗಳ ತುಲನೆಯನ್ನು ತೇಜಸ್ವಿ ಕಥನವು ಮಾಡುತ್ತದೆ.

ಈ ನಿಗೂಢ ಮನುಷ್ಯರು ಕಿರುಕಾದಂಬರಿಯಲ್ಲಿ ಕೆಸರಿನಲ್ಲಿ ಹೂತುಹೋಗುವ ಜೀಪು ಮತ್ತೆ ಹೊರಬರುವುದೇ ಇಲ್ಲ. ಎಲ್ಲಿಗಾದರೂ ನಮ್ಮನ್ನು ತಲುಪಿಸಬೇಕಾದ ರಸ್ತೆ ಮುಂದಕ್ಕೆ ಹೋಗುವುದೇ ಇಲ್ಲ. ಬರವಣಿಗೆಗಾಗಿ ಹೊಸ ಅನುಭವಗಳನ್ನು ಪಡೆಯಲು ಭೂಮಿ ಕೊಂಡು ಅಲ್ಲಿಯೇ ತಳವೂರಲು ಬಂದ ಜಗನ್ನಾಥನಿಗೆ ಹಾಗೆ ಮಾಡಲೂ ಸಾಧ್ಯವಾಗುವುದಿಲ್ಲ. ಅಲ್ಲದೆ ಇಲ್ಲಿ ತನ್ನ ಹೆತ್ತ ಮಗುವನ್ನೂ ಸಂಸ್ಕಾರ ಮಾಡದೆ ಬಯಲಿಗೆ ಬಿಸಾಡುವ ಆಚಾರವೂ ಇದೆ. ಆಧುನಿಕ ವಿಕೃತಿಗೆ ತನ್ನನ್ನು ಒಡ್ಡಿಕೊಂಡು ತನ್ನ ನಾಲಿಗೆಯನ್ನು ಕಳೆದುಕೊಂಡ ಶಾರಿಯೂ ಇಲ್ಲಿ ಇದ್ದಾಳೆ. ಹೀಗೆ ಆಧುನಿಕತೆ ಮತ್ತು ಪರಂಪರೆಗಳ ನಡುವಿನ ಸಂಘರ್ಷವು ನಿಸರ್ಗ ಮತ್ತು ಮನುಷ್ಯರ ನಡುವಿನ ಸಂಘರ್ಷವಾಗಿಯೂ ಸಹ ಇಲ್ಲಿ ರೂಪ ತಾಳುತ್ತದೆ. ಹತ್ತಾರು ಪಾತ್ರಗಳಲ್ಲಿ ಹತ್ತಾರು ಅವತಾರಗಳಲ್ಲಿ ಹೆಣಗಿದ ಗೋಪಾಲಯ್ಯನಿಗೂ ಕೂಡ ನಿಸರ್ಗ ನಿಗೂಢವೆ ಹೌದು. ಎಂತಹ ಪಳಗಿದ ಆಧುನಿಕ ಶಿಕ್ಷಿತನಿಗಾಗಲೀ ಅಥವಾ ಸ್ಥಳೀಯ ರೈತನಿಗಾಗಲೀ ಇಲ್ಲವೆ ಕಾಡು ಬುಡಕಟ್ಟಿನವನಿಗಾಗಲಿ ಈ ಪ್ರಕೃತಿ ಹಿಡಿತಕ್ಕೆ ಸಿಕ್ಕದ ನಿಗೂಢ. ಇಲ್ಲಿ ಮನುಷ್ಯರು ಮಾತ್ರವಲ್ಲ ಪ್ರಕೃತಿಯೂ ನಿಗೂಢವೇ. ಮನುಷ್ಯನ ಆಧುನಿಕತೆಯ ಜ್ಞಾನ ಪ್ರಕೃತಿಯ ಅಗಾಧತೆಯ ಎದುರು ಗೌಣ ಎಂಬುದು ಇಲ್ಲಿನ ತತ್ವಜ್ಞಾನ.

ಕರ್ವಾಲೋ ಕಾದಂಬರಿಯಲ್ಲಿ ಪಾರಂಪರಿಕ ಸಹಜ ಜ್ಞಾನದ ರೂಪಕಗಳಾದ ಮಂದಣ್ಣ, ಬಿರಿಯಾನಿ ಕರಿಯಪ್ಪ, ಹಾವುಗೊಲ್ಲರ ಎಂಕ್ಟ ಮತ್ತು ಆಧುನಿಕ ಶಿಕ್ಷಣ ಪಡೆದ ವಿಜ್ಞಾನಿ ಕರ್ವಾಲೋರ ಸಮೀಕರಣದಿಂದ ನಾವು ಪರಿಸರವನ್ನು, ಅಲ್ಲಿನ ಜೀವ ಜಾಲವನ್ನು ನೋಡುವ, ಗ್ರಹಿಸುವ ಹೊಸ ಬಗೆಯ ಮಿಮಾಂಸೆಯನ್ನು ತೇಜಸ್ವಿ ಕಥನವು ಕಟ್ಟಲು ಪ್ರಯತ್ನಿಸುತ್ತದೆ. ಆಧುನಿಕತೆಯ ಬಳುವಳಿಯಾದ ಸಂಶೋಧನೆಗಳು, ವಿಜ್ಞಾನ ಮತ್ತು ತಂತ್ರಜ್ಞಾನಗಳು ವಿಶ್ವವಿದ್ಯಾಲಯಗಳಲ್ಲಿ, ಲ್ಯಾಬ್‌ಗಳಲ್ಲಿ ಕೇಂದ್ರೀಕರಣಗೊಂಡು ಏಕಮುಖಿ ಚಿಂತನೆಗಳಲ್ಲಿ ನಿರತವಾಗಿವೆ. ಅವೆಲ್ಲವೂ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದೊಂದಿಗೆ ಪ್ರಾಯೋಗಿಕವಾಗಿ ಚಲಿಸದ ಹೊರತು ಅವುಗಳ ಲಾಭ ಮತ್ತು ಯಶಸ್ಸು ಅಸಾಧ್ಯ. ಹೊಸ ಸಂವೇದನೆ ಹಳೆಯ ಕಂದಾಚಾರಗಳನ್ನು ಖಂಡಿಸುತ್ತಲೇ, ಅದನ್ನು ಸಂಪೂರ್ಣ ನಿರಾಕರಿಸದೇ ಅದರಲ್ಲಿನ ಒಳಿತುಗಳನ್ನು ಆಯ್ದುಕೊಂಡು ನಡೆಯಬೇಕಿದೆ. ಆಧುನಿಕತೆ ಮತ್ತು ಪರಂಪರೆ

ಎರಡರಲ್ಲೂ ಕೇಡುಗಳಿವೆ. ಹಾಗೆಯೆ ಕರ್ವಾಲೋ ನಿರೂಪಕನಿಗೆ ಹೇಳುವಂತೆ 'ಕಣ್ಣು ತೆರೆದು ನೋಡಿದರೆ' ಈ ಕೆಡುಕುಗಳನ್ನು ಮೀರಿದ ಅಗಾಧವಾದ ಅದ್ಭುತ ಜ್ಞಾನವೂ ಇದೆ. ಆದರೆ ನಾವು ಕೆಡಕುಗಳನ್ನು ಮೈಮೇಲೆ ಎಳೆದುಕೊಂಡು ತೊಳಲಾಡುತ್ತಿದ್ದೇವೆ. ಇಲ್ಲವೇ ಸಂಪೂರ್ಣ ನಿರ್ಲಕ್ಷಿಸಿ ನಿರೂಪಕನಂತೆ ಪಲಾಯನ ಮಾಡುತ್ತಿದ್ದೇವೆ ಎಂಬುದು ಕಾದಂಬರಿಯ ಧ್ವನಿಯಾಗಿದೆ.

ಈ ಹಿನ್ನೆಲೆಯಲ್ಲಿ ಕರ್ವಾಲೋ ಮಂದಣ್ಣನ ತಿಳುವಳಿಕೆಯನ್ನು ಹೀಗಳೆದ ಪ್ರಭಾಕರನಿಗೆ ಮತ್ತು ನಿರೂಪಕನಿಗೆ ಹೇಳುವ ಮಾತುಗಳನ್ನು ಗಮನಿಸಬಹುದು. "ನಾನ್ಸೆನ್ಸ್ ನನ್ನ ಹತ್ತರ ಶಿಷ್ಯ ವೃತ್ತಿ ಮಾಡಿ ನೀನು ತರಬೇತಾಗಿರೋದು ಇಷ್ಟೇನೋ ಪ್ರಭಾಕರ. ನಾನು ಪ್ರೋಫೆಸರು, ಮಂದಣ್ಣ ಹಳ್ಳಿ ಗಮಾರ, ಇವೆಲ್ಲಾ ಹೆಬ್ಬುಬ್ಬೆಯನ್ನು ನೀನು ನಿಜಾಂತ ತಿಳಿದರೆ ಏನಪ್ಪ ಕಲಿತಂತೆ ಆಯ್ತು? ಇದರಲ್ಲೇ ನಿನ್ನ ಆಯಸ್ಸು ಮುಗಿದು ಹೋಗುತ್ತೆ. ಸತ್ಯದ ಕಿಂಚಿತ್ ದರ್ಶನಾನೂ ಆಗೋಲ್ಲ ನಿನಗೆ. ಈ ಮಾಯೆನೆಲ್ಲಾ ಮೀರಬೇಕು ನಾವು. ಆಗಲೇ ನಮಗೆ ಬೇರೆ ಬೇರೆ ಜಗತ್ತು, ಪ್ರಪಂಚ ಕಾಣ್ತದೆ." (ಕರ್ವಾಲೋ, ೨೦೦೯, ಪುಟ–೭೫)

ಕರ್ವಾಲೋ ಕಾದಂಬರಿಯ ನಿರೂಪಕ ವಿಜ್ಞಾನಿ ಕರ್ವಾಲೋ ಅವರೊಂದಿಗಿನ ಒಡನಾಟಕ್ಕೂ ಮೊದಲು ಅಹಂ, ಉಡಾಫೆಯ ವ್ಯಕ್ತಿತ್ವದವನಾಗಿರುತ್ತಾನೆ. ತನ್ನ ಸುತ್ತಲಿನ ಪರಿಸರ ಮತ್ತು ಜನಜೀವನದಿಂದ ತನ್ನನ್ನು ಪ್ರತ್ಯೇಕಿಸಿಕೊಂಡು ನೋಡುತ್ತಿರುತ್ತಾನೆ. ಅವುಗಳಿಗಿಂತ ನಾನು ಭಿನ್ನ, ಶ್ರೇಷ್ಠ ಎಂಬ ಮನೋಭಾವ ಉಳ್ಳವನಾಗಿರುತ್ತಾನೆ. ಇದು ನಿರೂಪಕನ ಅಕ್ಷರಜ್ಞಾನದ ಫಲವಾಗಿರುತ್ತದೆ. ಹಾಗಾಗಿ ಆತನಿಗೆ ಮಂದಣ್ಣ ಕಾಡು ಅಲೆಯುವ ದಡ್ಡನಾಗಿಯೂ, ಪ್ಯಾರ ಮೊದಲ ದರ್ಜೆಯ ಅವಿವೇಕಿಯಾಗಿಯೂ, ಜೇನು ಹುಳುಗಳು ಮಾನವನ ಶತ್ರುವಂತೆಯೂ ಕಾಣುತ್ತವೆ. ಆಧುನಿಕ ಶಿಕ್ಷಣದ ಫಲವಾದ ಪ್ರತಿಯೊಂದನ್ನೂ ಲಾಭದ, ವ್ಯಾವಹಾರಿಕ ದೃಷ್ಟಿಯಿಂದ ನೋಡುವ ನೋಟ ಕ್ರಮ ಆತನಲ್ಲಿ ವ್ಯವಸಾಯದ ಬಗ್ಗೆ, ಕಾಡಿನ ಬಗ್ಗೆ, ಅಲ್ಲಿನ ಜನಜೀವನದ ಬಗ್ಗೆ ಬೇಸರ ಮತ್ತು ರೇಜಿಗೆಯನ್ನು ಉಂಟುಮಾಡುತ್ತದೆ. ಯಾವುದೋ ಕಾಣದ ಹಿಡಿತಗಳಿಗೆ ಸಿಕ್ಕಿಹಾಕಿಕೊಂಡಿದ್ದೇನೆ ಎಂಬಂತೆ ಈತ ವರ್ತಿಸುತ್ತಾನೆ. ಪ್ರತಿಯೊಂದನ್ನೂ ವ್ಯಾಪಾರಿ ಮನೋಭಾವದಿಂದಲೇ ನೋಡುತ್ತಿರುತ್ತಾನೆ. ನಿರೂಪಕ ನಾರ್ವೆ ರಾಮಯ್ಯನಲ್ಲಿ ಮಂದಣ್ಣನ ವಿವಾಹದ ಕುರಿತು ಮಾತನಾಡುವಾಗ ಅವನು ಹುಳಹುಪ್ಪಟೆ ಹಿಡಿಯುವವ, ಕಾಡು ಅಲೆಯುವವ ಮುಂತಾದ ಸಂಗತಿಗಳನ್ನು ನಿರೂಪಕನ ಗಮನಕ್ಕೆ ತರುತ್ತಾನೆ. "ಆಗ ನಿರೂಪಕನು ರಾಮಯ್ಯನಿಗೆ ಹುಳಹುಪ್ಪಟೆ ವಿಚಾರ ತಿಳಿಯುವುದಕ್ಕೆ ಸರ್ಕಾರ ಕರ್ವಾಲೋರಿಗೆ ತಿಂಗಳಿಗೆ ಸಾವಿರದೈನೂರು ರೂಪಾಯಿ ಸಂಬಳ ಕೊಡುತ್ತಿದೆ ಎನ್ನುತ್ತಾನೆ... ಹೀಗೆ ಬದುಕಿನ ಕ್ರಮವನ್ನು ಹಣದಿಂದ, ಲಾಭದಿಂದ, ಫಾಯಿದೆ ದೃಷ್ಟಿಯಿಂದಲೇ

ನೋಡುತ್ತಿದ್ದದ್ದು ಕಾಣಿಸುತ್ತದೆ... ಈ ದೃಷ್ಟಿಕೋನವು ಹೊರಗಿನಿಂದ ಪ್ರೇರಿತವಾಗಿರುವಂತಹದ್ದು ಎಂದಾದರೆ ಪರಂಪರೆಯೊಳಗೆ ಮೊದಲಿನಿಂದಲೂ 'ಹಣ'ಕ್ಕಾಗಿ ಬೆಲೆ ಕೊಡುವ ಧೋರಣೆ ಇರಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಹುಟ್ಟು, ಸಾವು, ಮದುವೆ- ಇಂತಹ ಮನುಷ್ಯನ ಮೂಲಭೂತ ಅಸ್ಥಿತ್ವವನ್ನೇ ಹಣದೊಡನೆ ತಳುಕು ಹಾಕಿ ನೋಡುವ ದೃಷ್ಟಿಕೋನ ಈಗ ಪ್ರಧಾನ ಆಯಾಮವನ್ನು ಪಡೆದುಕೊಳ್ಳುತ್ತಿರುವಷ್ಟು ಹಿಂದೆ ಗ್ರಾಮೀಣ ಜಗತ್ತಿನಲ್ಲಿ ಇರಲಿಲ್ಲ." (ಶಶಿಕಲಾ ಎಚ್., ಏಕ-ಅನೇಕ, ೨೦೦೫, ಪುಟ-೨೦೩.)

ಆದರೆ ಪ್ರಸ್ತುತ ಗ್ರಾಮೀಣ ಜಗತ್ತು ಸಹಾ ನಗರ ಕೇಂದ್ರಿತವಾದ 'ಹಣ'ದ ಜಗತ್ತನ್ನು ತನ್ನೊಳಗೆ ಆವಾಹನೆ ಮಾಡಿಕೊಳ್ಳುತ್ತಿದೆ. ಕರ್ವಾಲೋ ನಿರೂಪಕನನ್ನು ವ್ಯಾವಹಾರಿಕವಾಗಿ ವರ್ತಿಸುವ, ಆಧುನಿಕ ಶಿಕ್ಷಣದ ಶ್ರೇಷ್ಠತೆಯ ದೋರಣೆಯಿಂದ ಈ ಸಮಾಜವನ್ನು ನೋಡುವ, ಗ್ರಹಿಸುವ ದೃಷ್ಟಿಕೋನಗಳಿಂದ ಬಿಡುಗಡೆಗೊಳಿಸುತ್ತಾರೆ. ಕಣ್ತೆರದು ನೋಡುವ ಹೊಸ ನೋಟಕ್ರಮವೊಂದನ್ನು ಕಲಿಸುತ್ತಾರೆ. ಹುಳ ಹುಪ್ಪಟೆ ಹಿಡಿಯುತ್ತಾ, ಕಾಡು ಅಲೆಯುವ ಹಳ್ಳಿ ಗಮಾರ. ಪರಿಸರದ ಜೀವಜಾಲದ ಬಗ್ಗೆ ಅದರಲ್ಲೂ ಹಾರುವ ಓತಿಯ ಬಗ್ಗೆ ಮಂದಣ್ಣನ ಜ್ಞಾನ ಮತ್ತು ತಿಳುವಳಿಕೆಯನ್ನು ಕರ್ವಾಲೋ ಗುರುತಿಸುವುದು ಹೀಗೆ "ಅವನೊಬ್ಬ ಹುಟ್ಟಾ ನ್ಯಾಚುರಲಿಸ್ಟ್. ಹೆಚ್ಚೂ ಕಡಿಮೆ ಈವರೆಗೆ ಅವನು ಹೇಳಿರೋದು ಒಂದೊಂದು ಕೂಡ ಅದರ ವಿವರಗಳಲ್ಲಿ ಸಹ ಸುಳ್ಳಾಗಿಲ್ಲ. ಅಷ್ಟೊಂದು ಸೂಕ್ಷ್ಮವಾಗಿ ಗ್ರಹಿಸ್ತಾನೆ. ಅದ್ಭುತ ಪ್ರಕೃತಿ ಶಾಸ್ತ್ರಜ್ಞ ಅವನು. ಅಂಥೋನು ನನ್ನ ಹತ್ರ ಬಂದು ಪ್ಯೂನ್ ಕೆಲಸ ಕೊಡೀಂದರೆ ನನಗೆ ಸಿಟ್ಟು ಬರೋದಿಲ್ಲವೇ?" (ಕರ್ವಾಲೋ, ೨೦೦೯, ಪುಟ-೭೭) ಈ ಹೊಸ ಸಂವೇದನೆ ಹಳೆಯದನ್ನು ನೋಡಬೇಕಾದ ದೃಷ್ಟಿಕೋನವವನ್ನು ಪ್ರತಿನಿಧಿಸುತ್ತದೆ.

ಇಡೀ ಕಾದಂಬರಿಯಲ್ಲಿ ಆಧುನಿಕತೆಯ ಪ್ರತಿನಿಧಿ ವಿಜ್ಞಾನಿ ಕರ್ವಾಲೋ ಒಂದು ಕೊನೆಯಾದರೆ, ಪರಂಪರೆಯ ಪ್ರತಿನಿಧಿ ಹುಳ ಹುಪ್ಪಟೆ ಹಿಡಿಯುತ್ತಾ ಕಾಡು ಅಲೆಯುವ ಮಂದಣ್ಣ ಮತ್ತೊಂದು ಕೊನೆ. "ಕರ್ವಾಲೋ ಅವರ ಅಸ್ತಿತ್ವದ ಬೇರುಗಳು ವಿಜ್ಞಾನ ಕ್ಷೇತ್ರದಲ್ಲಿ ನೆಲೆ ಪಡೆದುಕೊಂಡರೆ, ಮಂದಣ್ಣನ ಅಸ್ತಿತ್ವ ಇರುವುದು ಪ್ರಕೃತಿಯಲ್ಲಿ." (ಬಸವರಾಜು ಜಿ.ಪಿ., ತೇಜಸ್ವಿ ಲೋಕ, ೨೦೦೭, ಪುಟ-೦೯) ಈ ಇಬ್ಬರೂ ಕಾದಂಬರಿಯ ಬಹುಮುಖ್ಯ ಧಾತುಗಳಾಗಿದ್ದು, ಇದೇ ಕಾದಂಬರಿಯ ಚಲನೆಗೂ, ಸಾಮಾಜಿಕ ಚಲನೆಗೂ ಕಾರಣವಾಗಿದೆ. ಇಲ್ಲಿ ಆಧುನಿಕತೆಯ ಸಂಕೇತವಾದ ಕರ್ವಾಲೋ ಮತ್ತು ಪರಂಪರೆಯ ಸಂಕೇತವಾದ ಮಂದಣ್ಣ ತಮ್ಮಷ್ಟಕ್ಕೆ ತಾವು ಸಂಪೂರ್ಣರೇನಲ್ಲ. ಕಾದಂಬರಿಯಲ್ಲಿ ಹಾರುವ ಓತಿಯ ಹುಡುಕಾಟದ ಹಿನ್ನೆಲೆಯಲ್ಲಿ ಕೈಗೊಳ್ಳುವ ಪಯಣದಲ್ಲಿ ಕರ್ವಾಲೋ ಅಥವಾ ಮಂದಣ್ಣ ಈ ಇಬ್ಬರಲ್ಲಿ ಯಾರೊಬ್ಬರ ಅನುಪಸ್ಥಿತಿ ಕಾಡಿದರೂ ಈ ಪಯಣ ಅಪೂರ್ಣವಾಗುತ್ತದೆ.

ಕರ್ವಾಲೋ ಮತ್ತು ಮಂದಣ್ಣ ಈ ಇಬ್ಬರ ಉಪಸ್ಥಿತಿ ಮಾತ್ರ ಪಯಣಕ್ಕೆ ಪರಿಪೂರ್ಣತೆಯನ್ನು ತಂದುಕೊಡುತ್ತದೆ. ಇಲ್ಲಿ ಆಧುನಿಕತೆ ಮತ್ತು ಪರಂಪರೆ ಕೂಡಿ ಚಲಿಸುವುದು ಸಮಾಜದ ಒಳಿತಿನ ದೃಷ್ಟಿಯಿಂದ ಸಮಂಜಸ ಹಾಗೂ ಪರಿಪೂರ್ಣವಾದುದು ಎಂಬುದು ಕರ್ವಾಲೋ ಕಾದಂಬರಿಯ ಧ್ವನಿಯಾಗಿದೆ. ಹೀಗೆ ತೇಜಸ್ವಿಯವರ ಕಥನವು ಆಧುನಿಕತೆ ಮತ್ತು ಪರಂಪರೆ ಕೂಡಿಬಾಳುವ ಅಗತ್ಯವನ್ನು ಹೇಳುತ್ತಲೇ, ಮುಂದುವರೆದು ಈ ಎರಡೂ ಸಂವೇದನೆಗಳಿಂದ ನಿರ್ಲಿಪ್ತವಾಗಿ ಪರ್ಯಾಯಗಳ ಹುಡುಕಾಟದಲ್ಲಿ, ಭಿನ್ನ ಮಾರ್ಗಗಳ ಶೋಧನೆಯಲ್ಲಿ ತೊಡಗುತ್ತದೆ. ಅದು ಜುಗಾರಿಕ್ರಾಸ್, ಚಿದಂಬರ ರಹಸ್ಯ, ಮಾಯಾಲೋಕ ಕೃತಿಗಳಲ್ಲಿ ಕಾಣಬಹುದು. ಜುಗಾರಿಕ್ರಾಸ್ ಕಾದಂಬರಿಯ ಮೂಲಕ ಈ ನವ ನಾಗರೀಕತೆ ಹುಟ್ಟುಹಾಕುತ್ತಿರುವ ಮಹತ್ವಾಕಾಂಕ್ಷೆಗಳು ಮತ್ತು ನಮ್ಮ ಪ್ರಜ್ಞೆಯನ್ನು ಆಳುತ್ತಿರುವ ಪರಂಪರೆಯ ನಡುವಿನ ಮುಖಾಮುಖಿಯ ಸಿಕ್ಕುಗಳಲ್ಲಿ ಸಿಕ್ಕಿಹಾಕಿಕೊಳ್ಳದೇ ಸುರೇಶ–ಗೌರಿಯರಂತೆ ಪಕ್ಕಕ್ಕೆ ಸರಿದು ನಿಲ್ಲುವ ಹೊಸ ತತ್ವವನ್ನು ತೇಜಸ್ವಿ ಕಥನ ಶೋಧಿಸುತ್ತದೆ.

ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ವೇಗವಾಗಿ ಹರಿಯುತ್ತಿರುವ ಕೆಂಪುಕಲ್ಲು ಎಂಬ ನಾಗರೀಕತೆಯ ಜುಗಾರಿ ಹೊಳೆಯಲ್ಲಿ ಕೊಚ್ಚಿಹೋಗಲು ವಿವೇಚನೆಯನ್ನು ಕಳೆದುಕೊಂಡ ಜನ ನಾ ಮುಂದು, ತಾ ಮುಂದು ಎಂದು ಧುಮುಕುತ್ತಿರುತ್ತಾರೆ. ಸದಾ ಭ್ರಮೆಗಳಲ್ಲಿ ಬದುಕುವ ಬಾಟನಿ ಅಧ್ಯಾಪಕ ಗಂಗೂಲಿಯ ಶಿಷ್ಯನಾದರೂ ಸುರೇಶ ಮತ್ತು ಆತನ ಪತ್ನಿ ಗೌರಿ ದಂಪತಿಗಳು ಆತನ ಯಾವ ಪ್ರಭಾವಕ್ಕೂ ಒಳಗಾಗದೆ ಭಿನ್ನವಾಗಿ ಸಮಾಜವನ್ನು ಗ್ರಹಿಸುತ್ತಾರೆ ಮತ್ತು ಬದುಕುತ್ತಾರೆ. ಇವರು ಸಂಬಂಧಿಕರಿಂದ, ತಮ್ಮ ಸುತ್ತಲಿನ ಜನರಿಂದ ಗಾನ್‌ಕೇಸ್, ಮೇಂಟಲ್‌ಕೇಸ್ ಎಂದು ಅವಮಾನಿತರಾದರೂ, ಅಪಹಾಸ್ಯಕ್ಕೊಳಗಾದರೂ ಅದ್ಯಾವುದರ ಪರಿವೇ ಇಲ್ಲದೆ ನಿರ್ಲಿಪ್ತವಾಗಿ ಬದುಕುವ ಹೊಸ ವಿಧಾನವೊಂದನ್ನು ಕಂಡುಕೊಳ್ಳುತ್ತಾರೆ. ಪರಂಪರೆ ಮತ್ತು ಮನುಷ್ಯನಲ್ಲಿ ಹೊಸ ಹೊಸ ಮಹತ್ವಾಕಾಂಕ್ಷೆಗಳನ್ನು ಸೃಷ್ಟಿಸುತ್ತಿರುವ ಆಧುನಿಕತೆ, ಇದರ ಬಳುವಳಿಯಾದ ಶಿಕ್ಷಣ ಏನೆಲ್ಲಾ ಹೇರಲ್ಪಟ್ಟರೂ ಇವ್ಯಾವುದಕ್ಕೂ ಮುಖಾಮುಖಿಯಾಗದೇ ಬೇರೊಂದು ಬಗೆಯಲ್ಲಿ ಮಹತ್ವಾಕಾಂಕ್ಷೆಗಳನ್ನು ಬೆಳೆಸಿಕೊಂಡು ಬದುಕುವುದನ್ನು ಜುಗಾರಿ ಕ್ರಾಸ್ ಕಾದಂಬರಿ ಕಟ್ಟಿಕೊಡುತ್ತದೆ. ಇಲ್ಲಿ ಸುರೇಶ ಮತ್ತು ಗೌರಿ ದಂಪತಿಗಳಿಗೆ ಹಣ ಮುಖ್ಯವಾಗುವುದಿಲ್ಲ, ಬದುಕು ಮುಖ್ಯವಾಗುತ್ತದೆ. ನವ ನಾಗರೀಕತೆಯೆನ್ನುವುದು ಇವರ ದಾಂಪತ್ಯದಲ್ಲಿ ಪ್ರವೇಶವನ್ನೇ ಪಡೆದಿಲ್ಲವೇನೋ, ಯಾವ ಬದಲಾವಣೆಯನ್ನೂ ಮಾಡಿಲ್ಲವೇನೋ ಎಂಬಂತೆ ಇವರು ಜೀವಿಸುತ್ತಾರೆ. ಇದೇ ಕಾದಂಬರಿಯಲ್ಲಿ ಪ್ರಾಕೃತಿಕವಾದ ಸಹಜ ಚಲನೆಯ ಪರಿಣಾಮಗಳನ್ನು ಹಾಗು ಆಧುನಿಕ ಉತ್ಪನ್ನಗಳ ಪೈಪೋಟಿಯನ್ನು ಎದುರಿಸಲಾಗದೆ ಅವಸಾನಗೊಂಡ ಮೇದರಹಳ್ಳಿಯ ಜನ ಸಿಕ್ಕ

ಸಿಕ್ಕ ಅಡ್ಡದಾರಿಗಳಲ್ಲಿ ಗಾಳಿ ಬೀಸಿದ ದಿಕ್ಕಿನೆಡೆ ಕೊಚ್ಚಿಹೋಗುವ ಮೂಲಕ ಚಲ್ಲಾಪಿಲ್ಲಿಯಾಗುತ್ತಾರೆ. ಆದರೆ ಮೂಕಿ ದ್ಯಾವಮ್ಮ ಈ ಯಾವ ಅಡ್ಡ ಹಾದಿಗಳಲ್ಲೂ ಕೊಚ್ಚಿ ಹೋಗದೇ, ಯಾವ ವ್ಯಾಮೋಹಗಳಿಗೂ ಬಲಿಯಾಗದೇ, ವರ್ತಮಾನದ ಬದುಕಿನಿಂದ ಜಾರಿಕೊಳ್ಳದೇ ನಿರ್ಲಿಪ್ತವಾಗಿ ವಿಚಿತ್ರ ಧೈರ್ಯದಿಂದ ಮೇದರಹಳ್ಳಿಯಲ್ಲಿಯೇ ಉಳಿಯುತ್ತಾಳೆ ಮತ್ತು ಬದುಕುತ್ತಾಳೆ. ತನಗೆ ಸಿಗಬಹುದಾದ ಅಥವಾ ಈಗಾಗಲೇ ಮೇದರಹಳ್ಳಿಯ ಜನ ಕಂಡುಕೊಂಡ ಯಾವ ಹಾದಿಗಳೊಂದಿಗೂ ರಾಜಿಮಾಡಿಕೊಳ್ಳುವುದಿಲ್ಲ. ವರ್ತಮಾನದ ಬದುಕನ್ನು ಎದುರಿಸುವ ಎದೆಗಾರಿಕೆಯನ್ನು ದ್ಯಾವಮ್ಮ ತೋರುತ್ತಾಳೆ.

ಹೀಗೆ ಪರಂಪರೆ ಮತ್ತು ಆಧುನಿಕತೆಯ ಈ ಎರಡೂ ಪ್ರಕ್ರಿಯೆಗಳು ಸಮಾಜವನ್ನು ಅಪಾಯದ ಅಂಚಿಗೆ ತಂದು ನಿಲ್ಲಿಸಿವೆ. ಹಾಗಾಗಿ ಈ ಎರಡರಿಂದ ಅಂತರವನ್ನು ಕಾಯ್ದುಕೊಂಡು ಭಿನ್ನ ಮಾರ್ಗವನ್ನು ಶೋಧಿಸುವ ಕಡೆ ಜನತೆಯನ್ನು ತೇಜಸ್ವಿಯವರ ಕಥನವು ಕರೆದೊಯ್ಯುತ್ತದೆ.

ಪ್ರಾರಂಭದಲ್ಲಿ ತೇಜಸ್ವಿ ಕಥನ ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದ ಪರಂಪರೆಯನ್ನು ಹೊರಗೆ ನಿಂತು ನೋಡುವ ದೃಷ್ಟಿಕೋನವನ್ನು ಹೊಂದಿದ್ದು, ಇದು ಸ್ವರೂಪ, ನಿಗೂಢ ಮನುಷ್ಯರು ಕಾದಂಬರಿಗಳಲ್ಲಿ ಹಾಗೂ ಹುಲಿಯೂರಿನ ಸರಹದ್ದು, ಮಂತಾದ ಕಥೆಗಳಲ್ಲಿ ವ್ಯಕ್ತವಾಗುತ್ತದೆ. ಜಾತೀಯತೆ, ಕೌಟುಂಬಿಕ ಹಿಂಸೆ, ಮೌಢ್ಯ, ಸಂಪ್ರದಾಯಗಳ ಮೂಲಕ ಚಲನೆಯನ್ನೇ ಕಳೆದುಕೊಂಡು, ವ್ಯಕ್ತಿಯನ್ನು ಹಿಂಸಿಸುವ, ಶೋಷಿಸುವ ಆಮೂಲಕ ವ್ಯಕ್ತಿ ಮತ್ತು ಸಮಾಜದ ಮೇಲೆ ತನ್ನ ಹಿಡಿತಗಳನ್ನು ಸಾಧಿಸಲು ಯತ್ನಿಸುವುದನ್ನು ಅವರ ಆರಂಭದ ಕಥನದಲ್ಲಿ ಕಾಣಬಹುದು. ಈ ಹಿಡಿತಗಳು ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೆಳೆಯಲು ಅಡ್ಡಿಯಾಗಿವೆ ಎಂದೇ ಅವರು ಭಾವಿಸುತ್ತಾರೆ ಇದು ಆಧುನಿಕ ಶಿಕ್ಷಣ ಕ್ರಮದಿಂದ ಈ ನೆಲದ ಜೀವನ ಕ್ರಮವನ್ನು ನೋಡುವ ದೃಷ್ಟಿಕೋನವಾಗಿದೆ.

ಹುಲಿಯೂರಿನ ಸೋಮು ಜಾತೀಯತೆ, ಕುಟುಂಬದ ಹಿಡಿತ, ಸಂಪ್ರದಾಯ, ಮನೆತನದ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಗುರುತಿಸುವ ಕ್ರಮಗಳಿಂದ ಕಾಡುತ್ತಿದ್ದ ಹಿಂಸೆಯಲ್ಲಿ ಪರಂಪರೆಯನ್ನು ಗುರುತಿಸುತ್ತಾನೆ. ಇಲ್ಲಿ ಪರಂಪರೆಯ ಕುರಿತು ಸಿಟ್ಟು ಆಕ್ರೋಶ ವ್ಯಕ್ತವಾಗುತ್ತದೆ. ಇವೆಲ್ಲವುಗಳಿಂದ ಈ ಸಮಾಜವನ್ನು ಬಿಡುಗಡೆಗೊಳಿಸಿ ಈ ಹುಲಿಯೂರಿನ ಜಾತಿ, ಮನೆತನ, ಸಂಪ್ರದಾಯಗಳ ಹಿಂಸೆಯಿಂದ ಕೂಡಿದ ಪರಂಪರೆಯ ಸರಹದ್ದನ್ನು ದಾಟಿ ಸ್ವತಂತ್ರನಾಗಬೇಕೆಂದು ಈತ ಬಯಸುತ್ತಾನೆ. "ಬಂಧು-ಬಾಂಧವರ ವೃತ್ತವನ್ನು ಕಿತ್ತೊಗೆಯಬೇಕೆಂಬ ಛಲದಲ್ಲಿ ತನ್ನ ಬೆಳವಣಿಗೆಗೆ ಅಡ್ಡಿಯಾಗಿರುವ ವ್ಯಕ್ತರೂಪದ ಆತಂಕಗಳನ್ನು ನಿವಾರಣೆ ಮಾಡಿಕೊಳ್ಳುವಲ್ಲಿ ತನ್ನ ಬೆಳವಣಿಗೆಯನ್ನು ಸೋಮು

ಕಂಡುಕೊಳ್ಳುತ್ತಾನೆ." (ಶಶಿಕಲಾ ಎಚ್., ಏಕ-ಅನೇಕ, ೨೦೦೫, ಪುಟ-೨೪೬) ಇಲ್ಲಿ ಸಮಗ್ರವಾದ ಸಮಾಜದ ಗ್ರಹಿಕೆಗಿಂತ, ಆಧುನಿಕ ಶಿಕ್ಷಣದ ಬಳುವಳಿಯಾದ ವ್ಯಕ್ತಿನಿಷ್ಠ ದೃಷ್ಟಿಕೋನಗಳು ಕೆಲಸ ಮಾಡಿವೆ. ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದ ಸಮಯಕ್ಕೆ ಆಧುನಿಕ ಶಿಕ್ಷಣದ ಮೂಲಕ ಭಾರತೀಯ ನೆಲವನ್ನು ನೋಡುವ ಕ್ರಮದಿಂದ ತೇಜಸ್ವಿ ಕಥನವು ಹೊರಬಂದು "ಮೇಲ್ಮಟ್ಟದಲ್ಲಿ ಪರಂಪರೆಯನ್ನು, ಇಲ್ಲಿನ ಬದುಕನ್ನು ಅರ್ಥೈಸಿಕೊಳ್ಳುತ್ತಿದ್ದ ಬಗೆಯು ಕ್ರಮೇಣ ಆಳಕ್ಕೆ ಇಳಿಯಿತು. ಅಬಚೂರಿನ ಪೋಸ್ಟಾಫೀಸು ಕಥಾಸಂಕಲನವಂತೂ ಇಲ್ಲಿನ ಬದುಕನ್ನು ವಿಭಿನ್ನ ಸ್ತರಗಳಲ್ಲಿ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಾಣುತ್ತದೆ." (ಶಶಿಕಲಾ ಎಚ್., ಏಕ-ಅನೇಕ, ೨೦೦೫, ಪುಟ-೨೪೬)

ಪರಂಪರೆಯ ರೋಗಗಳಿಗೆ ಯಾವುದನ್ನು ಪರಿಹಾರವೆಂದು ತಿಳಿದಿದ್ದರೋ ಅದೇ ಇನ್ನಷ್ಟು ಸಮಸ್ಯೆಗಳನ್ನು ತಂದೊಡ್ಡುವುದನ್ನು, ಇದರಿಂದ ನೆಮ್ಮದಿಯ ಬದುಕುಗಳು ಛಿದ್ರಗೊಳ್ಳುವುದನ್ನು ತೇಜಸ್ವಿ ಕಥನವು ಗುರುತಿಸುತ್ತದೆ. ಪರಂಪರೆಯಿಂದ ಬಿಡುಗಡೆಗೊಳ್ಳುವ ಹಿನ್ನೆಲೆಯಲ್ಲಿ ಪ್ರಾರಂಭದಲ್ಲಿ ತೇಜಸ್ವಿ ಕಥನ ಸ್ಫುರಿಸುತ್ತಿದ್ದ ಸಿಟ್ಟು, ಆಕ್ರೋಶ, ಅವಸರಗಳು, ನಂತರದಲ್ಲಿ ತಾಮಸ ಗುಣದಿಂದ ಸಮಾಜವನ್ನು ಗಮನಿಸುವ, ಗ್ರಹಿಸುವ, ಬದಲಾವಣೆಗಾಗಿ ಪ್ರಯತ್ನಿಸಿ ಕಾಯುವ, ವಿಷಾದಿಸುವ, ಪರ್ಯಾಗಳನ್ನು ಸೃಷ್ಟಿಸಿಕೊಳ್ಳುವ ಗುಣಗಳಾಗಿ ರೂಪಾಂತರಗೊಳ್ಳುತ್ತವೆ. ಕುಬಿ ಮತ್ತು ಇಯಾಲ ಕಥೆಯಲ್ಲಿ ಬೈರಾಪುರದ ಕ್ಷುದ್ರ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೂಢನಂಬಿಕೆಗಳು ಮತ್ತು ಅವುಗಳಿಗೆ ಬಲಿಯಾಗುತ್ತಿರುವ ಅಮಾಯಕ ಜನರನ್ನು ಅವುಗಳಿಂದ ಬಿಡಿಸಲು ಸಹನೆಯಿಂದ ವೈದ್ಯ ಕುಬಿ ನಿರಂತರವಾಗಿ ಪ್ರಯತ್ನಿಸಿದರೂ ಅವರನ್ನು ಆ ಮೌಢ್ಯಗಳಿಂದ ಹೊರತರಲಾಗದೆ ಅಸಹಾಯಕನಾಗುತ್ತಾನೆ. ಹಮಾಲಿಗಳ ಮೇಲೆ ನಡೆಯುವ ಪೊಲೀಸರ ದಾಳಿಗಳನ್ನು ಕೂಡ ಆತ ತಪ್ಪಿಸಲು ಆಗುವುದಿಲ್ಲ. ಕುಬಿಗೆ ತಾನು ಕಲಿತ, ಗಳಿಸಿದ ತಿಳುವಳಿಕೆ ಜ್ಞಾನ ಸಮಾಜದ ಬದಲಾವಣೆಗೆ ಪ್ರಯೋಜನಕ್ಕೆ ಬರುವುದಿಲ್ಲ. ಇದರಿಂದಾಗಿ ಆಧುನಿಕ ಶಿಕ್ಷಣ-ಜ್ಞಾನಗಳು ಹೇಗೆ ಪರಂಪರೆಯ ಎದುರಿನ ಮುಖಾಮುಖಿಯಲ್ಲಿ ಕೆಲವೊಮ್ಮೆ ಸೋಲು ಕಾಣಬೇಕಾಗುತ್ತದೆ ಎಂಬುದಕ್ಕೆ ಕುಬಿ ಮತ್ತು ಇಯಾಲ ಕಥೆ ಉದಾಹರಣೆಯಾಗಿದೆ.

ಅಬಚೂರಿನ ಪೋಸ್ಟಾಫೀಸು ಕಥೆಯಲ್ಲಿ ಪೋಸ್ಟಾಫೀಸಿನ ಪ್ರವೇಶ ಬೋಬಣ್ಣನ ಕುಟುಂಬ ಮತ್ತು ಅಬಚೂರಿನ ಜನರ ಬದುಕಿನಲ್ಲಿ ಅನೇಕ ಪಲ್ಲಟಗಳಿಗೆ ಕಾರಣವಾಗುತ್ತದೆ. ತುಕ್ಕೋಜಿ ಕಥೆಯಲ್ಲಿ ತುಕ್ಕೋಜಿ ಮತ್ತು ಸರೋಜ ದಂಪತಿಗಳಿಗೆ ಸಹನೆಯ ಪಾಠ ಕಲಿಸುವ ಕ್ರಾಲರ್ ಯಂತ್ರದ ಚಾಲಕ, ಕರ್ವಾಲೋ ಕಾದಂಬರಿಯಲ್ಲಿ ವಿಜ್ಞಾನಿ ಕರ್ವಾಲೋ

ನಿರೂಪಕನನ್ನು ತನ್ನ ಸುತ್ತಲಿನ ನೈಸರ್ಗಿಕ ಪರಿಸರ ಮತ್ತು ಮಾನವ ಸಮಾಜವನ್ನು ತಾನು ಪಡೆದ ಪಾಶ್ಚಾತ್ಯ ಶಿಕ್ಷಣದ ದೃಷ್ಟಿಕೋನದ ಮೂಲಕ ಗ್ರಹಿಸುವುದರಿಂದ ಬಿಡುಗಡೆಗೊಳಿಸಿ, ಕಣ್ಣು ತೆರೆದು ನೋಡುವುದನ್ನು ಕಲಿಸುತ್ತಾರೆ. "ಕರ್ವಾಲೋ ಕೊಟ್ಟಂತಹ ಜೀವನ ದೃಷ್ಟಿ 'ಕಣ್ಣು ತೆರೆದು ನೋಡುವ ಕ್ರಮ' ನಿರೂಪಕನಲ್ಲಿ ಒಂದು ಬಗೆಯ ಹೊಸ ತಿಳಿವಳಿಕೆಯನ್ನೇ ಹುಟ್ಟುಹಾಕಿಬಿಡುತ್ತದೆ. ಈ ದೃಷ್ಟಿ ಬೆಳೆದು ನಂತರ ಇಡೀ ಜಗತ್ತನ್ನು ಗ್ರಹಿಸುವ ಕ್ರಮವನ್ನೇ ಬೇರೆಯಾಗಿಸಿಬಿಡುತ್ತದೆ." (ಶಶಿಕಲಾ ಎಚ್., ಏಕ-ಅನೇಕ, ೨೦೦೫, ಪುಟ-೨೪೯) ಅವನತಿ ಕಥೆಯಲ್ಲಿ ಜಡಗೊಂಡ ಸಮಾಜದಲ್ಲಿ ಸೃಜನಶೀಲವಾದ ಕಲೆ ಮತ್ತು ಸೌಂದರ್ಯ ನಾಶವಾಗುವುದರ ಕುರಿತ ಎಚ್ಚರಿಕೆಯಿದೆ. ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ಪುರುಷ ಪ್ರಧಾನ ಸಮಾಜದ ಶೋಷಣೆಯ ವಿರುದ್ಧ ಬಂಡೆದ್ದು, ಜಾತಿ ಮತ್ತು ಸ್ತ್ರೀ ಶೋಷಣೆಯ ರೂಪಕವಾದ ಹೆಬ್ಬಲಸಿನ ಮರವನ್ನು ಉರುಳಿಸುವ ಮೂಲಕ ಪರ್ಯಾಯಗಳ ಹುಡುಕಾಟಗಳು ನಡೆಯುತ್ತವೆ. ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ಕೆಂಪುಕಲ್ಲುಗಳೆಂಬ ಆಧುನಿಕತೆಯ ಜುಗಾರಿಗೆ ಮುಗಿಬೀಳದೆ ಪಕ್ಕಕ್ಕೆ ಸರಿದುನಿಂತು ಬದುಕುವ ಹೊಸ ಜೀವನ ಕ್ರಮವನ್ನು ತೇಜಸ್ವಿ ಕಥನ ಶೋಧಿಸುತ್ತದೆ.

ಒಟ್ಟಾರೆ ತೇಜಸ್ವಿಯವರ ಕಥನ ಮಾದರಿಯು ಪರಂಪರೆ ಮತ್ತು ಆಧುನಿಕತೆಯ ಕುರಿತ ತಮ್ಮ ಮೊದಲಿನ ನಿಲುವುಗಳಿಂದ ಹೊರಬಂದು ಈ ಎರಡೂ ಸಂವೇದನೆಗಳಿಂದ ಸಮಾನಾಂತರ ಅಂತರವನ್ನು ಕಾಯ್ದುಕೊಂಡು ಎರಡರಲ್ಲಿನ ಕೇಡುಗಳನ್ನೂ, ಒಳಿತುಗಳನ್ನೂ ಗುರುತಿಸಿಕೊಳ್ಳುತ್ತದೆ. ಆ ಮೂಲಕ ತನ್ನ ಸುತ್ತಲಿನ ಜಗತ್ತನ್ನು ನೋಡುವ, ಗ್ರಹಿಸುವ, ಅರ್ಥೈಸುವ ಭಿನ್ನ ಮಾರ್ಗಗಳನ್ನು ಕಂಡುಕೊಳ್ಳುತ್ತದೆ. ಹಾಗೆಯೇ ನಮ್ಮ ಪ್ರಜ್ಞೆಯನ್ನು ಆಳುತ್ತಿರುವ, ನಿಯಂತ್ರಿಸುತ್ತಿರುವ ಪರಂಪರೆ ಹಾಗೂ ಅದರ ಸಿಕ್ಕುಗಳಿಂದ ಬಿಡಿಸಿಕೊಳ್ಳುವ ಮಾರ್ಗದಂತೆ ಆಧುನಿಕತೆಯನ್ನು ಭಾವಿಸಲಾಗಿತ್ತು. ಆದರೆ ಆಧುನಿಕತೆಯು ವರ್ತಮಾನದಲ್ಲಿ ಹುಟ್ಟುಹಾಕುತ್ತಿರುವ ಅತಿಯಾದ ಮಹತ್ವಾಕಾಂಕ್ಷೆಗಳು ಜನತೆಯನ್ನು ಮತ್ತಷ್ಟು ಸಂಕಷ್ಟಗಳಲ್ಲಿ ಸಿಲುಕಿಸಿದೆ. ಆದ್ದರಿಂದ ಆಧುನಿಕತೆ ಮತ್ತು ಪರಂಪರೆಯ ಸುಳಿಗಳಲ್ಲಿ ಸಿಕ್ಕಿ ನರಳದೆ, ಈ ಎರಡೂ ಸಂವೇದನೆಗಳ ಬದಲಿಗೆ ಚಿದಂಬರ ರಹಸ್ಯದ ರಫಿ-ಜಯಂತಿಯರಂತೆ, ಜುಗಾರಿಕ್ರಾಸ್‌ನ ಸುರೇಶ-ಗೌರಿಯರಂತೆ, ಮೇದರಹಳ್ಳಿಯ ಮೂಕಿ ದ್ಯಾವಮ್ಮನಂತೆ, ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಕ್ರಮದಲ್ಲಿ ಹೊಸತನವನ್ನು ಕಾಣಬೇಕಾಗಿದೆ ಎಂಬುದು ತೇಜಸ್ವಿಯವರ ಕಥನದ ಅಭಿಪ್ರಾಯವಾಗಿದೆ.

ಹೀಗೆ ಆಧುನಿಕತೆ ಮತ್ತು ಪರಂಪರೆಗಳು ಪರಸ್ಪರ ಶತ್ರುಗಳಲ್ಲ ಹಾಗೆಯೇ ಆಧುನಿಕತೆ ಎಂಬುದು ಹೊರಗಿನಿಂದ ಹೇರಲ್ಪಟ್ಟದ್ದೂ ಅಲ್ಲ. ತನ್ನ ಸುತ್ತಲಿನ ಸಮಾಜದ ಅಗತ್ಯ ಮತ್ತು

ಅನಿವಾರ್ಯತೆಗಳಿಗೆ ತಕ್ಕಂತೆ ಜೀವನದ ಸವಾಲುಗಳು ಮತ್ತು ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಈ ಎರಡನ್ನೂ ಇತ್ಯಾತ್ಮಕವಾಗಿ ಗುರುತಿಸಿಕೊಂಡು ಬದುಕುವುದೇ ಸರಿಯಾದ ಜೀವನ ಕ್ರಮವಾಗಿದೆ. ಯಾವ ಸಂವೇದನೆಗಳನ್ನೂ ತನ್ನ ಅಪೇಕ್ಷೆಗೆ ತಕ್ಕಂತೆ ಬದಲಿಸಲು ಯತ್ನಿಸದೇ ಹಾಗೂ ಸಂಪೂರ್ಣ ತಿರಸ್ಕರಿಸದೇ ಪರಸ್ಪರ ಕೊಡುಕೊಳ್ಳುವಿಕೆಯಿಂದ, ಇಲ್ಲವೇ ಅಂತರವನ್ನು ಕಾಯ್ದುಕೊಂಡು ಪರ್ಯಾಯ ಮಾರ್ಗಗಳನ್ನು ಶೋಧಿಸಬೇಕು. ಆ ಮೂಲಕ ಬದುಕಿನ ಅವಕಾಶಗಳನ್ನು ಕಂಡುಕೊಳ್ಳುವ ಸಾಧ್ಯತೆಯೇ ತೇಜಸ್ವಿ ಕಥನದ ಆಧುನಿಕತೆ ಮತ್ತು ಪರಂಪರೆಯ ಕುರಿತ ಸಂವೇದನೆಯಾಗಿದೆ.

ಅಧ್ಯಾಯ-೪

ತೇಜಸ್ವಿ ಕಥನ : ರೈತ ಕಾಳಜಿಗಳು

ಅಧ್ಯಾಯ-೪

ತೇಜಸ್ವಿ ಕಥನ: ರೈತ ಕಾಳಜಿಗಳು

ಪೀಠಿಕೆ

ಪ್ರಸ್ತುತದಲ್ಲಿ ನಾವು ಎದುರುಗೊಳ್ಳಲೇಬೇಕಿರುವ ಜಾಗತೀಕರಣ, ಖಾಸಗೀಕರಣ, ಆರ್ಥಿಕ ಉದಾರೀಕರಣಗಳನ್ನು ಎದುರುಗೊಳ್ಳುವುದು ಹೇಗೆ? ರೈತರನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳಾವುವು, ಆ ಸಮಸ್ಯೆಗಳ ಹಿಂದೆ ಇರಬಹುದಾದ ಕಾರಣಗಳಾವುವು, ನಾವು ಎಲ್ಲಿ ಎಡವುತ್ತಿದ್ದೇವೆ, ಸರ್ಕಾರಗಳು ಹೇಗೆ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿವೆ, ಈ ಸಂದರ್ಭದಲ್ಲಿ ಸಾಹಿತಿ ಮತ್ತು ಕಲಾವಿದರು ನಿರ್ವಹಿಸಬೇಕಾದ ಪಾತ್ರವೇನು? ಈ ಮೊದಲಾದ ವಿಚಾರಗಳ ಕುರಿತು ತೇಜಸ್ವಿ ಕಥನ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಭಾರತ ಕೃಷಿ ಪ್ರಧಾನ ರಾಷ್ಟ್ರ. ಸುಮಾರು ಶೇ.೭೦ರಷ್ಟು ಜನ ಸಮುದಾಯ ಕೃಷಿಯನ್ನೇ ಅವಲಂಬಿಸಿದ್ದರು. ಆದರೆ ಇಂದು ನಿರಂತರವಾಗಿ ಭಾರತೀಯ ರೈತರು ಕೃಷಿಯಿಂದ ವಿಮುಖರಾಗುತ್ತಾ ಸಾಗಿದ್ದಾರೆ. ವರ್ಷದಿಂದ ವರ್ಷಕ್ಕೆ ಕೃಷಿ ಬದುಕನ್ನು ತೊರೆಯುತ್ತಿರುವ ರೈತರು ಸಂಖ್ಯೆ ಗಣನೀಯವಾಗಿ ಏರಿತ್ತಿದೆ. ಕೃಷಿ ಸಂಬಂಧಿತ ಇತರೆ ಸಮುದಾಯಗಳು ಸಹ ನಿರುದ್ಯೋಗಿಗಳಾಗಿ ಕೃಷಿಯೇತರ ಬದುಕನ್ನು ಅರಸುತ್ತಿದ್ದಾರೆ. ಇತ್ತೀಚೆಗಂತೂ ಅದರ ಪ್ರಮಾಣ ಹೆಚ್ಚುತ್ತಿರುವುದು ಆತಂಕದ ಸಂಗತಿಯಾಗಿದೆ. ಕಷ್ಟಗಳನ್ನೆ ಹಾಸಿ ಹೊದೆದು ಬದುಕುತ್ತಾ, ತೀವ್ರ ಬರಗಾಲ ಅನಾರೋಗ್ಯದ ಸ್ಥಿತಿಯಲ್ಲೂ ಹುಲ್ಲುಗರಿಕೆಯಂತೆ ನೆಲಕಚ್ಚಿ ಅವಡುಗಚ್ಚಿ ಜೀವ ಹಿಡಿದುಕೊಂಡು ಬದುಕುವ ಜೀವ ಭಾರತೀಯ ರೈತನದು. ಅಂಥ ರೈತರಿಗೆ ಅತ್ಮಹತ್ಯೆ ಮಾಡಿಕೊಳ್ಳಬೇಕಾದ ಕರಾಳ ಸಂದರ್ಭ ಏಕೆ ಬಂತು ಎಂಬ ಪ್ರಶ್ನೆಗಳು ಮೂಡುವುದು ಸಹಜ. ರೈತರ ಬಗ್ಗೆ ಕಾಳಜಿ ಇದ್ದವರಿಗೆ ಮಾತ್ರ ಅವರ ಬದುಕು, ಅದರ ಹಿಂದಿನ ಆಳವಾದ ಸಂಕಷ್ಟಗಳ ಸತ್ಯದ ಅರಿವಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆಗಳ ಅಂಕಿ-ಸಂಖ್ಯೆಗಳನ್ನು ಕ್ರೋಢೀಕರಿಸಿದಾಗ ನಿಜಕ್ಕೂ ಆತಂಕವಾಗುತ್ತದೆ. ನೂರಲ್ಲ, ಸಾವಿರವಲ್ಲ, ಲಕ್ಷಾಂತರ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಜಗತ್ತಿನ ಚರಿತ್ರೆಯಲ್ಲಿ ಬೇರೆ ಬೇರೆ ಸಂದರ್ಭದ ಪ್ರದೇಶದ ಭೀಕರ ದುರಂತಗಳನ್ನು ಓದಿ ತಿಳಿದ ನಮಗೆ ಹಿಂದೆಂದೂ ಕಂಡು ಕೇಳರಿಯದ ಬಹುದೊಡ್ಡ ದುರಂತವೊಂದು ನಮ್ಮ ಕಣ್ಣೆದುರೇ ನಡೆಯುತ್ತಿರುವಾಗ ಯಾರೂ ಅತ್ತ ಗಂಭೀರ ಗಮನ ಹರಿಸುತ್ತಿಲ್ಲವಲ್ಲ ಎಂದು ಖೇದವಾಗುತ್ತದೆ. ರೈತ ಜೈಲಿನ ಬಂಧಿಗಳಿಗಿಂತಲೂ ಕಳಪೆಯಾದ ಆಹಾರ ಸೇವಿಸುತ್ತಿದ್ದಾನೆ. ಹೀಗೆ ಕೃಷಿಯನ್ನೇ ಹಾಸಿ ಹೊದ್ದು ಮಲಗುವ ಭಾರತೀಯ

ಅನ್ನದಾತನ ಬದುಕು ಏಕೆ ದುರ್ಭರಗೊಳ್ಳುತ್ತಿದೆ? ಆತ್ಮಹತ್ಯೆಗೆ ತನ್ನನ್ನು ದೂಡಿಕೊಳ್ಳುವಷ್ಟು ಮಾನಸಿಕವಾಗಿ ಜರ್ಜರಿತವಾಗುವಂತೆ ಅವನನ್ನು ಕಾಡುತ್ತಿರುವ ಸಂಕಟಗಳಾವುವು? ಅದಕ್ಕೆ ಕಾರಣಗಳೇನು ಎಂಬುದನ್ನು ಗಮನಿಸಿದರೆ, ರೈತ ಮತ್ತು ಪ್ರಭುತ್ವಗಳ ನಡುವಿನ ಸಂಬಂಧದಲ್ಲಿ ವಸಾಹತುಶಾಹಿ ಹಾಗೂ ವಸೋಹತೋತ್ತರ ಕಾಲಗಳಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಎಲ್ಲಾ ಪ್ರಭುತ್ವಗಳು ರೈತರನ್ನು ಕಡೆಗಣಿಸುತ್ತಲೇ ಬಂದಿರುವ ಇತಿಹಾಸ ನಮ್ಮ ಮುಂದೆ ನಿಲ್ಲುತ್ತದೆ.

ಹೊಲಗಳ ಕಂಪನೀಕರಣ, ವಿದೇಶೀ ಆಹಾರ ಸರಕುಗಳ ಮುಕ್ತ ಆಮದು, ಅದರ ಮೂಲಕ ಲಾಭ ಪಡೆದು ಸಂಪತ್ತನ್ನು ದ್ವಿಗುಣಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಹಲವು ಖಾಸಗಿ ಕಂಪನಿಗಳು ಕಾರ್ಯಪ್ರವೃತ್ತವಾಗಿವೆ. ಇದರ ಪರಿಣಾಮ ತಮ್ಮ ಬದುಕಿನ ಜೀವನಾಧಾರವೇ ಆಗಿದ್ದ ಭೂಮಿಯನ್ನು ಕಳೆದುಕೊಂಡ ರೈತರು ನಿರ್ಗತಿಕರಾಗಿ ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ, ಇಲ್ಲವೇ ಬಂಡವಾಳಿಗರು ನೀಡುವ ಚಿಲ್ಲರೆ ಹಣವನ್ನು ತೆಗೆದುಕೊಂಡು ಕೃಷಿಗೆ ವಿದಾಯ ಹೇಳಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹಾಗಂತ ಸರಕಾರಗಳೇನೂ ಸುಮ್ಮನೆ ಕೂತಿಲ್ಲ. ರೈತರಿಗೆ ನೆರವಾಗುವ ಪ್ರಹಸನಗಳಲ್ಲಿ ಇಲ್ಲವೇ ಸಾಲ ಮನ್ನಾಗಳು, ಪರಿಹಾರದ ಆಶ್ವಾಸನೆಗಳಲ್ಲಿ ತೊಡಗಿವೆ. ಇವು ಹೇಳಿಕೆಗಳಿಗೆ ಮಾತ್ರ ಸೀಮಿತ. ಇಲ್ಲವೇ ಆ ಸವಲತ್ತುಗಳೂ ಸಹ ಶ್ರೀಮಂತ ಭೂಮಾಲಿಕರ ಪಾಲಾಗುತ್ತಿವೆ. ಸರ್ಕಾರಗಳು ಮಾತ್ರ ರೈತರನ್ನು ಉದ್ಧಾರ ಮಾಡುತ್ತಿದ್ದೇವೆ ಎಂದು ಜಾಹಿರಾತುಗಳ ಮೂಲಕ ದೊಡ್ಡದಾಗಿ ಬಿಂಬಿಸಿಕೊಳ್ಳುತ್ತಿವೆ. ಆದರೆ ಇದಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು, ವಿನಾಯಿತಿಗಳನ್ನು ಉದ್ಯಮಪತಿಗಳಿಗೆ ನೀಡುತ್ತಿರುವುದು ಮಾತ್ರ ಯಾವ ಮಾದ್ಯಮಗಳೂ ಬಿತ್ತರಿಸುವುದಿಲ್ಲ ಮತ್ತು ಸುದ್ದಿಯಾಗುವುದಿಲ್ಲ.

"ರೈತರ ಸಾಲ ಮನ್ನಾ ಮಾಡಲೆಂದು ಕೇಂದ್ರ ಸರ್ಕಾರ ೨೦೦೭ರಲ್ಲಿ ಒಮ್ಮೆ ಮಾತ್ರ ೬೦ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದಾಗ, ಎಲ್ಲಾ ಮಾದ್ಯಮಗಳಲ್ಲೂ ಭಾರಿ ಚರ್ಚೆ ನಡೆದವು. ರೈತರ ಬಗ್ಗೆ ಸರಕಾರಕ್ಕಿರುವ ಕಾಳಜಿಯನ್ನು ಹಾಡಿ ಹೊಗಳುವ ವರದಿಗಳು ಬಂದವು. ಆದರೆ ೧೯೯೧ರಿಂದ ಪ್ರತಿವರ್ಷವೂ ಕಾರ್ಪೊರೇಟ್ ಬಿಸಿನೆಸ್ ಕಂಪನಿಗಳಿಗೆ ಸರಾಸರಿ ೪೦ ಸಾವಿರ ಕೋಟಿ ರುಪಾಯಿಗಳ ವಿನಾಯಿತಿಗಳನ್ನು ಘೋಷಿಸಲಾಗುತ್ತಿದೆ. ಪ್ರತಿವರ್ಷವೂ! ಆದರೆ ಅದರ ವಿವರ-ವಿಶ್ಲೇಷಣೆಗಳು ಪ್ರಕಟವಾಗುವುದೇ ಇಲ್ಲ" (ಸಾಯಿನಾಥ್ ಪಿ., ರೈತರ ಬವಣೆಗಳ ಬಗ್ಗೆ, ೨೦೦೯, ಪುಟ-೧೩)

ಪ್ರಸ್ತುತ ರೈತರು ಲಕ್ಷಲಕ್ಷ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದೇ ಅವಧಿಯಲ್ಲಿ ನಮ್ಮ ದೇಶದ ಶ್ರೀಮಂತ ಬಂಡವಾಳಿಗ ಕೋಟ್ಯಾಧಿಪತಿಗಳ ಪ್ರಮಾಣ ಐದು ಪಟ್ಟು ಅಧಿಕವಾಗಿದೆ. ರೈತರ ಆತ್ಮಹತ್ಯೆಗಳಿಗೂ, ಬಂಡವಾಳಿಗರ ಸಂಪತ್ತಿನ ಅಗಾಧ ಏರಿಕೆಗೂ

ಸಂಬಂಧವಿಲ್ಲವೇ? ಈ ಉದ್ಯಮಪತಿಗಳು ಇಷ್ಟು ವೇಗವಾಗಿ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡಿರುವುದಕ್ಕೂ ನಮ್ಮ ಸರ್ಕಾರಗಳು ರೂಪಿಸಿ ಜಾರಿಗೆ ತಂದಿರುವ ರೈತ ವಿರೋಧಿ ಶಾಸನಗಳು ಕಾರಣವಾಗುವುದಿಲ್ಲವೇ? ನಿಜವಾಗಿಯೂ ಸರ್ಕಾರಗಳು ಸಾಮಾನ್ಯ ಜನ ಸಮುದಾಯಕ್ಕೆ ಉತ್ತರದಾಯಿತ್ವವಾಗಬೇಕಿತ್ತು. ಆದರೆ ಸ್ವಾತಂತ್ರ್ಯಾನಂತರದ ಭಾರತದ ಪ್ರಭುತ್ವಗಳು ಇದನ್ನು ಕಡೆಗಣಿಸಿ ಸಂವಿಧಾನದ ಆಶಯಗಳನ್ನು ಮೂಲೆಗುಂಪಾಗಿ ಮಾಡಿ ದೇಶದ ಅನ್ನದಾತನಿಗೆ ಆತ್ಮಹತ್ಯೆಯನ್ನು ಬಿಟ್ಟರೆ ಗತ್ಯಂತರವಿಲ್ಲದಂತೆ ಮಾಡುತ್ತಿವೆ. ಇದು ಪ್ರಜಾಪ್ರಭುತ್ವದ ವ್ಯಂಗ್ಯ. ಹಾಗಂತ ರೈತ ಸಮುದಾಯ ಅನ್ಯ ಪ್ರಯತ್ನಗಳು, ಪರ್ಯಾಯಗಳ ಅರಿವಿಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿವಿಧ ಪರ್ಯಾಯಗಳ ಹುಡುಕಾಟದ ಹಿನ್ನೆಲೆಯಲ್ಲಿ ನಮ್ಮ ಅಳಲನ್ನು, ನೋವನ್ನು, ಸಂಕಷ್ಟಗಳನ್ನು ಆಳುವ ವರ್ಗಕ್ಕೆ ತಲುಪಿಸುವ ಹಾದಿಯಾಗಿ ಪ್ರತಿಭಟನೆಗಳು, ಮನವಿಗಳು, ಸತ್ಯಾಗ್ರಹಗಳು, ಜಾಥಾಗಳು, ಚಳವಳಿಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ, ನಡೆಯುತ್ತಲೂ ಇವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡದ್ದೇ ರೈತ ಚಳುವಳಿ.

ಕರ್ನಾಟಕದ ರೈತ ಚಳುವಳಿಗೆ ಬಹುದೊಡ್ಡ ಇತಿಹಾಸವೇ ಇದೆ. ಕಾಗೋಡು ಗೇಣಿದಾರರ ಭೂ ಚಳುವಳಿ, ಶಿವಮೊಗ್ಗ ರೈತ ಚಳುವಳಿ, ಮಲಪ್ರಭಾ ರೈತ ಚಳುವಳಿ, ಸಂಡೂರು ಹೋರಾಟ ಮುಂತಾದ ಚಳುವಳಿಗಳು ನಡೆದಿವೆ. ನೂರಾರು ರೈತ ಸಂಘನೆಗಳು ಹುಟ್ಟಿಕೊಂಡಿವೆ. ಇವೆಲ್ಲವುಗಳನ್ನು ಸರ್ಕಾರಗಳು ದಮನ ಮಾಡುವ ನಿಟ್ಟಿನಲ್ಲಿ ನಿರಂತರ ಶ್ರಮಿಸಿವೆ. ಒಡೆದು ಆಳುವ ನೀತಿಯನ್ನು ಸಹ ಅನುಸರಿಸಿವೆ. ಆದರೆ ರೈತರೇನು ಸರ್ಕಾರಗಳ ಎಲ್ಲಾ ದಮನಕಾರಿ ನೀತಿಗಳಿಗೆ ಹೆದರಿಕೊಂಡು ಕೂತಿಲ್ಲ. ಅವರ ಎಲ್ಲಾ ಹಿಂಸೆಗಳನ್ನೂ ಎದುರಿಸಿದ್ದಾರೆ ಮತ್ತು ಪ್ರತಿಭಟಿಸಿದ್ದಾರೆ. ಎಸ್.ಇ.ಝಡ್.(ವಿಷೇಶ ಆರ್ಥಿಕ ವಲಯ)ಗಳಂತಹ ಭೀಕರ ಭೂಕಬಳಿಕೆಯ ಯೋಜನೆಗಳು ಜಾರಿಗೆ ಬಂದು ಮತ್ತಷ್ಟು ಸಮಸ್ಯೆಗಳು ಹುಟ್ಟಿಕೊಂಡಿವೆ. ರೈತಕಸುಬನ್ನು ನಿರಾಕರಿಸುವ ಅಥವಾ ರೈತವೃತ್ತಿಯನ್ನೇ ಕೀಳು ಎಂದು ಭಾವಿಸುವ ನಿಟ್ಟಿನಲ್ಲಿ ಶಿಕ್ಷಣ ನೀಡುವ ಕ್ರಿಯೆಯಲ್ಲಿ ಸರ್ಕಾರಗಳು ನಿರಂತರವಾಗಿ ಕಾರ್ಯೋನ್ಮುಖವಾಗಿವೆ ಕೂಡ.

ರೈತರನ್ನು ಅವರ ಒಕ್ಕೂಟವನ್ನು ಒಡೆಯುವುದು ಸರ್ಕಾರಗಳಿಗೆ ತುಂಬಾ ಸುಲಭ. ಏಕೆಂದರೆ ಪ್ರದೇಶದಿಂದ ಪ್ರದೇಶಕ್ಕೆ ರೈತರ ಕೃಷಿ ಸಮಸ್ಯೆಗಳು ಭಿನ್ನವಾಗಿರುತ್ತವೆ. ಕಬ್ಬು, ತೊಗರಿ, ಹತ್ತಿ, ಟಮೋಟ, ಕಾಫಿ, ಏಲಕ್ಕಿ, ಭತ್ತ, ಮುಂತಾದ ಬೆಳೆಗಾರರ ಸಮಸ್ಯೆಗಳು ಒಂದಕ್ಕೊಂದು ಸಂಬಂಧವಿಲ್ಲದಷ್ಟು ತೀರ ಭಿನ್ನವಾಗಿರುತ್ತವೆ. ಜಾತಿ, ಧರ್ಮ, ಪ್ರದೇಶಗಳ ತಾರತಮ್ಯ ನೀತಿ ಮನೋಭಾವಗಳು ಸಹ ರೈತರು ಒಂದು ವೇದಿಕೆಯಲ್ಲಿ ಒಗ್ಗೂಡುವುದಕ್ಕೆ

ಅಡ್ಡಿಗಳಾಗಿವೆ. ಹಾಗಾಗಿ ಇವರೆಲ್ಲ ಒಂದು ವರ್ಗವಾಗಿ ಸಂಘಟಿತರಾಗಿ ಹೋರಾಟ ನಡೆಸುವುದು ಸುಲಭವಲ್ಲ ಎಂಬುದು ಆಳುವ ವರ್ಗಗಳಿಗೆ ತಿಳಿದಿದೆ. ಹಾಗೆಯೇ ರೈತರು ಒಕ್ಕೂಟವಾದಲ್ಲಿ ಅವರ ನಡುವೆ ಒಡಕುಂಟು ಮಾಡುವುದು ಸಹಾ ಪ್ರಭುತ್ವಗಳಿಗೆ ತುಂಬಾ ಸುಲಭಸಾಧ್ಯವಾಗಿದೆ.

ಚರಿತ್ರೆಯನ್ನು ಅವಲೋಕಿಸಿದರೆ ರೈತ ಸಂಘಟನೆಗಳು ಛಿದ್ರಗೊಂಡಾಗ, ಸರ್ಕಾರಗಳ ಬೇಜವಾಬ್ದಾರಿಗಳು ಅತಿಯಾದಾಗ, ಹಾಗೂ ಜಾಣ ಕುರುಡುತನ, ಕಿವುಡುತನ ಪ್ರದರ್ಶಿಸಿ ಚಳುವಳಿಗಳನ್ನು ನಿರ್ಲಕ್ಷಿಸಿದಾಗ, ಅನೇಕ ರಾಜಕೀಯ ಮುತ್ಸದ್ದಿಗಳು, ಸಮಾಜ ಕಾಳಜಿಯುಳ್ಳ ಸಾಹಿತಿಗಳು, ಚಿಂತಕರು ರೈತರ ನೆರವಿಗೆ ಬಂದಿದ್ದಾರೆ. ಇದಕ್ಕೆ ಭೂಮಾಲಿಕರ ವಿರುದ್ಧ ನಡೆದ ಕಾಗೋಡು ರೈತ ಚಳುವಳಿ ಸೂಕ್ತ ಉದಾಹರಣೆಯಾಗಿದೆ. ಈ ಚಳವಳಿಯನ್ನು ಭೂಮಾಲೀಕರ ಜೊತೆಗೂಡಿ ಅಂದಿನ ಕಾಂಗ್ರೆಸ್ ಸರ್ಕಾರ ದಮನ ಮಾಡಿತು. ಹೋರಾಟಗಾರರನ್ನು ರೈತರೇ ಅಲ್ಲ ಎಂದು ಜರಿದು ಎಲ್ಲಾ ಚಳುವಳಿಗಾರರನ್ನು ಜೈಲಿಗಟ್ಟಿದರು. ಇನ್ನು ರಾಜಿ-ಸಂಧಾನ ಒಂದೇ ಬಾಕಿಯಿತ್ತು. ಇನ್ನೇನು ಚಳುವಳಿ ನಿಂತು ಹೋಯಿತು ಎನ್ನುವ "ಪರಿಸ್ಥಿತಿಯಲ್ಲಿ ರಾಜ್ಯದ ಸಮಾಜವಾದಿ ಪಕ್ಷದ ಮುಂದಾಳುಗಳಾದ ಶಾಂತವೇರಿ ಗೋಪಾಲಗೌಡರು ಮತ್ತು ವೈ.ಆರ್.ಪರಮೇಶ್ವರಪ್ಪನವರು ದೇವಧೂತರಂತೆ ಬಂದು ತಮ್ಮ ಪಕ್ಷವನ್ನು ಈ ಸತ್ಯಾಗ್ರಹಕ್ಕೆ ತರದೇ ಇದ್ದಿದ್ದರೆ ತೆಲಂಗಾಣದಲ್ಲಿ ನಕ್ಸಲೀಯರನ್ನು ಧ್ವಂಸ ಮಾಡಿದ ರೀತಿಯಲ್ಲಿ ಸರ್ಕಾರವು ತನ್ನ ಬಲದಿಂದ ಗೇಣಿ ರೈತರನ್ನು ತಲೆ ಎತ್ತದಂತೆ ತುಳಿದುಬಿಡುತ್ತಿತ್ತು. ಇಂತಹ ಚಿಂತಾಜನಕ ಸೋಲುವ ಸ್ಥಿತಿಯಲ್ಲಿ ದೇವದೂತರಂತೆ ಬಂದು ಕೈ ಹಿಡಿದವರು ಎಸ್.ಗೋಪಾಲಗೌಡರು, ಮತ್ತು ವೈ.ಆರ್.ಪರಮೇಶ್ವರಪ್ಪ ಸಮಾಜವಾದಿ ಪಕ್ಷ ಮತ್ತು ರೈತಸಂಘ ಸೇರಿಕೊಂಡು ಸತ್ಯಾಗ್ರಹವನ್ನು ಮುಂದುವರೆಸೋಣ ಎಂದು ಭರವಸೆ ನೀಡಿದರು." (ಶಾಂತವೇರಿ ಗೋಪಾಲಗೌಡ : ನೆನಪಿನ ಸಂಪಟ, ೧೯೯೭, ಪುಟ-೧೪೬) ಎಂದು ಹೋರಾಟದ ಮುಂಚೂಣಿಯಲ್ಲಿದ್ದ ಗಣಪತಿಯಪ್ಪ ನೆನಪಿಸಿಕೊಳ್ಳುತ್ತಾರೆ.

ಹೀಗೆ ಅನೇಕ ಸಮಾಜವಾದಿ ಚಿಂತಕರು ರೈತ ಚಳುವಳಿಗಳಲ್ಲಿ ತೊಡಗಿಸಿಕೊಂಡು ರೈತರ ಬವಣೆಗಳಿಗೆ ಸ್ಪಂದಿಸಿದ್ದಾರೆ. ಮುಂದೆ ಅವರಲ್ಲಿ ಕೆಲವರು ಆಳುವ ಸರ್ಕಾರಗಳಲ್ಲಿ ಮಂತ್ರಿಗಳಾದಾಗಲೂ ರೈತರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಇನ್ನೂ ಕೆಲವು ಹಿಂದಿನ ಪ್ರಭುತ್ವಗಳಂತೆ ನಡೆದುಕೊಂಡಿದ್ದಾರೆ. ಹೀಗಾಗಿ ರೈತರ ಬದುಕು ಮತ್ತಷ್ಟು ಬಿಗಡಾಯಿಸಿದೆ. ಇಂದು ಅವನಿಗೆ ಪರ್ಯಾಯಗಳೇ ಕಾಣುತ್ತಿಲ್ಲ. ಅವನಿಗಿರುವ ಒಂದೇ ಒಂದು ಪರ್ಯಾಯವೆಂದರೆ ಆತ್ಮಹತ್ಯೆಯ ಮೂಲಕ ಪ್ರತಿಭಟಿಸುವುದು. ಆಧುನಿಕ ಸಂದರ್ಭದಲ್ಲಿ ನಮ್ಮ ಶಿಕ್ಷಣ, ಸಾಹಿತ್ಯ, ಹೋರಾಟ-ಚಳುವಳಿಗಳು, ಸಂಶೋಧನೆಗಳು ದಿಕ್ಕುತಪ್ಪುತ್ತಿವೆ. ಭಾರತದ

ಬೆನ್ನೆಲುಬಾದ ರೈತನನ್ನೂ, ಅವನ ಕಸುಬನ್ನೂ ಕಡೆಗಣಿಸಿವೆ. ಇವತ್ತಿಗೂ ನಮ್ಮ ಸರಕಾರಗಳಿಗೆ ಸಮರ್ಪಕವಾದ ಒಂದು ಕೃಷಿ ನೀತಿಯನ್ನು ರೂಪಿಸಲು ಸಾಧ್ಯವಾಗಿಲ್ಲ ಎಂದರೆ ಸರ್ಕಾರದ ಆಸಕ್ತಿ ಮತ್ತು ಇಚ್ಛಾಶಕ್ತಿಯ ಬಗ್ಗೆ ಅನುಮಾನ ಮೂಡುತ್ತದೆ. ಇದು ಅವನನ್ನು ಮತ್ತಷ್ಟು ಏಕಾಂಗಿಯನ್ನಾಗಿ ಮಾಡಿದೆ. ಈಗ ಅವನಿಗಿರುವ ಏಕೈಕ ಮಾರ್ಗ ಆತ್ಮಹತ್ಯೆ ಎಂದು ಭಾವಿಸಿದ್ದಾನೆ.

ಈ ಹಿನ್ನೆಲೆಯಲ್ಲಿ ಇಂಥ ವೈರುಧ್ಯಗಳನ್ನು ಗ್ರಾಮಭಾರತದ ರೈತರ ದುರಂತ ಬದುಕನ್ನು ಅದಕ್ಕೆ ಕಾರಣವಾದ ಜಾಗತಿಕ ಹುನ್ನಾರಗಳನ್ನು ಎತ್ತಿ ತೋರಿಸಬಲ್ಲ ಸಶಕ್ತ ಸಮಾಜವಿಜ್ಞಾನಿಗಳು ಹಾಗೂ ಸಾಹಿತಿಗಳ ಅನಿವಾರ್ಯತೆ ಈ ಸಮಾಜಕ್ಕಿದೆ. ಈ ನಿಟ್ಟಿನಲ್ಲಿ ಪೂರ್ಣಚಂದ್ರ ತೇಜಸ್ವಿ ಪ್ರಮುಖವಾಗಿ ಕಾಣುತ್ತಾರೆ. ಕುವೆಂಪು ಹೇಳಿದ ವಿದ್ಯಾವಂತ ಯುವಕರು ಗ್ರಾಮಗಳಲ್ಲಿ ನೆಲೆ ನಿಲ್ಲಬೇಕು ಎಂಬುದನ್ನು ಅಕ್ಷರಶಃ ಪಾಲಿಸಿದವರು ಪೂರ್ಣಚಂದ್ರ ತೇಜಸ್ವಿ

"ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಗೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿಮೆ ಉತ್ಪತ್ತಿಕಾರಕ ಆಗಿರುವುದಿಲ್ಲ, ಸಂಗ್ರಹಕಾರಕ ಆಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೇ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೇ ಹೋಗಲಾಗುತ್ತದೆ. ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತ ರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು ಗ್ರಾಮಗಳಲ್ಲಿ ನೆಲೆನಿಲ್ಲಬೇಕು:" (ಕುವೆಂಪು, ವಿಚಾರಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೨, ಪುಟ-೬೭) ಈ ನಿಟ್ಟಿನಲ್ಲಿ ತೇಜಸ್ವಿಯವರು ಪದವೀಧರರಾದರೂ, ಹಳ್ಳಿಗೆ ಬಂದು ತೋಟ ಮಾಡಿದವರು, ಕಾಡು ಅಲೆದವರು, ಗ್ರಾಮ ಭಾರತದ ತಲ್ಲಣಗಳನ್ನು ನೇರಾನೇರ ಕಂಡವರು ಹಾಗೂ ಅನುಭವಿಸಿದವರು.

ಭಾರತದ ರೈತರ ಬದುಕು-ಬವಣೆಗಳನ್ನು ಬಲ್ಲವರು, ಜೊತೆಗೆ ವ್ಯವಸಾಯಗಾರರಾಗಿ ಅದರ ಆಳ-ಅಗಲಗಳ ಅರಿವಿರುವ ಸಶಕ್ತ ರೈತ ಚಿಂತಕರಾಗಿ, ಚಿಂತನೆಯಾಗಿ ತೇಜಸ್ವಿ ಮತ್ತು ಅವರ ಸಾಹಿತ್ಯ ಕಾಣುತ್ತದೆ. ರೈತನ ದುಃಖದುಮ್ಮಾನಗಳು, ರೈತನ ಇಂದಿನ ಸ್ಥಿತಿಗೆ ಅವನನ್ನು ಒಳಗೊಂಡಂತೆ ನಮ್ಮನ್ನಾಳುವ ಪ್ರಭುತ್ವಗಳು, ಬಂಡವಾಳಶಾಹಿಗಳು, ಕಾಣದ ಜಾಗತಿಕ ದೊರೆಗಳ ಹುನ್ನಾರಗಳು ಹೇಗೆಲ್ಲಾ ಕಾರಣವಾಗುತ್ತವೆ ಎಂಬುದನ್ನು ಎಳೆಎಳೆಯಾಗಿ ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಕೃಷಿಕರಾಗಿ, ಸಮಾಜವಾದಿ ಪಕ್ಷದ ಕಾರ್ಯಕರ್ತರಾಗಿ, ಚಿಂತಕರಾಗಿ, ಚಳುವಳಿಗಾರರಾಗಿ ಅವರ ಅನುಭವ ಅಗಾಧ. ಇಡೀ ಮಲೆನಾಡಿನ ರೈತನ ಸೋಲು-ಗೆಲುವುಗಳು, ಸಂಕಟಗಳಿಗೆ ಅವರ ಕೃತಿಗಳು ಉತ್ತರ ನೀಡುತ್ತವೆ. ರೈತ ಇಂದು

ತಲುಪಿರುವ ಆತ್ಮಹತ್ಯೆ ಸ್ಥಿತಿಗೆ ಕಾರಣಗಳೇನು, ಅದಕ್ಕಿರುವ ಪರಿಹಾರವೇನು ಎಂಬುದನ್ನು ತಮ್ಮ ಬರಹಗಳಲ್ಲಿ ತೇಜಸ್ವಿ ಬಿಚ್ಚಿಡುತ್ತಾರೆ. ಒಟ್ಟಾರೆ ರೈತರ ಇಂದಿನ ಬವಣೆಗಳ ಬಗ್ಗೆ ಸಮಗ್ರ ಚಿತ್ರಣವನ್ನು ತೇಜಸ್ವಿ ಸಾಹಿತ್ಯ ನೀಡುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ತೇಜಸ್ವಿಯವರ ಕಥನದಲ್ಲಿ ರೈತ ಕಾಳಜಿಗಳು

ತೇಜಸ್ವಿಯವರ ಕಥನದ ಪ್ರಕಾರ ರೈತ ಎಂದರೆ ಕೇವಲ ಭೂಮಾಲಿಕ ಮಾತ್ರವಲ್ಲ, ರೈತಕಾರ್ಮಿಕನನ್ನೂ ಒಳಗೊಂಡಂತೆ ಕಮ್ಮಾರ, ದಳ್ಳಾಳಿ, ವ್ಯಾಪಾರಿ, ಕ್ಷೌರಿಕ, ನೀರಗಂಟಿ, ಕೃಷಿವಿಜ್ಞಾನಿ, ಸಂಶೋಧಕ, ಬೇಟೆಗಾರ ಇತರೆ ಕೃಷಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಇಡೀ ಗ್ರಾಮವೇ ಅಲ್ಲಿ ರೈತಸಮುದಾಯವಾಗಿ ಕಾಣುತ್ತದೆ. ಅಷ್ಟೇ ಅಲ್ಲ ಕೃಷಿಯೆಂದರೆ ಬರೀ ಬೆಳೆ ಬೆಳೆಯುವುದು ಮಾತ್ರವಲ್ಲ, ಅದನ್ನು ಅವಲಂಬಿಸಿದ ಕಾಡು, ಮಾರುಕಟ್ಟೆ ವ್ಯವಸ್ಥೆ, ಸಂಚಾರ ವ್ಯವಸ್ಥೆ, ವಿಜ್ಞಾನ-ತಂತ್ರಜ್ಞಾನ, ಪ್ರಯೋಗಾಲಯಗಳು, ಆಧುನಿಕ ಕೃಷಿ ಯಂತ್ರಗಳು, ಜಾಗತಿಕವಾಗಿ ತೆಗೆದುಕೊಳ್ಳುವ ತೀರ್ಮಾನಗಳೂ ಸೇರಿದಂತೆ; ಪರಿಸರದ ಸಸ್ಯ-ಪ್ರಾಣಿ-ಪಕ್ಷಿ ಸಂಕುಲಗಳನ್ನೂ ಒಳಗೊಂಡಂತೆ ಸಮಗ್ರವಾಗಿ ರೈತನನ್ನು ಅವರ ಕಥನವು ಗ್ರಹಿಸುತ್ತದೆ. ಈ ಸರಪಳಿಯಲ್ಲಿ ಯಾವ ಒಂದು ವಲಯ ಅವನತಿಯಾದರೂ ರೈತನನ್ನು ಒಳಗೊಂಡಂತೆ ಇಡೀ ಗ್ರಾಮವೇ ನಾಶವಾಗುತ್ತದೆ ಎಂಬುದು ಅವರ ಕಥನದ ತಿಳುವಳಿಕೆಯಾಗಿದೆ. ಇಲ್ಲಿ ರೈತರು, ಸಂಶೋಧನೆಗಳು, ಸರ್ಕಾರಗಳು, ರೈತ ಹೋರಾಟಗಾರರು ಎಡವಿರುವುದು ಕಾಣುತ್ತದೆ. ರೈತ ಮತ್ತು ಕೃಷಿ ಎಂದರೆ ಬೀಜ ಬಿತ್ತಿ ಬೆಳೆ ತೆಗೆಯುವುದು ಎಂದು ಸೀಮಿತ ಅರ್ಥದಲ್ಲಿ ಗ್ರಹಿಸಲಾಗುತ್ತಿದೆ. ರೈತನಿಗೆ ಅವನ ಕಸುಬಿಗೆ ಸಂಬಂಧಿಸಿದ ಇತರೆ ವಲಯಗಳಾದ ಕಾಡು, ಪಕ್ಷಿ, ಪ್ರಾಣಿ, ಕೆರೆ ಕುಂಟೆಗಳು, ಕುಶಲಕಲೆಗಳ ಮುಂತಾದುವುಗಳ ಅವನತಿಯ ಕುರಿತ ನಿರ್ಲಕ್ಷ ಧೋರಣೆಯನ್ನು ತಾಳಲಾಗುತ್ತಿದೆ. ತೀವ್ರವಾಗಿ ನಡೆಯುತ್ತಿರುವ ಸರ್ಕಾರಿ ಪ್ರಾಯೋಜಿತ ಗಣಿಗಾರಿಕೆ, ವಿಜ್ಞಾನ ತಂತ್ರಜ್ಞಾನದ ಹೊಸ ಅವಿಷ್ಕಾರಗಳು, ಸರ್ಕಾರದ ಹಣಕಾಸಿನ ಹಾಗೂ ಅಭಿವೃದ್ಧಿ ಯೋಜನೆಗಳು, ಕೈಗಾರಿಕೆಗಳು, ವಿದೇಶಿ ನೀತಿಗಳು, ರಫ್ತು-ಆಮದು ವಹಿವಾಟುಗಳು ಮುಂತಾದುವುಗಳ ಪ್ರಗತಿ ಅಥವಾ ಹಿಂದುಳಿಯುವಿಕೆಯೂ ಸಹಾ ರೈತರ ಬದುಕನ್ನು ನಿರ್ದೇಶಿಸುತ್ತಿರುತ್ತದೆ. ಇವುಗಳಿಗೆ ಆಳುವ ವರ್ಗ ನೀಡುತ್ತಿರುವ ಅತಿಯಾದ ಪ್ರಾಮುಖ್ಯತೆ ಹಾಗೂ ಇವುಗಳನ್ನು ರೈತನಿಂದ, ಅವನ ಕಸುಬಿನಿಂದ ಪ್ರತ್ಯೇಕಿಸಿ ನೋಡುವ ಆಲೋಚನೆಗಳು ಸಹಾ ರೈತರ ಬದುಕಿನ ಮೇಲೆ ಪ್ರಭಾವವನ್ನು ಬೀರಿವೆ. ಹೀಗೆ ಎಲ್ಲವುಗಳನ್ನು ಏಕೀಭವಿಸಿ ಅಥವಾ ಒಂದಕ್ಕೊಂದು ಅಂತರ್ಸಂಬಂಧವನ್ನು ಬೆಸೆದು ನೋಡದ ಹಿನ್ನೆಲೆಯಲ್ಲಿ ರೈತರ ಸಮಸ್ಯೆಗಳನ್ನು ಸಮಗ್ರವಾಗಿ ಅರಿಯಲು, ಗುರುತಿಸಲು ಕಷ್ಟಸಾಧ್ಯವಾಗಿದೆ ಎಂಬುದು ತೇಜಸ್ವಿ

ಕಥನದ ತಿಳುವಳಿಕೆಯಾಗಿದೆ. ಹೀಗೆ ಸಮಾಜದ ಪ್ರತಿಯೊಂದು ಆಗುಹೋಗುಗಳು, ಹಾಗೂ ಪ್ರತಿಯೊಂದು ಜೀವಜಾಲದ ಅವನತಿ ಮತ್ತು ರೈತನೊಂದಿಗೆ ಅಂತರ್ಸಂಬಂಧವನ್ನು ಬೆಸೆದು ನೋಡುವುದರಲ್ಲಿ ಎಡವಿರುವುದು, ವಿಫಲರಾಗಿರುವುದೂ ಸಹಾ ರೈತನ ಅವನತಿಗೆ ಕಾರಣವಾಗಿದೆ ಎನ್ನುವುದನ್ನು ತೇಜಸ್ವಿ ಕಥನ ವಿವರಿಸುತ್ತದೆ. ಇದಕ್ಕೆ ಅವರ 'ಜುಗಾರಿಕ್ರಾಸ್' ಕಾದಂಬರಿಯಲ್ಲಿನ ಮೇದರಹಳ್ಳಿ ಅವಸಾನ ಸೂಕ್ತ ಉದಾಹರಣೆಯಾಗಿದೆ.

ರೈತ ಅಥವಾ ಭೂಮಾಲಿಕ ತೆಗೆದುಕೊಳ್ಳುವ ತೀರ್ಮಾನಗಳು, ವಿಜ್ಞಾನ ತಂತ್ರಜ್ಞಾನಗಳ ಹೊಸ ಆವಿಷ್ಕಾರಗಳು, ಪ್ರಕೃತಿಯ ವೈಪರೀತ್ಯಗಳು ಕೃಷಿಯನ್ನು ಅವಲಂಬಿಸಿದ್ದ ಇತರೆ ಕೃಷಿ ಕಾರ್ಮಿಕ ಸಮುದಾಯದ ನಾಶಕ್ಕೆ ಕಾರಣವಾಗುತ್ತಿವೆ. ಇಡೀ ಹಳ್ಳಿಯೇ ನಿರ್ನಾಮವಾಗುವ, ಹಳ್ಳಿಯ ಕೃಷಿ ಅವಲಂಬಿತ ಯುವಸಮುದಾಯ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗುವ ದುರಂತವನ್ನು ಮೇದರಹಳ್ಳಿ ಅವಸಾನ ಪ್ರಸಂಗ ಸಂಕೇತಿಸುತ್ತದೆ. "ಕಾಡಿನ ನಡುವಿನ ಹತ್ತನೆಯದೋ, ಹನ್ನೆರಡನೆಯದೋ ತಿರುವು ದಾಟಿದ ಕೂಡಲೇ ಬಲಕ್ಕೆ ಕಾಣುವ ನಾಲ್ಕಾರು ಜೋಪಡಿಗಳ ಹಾಳೂರು ನೋಡಿದವರ ನೆನಪಿನಲ್ಲಿ ಕೆಲಕಾಲ ಉಳಿದುಕೊರೆಯುತ್ತದೆ. ಅಲ್ಲಿ ಮಲಗಿರುವ ಒಂದೆರಡು ಕಂತ್ರಿ ನಾಯಿಗಳನ್ನು ಬಿಟ್ಟರೆ ಬಹುಶಃ ಅಲ್ಲಿ ನಿಮಗೆ ಇನ್ನೊಂದು ಮಾನವಾಕೃತಿ ಕಾಣಲಾರದು.... ಈ ಮೇದರಹಳ್ಳಿಗೆ ಟಿಪ್ಪುಸುಲ್ತಾನನ ಕಾಲದಷ್ಟು ಹಳೆಯ ಚರಿತ್ರೆ ಇದೆಯೆಂದರೆ ಯಾರಿಗೂ ನಂಬಿಕೆ ಬರುವುದಿಲ್ಲ.... ಮೇದರಹಳ್ಳಿ ಅಲ್ಲಿ ಮೊಳಕೆಯೊಡೆದು ಚಿಗುರಿದ್ದಕ್ಕೆ ಕಾರಣ ಅದರ ಆಸುಪಾಸಿನಲ್ಲಿ ಸಾವಿರಾರು ಚದರ ಮೈಲು ಅಕ್ಷಯವಾಗಿ ಬೆಳೆದಿದ್ದ ಹೆಬ್ಬಿದಿರು, ವಾಟೆ ಬಿದಿರು, ಕಿರುಬಿದಿರು, ಇತ್ಯಾದಿಗಳು. ಅಲ್ಲಿನ ಬಿದಿರೆಂದರೆ ಎಷ್ಟು ಒಳ್ಳೆಯದೆಂದರೆ ತಲೆಯಿಂದ ಬುಡದವರೆಗೂ ತೆಳ್ಳಗೆ ದಾರದಂತೆ ಸೀಳಬಹುದಿತ್ತು.... ಇಷ್ಟು ಅಕ್ಷಯವಾದ ಬಿದಿರಿನಿಂದ ಯೂರೋಪಿಯನ್ನರ ಕಾಲದಿಂದಲೂ ಕಾಫಿ ತೋಟಗಳಿಗೆ ಬೇಕಾದ ಕುಕ್ಕೆಗಳು, ತಡಿಕೆಗಳು, ಬುಟ್ಟಿ ಮೊರಗಳು ಕರ್ನಾಟಕದ ಉದ್ದಗಲಕ್ಕೂ ಹೆಸರುವಾಸಿಯಾಗಿದ್ದವು. ಇದು ರೈತರಿಗೆ ತುಂಬಾ ಸುಲಭ ಬೆಲೆಯಲ್ಲಿ ಸಿಗುತ್ತಿತ್ತು. ಹಾಗೂ ಪರಿಸರ ಹಾನಿಯಾಗದಂತ ಸಲಕರಣೆಗಳಾಗಿದ್ದವು.... ಕಾಫಿ ತೋಟದ ದೊರೆಗಳಿಗೆ ಕಾಫಿ ಸಸಿಗಳನ್ನು ಬೆಳೆಸಲು ಬೇಕಾಗಿದ್ದ ಬಿದಿರಿನ ಚಿಕ್ಕ ಚಿಕ್ಕ ಕುಕ್ಕೆಗಳು ಮೇದರಹಳ್ಳಿಯಿಂದಲೆ ಸರಬರಾಜಾಗುತ್ತಿದ್ದದ್ದು" (ಜುಗಾರಿಕ್ರಾಸ್, ೨೦೦೯, ಪುಟ-೦೮ & ೦೯)

ಮೇದರಹಳ್ಳಿಯ ಕುಶಲಕರ್ಮಿಗಳು ಇಡೀ ಕಾಫಿಕೃಷಿ ಹಾಗೂ ಇತರೆ ಗೃಹೋಪಯೋಗಿ ಸಲಕರಣೆಗಳನ್ನು ನಿಸರ್ಗದಲ್ಲಿ ಸುಲಭವಾಗಿ ದೊರೆಯುವ ಅಪಾಯಕಾರಿಯಲ್ಲದ ಬಿದಿರಿನ ಮೂಲಕ ತಯಾರಿಸುತ್ತಿದ್ದರು. ಹೀಗೆ ಕೃಷಿಯ ಜೊತೆಗೆ ತಮ್ಮ ಬದುಕನ್ನು ರೂಪಿಸಿಕೊಂಡಿದ್ದ ಈ ಕುಶಲಕರ್ಮಿಗಳು ಜಾಗತೀಕರಣದ ಉತ್ಪನ್ನವಾದ ಪ್ಲಾಸ್ಟಿಕ್‌ನ

ಪ್ರವೇಶದಿಂದ ಅವರ ಕುಶಲಕಲೆಗಳು ಬೆಲೆ ಕಳೆದುಕೊಳ್ಳುತ್ತವೆ. ತಾವು ತಯಾರಿಸುತ್ತಿದ್ದ ವಸ್ತುಗಳಿಗೆ ಬೇಡಿಕೆ ಇಲ್ಲದಂತಾಗಿ ಅವರು ನಿರುದ್ಯೋಗಿಗಳಾಗುತ್ತಾರೆ. ಪ್ಲಾಸ್ಟಿಕ್‌ನ ಪ್ರವೇಶದಿಂದ ಮಾಯಾಲೋಕವೇ ಸೃಷ್ಟಿಯಾದಂತೆ ಭೂಒಡೆಯರು ಪ್ರಭಾವಿತರಾದ ಕಾರಣ, ಬಿದಿರಿನ ಕುಕ್ಕೆಗಳನ್ನು ತಯಾರಿಸುತ್ತಿದ್ದ ಮೇದರಹಳ್ಳಿಯ ಕುಶಲಕರ್ಮಿಗಳು ನೆಲ-ನೆಲೆ ಎರಡೂ ಕಳೆದುಕೊಂಡು ಬದುಕಿನ ಮೂಲಾಧಾರವಿಲ್ಲದೆ ವಲಸೆ ಹಕ್ಕಿಗಳಾಗುತ್ತಾರೆ. ಆಧುನಿಕತೆ ಹುಟ್ಟುಹಾಕಿರುವ ಅತಿಯಾದ ಮಹತ್ವಾಕಾಂಕ್ಷೆಗಳು ಅವರನ್ನು ಯಾವ ರೀತಿ ಸೆಳೆದುವೆಂದರೆ ಅದರ ಅಪಾಯಗಳ ಅಲ್ಪಮಟ್ಟಿನ ಅರಿವೂ ಸಹ ಆಗದಂತೆಅವರೆಲ್ಲ ಸಮ್ಮೋಹನಕ್ಕೆ ಒಳಗಾಗಿರುತ್ತಾರೆ. "ನಾಗರೀಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳಗೆ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ. ಅನೇಕ ಹಳ್ಳಿ ಮನೆತನ, ಬುಡಕಟ್ಟುಗಳ ನಿರ್ನಾಮಕ್ಕೆ ಇದು ಕಾರಣವಾದೀತೆಂದು ಯಾರೂ ಮನಸ್ಸಿನಲ್ಲಿಯೂ ಊಹಿಸಿರಲಿಲ್ಲ. ಖಾಲಿ ಜಾಗಗಳ ಸಂದುಗೊಂದುಗಳೊಳಗೆಲ್ಲಾ ಹಬ್ಬಿ ಆಕ್ರಮಿಸುವ ಪಾರ್ಥೇನಿಯಂ, ಯುಪಟೋರಿಯಂ ಕಳೆಗಳಂತೆ ಪ್ಲಾಸ್ಟಿಕ್ ಪಾಲಿಯುರಿಥೇನ್, ಪಾಲಿಎಥಲೀನ್, ಪಾಲಿಫೈಬರ್, ಪಾಲಿಮಾರ್, ಹೀಗೆ ನಾನಾ ಅವತಾರಗಳೆತ್ತಿ ಮಾರುಕಟ್ಟೆಯ ಎಲ್ಲ ಕ್ಷೇತ್ರಗಳಿಗೆ ಎಲ್ಲ ಅವಕಾಶಗಳಿಗೆ ಮುತ್ತಿಗೆ ಹಾಕಿತು" (ಜುಗಾರಿಕ್ರಾಸ್, ೨೦೦೯, ಪುಟ-೧೦) ಜಾಗತೀಕರಣದ ಬಳುವಳಿಯಾದ ಯಂತ್ರನಾಗರೀಕತೆ, ಆಧುನಿಕತೆಯ ಅಮಲು-ಆವಿಷ್ಕಾರಗಳು-ಆವಾಂತರಗಳು, ಜನತೆಯ ಸುಲಭ ವಿಧಾನಗಳ ಕಡೆಗಣನೆ ಅಥವಾ ನಿರಾಸಕ್ತಿ, ಇವುಗಳ ಜೊತೆಗೆ ಪ್ರಕೃತಿಯ ವೈಪರೀತ್ಯಗಳೂ ಸಹ ಮೇದರಹಳ್ಳಿಯ ಅವನತಿಗೆ ಕಾರಣವಾಗುತ್ತವೆ. ಈ ಎಲ್ಲವೂ ರೈತರ ಬವಣೆಗಳಿಗೆ ಸಂಬಂಧಿಸಿದವುಗಳೇ. ಕೃಷಿಯೆಂದರೆ ಅದು ಒಂದು ವ್ಯಕ್ತಿಗೆ ಸಂಬಂಧಿಸಿದ್ದಲ್ಲ. ಹಿಂದೆ ಹೇಳಿದಂತೆ ಅದೊಂದು ಸರಪಳಿಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಈ ನೆಲ, ಸಸ್ಯ, ಪ್ರಾಣಿ-ಪಕ್ಷಿ, ಜನರ ಆಸಕ್ತಿ ಅಭಿರುಚಿಗಳೆಲ್ಲವೂ ರೈತನ ಬದುಕನ್ನು ನಿರ್ಧರಿಸುತ್ತವೆ. ಇವುಗಳಲ್ಲಿ ಏನೇ ಏರುಪೇರಾದರೂ ಅದರ ಪರಿಣಾಮ ರೈತನ ಮೇಲೆ ಆಗುತ್ತದೆ. ಹಾಗಾಗಿ ಇಂದಿನ ರೈತನ ಬವಣೆಗಳಿಗೆ ಒಂದು ಕಾರಣವನ್ನು ನೀಡುವುದು ಅಸಾಧ್ಯ ಹಾಗೂ ಸಮಂಜಸವಲ್ಲ. ಮೇದರಹಳ್ಳಿಯಂತೆ ಚಿದಂಬರ ರಹಸ್ಯದ ಕೆಸರೂರಿನ ಅವನತಿಯೂ ಸಹ ಇದನ್ನೇ ಸಂಕೇತಿಸುತ್ತದೆ.

ಕೆಸರೂರಿನ ನಾಶಕ್ಕೆ ಅಲ್ಲಿನ ರಾಜಕಾರಣ, ಮತಾಂಧತೆ, ಗೋಸಾಯಿಗಳು, ಸುಲೇಮಾನ್ ಬೇರಿ, ಕಾಡಿನ ನಾಶ, ಜಾತೀಯತೆ, ಮಾರುಕಟ್ಟೆ ಶಕ್ತಿಗಳು, ಅಡಮಾನ ಬ್ಯಾಂಕುಗಳು, ವಿದೇಶಿ ಕಂಪನಿಗಳು, ದಲ್ಲಾಳಿಗಳು ಹೀಗೆ ಅನೇಕ ಅಂಶಗಳು ಕಾರಣವಾಗುತ್ತವೆ. ಕೆಸರೂರಿನ ಏಲಕ್ಕಿ ಪ್ರಪಂಚದಾದ್ಯಂತ ಪ್ರಸಿದ್ಧಿಯಾಗಿತ್ತು. ಏಲಕ್ಕಿಯಿಂದಲೇ ಅದರ ಏಳ್ಗೆ ಮತ್ತು

ಅವನತಿ ನಿಂತಿತ್ತು. ಕೆಸರೂರಿನ ಅವನತಿಯೊಂದಿಗೆ ಅಲ್ಲಿನ ಏಲಕ್ಕಿ ಬೆಳೆಗಾರರು ಸಹ ಅವನತಿಯ ಹಾದಿ ಹಿಡಿಯುತ್ತಾರೆ. ಕೃಷಿಯಿಂದ ಉಳಿಗಾಲವಿಲ್ಲ ಎಂದೇ ಭಾವಿಸಿ, ಆ ಬದುಕಿನಿಂದ ವಿಮುಖವಾಗುತ್ತ ಸಾಗುತ್ತಾರೆ. ಕೆಸರೂರಿನ ಏಲಕ್ಕಿಯ ಅವನತಿ ಅಲ್ಲಿನ ರೈತರ ಮೇಲೂ,ರೈತರ ಅವನತಿ ಕೆಸರೂರಿನ ಸಂಸ್ಕೃತಿಯ ಮೇಲೂ ಪ್ರಭಾವವನ್ನು ಬೀರುತ್ತದೆ. ಹೀಗೆ ಒಂದಕ್ಕೊಂದು ಸಂಬಂಧವಿರುವುದರಿಂದ, ಒಂದರ ಚಲನೆ ಹಾಗೂ ಅವನತಿ ಮತ್ತೊಂದರ ಚಲನೆ ಮತ್ತು ಅವನತಿಗೆ ಕಾರಣವಾಗುವ ಸನ್ನಿವೇಶಗಳು ಇಡೀ ಕಾದಂಬರಿಯಲ್ಲಿ ತುಂಬಿಕೊಂಡಿವೆ. "ಒಂದು ಸಸ್ಯ ಅವನತಿಯ ಹಾದಿ ಹಿಡೀತೂ ಅನ್ನಿ, ಅದರಿಂದ ಬದುಕುತ್ತಿದ್ದ ಕೀಟಸ್ತೋಮ, ಅವುಗಳನ್ನೇ ಆಹಾರ ಮಾಡಿಕೊಂಡಿದ್ದ ಪಕ್ಷಿಗಳು, ಅವುಗಳಿಂದಲೇ ಬೀಜ ಪ್ರಸರಣವಾಗುತ್ತಿದ್ದ ವೃಕ್ಷಸಂಕುಲ, ಅದರ ಆಧಾರದ ಮೇಲೆ ಹೆಪ್ಪುಗಟ್ಟಿ ಮಳೆ ಸುರಿಸುವ ಮೋಡ ಮತ್ತು ಇವುಗಳೆಲ್ಲದರ ಆಧಾರದ ಮೇಲೆ ಮನುಷ್ಯ, ಇಡೀ ವಿಶ್ವ ಈ ತರ ಒಂದಕ್ಕೊಂದಕ್ಕೆ ಬಿಗಿದುಕೊಂಡು ಸಮತೋಲನದಲ್ಲಿ ನಿಂತಿರೋ ಬಲೆ." (ಚಿದಂಬರ ರಹಸ್ಯ, ೨೦೦೯, ಪುಟ-೫೪)

ಈ ಪ್ರಸಂಗಗಳ ಜೊತೆಗೆ ಮಾಯಾಲೋಕದ ನಿರೂಪಕ ಹಕ್ಕಿಪಿಕ್ಕಿಯವರು ಹುಂಡುಕೋಳಿಗಳನ್ನು, ಬೆಳ್ಳಕ್ಕಿಗಳನ್ನು ಕೊಲ್ಲುವುದನ್ನು ವಿರೋಧಿಸುವುದು, ಅವರೊಂದಿಗೆ ಜಗಳವಾಡುವುದು, ಅವರ ಮೇಲೆ ಫಾರೆಸ್ಟ್ ಗಾರ್ಡ್ ನಾಗರಾಜನಿಗೆ ದೂರು ನೀಡುವುದು, ಚಿದಂಬರ ರಹಸ್ಯದಲ್ಲಿ ಸಂಶೋಧನಾ ಕೇಂದ್ರದ ಕೀಟಶಾಸ್ತ್ರಜ್ಞ ಸಿದ್ದಪ್ಪ ಗೋಸಾಯಿಗಳನ್ನು ವಿರೋಧಿಸುವುದು- ಇವೆಲ್ಲಾ ನಿಸರ್ಗದ ಜೀವಜಾಲವನ್ನು ನಿರ್ನಾಮ ಮಾಡುತ್ತಿರುವುದರ ಬಗ್ಗೆ ಆತಂಕಗೊಂಡೇ; ಇವು ಕೇವಲ ಮರ-ಗಿಡಗಳ, ಪ್ರಾಣಿ-ಪಕ್ಷಿಗಳ ನಾಶವನ್ನೋ,ಮೇದರಹಳ್ಳಿಯ ಅವಸಾನವನ್ನೋ, ಕುಶಲಕಲೆಗಳ-ಕುಶಲಕರ್ಮಿಗಳ ನಾಶವನ್ನೋ, ಏಲಕ್ಕಿ ನಿರ್ನಾಮವನ್ನೋ, ರೈತನ ಅಥವಾ ಕೆಸರೂರಿನ ನಾಶವನ್ನೋ ಸಂಕೇತಿಸುತ್ತಿಲ್ಲ; ರೈತ ಸಮುದಾಯದ ನಾಶ, ಇಡೀ ಸಮಾಜದ ನಾಶ, ದೇಶದ ನಾಶ ಎಂಬ ಎಚ್ಚರಿಕೆಯನ್ನು ಕೂಡ ಈ ಪ್ರಸಂಗಗಳ ಮೂಲಕ ತೇಜಸ್ವಿ ಕಥನ ನೀಡುತ್ತದೆ. ಕೃಷಿಯು ಸಹಕಾರ ನಿಯಮಕ್ಕೆ ಬದ್ಧವಾಗಿರುವಂಥದ್ದು. ತಾನು ಬೆಳೆಯುವ ಮೂಲಕ ಸಮಾಜವನ್ನು ಬೆಳೆಸುತ್ತದೆ, ತಾನು ನಾಶವಾಗುವುದರ ಜೊತೆಗೆ ಸಮಾಜವನ್ನು ನಾಶಮಾಡುತ್ತದೆ. ಹಾಗಾಗಿ ರೈತನ ಕುರಿತಾದ ಚಿಂತನೆ ರೈತನ ಸುತ್ತಲೇ ಗಿರಕಿಹೊಡೆಯದೇ ಅವನಿಗೆ ಸಂಬಂಧಿಸಿದ ಪ್ರತಿಯೊಂದೂ ವಲಯಗಳನ್ನು ಒಳಗೊಳ್ಳಬೇಕು ಎಂಬುದರ ಕಡೆಗೆ ತೇಜಸ್ವಿ ಕಥನ ಓದುಗರ ಗಮನವನ್ನು ಸೆಳೆಯುತ್ತದೆ. ಹೀಗೆ ಎಲ್ಲವುಗಳನ್ನು ಏಕೀಭವಿಸಿದಂತೆ ರೈತ ಚಿಂತನೆ ಹಾಗೂ ರೈತಪರ ಯೋಜನೆಗಳು ರೂಪುಗೊಳ್ಳಬೇಕು ಎಂಬುದು ತೇಜಸ್ವಿ ಕಥನದ ಆಶಯವಾಗಿದೆ.

ರೈತನ ಕುರಿತಾದ ಯೋಜನೆಗಳು, ಸರ್ಕಾರದಿಂದ ರೈತರಿಗೆ ದೊರೆಯಬಹುದಾದ ಸೌಲಭ್ಯಗಳು ಕಾರ್ಯಾಂಗದ ಭ್ರಷ್ಟ ಅಧಿಕಾರಿ/ನೌಕರರಿಂದಾಗಿ ಕೈತಪ್ಪಿ ಅವರು ಮತ್ತಷ್ಟು ಸಂಕಷ್ಟಗಳಿಗೆ ಒಳಗಾಗುತ್ತಿರುವುದರ ಬಗ್ಗೆಯೂ ಸಹಾ ತೇಜಸ್ವಿ ಕಥನ ನಮ್ಮ ಗಮನವನ್ನು ಸೆಳೆಯುತ್ತದೆ. ಸಂಪೂರ್ಣವಾಗಿ ಕೃಷಿಯನ್ನು ಅವಲಂಬಿಸಿರುವ ಭ್ರಷ್ಟ ಗ್ರಾಮಸೇವಕ ಶಂಕರಪ್ಪನಿಂದಾಗಿ ಕಿರಗೂರಿನ ರೈತರು ಸರ್ಕಾರದಿಂದ ತಮಗೆ ದೊರೆಯಬಹುದಾಗಿದ್ದ ಹಲವಾರು ಸೌಲಭ್ಯಗಳಿಂದ ವಂಚಿತರಾಗಬೇಕಾಗುತ್ತದೆ. ಸರ್ಕಾರದಿಂದ ದೊರೆಯುವ ಬಿತ್ತನೆ ಬೀಜ, ಗೊಬ್ಬರ, ಔಷಧಿಗಳು, ಕೃಷಿ ಸಲಕರಣೆಗಳನ್ನು ರೈತರಿಗೆ ವಿತರಿಸದೇ ಅಕ್ರಮವಾಗಿ ಮಾರಾಟ ಮಾಡಿಕೊಳ್ಳುವ ಮೂಲಕ ಸರ್ಕಾರಿ ಯೋಜನೆಗಳ ಉದ್ದೇಶವನ್ನೇ ಶಂಕರಪ್ಪ ವಿಫಲಗೊಳಿಸಿಬಿಡುತ್ತಾನೆ. ಈತ ಮಹತ್ವಾಕಾಂಕ್ಷೆಯ ಯೋಜನೆಯಾದ ಸಾಂದ್ರ ಬೇಸಾಯ ಪದ್ಧತಿಯನ್ನು ಪ್ರಾಯೋಗಿಕವಾಗಿ ಜಾರಿಮಾಡದೇ ಈ ವಿಷಯದಲ್ಲಿ ಇಲಾಖೆಗೆ ಸುಳ್ಳು ಹೇಳುತ್ತ ಕೆಲವು ಅನಕ್ಷರಸ್ಥ ರೈತರಿಂದ ಸಹಿ ಪಡೆದು ಇಲಾಖೆಗೆ ಸಲ್ಲಿಸಿರುತ್ತಾನೆ. ತನ್ನ ವೃತ್ತಿ, ಅದರ ಜವಾಬ್ದಾರಿಯನ್ನೇ ಮರೆತು ಊರಿನಲ್ಲಿ ತಂಟೆ ತಕರಾರುಗಳನ್ನು ಸೃಷ್ಟಿಸಿಕೊಂಡು, ಸೇಂದಿ ಅಂಗಡಿಯಲ್ಲಿ ಸೇಂದಿ ಅಳೆಯುತ್ತ ಕಾಲಹರಣ ಮಾಡುತ್ತಿರುತ್ತಾನೆ. ಸಾಂದ್ರ ಬೇಸಾಯದ ಸ್ಥಿತಿಗತಿಗಳನ್ನು ಪರಿಶೀಲಿಸಲು ಬಂದ ಇಲಾಖೆಯ ಮೇಲಾಧಿಕಾರಿಗಳ ಶಿಸ್ತುಕ್ರಮದ ಭಯದಿಂದ ರೈತರ ನಡುವೆ ಪರಸ್ಪರ ಜಾತಿಜಗಳವನ್ನು ಹುಟ್ಟುಹಾಕುತ್ತಾನೆ. ಈ ಬಗೆಯ ನೌಕರಶಾಹಿಯ ಕಿತಾಪತಿಗಳು, ಕುತಂತ್ರಗಳು ರೈತರನ್ನು ಇನ್ನಷ್ಟು ಸಂಕಟಗಳಿಗೆ ಒಳಗುಮಾಡಿ ಊರಿನ ನೆಮ್ಮದಿ ಹಾಳಾಗುವಂತಾಗುತ್ತದೆ. ಹೀಗೆ ಭ್ರಷ್ಟ ಸರ್ಕಾರಿ ನೌಕರರಿಂದಾಗಿ ಸರ್ಕಾರಿ ಯೋಜನೆಗಳು ರೈತರನ್ನು ತಲುಪದಂತಾಗಿವೆ. ಇದು ಆಳುವ ವರ್ಗದ ಉದ್ದೇಶಗಳು, ಯೋಜನೆಗಳು ರೈತರನ್ನು ಹಾಗೂ ರೈತರ ಬವಣೆಗಳು ಸರ್ಕಾರವನ್ನು ತಲಪದಿರಲು ಕಾರಣಗಳಾಗಿವೆ ಎಂಬುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಸರ್ಕಾರಿ ಅಧಿಕಾರಿ ಹಾಗೂ ನೌಕರ ವರ್ಗದ ಭ್ರಷ್ಟತೆ, ಬೇರೆ ಬೇರೆ ವಿಧಾನಗಳಲ್ಲಿ ರೈತರನ್ನು ಅಸಹಾಯಕರನ್ನಾಗಿ ಮಾಡಿ ಸುಲಿಯುವುದು ರೈತ ಸಮುದಾಯವನ್ನು ಮತ್ತಷ್ಟು ಸಂಕಟಗಳಿಗೆ ಒಳಗುಮಾಡಿದೆ. ಕಾಡನ್ನು ಕಾಯಲು, ಅಲ್ಲಿನ ಅಕ್ರಮಗಳನ್ನು ತಡೆಯಲು ಜುಗಾರಿಕ್ರಾಸ್‌ನಲ್ಲಿ ನಿಯೋಜಿತಗೊಂಡಿರುವ ಫಾರೆಸ್ಟರ್ ಇಕ್ಬಾಲ್, ಗಾರ್ಡ ಗುರಪ್ಪ "ರೈತರ ಕೈಯಲ್ಲಿ ಅವರು ದುಡ್ಡು ಕೀಳುತ್ತಿದ್ದ ವಿಧಾನ ಮಾತ್ರ ಬಹಳ ಸರಳವಾಗಿತ್ತು. ಫಾರೆಸ್ಟರ್ ಇಕ್ಬಾಲ್, ಗಾರ್ಡ್ ಗುರಪ್ಪನಿಗೆ ಗಾಡಿ ತಪಾಸಣೆ ಮಾಡಲು ಹೇಳುತ್ತಿದ್ದ. ಗುರಪ್ಪ ಇದಕ್ಕಾಗಿಯೇ ಮಾಡಿಟ್ಟುಕೊಂಡಿದ್ದ ತೆಳುವಾದ ಗುಳವನ್ನು ತೆಗೆದುಕೊಂಡು ಹುಲ್ಲಿನ ರಾಶಿಗೆ ಚುಚ್ಚಿ ತೂರಿಸಿ ಒಳಗೇನಾದರೂ ಬಚ್ಚಿಟ್ಟಿದ್ದಾರೆಯೋ ನೋಡುತ್ತಿದ್ದ. ಈ ಎಲ್ಲಾ ಕಾರ್ಯಕ್ರಮ

ನಡೆಯುತ್ತಿರಬೇಕಾದರೆ ರೈತರಿಗೆ ಅರ್ಥವಾಗಿ ಐದೋ ಹತ್ತೋ ಬಿಚ್ಚಿದನೋ ಸರಿ, ದುಡ್ಡು ಕೈಗೆ ಬಂದೊಡನೆ ಇಕ್ಬಾಲ್ 'ಇಳಿಯೋ ಇಳಿಯೋ ಏನೂ ಇರೋಹಂಗೆ ಕಾಣೋದಿಲ್ಲ' ಎಂದು ಕೆಳಗಿನಿಂದಲೇ ಹೇಳುತ್ತಿದ್ದ. ದುಡ್ಡು ಬಿಚ್ಚಲಿಲ್ಲವೋ, ಗುರಪ್ಪ ಗಾಡಿ ಮೇಲಿನಿಂದಲೇ 'ಗಳಕ್ಕೆ ಏನೋ ಗಟ್ಟಿ ತಾಗಿದ ಹಾಗೆ ಕಾಣ್ತಿದೆ ಸಾರ್' ಎಂದು ಹೇಳುತ್ತಿದ್ದ. ಸರಿ ಗಾಡಿಗೆ ತುಂಬಿದ ಹುಲ್ಲು ಮೆದೆಯೆಲ್ಲಾ ಅನ್ಲೋಡ್ ಮಾಡು ಎಂದು ಹಿಡಿದುಕೊಳ್ಳುತ್ತಿದ್ದರು. ಐದೋ ಹತ್ತೋ ಲಂಚ ಉಳಿಸಲು ಹೋದ ರೈತ ಗಾಡಿ ಅನ್‌ಲೋಡು ಮಾಡಿ ಮತ್ತೆ ಲೋಡು ಮಾಡುವ ತೊಂದರೆಗೆ ಸಿಕ್ಕಿಕೊಂಡು ನರಂ ಆಗಿ ಬಾಲ ಮುದುರಿಕೊಳ್ಳುತ್ತಿದ್ದ" (ಜುಗಾರಿಕ್ರಾಸ್, ೨೦೦೯, ಪುಟ-೦೨) ಹೀಗೆ ನಮ್ಮ ನೌಕರಶಾಹಿ ವಿಧ ವಿಧವಾಗಿ ರೈತನನ್ನು ಸುಲಿದು ಅವನ ಗಳಿಕೆಯ ಬಹುಪಾಲನ್ನು ತಿಂದು ತೇಗುತ್ತಿದೆ. ಇವೂ ಸಹಾ ರೈತರನ್ನು ಬಹುವಾಗಿ ಕಾಡುತ್ತಿವೆ.

ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳು ರೈತರ ಸಮಸ್ಯೆಗಳ ನಿವಾರಣೆಯ ಉದ್ದೇಶದಿಂದ ಸ್ಥಾಪನೆಯಾಗಿದ್ದರೂ ಅವು ಕೆಲವೇ ಕೆಲವು ಭೂ ಮಾಲಿಕರ ಕಪಿಮುಷ್ಠಿಯಲ್ಲಿ ಸಿಕ್ಕಿ ನರಳುತ್ತಿವೆ. ಕುಬಿ ಮತ್ತು ಇಯಾಲ ಕಥೆಯಲ್ಲಿ ಬೈರಾಪುರದ ಸೊಸೈಟಿಯಲ್ಲಿನ ಹಣವನ್ನು, ಸರ್ಕಾರದಿಂದ ರೈತರಿಗೆ ಹಂಚಿಕೆ ಮಾಡಲು ಮಂಜೂರಾಗಿದ್ದ ಬಿತ್ತನೆಬೀಜ, ರಸಗೊಬ್ಬರವನ್ನು ಸೊಸೈಟಿಯ ನಿರ್ದೇಶಕ ಶಿವಣ್ಣ ಮುಂತಾದ ಕೆಲವು ಶ್ರೀಮಂತ ಭೂಮಾಲಿಕರು ಕದಿಯುತ್ತಾರೆ. ಈ ಬಗ್ಗೆ ವಿರೋಧಿಗಳು ಪ್ರಶ್ನಿಸತೊಡಗುತ್ತಾರೆ. ಅದರಿಂದ ಬಚಾವಾಗಲು ಈ ಕೃತ್ಯಗಳ ಅರಿವೇ ಇಲ್ಲದೇ ನಿರ್ದೇಶಕ ಶಿವಣ್ಣನ ಅಣತಿಯಂತೆ ಕೆಲಸ ನಿರ್ವಹಿಸಿದ ರಂಗ, ರೆಹಮಾನ್ ಮುಂತಾದ ಕೃಷಿ ಕೂಲಿ ಕಾರ್ಮಿಕರನ್ನು ಆರೋಪಿಗಳನ್ನಾಗಿಸಿ ಅವರನ್ನು ಪೋಲೀಸರಿಂದ ಹೊಡೆಸಿ, ಚಿತ್ರಹಿಂಸೆಯನ್ನು ನೀಡಲಾಗುತ್ತದೆ. ಹೀಗೆ ಸರ್ಕಾರಿ ಯೋಜನೆಗಳು, ಸೌಲಭ್ಯಗಳು ಕಾರ್ಯಾಂಗದ ಭ್ರಷ್ಟರಿಂದ ರೈತರಿಗೆ ತಲುಪದಂತಾಗಿರುವುದು ಒಂದು ಕಡೆಯಾದರೆ, ತಲುಪುವ ಕೆಲವೇ ಕೆಲವು ಸೌಲಭ್ಯಗಳೂ ಸಹಾ ಮೂರ್‍ನಾಲ್ಕು ಶ್ರೀಮಂತ ಜಮೀನ್ದಾರರ ಕೈವಶವಾಗುತ್ತಿರುವುದು ರೈತರನ್ನು ಮತ್ತಷ್ಟು ನಿರಾಶೆಗೆ ನೂಕಿದೆ. ಆದರೆ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳಾದರೂ ಯಾವುವು? ಸಬ್ಸಿಡಿಗಳು, ಬ್ಯಾಂಕ್‌ಗಳು ನೀಡುವ ಅಲ್ಪಮೊತ್ತದ ಸಾಲ, ಸರ್ಕಾರಗಳು ಘೋಷಿಸುವ ಸಾಲಮನ್ನಾ, ಬೃಹತ್ ಕೃಷಿಯಂತ್ರಗಳು ಮುಂತಾದುವು. ಇವು ಸಣ್ಣ ಹಿಡುವಳಿದಾರರಿಗೆ ಅಗತ್ಯವೇ ಅಥವಾ ಇವು ಸಣ್ಣ ಹಿಡುವಳಿದಾರರಿಗೆ ತಲುಪುವಷ್ಟು ಸರ್ಕಾರಿ ನಿಯಮಗಳು ಸಡಿಲಗೊಂಡಿವೆಯೇ ಎಂಬುದನ್ನೂ ಸಹಾ ಗಮನಿಸಬೇಕಿದೆ. ಸಣ್ಣ ಹಿಡುವಳಿದಾರರು ಮಳೆಯಾಧಾರಿತ ಕೃಷಿಯನ್ನು ನಡೆಸುತ್ತಿದ್ದು ಅವರಿಗೆ ಈ ಸರ್ಕಾರಿ ಸಾಲ, ಸಾಲಮನ್ನಾ, ಬೃಹತ್ ಕೃಷಿಯಂತ್ರಗಳ ಅಗತ್ಯವೇ ಇರುವುದಿಲ್ಲ. ಹಾಗಾಗಿ ಸರ್ಕಾರಿ ಯೋಜನೆಗಳು ಸಮಗ್ರ ರೈತ ಸಮುದಾಯವನ್ನು ಪ್ರತಿನಿಧಿಸುವಂತಿರಬೇಕು

ಹಾಗೂ ಕೃಷಿಯೇತರ ಉದ್ದಿಮೆಗಳಿಗೆ ಸಮಾನಾಂತರವಾಗಿ ಕೃಷಿಗೂ ಮಾನ್ಯತೆ ದೊರೆಯಬೇಕು. ಹಾಗಾಗಿ ಯೋಜನೆಗಳನ್ನು ಯಾವ ಉದ್ದೇಶಕ್ಕಾಗಿ ರೂಪಿಸಲಾಗಿದೆಯೋ ಆ ಉದ್ದೇಶವನ್ನು ರಚನಾತ್ಮಕವಾಗಿ ಸಾಧ್ಯವಾಗಿಸುವಲ್ಲಿ ಸರ್ಕಾರಗಳು ದಿಕ್ಕುತಪ್ಪುತ್ತಿವೆ. ಹಾಗೆಯೇ ನಮ್ಮ ಸರ್ಕಾರಗಳು ಚುನಾವಣಾ ದೃಷ್ಟಿಯಿಂದ ಕ್ಷಣಿಕ ಮತ್ತು ಅಲ್ಪಕಾಲಿಕ ಯೋಜನೆಗಳನ್ನು ಮಾತ್ರ ರೂಪಿಸುತ್ತಿರುವುದರಿಂದ ರೈತರ ಸಮಸ್ಯೆಗಳು ನಿರಂತರವಾಗಿ ಹಾಗೇ ಉಳಿದಿವೆ. ಆದ್ದರಿಂದ ರೈತರ ಪ್ರದೇಶಕ್ಕನುಗುಣವಾಗಿ ಮಾರುಕಟ್ಟೆ ವ್ಯವಸ್ಥೆ, ವಿದ್ಯುತ್, ನೀರಾವರಿ ಸೌಲಭ್ಯ ಮುಂತಾದ ದೀರ್ಘಾವಧಿ ಸಮಸ್ಯೆಗಳ ನಿವಾರಣೆಗೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿ ರಚನಾತ್ಮಕವಾಗಿ ಕಾರ್ಯರೂಪಕ್ಕೆ ತಂದರೆ ಮಾತ್ರವೇ ರೈತರು ತಮ್ಮ ಬವಣೆಗಳಿಂದ ಮುಕ್ತರಾಗಲು ಸಾಧ್ಯ ಎಂಬುದು ತೇಜಸ್ವಿ ಕಥನದ ಅಭಿಪ್ರಾಯವಾಗಿದೆ.

ಸಣ್ಣ ಹಿಡುವಳಿದಾರರಿಗೆ ಕೃಷಿ ಸಾಲ ನೀಡುವ ಬ್ಯಾಂಕುಗಳು ಮತ್ತು ಸರ್ಕಾರಗಳು ಇಬ್ಬಗೆಯ ನೀತಿಯನ್ನು ಅನುಸರಿಸುತ್ತವೆ. ಚಿದಂಬರ ರಹಸ್ಯದಲ್ಲಿ ಸಾಲ ಹಿಂತಿರುಗಿಸದ ರೈತರ ಮನೆಗಳನ್ನು, ಅವರ ಗೃಹೋಪಯೋಗಿ ವಸ್ತುಗಳನ್ನು ಜಪ್ತಿ ಮಾಡಲಾಗುತ್ತದೆ. ಸರ್ಕಾರಿ ಯೋಜನೆಯಂತೆ ಹರಿಜನರಿಗೆ ಸಾಲ ನೀಡುವ ನೆಪದಲ್ಲಿ ಬ್ಯಾಂಕಿನ ವ್ಯವಸ್ಥಾಪಕರು ಮಧ್ಯವರ್ತಿಗಳ ಜೊತೆ ಸೇರಿ ಸಾಲದ ಮೊತ್ತಕ್ಕಿಂತ ಕಡಿಮೆ ನೀಡಿ ಅವರನ್ನು ಶೋಷಿಸುತ್ತಾರೆ. ಹೀಗೆ ಸರ್ಕಾರಿ ಸೌಲಭ್ಯಗಳು ಫಲಾನುಭವಿಗಳನ್ನು ತಲುಪದೇ ಮಾರ್ಗ ಮಧ್ಯದಲ್ಲೇ ಅಂತ್ಯವನ್ನು ಕಾಣುತ್ತಿವೆ. ಮಧ್ಯವರ್ತಿಗಳ ಪಾಲಾದ ಸಾಲವನ್ನು ರೈತರು ಮರುಪಾವತಿ ಮಾಡಲು ಅಸಾಧ್ಯವಾದಾಗ ಅವರ ಆಸ್ತಿಯನ್ನು ಜಪ್ತಿ ಮಾಡಲು ಯತ್ನಿಸುವುದು ಅವರನ್ನು ಸಾಮಾಜಿಕವಾಗಿ ಅವಮಾನಿಸುವಂತಾಗಿದೆ. ಇದೂ ಸಹಾ ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿದೆ. ಆದರೆ ಕೋಟ್ಯಂತರ ರೂಪಾಯಿ ಸಾಲ ಬಾಕಿ ಉಳಿಸಿಕೊಂಡಿರುವ ಉದ್ದಿಮೆದಾರರ ಸಾಲದ ಕುರಿತಾಗಿ ಇದೇ ತೀವ್ರತೆ, ಕಾಳಜಿ ಸರ್ಕಾರ ಮತ್ತು ಬ್ಯಾಂಕುಗಳಿಗೆ ಏಕಿರುವುದಿಲ್ಲ ಎಂಬ ಪ್ರಶ್ನೆಯೂ ಇಲ್ಲಿ ಮೂಡುತ್ತದೆ. ರೈತರಿಗೆ ಸಾಲವನ್ನು ನೀಡುವುದಾಗಿ ಘೋಷಿಸುವುದು ಮಾತ್ರ ಸರ್ಕಾರದ ಕೆಲಸವಲ್ಲ, ಅದನ್ನು ಫಲಾನುಭವಿಗಳಿಗೆ ತಲುಪುವಂತೆ ಮಾಡುವುದೂ ಸಹಾ ಸರ್ಕಾರದ ಜವಾಬ್ದಾರಿಯೇ ಆಗಿರುತ್ತದೆ. ರೈತರ ಬೆಳೆಗಳಿಗೆ ಸೂಕ್ತ ಬೆಲೆ, ವ್ಯವಸ್ಥಿತ ಮಾರುಕಟ್ಟೆ, ದಲ್ಲಾಳಿ ವ್ಯವಸ್ಥೆಯಿಂದ ಮುಕ್ತವಾದ ವಾತಾವರಣ, ಸಮರ್ಪಕ ನೀರಾವರಿ ವ್ಯವಸ್ಥೆ, ಅವರ ಪಂಪಸೆಟ್‌ಗಳಿಗೆ ಕ್ರಮಬದ್ಧವಾದ ವಿದ್ಯುತ್ ಸಿಗುವಂತೆ ನೋಡಿಕೊಳ್ಳಬೇಕಾದುದು ಕೂಡ ಸರ್ಕಾರದ ಮತ್ತು ಅದರ ಅಧಿಕಾರಿ ವರ್ಗದ ಜವಾಬ್ಧಾರಿಯೇ ಆಗಿದೆ. ಮಾಯಾಲೋಕ ಕಾದಂಬರಿಯಲ್ಲಿ ಬರಗಾಲದ ಸಂದರ್ಭದಲ್ಲಿ ರೈತರ ಬೆಳೆಗಳಿಗೆ ನೀರನ್ನು ಒದಗಿಸುವ ಪಂಪ್‌ಸೆಟ್‌ಗಳು ವಿದ್ಯುತ್ತಿನ ಅನಿಯಂತ್ರಿತ ಕಡಿತದಿಂದಾಗಿ

ಸುಟ್ಟು ಹಾಳಾಗುತ್ತವೆ. ಬೆಳೆದ ಬೆಳೆಗಳು ನಾಶವಾಗುತ್ತವೆ. ಅವರು ಒಗ್ಗೂಡಿ ಚಳುವಳಿಯನ್ನು ಮಾಡುವ ಮೂಲಕ ಸರ್ಕಾರವನ್ನು ಎಚ್ಚರಿಸಬೇಕಾಗುತ್ತದೆ. ಇವು ಪ್ರಸ್ತುತ ರೈತರು ಕೃಷಿಯಿಂದ ಸಂಕಷ್ಟಕ್ಕೊಳಗಾಗಲು ಮತ್ತು ಆ ಕಸುಬಿನಿಂದಲೇ ವಿಮುಖರಾಗಲು ಕಾರಣಗಳಾಗಿವೆ ಎಂಬುದನ್ನು ತೇಜಸ್ವಿ ಕಥನ ಗುರುತಿಸುತ್ತದೆ. ರೈತ ಹೋರಾಟಗಳು ಮತ್ತು ಹೋರಾಟಗಾರರನ್ನು ಕುರಿತು "ಕಾನೂನುಭಂಗದಂತ ಚಳುವಳಿಗಳನ್ನು ನೀವು ಕೈಗೆತ್ತಿಕೊಂಡಾಗ ನಿಮ್ಮಲ್ಲಿ ಸ್ಪಷ್ಟತೆ ಮತ್ತು ಸಮರ್ಥ ನಾಯಕತ್ವ ಎರಡೂ ಇಲ್ಲದಿದ್ದರೆ ಖಂಡಿತವಾಗಿಯೂ ಅರಾಜಕತೆಯನ್ನು ಸೃಷ್ಟಿಸುತ್ತೀರಿ, ನಿಮ್ಮ ಉದ್ದೇಶವೂ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು" (ಪ್ರಸಾದ್ ರಕ್ಷಿದಿ, ನಮ್ಮ ನಡುವಿನ ತೇಜಸ್ವಿ, ೨೦೧೦, ಪುಟ-೦೫) ಎಂಬ ಎಚ್ಚರಿಕೆಯನ್ನೂ ಸಹಾ ತೇಜಸ್ವಿಯವರ ಕಥನ ನೀಡುತ್ತದೆ. ಹಾಗೆಯೇ ಸಂಘಟಿತ ಹೋರಾಟದ ಕಡೆಗೆ ರೈತರು ಸ್ಪಷ್ಟತೆ ಮತ್ತು ಸಮರ್ಥ ನಾಯಕತ್ವದೊಂದಿಗೆ ಚಲಿಸಬೇಕಿರುವುದನ್ನು ಇವರ ಕಥನವು ಸೂಚಿಸುತ್ತದೆ.

ರೈತೋದ್ಧಾರದ ನೆಪದಲ್ಲಿ ಸರ್ಕಾರಗಳು ನಡೆಸುವ ಸಂಶೋಧನೆಗಳು ರೈತರನ್ನು ತಲುಪದೇ ಸಂಶೋಧನ ಕೇಂದ್ರಗಳಲ್ಲಿ ಕೊಳೆಯುತ್ತಿವೆ. ಇದಕ್ಕೆ ಆಳುವವರ ಜೊತೆಗೆ ವಿಜ್ಞಾನಿಗಳೂ, ರೈತರೂ ಕಾರಣರಾಗಿದ್ದಾರೆ. ನಮ್ಮ ರೈತರು ಸಂಶೋಧನ ಕೇಂದ್ರಗಳ ಕಡೆಗೆ, ಸಂಶೋಧಕರು ರೈತರ ಕಡೆಗೆ ಚಲಿಸುವುದೇ ಇಲ್ಲ. ಅವರುಗಳ ನಡುವೆ ಬಹುದೊಡ್ಡ ಕಂದಕಗಳೇ ಉಂಟಾಗಿವೆ. ಈ ಎರಡೂ ವಲಯಗಳು ತಮಗೆ ಪರಸ್ಪರ ಸಂಬಂಧವೇ ಇಲ್ಲವೇನೊ ಎನ್ನುವಂತೆ ವರ್ತಿಸುತ್ತಿವೆ. ಕರ್ವಾಲೋ ಕಾದಂಬರಿಯಲ್ಲಿ ಕೀಟತಜ್ಞ, ಸಸ್ಯ ವಿಜ್ಞಾನಿ ಕರ್ವಾಲೋರನ್ನು ಭತ್ತದ ಗದ್ದೆಗೆ ಬಿದ್ದಿರುವ ಕೀಟಗಳ ಬಗ್ಗೆ ವಿಚಾರಿಸಲು ಹೋದ ನಿರೂಪಕನಿಗೆ 'ನೀವೊಬ್ಬರೇ ನನ್ನನ್ನು ಬೇಟಿ ಮಾಡಿದ ಮೊದಲ ರೈತ' ಎನ್ನುವ ಕರ್ವಾಲೋ ಮಾತು, ಚಿದಂಬರ ರಹಸ್ಯದ ಪಾಟೀಲರು ಏಲಕ್ಕಿ ಸುಡುವ ಮೊದಲು ನಮ್ಮ ಮೂರ್ಖ ವಿಜ್ಞಾನಿಗಳನ್ನು ಸುಡಬೇಕು ಎನ್ನುವುದು, ಕರ್ವಾಲೋರನ್ನು ಕೃಷಿ, ಕೀಟ, ಸಸ್ಯಗಳಿಗೆ ಸಂಬಂಧಿಸಿದಂತೆ ಪರಿಚಯಿಸಿಕೊಳ್ಳದೇ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಪರಿಚಯ ಮಾಡಿಕೊಳ್ಳುವುದು, ಪಾಟೀಲರನ್ನು ಏಲಕ್ಕಿ ಬೆಳೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಭೇಟಿ ಮಾಡುವ ಬದಲು ಮಾಟ, ಮಂತ್ರ, ತಂತ್ರ, ಕಾಯಿಲೆಗಳಿಗೆ ಔಷಧಿ ನೀಡುವ ಮಂತ್ರವಾದಿಯಂತೆ ಭಾವಿಸುವುದು ಈ ಎಲ್ಲಾ ಪ್ರಸಂಗಗಳು ರೈತರ, ಸಂಶೋಧಕರ ಮತ್ತು ಸಂಶೋಧನೆಗಳ ನಡುವಿರುವ ಅಗಾಧ ಅಂತರವನ್ನೇ ಸೂಚಿಸುತ್ತವೆ. ಕರ್ವಾಲೋ ಕಾದಂಬರಿಯ ನಿರೂಪಕ ವಿಜ್ಞಾನಿ ಕರ್ವಾಲೋರನ್ನು ಕುರಿತು "ಬರ್ತೀನಿ ಸಾರ್. ನಿಮಗೆ ತೊಂದರೆ ಕೊಟ್ಟೆನೇನೋ..... ಎಂಬ ಮಾತಿಗೆ ಕರ್ವಾಲೋ......ಮೈಡಿಯರ್ ಯಂಗ್‌ಮ್ಯಾನ್

ಈ ಮಾತನ್ನು ನೀವು ಸೀರಿಯಸ್ಸಾಗಿ ಹೇಳಿಲ್ಲಾಂತ ತಿಳಿದಿದ್ದೀನಿ. ನನ್ನ ಕೆಲಸ ಇಲ್ಲಿ ನಿಮ್ಮಂಥೋರ ತೊಂದರೆ ತಾಪತ್ರಯಗಳನ್ನು ನೋಡಿಕೊಳ್ಳೋದು, ಕೈಲಾದ ಸಹಾಯ ಮಾಡೋದು. ಆದ್ದರಿಂದ ನನಗೆ ತೊಂದರೆ ಕೊಡುವುದು ನಿಮ್ಮ ಹಕ್ಕು" (ಕರ್ವಾಲೋ, ೨೦೦೯, ಪುಟ-೧೯ & ೨೦) ಈ ಮಾತುಗಳು ರೈತ ಮತ್ತು ಸಂಶೋಧನೆ ಹಾಗೂ ಸಂಶೋಧಕರ ನಡುವೆ ಇರಬೇಕಾದ ಸಂಬಂಧವನ್ನು ಸೂಚಿಸುತ್ತವೆ.

ಈ ಭ್ರಷ್ಟ ವ್ಯವಸ್ಥೆಯಿಂದ ಸರ್ಕಾರಿ ಯೋಜನೆಗಳು ಮತ್ತು ಅವರು ನೀಡುವ ಕೃಷಿ ಸಂಬಂಧಿ ಸಲಕರಣೆಗಳು ಹಾಗೂ ಸೌಲಭ್ಯಗಳ ಬಗ್ಗೆ ರೈತರಲ್ಲಿ ಒಂದು ಬಗೆಯ ಅಪನಂಬಿಕೆ, ಸಂಶಯ ಬೆಳೆದುಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಶಂಕ್ರಪ್ಪನು ಸಾಂದ್ರ ಬೇಸಾಯದ ಬೋರ್ಡನ್ನು ಗದ್ದೆಗಳಲ್ಲಿ ಚುಚ್ಚಲು ಬಂದಾಗ ಕಿರಗೂರಿನ ರೈತರು ಅದನ್ನು ಒಂದು ಪೀಡೆಯಂತೆ, ಶನಿಯಂತೆ ನೋಡುವುದು, ಕಿತ್ತು ಬಿಸಾಡುವುದನ್ನು ಗಮನಿಸಬಹುದು. ಮಾಯಾಲೋಕ ಕಾದಂಬರಿಯ ಮಾರುಕಟ್ಟೆಯಲ್ಲಿ ತರಕಾರಿಗಳ ಗುಣಮಟ್ಟದ ಬಗ್ಗೆ ಜಲೀಲ "ಏನ್ಮಾಡ್ತೀಯ! ರೈತರು ಗೌರ್ಮೆಂಟ್ ಗೊಬ್ರಾ ಹಾಕೋದಕ್ಕೆ ಶುರು ಮಾಡಿದ ಮೇಲೆ ತರ್ಕಾರಿ ಗುಣಾನೆ ತಳ್ಕಂಪಳಕ ಆಗೋಗಿದೆ. ಕಣ್ಣಿಗೆ ನೋಡೋಕೆ ಗಿಲೀಟಾಗಿರ್ತವೆ! ತಿಂದ್ರೆ ರುಚೀನೇ ಇರೊಲ್ಲ! ಹಿಂದೆ ಎಲ್ಲಾ ಒಂದೇ ಒಂದು ಎಸಳು ಕೊತ್ತಂಬರಿ ಸೊಪ್ಪು ಸಾಂಬರಿಗೆ ಹಾಕಿದ್ರೆ ಸಾಕಿತ್ತು. ಈಗ ಕಂತೆಕಂತೇನೇ ಒಯ್ದು ಹಾಕಿದ್ರೂ ವಾಸನೇನೇ ಇರೋಲ್ಲ. ಎನ್ಮಾಡ್ತೀಯ ಎಲ್ಲಾ ಗೌರ್ಮೆಂಟ್ ಗೊಬ್ರ" (ಮಯಾಲೋಕ, ೨೦೦೯, ಪುಟ-೩೧) ಎಂದು ಪಾತಿಮಾಳಿಗೆ ನೀಡುವ ಪ್ರತ್ಯುತ್ತರವನ್ನೂ ಕೂಡ ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಭ್ರಷ್ಟ ವ್ಯವಸ್ಥೆಯಿಂದ ಸರ್ಕಾರಿ ಸವಲತ್ತುಗಳು ಕಳಪೆಯಾಗುತ್ತಿರುವುದರ ಬಗ್ಗೆ, ಕೃಷಿ ಸಮಸ್ಯೆಗಳ ನಿವಾರಣೆಗೆ ರೈತರ, ಸಂಶೋಧಕರ ಮತ್ತು ಸಂಶೋಧನೆಗಳ ಹಾಗೂ ಇನ್ನಿತರೆ ಸರ್ಕಾರಿ ಯೋಜನೆಗಳು ಏಕೀಭವಿಸಿದ ಒಂದು ವ್ಯವಸ್ಥೆಯ ಅಗತ್ಯದ ಬಗ್ಗೆ ತೇಜಸ್ವಿ ಕಥನ ನಮ್ಮನ್ನು ಎಚ್ಚರಿಸುತ್ತದೆ.

ರೈತನಿಗೆ ಬ್ಯಾಂಕ್ ಸಾಲಗಳು, ಸರ್ಕಾರಿ ಯೋಜನೆಗಳು ಸಮರ್ಪಕ ರೀತಿಯಲ್ಲಿ ದೊರೆಯದಿರುವುದು ಒಂದುಕಡೆಯಾದರೆ, ಇನ್ನೊಂದು ಕಡೆ ಕಳಪೆ ಬಿತ್ತನೆ ಬೀಜ, ಬೆಲೆಗಳ ಏರಿಳಿತ, ಅವ್ಯವಸ್ಥಿತ ಮಾರುಕಟ್ಟೆ ವ್ಯವಸ್ಥೆ ಮುಂತಾದ ಸಮಸ್ಯೆಗಳ ಜೊತೆಗೆ ಅವನ ನೆಲವನ್ನು ಅವನದಾಗಿ ಮಾಡಿಕೊಳ್ಳಲು ಸಾಧ್ಯವಾಗದ ನಮ್ಮ ಕಂದಾಯ ವ್ಯವಸ್ಥೆಯ ಬಗ್ಗೆ ತೇಜಸ್ವಿ ಕಥನ ಅರಿವನ್ನು ಮೂಡಿಸುತ್ತದೆ. ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಹತ್ತಾರು ವರ್ಷಗಳು ಅಲೆದಾಡಿದರೂ ತನ್ನ ಭೂಮಿ ತನ್ನದಾಗಿಸಿಕೊಳ್ಳಲು ಸಾಧ್ಯವಾಗದ ಅಸಹಾಯಕತೆ ರೈತನನ್ನು ತೀವ್ರವಾಗಿ ಕಾಡಿವೆ. ಭೂಮಿ ಅವನದಾಗದಿದ್ದರೆ ಸರ್ಕಾರದ ಫಲಾನುಭವಿಯಾಗಲು ಸಾಧ್ಯವಾಗುವುದಿಲ್ಲ. ಬ್ಯಾಂಕ್ ಸಾಲಗಳು ದೊರೆಯುವುದಿಲ್ಲ. ಈ ಎಲ್ಲಾ ಕಾರಣಗಳಿಂದ ರೈತ ಲೇವಾದೇವಿದಾರರ

ಮೊರೆಹೋಗುವಂತಾಗುತ್ತದೆ. ಇದು ಅವನ ಮತ್ತಷ್ಟು ಸುಲಿಗೆಗೆ ಕಾರಣವಾಗಿದೆ. ಇವುಗಳ ಜೊತೆಗೆ ರೈತ ಕೂಲಿ ಕಾರ್ಮಿಕರ ಸೋಮಾರಿತನ, ಅವರ ವಂಚನೆಗಳು ಸಹಾ ರೈತನ ಬವಣೆಗಳು ಹೆಚ್ಚಲು ಕಾರಣವಾಗಿವೆ. ಸ್ವರೂಪ ಕಾದಂಬರಿಯಲ್ಲಿ ಪದವೀಧರನಾದ ಶ್ರೀನಿವಾಸ ತನ್ನ ಚಿಕ್ಕಪ್ಪ ತೀರಿಹೋದ ಮೇಲೆ ವ್ಯವಸಾಯ ಮಾಡಲು ಹಳ್ಳಿಗೆ ಬಂದಾಗ ಅವನ ಜಮೀನನ್ನು ಊರಿನ ರೈತರು ಆಕ್ರಮಿಸಿಕೊಂಡು ಅವನಿಗೆ ನಾನಾ ತೊಂದರೆಗಳನ್ನು ನೀಡಲು ಶುರು ಮಾಡುತ್ತಾರೆ. ಜೊತೆಗೆ ಅವನು ತನ್ನ ಜಮೀನನ್ನು ಸರ್ವೆ ಮಾಡಿಸಿ ವಶಪಡಿಸಿಕೊಳ್ಳಲು ಅಲ್ಲಿನ ಕಂದಾಯ ಇಲಾಖೆಗೆ ಅಲೆದಾಡುವ, ಅಲ್ಲಿನ ಅಧಿಕಾರಿ/ನೌಕರರಿಗೆ ಲಂಚ ನೀಡುವ ಕೆಲಸವನ್ನೂ ಮಾಡಬೇಕಾಗುತ್ತದೆ.

"ಈ ಕೋರ್ಟು ಕಛೇರಿಗಳಿಗೆ ತಿರುಗಾಡಿ ನೂರೆಂಟು ಕೇಸುಗಳನ್ನು ಮಾಡಿಕೊಳ್ಳುವ ಹೇಸಿಗೆ ಲೆಕ್ಕಾಚಾರ ಯಾರಿಗೆ ಬೇಕು?.... ಎಲ್ಲಕ್ಕಿಂತ ಮಿಗಿಲಾಗಿ ಕೇವಲ ಭೂಮಿಗಾಗಿ ಅಗೌರವಯುತವಾದ ನಡವಳಿಕೆಗೆ ಅಸಭ್ಯವಾದ ವ್ಯವಹಾರಗಳು ನನಗೆ ಹಿಡಿಸದು.... ನನ್ನ ಆಸ್ತಿ ನಾನು ಸ್ವಾಧೀನ ಪಡಿಸಿಕೊಳ್ಳುವ ಕಾಲಕ್ಕೆ ಸಣ್ಣ ಸಣ್ಣ ತಕರಾರುಗಳು ಕೆಲವು ಬಂದವು.... ನಾನು ಕೋರ್ಟು ಕಛೇರಿಯ ಕಾಗದ ಪತ್ರಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಬರಲಿಲ್ಲವೇ? ಆರ್ಥಿಕ ದಾಸ್ಯದಲ್ಲಿ ಆತ್ಮ ಸ್ವಾತಂತ್ರ್ಯದ ಸಿದ್ಧಿ ಸಾಧ್ಯವೇ ಇಲ್ಲ. ದುಡ್ಡು, ದುಡ್ಡಿನಿಂದ ಬರುವ ಅಧಿಕಾರ, ಅದು ಬೇಕಿನಿಸಿದಾಗ ಕೊಡುವ ಸುಖ ಸಂತೋಷ ಇವನ್ನೆಲ್ಲಾ ತ್ಯಾಜ್ಯ ಎಂದು ನೀನು ಹೇಳಿದರೆ ನಿನ್ನ ಪಂಚೇಂದ್ರಿಯಗಳಲ್ಲೇ ಏನೋ ಒಂದು ಊನವಿರಬೇಕು.... ಶೋಷಣೆ ಕೇವಲ ಬಂಡವಾಳಗಾರನಿಗೆ ಸೀಮಿತವಲ್ಲ. ಇಂಬಳಗಳನ್ನು ನೋಡಿದ್ದೀಯ! ಮಳೆಗಾಲಕ್ಕೆ ಬಂದಿದ್ದರೆ ಈ ಹೊತ್ತಿಗೆ ನಿನ್ನ ಬಟ್ಟೆಗಳೆಲ್ಲಾ ರಕ್ತವಾಗಿರುತ್ತಿದ್ದವು. ಸುಮ್ಮನೆ ಸದ್ದೇ ಇಲ್ಲದೆ ಕಾಲನ್ನ ತಬ್ಬಿ, ನೋವೇ ಇಲ್ಲದಂತೆ ಚರ್ಮ ಕೊರೆದು, ಗೊತ್ತೇ ಆಗದಂತೆ ರಕ್ತ ಕುಡಿದು ಸಣ್ಣಗೆ ದಾರದಂತಿದ್ದುವು ಗುಂಡಗೆ ಗೋಲಿಯಂತಾಗಿ ಬಿದ್ದು ಹೋಗುತ್ತವೆ. ಈಗೆಲ್ಲಿ ನೆಲದಲ್ಲಿ ಹುದುಗಿರುತ್ತವೋ! ಒಂದೇ ಒಂದು ಮಳೆ ಬಿದ್ದರೆ ಸಾಕು ಓಡಾಡುವ ದಾರಿಯೆಲ್ಲಾ ತಲೆ ಎತ್ತಿಕೊಂಡು ಕಾಯುತ್ತಿರುತ್ತವೆ. ಏಕೆ ಹೇಳಿದೆನೆಂದರೆ ನಾನು ಹಳ್ಳಿಗರನ್ನು ಶೋಷಿಸಿ ದೊಡ್ಡವನಾದನೆನ್ನುವುದು ಕಾಣುವ ವಿಷಯ. ಆದರೆ ದಿನಾ ಕೆಲಸ ಮಾಡಿದ್ದರ ಮೇಲೆ ನಾಲ್ಕಾಣೆ ಹೆಚ್ಚಿಗೆ ಕಿತ್ತು, ಸಾಲಾ ಮಾಡಿ ಸಂತೆಗೆ ಹೋಗಿ ಕಜ್ಜಿ ತುರಿಸುತ್ತಾ ಕಾಲ ಕಳೆದು ಗದ್ದೆಯನ್ನೆಲ್ಲಾ ಹಾಳುಮಾಡಿ ನಮ್ಮ ಚಿಕ್ಕಪ್ಪನನ್ನು ಶೋಷಿತರೆ ಶೋಷಿಸಿದ್ದು ಬೇರೆಥರದ ಶೋಷಣೆ. ಸೋಷಲಿಸಂಮ್ಮಿಗೆ ಸಿಕ್ಕುವುದು ದುಡಿಸಿ ಉತ್ಪಾದನೆ ಮಾಡಿದವನ ಶೋಷಣೆ. ಇನ್ನೊಂದು ಅನ್ಯತರದ್ದು ಅದರ ಹಿಡಿತಕ್ಕೆ ಸಿಗುವುದಿಲ್ಲ. ನನಗೆ ನಮ್ಮ ಗದ್ದೆಯ ಬಾಂದುಗಳನ್ನು ಪತ್ತೆ ಹಚ್ಚಬೇಕಾದರೆ ನೂರಾರು ರೂಪಾಯಿ ಖರ್ಚಾಯಿತು." (ಹುಲಿಯೂರಿನ ಸರಹದ್ದು ಕಥಾ

ಸಂಕಲನ, ೨೦೦೯, ಪುಟ-೫೭ & ೫೮) ಹೀಗೆ ರೈತನ ಬವಣೆಗಳಿಗೆ ತನ್ನ ಭೂಮಿಯನ್ನು ತನ್ನದನ್ನಾಗಿಸಿಕೊಳ್ಳುವಲ್ಲಿ ಎದುರಾಗುವ ಸರ್ಕಾರಿ ಕಛೇರಿಗಳಲ್ಲಿನ ಭ್ರಷ್ಟಾಚಾರ, ಕೋರ್ಟುಗಳಿಗೆ ಅಲೆದಾಟ, ನ್ಯಾಯಾಂಗದ ವಿಳಂಬ ಧೋರಣೆಗಳು, ಅಲ್ಲಿನ ನಿದಾನಗತಿಯ ತೀರ್ಪುಗಳು ಸಹಾ ಕಾರಣಗಳಾಗಿವೆ. ಇವುಗಳ ಜೊತೆಗೆ ಕೃಷಿ ಕೂಲಿಕಾರ್ಮಿಕರ ಕೊರತೆ, ಅವರ ಸೋಮಾರಿತನ, ನಿರ್ಲಕ್ಷ್ಯ ಹೀಗೆ ರೈತನ ಸಮಸ್ಯೆಗಳಿಗಿರುವ ಹತ್ತು ಹಲವು ನೆಲೆಗಳ ಕಾರಣಗಳನ್ನು ತೇಜಸ್ವಿ ಕಥನ ಓದುಗರ ಮುಂದಿಡುತ್ತದೆ.

ಇಂದು ಕೃಷಿಕರು ತಮ್ಮ ಕಸುಬನ್ನು ತೊರೆಯುವ ನಿರ್ಧಾರ ಮಾಡುತ್ತಿದ್ದಾರೆ. ತಮ್ಮ ನಂತರದ ಪೀಳಿಗೆಯು ಕೃಷಿಯನ್ನು ಅವಲಂಬಿಸದಂತೆ ಮಾಡುವ ನಿಟ್ಟಿನಲ್ಲಿ ಅವರು ತಮ್ಮ ಮಕ್ಕಳಿಗೆ ತಿಳಿಹೇಳುತ್ತಿದ್ದಾರೆ. ಲಾಭವಿಲ್ಲದ, ಬದುಕಿನ ಕನಿಷ್ಟ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದ ದುಸ್ಥಿತಿಯಿಂದಾಗಿ ವ್ಯವಸಾಯಕ್ಕಿಂತ ನಗರಗಳಲ್ಲಿ ವಾಚ್‌ಮ್ಯಾನ್, ಕ್ಲಬ್ಬುಗಳಲ್ಲಿ ಸರ್ವರ್‌ಗಳು ಮುಂತಾದ ಕೆಲಸಗಳಲ್ಲಿ ತೊಡಗುವುದೇ ಲಾಭದಾಯಕ ಎಂದು ರೈತರು ಭಾವಿಸಿದ್ದಾರೆ.ಪರಿಸರದ ಕಥೆಗಳು ಸಂಕಲನದ ಕಾಳಪ್ಪನ ಕೋಬ್ರ ಕಥೆಯಲ್ಲಿ ಬೊಂಬಾಯಿಯಲ್ಲಿ ಟೆನ್ನಿಸ್ ಕ್ಲಬ್ಬಿನಲ್ಲಿ ಬಾಲ್ ಬಾಯ್ ಆಗಿರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಬೈರಪ್ಪನ ಮಗ ಕಾಳಪ್ಪನನ್ನು "ಇಲ್ಲಿ ನಿಮ್ಮ ತಂದೆಗೆ ಸ್ವಂತ ಗದ್ದೆಗಳಿರಬೇಕಾದರೆ ಅದನ್ನು ನೋಡಿಕೊಂಡಿರುವುದನ್ನು ಬಿಟ್ಟು ಇದ್ಯಾವ ಮಹಾ ಕೆಲಸ ಎಂದು ಬಾಲ್‌ಬಾಯ್ ಕೆಲಸಕ್ಕೆ ಹೋಗಿದ್ದೀಯ" (ಪರಿಸರದ ಕಥೆ ಕಥಾ ಸಂಕಲನ, ೨೦೦೯, ಪುಟ-೮೮) ಎಂದು ತನ್ನ ವೃತ್ತಿಯನ್ನು ಕೀಳಾಗಿ ಕಾಣುವ ನಿರೂಪಕನಿಗೆ "ಕ್ಲಬ್ಬಿನ ಜವಾನಿಕೆ ಅಂತ ನೀವು ಉದಾಸ್ನದಲ್ಲಿ ನೋಡಬೇಡಿ ಸಾರ್! ಎಂತೆಂಥ ದೊಡ್ಡ ದೊಡ್ಡ ಆಫೀಸರುಗಳೆಲ್ಲ ಅಲ್ಲಿ ಆಟಕ್ಕೆ ಬರ್ತಾರೆ. ಪರಿಚಯ ಆಗ್ತಾರೆ ಗೊತ್ತಾ. ಚೀಪ್ ಮಿನಿಸ್ಟರು, ಡೆಪ್ಟಿಕಮೀಷನರು ಎಲ್ಲಾ ಬಂದು ಆಟ ಆಡ್ತಾರೆ. ಬಾಲು ಎತ್ತಿಕೊಟ್ಟಿದ್ದಕ್ಕೆ ತಗಾ ಹಿಡಿ ಅಂತ ಎಷ್ಟೋ ಸಾರಿ ನನಗೆ ಇನಾಮು ಕೊಟ್ಟಿದ್ದಾರೆ ಸಾರ್! ಇಲ್ಲಿ ಗದ್ದೆ ಮಾಡಿ ಮೈಕೈ ಎಲ್ಲಾ ಕೆಸರು ಮಾಡಿಕೊಳ್ಳೋದಷ್ಟೆ. ಬೊಂಬಾಯಿಯಲ್ಲಿ ಬೀಡ ಮಾಡೋವನ ಇಷ್ಟಗಲ ಹರಿವಾಣದಲ್ಲಿ ಬರೋ ಉತ್ಪತ್ತಿ ನಮ್ಮಪ್ಪನ ನಾಲ್ಕು ಎಕರೆ ಗದ್ದೆಯಲ್ಲಿ ಬರೋದಿಲ್ಲ. ಇಲ್ಲಿ ವರ್ಷ ಎಲ್ಲಾ ದುಡಿದರೂ ಅಲ್ಲಿ ನನಗೆ ಒಂದು ತಿಂಗಳಿಗೆ ಸಿಗೋ ದುಡ್ಡು ಸಿಗೋದಿಲ್ಲ..... ನಮ್ಮಪ್ಪ ಗದ್ದೇಲಿ ದುಡಿದು ನಮ್ಮ ಅಮ್ಮನಿಗೆ ಎಷ್ಟು ಸೀರೆ ತಂದುಕೊಟ್ಟಿದ್ದಾನೆ ಕೇಳಿ. ನಾನು ಬರ್‍ತ ಭಕ್ಷೀಸ್ ದುಡ್ಡಿನಲ್ಲಿ ಸೀರೆ ತಂದುಕೊಟ್ಟರೆ ಉಂಟು. ಇಲ್ಲದಿದ್ರೆ ಇಲ್ಲ. ಯಾಕೆ ಬೆಳೀಬೇಕು ಈ ಬ್ಲಡೀ ಭತ್ತ." (ಪರಿಸರದ ಕಥೆ ಕಥಾ ಸಂಕಲನ, ೨೦೦೯, ಪುಟ-೮೮ & ೮೯) ಎಂದು ಕಾಳಪ್ಪ ಭಾರತದ ರೈತರ ಬದುಕಿನ ದಾರುಣ ಸತ್ಯವನ್ನು ವಿವರಿಸುತ್ತಾನೆ. ಇಂದು ವ್ಯವಸಾಯ ಮಾಡುವುದೆಂದರೆ ತನ್ನ ಆಸೆ ಆಕಾಂಕ್ಷೆಗಳನ್ನು

ಒಟ್ಟಾರೆ ಬದುಕನ್ನು ತ್ಯಾಗ ಮಾಡುವುದೇ ಆಗಿದೆ. ಹಾಗಾಗಿ ಭಾರತೀಯ ಕೃಷಿಯೆಂದರೆ ಲಾಭದ ಮರೀಚಿಕೆಯೇ ಆಗಿದೆ.

ಕರ್ವಾಲೋ ಕಾದಂಬರಿಯ ನಿರೂಪಕ ತುಂಬಾ ಆಸೆಪಟ್ಟು ನಗರದಿಂದ ಹಳ್ಳಿಗೆ ಬಂದು ಕಾಡುಕೊಂಡು ವ್ಯವಸಾಯದಲ್ಲಿ ತೊಡಗಿದ್ದವನು. ಕೃಷಿ ಬದುಕಿನ ಅವ್ಯವಸ್ಥೆಯಿಂದ ರೋಸಿಹೋಗಿ ತೋಟವನ್ನು ಮಾರುವ ನಿರ್ಧಾರಕ್ಕೆ ಬರುತ್ತಾನೆ. "ನಾನು ತೋಟವನ್ನು ಮಾರಿ ಬೇರೇನಾದರೂ ಮಾಡಬೇಕೆಂದು ನಿರ್ಧರಿಸಿದ್ದೆ. ಮೊದಲನೆಯದಾಗಿ ವ್ಯವಸಾಯದಿಂದ ಲಾಭ ಬರುವುದೆಂಬ ನಂಬಿಕೆ ನನ್ನೊಳಗೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಕಟ್ಟುತ್ತಾ ಹೆಚ್ಚೂ ಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರೂ ಪರಿವರ್ತಿತರಾಗಿದ್ದೆವು. ಹಾಕಿದ ಲೆಕ್ಕಾಚಾರ ಒಂದೂ ಗುರಿ ತಲುಪುತ್ತಲೇ ಇರಲಿಲ್ಲ. ಅಕಸ್ಮಾತ್ ಕೊಂಚ ಕರಾರುವಕ್ಕಾಗಿ ಬೆಳೆ ಬಂದರೂ ಆ ವೇಳೆಗಾಗಲೇ ಹಣದುಬ್ಬರ, ಏರಿದ ಸಾಮಾನಿನ ಬೆಲೆಗಳು, ವಿಷದಂತೆ ಏರುತ್ತಿದ್ದ ಬ್ಯಾಂಕ್ ಬಡ್ಡಿ ದರ, ಅದನ್ನು ಕಬಳಿಸಿಬಿಡುತ್ತಿದ್ದವು. ಹೀಗಾಗಿ ರೈತನ ಬದುಕು ಸದಾ ಮುಂದೆ ಸಿಕ್ಕುವ ಲಾಭದ ಮರೀಚಿಕೆಯ ಹಿಂದೆ ಆರ್ಥಿಕ ಬಿಕ್ಕಟ್ಟಿನ ಮರಳುಗಾಡಿನಲ್ಲಿ ಸಾಗುತ್ತಿದೆ." (ಕರ್ವಾಲೋ, ೨೦೦೯, ಪುಟ-೨೪ & ೨೫) ಹೀಗೆ ರೈತ ಸದಾ ಸಂಕಷ್ಟಗಳ ನಡುವೇ ಬದುಕುತ್ತಾನೆ.

ರೈತನ ಸಂಕಟಗಳಿಗೆ ಮಾನವ ನಿರ್ಮಿತ ಸಮಸ್ಯೆಗಳ ಜೊತೆಗೆ ಪ್ರಕೃತಿಯ ಏರಿಳಿತಗಳೂ ಸಹಾ ಹಲವು ಸಮಸ್ಯೆಗಳನ್ನು ತಂದೊಡ್ಡುತ್ತವೆ. "ಸಾಧಾರಣವಾಗಿ ಏಪ್ರಿಲ್‌ನಲ್ಲಿ ಬರುವ ಕಾಫಿ ಹೂವಿನ ಮಳೆ ಬರಲೇ ಇಲ್ಲ. ರೇವತಿ, ರೋಹಿಣಿ, ಭರಣಿ ಯಾವ ಮಳೆಯೂ ಇಲ್ಲ ಕಾಫಿ ಬೆಳೆಯುವವರಿಗೆ ಇದೊಂದು ಬಹು ದೊಡ್ಡ ಸಂಕಟ. ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಅವರ ತಲೆಯ ಮೇಲೆ ಈ ತೂಗುವ ಕತ್ತಿ ನೇತಾಡುತ್ತಲೆ ಇರುತ್ತದೆ. ನೀರಿದ್ದ ದೊಡ್ಡ ತೋಟಗಳವರು ನೀರು ಸಿಂಪರಣೆ ಮಾಡಿ ಸ್ವಲ್ಪವಾದರೂ ಫಸಲನ್ನು ದಕ್ಕಿಸಿಕೊಳ್ಳುತ್ತಾರೆ. ಸಣ್ಣಪುಟ್ಟವರು ಮಾತ್ರ ಹೂವಿನ ಮಳೆ ಸರಿಯಾಗಿ ಬರದಿದ್ದರೆ ಆ ವರ್ಷ ಅವರ ಬಾಯಿಗೆ ಮಣ್ಣೇ. ಆದರೆ ಈ ವರ್ಷ ಹಾಗಲ್ಲ ಮೂರು ವರ್ಷದ ಬರಗಾಲ ಸಣ್ಣವರು, ಪುಟ್ಟವರು, ದೊಡ್ಡವರು, ಕಂಪನಿಯವರು ಎಲ್ಲರಿಗೂ ಸೇರಿಸಿ ಒಟ್ಟಿಗೆ ಬಾಯಿಗೆ ಮಣ್ಣು ಹಾಕಿತ್ತು." (ಮಯಾಲೋಕ, ೨೦೦೯, ಪುಟ-೨೦೫) ಇದಕ್ಕೆ ಮನುಷ್ಯನ ದುರಾಸೆಗಳಿಗೆ ಬಲಿಯಾಗಿರುವ ಕಾಡುಗಳು, ಅಂತರ್ಜಲ, ಹೆಚ್ಚುತ್ತಿರುವ ಜಲಮಾಲಿನ್ಯ, ಬೆಟ್ಟಗುಡ್ಡಗಳನ್ನೇ ಇಲ್ಲವಾಗಿಸುತ್ತಿರುವ ಗಣಿಗಾರಿಕೆಗಳು ರೈತರ ಸಂಕಟಗಳಿಗೆ ಇನ್ನಷ್ಟು ಸಂಕಟಗಳನ್ನು ಸೇರಿಸುತ್ತಿವೆ. ಅಲ್ಲದೆ ಎಸ್.ಇ.ಜೆಡ್‌ಗಳ ಉದ್ದಿಮೆಗಳಿಗಾಗಿ, ಸರ್ಕಾರಿ ಯೋಜಿತ ರಸ್ತೆಗಳ ಹಾಗೂ ವಿಮಾನ ನಿಲ್ದಾಣಗಳ ನಿರ್ಮಾಣ ಮುಂತಾದ ಚಟುವಟಿಕೆಗಳಿಗಾಗಿ ರೈತರ ಭೂಮಿಯನ್ನು

ಅವ್ಯಾಹತವಾಗಿ ವಠಪಡಿಸಿಕೊಳ್ಳುತ್ತಿರುವಿಕೆಯೂ ರೈತರ ಬವಣೆಗಳು ಹೆಚ್ಚಲು ಕಾರಣಗಳಾಗಿವೆ. ಇವೆಲ್ಲವನ್ನೂ ತೇಜಸ್ವಿ ಕಥನವು ಬೇರೆ ಬೇರೆ ಪ್ರಸಂಗ ಮತ್ತು ದೃಷ್ಟಾಂತಗಳ ಮೂಲಕ ಓದುಗರೆದುರು ಬಿಚ್ಚಿಡುತ್ತಾ ಹೋಗುತ್ತದೆ.

ಹೀಗೆ ರೈತನಿಗೆ ಅತಿವೃಷ್ಟಿ, ಅನಾವೃಷ್ಟಿ, ಕ್ರಿಮಿಕೀಟಗಳು, ಕಾಡು ಪ್ರಾಣಿಗಳು ಮುಂತಾದವುಗಳಿಂದ ಒದಗಬಹುದಾದ ಪ್ರಾಕೃತಿಕ ಸಮಸ್ಯೆಗಳು ಒಂದು ಕಡೆಯಾದರೆ, ಭ್ರಷ್ಟಾಚಾರ, ಅಸಮರ್ಪಕ ವಿದ್ಯುತ್, ಕಳಪೆ ಬಿತ್ತನೆಬೀಜ, ರಸಗೊಬ್ಬರ, ಅವ್ಯವಸ್ಥಿತ ಮಾರುಕಟ್ಟೆ, ದಲ್ಲಾಳಿಗಳ ಕಾಟ, ಕೃಷಿ ಕಾರ್ಮಿಕರ ಅಭಾವ, ಬೆಲೆಗಳ ವೈಪರಿತ್ಯ ಮುಂತಾದ ಸಮಸ್ಯೆಗಳು ಮತ್ತೊಂದು ಕಡೆ ರೈತರನ್ನು ನಿರಂತರವಾಗಿ ಕಾಡುತ್ತಿವೆ. ಕರ್ವಾಲೋ ಕಾದಂಬರಿಯಲ್ಲಿ ನಿರೂಪಕ ಕೃಷಿಯನ್ನು ತೊರೆಯಲು ನಿರ್ಧರಿಸುವುದು ಇವೇ ಕಾರಣಗಳಿಗಾಗಿ. ನಿಗೂಢ ಮನುಷ್ಯರು ಕಾದಂಬರಿಯಲ್ಲಿ ನಗರ ಬದುಕಿನಿಂದ ಬೇಸತ್ತು ಹಳ್ಳಿಯಲ್ಲಿ ಜಮೀನು ಕೊಂಡು ವ್ಯವಸಾಯ ಮಾಡಲು ಬಂದ ಜಗನ್ನಾಥ ರೈತ ಗೋಪಾಲಯ್ಯನ ಬವಣೆಗಳು, ಅಲ್ಲಿ ಕೂಲಿಕಾರ್ಮಿಕರಾದ ಮರಸರ, ಕಾಂಪ್ರ, ಕುಳುಪ, ಲೋರಿ ಮುಂತಾದವರ ತಕರಾರುಗಳು, ಅವರ ಸೋಮಾರಿತನ ಮತ್ತು ಅಲ್ಲಿನ ಸುಲಿಗೆಕೋರತನ; ಆ ಜಡಿಮಳೆ, ಹದಗೆಟ್ಟ ರಸ್ತೆಗಳು ಮುಂತಾದವನ್ನು ಗಮನಿಸಿ ರೈತನಾಗುವ ಆಸೆಯನ್ನೆ ತೊರೆಯುತ್ತಾನೆ. ರೈತನ ಬದುಕೆಂದರೆ ಬವಣೆಗಳನ್ನು ಅನುಭವಿಸುವುದೇ ವಿನಹ ಸಂತೋಷಪಡುವ ಯಾವ ಆಶಾಭಾವನೆಯೂ ಅವನಿಗಿಲ್ಲ. ಈ ಎಲ್ಲವೂ ರೈತರು ಕೃಷಿಯ ಬಗ್ಗೆ ಅನಾದರ ಹೊಂದಲು ಕಾರಣಗಳಾಗಿವೆ ಎಂಬುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಹಾಗೆಂದು ತೇಜಸ್ವಿಯವರು ರೈತರನ್ನು ದೇವರುಗಳು, ಮುಗ್ದರು, ಅಮಾಯಕರು, ಎಂದೇನೂ ಚಿತ್ರಿಸುವುದಿಲ್ಲ. "ಇವರ ತೊಂದರೆಗಳಿಗೆ ಇಡೀ ಸರ್ಕಾರ, ಸಮಾಜ, ಎಲ್ಲ ಗಮನ ಕೊಡಬೇಕು! ಸಾಲ ಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕು, ಉಚಿತ ಕರಂಟ್ ಕೊಡಬೇಕು, ಗೊಬ್ಬರಕ್ಕೆ ಸಬ್ಸಿಡಿ ಕೊಡಬೇಕು, ಫಸಲಿಗೆ ಒಳ್ಳೆ ರೇಟು ಕೊಡಬೇಕು, ಮೀಸಲಾತಿಯಲ್ಲಿ ಕೆಲಸ ಕೊಡಬೇಕು, ಉಚಿತ ವಿದ್ಯಾಭ್ಯಾಸ ನೀಡಬೇಕು, ಅದಕ್ಕಾಗಿ ಹಾಸ್ಟೆಲ್ ಕೂಡ ಸರ್ಕಾರಿ ಖರ್ಚಲ್ಲೆ ನಡೆಸಬೇಕು! ಎಲ್ಲಾ ಸರಿ. ನಾನು ಯಾವುದಕ್ಕೂ ಬೇಡ ಅನ್ನಲ್ಲ: ಆದರೆ ನೀವು ಯಾರ ಕಷ್ಟಗಳಿಗೆ ಆಗಿದ್ದೀರಿ ಬೆರಳು ಮಡಿಚಿ ಎಂದರೆ ಯಾವುದೂ ಇಲ್ಲ" (ಮಯಾಲೋಕ, ೨೦೦೯, ಪುಟ-೧೪೪) ಮಾಯಾಲೋಕದಲ್ಲಿ ಪ್ರಕಾಶ ಎಂಬ ಪತ್ರಿಕಾ ವರದಿಗಾರ ಸುರೇಶಗೌಡ ಎಂಬ ರೈತನಿಗೆ ಕೇಳುವ ಮಾತುಗಳಿವು. ಅಂದರೆ ರೈತರ ಬಗ್ಗೆ ತೇಜಸ್ವಿ ಕಥನ ಎಲ್ಲವನ್ನೂ ಸರಿ ಎಂದೇನೂ ಹೇಳುವುದಿಲ್ಲ. ರೈತರ ಒಳಜಗಳ, ಜಾತೀಯತೆ, ಮೌಢ್ಯ, ಸ್ವಾರ್ಥ, ಸ್ವಜನಪಕ್ಷಪಾತ, ಸೋಮಾರಿತನ, ತಮ್ಮ ಕಷ್ಟಗಳನ್ನು ಸರ್ಕಾರ ಅಥವಾ

ಯಾರಾದರೂ ಇತರರು ಬಂದು ನಿವಾರಿಸಬೇಕು ಎಂದು ಕಾಯುವ ಪರಾವಲಂಬಿ ಮನೋಭಾವ ಇವುಗಳನ್ನೂ ಚಿತ್ರಿಸಿದೆ. ತೇಜಸ್ವಿ ಕಥನವು ರೈತರ ಬಗೆಗೆ ಏಕಮುಖ ಆಗಿಲ್ಲ. ರೈತರಲ್ಲಿ ಇರಬಹುದಾದ ದೌರ್ಬಲ್ಯ ಮತ್ತು ಇಬ್ಬಂದಿತನವನ್ನು ಕೂಡ ತೀಕ್ಷ್ಣ ವಿಮರ್ಶೆಗೆ ಒಳಪಡಿಸಿದೆ. ಸರ್ಕಾರವಾಗಲಿ, ಸರ್ಕಾರದ ಯೋಜನೆಗಳನ್ನು ಜಾರಿ ಮಾಡುವ ಕಾರ್ಯಾಂಗವಾಗಲಿ ಇವು ಯಾವುವೂ ದೌರ್ಬಲ್ಯಗಳೇ ಇಲ್ಲದ ವರ್ಗಗಳಲ್ಲ. ಅಲ್ಲಿ ಇರುವವರೂ ಮನುಷ್ಯರೇ, ಅವರಲ್ಲಿ ಆತ್ಮ ವಿಮರ್ಶೆಯ ಪ್ರಜ್ಞೆ ಇಲ್ಲದಿರುವುದನ್ನು ಸ್ವಾರ್ಥ ಮತ್ತು ಅಧಿಕಾರಕ್ಕೆ ಅಂಟಿಕೊಳ್ಳುವ ಪಿಡುಗು ಇರುವುದನ್ನೂ ತೇಜಸ್ವಿ ಕಥನ ಗುರುತಿಸುತ್ತದೆ. ಆ ಮೂಲಕ ಒಟ್ಟು ವ್ಯವಸ್ಥೆಯ ಒಳಗೆ ಇರುವ ಮಿತಿ ಮತ್ತು ಸಾಧ್ಯತೆಗಳನ್ನು ತೇಜಸ್ವಿ ಕಥನ ಚಿತ್ರಿಸುತ್ತದೆ. ಇದರಿಂದಾಗಿ ತೇಜಸ್ವಿಯವರ ಕಥನ ಏಕಮುಖವಾಗಿ ರೈತರ ವಕಾಲತ್ತು ವಹಿಸುವುದರಿಂದ ಕೂಡ ಪಾರಾದಂತೆ ಆಗಿದೆ.

ರೈತರ ಕುರಿತ ಚಿತ್ರಣಗಳು ಇಲ್ಲಿ ಕೇವಲ ರೈತರ ಕುರಿತ ಚಿತ್ರಣಗಳಲ್ಲ; ಇಡೀ ಸ್ಥಳೀಯ ಭೂಗೋಳ ಮತ್ತು ಜಾಗತಿಕ ಭೂಗೋಳಗಳ ಸಂಕೀರ್ಣತೆಯನ್ನು ಮನಗಾಣಿಸುವ ಚಿತ್ರಣಗಳಾಗಿವೆ. ಈ ಹಿನ್ನೆಲೆಯಲ್ಲಿ ಯಾವುದೇ ಒಂದು ರಚನೆ, ಸಾಂಸ್ಥಿಕತೆ ಅಥವಾ ವ್ಯವಸ್ಥೆಗೆ ಒಂದು ಮುಖ ಮಾತ್ರ ಇರುವುದಿಲ್ಲ; ಹತ್ತು ಹಲವು ಮುಖಗಳಿರುತ್ತವೆ. ಅಲ್ಲಿನ ಬಿಕ್ಕಟ್ಟುಗಳಿಗೆ ಹತ್ತು ಹಲವು ಕಾರಣಗಳೂ ಹಾಗೆಯೇ ಪರಿಹಾರಗಳಿಗೆ ಹತ್ತು ಹಲವು ಆಯಾಮಗಳೂ ಇರುತ್ತವೆ ಮತ್ತು ಅವು ಎಲ್ಲವೂ ಸದಾ ಚಲನಶೀಲವೂ ಆಗಿರುತ್ತವೆ ಎಂಬ ದರ್ಶನವನ್ನು ತೇಜಸ್ವಿ ಕಥನ ಮಂಡಿಸುತ್ತದೆ.

ಅಧ್ಯಾಯ -೫

ತೇಜಸ್ವಿ ಕಥನದಲ್ಲಿ ಪರಿಸರ ಕಾಳಜಿ ಕುರಿತ ನಿರೂಪಣೆಗಳು

ಅಧ್ಯಾಯ –೫

ತೇಜಸ್ವಿ ಕಥನದಲ್ಲಿ ಪರಿಸರ ಕಾಳಜಿ ಕುರಿತ ನಿರೂಪಣೆಗಳು

ಪೀಠಿಕೆ.

ಹಿಂದಿನ ಅಧ್ಯಾಯದಲ್ಲಿ ರೈತಪರ ಕಾಳಜಿಗಳ ಬಗೆಗೆ ಚರ್ಚೆ ನಡೆಸಿರುವುದಕ್ಕೂ ಸದರಿ ಅಧ್ಯಾಯದಲ್ಲಿ ಪರಿಸರ ಕಾಳಜಿಯ ಬಗ್ಗೆ ಚರ್ಚೆ ನಡೆಸಲಿರುವುದಕ್ಕೂ ಒಂದು ಅನ್ಯೋನ್ಯ ಅಂತಃಸಂಬಂಧ ಇದೆ. ಪರಿಸರದ ಬಗೆಗೆ ಇಂದು ವಿಶ್ವದಾದ್ಯಂತ ಅನೇಕ ವಿಧದ ಚರ್ಚೆಗಳು, ಸಂವಾದಗಳು ನಡೆಯುತ್ತಿವೆ. ನಾಶವಾಗುತ್ತಿರುವ ಕಾಡು, ತೀವ್ರಗತಿಯಲ್ಲಿ ಕರಗುತ್ತಿರುವ ಹಿಮಶಿಖರಗಳು, ಮುಳುಗಡೆಯಾಗುತ್ತಿರುವ ಭೂಮಿ, ಅಪಾಯಕಾರಿಯಾಗಿ ಹೆಚ್ಚುತ್ತಿರುವ ವಾತಾವರಣದ ಉಷ್ಣತೆಯ ಪ್ರಮಾಣ, ಬರಿದಾಗುತ್ತಿರುವ ಅಂತರ್ಜಲ, ಪ್ರವಾಹಗಳು, ಗಣಿಗಾರಿಕೆ, ಭೀತಿ ಉಂಟುಮಾಡುತ್ತಿರುವ ಸುನಾಮಿಗಳು–ಇವು ಇಂದು ಬಹು ಚರ್ಚಿತ ಸಂಗತಿಗಳಾಗಿವೆ. ಪರಿಸರ ಸಮತೋಲನ ಎನ್ನುವುದು ಸಹಜವಾಗಿ ನಡೆಯಬೇಕಾದುದು. ಆದರೆ ತೀವ್ರಗತಿಯಲ್ಲಿ ಆಗುತ್ತಿರುವ ಪರಿಸರದ ಅಸಮತೋಲನದಿಂದಾಗಿ, ಆಳುವ ವರ್ಗಗಳೇ ದಲ್ಲಾಳಿಗಳಂತೆ ಮುಂದೆ ನಿಂತು ಪರಿಸರನಾಶ ಕೃತ್ಯದಲ್ಲಿ ತೊಡಗಿರುವ ಪರಿಣಾಮದಿಂದಾಗಿ ತನ್ನ ಸಹಜತೆಯನ್ನು ಕಳೆದುಕೊಂಡ ಪರಿಸರ ಕಾಳಜಿ ಇಂದು ಚರ್ಚೆ ಸಂವಾದಗಳಿಗೆ ಮಾತ್ರ ಸೀಮಿತವಾಗದೆ, ಹೋರಾಟದ ಸ್ವರೂಪವನ್ನು ಪಡೆದಿದೆ ಹಾಗೂ ಪಡೆಯುತ್ತಲೂ ಇದೆ.

ಪರಿಸರವು ಈ ರೀತಿ ಅಪಾಯಕಾರಿ ಹಂತವನ್ನು ತಲುಪಲು ಮನುಷ್ಯನ ಹೊಸ ಹೊಸ ಪ್ರಯೋಗಗಳು, ಆಕ್ರಮಣಕಾರಿ ನೀತಿಗಳು, ನಿಸರ್ಗ ನಿಯಮಕ್ಕೆ ವಿರುದ್ಧವಾದ ಆಳುವವರ ಕಾನೂನು ಕಟ್ಟಳೆಗಳು ಹಾಗೂ ದುರಾಸೆಗಳೇ ಕಾರಣವಾಗಿವೆ. "ಪರಿಸರವನ್ನು ತನ್ನ ಅಪೇಕ್ಷೆಗೆ ತಕ್ಕಂತೆ ಬಗ್ಗಿಸುತ್ತಿರುವ ಮನುಷ್ಯನ ಆಕ್ರಮಣಕಾರಿ ಪ್ರವೃತ್ತಿಯ ವಿರುದ್ಧಧ್ವನಿಗಳೆದ್ದಿವೆ. ಮನುಷ್ಯನ ಆಕ್ರಮಣಕಾರಿ ಮನೋಧರ್ಮದಿಂದ ಆತ್ಮಪ್ರತಿಷ್ಠೆ ಮತ್ತು ಎಲ್ಲವನ್ನೂ ತನ್ನ ಅಂಕೆಯಲ್ಲಿಡಲು ಪ್ರಯತ್ನಿಸುವ ಮನೋಭಾವದ ಗೀಳಿನಿಂದ ಪರಿಸರ ನಾಶದ ಅತಿರೇಕತೆ ಹುಟ್ಟಿದೆ. ದೃಷ್ಟಿ ಗೋಚರವಾಗುತ್ತಿರುವ ಕಾಡಿನ ನಾಶ, ಜಲಮಾಲಿನ್ಯ, ವಾಯುಮಾಲಿನ್ಯ ಇವೆಲ್ಲಾ ಮನುಷ್ಯನನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿವೆ." (ಶಶಿಕಲ ಎಚ್., ಏಕ–ಅನೇಕ, ೨೦೦೫, ಪುಟ–೨೮೧) ಪರಿಸರ ನಾಶದ ಭೀತಿಯಿಂದ ಎಚ್ಚೆತ್ತ ಮನುಷ್ಯ ಪರಿಸರದ ಅವನತಿಯನ್ನು ತಡೆಯುವ ಹಿನ್ನೆಲೆಯಲ್ಲಿ ಚರ್ಚೆ ಸಂವಾದಗಳಲ್ಲಿ ತೊಡಗಿದ್ದಾನೆ. ಸಮಾವೇಶಗಳನ್ನು ಏರ್ಪಡಿಸಿ ಜನಜಾಗೃತಿ ಮೂಡಿಸುವ ಪ್ರಕ್ರಿಯೆಯಲ್ಲಿ ಕಾರ್ಯೋನ್ಮುಖನಾಗಿದ್ದಾನೆ.

ಇಡೀ ಜಗತ್ತಿನಾದ್ಯಂತ ಪರಿಸರದ ಬಗೆಗೆ ಮೊದಲು ಕಾಳಜಿ ವ್ಯಕ್ತವಾದದ್ದು ವಸಾಹತುಶಾಹಿ ಕಾಲಘಟ್ಟದಲ್ಲಿ. ಮುಂದುವರೆದ ರಾಷ್ಟ್ರಗಳಾಗಿದ್ದ ಫ್ರಾನ್ಸ್, ಬ್ರಿಟನ್, ಸ್ಪೈನ್ ಮತ್ತು ಪೋರ್ಚುಗಲ್ ಮುಂತಾದ ಯುರೋಪಿಯನ್ ರಾಷ್ಟ್ರಗಳು ಜಗತ್ತಿನ ಹೊಸ ಭೂಭಾಗಗಳನ್ನು ಆಕ್ರಮಿಸಿದ್ದಲ್ಲದೇ ಆಫ್ರಿಕ ಮತ್ತು ಏಷ್ಯಾದ ಹಲವು ರಾಷ್ಟ್ರಗಳನ್ನು ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡಿದ್ದವು. ಆ ಕಾಲಘಟ್ಟದ ಇತಿಹಾಸವನ್ನು ಸ್ಪಷ್ಟವಾಗಿ ಗಮನಿಸಿದರೆ ಯುರೋಪಿಯನ್ ರಾಷ್ಟ್ರಗಳು ತಮ್ಮ ವಸಾಹತುಗಳಲ್ಲಿನ ದಟ್ಟವಾದ ಕಾಡುಗಳನ್ನು ಮತ್ತು ಕಾಡಿನ ಜೀವ ಸಂಕುಲವನ್ನು ಬಹಳ ಕಡಿಮೆ ಸಮಯದಲ್ಲಿ ನಿರ್ನಾಮ ಮಾಡಿದವೆಂಬ ಸತ್ಯ ತಿಳಿದು ಬರುತ್ತದೆ. ತಮಾಶೆಯ ಸಂಗತಿಯೆಂದರೆ ಈ ಮುಂದುವರೆದ ರಾಷ್ಟ್ರಗಳೇ ಮೊಟ್ಟಮೊದಲು ಪರಿಸರದ ಸಂರಕ್ಷಣೆಯ ಕುರಿತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ಆಯೋಜಿಸಿದ್ದು ಮತ್ತು ಪರಿಸರದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದ್ದು.

ತನ್ನ ಭೂಭಾಗಕ್ಕಿಂತ ಇನ್ನೂರು ಪಟ್ಟು ಹೆಚ್ಚು ನೆಲವನ್ನು ವಸಾಹತುವನ್ನಾಗಿ ಮಾಡಿಕೊಂಡು ಆಯಾ ದೇಶಗಳ ಪ್ರಾಕೃತಿಕ ಸಂಪತ್ತನ್ನೆಲ್ಲಾ ಕೊಳ್ಳೆಹೊಡೆದ ದೇಶ ಬ್ರಿಟನ್. ಇಂತಹ ರಾಷ್ಟ್ರದ ವಿದೇಶಾಂಗ ಕಚೇರಿಯ ನೇತೃತ್ವದಲ್ಲಿ ಲಂಡನ್ ನಗರದಲ್ಲಿ ೧೯೦೦ರಲ್ಲಿ ಮೊಟ್ಟಮೊದಲಿಗೆ ಅಂತರರಾಷ್ಟ್ರೀಯ ಪರಿಸರ ಸಮಾವೇಶ ನಡೆದಿದೆ. ಒಟ್ಟಿನಲ್ಲಿ ಯಾವ ರಾಷ್ಟ್ರಗಳು ತಮ್ಮ ಮೋಜಿಗಾಗಿ ಪರಿಸರ ನಾಶಕ್ಕೆ ತೊಡಗಿದ್ದವೊ ಅದೇ ರಾಷ್ಟ್ರಗಳು ಪರಿಸರ ರಕ್ಷಣೆಯ ಅಗತ್ಯತೆಯನ್ನು ಕುರಿತು ಜಗತ್ತಿಗೆ ತಿಳಿವಳಿಕೆ ನೀಡಲೆತ್ನಿಸಿದವು. ರಾಷ್ಟ್ರೀಯ ಉದ್ಯಾನವನಗಳನ್ನು ಸ್ಥಾಪಿಸಬೇಕು ಎನ್ನುವ ಕೂಗು ಎದ್ದದ್ದು, ಅವ್ಯಾಹತವಾಗಿ ನಡೆಯುತ್ತಿದ್ದ ವನ್ಯಜೀವಿಗಳ ಬೇಟೆಯ ಮೇಲೆ ಶಸ್ತ್ರಾಸ್ತ್ರಗಳ ಬಳಕೆಯ ಮೇಲೆ ನಿರ್ಬಂಧ ಹೇರಿದ್ದು, 'ವೈಲ್ಡರ್‌ನೆಸ್' ಚಿಂತನೆ ಹುಟ್ಟಿಕೊಂಡಿದ್ದು ವಸಾಹತು ಕಾಲಘಟ್ಟದಲ್ಲಿ. 'ವೈಲ್ಡರ್‌ನೆಸ್' ಚಿಂತನೆ ಎನ್ನುವುದು ಯುರೋಪಿನಲ್ಲಿ ಒಂದು ಕಡೆ ಪ್ರತ್ಯೇಕ ಜ್ಞಾನಶಿಸ್ತಾಗಿ ರೂಪುಗೊಂಡರೆ ಮತ್ತೊಂದೆಡೆ ಸಾಹಿತ್ಯದ ಭಾಗವಾಗಿ ರೂಪುಗೊಂಡಿರುವುದನ್ನು ಗಮನಿಸಬಹುದು. ಪ್ರಕೃತಿಯ ಸಹಜ ರೂಪವು ಕಳೆದುಹೋಗುತ್ತಿರುವುದರ ಬಗೆಗಿನ ಆತಂಕವನ್ನು ವರ್ಡ್ಸ್‌ವರ್ತ್‌ನ ಪದ್ಯಗಳಲ್ಲಿ ನಾವು ಗುರುತಿಸಬಹುದು. ಇದೇ ಸಂದರ್ಭದಲ್ಲಿ ನಮಗೆ ಕನ್ನಡ ಸಾಹಿತ್ಯದಲ್ಲಿ ನೆನಪಾಗುವುದು ವಿಶೇಷವಾಗಿ ಕುವೆಂಪು ಮತ್ತು ಕಾರಂತರು. ಇವರ ಕೃತಿಗಳಲ್ಲಿ ಪರಿಸರದ ಚಿತ್ರಣವನ್ನು ಕಾಣುತ್ತೇವಾದರೂ ವಿಶೇಷವಾಗಿ ಆಧುನೀಕರಣದ ಹೊಡೆತಕ್ಕೆ ಸಿಲುಕಿ ನಾಶವಾಗುತ್ತಿರುವ ಪರಿಸರದ ಚಿತ್ರಣವನ್ನು ಕಾಣಲಾರೆವು. ಇದನ್ನು ನಮಗೆ ಕಾಣಲು ಸಾಧ್ಯವಾಗುವುದು ತೇಜಸ್ವಿಯವರ ಸಾಹಿತ್ಯ ಕೃತಿಗಳಲ್ಲಿ.

ಪೂರ್ಣಚಂದ್ರ ತೇಜಸ್ವಿಯವರು ಪರಿಸರ ಕುರಿತು ಕುರುಡು ನಂಬಿಕೆಯುಳ್ಳವರಲ್ಲ. ಮಲೆನಾಡಿನ ದಟ್ಟ ಕಾಡು ಪರಿಸರದಿಂದ ಬಂದ ಕುವೆಂಪು ಹಾಗೂ ವೈಜ್ಞಾನಿಕವಾಗಿ, ವೈಚಾರಿಕವಾಗಿ ಪರಿಸರವನ್ನು ಕಂಡ ಶಿವರಾಮ ಕಾರಂತರಿಂದ ಪ್ರಭಾವಿತರಾಗಿದ್ದರೂ ಅವರಿಗಿಂತ ವಿಭಿನ್ನ ರೀತಿಯಲ್ಲಿ ಪರಿಸರವನ್ನು ಕಂಡವರು ಮತ್ತು ಬರೆದವರು. ಕುವೆಂಪು ಮತ್ತು ಕಾರಂತರ ಮುಂದುವರಿದ ಭಾಗವಾಗಿ ಬದುಕಿದವರು ತೇಜಸ್ವಿ. ಕುವೆಂಪುರವರ ಪ್ರತಿಯೊಂದು ಮಾತು ಕೃತಿ ಪರಿಸರವನ್ನೇ ಸುತ್ತುವರೆದಿರುತ್ತದೆ. ಪರಿಸರದಿಂದ ಬೇರ್ಪಡಿಸಲಾಗದ ಒಂದು ಮನೋಧರ್ಮ ಅಲ್ಲಿ ಕಾಣಸಿಗುತ್ತದೆ. ಸಮಷ್ಟಿ ಪ್ರಜ್ಞೆ ಅವರ ಭಾಷೆಯಲ್ಲಿ ಅಂತರ್ಗತವಾಗಿರುತ್ತದೆ. ಪರಿಸರವನ್ನು ನೋಡಿ ದಿಗ್ಭ್ರಮೆಗೊಂಡು 'ಕೋಗಿಲೆ ಕೂಗಿದರೆ ಮೈ ಜಗ ಝುಮ್ಮೆಂದಿತು ಅದ ಕೇಳಿ' ಎಂದು ಇದು ದೈವಲೀಲೆ ಎಂಬಂತೆ ಕುವೆಂಪು ಆಧ್ಯಾತ್ಮೀಕರಿಸಿಬಿಡುತ್ತಾರೆ. ಇನ್ನು ಕಾರಂತರಿಗೆ ಬೆಟ್ಟ-ಗುಡ್ಡ, ಝರಿ, ನದಿ, ಕಾಡು, ಪ್ರಾಣಿ-ಪಕ್ಷಿಗಳೆಲ್ಲಾ ವೈಜ್ಞಾನಿಕ ದೃಷ್ಟಿಕೋನದ ವಿಶ್ಲೇಷಣಾತ್ಮಕವಾದ ರೂಪವಾಗಿ ಕಾಣುತ್ತವೆ. ನಿಸರ್ಗ ಮತ್ತು ಮನುಷ್ಯನಿಗಿರುವ ಸಂಬಂಧದ ನಿರಂತರ ಸೆಣಸಾಟವಾಗಿ ಅವರ ಕಾದಂಬರಿಗಳು ಕಂಡುಬರುತ್ತವೆ. ಕುವೆಂಪು ಅವರ ಆಧ್ಯಾತ್ಮೀಕರಣ ಎಷ್ಟೇ ವೈಜ್ಞಾನಿಕ ಮತ್ತು ವೈಚಾರಿಕವಾಗಿದ್ದರೂ ಮೌಢ್ಯವಾಗಿಬಿಡುವ ಆತಂಕಗಳಿದ್ದವು. ಹಾಗೆಯೇ ಕಾರಂತರು ಸೃಷ್ಟಿಸುವ ಸೆಣಸಾಟಗಳಿಗೆ ಬದಲಾಗಿ ಪರ್ಯಾಯಗಳನ್ನು ಕಂಡುಕೊಳ್ಳುವ ಜರೂರು ತೇಜಸ್ವಿಯವರಿಗಿತ್ತು ಎನಿಸುತ್ತದೆ. ಹಾಗಾಗಿ ನಿಸರ್ಗದ ದಿಗ್ಭ್ರಮೆಗಳನ್ನು, ಅದರ ನಿರಂತರ ನಿಗೂಢತೆ, ಏಕಾಂತತೆಯನ್ನು, ಅದರೊಳಗೆ ಅಡಗಿರುವ ಕ್ರೌರ್ಯ, ಬೆರಗು, ಇದ್ದಕ್ಕಿದ್ದಂತೆ ಸಿಡಿದೇಳುವ, ಪ್ರತೀಕಾರ ತೀರಿಸಿಕೊಳ್ಳುವಂತೆ ವರ್ತಿಸುವ, ಯಾರ ಅಂಕೆಗೂ ಸಿಗದೆ ತಕ್ಷಣಕ್ಕೆ ಶಾಂತ ಸ್ಥಿತಿಯಾಗಿಬಿಡುವ ವಿರಾಟ್ ಸ್ವರೂಪವನ್ನು ತಮ್ಮ ಚಿಂತನೆ ಹಾಗೂ ಸಾಹಿತ್ಯದ ಮೂಲಕ ತೇಜಸ್ವಿ ಸೆರೆ ಹಿಡಿದಿದ್ದಾರೆ. ಇವರು ನಿಸರ್ಗವನ್ನು ವಿಶ್ಲೇಷಿಸದೇ ಅದರ ಬೆರಗಿಗೆ ಮೈಮರೆಯದೇ ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡು ಬಂದಿದ್ದಾರೆ. ಹಾಗಾಗಿಯೇ ನಿಸರ್ಗವನ್ನು ಇತರ ಸಾಹಿತಿಗಳಿಗಿಂತ ಬಿನ್ನವಾಗಿ ಕಾಣಲು ಹಾಗೂ ಬರೆಯಲು ಅವರಿಗೆ ಸಾಧ್ಯವಾಗಿದೆ.

ತೇಜಸ್ವಿ ಕಥನ : ಪರಿಸರ ಸಂಕಥನ

ತೇಜಸ್ವಿಯವರ ಕಥನದ ಪ್ರಕಾರ ಪರಿಸರವೆಂದರೆ, ಪರಿಸರ ಕಾಳಜಿಯೆಂದರೆ ರೂಢಿಗತ ಅರ್ಥದಲ್ಲಿ ಗ್ರಹಿಸುವಂತೆ ಮರ, ಗಿಡ, ಪ್ರಾಣಿ, ಪಕ್ಷಿಗಳನ್ನೊಳಗೊಂಡ ನೈಸರ್ಗಿಕ ಪರಿಸರ ಮಾತ್ರವಾಗಿಲ್ಲ. ನಮ್ಮ ಬದುಕನ್ನು ಆವರಿಸಿಕೊಂಡಿರುವ ಸಾಮಾಜಿಕ, ಶೈಕ್ಷಣಿಕ, ರಾಜಕೀಯ,

ಧಾರ್ಮಿಕ, ಆರ್ಥಿಕ ಹಾಗೂ ವಾಣಿಜ್ಯಾತ್ಮಕ ನೆಲೆಗಳೆಲ್ಲವನ್ನೂ ಒಳಗೊಂಡಂತೆ ಸ್ಥಳೀಯ ಭೂಗೋಳದ ಜೀವಜಾಲ ಮತ್ತು ಜೀವಾನಾನುಭವವನ್ನು ಬಿಂಬಿಸುವುದೇ ಪರಿಸರ ಆಗಿದೆ. ಹಾಗಾಗಿ ಸಾಮಾಜಿಕ, ನೈಸರ್ಗಿಕ ಮತ್ತು ಬೌದ್ಧಿಕ ಪರಿಸರಗಳನ್ನು ಒಳಗೊಂಡ ಅಖಂಡ ಕಲ್ಪನೆ ಇಲ್ಲಿನ ಪರಿಸರ ಕಲ್ಪನೆಯಾಗಿದೆ. ಇಂದು ನಡೆಯುತ್ತಿರುವ ಪರಿಸರ ಕುರಿತ ಚಿಂತನೆ ಮತ್ತು ಕಾಳಜಿಯ ಬಗೆಗೆ ಅವರ ಕಥನದಲ್ಲಿ ವಿರೋಧವಿದೆ. ಪರಿಸರದ ಅವನತಿಯಿಂದಾಗಿ ಅದರಿಂದ ದೊರೆಯುತ್ತಿದ್ದ ಅನುಕೂಲಗಳು ಮತ್ತು ಸವಲತ್ತುಗಳು ದೊರೆಯದಿರಬಹುದೆಂಬ ಆತಂಕ ಮತ್ತು ವಾತಾವರಣದ ಅಸಮತೋಲನದಿಂದ ಉಂಟಾಗಬಹುದಾದ ಅಪಾಯಗಳ ಭಯದಿಂದ ರೂಪಿಸಿಕೊಳ್ಳುತ್ತಿರುವ ಕಾಳಜಿ ನಿಜವಾದುದಲ್ಲ, ಇದರಿಂದ ಪರಿಸರಕ್ಕೆ ರಕ್ಷಣೆಯ ಬದಲು ಅಪಾಯಗಳೇ ಹೆಚ್ಚು ಎಂಬುದು ತೇಜಸ್ವಿ ಕಥನ ಸಾಹಿತ್ಯದ ವಾದವಾಗಿದೆ.

ತೇಜಸ್ವಿಯವರ ಕಥನವು ಭಯ, ಆತಂಕಗಳಿಂದ ಪರಿಸರವಾದಿಗಳಂತೆ ವರ್ತಿಸುವುದನ್ನು ಖಂಡಿಸುತ್ತದೆ. ಸತ್ಯನಾರಾಯಣ ಅವರು ಹೇಳುವಂತೆ "ಪರಿಸರವಾದಿಗಳು ಕಾಡು ಮತ್ತು ಪ್ರಾಣಿಗಳ ಬಗ್ಗೆ ಅವುಗಳ ಅಸ್ತಿತ್ವದ ಬಗ್ಗೆ ತಮಗೆ ವಿಶೇಷವಾದ ಹಕ್ಕೊಂದು ಇರುವಂತೆ ಮಾತನಾಡುತ್ತಾರೆ. ತೇಜಸ್ವಿಯವರು ಸರಿಯಾದ ಕಾರಣಕ್ಕೆ ಇದನ್ನು ಒಪ್ಪುವುದಿಲ್ಲ. ಪರಿಸರದ ಬಗ್ಗೆ ವಿಶೇಷವಾದ ಹಕ್ಕನ್ನು ಬಯಸುವವರು ಕಾಡು-ಪ್ರಾಣಿ-ಮನುಷ್ಯ ಇವೆಲ್ಲವೂ ಒಟ್ಟಿಗೆ ಸೇರಿದಾಗ ಉಂಟಾಗುವ ಜೀವನ ವಿನ್ಯಾಸವನ್ನು ಒಪ್ಪುತ್ತಾರೆಯೇ ಎಂಬ ಪ್ರಶ್ನೆಯನ್ನು ತೇಜಸ್ವಿ ಓದುಗರ ಮುಂದಿಡುತ್ತಾರೆ." (ಸತ್ಯನಾರಾಯಣ ಕೆ., ತೇಜಸ್ವಿ ಲೋಕ, ೨೦೦೭, ಪುಟ-೭೪) ಪರಿಸರವಾದಿಗಳ ಮುಖವಾಡವನ್ನು ಬಯಲಿಗೆಳೆಯುವ ತೇಜಸ್ವಿಯವರ ಕಥನವು ಭಾಷಣಗಳಿಂದ, ಬರಹಗಳಿಂದ, ಹೋರಾಟಗಳಿಂದ, ಚಳುವಳಿಗಳಿಂದ, ಸಮಾವೇಶಗಳಿಂದ, ಜಾತಾಗಳಿಂದ, ಹಾಗೂ ಆತಂಕ-ಭಯಗಳಿಂದ ಪರಿಸರದ ಕುರಿತು ಜನತೆಯಲ್ಲಿ ಜಾಗೃತಿಯನ್ನು ಮೂಡಿಸಿ ನಿಸರ್ಗ ರಕ್ಷಿಸಲು ಅಸಾಧ್ಯ ಎಂದು ಮನಗಾಣಿಸುತ್ತದೆ. ಹಾಗೆಯೇ ಸರ್ಕಾರಗಳು ವಿಶ್ವಸಂಸ್ಥೆಯು ನೀಡುವ ಕೋಟಿ ಕೋಟಿ ರೂಪಾಯಿಗಳನ್ನು ಸುರಿದು ಪರಿಸರದ ರಕ್ಷಣೆ ಮಾಡುವ ಯೋಜನೆಗಳನ್ನು ಕಾನೂನು ಕಟ್ಟಳೆಗಳನ್ನು ಜಾತಾ-ಸಮಾವೇಶಗಳನ್ನು ತೇಜಸ್ವಿ ಕಥನ ಒಪ್ಪುವುದಿಲ್ಲ.

ಒಂದು ಕಡೆ ಪರಿಸರ ರಕ್ಷಣೆಯ ನಾಟಕ ಮಾಡುವ ಸರ್ಕಾರ ಮತ್ತು ಸರ್ಕಾರಿ ಏಜನ್ಸಿಗಳು, ಮತ್ತೊಂದು ಕಡೆ ಅದೇ ಸರ್ಕಾರಗಳು ಅರಣ್ಯದಲ್ಲಿ ಗಣಿಗಾರಿಕೆ ನಡೆಸಲು ಅನುಮತಿಯನ್ನು ನೀಡುತ್ತಿರುವ ಇಬ್ಬಗೆಯ ನೀತಿಗಳನ್ನು ತೇಜಸ್ವಿ ಕಥನ ಖಂಡಿಸುತ್ತದೆ. ಅಭಿವೃದ್ಧಿಯ ನೆಪದಲ್ಲಿ ಗಣಿಗಾರಿಕೆಗೆ ಅವಕಾಶ ಮಾಡಕೊಟ್ಟು ನಿರಂತರವಾಗಿ ಕಾಡನ್ನೂ ಅಲ್ಲಿನ ಜೀವಸಂಕುಲವನ್ನು ನಾಶಮಾಡುತ್ತಿರುವುದುಪರಿಸರ ರಕ್ಷಣೆಗಿಂತ ಅವನತಿಯನ್ನೇ

ಕಾಣಿಸುತ್ತಿದೆ. ಈ ಬಗೆಯ ಅಭಿವೃದ್ಧಿ ಪ್ರವೃತ್ತಿಯನ್ನೂ, ಸರ್ಕಾರದ ಇಬ್ಬಗೆಯ ನೀತಿಗಳನ್ನೂ ತೇಜಸ್ವಿ ಕಥನ ತೀಕ್ಷ್ಣ ವಿಮರ್ಶೆಗೆ ಗುರಿಮಾಡುತ್ತದೆ.

ಪರಿಸರ ದೃಷ್ಟಿಯಿಂದ ರೂಪಿಸುತ್ತಿರುವ ಕಾಯ್ದೆ-ಕಾನೂನುಗಳು, ಯೋಜನೆಗಳು ಪರಿಸರವನ್ನು ದೋಚುವವರಿಗೆ ರಕ್ಷಣೆಯನ್ನು ನೀಡುತ್ತಿವೆ. ಹೋರಾಟ ಚಳುವಳಿಗಳು ಬೆಲೆ ಕಳೆದುಕೊಂಡು ಮಾರಾಟದ ಸರಕುಗಳಾಗುತ್ತಿವೆ. ಪರಿಸರವನ್ನು ದೋಚುವವರಿಗೆ ಈ ಕಾಯ್ದೆ-ಕಾನೂನುಗಳು ಪರ್ಯಾಯ ಮಾರ್ಗಗಳನ್ನು ಸೃಷ್ಟಿಸುತ್ತಿವೆ ಎಂಬ ನಿಲುವು ತೇಜಸ್ವಿಯವರ ಕಥನದ್ದಾಗಿದೆ. ಪರಿಸರದ ಬಗ್ಗೆ ಸಂಪೂರ್ಣ ಅರಿವಿದೆ ಎಂದು ನಿಸರ್ಗವನ್ನು ಅದರ ವೈವಿಧ್ಯಮಯ ಜೀವ ಸಂಕುಲವನ್ನು ಮನುಷ್ಯರು ತಮ್ಮಿಷ್ಟದಂತೆ ಬದಲಿಸಲು ಪ್ರಯತ್ನಿಸುವುದನ್ನು ತೇಜಸ್ವಿ ಕಥನ ಒಪ್ಪುವುದಿಲ್ಲ. ಪ್ರತಿಯೊಂದು ಪ್ರಾಣಿ ಪಕ್ಷಿಗಳ ಜೀವನಕ್ರಮ, ಆಹಾರ ಪದ್ಧತಿ, ರೂಢಿ-ರಿವಾಜುಗಳು, ಲಾಲನೆ-ಪೋಷಣೆ, ಔಷಧಿ ಪದ್ಧತಿ, ಬೇರೆ ಬೇರೆಯಾಗಿರುತ್ತದೆ. ಆದರೆ ಅದನ್ನೆಲ್ಲ ನಾವು ನಮ್ಮಿಷ್ಟದಂತೆ ಬದಲಿಸಲು ಯತ್ನಿಸುತ್ತೇವೆ. ಇದು ಪರಿಸರ ನಾಶಕ್ಕೆ ಬಹುಮುಖ್ಯ ಕಾರಣವಾಗಿದೆ. ಮನುಷ್ಯನ ಆಸೆ ಮತ್ತು ಇಷ್ಟದಂತೆ ನಿಸರ್ಗದ ಇತರೆ ಜೀವಜಾಲ ಇರಬೇಕೆಂದು ಬಯಸುವುದು, ಆ ನಿಟ್ಟಿನಲ್ಲಿ ಬದಲಿಸಲು ಯತ್ನಿಸುವುದು ನಿಸರ್ಗದ ಮೇಲೆ ಹೇರಲ್ಪಡುವ ಒತ್ತಡ ಹಾಗೂ ಮಾನವನು ತನ್ನ ಯಾಜಮಾನ್ಯವನ್ನು ಹೇರಿ ತನ್ನ ಅಧಿಕಾರವನ್ನು ಪ್ರತಿಷ್ಠಾಪಿಸುವುದೇ ಆಗಿದೆ. ಈ ಬಗೆಯ ಪರಿಸರ ಕಾಳಜಿಯು ನಿಸರ್ಗದ ಅಭಿವೃದ್ಧಿಗಿಂತ ಅವನತಿಯನ್ನೇ ಕಾಣಿಸುತ್ತದೆ ಎಂಬುದು ತೇಜಸ್ವಿ ಕಥನದ ಪ್ರತಿಪಾದನೆಯಾಗಿದೆ.

ನಿಸರ್ಗದ ಪ್ರಾಣಿ-ಪಕ್ಷಿಗಳು ಹಾಗೂ ಒಟ್ಟಾರೆ ಜೀವಜಾಲದ ಕುರಿತು ವಸ್ತುನಿಷ್ಠ ಪ್ರೀತಿಯನ್ನು ಮನುಷ್ಯ ಬೆಳೆಸಿಕೊಳ್ಳಬೇಕು. ಅದೇ ನಿಜವಾದ ಕಾಳಜಿ. ಪರಿಸರವನ್ನು ಅದರ ಜೀವ ವೈವಿಧ್ಯತೆಯನ್ನು ಒಪ್ಪಿಕೊಂಡಾಗ ಮಾತ್ರ ಪರಿಸರ ರಕ್ಷಣೆ ಸಾಧ್ಯ ಎಂಬುದೇ ತೇಜಸ್ವಿಯವರ ಕಥನ ಸಾಹಿತ್ಯದ ಒಟ್ಟಾರೆ ಭಿತ್ತಿಯಾಗಿದೆ. ಅವರ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗುವ ಪರಿಭಾಷೆಗಳ ಆಧಾರದಿಂದ, ಅಲ್ಲಿ ಬರುವ ದಟ್ಟವಾದ ಜೀವ ಪರಿಸರ ಚಿತ್ರಣಗಳಿಂದ ಅಲ್ಲಿನ ಪರಿಸರ ಕಾಳಜಿಯ ಸ್ವರೂಪವನ್ನು ನಾವು ಗುರುತಿಸಬಹುದು. ಅನೇಕ "ಸಾಹಿತಿಗಳು ತಮ್ಮ ಅನುಭವ ಹೇಳಲು ತತ್ವಶಾಸ್ತ್ರ, ಪುರಾಣಶಾಸ್ತ್ರ, ಮನಃಶಾಸ್ತ್ರ, ಮಹಾಕಾವ್ಯಗಳನ್ನು ಉಪಯೋಗಿಸುವಂತೆ ತೇಜಸ್ವಿ ಕಥೆ ಕಾದಂಬರಿಗಳಲ್ಲಿ ಕೀಟಶಾಸ್ತ್ರ, ಪ್ರಾಣಿಶಾಸ್ತ್ರ, ಪಕ್ಷಿಶಾಸ್ತ್ರ, ಮುಂತಾದವುಗಳನ್ನು ಉಪಯೋಗಿಸುತ್ತಾರೆ." (ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ೨೦೦೪, ಪುಟ-೩೮) ತೇಜಸ್ವಿಯವರ ಕಥನ ಕ್ರಮವು ಮನುಷ್ಯರ ಜೊತೆ ಜೊತೆಗೆ ನಿಸರ್ಗದ ಹಕ್ಕಿ, ಪ್ರಾಣಿ, ಗಿಡ, ಮರ, ಬಳ್ಳಿ, ಹಳ್ಳ ಮಣ್ಣು ಸಮಸ್ತ ಚರಾಚರಗಳನ್ನು

ಒಟ್ಟಿಗೆ ನೋಡುತ್ತಾ ಬರೆಯುವ ಜೀವ ಕೇಂದ್ರಿತ ಕಥನ ಕ್ರಮವಾಗಿದೆ. ತೇಜಸ್ವಿಯವರ ಕಥನದ ನಿಜವಾದ ಶಕ್ತಿ ಇರುವುದೇ ಈ ಜೀವಕೇಂದ್ರಿತ ನೆಲೆಯ ರಚನೆಯಲ್ಲಿ. ಅವರ ಕಥೆ–ಕಾದಂಬರಿಗಳ ಶೀರ್ಷಿಕೆಗಳು ಅವರ ಪರಿಸರ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಚಿಂಕ್ರ ಮೇಸ್ತ್ರಿ ಮತ್ತು ಹಾವು ಮೀನು, ಮಾನಿಟರ್, ಸುಶ್ಮಿತ ಮತ್ತು ಹಕ್ಕಿಮರಿ, ಮೂಲಿಕೆ ಬಳ್ಳಿಯ ಸುತ್ತ ಇತ್ಯಾದಿ. ಹಾಗೆಯೇ ಮಾನವ ಪಾತ್ರಗಳ ಜೊತೆ ಹುಂಡು ಕೋಳಿಯ ಜೀವನ ಕ್ರಮ, ಮಂಗ, ಚಿಟ್ಟು ಕೋಳಿ, ಮೀನು, ಏಡಿ, ಹಾವು, ಅಳಿಲು, ನವಿಲು, ಓತಿಕ್ಯಾತ, ಕಾಡುಹಂದಿ, ಜೇಡ ಮುಂತಾದ ಪ್ರಾಣಿ ಜಗತ್ತು. ದಾಸವಾಳ, ಜೊಂಡು ಅಡಿಕೆ, ಮೆಣಸಿನಗಿಡ ಮುಂತಾದ ಸಸ್ಯ ಜಗತ್ತು ಇವರ ಬರವಣಿಗೆಗಳಲ್ಲಿ ಧಾರಾಳವಾಗಿ ಬರುತ್ತವೆ. ಹೀಗೆ ಪ್ರಾಣಿ, ಸಸ್ಯ, ಜೀವಿಗಳು ಮತ್ತು ಮನುಷ್ಯ ಲೋಕಗಳು ಏಕೀಭವಿಸಿದ ಜಗತ್ತು ತೇಜಸ್ವಿ ಸಾಹಿತ್ಯದಲ್ಲಿ ಪರಿಸರ ಕಾಳಜಿಯಾಗಿ ಕಂಡುಬರುತ್ತದೆ. ಪ್ರಾಣಿ, ಗಿಡ, ಮರ, ಕ್ರಿಮಿಕೀಟಗಳು ಮತ್ತು ಮನುಷ್ಯ ಸಮಾಜ ಎಲ್ಲರೂ ಸೇರಿ ಸಂಘರ್ಷ ಮತ್ತು ಸಹಬಾಳ್ವೆ ನಡೆಸುತ್ತಿರುವ ಹೊಸ ಜೀವಸತ್ವವನ್ನು ತೇಜಸ್ವಿಯವರ ಕಥನ ಕಟ್ಟಿಕೊಡುತ್ತದೆ. ತೇಜಸ್ವಿಯವರ ಕಥನಕ್ಕೆ ನೈಸರ್ಗಿಕ ಪರಿಸರ ಎಷ್ಟು ಮುಖ್ಯವೋ ಸಾಮಾಜಿಕ ಪರಿಸರವೂ ಅಷ್ಟೇ ಮುಖ್ಯ. ನೈಸರ್ಗಿಕ ಪರಿಸರದ ಅವನತಿ ಸಾಮಾಜಿಕ ಪರಿಸರದ ಮೇಲೆ ಉಂಟು ಮಾಡುಬಹುದಾದ ಅವಾಂತರಗಳನ್ನು ಇವರ ಕಥನ ದಾಖಲಿಸುವ ಮೂಲಕ ಜನತೆಯನ್ನು ಎಚ್ಚರಿಸುತ್ತದೆ.

ಮಾನವೇತರ ಪ್ರಪಂಚಗಳನ್ನು ಚಿತ್ರಿಸುವಾಗ ಕಥನದಲ್ಲಿನ ಧೋರಣೆ ಮತ್ತು ನಿರೂಪಣಾ ಕ್ರಮಗಳಲ್ಲಿ ಅಗಾಧ ವ್ಯತ್ಯಾಸ ಕಂಡುಬರುತ್ತದೆ. "ನಿಸರ್ಗವನ್ನು ವರ್ಣಿಸುವಾಗ ಇವರ ಕಥನವು ರಮ್ಯ ಕವಿಯ ಕಾವ್ಯದ ಹಾಗೇ ತನ್ಮಯವಾಗಿ ಮೈಮರೆಯುತ್ತದೆ. ಆದರೆ ಈ ತನ್ಮಯತೆ ಮಾನವ ಸಮಾಜ ಬಂದಾಗ ಕಾಣುವುದಿಲ್ಲ. ಅಲ್ಲೊಂದು ಬಗೆಯ ಬಿರುಸು ಕಾಣಿಸುತ್ತದೆ. ನಿಸರ್ಗದ ವಿಷಯದಲ್ಲಿ ಯಥಾಸ್ಥಿತಿವಾದಿ ನಿಲುವನ್ನು ಬಳಸುವ ತೇಜಸ್ವಿ ಕಥನ ಸಮಾಜದ ವಿಷಯದಲ್ಲಿ ವಿಮರ್ಶಾತ್ಮಕ ಹಾಗೂ ವೈಚಾರಿಕ ನಿಲುವನ್ನು ಬಳಸುತ್ತದೆ. ಪ್ರಾಣಿ, ಸಸ್ಯ ಇರುವ ಜಗತ್ತನ್ನು ಆಸ್ಥೆಯಿಂದ ನೋಡಿದರೆ; ಮನುಷ್ಯರು ವಾಸಿಸುವ ಸಮಾಜವನ್ನು ಕಟುವಾಗಿ ಗಮನಿಸುತ್ತದೆ. ತೇಜಸ್ವಿ ಕಥನಗಳು ಕೊಡುವ ಊರುಗಳ ಹೆಸರುಗಳನ್ನು ಗಮನಿಸಿ. ಹುಲಿಯೂರಿನ ಸರಹದ್ದು ಕಥೆಯ ಹುಲಿಯೂರು, ಚಿದಂಬರ ರಹಸ್ಯದ ಕೆಸರೂರು, ಮಾಯಾಲೋಕದ ಗೊಂದಲಗೇರಿ" (ರಹಮತ್ ತರೀಕೆರೆ, ತೇಜಸ್ವಿ ಲೋಕ, ೨೦೦೭, ಪುಟ–೪೨) ಹೀಗೆ ತೇಜಸ್ವಿ ಕಥನ ಹೆಸರಿಸುವ ಊರುಗಳೇ ಅವರ ಸಾಮಾಜಿಕ ಪರಿಸರ ಮತ್ತು ನೈಸರ್ಗಿಕ ಪರಿಸರದ ಬಗೆಗಿನ ನಿಲುವನ್ನು ಸೂಚಿಸುತ್ತವೆ.

ನಿಸರ್ಗದ ಮನುಷ್ಯೇತರ ಜೀವಸಂಕುಲ ಮಾನವನ ಮಧ್ಯಪ್ರವೇಶವನ್ನು ಒಂದು ಹಂತದವರೆಗೂ ಸಹಿಸಿಕೊಳ್ಳುತ್ತದೆ. ಪರಿಸರದ ಕಥೆಯಲ್ಲಿ ನಿರೂಪಕ ಮತ್ತು ಆತನ ತಮ್ಮ ಕಾಲು ಹಾದಿಯಲ್ಲಿ ನಡೆಯುತ್ತಾ ಆ ಹಾದಿಯ ಬಳಿಯಲ್ಲಿ ಕಾಣಸಿಗುವ ಕಾಡಿಲಿಗಳ ಬಿಲಗಳಿಗೆ ಕಲ್ಲುಗಳನ್ನು ತುಂಬಿ ಮುಚ್ಚುವುದು, ಮರುದಿನ ಇಲಿಗಳು ಆ ಕಲ್ಲುಗಳನ್ನು ದೂರಸಾಗಿಸಿ ಎಂದಿನಂತೆ ತಮ್ಮ ಬಿಲಗಳನ್ನು ಸ್ವಚ್ಚಗೊಳಿಸಿಕೊಳ್ಳುವುದನ್ನು ಇದಕ್ಕೆ ಉದಾಹರಿಸಬಹುದು. ಆದರೆ ಅದು ಅತಿಯಾದಾಗ ಅದು ತನ್ನನ್ನು ತಾನೇ ಅವನತಿಯ ಹಾದಿಗೆ ನೂಕಿಕೊಳ್ಳುತ್ತದೆ. ಅಣ್ಣನ ನೆನಪುಗಳು ಕೃತಿಯಲ್ಲಿ ನಿರೂಪಕ ಸ್ಪರ್ಶಿಸಿ ಬಿಡುವ ಅಳಿಲಿನ ದುರಂತ ಸಾವು, ಸುಶ್ಮಿತಾ ಮತ್ತು ಹಕ್ಕಿಮರಿ ಕಥೆಯಲ್ಲಿ ಪಿಕಳಾರ ಹಕ್ಕಿ ಮರಿಗಳನ್ನು ಕೃತಕವಾಗಿ ಸಾಕಲು ಯತ್ನಿಸಿ ಅವುಗಳ ಸಾವಿಗೆ ಕಾರಣವಾಗುವ ಪ್ರಸಂಗಗಳನ್ನು ಇಲ್ಲಿ ಗಮನಿಸಬಹುದು. ಹಾಗಾಗಿ ನಿಸರ್ಗ ಪ್ರತಿ ಜೀವರಾಶಿ ಮತ್ತು ಮಾನವನ ನಡುವಿನ ಹೊಕ್ಕುಬಳಕೆ ಸಂಬಂಧದ ಅಗತ್ಯವನ್ನು ತೇಜಸ್ವಿಯವರ ಕಥನ ಮನಗಾಣಿಸುತ್ತದೆ. ನಿಸರ್ಗದೊಂದಿಗಿನ ಮಾನವನ ಮಧ್ಯಪ್ರವೇಶವೇ ಅಹಿಂಸಾತ್ಮಕವಾಗಿರಬೇಕು ಹಾಗೂ ಇದು ಒಂದು ಹಂತಕ್ಕೆ ಸೀಮಿತವಾಗಿರಬೇಕು. ಅದನ್ನು ಹೊರತುಪಡಿಸಿ ನಿಸರ್ಗದ ಮೇಲೆ ಯಾವಾಗ ತನ್ನ ಯಾಜಮಾನ್ಯವನ್ನು ಸ್ಥಾಪಿಸಲು ಮನುಷ್ಯ ಪ್ರಯತ್ನಿಸುತ್ತಾನೋ ಅಂದಿನಿಂದಲೇ ಹಿಂಸೆಯಿಂದ ಕೂಡಿದ ಪರಿಸರದ ಅವನತಿ ಪ್ರಾರಂಭವಾಗುತ್ತದೆ. ಆ ಮೂಲಕ ಮಾನವ ಸಮಾಜದ ಅವನತಿಗೂ ಕಾರಣವಾಗುತ್ತದೆ ಎಂದು ತೇಜಸ್ವಿ ಕಥನ ಎಚ್ಚರಿಸುತ್ತದೆ. "ಈ ಕಾಡುಗಳನ್ನೂ, ಕಾಡುಪ್ರಾಣಿಗಳನ್ನು ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾನು ಹೊಂದಿರುವ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನು, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ." (ಪರಿಸರದ ಕಥೆ, ೨೦೦೪, ಪುಟ-೦೨) ಎಂದು ತೇಜಸ್ವಿ ಕಥನ ವಿಷಾಧಿಸುತ್ತದೆ. ಪರಿಸರದ ನಾಶದಿಂದ ನಮ್ಮ ಮುಂದಿನ ಪೀಳಿಗೆ ಕಳೆದುಕೊಳ್ಳಬಹುದಾದ ಈ ನೆಲದ ರೋಮಾಂಚಕ ಅನುಭವಗಳ ಕುರಿತ ವಿಷಾದವನ್ನು ಸಹಾ ವ್ಯಕ್ತಪಡಿಸುತ್ತದೆ. ಇದು ಕೇವಲ ನೈಸರ್ಗಿಕ ಪರಿಸರದ ಅವನತಿ ಮಾತ್ರವಲ್ಲ, ಸಾಮಾಜಿಕ ಪರಿಸರದ ಅವನತಿಯನ್ನೇ ಸೂಚಿಸುತ್ತದೆ. ಹಾಗಾಗಿ ನಿಸರ್ಗ ಮತ್ತು ಮಾನವ ಪರಿಸರದ ನಡುವಿನ ಕೊಡು-ಕೊಳ್ಳುವಿಕೆಯ ಸಂಬಂಧ ಪ್ರಜ್ಞಾಪೂರ್ವಕವಾಗಿರಬೇಕು ಎಂದು ತೇಜಸ್ವಿ ಕಥನ ಎಚ್ಚರಿಸುತ್ತದೆ.

ಮಾನವನ ಹಿಡಿತಗಳು ಅತಿಯಾದಾಗ ಅದಕ್ಕೆ ಪ್ರತಿಯಾಗಿ ನಿಸರ್ಗ ಆ ಹಿಡಿತಗಳನ್ನು ಕಾಲಕಾಲಕ್ಕೆ ಛಿದ್ರಗೊಳಿಸುತ್ತಲೇ ಇರುತ್ತದೆ. ಹಾಗಂತ ತೇಜಸ್ವಿಯವರನ್ನು ಪರಿಸರ

ವಿಜ್ಞಾನಿಗಳೆಂದೂ, ಅವರ ಸಾಹಿತ್ಯವನ್ನು ಪರಿಸರ ಸಾಹಿತ್ಯವೆಂದೂ ಕರೆಯುವ, ನೋಡುವ ಧೋರಣೆಗಳನ್ನು ಅವರ ಕಥನ ಕ್ರಮವು ಒಪ್ಪುವುದಿಲ್ಲ. ಈ ಬಗೆಯ ಚಿಂತನೆಯಿಂದ ಒಂದು ಕಲಾಕೃತಿಗೆ ಸರಿಯಾದ ನ್ಯಾಯ ಒದಗಿಸಿದಂತಾಗುವುದಿಲ್ಲ. ಸಾಹಿತ್ಯವನ್ನು ಯಾವುದೋ ಒಂದು ತತ್ವಕ್ಕೆ, ಸಿದ್ಧಾಂತಕ್ಕೆ, ಪುರಾಣ ಪ್ರಸಂಗಗಳಿಗೆ ಅಳವಡಿಸಿ ನೋಡುವ ವಿಮರ್ಶಾ ಕ್ರಮವನ್ನು ಸಹಾ ತೇಜಸ್ವಿಯವರ ಕಥನ ನಿರಾಕರಿಸುತ್ತದೆ. ಇದನ್ನು ಚಂದ್ರಶೇಖರ ನಂಗಲಿಯವರಿಗೆ ಬರೆದ ಪತ್ರದ ಮೂಲಕ ತೇಜಸ್ವಿಯವರೇ ಸ್ಪಷ್ಟಪಡಿಸುತ್ತಾರೆ. ತೇಜಸ್ವಿ ಸಾಹಿತ್ಯ ಒಂದೇ ಬಾರಿಗೆ ಅಥವಾ ಏಕಕಾಲಕ್ಕೆ ಭೂಮಂಡಲದ ಎಲ್ಲಾ ಚರಾಚರಗಳನ್ನು ಕುರಿತು ಮಾತನಾಡುವ ಸಾಧ್ಯತೆಗಳನ್ನು ತೋರುತ್ತದೆ. ಯಾವುದೋ ಒಂದು ತತ್ವ, ಸಿದ್ಧಾಂತಕ್ಕೆ ತನ್ನನ್ನು ತಾನು ಸೀಮಿತಗೊಳಿಸಿಕೊಳ್ಳದೆ ಸ್ಥಳೀಯ ಬದುಕಿನ ಜೊತೆಗೆ ಪ್ರಪಂಚದ ಇನ್ನಾವುದೋ ಮೂಲೆಯ ಬದುಕನ್ನು ಸಮೀಕರಿಸಿ ಮಾತನಾಡುವ ಶಕ್ತಿ ಅವರ ಸಾಹಿತ್ಯಕ್ಕಿದೆ. ಹಾಗಾಗಿ ಅವರ ಕಥನದ ಪರಿಸರ ಚಿಂತನೆ ಸಾಮಾಜಿಕ ಚಿಂತನೆಯೇ ಆಗಿದೆ. ಈ ಕಾರಣಗಳಿಂದಾಗಿ ತೇಜಸ್ವಿಯವರ ಸಾಹಿತ್ಯದಲ್ಲಿನ ಪರಿಸರ ಕಾಳಜಿಯ ಹುಡುಕಾಟವು ಸಾಮಾಜಿಕ ಕಾಳಜಿಯ ಅಧ್ಯಯನವೇ ಆಗುತ್ತದೆ.

ತೇಜಸ್ವಿಯವರ ಪ್ರಾರಂಭದ ಕಥನದಲ್ಲಿ ಪರಿಸರದ ಹಿಡಿತಗಳಿಂದ ಮನುಷ್ಯ ಬಿಡುಗಡೆಗೊಳ್ಳಲು ತವಕಿಸುವ, ನಿರಂತರ ಪ್ರಯತ್ನಿಸುವ ಚಿತ್ರಣಗಳು ಮೂಡಿಬಂದರೆ ಕರ್ವಾಲೋ ಹಾಗೂ ಕರ್ವಾಲೋತ್ತರ ಸಾಹಿತ್ಯದಲ್ಲಿ ಮನುಷ್ಯನಿಂದ, ಅವನ ಹಿಡಿತಗಳಿಂದ ನೈಸರ್ಗಿಕ ಪರಿಸರ ಬಿಡುಗಡೆಗೊಳ್ಳುವ ಚಿತ್ರಣಗಳನ್ನು ಕಾಣಬಹುದು. ಅವರ ಪ್ರಾರಂಭದ ಕಥಾ ಸಂಕಲನ ಹುಲಿಯೂರಿನ ಸರಹದ್ದು ಮತ್ತು ನಿಗೂಢ ಮನುಷ್ಯರು ಕೃತಿಗಳಲ್ಲಿ ಮನುಷ್ಯ ತಾನಿರುವ ಪರಿಸರಕ್ಕೆ ಪರಕೀಯವಾಗಿ ಕಾಣುತ್ತಾನೆ. ಅದರ ನಿಗೂಢತೆಯನ್ನು ಅರಿಯದೆ ಅದರಿಂದ ಬಿಡುಗಡೆಗೊಳ್ಳುವುದು ಜೀವನದ ಮಹತ್ ಸಾಧನೆಯೆಂದೇ ಭಾವಿಸುತ್ತಾನೆ. ಇದು ನಾಗರೀಕನಾದವನು ಪರಿಸರವನ್ನು ನೋಡುವ ದೃಷ್ಟಿಕೋನವನ್ನು ಅನಾವರಣಗೊಳಿಸುತ್ತದೆ. ಈ ನಾಗರೀಕ ಶಿಕ್ಷಣ ಪಡೆದವನಿಗೆ ನಿಸರ್ಗ ಬಂಧನವಾಗಿ ಕಾಣುತ್ತದೆ. ಈ ಬಂಧನದ ಭಾವನೆ ಮತ್ತು ಭಯ ಅವನನ್ನು ತಾನು ನಿಂತಿರುವ ನೆಲದಿಂದ ಪರಕೀಯನನ್ನಾಗಿಸಿ ನಿರ್ಜೀವಗೊಳಿಸುತ್ತದೆ. ಅದರಿಂದ ಬಿಡುಗಡೆ ಪಡೆಯಲು ಅವನು ಸದಾ ಯತ್ನಿಸುತ್ತಿರುತ್ತಾನೆ. ಇದಕ್ಕೆ ಕಾರಣ ನಾಗರೀಕ ಎನಿಸಿಕೊಂಡವನು ತಾನು ಶಿಕ್ಷಣದ ಮೂಲಕ ಪಡೆದ ಎರವಲು ವಿಚಾರಗಳನ್ನು ನಿಸರ್ಗದೊಂದಿಗೆ ಸಮೀಕರಿಸಿ ನೋಡುತ್ತಿರುತ್ತಾನೆ. ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳನ್ನು ಸಹಜವಾಗಿ ಗಮನಿಸದೇ, ಸ್ವೀಕರಿಸದೇ, ಅದರೊಳಗೊಂದಾಗಿ ಬದುಕದೆ ತನ್ನ ಎರವಲು ಸಿದ್ಧಾಂತಗಳನ್ನು ನಿಸರ್ಗದಲ್ಲಿ ಹುಡುಕುತ್ತಿರುತ್ತಾನೆ. ಹಾಗಾಗಿ ಅವನಿಗೆ ತನ್ನ ಸುತ್ತಲಿನ ಸ್ಥಳೀಯ ಪರಿಸರ ಉಸಿರುಗಟ್ಟಿಸುತ್ತದೆ ಮತ್ತು ಪರಕೀಯತೆಯ ಅನುಭವವನ್ನು

ಉಂಟುಮಾಡುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಸ್ಥಳೀಯ ಪರಿಸರದ ಜನಕ್ಕೆ ಈ ಪರಕೀಯತೆ ಮತ್ತು ಬಂಧನದ ಮನಃಸ್ಥಿತಿ ಕಾಡುವುದಿಲ್ಲ. ಅವರು ಅದನ್ನು ಸಹಜವೆಂಬಂತೆ ತಿಳಿಯುತ್ತಾರೆ. ಇದು ಸ್ಥಳೀಯ ಜೀವಿಗಳು ಮತ್ತು ಹೊರಗಡೆಯಿಂದ ಬಂದ ಅಥವಾ ಆಧುನಿಕ ಶಿಕ್ಷಣ ಪಡೆದು ಬಂದ ಜನತೆಯು ತಮ್ಮ ಪಾರಂಪರಿಕ ಪರಿಸರವನ್ನು ನೋಡುವ ದೃಷ್ಟಿಕೋನಗಳಲ್ಲಿನ ವ್ಯತ್ಯಾಸಗಳನ್ನು ತಿಳಿಸುತ್ತದೆ.

ನಾಗರೀಕ ಪ್ರಪಂಚದ ಮನುಷ್ಯನಿಗೆ ಪರಿಸರ ಮಾತ್ರವಲ್ಲ ಆ ಪರಿಸರದ ಜನರೂ, ಅವರ ಬದುಕೂ ಸಹ ನಿಗೂಢವಾಗಿಯೂ, ವಿಚಿತ್ರವಾಗಿಯೂ ಕಾಣುತ್ತದೆ. ಇದಕ್ಕೆ ಕಾರಣ ಅವನು ಹೊರಗಿನ ಆಲೋಚನೆಗಳ ಮೂಲಕ ತನ್ನ ಸುತ್ತಲಿನ ಪರಿಸರವನ್ನು ನೋಡುವುದು ಮತ್ತು ಅಲ್ಲಿನವನಾಗುವ ಅವಕಾಶಗಳನ್ನು ನಿರಾಕರಿಸುವುದೇ ಆಗಿದೆ. ನಿಗೂಢ ಮನುಷ್ಯರು ಕಾದಂಬರಿಯ ರಂಗಪ್ಪ, ಜಗನ್ನಾಥ ಹಾಗೂ ಗೋಪಾಲಯ್ಯನವರಿಗೆ ಅವರು ಪ್ರವೇಶಿಸಿದ ಕಾಡು, ಬೆಟ್ಟ ಎಲ್ಲವೂ ನಿಗೂಢವಾಗಿ ಕಂಡು, ಅಲ್ಲಿಂದ ಬಿಡುಗಡೆಗೊಳ್ಳಲು ತವಕಿಸಿದರೆ ಅಲ್ಲಿಯೇ ಬದುಕುತ್ತಿರುವ ಗೋಪಾಲಯ್ಯನ ಆಳುಮಕ್ಕಳಾದ ಮರಸರ, ಕಾಂಪ್ರ, ಕುಳುಪರಿಗೆ ಅದು ಸಹಜವೆಂಬಂತೆ ಭಾಸವಾಗುತ್ತದೆ. ಅವರಿಗೆ ಅದು ನಿಗೂಢ ಹಾಗೂ ಬಂಧನವೆನಿಸುವುದೇ ಇಲ್ಲ. ಅಲ್ಲಿಂದ ಬಿಡುಗಡೆಯಾಗುವ ಕುರಿತು ಯಾವ ಅವಸರವೂ ಅವರಲ್ಲಿ ಕಾಣುವುದಿಲ್ಲ. ಅಲ್ಲಿನ ಪರಿಸರ ಅವರಿಗೆ ಯಾವ ತೊಡಕುಗಳನ್ನೂ, ಸಮಸ್ಯೆಯನ್ನೂ ತಂದೊಡ್ಡುವುದಿಲ್ಲ. ರಂಗಪ್ಪ, ಜಗನ್ನಾಥರಿಗೆ ಅಲ್ಲಿನ ನೈಸರ್ಗಿಕ ಪರಿಸರದ ಜೊತೆಗೆ ಅಲ್ಲಿನ ಜನರೂ ಅರ್ಥವಾಗದ ನಿಗೂಢ ಜೀವಿಗಳಾಗಿ ಕಾಣುತ್ತಾರೆ. ಇವರು ಮಾನವರೇ ಎಂಬ ಅನುಮಾನ ಮೂಡುತ್ತದೆ. ಈ ನಾಗರೀಕ ವ್ಯಕ್ತಿಗಳಿಗೆ ಸ್ಥಳೀಯರ ಮಾತು, ನಡೆ, ವರ್ತನೆಗಳು, ತಂಟೆ-ತಕರಾರುಗಳು ಬಹುದೊಡ್ಡ ವಿಸ್ಮಯವನ್ನುಂಟು ಮಾಡುತ್ತವೆ. ಹೆಚ್ಚು ಮಾತನಾಡದ ಗೋಪಾಲಯ್ಯ, ಮಾತೇ ಆಡದ ಶಾರಿ, ವಿಚಿತ್ರವಾಗಿ ವರ್ತಿಸುವ ಯಾವುದೋ ಕಾಲದ ಮಾನವರಂತೆ ಕಾಣುವ ಮರಸರ, ಕುಳುಪ, ಕಾಂಪ್ರ, ಲೋರಿ ಹಾಗೂ ಅವರ ಆಚರಣೆಗಳು, ನಂಬಿಕೆಗಳು ಎಂದೂ ಅರ್ಥವಾಗದ ನಿಗೂಢವಾಗಿ ಕಾಣುತ್ತವೆ. ಗೋಪಾಲಯ್ಯ ಹೊರಗಿನವನಾಗಿದ್ದರೂ ಅವನು ಆ ಪರಿಸರವನ್ನು ಸಹಜವೆಂಬಂತೆ ಸ್ವೀಕರಿಸುತ್ತಿರುವುದರ ಪ್ರಯತ್ನದ ಕಾರಣ ಅವನಿಗೆ ರಂಗಪ್ಪ ಮತ್ತು ಜಗನ್ನಾಥರಂತೆ ತೀವ್ರಗತಿಯ ಪರಕೀಯತೆ, ಅನಾಥ ಹಾಗೂ ಬಂಧನದ ಭಾವನೆ ಕಾಡುವುದಿಲ್ಲ. ಗೋಪಾಲಯ್ಯ ಆ ಪರಿಸರದವನೇ ಆಗಿಬಿಡುವ ನಡೆಯಲ್ಲಿರುತ್ತಾನೆ. ಕಾದಂಬರಿಯ ಅಂತ್ಯದಲ್ಲಿ ಅವನು ಅಲ್ಲಿಯೇ ಉಳಿದುಬಿಡುವುದು ಅಲ್ಲಿನ ಪರಿಸರದವನಾಗಿರುವ ಸಂಕೇತವೇ ಆಗಿದೆ.

ತೇಜಸ್ವಿಯವರ ಕಥನಗಳು ಮನುಷ್ಯರ ನಿಗೂಢತೆಯನ್ನು ಚಿತ್ರಿಸುವುದರೊಂದಿಗೆ ಪ್ರಕೃತಿಯ ನಿಗೂಢತೆಯನ್ನು ಹಿಡಿದಿಡಲು ಪ್ರಯತ್ನಿಸುತ್ತವೆ. ಜಗನ್ನಾಥ ಮತ್ತು ರಂಗಪ್ಪ ಇವರಿಬ್ಬರ ಪ್ರವೇಶ ಆಧುನಿಕತೆಯ ಪ್ರವೇಶದ ಸಂಕೇತದಂತೆ ಕಾಣುತ್ತದೆ. ಸ್ಥಳೀಯ ಪರಿಸರಕ್ಕೆ ಅಪರಿಚಿತರಾದ ಜಗನ್ನಾಥ ಮತ್ತು ರಂಗಪ್ಪರಿಗೆ ಕಾರು ಕೆಟ್ಟು ನಿಲ್ಲುವುದು ಅನಿರೀಕ್ಷಿತ ಅಘಾತವನ್ನುಂಟು ಮಾಡುತ್ತದೆ. ಅಲ್ಲಿನ ಜನ, ಅವರ ಮಾತು, ವರ್ತನೆ ಮತ್ತು ವಿಚಿತ್ರವಾಗಿ ವರ್ತಿಸುವ ವಾತಾವರಣ ಎಲ್ಲವೂ ಇವರ ಅಂಕೆಗೆ ಸಿಗದ ನಿಗೂಢವಾಗಿ ಕಾಣುತ್ತದೆ. ಲಟಾರಿ ಕಾರನ್ನು ಕೆಸರಿನಿಂದ ಎತ್ತಲಾರದೆ, ಆ ಊರಿನಿಂದ ಮುಂದಕ್ಕೆ ಹೋಗುವ ರಸ್ತೆಯಿಲ್ಲದೆ ತೊಳಲಾಡುವ ಅವರಿಗೆ ಪ್ರಾಚೀನ ಮಾನವರಂತೆ ಕಾಣುವ ಅಲ್ಲಿನ ಜನ ವಿಚಿತ್ರವಾಗಿ ವರ್ತಿಸುವ ಅಲ್ಲಿನ ವಾತಾವರಣ ಅವರಲ್ಲಿನ ಭಯ ಆತಂಕಗಳಿಗೆ ಪೋಷಕಾಂಶಗಳಾಗಿ ಇನ್ನಷ್ಟು ಪರಕೀಯತೆ ಕಾಡುತ್ತದೆ. ಇಡೀ ಪರಿಸರ ಜಡ ಪ್ರಪಂಚವಾಗಿ ಗೋಚರವಾಗುತ್ತದೆ. ಇದೇ ರೀತಿಯ ಪರಕೀಯತೆ, ಬಿಡುಗಡೆಯ ಹಂಬಲ ಹುಲಿಯೂರಿನ ಸರಹದ್ದು ಕಥೆಯ ಸೋಮುವಿಗೂ, ಅಬಚೂರಿನ ಪೋಸ್ಟಾಫೀಸು ಕಥೆಯ ಬೋಬಣ್ಣನಿಗೂ ಕಾಡುತ್ತದೆ. ಉಸಿರುಗಟ್ಟಿಸುವ ವಾತಾವರಣದ ಜೊತೆಗೆ ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಒಂದೇ ಸಮನೆ ಸುರಿಯುತ್ತಿರುವ ಮಳೆ, ಸರಿಯುತ್ತಿರುವ ಗಿರಿ, ಸರಿಯದ ಕಾರು ಹೆದರಿಕೆಯನ್ನುಂಟು ಮಾಡುತ್ತವೆ. ಪರಸ್ಪರ ಮನುಷ್ಯ-ಮನುಷ್ಯರನ್ನೇ ಅರ್ಥ ಮಾಡಿಕೊಳ್ಳಲಾಗದ ಈ ನಾಗರೀಕ ಜೀವಿಗಳಿಗೆ ನಿಸರ್ಗದ ಜಡಿಮಳೆ, ಸರಿಯುತ್ತಿರುವ ಉಗ್ರಗಿರಿ ಮತ್ತಷ್ಟು ಹೆದರಿಕೆಯನ್ನುಂಟು ಮಾಡುತ್ತವೆ. ಈ ಎಲ್ಲಾ ಚಿರನಿಗೂಢವನ್ನು ಒಡೆಯಲಾರದ ಅಸಹಾಯಕತೆ ಅವರನ್ನು ಕಾಡುತ್ತದೆ.ಇದರ ಜೊತೆಗೆ ದೂರನಿಂತು ಅರ್ಥಮಾಡಿಕೊಳ್ಳಲಾಗದ ಅಸಹನೆ, ಒಳಹೊಕ್ಕು ನೋಡಲೂ ಸಾಧ್ಯವಾಗದ ಅಸಹಾಯಕ ಸ್ಥಿತಿ ಅವರ ಪ್ರಯತ್ನಗಳ ವಿಫಲತೆಗೆ ಸಾಕ್ಷಿಯಾಗಿದೆ.

ಇಡೀ ಕಾದಂಬರಿಯಲ್ಲಿ ನಿಗೂಢತೆ ಮುಖ್ಯ ಧಾತುವಾಗಿ ಬಂದು ಪರಿಸರ ಮಾನವನ ಹಿಡಿತಕ್ಕೆ, ಅಂಕೆಗೆ ಸಿಗದ ನಿಗೂಢ ಶಕ್ತಿಯನ್ನು ಹೊಂದಿದೆ ಎಂಬುದರ ಸಂಕೇತದಂತೆ ಮೂಡಿ ಬಂದಿದೆ. ಹಾಗೆಯೇ ಬದುಕನ್ನು ಹಾಗೂ ಪರಿಸರವನ್ನು ವ್ಯವಹಾರಿಕ ದೃಷ್ಟಿಯಿಂದ ನೋಡುವ ನಾಗರೀಕ ಪ್ರಪಂಚಕ್ಕೆ ಅದು ಅರ್ಥವಾಗದ, ಹಿಡಿತಕ್ಕೆ ಸಿಗದ ಮಾಂತ್ರಿಕ ಶಕ್ತಿಯಾಗಿ ಗೋಚರವಾಗುತ್ತದೆ. ಆದರೆ ಸ್ಥಳೀಯ ಜನಸಮುದಾಯಕ್ಕೆ ಇಡೀ ಪರಿಸರ ಬದುಕಿನ ಅವಿಭಾಜ್ಯ ಅಂಗವಾಗಿರುತ್ತದೆ. ಹಾಗಾಗಿ ಅವರಿಗೆ ಈ ನಿಸರ್ಗ ಮತ್ತು ಅದರ ವ್ಯಾಪಾರಗಳು ನಿಗೂಢ ಹಾಗೂ ವಿಚಿತ್ರ ಎನಿಸುವುದಿಲ್ಲ. ಇಡೀ ಕಾದಂಬರಿ ಮನುಷ್ಯನ ಅಕ್ಷರ ಜ್ಞಾನ ಮತ್ತು ನಾಗರೀಕ ಪ್ರಜ್ಞೆಯಿಂದ ಪರಿಸರವನ್ನು ಅರ್ಥೈಸುವಲ್ಲಿ, ಹಿಡಿತಕ್ಕೆ ಪಡೆಯುವಲ್ಲಿ ವಿಫಲವಾಗುವುದನ್ನು ಸಾಬೀತುಪಡಿಸುತ್ತಾ ಹೋಗುತ್ತದೆ. ಈ ಅಕ್ಷರ ಜ್ಞಾನದ ನಾಗರೀಕ ಪ್ರಜೆಗಳು ಎಲ್ಲವನ್ನು

ಅರ್ಥಮಾಡಿಕೊಂಡಿದ್ದೇವೆ ಎಂಬ ಭ್ರಮೆಯಲ್ಲಿ ಮುಳುಗಿ ಪರಿಸರದ ಬದಲಾವಣೆಗಳಿಗೆ ಯತ್ನಿಸುತ್ತಾರೆ. ಅಂತಹ ಎಲ್ಲಾ ಪ್ರಯತ್ನಗಳನ್ನು ಪರಿಸರ ಹೇಗೆ ಛಿದ್ರಗೊಳಿಸುತ್ತದೆ ಹಾಗೂ ವಿಫಲವಾಗಿಸುತ್ತ; ಪ್ರಯತ್ನಿಸಿದವರನ್ನು ಪರಕೀಯರನ್ನಾಗಿಸುತ್ತದೆ ಎಂಬುದನ್ನು ಕಾದಂಬರಿ ಕಟ್ಟಿಕೊಡುತ್ತದೆ.

ಪರಿಸರಕ್ಕೆ ಪರಕೀಯನಾಗಿ ನಿಂತವನಿಗೆ ಮನುಷ್ಯನನ್ನೂ ಒಳಗೊಂಡಂತೆ, ನಿಸರ್ಗದಲ್ಲಿ ಕಾಣುವುದು ಒಂದು ಜಡತ್ವದ ಸ್ಥಿತಿ ಮಾತ್ರ. "ಚಲಿಸಲಾರದ ಕಾರು, ನಿಲ್ಲಲಾರದ ಮಳೆ, ಒಬ್ಬರಿಗೊಬ್ಬರು ಅರ್ಥವಾಗದ, ತೆರೆದುಕೊಳ್ಳಲಾರದ ಜನ, ಕಾಂಪ್ರ, ಮರಸರ, ಕುಳುಪ ಮುಂತಾದ ಅನಾಗರೀಕ ವಿಚಿತ್ರ ಜಗತ್ತು, ಎತ್ತೆತ್ತ ತಿರುಗಿದರೂ ಕಾಣುವ ಉಗ್ರಗಿರಿ, ಮಾತಿಲ್ಲದ ಶಾರಿ –ಇವೆಲ್ಲವೂ ಬೇಸರ, ಜಡಬಿದ್ದ ಚಲನರಹಿತ ಸ್ಥಿತಿಯನ್ನೇ ಹೇಳುತ್ತವೆ." (ಶಶಿಕಲ ಎಚ್., ಏಕ–ಅನೇಕ, ೨೦೦೫, ಪುಟ–೧೩೨) ಕಾದಂಬರಿಯ ನಿರೂಪಣೆಯು ರಂಗಪ್ಪನ ಪ್ರಜ್ಞೆಯ ಮೂಲಕ ನಿರೂಪಿಸಲಾಗಿದೆ. ಹಾಗಾಗಿ ಕಾದಂಬರಿಯ ತುಂಬಾ ಜಡತೆಯ ಚಿತ್ರಣ ಅಗಾಧವಾಗಿದೆ. ಅಂದರೆ ನಾಗರೀಕ ಸಮಾಜ ಪರಿಸರವನ್ನು ಅರ್ಥ ಮಾಡಿಕೊಳ್ಳುವುದನ್ನೂ, ತಮ್ಮಿಚ್ಚೆಗೆ ತಕ್ಕಂತೆ ಅದನ್ನು ಬದಲಿಸುವ ಪ್ರಯತ್ನವನ್ನು ಬಿಟ್ಟು ಅದರೊಂದಿಗೆ ಸಹಜೀವನ ನಡೆಸುವುದನ್ನು ರೂಢಿಸಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ತೇಜಸ್ವಿ ಕಥನ ಪ್ರತಿಪಾದಿಸುತ್ತದೆ. ಅರ್ಥಮಾಡಿಕೊಳ್ಳಲು ಎಷ್ಟೇ ಯತ್ನಿಸಿದರೂ ಅದು ವಿಫಲತೆಯ ಹಾದಿ ಹಿಡಿಯುವ, ಭ್ರಮನಿರಸನಗೊಳ್ಳುವುದನ್ನು ಕಾದಂಬರಿ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದೆ. ಈ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದ ಹಿಡಿತಗಳಿಂದ ಬಿಡುಗಡೆಗೊಳ್ಳಲು ಯತ್ನಿಸುವ ಸೋಮು ಹುಲಿಯೂರಿನ ನೈಸರ್ಗಿಕ ಪರಿಸರದ ಜೊತೆಗೆ ಅಲ್ಲಿನ ಸಾಮಾಜಿಕ ಪರಿಸರಗಳ ಹಿಂಸೆಗೆ ಒಳಗಾದಂತೆ ಭಾವಿಸುತ್ತಾನೆ. ತಂದೆ–ತಾಯಿ ಬಂಧು–ಬಳಗಕ್ಕಿಂತ ಅವನ ಬಿಡುಗಡೆಯೇ ಮುಖ್ಯವಾಗಿ ಅವನಿಗೆ ತೋರುತ್ತದೆ. ಅವನು ಬೇರೆ ಜಾತಿಯ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಲು ಬಯಸುವುದು ಆಕೆಯ ಮೇಲಿನ ಪ್ರೀತಿಯಿಂದಲ್ಲ, ಬಿಡುಗಡೆಗೊಳ್ಳುವ ಹಾದಿಯಾಗಿ. "ನಾನು ನಳಿನಾಕ್ಷಿಯನ್ನು ಪ್ರೀತಿಸೋದಕ್ಕೂ ಇದಕ್ಕೂ ಏನು ಸಂಬಂಧ? ತಾಯ್ಗಂಡನಂತೆ! ಥತ್ ಈ ಅಪ್ಪ ಅಮ್ಮ ಈ ಕ್ಷಣ ಸತ್ತರೂ ನನಗೇನಿಲ್ಲ. ಅಯ್ಯೋ ಈ ಮನೆಯ ಒಲವಿನ ಸರಹದ್ದಿನಿಂದ ಆಚೆ ಹೋಗುವುದೆಂತು? ನನ್ನ ಮಲಮೂತ್ರಾದಿ ಪ್ರವೃತ್ತಿಗಳೂ ಅಪ್ಪನ ಆಜ್ಞೆಯಂತೆಯೇ ಆಗುತ್ತಿವೆಯೇನೋ! ಇನ್ನು ಇಲ್ಲಿ ತನಗೇ ಒಂದು ಪ್ರೀತಿಸುವ ಹಕ್ಕಿದೆ ಎನ್ನುವುದರಲ್ಲಿ ಅರ್ಥವಿಲ್ಲ... ಹುಲಿಯೂರಿನ ಸರಹದ್ದಿನಿಂದ ಪಾರಾಗಲೇಬೇಕು. ಅಯ್ಯೋ ನನ್ನ ನಳಿನಾಕ್ಷಿಯನ್ನು ನಾನು ಪ್ರೀತಿಸುತ್ತೇನೆ ನಿಜ. ಆದರೆ ಅವಳಿಗೆ ಅಂಥ ಪ್ರೇಮ ಇದ್ದರೆ ನನ್ನೊಡನೆ ಬರಲಿ. ಬಂಧು. ಬಾಂಧವರ ವೃತ್ತವನ್ನು ಕಿತ್ತೊಗೆಯುವುದು

ಅವಳ ಹಣೆಬರಹ. ಹೋಗಬೇಕು. ದೂರ, ಈ ಹುಲಿಯೂರಿನಿಂದ ದೂರ, ನಾನು ದುಡಿದು ಬದುಕುವಂಥ ಜಾಗ ಎಲ್ಲೋ ಇದ್ದೇ ಇರಬೇಕು" (ಹುಲಿಯೂರಿನ ಸರಹದ್ದು, ೨೦೦೪, ಪುಟ-೩೬) ಹೀಗೆ ತೇಜಸ್ವಿಯವರ ಪ್ರಾರಂಭದ ಕಥನಗಳು ನಿಸರ್ಗ ಹಾಗೂ ಸಾಮಾಜಿಕ ಪರಿಸರಗಳಿಂದ ಮನುಷ್ಯನು ಬಿಡುಗಡೆಗಾಗಿ ನಡೆಸುವ ಸಂಘರ್ಷಗಳನ್ನು ಕಾಣಿಸುತ್ತವೆ. ಮಾನವ ಯಾವುದಾವುದೋ ಬಂಧನಗಳಲ್ಲಿ ಸಿಲುಕಿಕೊಂಡಂತೆ, ಅವುಗಳಿಂದ ಬಿಡುಗಡೆಗೊಳ್ಳದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲದ ಮಾನಸಿಕ ತುಮುಲಗಳಲ್ಲಿ ತೊಳಲಾಡುವ ಚಿತ್ರಣಗಳುಬರುತ್ತವೆ. ಸ್ವಾತಂತ್ರ್ಯ ನಂತರದ ಭಾರತೀಯ ಸಮಾಜದ ವಿದ್ಯಾವಂತ ಸಮುದಾಯ ಎದುರಿಸುತ್ತಿದ್ದ ಸಾಮಾನ್ಯ ಸಂಗತಿಗಳು ಇವು. ಅದು ತೇಜಸ್ವಿಯವರ ಕಥನ ಸಾಹಿತ್ಯದಲ್ಲಿಯೂ ಕೂಡ ಸಹಜವೆಂಬಂತೆ ಕಂಡುಬರುತ್ತದೆ.

ನಿಗೂಢ ಮನುಷ್ಯರು ಕಾದಂಬರಿಯ ಪಾತ್ರಗಳಂತೆ ಹುಲಿಯೂರಿನ ಸರಹದ್ದು ಕಥೆಯಲ್ಲಿ ಸೋಮು ಬದುಕುತ್ತಿದ್ದ ಸಮಾಜದ ಜನ ನಿಗೂಢ ಮನುಷ್ಯರಂತೆ ವಿಚಿತ್ರವಾಗಿ ಕಾಣುವುದಿಲ್ಲ. ಆದರೆ ಸೋಮು ಆ ವಿಚಿತ್ರತೆಯನ್ನು, ನಿಗೂಢವನ್ನು ಅಲ್ಲಿನ ಸಾಮಾಜಿಕ ಪರಿಸರದ ಕೌಟುಂಬಿಕ ಸಂಬಂಧಗಳು ಹಾಗೂ ನಿಸರ್ಗದ ಮೇಲೆ ಆರೋಪಿಸಿಕೊಂಡು ಬಿಡುಗಡೆಗೊಳ್ಳಲು ಪ್ರಯತ್ನಿಸುತ್ತಾನೆ. ಪ್ರಕ್ಷುಬ್ಧ ಮನಸ್ಥಿತಿಯ ಆಧುನಿಕ ಶಿಕ್ಷಣ ಪಡೆದ ಮಂದಿ ಯಾವುದ್ಯಾವುದೋ ಕೊರತೆಗಳನ್ನು ತಮ್ಮಲ್ಲಿ ಕಂಡುಕೊಂಡೊ, ಇತರರ ಮೇಲೆ ಆರೋಪಿಸಿಯೋ ಅವುಗಳಿಂದ ತಪ್ಪಿಸಿಕೊಳ್ಳಲು ಸದಾ ಒಂದಿಲ್ಲೊಂದು ಪ್ರಯತ್ನದಲ್ಲಿ ತೊಡಗಿರುತ್ತಾರೆ. ಸ್ಥಳೀಯ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದಿಂದ ಬಿಡುಗಡೆಗೊಳ್ಳುವುದೇ ತನ್ನ ಪ್ರಕ್ಷುಬ್ಧ ಮನಸ್ಥಿತಿಯಿಂದ ಪಾರಾಗಲು ಇರುವ ಏಕೈಕ ಮಾರ್ಗ ಎಂದು ಭಾವಿಸುತ್ತಾರೆ.

ತೇಜಸ್ವಿಯವರ ಪರಿಸರದ ಕಥೆ ಸಂಕಲನದ 'ಎಂಕ್ಟನ ಪುಂಗಿ' ಕಥೆಯಲ್ಲಿ ಹಾವುಗೊಲ್ಲರ ಎಂಕ್ಟ ಹಗರೆ ಸಂತೆಯಲ್ಲಿ ತನ್ನ ನಿತ್ಯ ಕಾಯಕವಾದ ಹಾವಾಡಿಸುವ ಕೆಲಸದಲ್ಲಿ ತೊಡಗಿದ್ದಾಗ ಬೇಲೂರಿಗೆ ಪ್ರವಾಸಕ್ಕೆ ಬಂದಿದ್ದ ಫೋಟೋಗ್ರಾಫರ್ ಹಾವಾಡಿಸುವ ಎಂಕ್ಟನ ಫೋಟೋ ತೆಗೆಯಬೇಕೆಂದೂ, ಅದಕ್ಕೆ ಹಣ ಕೊಡುವುದಾಗಿಯೂ ಹೇಳುತ್ತಾನೆ. ಇದಕ್ಕೆ ಒಪ್ಪಿ ಎಂಕ್ಟ ದಾಸರ ಹಾವನ್ನು ಮೈಮೇಲೆ ಬಿಟ್ಟುಕೊಳ್ಳುತ್ತಾನೆ. ಹಾವು ಅವನ ಮೈಮೇಲೆ ಹರಿದಾಡುತ್ತಾ ಅವನನ್ನು ಸುತ್ತಿಕೊಂಡು ಉಕ್ಕಿನ ಹಿಡಿತದಲ್ಲಿ ಸಿಕ್ಕಿಸಿಕೊಂಡುಬಿಡುತ್ತದೆ. ಅದರ ಬಿಗಿಹಿಡಿತದಲ್ಲಿ ಸಿಕ್ಕಿಹಾಕಿಕೊಂಡ ಎಕ್ಟನು ನೆಲಕ್ಕೆ ಬಿದ್ದು ಹೊರಳಾಡುತ್ತಿದ್ದರೂ ಜನರಿಗೆ ಅದು ಹಾವಿನ ಹಿಡಿತದಿಂದ ಎಂಬುದು ತಿಳಿಯುವುದಿಲ್ಲ. ಉಸಿರಾಡಲು ಕಷ್ಟವಾಗಿ, ಕಣ್ಣು ಕತ್ತಲು ಬಂದು ಸಾಯುವ ಸ್ಥಿತಿಯಲ್ಲಿದ್ದ ಅವನು ತಪ್ಪಿಸಿಕೊಳ್ಳಲು ಯತ್ನಿಸಿ ಸಾಧ್ಯವಾಗದೆ, ಕೊನೆಯ ಪ್ರಯತ್ನವಾಗಿ ತನ್ನ ಸೊಂಟದಲ್ಲಿದ್ದ ಚೂರಿಯಿಂದ ಹಾವಿನ ಹೊಟ್ಟೆಯನ್ನು ಸೀಳಿ ಆ ಹಾವಿನ

ಹಿಡಿತದಿಂದ ಬಿಡುಗಡೆಗೊಳ್ಳುತ್ತಾನೆ. ಇದು ನಾಗರೀಕನೆನಿಸಿಕೊಂಡ ಮನುಷ್ಯ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರವನ್ನು ದಾಸರ ಹಾವಿನ ಹಿಡಿತದಂತೆ ನಮ್ಮನ್ನು ಬಂಧಿಸಿರುವ ಉಸಿರುಗಟ್ಟಿಸಿರುವ ವ್ಯವಸ್ಥೆ ಎಂದು ಭಾವಿಸುವುದು ವ್ಯಕ್ತಿ ಪ್ರಜ್ಞೆಯ ಸಂಕೇತವಾಗಿದೆ. ಈ ಬಗೆಯ ಹಿಡಿತಗಳಿಂದ ಬಿಡುಗಡೆಗೊಳ್ಳಲು ಯತ್ನಿಸುವ ವ್ಯಕ್ತಿಪ್ರಜ್ಞೆಯ ಚಿಂತನೆಗಳು ತೇಜಸ್ವಿಯವರ ಪ್ರಾರಂಭದ ಕಥನಗಳಲ್ಲಿ ಹೆಚ್ಚಾಗಿಯೇ ಕಾಣುತ್ತವೆ.

ಹೀಗೆ ಹೊರಗಿನ ಎರವಲು ಆಲೋಚನೆಗಳು ಮತ್ತು ಲಾಭದ ದೃಷ್ಟಿಯ ಮೂಲಕ ಸ್ಥಳೀಯ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರವನ್ನು ನೋಡುವುದರಿಂದ, ಸ್ಥಳೀಯ ಪರಿಸರದಲ್ಲಿ ಬದಲಾವಣೆಗಳನ್ನು ಬಯಸುವುದರಿಂದ ಸಂಘರ್ಷಗಳುಂಟಾಗಿ ತೀವ್ರತರವಾದ ಪರಕೀಯತೆ ಕಾಡುತ್ತದೆ. ಹುಲಿಯೂರಿನ ಸೋಮು, ಅಬಚೂರಿನ ಬೋಬಣ್ಣ, ನಿಗೂಢ ಮನುಷ್ಯರು ಕಥೆಯ ರಂಗಪ್ಪ, ಜಗನ್ನಾಥ ಇದೇ ಬಗೆಯ ಪರಕೀಯತೆಯಿಂದ ನರಳುತ್ತಾರೆ. ಇದಕ್ಕೆ ಕಾರಣ ಅವರು ತನ್ನ ಸುತ್ತಲಿನ ಅಥವಾ ತಾನು ಬದುಕುತ್ತಿರುವ ಪರಿಸರವನ್ನು ತನ್ನ ಅಂಕೆಯಲ್ಲಿ ಹಿಡಿದಿಡಲು, ನಿಯಂತ್ರಿಸಲು ಪ್ರಯತ್ನಿಸುತ್ತಾರೆ. ಆದರೆ ಇದೇ ಬಗೆಯಲ್ಲಿ ಸ್ಥಳೀಯ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರವನ್ನು ಹೊರಗಿನಿಂದ ಪ್ರವೇಶಿಸುವ ಗೋಪಾಲಯ್ಯ, ಶಾರಿ, ಕರ್ವಾಲೋ, ಕುಬಿ, ರಫಿ–ಜಯಂತಿ, ಸುರೇಶ–ಗೌರಿಯರಿಗೆ ಈ ಬಗೆಯ ಪರಕೀಯತೆ ಮತ್ತು ಬಂಧನದ ಭಾವನೆ ಕಾಡುವುದಿಲ್ಲ. ಏಕೆಂದರೆ ಇವರು ಸ್ಥಳಿಯತೆಯನ್ನು ನಿಯಂತ್ರಿಸಲು, ಅಂಕೆಯಲ್ಲಿಡಲು, ತಮ್ಮಧೋರಣೆಗಳಿಗೆ ತಕ್ಕಹಾಗೆ ಬದಲಿಸಲು ಪ್ರಯತ್ನಿಸುವುದಿಲ್ಲ. ಇದಕ್ಕೆ ಆ ಪರಿಸರದ ಬಗ್ಗೆ ಕುತೂಹಲವನ್ನು ಮಾತ್ರ ಬೆಳೆಸಿಕೊಂಡು, ತಮ್ಮ ಮಹತ್ವಾಕಾಂಕ್ಷೆಗಳನ್ನು ಸ್ವಯಂ ನಿಯಂತ್ರಿಸಿಕೊಳ್ಳುವುದೇ ಕಾರಣವಾಗಿದೆ. ಕರ್ವಾಲೋ ಹಾರುವ ಓತಿ ತಪ್ಪಿಸಿಕೊಂಡಾಗ ಅದರ ಬಗೆಗೆ ಪರಿತಪಿಸದೇ 'ಹೋಗಲಿ ಬಿಡಿ, ಬ್ಯಾಡ್‌ಲಕ್, ಆದರೆ ಏನೂ ಬೇಸರವಿಲ್ಲ' ಎಂದು ವಿಷಾದ ಭಾವಕ್ಕೆ ತೃಪ್ತಿಪಟ್ಟುಕೊಳ್ಳುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಕರ್ವಾಲೋ ಕಾದಂಬರಿಯ ನಿರೂಪಕ ವ್ಯವಸಾಯದಿಂದ ಲಾಭವಿಲ್ಲ ಎಂದು ತೋಟವನ್ನು ಮಾರಿ ಹೋಗಲು ನಿರ್ಧರಿಸಿ ಈ ಜಡಗೊಂಡ ಸಮಾಜದಿಂದ ಪಾರಾಗಲು ಯೋಚಿಸುತ್ತಾನೆ. "ನಾನು ತೋಟವನ್ನು ಮಾರಿ ಬೇರೇನಾದರೂ ಮಾಡಬೇಕೆಂದು ನಿರ್ಧರಿಸಿದ್ದೆ. ಮೊದಲನೆಯದಾಗಿ ವ್ಯವಸಾಯದಿಂದ ಲಾಭ ಬರುವುದೆಂಬ ನಂಬಿಕೆ ನನ್ನೊಳಗೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಕಟ್ಟುತ್ತಾ ಹೆಚ್ಚೂ ಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರೂ ಪರಿವರ್ತಿತರಾಗಿದ್ದರು. ಹಾಕಿದ ಲೆಕ್ಕಾಚಾರ ಒಂದೂ ಗುರಿ ತಲುಪುತ್ತಲೇ ಇರಲಿಲ್ಲ. ಅಕಸ್ಮಾತ್ ಕೊಂಚ ಕರಾರುವಕ್ಕಾಗಿ ಬೆಳೆ ಬಂದರೂ ಆ ವೇಳೆಗಾಗಲೇ ಹಣದುಬ್ಬರ. ಏರಿದ ಸಾಮಾನಿನ

ಬೆಲೆಗಳು, ವಿಷದಂತೆ ಏರುತ್ತಿದ್ದ ಬ್ಯಾಂಕ್ ಬಡ್ಡಿ ದರ, ಅದನ್ನು ಕಬಳಿಸಿ ಬಿಡುತ್ತಿದ್ದವು. ಹೀಗಾಗಿ ಸದಾ ಮುಂದೆ ಸಿಕ್ಕುವ ಲಾಭದ ಮರೀಚಿಕೆಯ ಹಿಂದೆ ಆರ್ಥಿಕ ಬಿಕ್ಕಟ್ಟಿನ ಮರಳುಗಾಡಿನಲ್ಲಿ ಸಾಗುತ್ತಿದೆ." (ಕರ್ವಾಲೋ, ೨೦೦೪, ಪುಟ-೨೪ & ೨೫) ಆದರೆ ಕರ್ವಾಲೋ ಮುಖಾಂತರ ತನ್ನ ಸುತ್ತಲಿನ ಸಮಾಜವನ್ನು 'ಕಣ್ಣು ತೆರೆದು ನೋಡುವ' ದೃಷ್ಟಿಕೋನಗಳನ್ನು ಬೆಳೆಸಿಕೊಂಡು, ಮಂದಣ್ಣ, ಕರಿಯಪ್ಪ, ಹಾವುಗೊಲ್ಲರ ಎಂಕ್ಟರಂತೆ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಲಾಭದ ನೆಲೆಯಿಂದ ನೋಡುವುದರಿಂದ ಪಾರಾಗುತ್ತಾನೆ. ಸಹಜವಾಗಿ ಬದುಕುವ, ಬದುಕನ್ನು ಅನುಭವಿಸುವ ಮೂಲಕ ನಿಸರ್ಗವನ್ನು ಗ್ರಹಿಸುವ ನೆಲೆಯಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತಾನೆ. ಕೃಷಿ ಎನ್ನುವುದು ಲಾಭವಲ್ಲ. ಅದೊಂದು ಬದುಕು ಮತ್ತು ಅನುಭವ ಎಂದು ಭಾವಿಸಿ ಪರಕೀಯತೆಯ ಭಾವದಿಂದ ಮುಕ್ತನಾಗುತ್ತಾನೆ. ರಫಿ ಮತ್ತು ಜಯಂತಿ ಪರಿಸರನಾಶದ ಮೂಲಕ ಅವನತಿಯಾಗುತ್ತಿರುವ ಭ್ರಷ್ಟಗೊಂಡ, ಜಾತೀವಾದಿ, ಮತಾಂಧ ಸಮಾಜವಾದ ಕೆಸರೂರಿನಿಂದ ಪಾರಾಗಲು, ಇಡೀ ವ್ಯವಸ್ಥೆ ವಿರೋಧಿಸುತ್ತಿರುವ ಅಂತರ್ಧರ್ಮೀಯ ಪ್ರೀತಿಯಲ್ಲಿ ವೈಯಕ್ತಿಕ ನೆಲೆಯಲ್ಲಿ ಬಿಡುಗಡೆಯ ದಾರಿಗಳನ್ನು ಶೋಧಿಸಿಕೊಳ್ಳುತ್ತಾರೆ. ಸುರೇಶ ಮತ್ತು ಗೌರಿ ತಮ್ಮನ್ನು ಮಾರಿಕೊಂಡು ಇನ್ನಾರದೋ ನಿರ್ಧಾರಗಳಿಗೆ ತಕ್ಕಂತೆ ಕೀ ಕೊಡುವ ಬೊಂಬೆಗಳಂತೆ, ಯಂತ್ರಗಳಂತೆ ಬದುಕುತ್ತಿರುವ ದೇವಪುರದ ಜನರಂತೆ ಹಣದ ಜುಗಾರಿಯಲ್ಲಿ ಕೊಚ್ಚಿಹೋಗಲು ಇಚ್ಚಿಸುವುದಿಲ್ಲ. ಈ ವ್ಯವಸ್ಥೆಯ ಬಗ್ಗೆ ಬರೀ ಕುತೂಹಲವನ್ನು ಮಾತ್ರ ಉಳಿಸಿಕೊಂಡು, ತಮ್ಮಿಷ್ಟದಂತೆ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಆ ಮೂಲಕ ತಮ್ಮ ಸುತ್ತಲಿನ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದ ಕಾರಣದಿಂದ ಕಾಡಬಹುದಾದ ಅನಾಥಭಾವದಿಂದ, ಪರಕೀಯತೆಯಿಂದ ತಪ್ಪಿಸಿಕೊಳ್ಳುತ್ತಾರೆ.

ಅವನತಿ ಕಥೆಯ ಸೂರಾಚಾರಿ, ಕುಬಿ ಮತ್ತು ಇಯಾಲ ಕಥೆಯ ಡಾ. ಕುಬಿ, ನಿಗೂಢ ಮನುಷ್ಯರು ಕಥೆಯ ಗೋಪಾಲಯ್ಯ ಇವರುಗಳು ಪ್ರಾರಂಭದಲ್ಲಿ ಈ ಸಾಮಾಜಿಕ ಪರಿಸರ ಜಡಗೊಂಡ ಬಗ್ಗೆ, ತಾವೂ ಜಡಗೊಂಡ ವ್ಯವಸ್ಥೆಯಲ್ಲಿಯೇ ಕೊಳೆಯುತ್ತಿರುವ ಬಗ್ಗೆ ಚಿಂತಿಸಿ ಬಿಡುಗಡೆಗೊಳ್ಳಲು ಪ್ರಯತ್ನಿಸಿ ಸೋಲುತ್ತಾರೆ. ಡಾ.ಕುಬಿಯ ಮಾನವೀಯ ಕಾಳಜಿ ಜಡಗೊಂಡ ಸಮಾಜಕ್ಕೆ ಅರ್ಥವಾಗುವುದಿಲ್ಲ. ಅವನು ಯಾವುದನ್ನು ಮೌಢ್ಯ ಎನ್ನುತ್ತಾನೆಯೋ ಆ ಮೌಢ್ಯಕ್ಕೆ ಅವನನ್ನೇ ನೇತುಹಾಕಿ ನೋಡುವುದು ಅವನನ್ನು ಮತ್ತಷ್ಟು ಹಿಂಸೆಗೆ ದೂಡುತ್ತದೆ. ಸೂರಾಚಾರಿ ಚಲನೆಯನ್ನೇ ಕಳೆದುಕೊಂಡ ಸಮಾಜದಿಂದ ಬಿಡುಗಡೆಗೊಳ್ಳಲು ವಿಫಲವಾಗಿ, ಗೌರಿಯ ಸೌಂದರ್ಯವನ್ನೇ ನಾಶಮಾಡಿಬಿಡುವ ಜಡವ್ಯಕ್ತಿಯಾಗಿ ಬದಲಾಗುವುದು ದುರಂತ. ತೇಜಸ್ವಿಯವರ ನವ್ಯ ಚಿಂತನೆಯಿಂದ ಮುಕ್ತಗೊಂಡ ಹೊಸದಿಗಂತದೆಡೆಗಿನ ಸಾಹಿತ್ಯವು

ಮನುಷ್ಯ ಬಿಡುಗಡೆಗೊಳ್ಳಬೇಕಾದುದು ಈ ಪರಿಸರದಿಂದ ಅಲ್ಲ, ಬಿಡುಗಡೆಯ ಭ್ರಮೆಯಿಂದ ಕೂಡಿರುವ ಪ್ರಕ್ಷುಬ್ಧ ಮನಃಸ್ಥಿತಿಯಿಂದ ಎಂಬುದನ್ನು ಕಂಡುಕೊಳ್ಳುತ್ತದೆ. ಹಾಗೆಯೇ ಈ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದಿಂದ ಬಿಡುಗಡೆಗೊಳ್ಳುವ ಮನುಷ್ಯನ ಪ್ರಯತ್ನದ ವಿಫಲತೆಯ ಅರಿವು ಮೂಡಿಸುತ್ತದೆ. ಈ ಭೂಗೋಳದಲ್ಲಿ ಬಿಡುಗಡೆಯೆಂಬುದೇ ಇಲ್ಲ, ಇರುವುದೆಲ್ಲವೂ ಸಂಘರ್ಷ, ಸಾಮರಸ್ಯ ಮತ್ತು ಸಹಬಾಳ್ವೆ ಎಂಬುದನ್ನು ಅವರ ಹೊಸದಿಗಂತದೆಡೆಗಿನ ಕಥನ ಮನಗಾಣಿಸುತ್ತದೆ.

ನಮ್ಮ ಅನೇಕ ಕೊರತೆ ಹಾಗೂ ಸಮಸ್ಯೆಗಳಿಗೆ ನಮ್ಮ ಸುತ್ತಮುತ್ತಲಿನ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳು, ಪಾರಂಪರಿಕ ಜ್ಞಾನವೇ ಪರಿಹಾರಗಳನ್ನು ಒದಗಿಸುತ್ತಿರುತ್ತವೆ. ಆದರೆ ಇವುಗಳನ್ನು ನಾವು ಬಂಧನ ಹಾಗೂ ಸಮಸ್ಯೆಗಳೆಂದೇ ಭಾವಿಸಿ ನಿಸರ್ಗ ಮತ್ತು ಸಾಮಾಜಿಕ ಪರಿಸರಗಳನ್ನು ಅವನತಿಯ ಹಾದಿಗೆ ದೂಡಿ ನಾವು ಸಹಾ ಅದೇ ಹಾದಿಯನ್ನು ತುಳಿಯುತ್ತಿದ್ದೇವೆ ಎಂಬ ಸತ್ಯವನ್ನೂ, ತಿಳುವಳಿಕೆಯನ್ನೂ ಅವರ ಪರಿಸರದ ಕಥೆ, ಕರ್ವಾಲೋ, ಜುಗಾರಿಕ್ರಾಸ್, ಚಿದಂಬರ ರಹಸ್ಯ ಕೃತಿಗಳು ನೀಡುತ್ತವೆ. ಮೂಲಿಕೆ ಬಳ್ಳಿಯ ಸುತ್ತ ಎಂಬ ಕಥೆಯು ಪಾರಂಪರಿಕ ಜ್ಞಾನದಿಂದ ದೂರವಾಗುತ್ತಿರುವ ಸಂಗತಿಯನ್ನು ತೆರೆದಿಡುತ್ತದೆ. ಪಾರಂಪರಿಕವಾಗಿ ಬಂದ ವೈದ್ಯಕೀಯ ಚಿಕಿತ್ಸಾ ವಿಧಾನವು ಸಂವಹನ ಮತ್ತು ಹೃದಯ ವೈಶಾಲ್ಯತೆಯ ಕೊರತೆಯಿಂದ ದಿನಗಳೆದಂತೆ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳುತ್ತಿರುವುದು ದುರಂತವೇ ಸರಿ. ಇದಕ್ಕೆ ಆಧುನಿಕತೆ ಮತ್ತು ಆಧುನಿಕ ಮನಃಸ್ಥಿತಿ ಒಂದು ರೀತಿಯಲ್ಲಿ ಕಾರಣವಾದರೆ ನಮ್ಮ ಪರಿಸರದಲ್ಲಿನ ಗಿಡಮೂಲಿಕೆಗಳ ಬಗೆಗಿನ ಅಜ್ಞಾನ ಮತ್ತೊಂದು ರೀತಿಯಲ್ಲಿ ಕಾರಣವೆಂಬ ಸಂಗತಿಯು ಮೂಲಿಕೆ ಬಳ್ಳಿಯ ಸುತ್ತ ಕಥೆಯ ಮೂಲಕ ಮನದಟ್ಟಾಗುತ್ತದೆ. ಪರಿಸರವನ್ನು ಉಳಿಸಿಕೊಳ್ಳುವುದರ ಜೊತೆಗೆ ಅದರ ಬಗೆಗಿನ ಅರಿವು ಹೆಚ್ಚಿಸಿಕೊಳ್ಳುವುದರ ಅಗತ್ಯವನ್ನು ಈ ಕಥೆ ವಿವರಿಸುತ್ತದೆ. ಪರಿಸರ ಮನುಷ್ಯನನ್ನೂ ಸೇರಿದಂತೆ ಯಾರನ್ನೂ ನಿರಾಕರಿಸುವುದಿಲ್ಲ. ದೂರ ತಳ್ಳುವುದಿಲ್ಲ. ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು ಸಲಹುತ್ತದೆ. ಅಗತ್ಯಗಳನ್ನು ಪೂರೈಸುತ್ತದೆ. ಆದರೆ ಅದನ್ನು ಬಳಸಿಕೊಂಡ ಮಾನವ ತನ್ನ ಅತಿಯಾದ ಹಸ್ತಕ್ಷೇಪದಿಂದ ಅದನ್ನು ಅವನತಿಯೆಡೆಗೇ ನೂಕುತ್ತಿದ್ದಾನೆ ಹಾಗೂ ತಾನೂ ಸಹಾ ಅದೇ ಹಾದಿಯಲ್ಲಿ ನಡೆಯುತ್ತಿದ್ದಾನೆ ಎಂದು ವಿಷಾದಿಸುವ ತೇಜಸ್ವಿಯವರ ಕಥನ ಪರಿಸರ ನಾಶಕ್ಕೆ ಆ ಮೂಲಕ ಅವನ ನಾಶಕ್ಕೆ ಮನುಷ್ಯನೇ ಕಾರಣ ಎಂದು ಅಭಿಪ್ರಾಯಪಡುತ್ತದೆ.

ಮನುಷ್ಯ ತನ್ನ ದುರಾಸೆಗಳನ್ನು ಈಡೇರಿಸಿಕೊಳ್ಳಲು ನಿಸರ್ಗದ ಮೇಲೆ ಪದೇ ಪದೇ ದಾಳಿ ನಡೆಸುತ್ತಿದ್ದಾನೆ. ಈ ದಾಳಿಯಿಂದ ಅದು ಅವನತಿಯ ಹಾದಿಯನ್ನು ಹಿಡಿದಿದೆ. ನಿಸರ್ಗ ಸ್ವಾಭಾವಿಕವಾಗಿ ಮಾನವನ ಹಲವಾರು ಅಗತ್ಯಗಳನ್ನು ಪೂರೈಸಬಲ್ಲದು. ಆದರೆ ಮನುಷ್ಯನ

ದುರಾಸೆಗಳನ್ನು ತುಂಬಲು ಅದು ಅಸಮರ್ಥವಾದಾಗ ಅವನು ಅವುಗಳನ್ನು ಕೃತಕವಾಗಿ ತಯಾರಿಸಲು/ಉತ್ಪತ್ತಿಮಾಡಲು ಪ್ರಯತ್ನಿಸುತ್ತಾನೆ. ಇದೂ ಸಹ ನಿಸರ್ಗದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಭೂಮಿಯ ಸ್ವಾಭಾವಿಕ ಫಲವತ್ತತೆ ಮನುಷ್ಯನ ದುರಾಸೆಗಳಿಗೆ ತಕ್ಕಷ್ಟು ಉತ್ಪಾದಿಸುತ್ತಿಲ್ಲ. ಹಾಗಾಗಿ ಹೆಚ್ಚು ಹೆಚ್ಚು ಉತ್ಪಾದಿಸಿ ಲಾಭಗಳಿಸುವ ಉದ್ದೇಶದಿಂದ ಭೂಮಿಯನ್ನು ರಾಸಾಯನಿಕರಣಗೊಳಿಸುವ ಪ್ರಕ್ರಿಯೆ ನಮ್ಮಲ್ಲಿ ನಡೆಯುತ್ತಿದೆ. ಇದನ್ನು ಹಸಿರುಕ್ರಾಂತಿ ಎಂದೂ ಕರೆಯಲಾಗುತ್ತಿದೆ. ಈ ರಾಸಾಯನೀಕರಣದಿಂದ ಮಣ್ಣಿನ ಸಹಜ ಫಲವತ್ತತೆ ನಾಶವಾಗುತ್ತದೆ. ಅದು ನಾಶವಾದಂತೆ ಅದನ್ನೇ ಅವಲಂಬಿಸಿದ್ದ ಹಲವಾರು ಜೀವಸಂಕುಲ ನಾಶ ಹೊಂದುವ ಮೂಲಕ ಪರಿಸರ ಅಸಮತೋಲನಕ್ಕೆ ಗುರಿಯಾಗುತ್ತದೆ. ಇದೂ ಕೂಡ ನಿಸರ್ಗದೊಂದಿಗಿನ ಮನುಷ್ಯನ ಮಧ್ಯಪ್ರವೇಶವೇ ಆಗಿದೆ ಹಾಗೂ ಮಾನವ ಮತ್ತು ನಿಸರ್ಗದೊಂದಿಗಿನ ಸಂಘರ್ಷವೇ ಆಗಿದೆ. ತೇಜಸ್ವಿಯವರ ಕರ್ವಾಲೋ ಕಾದಂಬರಿಯ ಜೇನು ಸಾಕಾಣಿಕೆ ಪ್ರಕ್ರಿಯೆಯನ್ನು ಇದಕ್ಕೆ ಹೋಲಿಸಬಹುದು. ಜೇನು ನಿಸರ್ಗದಿಂದ ಸಹಜವಾಗಿ ದೊರೆಯುವ ಒಂದು ಉತ್ಪನ್ನ. ಆದರೆ ಮನುಷ್ಯ ತನ್ನ ದುರಾಸೆಗಳಿಗೆ ಒಳಗಾಗಿ ಕೃತಕವಾಗಿ ಜೇನು ತಯಾರಿಸಲು ತೊಡಗುವ ಕ್ರಿಯೆ ಜೇನುನೊಣಗಳ ವೈವಿಧ್ಯವನ್ನು ನಾಶ ಮಾಡಿದಂತೆ ಆಗುತ್ತದೆ. ನೂರಾರು ಜಾತಿಯ ಜೇನುಗಳು ಪರಿಸರದಲ್ಲಿ ಬದುಕುತ್ತಿವೆ. ಈ ಬಹುವಿಧದ ಜೇನುಗಳು ಕಾಡಿನ ಹಲವು ಜಾತಿಯ ಹೂಗಳನ್ನು ಅವಲಂಬಿಸಿವೆ. ಆದರೆ ಕೃತಕ ಜೇನು ಸಾಕಾಣಿಕೆಯಿಂದ ಕೆಲವು ಜೇನುಗಳಿಗೆ ಮಾತ್ರ ಪ್ರಾಮುಖ್ಯತೆ ಸಿಗುತ್ತದೆ ಹಾಗೂ ಅವುಗಳ ಸಹಜ ಬದುಕಿಗೆ ಅಡ್ಡಿಯನ್ನುಂಟುಮಾಡುತ್ತದೆ. ಇದು ಆ ಜೇನುನೊಣಗಳ ಅವನತಿಗೆ ಹಾದಿ ನಿರ್ಮಿಸಿದಂತಾಗುತ್ತದೆ. ಕಾಡಿನ ನಾಶದಿಂದ ಈ ಜೇನುಗಳು ಅವಲಂಬಿಸಿದ್ದ ನೂರಾರು ವಿಧದ ಹೂ ಸಸ್ಯಗಳು ನಾಶವಾಗಿ ಜೇನುಗಳ ನಾಶಕ್ಕೂ ಕಾರಣವಾಗುತ್ತದೆ. ಈ ಕೃತಕತೆ ಈಗ ಪ್ರತಿಯೊಂದಕ್ಕೂ ಅಂಟಿಕೊಂಡುಬಿಟ್ಟಿದೆ. ಹೈಬ್ರಿಡ್ ತರಕಾರಿ ಇದ್ದಂತೆ ಹೈಬ್ರಿಡ್ ಜೇನು. ಅದಕ್ಕೆ ಮೂಲಕಾರಣ ಮನುಷ್ಯನ ದುರಾಸೆಗಳು. ಇಷ್ಟೇ ಅಲ್ಲದೇ ಜೇನು ಸ್ಥಳೀಯ ಸಮುದಾಯದ ಆಹಾರ ಪದ್ಧತಿಯ ಒಂದು ಭಾಗವಾಗಿತ್ತು. ಆದರೆ ಇಂದು ಅದೊಂದು ವಾಣಿಜ್ಯೋದ್ಯಮವಾಗಿ ಬೆಳೆದು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ನಿರ್ಮಿಸಿಕೊಂಡಿದೆ. ಹಾಗಾಗಿ ಹೆಚ್ಚು ಹೆಚ್ಚು ಉತ್ಪಾದಿಸಿ ಹಣಗಳಿಸಿ ಲಾಭ ಮಾಡುವ ನಿಟ್ಟಿನಲ್ಲಿ ಜೇನು ನೊಣಗಳ ಮೇಲೆ ಮಾನವನ ನಿರಂತರ ಮಾರಣಾಂತಿಕ ದಾಳಿ ನಡೆಯುತ್ತಿದೆ. ಈ ದಾಳಿಯಿಂದಾಗಿ ಒತ್ತಡವನ್ನು ತಾಳಲಾರದ ಕೋಟ್ಯಾನುಕೋಟಿ ಮಾನವನ ಬಹುಪಯೋಗಿ ಜೇನು ನೊಣಗಳು ನಾಶ ಹೊಂದುತ್ತಿವೆ. ಇದಕ್ಕೆ ಪ್ರತಿಯಾಗಿ ಅವು ಸಹ ಪ್ರತಿರೋಧಗಳನ್ನು ಒಡ್ಡುತ್ತಿವೆ. ಜೇನು ತುಪ್ಪವನ್ನು ತೆಗೆದುಕೊಂಡು ಹೋಗುತ್ತಿದ್ದ ಕಾದಂಬರಿಯ ನಿರೂಪಕ ಮತ್ತು ಆತನಿಗೆ ಸಹಾಯ ಮಾಡಲು

ಬಂದ ಇಬ್ಬರು ಯುವಕರ ಮೇಲೆ ದಾಳಿ ಮಾಡುವುದು ಅವುಗಳ ಪ್ರತಿರೋಧಕ್ಕೆ, ಮನುಷ್ಯ ಮತ್ತು ನಿಸರ್ಗದೊಂದಿಗಿನ ಸಂಘರ್ಷಕ್ಕೆ ಸಾಕ್ಷಿಯಾಗಿದೆ. ಇಷ್ಟೇ ಅಲ್ಲ ಮಂದಣ್ಣನ ಡ್ರಮ್ಮಿನ ಸದ್ದಿಗೆ ಮಂತ್ರಿ ಮಹೋದಯರ ಮೇಲೆ ದಾಳಿ ಮಾಡುವ ಮೌ ಮೌ ದುಂಬಿಗಳ ದಾಳಿಯೂ ಸಹ ಮಾನವನ ಅತಿಕ್ರಮ ಪ್ರವೇಶದ ವಿರುದ್ಧದ ಪ್ರತಿರೋಧವನ್ನೇ ಸಂಕೇತಿಸುತ್ತದೆ.

"ಕೆಸರೂರಿನ ಸುತ್ತಲೂ ಪರ್ವತಗಳು ಒಂದರ ಹಿಂದೆ ಒಂದರಂತೆ ಒಟ್ಟಿಗೆ ಮಲಗಿದ ಬಸವನ ಮಂದೆಯ ತರ ಹಬ್ಬಿಕೊಂಡಿದ್ದವು. ದಟ್ಟ ಅರಣ್ಯ ಈ ಗುಡ್ಡಗಳನ್ನು ಕಂಬಳಿ ಹೊದಿಸಿದಂತೆ ಮುಚ್ಚಿಕೊಂಡಿತ್ತು. ಎಲ್ಲಾ ಮರಗಳೂ ಒಟ್ಟಾಗಿ ಇಡೀ ಗುಡ್ಡವೇ ಒಂದು ಭೂತಾಕಾರದ ಮರದಂತೆ ಕಾಣುತ್ತಿತ್ತು. ಸಂಜೆಯಾಗುತ್ತಲೇ ಕಡಲತ್ತಣಿಂದ ಹಾಯ್ದು ಬರುವ ತೇವದ ಹವೆ ಮಂಜಿನ ಮೋಡವಾಗಿ ಪರಿವರ್ತಿತಗೊಂಡು ಆ ಬೆಟ್ಟಗಳ ನಡುವಿನಿಂದ ಕೆಸರೂರಿನ ಮೇಲೆ ಹರಿಯುತ್ತವೆ. ಇಡಿಯ ಕೆಸರೂರನ್ನು ಒಂದು ಮಾಯಾಲೋಕವನ್ನಾಗಿ ಮಾಡುತ್ತವೆ. ಕೆಸರೂರು ಮಳೆಗಾಲದ ನಾಲ್ಕು ತಿಂಗಳು ಮಾತ್ರ ಕೆಸರೂರಷ್ಟೇ. ಆನಂತರ ಸದಾ ತಣ್ಣಗಿರುವ ನಿತ್ಯ ಹರಿದ್ವರ್ಣದ ಕಾಡಿನಿಂದ ಸುತ್ತುವರಿದಿದ್ದ ಇದು ಒಂದು ಅಪ್ಸರಲೋಕ. ಗಿರಿತಪ್ಪಲಿನ ಈ ಪುಟ್ಟ ಊರು ಕರ್ನಾಟಕದ ಸ್ವಿಡ್ಜರ್ಲೆಂಡ್." (ಚಿದಂಬರ ರಹಸ್ಯ, ೨೦೦೪, ಪುಟ-೩೪) ಇಂತಹ ಕೆಸರೂರಿನ ಸಂಪದ್ಭರಿತ ವನಸಂಪತ್ತು ಮಾನವನ ಭ್ರಷ್ಟತೆ, ದುರಾಸೆ ಹಾಗೂ ಅತಿಯಾದ ಹಸ್ತಕ್ಷೇಪ, ಆಳುವ ವರ್ಗಗಳ ಹಣದಾಹ, ಜಾಣಕುರುಡುತನ, ನಿಸರ್ಗ ನಿಯಮಕ್ಕೆ ವಿರುದ್ಧವಾದ ಕಾನೂನುಗಳ ಪರಿಣಾಮವಾಗಿ ಲಂಟಾನದ ಕಗ್ಗಾಡಾಗಿ ಪಲ್ಲಟಗೊಳ್ಳುತ್ತದೆ. ಕೆಸರೂರನ್ನು ಬಳಸಿಕೊಂಡಂತೆ ಇರುವ ಈ ಅರಣ್ಯದಲ್ಲಿ "ಕಳೆಯಂತೆ ಏಲಕ್ಕಿ ಬೆಳೆಯುತ್ತಿತ್ತು. ಇಡೀ ಪ್ರಪಂಚದಲ್ಲೇ ಹೆಸರಾಂತ ಪರಿಮಳದ ಏಲಕ್ಕಿ ಇದು. ಅದನ್ನು ಪ್ರತಿ ವರ್ಷ ಅರಣ್ಯ ಇಲಾಖೆಯವರು ಹರಾಜು ಹಾಕುತ್ತಿದ್ದರು. ಆದರೆ ಆನಂತರ ಕೆಸರೂರಿನ ರಾಜಕಾರಣಕ್ಕೆ ಹಣ ಸಾಲದೆ, ಅರಣ್ಯ ಇಲಾಖೆಯವರಿಗೆ ಲಂಚ ಸಾಲದೆ ಅವರೆಲ್ಲರ ಆಸೆಗಣ್ಣುಗಳು ಕೆಸರೂರಿನ ಅರಣ್ಯದ ಮೇಲೆ ಬಿತ್ತು. ಮಂತ್ರಿಗಳವರೆಗೂ ಹೋಗಿ ಅದನ್ನು ಹತ್ತಾರು ವರ್ಷಗಳಿಗೆ ಹರಾಜು ಕೂಗುವಂತೆ ಕಾನೂನು ತಂದರು. ಕೇರಳದಿಂದ ಬಂದ ಒಬ್ಬ ಸುಲೇಮಾನ್ ಯೂಸುಫ್ ಬ್ಯಾರಿ ಅನ್ನುವವನಿಗೆ ಕಂಟ್ರಾಕ್ಟ್ ಕೊಡಿಸಿದರು. ಅವನಿಂದ ದೊರೆತ ಥೈಲಿಗಟ್ಟಲೆ ಹಣ ನೋಡಿ ಮಂತ್ರಿಗಳಿಗೂ ಬಾಯಲ್ಲಿ ನೀರೂರಿತು. ಅದು ಮನ್ನಾ ಜಂಗ್ಲಿ. ಅದರಲ್ಲಿ ಮರ ಕಡಿಯಲೇಕೂಡದೆಂದು ಸರ್ಕಾರದ ಆಜ್ಞೆ ಇದ್ದರೂ ಏಲಕ್ಕಿ ಕೃಷಿಗೆ ಕೊಂಬೆಗಳನ್ನು ಕಡಿದು ನೆರಳು ಕೊಂಚ ಕಡಿಮೆ ಮಾಡುಬಹುದೆಂದೂ ಅದನ್ನು ಸೌದೆಗಾಗಿ ಬಿಕರಿ ಮಾಡಬಹುದೆಂದೂ ಪರ್ವಾನಗಿ ತಂದರು. ಸರಿ ಆರಂಭವಾಯ್ತು. ಸುಲೇಮಾನ್ ಯೂಸುಫ್ ಬ್ಯಾರಿ ಕೊಂಬೆ ಕಡಿಯ ಹೊರಟವನು ಕಾಂಡಗಳನ್ನೇ ಕಡಿದ. ನೂರಾರು

ವರ್ಷಗಳ ದೇಗುಲದ ಕಂಬಗಳಂತ ಹೆಮ್ಮರಗಳು ಚಿತ್ಕಾರದೊಂದಿಗೆ ನೆಲಕ್ಕುರುಳಿದವು. ಲೋಡುಗಟ್ಟಲೆ ಮರದ ದಿಮ್ಮಿಗಳು ಕೆಸರೂರಿನ ಹಾದಿಯಲ್ಲಿ ಮಂಗಳೂರು ದಿಕ್ಕು ಹಿಡಿದವು. ಕೆಸರೂರಿನ ಜನಕ್ಕೆ ವರ್ಷಾಂತರದವರೆಗೂ ಇಂದೊಂದು ಚಿರಪರಿಚಿತ ನೋಟ. ಆನಂತರ ಕಾಡಿನಡಿಯಲ್ಲಿ ಬೆಳೆದಿದ್ದ ಏಲಕ್ಕಿ ಗಿಡಗಳು ಎಲೆ ಬಾಡಿ ಬಿಸಿಲಿನ ಹೊಡೆತಕ್ಕೆ ಕ್ಷೀಣಿಸಿ ಬಹುಬೇಗ ನೆಲ ಹಿಡಿದವು. ಕಾಡು ನೆಲಸಮವಾದಲ್ಲಿ ಲಂಟಾನದ ಅಭೇದ್ಯ ಜಿಗ್ಗು ಕೋಟೆಗಟ್ಟಿ ಕೆಸರೂರನ್ನು ಸುತ್ತುವರೆಯಿತು." (ಚಿದಂಬರ ರಹಸ್ಯ, ೨೦೦೪, ಪುಟ-೩೫) ಹೀಗೆ ಮನುಷ್ಯನ ಮನಸ್ಸಿನ ಭ್ರಷ್ಟತೆ, ಹಣದಾಹ ಮತ್ತು ಅವನ ದುರಾಸೆಗಳಿಂದ ಬೃಹತ್ ಹೆಮ್ಮರಗಳಿಂದ ಸುತ್ತುವರೆದಿದ್ದ ಕೆಸರೂರು ಲಂಟಾನವೆಂಬ ಮುಳ್ಳಿನ ಉರುಳಗ್ಗದಲ್ಲಿ ಸಿಕ್ಕಿಹಾಕಿಕೊಂಡು ತನ್ನ ಅವನತಿಯನ್ನು ತಾನೇ ತಂದುಕೊಳ್ಳುತ್ತದೆ. ಮಳೆಗಾಲದಲ್ಲಿ ಮಾತ್ರ ಕೆಸರೂರಾಗುತ್ತಿದ್ದ ಈ ಊರು ನಿರಂತರ ಕೆಸರೂರಾಗುತ್ತದೆ. ಅಂತಿಮವಾಗಿ ಸುಟ್ಟು ಬೂದಿಯಾಗುತ್ತದೆ. ಇದು ನಿಸರ್ಗದೊಂದಿಗೆ ಮನುಷ್ಯನ ದುರಾಸೆ, ಅತಿಯಾದ ಹಸ್ತಕ್ಷೇಪ ಮತ್ತು ಎಲ್ಲೆಮೀರಿದ ಲೂಟಿಯ ಪರಿಣಾಮವಾಗಿ ನಿಸರ್ಗ ಮಾನವ ಸಮಾಜದ ಮೇಲೆ ತೀರಿಸಿಕೊಂಡ ಪ್ರತೀಕಾರವೇ ಆಗಿದೆ. ಮನುಷ್ಯನ ಮಧ್ಯಪ್ರವೇಶದಿಂದ ಉಂಟಾದ ಮಾನವ ನಿಸರ್ಗದೊಂದಿಗಿನ ಸಂಘರ್ಷದಲ್ಲಿ ಮಾನವ ನಿಸ್ಸಾಹಯಕನಾಗುವ ಆ ಮೂಲಕ ತನ್ನ ಅವನತಿಯನ್ನು ತಾನೇ ತಂದುಕೊಳ್ಳುವ ಎಚ್ಚರಿಕೆಯನ್ನು ತೇಜಸ್ವಿಯವರ ಕಥನ ನೀಡುತ್ತದೆ.

ಆಧುನಿಕ ನಾಗರೀಕ ಸಂಶೋಧನೆಯ ಪ್ರತಿಫಲಗಳು, ಪರಿಕರಗಳು ನಿಸರ್ಗವನ್ನು ಅವಲಂಬಿಸಿ ಅದರೊಂದಿಗೆ ಸಹಜೀವನ ನಡೆಸುವ ಮಾನವ ಸಮಾಜವನ್ನೂ ನಾಶಗೊಳಿಸುತ್ತಿರುವುದರ ಬಗ್ಗೆಯೂ ಗಮನ ಸೆಳೆಯುತ್ತದೆ. ಇಂದು ನೈಸರ್ಗಿಕ ಪರಿಸರದಲ್ಲಿ ನಾಶವಾಗದೇ ಉಳಿದಿರುವ ಅಥವಾ ನಾಶಪಡಿಸಲು ಸಾಧ್ಯವಾಗದಿರುವ ಪ್ಲಾಸ್ಟಿಕ್ ಅನೇಕ ಪ್ರಾಣಿ ಸಂಕುಲಗಳ ನಾಶಕ್ಕೆ ಕಾರಣವಾಗಿದೆ. ಈ ಪ್ಲಾಸ್ಟಿಕ್ ಪ್ರವೇಶವಾದ ಸಂದರ್ಭ, ಅದರಿಂದ ಉಂಟಾದ ಪರಿಣಾಮಗಳ ಚಿತ್ರಣವನ್ನು ಜುಗಾರಿಕ್ರಾಸ್ ಕಾದಂಬರಿಯಲ್ಲಿ ಕಾಣಬಹುದು "ನಾಗರೀಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳನೆಯ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ. ಅನೇಕ ಹಳ್ಳಿ, ಮನೆತನ, ಬುಡಕಟ್ಟುಗಳ ನಿರ್ನಾಮಕ್ಕೆ ಇದು ಕಾರಣವಾದೀತೆಂದು ಯಾರೂ ಕನಸು ಮನಸಿನಲ್ಲಿಯೂ ಊಹಿಸಿರಲಿಲ್ಲ. ಖಾಲಿ ಜಾಗಗಳ ಸಂದುಗೊಂದುಗಳೊಳಗೆಲ್ಲಾ ಹಬ್ಬಿ ಆಕ್ರಮಿಸುವ ಪಾರ್ಥೇನಿಯಮ್, ಯುಪೆಟೋರಿಯಮ್ ಕಳೆಗಳಂತೆ ಪ್ಲಾಸ್ಟಿಕ್, ಪಾಲಿಯುರಿಥೇನ್, ಪಾಲಿಎಥಲೀನ್, ಪಾಲಿಫೈಬರ್, ಪಾಲಿಮಾರ್, ಹೀಗೆ ನಾನಾ ಅವಾಂತರಗಳನ್ನೆತ್ತಿ ಮಾರುಕಟ್ಟೆಯ ಎಲ್ಲಾ ಕ್ಷೇತ್ರಗಳಿಗೆ, ಎಲ್ಲಾ ಅವಕಾಶಗಳಿಗೆ ಮುತ್ತಿಗೆ ಹಾಕಿತು." (ಜುಗಾರಿಕ್ರಾಸ್, ೨೦೦೪, ಪುಟ-೧೦)

ಹೀಗೆ ನಿಸರ್ಗದ ಸಹಜತೆಗೆ ಭಂಗತಂದ ಪ್ಲಾಸ್ಟಿಕ್ ಎಂಬ ಆಧುನಿಕತೆಯ ಬಳುವಳಿಯನ್ನು ಅಪ್ಪಿ ಮುದ್ದಾಡಿದ ಪ್ರತಿಫಲವಾಗಿ ಇಡೀ ಮಾನವ ಸಮಾಜವೇ ಅವನತಿಯನ್ನು ಕಾಣುವಂತಾಗುತ್ತದೆ. ಇದನ್ನು ಮೇದರಹಳ್ಳಿಯ ಅವಸಾನದ ಪ್ರಸಂಗದಲ್ಲಿ ಕಾಣಬಹುದು. "ಮೇದರಹಳ್ಳಿಯ ಸುತ್ತಮುತ್ತ ಎಲ್ಲಿ ನೋಡಿದರೂ ಆಯಸ್ಸು ಮುಗಿದು ಸತ್ತು ನಿಂತಿದ್ದ ದೊಡ್ಡ ದೊಡ್ಡ ರಾಕ್ಷಸಾಕಾರದ ಬಿದಿರು ಹಿಂಡಿಲುಗಳು! ಕೆಲವು ಕುಂಬಾಗಿ ಕುಸಿಯುತ್ತಿದ್ದರೆ, ಕೆಲವು ಮಳೆ ಗಾಳಿಗಳ ತುಯ್ದಾಟದಲ್ಲಿ ಅಡ್ಡಡ್ಡಲಾಗಿ ಬುಡಸಮೇತ ಮುಗುಚಿ ಬಿದ್ದಿದ್ದವು. ಮೇದರಹಳ್ಳಿಯ ಅವಸಾನವೂ ಅಷ್ಟೇ ವೇಗವಾಗಿ ಕ್ಷಿಪ್ರವಾಗಿ ಸಂಭವಿಸಿತು. ಅವರಿದ್ದ ಕಗ್ಗಾಡಿನಲ್ಲಿ ಬೇರಾವುದೇ ಹೊಟ್ಟೇ ಪಾಡಿನ ಉದ್ಯೋಗಾವಕಾಶಗಳೂ ಇಲ್ಲದೆ ಅಲ್ಲಿದ್ದವರೆಲ್ಲಾ ಹೇಳಹೆಸರಿಲ್ಲದೆ ಊರು ಬಿಟ್ಟು ಚೆಲ್ಲಾಪಿಲ್ಲಿಯಾದರು." (ಜುಗಾರಿಕ್ರಾಸ್, ೨೦೦೪, ಪುಟ-೧೨) ಸಹಜವಾಗಿ ಬೆಳೆದಿರುವ ನೈಸರ್ಗಿಕ ಪರಿಸರದ ಮೇಲೆ ಮಾನವ ತನ್ನ ಸುಖಕ್ಕಾಗಿ ಹೇರುವ ಆಧುನಿಕ ಅಭಿವೃದ್ಧಿಯ ಒತ್ತಡಗಳು, ಮಧ್ಯಪ್ರವೇಶ ಅವನನ್ನು, ಅವನು ಬದುಕುತ್ತಿರುವ ಸಮಾಜವನ್ನು ನಿರ್ನಾಮ ಮಾಡುತ್ತವೆ ಎಂಬುದನ್ನು ಈ ಪ್ರಸಂಗಗಳು ಸಾಕ್ಷೀಕರಿಸುತ್ತವೆ.

ಇಡೀ ಪರಿಸರ ಒಂದರ ಮೇಲೆ ಒಂದು ಅವಲಂಬಿಸಿ ಬದುಕುತ್ತಿದೆ. ಇಲ್ಲಿ ಒಂದು ಸಸ್ಯ, ಕೀಟದಿಂದ ಮನುಷ್ಯನವರೆಗೂ ಎಲ್ಲರೂ ಸಮಾನರೇ. ಅಂದರೆ ಎಲ್ಲರಿಗೂ ಈ ಪರಿಸರದಲ್ಲಿ ಬದುಕುವ ಅವಕಾಶವಿದೆಯಾದರೂ ಇನ್ನೊಬ್ಬರ ಮೇಲೆ ಆಕ್ರಮಣ ಮಾಡುವ, ನಿಯಂತ್ರಿಸುವ ಹಕ್ಕು ಇರುವುದಿಲ್ಲ. ಈ ಜೀವಜಾಲದ ಸರಪಳಿಯಲ್ಲಿ "ಒಂದು ಸಸ್ಯ ಅವನತಿಯ ಹಾದಿ ಹಿಡೀತೂ ಅನ್ನಿ, ಅದರಿಂದ ಬದುಕುತ್ತಿದ್ದ ಕೀಟಸ್ತೋಮ, ಅವುಗಳನ್ನೇ ಆಹಾರ ಮಾಡಿಕೊಂಡಿದ್ದ ಪಕ್ಷಿಗಳು, ಅವುಗಳಿಂದಲೇ ಬೀಜ ಪ್ರಸರಣವಾಗುತ್ತಿದ್ದ ವೃಕ್ಷಸಂಕುಲ, ಅದರ ಆಧಾರದ ಮೇಲೆ ಹೆಪ್ಪುಗಟ್ಟಿ ಮಳೆ ಸುರಿಸುವ ಮೋಡ ಮತ್ತು ಇವುಗಳೆಲ್ಲದರ ಆಧಾರದ ಮೇಲೆ ಮನುಷ್ಯ, ಇಡೀ ವಿಶ್ವ ಈ ತರ ಒಂದಕ್ಕೊಂದಕ್ಕೆ ಬಿಗಿದುಕೊಂಡು ಸಮತೋಲನದಲ್ಲಿ ನಿಂತಿರೋ ಬಲೆ." (ಚಿದಂಬರ ರಹಸ್ಯ, ೨೦೦೪, ಪುಟ-೫೪) ಮಾಯಾಲೋಕದ ನಿರೂಪಕ ಹಕ್ಕಿಪಿಕ್ಕಿಯವರು ಹುಂಡುಕೋಳಿಗಳನ್ನು, ಬೆಳ್ಳಕ್ಕಿಗಳನ್ನು ಕೊಲ್ಲುವುದನ್ನು ವಿರೋಧಿಸುವುದು, ಅವರೊಂದಿಗೆ ಜಗಳವಾಡುವುದು, ಅವರ ಮೇಲೆ ಫಾರೆಸ್ಟ್ ಗಾರ್ಡ್ ನಾಗರಾಜನಿಗೆ ದೂರು ನೀಡುವುದು ಹಾಗೂ ಚಿದಂಬರ ರಹಸ್ಯದಲ್ಲಿ ಸಂಶೋಧನಾ ಕೇಂದ್ರದ ಕೀಟಶಾಸ್ತ್ರಜ್ಞ ಸಿದ್ಧಪ್ಪ ಗೋಸಾಯಿಗಳ ಮೇಲೆ ಕೆಂಡ ಕಾರುವುದು, ಅವರು ಕೆಸರೂರಿನಲ್ಲಿ ಉಳಿಯುವುದನ್ನು ವಿರೋಧಿಸುವುದು ಇದೇ ಕಾರಣಕ್ಕೆ. "ಕೆಸರೂರಿನಲ್ಲಿ ಇವರಿಂದ ಆಗುತ್ತಿದ್ದ ಪರಿಸರ ವಿನಾಶದ ಬಗ್ಗೆ ಜೋಗಿಹಾಳರಲ್ಲಿ ಅನೇಕ ಮುಕಾರುಗಳನ್ನು ಮಾಡಿದ್ದ. ಈ ಗೋಸಾಯಿಗಳು ಸಂಶೋಧನ ಕೇಂದ್ರದ ಬಳಿ ಇದ್ದ ಕಾಡಿನ ಹಕ್ಕಿಗಳನ್ನೂ

ಕಾಡುಕೋಳಿಗಳನ್ನೂ ಹಿಡಿದು ಮಿಲ್ಟ್ರಿಹೋಟೆಲುಗಳಿಗೆ ಮಾರುತ್ತಿದ್ದರು. ಜೊತೆಗೆ ಎಲ್ಲಿಗೋ ರಫ್ತು ಮಾಡಲು ಕೆಸರೂರಿನ ಆಸುಪಾಸಿನಲ್ಲಿದ್ದ ದೊಡ್ಡ ಜಾತಿ ಕಪ್ಪೆಗಳನ್ನೆಲ್ಲಾ ಹಿಡಿದು ತೊಡೆ ಕತ್ತರಿಸಿ ಸಾಗಿಸತೊಡಗಿದರು. ಇವರು ಕೆಸರೂರಿನ ಪರಿಸರಕ್ಕೆ ಮಾಡುತ್ತಿದ್ದ ಹಾನಿಯನ್ನು ಸಿದ್ಧಪ್ಪ ಸವಿವರವಾಗಿ ಅಭ್ಯಾಸ ಮಾಡಿ ಇವರನ್ನು ಮೊದಲು ಇಲ್ಲಿಂದ ಓಡಿಸಬೇಕೆಂದು ಅರಣ್ಯಾಧಿಕಾರಿಗಳಿಗೆ, ಪೊಲೀಸು ಇಲಾಖೆಯವರಿಗೆ ದೂರು ಕೊಟ್ಟಿದ್ದ." (ಚಿದಂಬರ ರಹಸ್ಯ, ೨೦೦೪, ಪುಟ-೧೧೧) ಹೀಗೆ ಸಮತೋಲನವನ್ನು ಕಾಯ್ದುಕೊಂಡು ಬದುಕುತ್ತಿರುವ ಜೀವಜಾಲವನ್ನು ನಿರ್ನಾಮ ಮಾಡುತ್ತಿರುವುದರ ಹಾಗೂ ಜೀವಜಾಲದ ಸರಪಳಿಯ ಕೊಂಡಿಗಳು ಕಳಚುತ್ತಿರುವುದರ ಬಗ್ಗೆ, ಇದರಿಂದ ಎದುರಾಗಬಹುದಾದ ಅಪಾಯಗಳ ಬಗ್ಗೆ ತೇಜಸ್ವಿ ಕಥನ ಓದುಗರ ಗಮನವನ್ನು ಸೆಳೆಯುತ್ತದೆ. ಇವು ಕೇವಲ ಪ್ರಾಣಿ ಪಕ್ಷಿಗಳ ನಾಶವನ್ನೋ, ಮೇದರಹಳ್ಳಿಯ ಅವಸಾನವನ್ನೋ, ಕುಶಲಕಲೆಗಳ ನಾಶವನ್ನೋ, ಏಲಕ್ಕಿ ನಿರ್ನಾಮವನ್ನೋ, ಕೆಸರೂರಿನ ನಾಶವನ್ನೋ ಸಂಕೇತಿಸುತ್ತಿಲ್ಲ. ಇಡಿಯಾಗಿ ಮನುಷ್ಯನನ್ನೂ ಒಳಗೊಂಡಂತೆ ಒಟ್ಟಾರೆ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರ ನಾಶವನ್ನೇ ಸಂಕೇತಿಸುತ್ತಿವೆ. ನೈಸರ್ಗಿಕ ಪರಿಸರದ ಮೇಲೆ ಮಾನವ ನಡೆಸುವ ಹಲ್ಲೆ ಸಾಮಾಜಿಕ ಪರಿಸರದ ಮೇಲಿನ ಹಲ್ಲೆಯೇ ಆಗಿದೆ. ಹಾಗಾಗಿ ಒಂದರ ನಾಶ ಮತ್ತೊಂದರ ನಾಶಕ್ಕೆ ಕಾರಣವಾಗುತ್ತದೆ.

ಇಂದು ಸಂಶೋಧನೆಯ ದೃಷ್ಟಿಯಿಂದ ವಿಜ್ಞಾನಿಗಳು ಕಾಡನ್ನು ಸ್ವಂತ ಆಸ್ತಿಯೆಂಬಂತೆ ಬಳಸುತ್ತಿದ್ದಾರೆ. ಈ ವಿಜ್ಞಾನಿಗಳ ಅತಿಕ್ರಮ ಪ್ರವೇಶ ಪರಿಸರದ ಅಮೂಲ್ಯವಾದ ಬಹುಪಯೋಗಿ ಸಸಿ-ಮರ-ಗಿಡಗಳ ನಾಶಕ್ಕೆ ಕಾರಣವಾಗಿದೆ. ವಿಜ್ಞಾನಿಗಳ ಸಂಶೋಧನೆಗಳು ಕಾಡಿನ ಉತ್ಪನ್ನಗಳಿಂದ ಆಗಬಹುದಾದ ಲಾಭಗಳನ್ನು ಬಹಿರಂಗಗೊಳಿಸುತ್ತಿವೆ. ಇದು ಲೂಟಿಕೋರರ ಕೈಗೆ ಝಳಪಿಸುವ ಅಸ್ತ್ರಗಳನ್ನು ಕೊಟ್ಟಂತಾಗಿದೆ. ಸಂಶೋಧನೆಗಳೂ, ವಿಜ್ಞಾನಿಗಳೂ ಸಹ ಉದ್ದಿಮೆದಾರರ ಗುಲಾಮರಂತೆ, ಏಜಂಟರಂತೆ ವರ್ತಿಸುತ್ತಿರುವುದು ಸಹಾ ಪರಿಸರ ನಾಶಕ್ಕೆ ತೀವ್ರವಾದ ಚಾಲನೆಯನ್ನು ನೀಡಿದಂತಾಗಿದೆ. ಆಧುನಿಕ ತಂತ್ರಜ್ಞಾನ ಹಾಗೂ ಶಿಕ್ಷಣಗಳು ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರದ ಪ್ರಗತಿಗಿಂತ ಅವನತಿಗೆ ಕಾರಣವಾಗುತ್ತಿರುವುದು ದುರಂತವೇ ಸರಿ. ಇಂತಹ ದುರಂತವನ್ನು ತಪ್ಪಿಸುವ ನೆಲೆಗಳನ್ನು ಹುಡುಕಲು ತೇಜಸ್ವಿಯವರ ಕಥನ ಸಾಹಿತ್ಯ ಪ್ರಯತ್ನಿಸುತ್ತದೆ.

ಒಂದು ಕಡೆ ಮನುಷ್ಯನ ದುರಾಸೆಗಳನ್ನು ಈಡೇರಿಸಲಾಗದೇ ನೈಸರ್ಗಿಕ ಪರಿಸರ ಅವನತಿಯಾಗುತ್ತಿದ್ದರೆ. ಮತ್ತೊಂದೆಡೆ ಸ್ವಾರ್ಥ, ಜಾತಿಯತೆ, ಹಣದಾಹದ ಜುಗಾರಿಯಲ್ಲಿ ಸಿಕ್ಕಿಕೊಂಡು ಸಾಮಾಜಿಕ ಪರಿಸರ ನಾಶ ಹೊಂದುತ್ತಿದೆ. ಚಿದಂಬರ ರಹಸ್ಯದ ಪರಿಸರದ ನಾಶ, ಮನುಷ್ಯನ ನಾಶ ಬೇರೆ ಬೇರೆಯಲ್ಲ. ಮನುಷ್ಯನ ಮನಸ್ಸಿನ ದುರಾಸೆ ಪರಿಸರದ ಮಾಲಿನ್ಯತೆಗೂ,

ಪರಿಸರದ ಮಾಲಿನ್ಯತೆ ಸಮಾಜದ ಅವನತಿಗೂ ಕಾರಣವಾಗುತ್ತದೆ. ಹಾಗಾಗಿ ಒಂದರ ಚಲನೆ ಮತ್ತು ಅವನತಿ ಮತ್ತೊಂದರ ಚಲನೆ ಮತ್ತು ಅವನತಿಗೆ ಕಾರಣವಾಗುತ್ತದೆ. ಈ ನೈಸರ್ಗಿಕ ಪರಿಸರ ಹಾಗೂ ಸಾಮಾಜಿಕ ಪರಿಸರಗಳು ತಮ್ಮ ಅವನತಿಗಾಗಲಿ ಬೆಳವಣಿಗೆಗಾಗಲಿ ತಾವೇ ಕಾರಣವಾಗುತ್ತಿರುವ ತಿಳುವಳಿಕೆಯನ್ನು ತೇಜಸ್ವಿ ಕಥನ ಸಾಹಿತ್ಯ ನೀಡುತ್ತದೆ ಮತ್ತು ಎಚ್ಚರಿಸುತ್ತದೆ.

ನಾಗರೀಕ ಶಿಕ್ಷಣ ಪಡೆದ ಮಂದಿ ನಮ್ಮೊಳಗಿರುವ ಪರಂಪರೆಯ ಸಾಂಪ್ರದಾಯಿಕ ಪ್ರಜ್ಞೆಯ ಪರಿಸರದಿಂದ ಬಿಡಿಸಿಕೊಳ್ಳುವ ತವಕದಲ್ಲಿ ಬರಮಾಡಿಕೊಂಡಿರುವ ಮಹತ್ವಾಕಾಂಕ್ಷೆಗಳ ಪ್ರತಿಫಲವಾಗಿ ಅದರ ವೇಗಕ್ಕೆ ಚಲಿಸಲಾಗದೆ ಪರಕೀಯತೆಯನ್ನು ಅನುಭವಿಸುತ್ತಿದ್ದಾರೆ. ಈ ಪರಕೀಯತೆಯ ಪರಿಣಾಮವಾಗಿ ಸಿಕ್ಕ ಸಿಕ್ಕ ಕಾಳದಂಧೆಯ ಹಾದಿಗಳನ್ನು ಹಿಡಿದಿದ್ದಾರೆ. ಪರಕೀಯತೆಯನ್ನು ಮೀರುವಲ್ಲಿ ರಫಿ–ಜಯಂತಿ ವೈಯಕ್ತಿಕ ನೆಲೆಯಲ್ಲಿ ಹಾದಿಗಳನ್ನು ಕಂಡುಕೊಂಡರೆ, ಗೌರಿ ಮತ್ತು ಸುರೇಶ ದೇವಪುರದ ಹಣದಾಹದಿಂದ ಕೂಡಿರುವ ಕಾಳಸಂತೆಯ ಜನರಂತೆ ತಮ್ಮನ್ನು ತಾವು ಕಾಣದ ವ್ಯಕ್ತಿಗೆ ಮಾರಿಕೊಂಡು ವ್ಯಕ್ತಿತ್ವಗಳೇ ಇಲ್ಲವಾಗುವ ಅಪಾಯಗಳಿಂದ ಗಾನ್‌ಕೇಸ್‌ಗಳಾಗುವ ಮೂಲಕ ಪಾರಾಗುತ್ತಾರೆ. ಇವರು ದೇವಪುರದ ಸಾಮಾಜಿಕ ಪರಿಸರದ ಕುರಿತು ಎಷ್ಟೇ ಕುತೂಹಲಿಗಳಾದರೂ, ಅದರಿಂದ ಅಂತರ ಕಾಯ್ದುಕೊಳ್ಳುವ ಮೂಲಕ ಅದರ ಪಾತ್ರಗಳಾಗಿ ನರಳುವ ಅಪಾಯಗಳಿಂದ ತಪ್ಪಿಸಿಕೊಳ್ಳುತ್ತಾರೆ. ಹೊರಗಿನಿಂದ ಈ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಪ್ರವೇಶಿಸುವ ಕರ್ವಾಲೋ ಸ್ಥಳೀಯತೆಯ ಮೂಲಕವೇ ಹೊಸತನವನ್ನೂ, ಬಿಡುಗಡೆಯ ಹಾದಿಗಳನ್ನೂ ಕಂಡುಕೊಳ್ಳುವ ಮೂಲಕ ಎದುರಾಗಬಹುದಾದ ಪರಕೀಯತೆಯಿಂದ ತಪ್ಪಿಸಿಕೊಳ್ಳುತ್ತಾನೆ. ತೇಜಸ್ವಿಯವರ ಪ್ರಾರಂಭದಲ್ಲಿನ ನಿಗೂಢ ಮನುಷ್ಯರು, ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಸ್ವರೂಪ ಮುಂತಾದ ಕಥನಗಳು ಸ್ಥಳೀಯ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದಿಂದ ದೂರವಾಗುವುದೇ ಬಿಡುಗಡೆಯ ಮಾರ್ಗಗಳೆಂದು ಭಾವಿಸಿದರೆ, ತದನಂತರದ ಕರ್ವಾಲೋ, ಜುಗಾರಿಕ್ರಾಸ್, ಕಿರಗೂರಿನ ಗಯ್ಯಾಳಿಗಳು ಮಾಯಾಲೋಕ ಮುಂತಾದ ಕರ್ವಾಲೋತ್ತರ ಕಥನಗಳು ಬಿಡುಗಡೆಗಿಂತ ಅಲ್ಲಿಯೇ ನೆಲೆನಿಂತು, ಅಲ್ಲಿನ ಸಮಸ್ಯೆಗಳಿಗೆ ಆ ನೆಲ ಮೂಲದಿಂದಲೇ ಪರ್ಯಾಯಗಳನ್ನು ಕಂಡುಕೊಂಡು ಬದುಕುವ ಹುಡುಕಾಟಗಳನ್ನು ನಡೆಸುತ್ತವೆ.

ತೇಜಸ್ವಿ ಕಥನವು ಪರಿಸರ ಕಾಳಜಿಯ ಹಿನ್ನೆಲೆಯಲ್ಲಿ ನಿಸರ್ಗ ಮತ್ತು ಸಮಾಜವನ್ನು ಪ್ರತ್ಯೇಕವಾಗಿ ನೋಡದೆ, ನೈಸರ್ಗಿಕ ಪರಿಸರ ಜೊತೆಗೆ ನಮ್ಮ ಬದುಕನ್ನು ಆವರಿಸಿಕೊಂಡಿರುವ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ವಾಣಿಜ್ಯಾತ್ಮಕ

ನೆಲೆಗಳೆಲ್ಲವನ್ನೂ ಒಳಗೊಂಡಂತೆ ಒಟ್ಟಾರೆ ಸ್ಥಳೀಯ ಭೂಗೋಳದ ಜೀವಜಾಲ ಮತ್ತು ಜೀವಾನಾನುಭವವನ್ನು ಬಿಂಬಿಸುವುದೇ ಆಗಿರುವುದನ್ನು ಗುರ್ತಿಸುತ್ತದೆ. ಹಾಗಾಗಿ ಸಾಮಾಜಿಕ, ನೈಸರ್ಗಿಕ ಮತ್ತು ಬೌದ್ಧಿಕ ಪರಿಸರಗಳನ್ನು ಒಳಗೊಂಡ ಅಖಂಡ ಪರಿಸರ ಚಿಂತನೆ ಅವರ ಪರಿಸರ ಕಾಳಜಿಯಾಗಿದೆ. ಹಾಗೆಯೇ ನೈಸರ್ಗಿಕ ಪರಿಸರ ಹಾಗೂ ಸಾಮಾಜಿಕ ಪರಿಸರಗಳು ಬೇರೆ ಬೇರೆಯಲ್ಲ, ನಿಸರ್ಗದ ಮೇಲಿನ ಹಲ್ಲೆ, ಸಾಮಾಜಿಕ ಪರಿಸರದ ಮೇಲಿನ ಹಲ್ಲೆಯೇ ಆಗಿರುತ್ತದೆ. ಪರಿಸರದ ನಾಶ ಸಮಾಜದ ನಾಶವೇ ಆಗಿರುತ್ತದೆ; ಮಾನವ ಪರಿಸರದ ಒಳಗೆ ಒಂದಾಗಿ ತಾನೂ ಅದರ ಒಂದಂಗವೆಂಬಂತೆ ಬೆರೆತು ಸಹಬಾಳ್ವೆ ನಡೆಸುವುದೇ ಸರಿಯಾದ ಜೀವನಕ್ರಮ. ನಾನು ಎಲ್ಲವನ್ನು ತಿಳಿದಿರುವ ಜ್ಞಾನಿ, ಬಲಶಾಲಿ; ಪರಿಸರ ಮುಗ್ಧವಾದುದು ಮತ್ತು ಅದು ರಕ್ಷಣೆಗಾಗಿ ಮಾನವನ ಮಧ್ಯಪ್ರವೇಶವನ್ನು ಬಯಸುತ್ತದೆ ಎಂದು ತಿಳಿಯದೆ ಪರಿಸರದ ಒಳಗೆ ಒಂದಾಗಿ ಸಾಮರಸ್ಯದ ಜೀವನ ನಡೆಸುವುದೇ ಸರಿಯಾದ ಜೀವನಕ್ರಮವಾಗಿದೆ ಎಂಬುದು ತೇಜಸ್ವಿ ಕಥನ ನೀಡುವ ಪರಿಸರ ದರ್ಶನವಾಗಿದೆ.

ಅಧ್ಯಾಯ-೬

ತೇಜಸ್ವಿ ಕಥನ : ಜಾತಿ ಮತ್ತು ಮತೀಯ ಸಂಕಥನ

ಅಧ್ಯಾಯ-೬

ತೇಜಸ್ವಿ ಕಥನ: ಜಾತಿ ಮತ್ತು ಮತೀಯ ಸಂಕಥನ

ಪೀಠಿಕೆ.

ಭಾರತೀಯ ಸಮಾಜವನ್ನು ನಿರಂತರವಾಗಿ ಹಿಂಸೆಗೆ ದೂಡಿರುವ ಸಾಮಾಜಿಕ ಸಮಸ್ಯೆಗಳಲ್ಲಿ ಜಾತಿವಾದ ಮತ್ತು ಮತೀಯವಾದಗಳು ಪ್ರಮುಖವಾಗಿ ನಿಲ್ಲುತ್ತವೆ. ಕನ್ನಡ ಸಾಹಿತ್ಯ ಚರಿತ್ರೆಯೊಳಗೆ ಜಾತಿ ಮತ್ತು ಮುತೀಯವಾದದ ವಿರುದ್ಧ ತೀವ್ರತರವಾದ ಸಾಹಿತ್ಯಕ ಚಳುವಳಿಗಳು ನಡೆದಿವೆ. ಪಂಪ 'ಮಾನವ ಕುಲಂ ತಾನೊಂದೆ ವಲಂ' ಎಂದು ಹೇಳುವ ಮೂಲಕ ತನ್ನ ಜಾತ್ಯಾತೀತ ನಿಲುವನ್ನು ವ್ಯಕ್ತಪಡಿಸಿದರೆ, ವಚನಕಾರರಂತೂ ಜಾತಿ ಮತ್ತು ಧರ್ಮಗಳ ವಿಷವರ್ತುಲಗಳಿಂದ ಮನುಷ್ಯನನ್ನೂ, ಮನುಷ್ಯತ್ವವನ್ನೂ ಪಾರುಮಾಡಲು ಬಹುದೊಡ್ಡ ಸಾಮಾಜಿಕ ಕ್ರಾಂತಿಯನ್ನು ನಡೆಸಿರುವುದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿದೆ.

ಕಾಲದಿಂದ ಕಾಲಕ್ಕೆ ಈ ಪಿಡುಗುಗಳು ಬೇರೆ ಬೇರೆ ರೂಪಗಳನ್ನು ಪಡೆಯುತ್ತಾ, ವಿಭಿನ್ನ ಆಯಾಮಗಳಲ್ಲಿ ಕೆಲವು ಸಂದರ್ಭಗಳಲ್ಲಿ ಮೂರ್ತವಾಗಿಯೂ, ಇನ್ನು ಕೆಲವು ಸಂದರ್ಭಗಳಲ್ಲಿ ಅಮೂರ್ತವಾಗಿಯೂ ಪ್ರಬಲಗೊಳ್ಳುತ್ತಿವೆ. ಮೂಲಭೂತವಾದಿ ಮನಸ್ಥಿತಿಯುಳ್ಳವರು ಅವಕಾಶ ಸೃಷ್ಟಿಸಿಕೊಂಡು ಮುಗ್ಧ ಜನತೆಯ ಮನಸ್ಸಿಗೆ ಅಫೀಮಿನಂತ ಮತಾಂಧ ಕೊಳಕು ವಿಚಾರಗಳನ್ನು ತುಂಬುತ್ತಿರುತ್ತಾರೆ. ಹೀಗಾಗಿ ಇವುಗಳ ನಿವಾರಣೆಯ ಹಿನ್ನೆಲೆಯಲ್ಲಿ ಸಮಾಜಮುಖಿ ಚಿಂತಕರು, ಸಾಹಿತಿಗಳು ಭಿನ್ನ ಮಾದರಿಯ ತಂತ್ರಗಾರಿಕೆಗಳನ್ನು ರೂಪಿಸುತ್ತಾ ಇರಬೇಕಾಗುತ್ತದೆ.

ಜಾತಿ ಮತ್ತು ಧರ್ಮಗಳಿಂದ ಉಂಟಾಗುವ ಪ್ರತ್ಯೇಕತಾವಾದಿ ಮನೋಭಾವಗಳು ಭಾರತೀಯ ಚೇತನದ ಅಧೋಗತಿಗೆ ಮೂಲಕಾರಣ. ಪ್ರೀತಿ, ನಂಬಿಕೆ, ವಿಶ್ವಾಸ, ಸಾಹಸ, ಆನಂದವನ್ನೂ, ಪ್ರಗತಿಯ ಆಲೋಚನೆಗಳನ್ನೂ ಕೊಲ್ಲಬಲ್ಲ ಶಕ್ತಿ ಈ ಪ್ರತ್ಯೇಕತಾವಾದಿ ಮನಸ್ಥಿತಿಗಿದೆ. ಜಾತಿ ಮತ್ತು ಮತೀಯವಾದದ ಬಹುಮುಖ್ಯ ಸ್ವಭಾವವೇ ಸಮಾಜದಲ್ಲಿ ಅನ್ಯವನ್ನು ಸೃಷ್ಟಿಸುವುದು. ಈ ಅನ್ಯ ಮತ್ತು ಸ್ವಗಳ ಮೂಲಕವೇ ಸಮಾಜವನ್ನು ಒಡೆಯುವುದು. ಈ ನಿಟ್ಟಿನಲ್ಲಿ ಸಮಾಜ ಸುಧಾರಕರು, ಸಾಹಿತಿಗಳು, ಚಳುವಳಿಗಾರರು ಈ ಅನ್ಯ ಮತ್ತು ಸ್ವಗಳನ್ನು ಬೆಸೆಯುವ ನಿರಂತರ ಪ್ರಯತ್ನವನ್ನು ನಡೆಸುತ್ತಾ ಬಂದಿದ್ದಾರೆ.

ಮೊದಲಿಗೆ ಜಾತಿ ಮತ್ತು ಮತೀಯ(ಕೋಮು) ಪರಿಭಾಷೆಗಳನ್ನು ಅರ್ಥೈಸಿಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಸೂಕ್ತ. ಆದರೆ ಈ ಪರಿಭಾಷೆಗಳು ಅಷ್ಟು ಸುಲಭಕ್ಕೆ ವ್ಯಾಖ್ಯಾನಗಳಿಗೆ

ದಕ್ಕುವುದಿಲ್ಲ. ಮೂರ್ತರೂಪಗಳನ್ನು ಗುರುತಿಸಬಹುದಾದರೂ, ಅಮೂರ್ತರೂಪದಲ್ಲಿ ಇವು ವಿಭಿನ್ನ ಕಾರ್ಯತಂತ್ರಗಳನ್ನು ರೂಪಿಸಿ ಸದಾ ಜಾರಿಯಲ್ಲಿರುತ್ತವೆ. ಜಾತಿ ಮತ್ತು ಮತೀಯವಾದಗಳು ಎಲ್ಲಾ ಪ್ರದೇಶಕ್ಕೂ, ಎಲ್ಲಾ ಕಾಲಕ್ಕೂ ಒಂದೇ ಬಗೆಯಾಗಿರುವುದಿಲ್ಲ. ನಗರೀಕರಣ, ಔದ್ಯೋಗಿಕರಣಕ್ಕೆ ಒಳಗಾದ ಪ್ರದೇಶಗಳಲ್ಲಿ ಇವು ತಮ್ಮ ಪ್ರಾಚೀನತೆಯನ್ನು ಉಳಿಸಿಕೊಂಡಿರುವುದರ ಜೊತೆ ಜೊತೆಗೆ ಆಧುನಿಕವೂ ಆಗಿರುತ್ತವೆ. ಎಡಪಂಥೀಯ ಉದಾರವಾದಿ, ಪ್ರಜಾಸತ್ತಾತ್ಮಕ ಚಳುವಳಿಗಳು, ದಲಿತ, ರೈತ, ಗಾಂಧಿವಾದಿ ಮುಂತಾದ ಪ್ರಗತಿಪರ ಚಿಂತಕ ಸಮುದಾಯಗಳ ಕ್ರಿಯಾಶೀಲತೆ; ಚಳುವಳಿ, ಹೋರಾಟಗಳಿಂದ ಜಾತಿ ಮತ್ತು ಧರ್ಮಗಳು ಬೇರೆಯದೇ ರೂಪವನ್ನು ಪಡೆದುಕೊಂಡಿವೆ. ಅಂತರ್ಜಾತಿ ವಿವಾಹಗಳು, ಮತಾಂತರಗಳು, ವರ್ಗ ಧೋರಣೆಗಳೂ ಕೂಡ ಜಾತಿ ಮತ್ತು ಮತೀಯವಾದಗಳನ್ನು ಏಕಮುಖವಾಗಿ ವ್ಯಾಖ್ಯಾನಿಸಲು ಅಡ್ಡಿಯಾಗಿವೆ. ಒಟ್ಟಂದದಲ್ಲಿ ಒಳಬಾಂಧವ್ಯ ವ್ಯವಸ್ಥೆ. ರಕ್ತಸಂಬಂಧಿಗಳ ಗುಂಪು; ಮೇಲು-ಕೀಳು, ಶುದ್ಧ ಮತ್ತು ಅಶುದ್ಧತೆಯ ಆಧಾರದ ಮೇಲೆ ಇವುಗಳನ್ನು ಗುರುತಿಸಲಾಗುತ್ತಿದೆ. ಆಹಾರ, ಉಡುಪು, ಸ್ಪರ್ಶ, ಸಾರ್ವಜನಿಕ ಆಸ್ತಿಯ ಬಳಕೆಯ ಮೇಲಿನ ನಿರ್ಬಂಧ ವಿಧಿಸಿರುವ ವ್ಯವಸ್ಥೆಯಾಗಿಯೂ; ಏಣಿ ಶ್ರೇಣಿಯನ್ನೇ ಮೌಲ್ಯವಾಗಿಸಿಕೊಂಡಿರುವ ವ್ಯವಸ್ಥೆಯಾಗಿಯೂ; ಒಂದು ಸಮುದಾಯ ಸ್ವಾರ್ಥದಿಂದ, ತನ್ನ ಸ್ವಹಿತದೃಷ್ಟಿಯಿಂದ, ತನ್ನ ಯಾಜಮಾನ್ಯವನ್ನು ನಿರಂತರಗೊಳಿಸಿಕೊಳ್ಳಲು ಸೃಷ್ಟಿಸಿರುವ ಹುನ್ನಾರಗಳ ವ್ಯವಸ್ಥೆಯಾಗಿಯೂ; ಸಂಪ್ರದಾಯ, ಆಚರಣೆ, ನಂಬಿಕೆಗಳು, ದೇವರು, ಧರ್ಮದ ಹೆಸರಿನಲ್ಲಿ ಇತರೆ ಸಮುದಾಯಗಳಲ್ಲಿ ಬೀತಿಯನ್ನುಂಟು ಮಾಡುತ್ತಿರುವ ಹಾಗೂ ಪ್ರಜಾಪ್ರಭುತ್ವ ಮತ್ತು ಮನುಷ್ಯ ವಿರೋಧಿ ಆಲೋಚನೆಗಳ ವ್ಯವಸ್ಥೆಯಾಗಿಯೂ ಜಾತಿಯನ್ನು ಗುರುತಿಸಬಹುದು.

ಒಂದು ಸಮುದಾಯ ತಾನು ಜೀವಿಸುತ್ತಿರುವ ಬದುಕು ಶ್ರೇಷ್ಠವಾದುದು, ಉತ್ತಮವಾದುದು ಎಂದು ಭಾವಿಸಿ, ತನ್ನ ಎದುರಿರುವ ಇತರೆ ಸಮುದಾಯಗಳ ಜೀವನ ವಿಧಾನವನ್ನು ತುಚ್ಛವಾಗಿ, ನಿಕೃಷ್ಟವಾಗಿ ಕಾಣುವುದು. ತನ್ನ ಅಧೀನದಲ್ಲಿ ಬದುಕುವಂತೆ ಹಿಂಸಾ ಮಾರ್ಗಗಳ ಮೂಲಕ ಒತ್ತಾಯಪಡಿಸುವುದು; ತನಗೊಂದು ರಾಷ್ಟ್ರವಿತ್ತು, ಅದು ವೈಭವವಾಗಿತ್ತು ಎಂಬ ಹುಸಿ ಕಲ್ಪನೆಯನ್ನು ಸೃಷ್ಟಿಸಿ, ಯಾವ ಬೆಲೆಯನ್ನಾದರೂ ತೆತ್ತು ಆ ಕಲ್ಪನೆಯ ಹುಸಿ ರಾಷ್ಟ್ರವನ್ನು ಸ್ಥಾಪಿಸಲು ರಕ್ತಪಾತ, ಕೊಲೆ, ಆಸ್ತಿನಾಶ, ಅತ್ಯಾಚಾರಗಳನ್ನು ಆಯುಧಗಳಾಗಿ ಬಳಸುವುದು ಮತೀಯವಾದ ಅಥವಾ ಕೋಮುವಾದ ಎನಿಸುತ್ತದೆ.

ಅಧ್ಯಯನ ದೃಷ್ಟಿಯಿಂದ ಜಾತಿ ಮತ್ತು ಮತೀಯವಾದವನ್ನು ಒಟ್ಟಂದದಲ್ಲಿ ಹೀಗೆ ಅರ್ಥೈಸಿಕೊಳ್ಳಬಹುದು.

೧. ಸಮಾಜದಲ್ಲಿನ ಎಲ್ಲಾ ಧರ್ಮಗಳು, ಸಮುದಾಯಗಳು ಒಟ್ಟಾಗಿ ಬಾಳಲಾರದ ಬಿಕ್ಕಟ್ಟು.

೨. ಪ್ರಜಾಪ್ರಭುತ್ವದ ಆಶಯಗಳನ್ನೇ ಧಿಕ್ಕರಿಸುತ್ತಿರುವ ಮೂಲಭೂತವಾದಿಗಳ ಪ್ರತ್ಯೇಕತಾವಾದದ ಮನಸ್ಥಿತಿ.

೩. ಸಂಸ್ಕೃತಿ ಮತ್ತು ದೇಶಭಕ್ತಿಯ ನೆಪದಲ್ಲಿ ಒತ್ತಾಯ ಪೂರ್ವಕವಾಗಿ ಹೇರುತ್ತಿರುವ ನೀತಿ ನಿಯಮಗಳು ಮತ್ತು ಕಟ್ಟುಪಾಡುಗಳು.

೪. ಮನುಷ್ಯರನ್ನು ಮನುಷ್ಯರಂತೆ ಕಾಣದೆ ಅಸ್ಪೃಶ್ಯರಂತೆ, ಪ್ರಾಣಿಗಳಂತೆ ಕಾಣುವ ಅಮಾನವೀಯ ಮನುಷ್ಯ ವಿರೋಧಿ ಮನಃಸ್ಥಿತಿ ಹಾಗೂ ಏಣಿಶ್ರೇಣಿಯ ದೃಷ್ಟಿಕೋನ.

೫. ಅಧಿಕಾರ ಹಾಗೂ ಆರ್ಥಿಕ ಶಕ್ತಿಗಳು ಸ್ವಾರ್ಥ ಮತ್ತು ಅಧಿಕಾರದ ಲಾಲಸೆಯಿಂದ ಜನರಲ್ಲಿ ಉಂಟುಮಾಡುತ್ತಿರುವ ದ್ವೇಷ, ಅಸೂಯೆ ಮತ್ತು ಅಸಹಿಷ್ಣುತಾ ಮನೋಭಾವ.

ಬಹುಸಂಸ್ಕೃತಿ, ಬಹುಧರ್ಮ, ಬಹುದೈವಗಳ ಖನಿಯಾದ ಭಾರತಲ್ಲಿ ಹಲವು ಭಾಷೆ, ಉಡುಪು, ಜಾತಿ, ನಂಬಿಕೆ, ಆಚರಣೆ, ಆಹಾರ ಕ್ರಮಗಳು ಹೀಗೆ ಬಹುರೂಪತೆಯಿಂದ ಕೂಡಿದ ವೈವಿಧ್ಯಮಯವಾದ ವಾತಾವರಣವಿದೆ. ಈ ವೈವಿಧ್ಯತೆ ಹಾಗೂ ಬಹುರೂಪತೆಯ ನಡುವೆ ಸಮುದಾಯಗಳು ಸಹಬಾಳ್ವೆಯಿಂದ ಬದುಕುವುದು ಜೀವಂತಿಕೆಯ ಲಕ್ಷಣವಾಗಿದೆ. ಇದು ಆಶಯವೂ ಹೌದು, ವಾಸ್ತವವೂ ಹೌದು. ಆದರೆ ಮತೀಯವಾದವು ಒಂದು ಫ್ಯಾಸಿಸ್ಟ್ ಆಲೋಚನಾ ಕ್ರಮವಾಗಿದ್ದು, ಬಹುರೂಪಿ ಬದುಕನ್ನು ನಿರಾಕರಿಸುತ್ತಿದೆ. ಒಂದು ಸಮುದಾಯ ತಮಗೆ ವೈಭವಯುತವಾದ ಗತಕಾಲವಿತ್ತು, ಅದನ್ನು ಅನ್ಯ ಸಮುದಾಯಗಳು ನಾಶಮಾಡಿಬಿಟ್ಟರು ಎಂಬ ಭ್ರಮೆಗಳನ್ನು ಸೃಷ್ಟಿಸಿ, ತಮ್ಮ ಕಲ್ಪಿತ ಗತವನ್ನು ಮರು ಸ್ಥಾಪಿಸಲು, ನಾವು ಯಾವ ಸಮುದಾಯಗಳನ್ನು ಅನ್ಯವೆಂದು ಭಾವಿಸಿದ್ದೇವೆಯೋ ಆ ಸಮುದಾಯಗಳ ವಿರುದ್ಧ ದ್ವೇಷ ಸಾಧಿಸಲು, ಪ್ರತೀಕಾರ ತೀರಿಸಿಕೊಳ್ಳಲು, ದಮನ ಮಾಡಲು ಪ್ರೇರೇಪಿಸುವ ಮನುಷ್ಯ ವಿರೋಧಿ ಆಲೋಚನೆಯೇ ಮತೀಯವಾದ ಎನಿಸಿಕೊಳ್ಳುತ್ತದೆ.

ಭಾಷೆ, ಉಡುಪು, ಜಾತಿ, ನಂಬಿಕೆ ಆಚರಣೆ, ಆಹಾರ ಕ್ರಮಗಳು, ಪ್ರದೇಶ, ಆಚಾರ-ವಿಚಾರ, ಬಣ್ಣ, ಲಿಂಗ, ವರ್ಗ, ವೃತ್ತಿ, ಹೀಗೆ ಬಹುರೂಪತೆ ಹಾಗೂ ಭಿನ್ನತೆಗಳಿದ್ದಾಗಿಯೂ ಅಂತಿಮವಾಗಿ ಮಾನವೀಯ ಬದುಕನ್ನೂ, ಮನುಷ್ಯತ್ವವನ್ನೂ ಗೆಲ್ಲಿಸುವುದು ಧರ್ಮದ ಆಶಯವಾಗಬೇಕಿತ್ತು. ಆದರೆ ಆಳುವ ವರ್ಗವನ್ನು ನಿಯಂತ್ರಿಸುವ, ಸಾಂಸ್ಕೃತಿಕ ಯಾಜಮಾನ್ಯವನ್ನು ಸ್ಥಾಪಿಸುವ ಹಾಗೂ ರಾಜಕೀಯ ಅಧಿಕಾರದ ಗದ್ದುಗೆಯನ್ನೇರುವ ಸಾಧನಗಳಾಗಿ ಧರ್ಮಗಳು ಬಳಕೆಯಾಗುತ್ತಿರುವುದು ಮತೀಯವಾದವು ಪ್ರಬಲಗೊಳ್ಳಲು ಕಾರಣವಾಗಿದೆ. "ಜಾತೀಯತೆಯ ಭಾಗವಾಗಿದ್ದ ನೀಚತನ, ಸಂಕುಚಿತತೆ, ಇತರೆ ಜಾತಿಗಳ ದಮನ ಹಾಗೂ ಅನ್ಯರ ಬಗ್ಗೆ ಅಸಹನೆ ಸೃಷ್ಟಿಸುವ ವಿಚಾರಗಳು ಕಳೆದ ಮೂರು ದಶಕಗಳಲ್ಲಿ

ಬೆಳೆದ ಕೋಮುವಾದದ ಭಾಗವೂ ಆಗತೊಡಗಿದವು. ಜಾತೀಯತೆ ಭಾಗವಾಗಿದ್ದ ಫ್ಯಾಸಿಸ್ಟ್ ಧೋರಣೆ ಕೋಮುವಾದಕ್ಕೂ ವರ್ಗಾವಣೆಗೊಂಡಿತು. ಅಸ್ಪೃಶ್ಯತೆಗೆ ಒಗ್ಗಿ ಹೋದ ಕಂದಾಚಾರಿ ಮನಸ್ಸುಗಳು ಹೊಸಹೊಸ ಆಸ್ಪೃಶ್ಯತೆಗಳನ್ನು ಸೃಷ್ಟಿಸಲಾರಂಬಿಸಿದವು. ಮುಸ್ಲಿಮರು, ಕ್ರಿಶ್ಚಿಯನ್ನರ ಬಗೆಗೆ ಅಸ್ಪೃಶ್ಯತೆಯ ಭಾವವನ್ನು ಬೆಳೆಸತೊಡಗಿತು. ಹಾಗೆಯೇ ಜನರ ಭಕ್ತಿ, ನಂಬಿಕೆಗಳ ದುರುಪಯೋಗ, ಚರಿತ್ರೆ ಹಾಗೂ ಚಾರಿತ್ರಿಕ ಬೆಳವಣಿಗೆಗಳ ವಿಕೃತ ವ್ಯಾಖ್ಯಾನ, ಧರ್ಮದ ದುರ್ಬಳಕೆಯ ಮೂಲಕ ಅಧಿಕಾರ ಹಿಡಿಯುವ ರಾಜಕೀಯ ಪಕ್ಷಗಳ ಕುಟಿಲ ಯೋಜನೆಗಳು, ಪ್ರಬಲ ಜಾತಿಗಳ ಯಾಜಮಾನ್ಯ ಹಿಡಿತ, ವೈದಿಕ ಹುನ್ನಾರಗಳು ಹಾಗೂ ವ್ಯಾಪಾರಿಶಕ್ತಿಗಳೂ ಕೂಡ ಕೋಮುವಾದವನ್ನು ಬೆಳೆಸಿವೆ, ಬೆಳೆಸುತ್ತಿವೆ." (ನಟರಾಜ್ ಹುಳಿಯಾರ್, ಸಂವಿಧಾನ-೬೦ : ಸಾಮಾಜಿಕ ನ್ಯಾಯ ಮತ್ತು ಕರ್ನಾಟಕ, ಜಾಫೆಟ್ & ಚಂದ್ರಶೇಖರ್ ಐಜೂರ್(ಸಂ), ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು, ೨೦೧೧, ಪುಟ-೧೮೯, ೧೯೦) ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸುಶಿಕ್ಷಿತರಾದಂತೆಲ್ಲಾ ಸಮಾಜವನ್ನು ಕಾಡುತ್ತಿರುವ ಜಾತಿ ಮತ್ತು ಧರ್ಮಾಂಧತೆಗಳು ಜನತೆಯ ಬದುಕಿನಿಂದ ತೊಲಗಬೇಕಾಗಿತ್ತು, ಆದರೆ ಹಾಗಾಗಲಿಲ್ಲ. ಸ್ವತಂತ್ರ ಭಾರತದ ಪ್ರಜಾನಾಯಕರು, ಮೂಲಭೂತವಾದಿಗಳು ತಮ್ಮ ಸ್ವಾರ್ಥ ಮತ್ತು ಅಧಿಕಾರದ ಲಾಲಸೆಯಿಂದ ಜಾತಿ ಮತ್ತು ಮತೀಯ ವಿಷಬೀಜಗಳನ್ನು ಮರು ಉತ್ಪಾದಿಸಿ ಲಾಭ ಪಡೆಯತೊಡಗಿದರು. ಜಾತಿ ಮತ್ತು ಮತೀಯತೆಗೆ ಹಿಂದೆ ಇದ್ದ ಸಂಸ್ಕೃತಿ, ಮೌಢ್ಯ, ಮೇಲ್ಜಾತಿ-ಧರ್ಮಗಳ ಯಾಜಮಾನ್ಯ ಮತ್ತು ಶೋಷಣೆಯ ಮುಖಗಳೊಂದಿಗೆ ರಾಜಕೀಯ ಮತ್ತು ಆರ್ಥಿಕ ಶಕ್ತಿಗಳು ಸೇರಿಕೊಂಡವು. ಹಾಗಾಗಿ ಇವು ಮತ್ತಷ್ಟು ಪ್ರಬಲವಾಗುತ್ತಾ ಸಮಾಜದಲ್ಲಿ ಮನುಷ್ಯರ ನಡುವೆ ಅಂತರ ಹೆಚ್ಚುತ್ತಾ ಕಂದಕಗಳು ಸೃಷ್ಟಿಯಾಗತೊಡಗಿದವು. ಮನುಷ್ಯ ಮನುಷ್ಯನನ್ನು ದ್ವೇಷಿಸತೊಡಗಿದ, ರಕ್ತ ಪಿಪಾಸುವಾಗತೊಡಗಿದ. ಸಮಾಜದ ಶಾಂತಿಯನ್ನು ನಿರ್ನಾಮ ಮಾಡತೊಡಗಿದ.

ಜಾತಿ ಮತ್ತು ಮತೀಯವಾದಗಳು ಪ್ರಸ್ತುತ ಸಮಾಜದ ಅತ್ಯಂತ ಸಂಕೀರ್ಣವಾದ ವ್ಯವಸ್ಥೆಯಾಗಿದ್ದು, ಎಲ್ಲಾ ಕಾಲದಲ್ಲೂ ನಮ್ಮ ಸಮಾಜವನ್ನು ಪ್ರಭಾವಿಸಿವೆ ಹಾಗೂ ನಿಯಂತ್ರಿಸಿವೆ. ಇಂದು ಸಮಾಜಶಾಸ್ತ್ರಜ್ಞರು, ಸೃಜನಶೀಲ ಲೋಕದ ಜನರು, ರಾಜಕಾರಣಿಗಳು, ಮಠಗಳು, ಸ್ವಾಮೀಜಿಗಳು ಹೀಗೆ ಪ್ರತಿ ಗುಂಪೂ ಜಾತಿಯನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಜಾತಿ ಮತ್ತು ಮತೀಯವಾದವನ್ನು ವಿವರಿಸಿಕೊಳ್ಳುವುದು, ವಿಶ್ಲೇಷಣೆಗೆ ಒಳಪಡಿಸುವುದು ಇಂದಿನ ಸಾಮಾಜಿಕ ವಿದ್ಯಮಾನವಾಗಿದೆ. ಬಹು ಸಂಸ್ಕೃತಿಯ, ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದ ಭಾರತೀಯ ನೆಲದಲ್ಲಿ ಜಾತಿವಾದ ಮತ್ತು ಕೋಮುವಾದದಂತಹ ಮನುಷ್ಯ ವಿರೋಧಿ ಆಲೋಚನಾ ಕ್ರಮಗಳು ಹೇಗೆ ರೂಪುಗೊಂಡವು?

ಹಲವು ಚರಿತ್ರೆಕಾರರು ಜಾತಿ ಮತ್ತು ಮತೀಯವಾದವನ್ನು ಎಡ್ವರ್ಡ್ ಸೈದರ 'ಓರಿಯಂಟಲಿಸಂ'(ಪೌರಾಸ್ತ್ಯವಾದ) ನೆಲೆಯಿಂದ ಕಾಣುತ್ತಾ ಈ ಎರಡೂ ವಾದಗಳು ಯೂರೋಪಿಯನ್ನರ ಸೃಷ್ಟಿ, ಗ್ರಹಿಕೆ ಅಥವಾ ಕೊಡುಗೆಯಾಗಿವೆ. (ಹೆಚ್ಚಿನ ವಿವರಗಳಿಗೆ: ಲಕ್ಷ್ಮೀಪತಿ ಸಿ.ಜಿ., ಕ್ಯಾಸ್ಟ್ ಕೆಮಿಸ್ಟ್ರಿ, ೨೦೦೭) ಜಾತಿ ಮತ್ತು ಧರ್ಮಗಳ ಸಿದ್ಧರೂಪವಿಲ್ಲದ ಭಾರತದಲ್ಲಿ ಐರೋಪ್ಯರು ತಮ್ಮ ಅಧಿಕಾರವನ್ನು ನೆಲೆಗೊಳಿಸಲು, ಬಲಗೊಳಿಸಲು ಜಾತಿ ಮತ್ತು ಮತೀಯವಾದದಂತಹ ಒಡಕುಗಳನ್ನು ಹುಟ್ಟುಹಾಕಿದರು ಎಂದು ಹಲವರು ಅಭಿಪ್ರಾಯಪಡುತ್ತಾರೆ.

ಭಾರತೀಯ ಸಮಾಜವನ್ನು ಅಭ್ಯಾಸ ಮಾಡಿದವರಿಗೆ ತಿಳಿದುಬರುವುದೇನೆಂದರೆ ಜಾತಿ ಮತ್ತು ಧರ್ಮಗಳ ಆಧಾರದ ಮೇಲೆ ಸಮಾಜವನ್ನು ಒಡೆಯುವ, ಒಕ್ಕೂಟವಾಗುವ ಅಪಾಯಗಳನ್ನು ತಡೆಯುವ, ಆ ಮೂಲಕ ನಾವು ನಡೆಸುತ್ತಿರುವ ಶೋಷಣೆಯನ್ನು, ತಾವು ಅನುಭವಿಸುತ್ತಿರುವ ಅಧಿಕಾರವನ್ನು ನಿರಂತರವಾಗಿಸಿಕೊಳ್ಳುವ ಹುನ್ನಾರಗಳಿಂದ ಭಾರತದ ಮೇಲ್ಜಾತಿಗಳೇ ಜಾತಿ ಮತ್ತು ಧರ್ಮಗಳ ಭೇದಗಳನ್ನು, ಅವುಗಳ ನಡುವೆ ಒಡಕುಗಳನ್ನು ಹುಟ್ಟುಹಾಕಿವೆಯೇ ವಿನಹ; ಇವು ವಸಾಹತುಗಳ ಕೊಡುಗೆಯಲ್ಲ. ನೂರಾರು ಜಾತಿಗಳನ್ನು ಹುಟ್ಟು ಹಾಕಿ, ಸಮಾಜವನ್ನು ಕೆಳಜಾತಿಗಳನ್ನು ನಿರಂತರವಾಗಿ ಶೋಷಿಸುತ್ತಾ ಬಂದ ಮೇಲ್ಜಾತಿಗಳು ವಸಾಹತು ಕಾಲ ಹಾಗೂ ತದನಂತರ ಭಾರತೀಯ ಸಮಾಜವನ್ನು ಪ್ರವೇಶಿಸಿದ, ಎಚ್ಚರಗೊಳಿಸಿದ ವಸಾಹತುಶಾಹಿ ಶಿಕ್ಷಣ ಹಾಗೂ ತಿಳುವಳಿಕೆಯ ಪ್ರಭಾವದಿಂದ ತಳಸಮುದಾಯಗಳಲ್ಲಿ ಎಚ್ಚರವುಂಟಾಯಿತು. ಮೇಲ್ಜಾತಿಗಳು ಪರಂಪರೆಯಿಂದಲೂ ನಿರಂತರವಾಗಿ ಶೋಷಣೆಗೆ ಬಳಸಿದ ಜಾತಿಗಳನ್ನು ದೈವಸೃಷ್ಟಿ ಎಂದು ನಂಬಿಸಿದ್ದ ಹುಸಿ ಹುನ್ನಾರಗಳ ವಿರುದ್ಧ ತಳಸಮುದಾಯಗಳು ತಿರುಗಿಬೀಳುವ ಅಪಾಯಗಳು ಎದುರಾದವು. ಈ ಹಿನ್ನೆಲೆಯಲ್ಲಿ ಇದೇ ಮೇಲ್ಜಾತಿಗಳು ಮತೀಯವಾದವನ್ನು ಮುನ್ನೆಲೆಗೆ ತಂದರು. ಆಧುನಿಕ ಶಿಕ್ಷಣ, ಸಮಾಜ ಸುಧಾರಕರು, ಅಂಬೇಡ್ಕರ್ ಮುಂತಾದವರ ವಿಚಾರದಾರೆಗಳ ಪ್ರಭಾವದಿಂದ ಕೆಳಜಾತಿಗಳ ಯುವ ಸಮುದಾಯಲ್ಲಾದ ಜಾತಿ ಶೋಷಣೆಯ ವಿರುದ್ಧದ ಅರಿವು, ಮೇಲ್ಜಾತಿಗಳ ವಿರುದ್ಧ ಆಕ್ರೋಶದ ಜ್ವಾಲೆಯಾಗಿ ಪರಿಣಮಿಸಿತ್ತು. ಮೇಲ್ಜಾತಿಗಳು ತಳಸಮುದಾಯದ ಆಕ್ರೋಶದ ಬೆಂಕಿಯಿಂದ ತಪ್ಪಿಸಿಕೊಳ್ಳಲು, ಅದನ್ನು ಬೇರೆಡೆಗೆ ತಿರುಗಿಸಲು ಭಾರತೀಯ ಭೂತ ವೈಭವಯುತವಾಗಿತ್ತು; ಭಾರತೀಯ ಸಂಸ್ಕೃತಿ ಶ್ರೇಷ್ಠವಾಗಿತ್ತು; ಅದನ್ನು ವಿದೇಶಗಳಿಂದ ವಲಸೆ ಬಂದ ಮತ್ತು ದಾಳಿ ಮಾಡಿದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಹಾಳು ಮಾಡಿದರು; ಹಾಗಾಗಿ ಆ ಭೂತವನ್ನು ಮರು ಸ್ಥಾಪಿಸಲು ಜನತೆ ಬದುಕನ್ನು ತ್ಯಾಗ ಮಾಡಬೇಕು; ಈ ನಿಟ್ಟಿನಲ್ಲಿ ಒಗ್ಗಟ್ಟಾಗಿ ಪರದೇಶಿಯರಾದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು

ಈ ದೇಶದಿಂದ ಹೊರಗಟ್ಟಬೇಕು ಎಂಬ ಪರಸ್ಪರ ಅನುಮಾನವನ್ನೂ, ದ್ವೇಷವನ್ನೂ ಉಂಟುಮಾಡುವ ಹುಸಿಗಳನ್ನು ಸೃಷ್ಟಿಸುವ ಮೂಲಕ ಭಾರತೀಯ ನೆಲದಲ್ಲಿ ಮತೀಯ/ಕೋಮುವಾದದ ಆಲೋಚನೆಗಳನ್ನು ಹುಟ್ಟುಹಾಕಿದರು. ಅಂದರೆ ಜಾತಿಯ ಹಿಡಿತಗಳಿಂದ ಬಿಡಿಸಿಕೊಂಡು ಬದುಕಲು, ಈ ಸಾಮಾಜಿಕ ಸಮಸ್ಯೆಗಳ ಸೃಷ್ಟಿಕರ್ತರನ್ನು ಪ್ರಶ್ನಿಸಲು ಪ್ರಾರಂಭಿಸಿದ ತಳಸಮುದಾಯಗಳನ್ನು ನಿಯಂತ್ರಿಸಲು ಜಾತಿಯ ಮುಂದುವರೆದ ಭಾಗವಾಗಿ ಮತೀಯವಾದವನ್ನು ಮುಂಚೂಣಿಗೆ ತಂದರು.

ಜಾತಿವಾದ ಮತ್ತು ಕೋಮುವಾದದಂತಹ ಮನುಷ್ಯ ವಿರೋಧಿ ಆಲೋಚನೆಗಳು ಯೂರೋಪಿಯನ್ನರ ಕೊಡುಗೆ ಅಥವಾ ಸೃಷ್ಟಿಯಲ್ಲ. ಅವುಗಳ ಮೂಲ ಭಾರತೀಯ ಮೇಲ್ಜಾತಿಗಳ ಆಲೋಚನೆಗಳು ಮತ್ತು ಮೆದುಳೇ ಆಗಿವೆ. ಇದು ಭಾರತೀಯ ಸಮಾಜದ ನೈಜ ವಾಸ್ತವವಾಗಿದೆ. ಕೆಳ ಜಾತಿಗಳನ್ನು ನಿಯಂತ್ರಿಸುವ, ಬಳಸುವ ಆ ಮೂಲಕ ತಮ್ಮ ಅಧಿಕಾರವನ್ನು ನಿರಂತರಗೊಳಿಸುವ ಉದ್ದೇಶದಿಂದ ಮೇಲ್ಜಾತಿ–ಮೇಲ್ವರ್ಗಗಳು ಕಾಲಕಾಲಕ್ಕೆ ರೂಪಿಸಿಕೊಂಡು ಬಂದಿರುವ ಜಾತಿ ಮತ್ತು ಮತೀಯ ಭಾವನೆಗಳು ತಳ ಸಮುದಾಯಗಳನ್ನು ನಿರಂತರವಾಗಿ ಶೋಷಣೆಗೆ, ಹಿಂಸೆಗೆ ದೂಡಿವೆ. ಭಾರತೀಯ ಭೂತದ ವೈಭವವನ್ನು, ಸನಾತನ ಸಂಸ್ಕೃತಿ ಶ್ರೇಷ್ಠತೆಯನ್ನು ಮರುಸ್ಥಾಪಿಸುವ ಹಿನ್ನೆಲೆಯಲ್ಲಿ ಭಾರತೀಯ ಮುಸ್ಲಿಮರ, ಕ್ರಿಶ್ಚಿಯನ್ನರಪರವಾಗಿ ಮಾತನಾಡುವವರ ಹಾಗೂ ಮತಾಂಧತೆಯನ್ನು ವಿರೋಧಿಸುವವರ, ಖಂಡಿಸುವವರ ಮೇಲೆ ನಡೆಯುತ್ತಿರುವ ಹಿಂಸಾತ್ಮಕ ದಾಳಿಗಳು ಸರ್ವ ಜನಾಂಗದ ನೆಲೆವೀಡಾಗಬೇಕಾದ ಭಾರತೀಯ ಸಮಾಜ ಭಯ, ಆತಂಕಗಳಿಂದ ನರಳುವಂತೆ ಮಾಡಿವೆ. ಈ ಹಿಂಸಾತ್ಮಕ ದಾಳಿಗಳ ಹತಾರಗಳಾಗಿ ಬಳಕೆಯಾಗುತ್ತಿರುವುದು, ಜೈಲು ಸೇರುತ್ತಿರುವುದು, ಬದುಕನ್ನು ನಾಶ ಮಾಡಿಕೊಳ್ಳುತ್ತಿರುವುದು ಮೇಲ್ಜಾತಿ, ಮೇಲ್ವರ್ಗದ ಜನತೆಯಲ್ಲ; ಕೆಳಜಾತಿಗಳ ಅಮಾಯಕ ಯುವ ಸಮುದಾಯ. ಭಾರತೀಯ ಪರಂಪರೆಯನ್ನು ಮರುಸ್ಥಾಪಿಸುವ ಹಿನ್ನೆಲೆಯಲ್ಲಿ ನಡೆಯುತ್ತಿರುವ ಹಿಂಸಾತ್ಮಕ ದಾಳಿಗಳಿಂದ ಭಾರತೀಯ ಮುಸ್ಲಿಮರು, ಕ್ರಿಶ್ಚಿಯನ್ನರು ಹಾಗೂ ಇತರೆ ಅಲ್ಪಸಂಖ್ಯಾತ ಸಮುದಾಯಗಳು ಪರಕೀಯತೆಯನ್ನು ಅನುಭವಿಸುವಂತಾಗಿದೆ. ಇಂದು ಜಗತ್ತಿನಾದ್ಯಂತ ನಡೆಯುತ್ತಿರುವ ಇಸ್ಲಾಂ ಉಗ್ರವಾದ ಈ ಮತೀಯ ಶಕ್ತಿಗಳಿಗೆ ಮತ್ತಷ್ಟು ಹತಾರಗಳನ್ನು ಒದಗಿಸಿದೆ ಇದರಿಂದಾಗಿ ಬಹುಸಂಖ್ಯಾತ ಸಾಮಾನ್ಯ ಮುಸ್ಲಿಂ ಸಮುದಾಯ ಸದಾ ಅತಂತ್ರ ಸ್ಥಿತಿಯಲ್ಲಿ, ಭಯ ಮತ್ತು ಆತಂಕದ ವಾತಾವರಣದಲ್ಲಿ ಬದುಕುವ ದುಸಿತಿ ಉಂಟಾಗಿದೆ. ಇದು ಸ್ವತಂತ್ರ ಭಾರತದ ಅವಮಾನ; ಸಮಸಮಾಜ ಹಾಗೂ ಐಕ್ಯತೆಯ ಸ್ಥಾಪನೆಯ ಉದ್ದೇಶವನ್ನು ಹೊಂದಿರುವ ಪ್ರಜಾಪ್ರಭುತ್ವ ವ್ಯವಸ್ಥೆಯ ವ್ಯಂಗ್ಯ.

ತೇಜಸ್ವಿ ಕಥನ: ಜಾತಿ ಮತ್ತು ಮತೀಯ ಸಂಕಥನ.

ಜಾತಿವಾದ ಮತ್ತು ಮತೀಯವಾದಗಳ ಕುರಿತು ಕನ್ನಡ ಸಾಹಿತ್ಯ ಬಹುಹಿಂದಿನಿಂದಲೂ ಪ್ರತಿಕ್ರಿಯಿಸುತ್ತಾ ಬಂದಿದೆ. ಆದರೂ ಸ್ವಾತಂತ್ರೋತ್ತರದಲ್ಲಿ ಒಂದು ನಿರ್ದಿಷ್ಟ ಜಾತ್ಯತೀತ ತಾತ್ವಿಕತೆಯ ದೃಷ್ಟಿಯಿಂದ ಮತ್ತು ಬಂಡಾಯ ದೃಷ್ಟಿಯಿಂದ ಸಮಾಜದಲ್ಲಿ ಶಾಂತಿ, ಸಹಬಾಳ್ವೆಯನ್ನು ನೆಲೆಗೊಳಿಸಲು ಸಾಹಿತ್ಯ ಚಳುವಳಿ ಎಪ್ಪತ್ತರ ದಶಕದಲ್ಲಿ ಕ್ರಿಯಾಶೀಲವಾಗತೊಡಗಿತ್ತು. ಹಾಗಂತ ಈ ಹಿಂದೆ ಜಾತ್ಯತೀತ ತಾತ್ವಿಕತೆ ಮತ್ತು ಬಂಡಾಯ ದೃಷ್ಟಿ ಇರಲಿಲ್ಲ ಎಂಬುದು ಈ ಮಾತಿನ ಅರ್ಥವಲ್ಲ. ಜಾತಿ ಮತ್ತು ಮತೀಯವಾದವನ್ನೇ ಮುಖ್ಯ ವಸ್ತುವನ್ನಾಗಿ ನಿರ್ದಿಷ್ಟಗೊಳಿಸಿಕೊಂಡು, ಪರಿಣಾಮಕಾರಿಯಾಗಿ ಸಾಹಿತ್ಯ ಚಳುವಳಿ ರೂಪುಗೊಂಡದ್ದು ಈ ಅವಧಿಯಲ್ಲಿ. ಈ ಸಾಮಾಜಿಕ ಪಿಡುಗುಗಳ ನಡುವೆ ನಿಂತು ತನ್ನದೇ ಆದ ನೆಲೆಯಿಂದ ಪರಿಹಾರಗಳನ್ನೂ ಸಾಹಿತ್ಯದ ಮೂಲಕ ಕಾಣಿಸಲು ತೊಡಗಿದವರಲ್ಲಿ ಸಮಾಜವಾದಿ ಚಿಂತಕರಾದ ಅನಂತಮೂರ್ತಿ, ಲಂಕೇಶ್ ಮತ್ತು ತೇಜಸ್ವಿ ಪ್ರಮುಖರು. ಇವರು ದಲಿತ-ಬಂಡಾಯ ಚಳವಳಿಯ ಒಳಗೆ ಬರುವುದಿಲ್ಲವಾದರೂ ಜಾತ್ಯತೀತ-ಮತಾತೀತ ನಿಲುವುಳ್ಳವರೇ. ರಾಮಮನೋಹರ ಲೋಹಿಯಾರವರ ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದ ತೇಜಸ್ವಿ ಕಥನ ಹಲವು ಬಗೆಯಲ್ಲಿ ಸಮಾಜದಲ್ಲಿನ ಜಾತಿ ಮತ್ತು ಮತೀಯವಾದಗಳನ್ನು ಗಂಭೀರ ವಿಮರ್ಶೆಗೆ ಒಳಗುಮಾಡಿದೆ. ತೇಜಸ್ವಿಯವರು ತಮ್ಮ ಕಥನ ಸಾಹಿತ್ಯದಲ್ಲಿ ಜಾತಿ ಮತ್ತು ಮತೀಯ ಅಂಶಗಳನ್ನು ಯಾವ ರೀತಿ ಸಂಕಥಿಸಿದ್ದಾರೆ? ಈ ಎರಡು ಸಾಮಾಜಿಕ ಕಂಟಕಗಳ ಕುರಿತು ಅವರ ಕಥನದ ನಿಲುವುಗಳೇನು? ಇಂತಹ ಪ್ರಶ್ನೆಗಳ ಮೂಲಕ ತೇಜಸ್ವಿ ಕಥನ ಸಾಹಿತ್ಯವನ್ನು ಇಲ್ಲಿ ಚರ್ಚಿಸಲಾಗಿದೆ.

ನವ್ಯ ಚಳುವಳಿಯ ಹಾದಿಯಲ್ಲಿ ಕಾಣಿಸಿಕೊಂಡ ತೇಜಸ್ವಿಯವರು ನಂತರ ಕ್ರಮೇಣ ಅದರಿಂದ ಬಿಡಿಸಿಕೊಂಡು ಹೊರಬಂದರು. "ನವ್ಯ ಸಾಹಿತ್ಯ ವ್ಯಕ್ತಿ ಕೇಂದ್ರೀಕೃತವಾಗಿ, ಸಾಹಿತ್ಯ ತನ್ನ ಸಾಮಾಜಿಕ ಅರಿವನ್ನೇ ಕಳೆದುಕೊಳ್ಳುವ ಮಟ್ಟ ಮುಟ್ಟಿತ್ತು. ಜಾತಿ ಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಸನಾತನ ಧರ್ಮದ ಭಯಂಕರ ನ್ಯೂನತೆಗಳನ್ನು ಪಕ್ಕಕ್ಕೆ ಸರಿಸಿ, ವೈದಿಕ ಪರಂಪರೆಯೇ ಕರ್ನಾಟಕದ ಪರಂಪರೆ ಎಂದು ಅಪವ್ಯಾಖ್ಯಾನ ಮಾಡಲು ಶುರುವಾಗಿತ್ತು. ಕನ್ನಡ ಸಾಹಿತ್ಯದ ಪರಂಪರೆ ಎಂದರೆ ವೈದಿಕ ಪರಂಪರೆಯ ವಿರುದ್ಧ ನಡೆದ ಮತ್ತು ನಡೆಯುತ್ತಿರುವ ನಿತಂತರ ಹೋರಾಟ ಎನ್ನುವ ಸತ್ಯ ಸಂಗತಿಯನ್ನು ತಿರುಚುವ ಪ್ರಯತ್ನ ನವ್ಯ ಸಾಹಿತ್ಯದ ಉದ್ಧಾಮ ಬರಹಗಾರರಿಂದ ನಡೆಯುತ್ತಿತ್ತು. ಸಂಪೂರ್ಣ ಅವೈದಿಕ ಹಿನ್ನೆಲೆಯಿಂದ ಬಂದ ನನಗೆ ಜ್ವಾಜಲ್ಯಮಾನ ಪ್ರತಿಮೆಗಳೆಂದು ಹೊಗಳುತ್ತಿದ್ದ ಇವರ ಕೃತಿಗಳಲ್ಲಿ

ಯಾವ ಮಹತ್ತೂ ಕಾಣುತ್ತಿರಲಿಲ್ಲ. ನನಗೆ ಸಾಹಿತ್ಯದಲ್ಲೇ ಆಸಕ್ತಿ ನಶಿಸತೊಡಗಿತ್ತು." (ವಿಮರ್ಶೆಯ ವಿಮರ್ಶೆ, ೨೦೦೯, ಪುಟ-೧೧೭) ಹೀಗೆ ನವ್ಯ ಸಾಹಿತ್ಯದ ಸ್ವಕಾಳಜಿಯ ಆತ್ಮನಿಷ್ಠ ಬರಹಗಳು ಹಾಗೂ ಬರಹಗಾರರಿಂದ ಬೇಸತ್ತು "ಲೋಹಿಯಾರವರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ" (ಅಬಚೂರಿನ ಪೋಸ್ಟಾಫೀಸು ಕಥಾಸಂಕಲನ(ಮುನ್ನುಡಿ), ೨೦೦೯.)ಯಿಂದ ಪ್ರಭಾವಿತಗೊಂಡು "ಸಾಂಕೇತಿಕ ಶೈಲಿಯ ಸೀಮಿತ ಸಹೃದಯ ಸ್ತೋಮಕ್ಕೆ ಮಿತಿಗೊಳಿಸಿದ, ಕೇವಲ ಅಕಾಡೆಮಿಕ್ ಆಸಕ್ತಿಯ ಚರ್ಚೆಗಳಿಗೆ ಸೀಮಿತವಾದ ಕಲಾವಿದ ಪ್ರಜ್ಞೆಯೇ ಕೇಂದ್ರವಾಗುವ ಅಥವಾ ಕಲಾವಿದನ ಪ್ರಜ್ಞೆಯೊಳಗೆ ವಿಕಾಸವಾಗುವ ಆತ್ಮನಿಷ್ಠ ಬರಹಕ್ಕಿಂತ ಬೇರೆಯಾದ, ಕೇವಲ ವೀಕ್ಷಕವಾಗಿ ಮಾತ್ರ ಕಲಾವಿದ ಕೃತಿಯಲ್ಲಿ ವ್ಯಕ್ತವಾಗುವ ಕ್ರಮವನ್ನು ತೇಜಸ್ವಿ ಅನುಸರಿಸುತ್ತಾರೆ. ಈ ಕ್ರಮ ಕನ್ನಡಕ್ಕೆ ಹೊಸತಲ್ಲದಿದ್ದರೂ ಅದರ ಉದ್ದೇಶ ಹಾಗೂ ಅಲ್ಲಿ ವ್ಯಕ್ತವಾಗುವ ಸಂವೇದನೆ ಮಾತ್ರ ಕ್ರಾಂತಿಕಾರವಾದದ್ದು." (ನರಹಳ್ಳಿ ಬಾಲಸುಬ್ರಮಣ್ಯ, ಸಾಹಿತ್ಯ-ಸಂಸ್ಕೃತಿ, ೧೯೯೮, ಪುಟ-೩೭)

ತೇಜಸ್ವಿಯವರ ಮೊದಲ ಕಥಾಸಂಕಲನದ "ಹುಲಿಯೂರಿನ ಸರಹದ್ದು ಕಥೆಯು ಅಡಿಗರ 'ಹದ್ದು' ಪದ್ಯದ ಅವಯವ ಅನುಸರಿಸಿ ಬರೆದಿರುವ ಈ ಕಥೆ ಅನೇಕ ಲಯಗಳಲ್ಲಿ ವೃತ್ತೋಪವೃತ್ತಗಳಾಗಿ ಒಂದು ಜೀವ ಇನ್ನೊಂದನ್ನು ಹದ್ದುಬಸ್ತಿನಲ್ಲಿಡಲು ಮಾಡುವ ಪ್ರಯತ್ನವನ್ನು ತೋರುತ್ತದೆ." (ಲಂಕೇಶ್, ಪ್ರಸ್ತುತ, ೧೯೭೦, ಪುಟ-೩೭) ಇಲ್ಲಿ ಜಾತಿಯನ್ನು ಮೀರುವ ಯುವ ಸಮುದಾಯಕ್ಕೆ ಅಡ್ಡಿಯಾಗುವ ಸಂಪ್ರದಾಯಗಳನ್ನು ಒತ್ತಾಯ ಪೂರ್ವಕವಾಗಿ ಹೇರುವ ಕುಟುಂಬ ಸದಸ್ಯರ ನಿಯಂತ್ರಣ ಕಾಣುತ್ತಿದೆ. ಸೋಮು ಅನ್ಯಜಾತಿಯ ನಳಿನಾಕ್ಷಿಯನ್ನು ಪ್ರೀತಿಸಿದ್ದು ಆಕೆಯನ್ನು ಮದುವೆಯಾಗುವುದಾಗಿ ತಂದೆಗೆ ತಿಳಿಸಿದಾಗ "ಈ ತಾಯ್ಗಂಡ ಮುಂಡೇವಕ್ಕೆಲ್ಲಾ ದೇವರಂತೆ, ದನಾ ತಿನ್ನೋರಿಗೆ ಗೊಬ್ಬರದಾಣೆ, ಯಾವುದೇ ಜಾತಿ ಹುಡುಗೀನ ಮದುವೆಯಾದೇನು ಅಂತ ಜಾತಿ ಕುಲ ತೊರೆದೋರಿಗೆ ಇನ್ನು ದೇವ್ರು ದಿಂಡ್ರು,' ರಂಗಪ್ಪಗೌಡರು ಗರುಡ ದೇವರನ್ನು ಹೊಡೆಯಬಾರದು ಎಂದು ಮಗ ಸೋಮುಗೆ ಹೀನಾಮಾನ ಬಯ್ದರು." (ಹುಲಿಯೂರಿನ ಸರಹದ್ದು, ೨೦೦೯, ಪುಟ-೩೫) ಈ ಬಯ್ಗುಳಗಳಿಂದ ಇನ್ನಷ್ಟು ರೊಚ್ಚಿಗೆದ್ದ ಸೋಮು ಹುಲಿಯೂರಿನ ಈ ಜಾತಿಯ ಸಂಕೋಲೆಗಳ ಸರಹದ್ದನ್ನು ಆದಷ್ಟು ಬೇಗ ದಾಟಲು ನಿಶ್ಚಯಿಸುತ್ತಾನೆ. ತಂದೆ-ತಾಯಿಯರು ಸೂಚಿಸಿದ ಹೆಣ್ಣನ್ನು ಮದುವೆಯಾಗಲು ನಿರಾಕರಿಸುತ್ತಾನೆ. "ಇಂಥ ಗರುಡನನ್ನೂ ಹೊಡೆಯೊಲ್ಲ ಎಂದರೆ ನಾನು ನಳಿನಾಕ್ಷಿಯನ್ನು ಪ್ರೀತಿಸೋದಕ್ಕೂ ಇದಕ್ಕೂ ಏನು ಸಂಬಂಧ? ತಾಯ್ಗಂಡನಂತೆ ಥತ್. ಈ ಅಪ್ಪ ಅಮ್ಮ ಈ ಕ್ಷಣ ಸತ್ತರೂ ನನಗೇನಿಲ್ಲ, ಅಯ್ಯೋ, ಈ ಮನೆಯ ಒಲವಿನ

ಸರಹದ್ದಿನಿಂದ ಆಚೆ ಹೋಗುವುದೆಂತು? ನನ್ನ ಮಲಮೂತ್ರಾದಿ ಪ್ರವೃತ್ತಿಗಳೂ ಅಪ್ಪನ ಆಜ್ಞೆಯಂತೆಯೇ ಆಗುತ್ತಿವೆಯೇನೋ! ಇನ್ನು ಇಲ್ಲಿ ತನಗೇ ಒಂದು ಪ್ರೀತಿಸುವ ಹಕ್ಕಿದೆ ಎನ್ನುವುದರಲ್ಲಿ ಅರ್ಥವಿಲ್ಲ." (ಹುಲಿಯೂರಿನ ಸರಹದ್ದು, ೨೦೦೯, ಪುಟ-೩೩) ಎಂದು ತಂದೆಯ ಎಲ್ಲ ಮಾತುಗಳನ್ನೂ ಧಿಕ್ಕರಿಸಲು, ನಳಿನಾಕ್ಷಿಯನ್ನು ಮದುವೆಯಾಗಲು ನಿರ್ಧರಿಸುತ್ತಾನೆ.

ಕೊನೆಗೆ ತಂದೆಯ ಆಜ್ಞೆಯಂತೆ ನಡೆಯದಿದ್ದರೂ ಆಕಸ್ಮಿಕವಾಗಿ ತನ್ನ ಮೇಲೆ ದಾಳಿ ಮಾಡುವ ಹದ್ದನ್ನು ಕೊಲ್ಲುತ್ತಾನೆ. ಇದು ಆತನ ತಂದೆಗೆ ಸಂತಸವನ್ನುಂಟು ಮಾಡುವುದಲ್ಲದೆ ತನ್ನ ಮಾತನ್ನು ಮಗ ಮೀರಲಾರ ಎಂದು ಭಾವಿಸುವಂತೆ ಮಾಡುತ್ತದೆ. "ಅಯ್ಯೋ, ಜಾತಿಗೆಟ್ಟ ಮುಂಡೇದೆ. ಆಗಲೇ ಕೋವೀಲಿ ಲಗಾಯಿಸಿದ್ದರೆ ಎರಡು ಕೋಳಿಮರಿಯಾದರೂ ಉಳಿಯುತ್ತಿತ್ತಲ್ಲೋ. ಹದ್ದಿನ ರಕ್ತ ಕುಡಿದ ಶ್ವಪಚ. ಇನ್ನೇನು, ನಿನಗೆ ಕುಲ? ಗೋತ್ರ? ಯಾರನ್ನಾದರೂ ಮದುವೆಯಾದರೂ ಆಗು, ಕೂಡಿಕೆಯಾದರೂ ಆಗು." (ಹುಲಿಯೂರಿನ ಸರಹದ್ದು, ೨೦೦೯, ಪುಟ-೪೩) ಎಂದು ರಂಗಪ್ಪಗೌಡರು ತನ್ನ ಇಚ್ಛೆಯ ಹದ್ದನ್ನು ಮೀರುವವನಾರೆಂದು ಹಮ್ಮಿನಿಂದ ಹೊರಡುತ್ತಾರೆ. ಆದರೆ ಅಕ್ಷರಜ್ಞಾನ ಪಡೆದಿರುವ ಸೋಮು ತನ್ನ ನಿರ್ಧಾರದಿಂದ ಹಿಂದೆಗೆಯುವುದಿಲ್ಲ. ಜಾತಿ, ಮತ, ಮೌಢ್ಯ ಸಂಪ್ರದಾಯಗಳು ಯಾರ ಸೃಷ್ಟಿಗಳು ಎನ್ನುವದನ್ನು ಆತ ಬಲ್ಲವನಾಗಿದ್ದಾನೆ. "ಹೋಗೋ, ಹೋಗೋ, ಅದೆಲ್ಲ ಬಾಂಬ್ರ ಬೊಗಳೆ ಅಲ್ಲೇನೋ. ಅವರ ಕುಲ ನಾಶವಾಗ, ಸ್ವರ್ಗ ಅಂತೆ. ನರಕ ಅಂತೆ, ಶುದ್ಧ ಬೊಗಳೆ, ಥತ್ತೇರಿ" (ಹುಲಿಯೂರಿನ ಸರಹದ್ದು, ೨೦೦೯, ಪುಟ-೪೪) ಎಂದು ಕುಲ ಮೌಢ್ಯಗಳನ್ನು ಆತ ಧಿಕ್ಕರಿಸಲು ನಿರ್ಧರಿಸುತ್ತಾನೆ.

ತ್ಯಕ್ತ ಕಥೆಯಲ್ಲಿ ಹಾರವ ಹೇಮಂತ ನಾಯಕ ಶೂದ್ರ ಸೋಮುವಿನ ಅಡಿಗೆ ಮನೆಯನ್ನು ಪ್ರವೇಶಿಸುತ್ತಾನೆ. ಇದನ್ನು ತಮಾಷೆಯಾಗಿ ಸೋಮು ಪ್ರಶ್ನಿಸುತ್ತಾನೆ. ಇದಕ್ಕೆ ಹೇಮಂತ "ಹಾಗಂತ ಹೇಳೋದಕ್ಕೆ ಶೂದ್ರನಿಗೆ ಅಧಿಕಾರವಿಲ್ಲ ಗೊತ್ತಾಯ್ತೋ. ಈ ಶಾಸನ ಮಾಡೋ ಹಕ್ಕು, ಪಾಲಿಸೋ ಹಕ್ಕು ನಮಗೆ ಮಾತ್ರ ಇರೋದು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೧೧೦) ಈ ಮಾತುಗಳ ಆಶಯ ಪುರೋಹಿತಶಾಹಿ ಸೃಷ್ಟಿಸಿರುವ ಜಾತಿಯ ಅಫೀಮಿನ ಮತ್ತಿನಿಂದ ಭಾರತೀಯ ಗ್ರಾಮಗಳ ಸುಶಿಕ್ಷಿತ ಯುವ ಸಮುದಾಯ ಹೊರಬರಬೇಕೆಂಬುದೆ ಆಗಿದೆ.

ಇಂತಹದೇ ಆಶಯವು ಚಿದಂಬರ ರಹಸ್ಯ ಕಾದಂಬರಿಯಲ್ಲೂ ಕಾಣಸಿಗುತ್ತದೆ. ಕಾದಂಬರಿಯಲ್ಲಿ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳಾದ ಇಂಗ್ಲೀಷ್ ಗೌಡ, ಚಂದ್ರ, ರಮೇಶ್, ಜೋಸೆಫ್ ಅಂಗಾರ, ರಫಿ, ಮುಂತಾದ ಯುವಕರು ಭಿನ್ನ ಜಾತಿ,

ಧರ್ಮದವರಾದರೂ ಅವರಲ್ಲಿ ಅದರ ಬಗ್ಗೆ ಕಿಂಚಿತ್ ಆಸಕ್ತಿಯೂ ಇಲ್ಲ. ಕತೂಹಲವೂ ಇಲ್ಲ. ಇವರೆಲ್ಲಾ ಜಾತಿ, ಧರ್ಮಗಳನ್ನು ಮೀರುವ ಮನಸ್ಥಿತಿ ಉಳ್ಳವರಾಗಿದ್ದಾರೆ ಮತ್ತು ಅಂತರ್ಜಾತಿ ವಿವಾಹದೆಡೆಗೆ ತುಡಿಯುತ್ತಾರೆ ಕೂಡ. "ಒಂದೊಮ್ಮೆ ಜಾತಿವಿನಾಶ ಕಾರ್ಯಕ್ರಮ ಹಾಕಿ ಅಂತರ್ಜಾತೀಯ ವಿವಾಹವಾಗಬೇಕು, ಜಾತಿಗಳನ್ನೂ ಕಂದಾಚಾರಗಳನ್ನೂ ಮೂಢನಂಬಿಕೆಗಳನ್ನೂ ತಿರಸ್ಕರಿಸಬೇಕು ಎಂದೆಲ್ಲಾ ತೀರ್ಮಾನ ತಗೊಂಡಾಗಲೂ ಅವರಿಗೆ ತಾತ್ಕಾಲಿಕವಾಗಿಯಾದರೂ ಹೀಗೇ ನೆಮ್ಮದಿಯಾಗಿತ್ತು.... ಮತ್ತೊಬ್ಬ ಜೋಸೆಫ್ ಅಂಗಾರ ಕೊಂಚ ಕರ್‍ರಗೆ ಕುಳ್ಳಗಿದ್ದ. ಈತನ ಕೂದಲು ನೀಗ್ರೋಗಳ ಕೂದಲಿನಂತೆ ಗುಂಗುರು ಸುತ್ತಿಕೊಂಡಿತ್ತು. ಕನ್ನಡ ಜಿಲ್ಲೆಯ ಕಡೆಯವನಾದ ಈತನ ಪೂರ್ವಿಕರು ಯಾರೋ ಹೊಲೆಯರ ಜಾತಿಯಿಂದ ಮತಾಂತರಗೊಂಡಿದ್ದರಿಂದಲೇ ಈತನ ತಂದೆ ರೋಡ್ರಿಕ್ಸರ ತೋಟದಲ್ಲಿ ರೈಟರಾಗಲು ಸಾಧ್ಯವಾಗಿದ್ದು. ಇಲ್ಲದಿದ್ದರೆ ಇಂದಿಗೂ ಅಂಗಾರನಿಗೆ ಈ ಮೂವರ ಮಧ್ಯೆ ಸಮಾನಸ್ಕಂಧನಂತೆ ಆತ್ಮಾಭಿಮಾನದಿಂದ ಕೂರಲು ಸಾಧ್ಯವಾಗುತ್ತಿರಲಿಲ್ಲ." (ಚಿದಂಬರ ರಹಸ್ಯ, ೨೦೦೯, ಪುಟ-೦೨ & ೦೩) ಹಾಗಾಗಿಯೇ ರಫಿ-ಜಯಂತಿ ಪ್ರೀತಿಯನ್ನು ಈ ಯುವಕರು ಬೆಂಬಲಿಸುತ್ತಾರೆ. ಅಂತರ್ಧರ್ಮೀಯ ಪ್ರೀತಿಯಲ್ಲಿ ಯಾವ ಅಪರಾಧವೂ ಅವರಿಗೆ ಕಾಣುವುದಿಲ್ಲ. ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳ ಬಗ್ಗೆ ತೇಜಸ್ವಿಯವರಿಗೆ ಯಾಕಿಷ್ಟು ಒಲವು? ಅವರ ಸಾಹಿತ್ಯದಲ್ಲಿ ಈ ಬಗೆಯ ವಿಚಾರಗಳು ಪದೇ ಪದೇ ಪ್ರಸ್ತಾಪವಾಗುವುದು. ಅವುಗಳನ್ನು ಗೆಲ್ಲಿಸುವುದು ತೇಜಸ್ವಿಯವರಿಗೆ ಯಾಕೆ ಮುಖ್ಯವಾಗುತ್ತದೆ?

ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳಿಂದ ಸಂವಿಧಾನದ ಆಶಯವಾದ ಜಾತಿವಿನಾಶ ಸಾಧ್ಯವಾಗುತ್ತದೆ. ಮತೀಯ ಕಲಹಗಳು ನಿಯಂತ್ರಣಗೊಳ್ಳುತ್ತವೆ ಎಂದು ತೇಜಸ್ವಿ ಕಥನ ಗಾಢವಾಗಿ ನಂಬುತ್ತದೆ. ಸಮಾಜವಾದಿ ಚಿಂತಕರೂ, ರಾಜಕಾರಣಿಯೂ ಆದ ರಾಮಮನೋಹರ ಲೋಹಿಯಾ ಸಂಸತ್ತಿನಲ್ಲಿ ಸಂವಿಧಾನದ ಆಶಯದಂತೆ ಜಾತಿವಿನಾಶ ಆಗಬೇಕಾದರೆ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳಿಂದ ಮಾತ್ರ ಸಾಧ್ಯ. ಹಾಗಾಗಿ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಿತರಿಗೆ ಮೀಸಲಾತಿಯ ಸೌಲಭ್ಯವನ್ನು ನೀಡಿ ಪ್ರೋತ್ಸಾಹಿಸಬೇಕು, ಬದುಕಿನ ಭದ್ರತೆಯನ್ನು ಒದಗಿಸಬೇಕು ಎಂದು ಚರ್ಚಿಸಿದ್ದರು. (ಹೆಚ್ಚಿನ ವಿವರಗಳಿಗೆ-ನಟರಾಜ್ ಹುಳಿಯಾರ್(ಸಂ), ರಾಮಮನೋಹರ ಲೋಹಿಯಾ ಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮) ತೇಜಸ್ವಿಯವರ ಕಥನದ ಈ ನಿಲುವುಗಳ ಮೇಲೆ ರಾಮಮನೋಹರ ಲೋಹಿಯಾರವರ ವಿಚಾರಧಾರೆಗಳು ಗಾಢವಾದ ಪ್ರಭಾವವನ್ನು ಬೀರಿವೆ. ಸ್ವತಃ ತೇಜಸ್ವಿಯವರೇ ಅಂತರ್ಜಾತಿ ವಿವಾಹವಾಗಿದ್ದು, ಸಭೆ ಸಮಾರಂಭಗಳಲ್ಲಿ, ಪತ್ರಿಕೆಗಳಲ್ಲಿ ಈ

ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಿತರಿಗೆ ಎರಡೂ ಕುಟುಂಬಗಳಿಂದ ಸಹಕಾರ ದೊರೆಯುವುದಿಲ್ಲ. ಅವರು ಜಾತೀವಾದಿಗಳ, ಮತಾಂಧರ ದ್ವೇಷಕ್ಕೆ, ಒಳಗಾಗಿ ಕೆಲವೊಮ್ಮೆ ಜೀವವನ್ನೇ ಬಿಡುವ ಅಪಾಯಕ್ಕೆ ಒಳಗಾಗಬೇಕಾಗುತ್ತದೆ.

ಇತ್ತೀಚೆಗೆ ಜಾತಿಯ ಕಾರಣದಿಂದ ನಡೆಯುತ್ತಿರುವ ಮರ್ಯಾದೆ ಹತ್ಯೆಗಳು, ಲವ್ ಜಿಹಾದ್ ಹೆಸರಿನಲ್ಲಿ ನಡೆಯುತ್ತಿರುವ ಪರ-ವಿರೋಧ ದಾಳಿಗಳು, ದೈಹಿಕ ಹಲ್ಲೆಗಳು, ಇದಕ್ಕೆ ಸಾಕ್ಷಿಯಾಗಿವೆ. ಇಷ್ಟೇ ಅಲ್ಲದೆ ಮಂಡ್ಯದಲ್ಲಿ ಹಿಂದೂ ಮುಸ್ಲಿಂ ಎರಡೂ ಕುಟುಂಬಗಳು ಒಪ್ಪಿ ತಮ್ಮ ವೈದ್ಯ ಮಕ್ಕಳಿಗೆ ವಿವಾಹ ಮಾಡುವ ಸಂದರ್ಭದಲ್ಲಿ ಆ ಕುಟುಂಬಗಳಿಗೆ ಸಂಬಂಧವೇ ಇಲ್ಲದ ಮತ್ಯಾರೋ ಈ ಮದುವೆಯನ್ನು ವಿರೋಧಿಸುವುದು, ಪ್ರತಿಭಟಿಸುವುದು ಜಾತಿ ಮತ್ತು ಮತವನ್ನು ಮೀರಿದವರಿಗೆ ಎದುರಾಗುವ ಸಂಕಷ್ಟಗಳಿಗೆ ಸಾಕ್ಷಿಯಾಗಿವೆ. ಆದ್ದರಿಂದ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಿತರಿಗೆ ಬದುಕಿನ ಭದ್ರತೆ ಮತ್ತು ಮೀಸಲಾತಿಯ ಸೌಲಭ್ಯವನ್ನು ಕಲ್ಪಿಸಿ ಪ್ರೋತ್ಸಾಹಿಸುವ ಕುರಿತು ರಾಜ್ಯದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚಿಸುವಂತೆ ರಾಜಕಾರಣಿಗಳಾಗಿರುವ ಸಮಾಜವಾದಿ ಗೆಳೆಯರಲ್ಲಿ ತೇಜಸ್ವಿ ವಿನಂತಿಸಿದ್ದಾರೆ. ದಲಿತ ಕವಿ ಸಿದ್ದಲಿಂಗಯ್ಯನವರನ್ನು ಹೊರತುಪಡಿಸಿ ಮತ್ಯಾವ ರಾಜಕಾರಣಿಯೂ ಈ ಬಗ್ಗೆ ಮಾತನಾಡದಿರುವುದು ತೇಜಸ್ವಿಯವರಿಗೆ ಬೇಸರವನ್ನು, ನಿರಾಶೆಯನ್ನು ತಂದಿರುತ್ತದೆ. (ಹೆಚ್ಚಿನ ವಿವರಗಳಿಗೆ-ಪೂರ್ಣಚಂದ್ರ ತೇಜಸ್ವಿ, ಹೊಸ ವಿಚಾರಗಳು, ೨೦೧೨)

ಹಾಗಾಗಿ ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಪ್ರಮುಖವಾಗಿ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳು ಸಾಮಾಜಿಕ ಕಾಳಜಿಯ ಆಶಯವಾಗಿ ಕಾಣುತ್ತವೆ. ಹುಲಿಯೂರಿನ ಸೋಮು ಮತ್ತು ನಳಿನಾಕ್ಷಿ, ಕೆಸರೂರಿನ ರಫಿ ಮತ್ತು ಜಯಂತಿಯ ವಿವಾಹಗಳನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಸೋಮುವಿಗೆ ಜಾತಿಯ ಹಿಡಿತಗಳು ರೇಜಿಗೆಯನ್ನು ಉಂಟುಮಾಡಿರುತ್ತವೆ. ಅವನಿಗೆ ಅವುಗಳನ್ನು ವಿರೋಧಿಸುವ ಮತ್ತು ಅವುಗಳಿಂದ ಬಿಡುಗಡೆಗೊಳ್ಳುವ ಹಾದಿಯಾಗಿ ಅಂತರ್ಜಾತಿ ವಿವಾಹ ಕಾಣುತ್ತದೆ. ಹುಲಿಯೂರಿನ ಸರಹದ್ದು ಇಡೀ ಭಾರತೀಯ ಜಾತಿ ಪರಂಪರೆಯ ಸಂಕೇತವಾದರೆ, ಸೋಮು ಸಂವಿಧಾನದ ಆಶಯವನ್ನು ಈಡೇರಿಸುವ ಸ್ವತಂತ್ರ ಭಾರತದ ಜಾತ್ಯತೀತ ಗುಣವುಳ್ಳ ಆಧುನಿಕ ಪ್ರಜ್ಞೆಯ ಸಂಕೇತವಾಗಿದ್ದಾನೆ. ಜಾತಿವಾದ, ಧರ್ಮಾಂಧತೆ, ಭ್ರಷ್ಟಾಚಾರದ ಕೂಪವಾಗಿರುವ ಕೆಸರೂರಿನ ವಾತಾವರಣದಲ್ಲಿ ಎಲ್ಲವೂ ಅವನತಿಯ ಹಾದಿಯನ್ನು ಹಿಡಿದಿದ್ದರೆ, ರಫಿ ಮತ್ತು ಜಯಂತಿಯ ಪ್ರೀತಿ ಗೆಲ್ಲುವುದು ನಿಜಕ್ಕೂ ತೇಜಸ್ವಿಯವರ ಕಥನದ ಬಹುದೊಡ್ಡ ಆಶಯವಾಗಿ,

ನಾಳೆಗಳ ಜೀವಂತಿಕೆಯ ಲಕ್ಷಣವಾಗಿ ಕಾಣುತ್ತದೆ. ಈ ಪ್ರಕ್ರಿಯೆಗಳು ಯುವ ಜನತೆಯಲ್ಲಿ ಒಂದಷ್ಟು ಉಸಿರಾಡುವ ಚೈತನ್ಯವನ್ನು ತುಂಬುತ್ತವೆ.

ಕೆಸರೂರಿನ ಜನ ತಾವೇ ಸೃಷ್ಟಿಸಿಕೊಂಡ, ಪರಸ್ಪರ ಲಂಟಾನವೆಂಬ ದ್ವೇಷಾಸೂಯೆಗಳ ಹೊಗೆಯಲ್ಲಿ ಸಿಕ್ಕಿ ಸಾಯುತ್ತಿದ್ದರೆ, ಲಂಟಾನದ ಹೊಗೆಯಿಂದ, ಆ ಕೆಸರಿನ ಕೂಪದಿಂದ ಬಿಡುಗಡೆ ಹೊಂದಿ ಬೆಟ್ಟದ ತುದಿಯನ್ನು ತಲುಪುವ ರಫಿ ಜಯಂತಿ ಸ್ವಸ್ಥ ಸಮಾಜದ ಸಂಕೇತವಾಗಿ ಕಾಣುತ್ತಾರೆ. ಕಾದಂಬರಿಯ ಅಂತ್ಯದಲ್ಲಿ ರಫಿ ಮತ್ತು ಜಯಂತಿಯ ನಡುವೆ ನಡೆಯುವ ಸಂಭಾಷಣೆ ಇಡೀ ಭಾರತೀಯ ಸಮಾಜ ಎಚ್ಚತ್ತುಕೊಂಡು ನಡೆಯಬೇಕಾದ ಮಾರ್ಗವನ್ನು ಸೂಚಿಸುತ್ತದೆ. "ನೋಡು ಜೇನುಕಲ್ಲುಗುಡ್ಡದ ತುದಿ ಚೆನ್ನಾಗಿ ಕಾಣ್ತಿದೆ. ಕೆಸರೂರಿನ ಜನ ಈಗಲೂ ಎಲ್ಲಾ ಅಲ್ಲಿಗೆ ಓಡಿದರೆ ಬೆಂಕಿಯಿಂದ ತಪ್ಪಿಸಿಕೋಬಹುದು' ಎಂದಳು ಜಯಂತಿ. 'ನಮಗೆ ಕಾಣ್ತಿದೆ! ಅವರಿಗೆ ಕಾಣ್ತದಾ? ಈ ಹೊಗೇಲಿ! ಎಂದ ರಫಿ." (ಚಿದಂಬರ ರಹಸ್ಯ, ೨೦೦೯, ಪುಟ-೨೧೭) ಈ ಮಾತುಗಳ ಮೂಲಕ ಕೆಸರೂರನ್ನು ಸಂಕೇತಿಸುವ ನಮ್ಮ ಸಮಾಜ ನಡೆಯುತ್ತಿರುವ ಹಾದಿ ಹಾಗೂ ನಡೆಯಬೇಕಾದ ಹಾದಿಯನ್ನು ಸೂಚ್ಯವಾಗಿಯೇ ತೇಜಸ್ವಿ ಕಥನ ಮನಗಾಣಿಸುತ್ತದೆ.

ಇಡೀ ಸಮಾಜ ಜಾತಿ ಮತ್ತು ಧರ್ಮದ ಕೂಪದಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯನ್ನು ತಲುಪಿದೆ. ನಮ್ಮ ಸಮಾಜ ಮೇಲ್ಜಾತಿ ಮೇಲ್ವರ್ಗಗಳು ಹೊಸೆದಿರುವ ಜಾತಿ ಮತ್ತು ಮತೀಯ ಬೇಲಿಯಲ್ಲಿ ಸಿಕ್ಕಿಹಾಕಿಕೊಂಡಿದೆ. ಸಮಾಜದಲ್ಲಿ ನಡೆಯುವ ಪ್ರತಿಯೊಂದು ಅವಗಢಗಳಿಗೂ ಜಾತಿ ಮತ್ತು ಮತೀಯ ಲೇಪಗಳನ್ನು ತೊಡಿಸಿ ಜನರನ್ನು ದಿಕ್ಕುತಪ್ಪಿಸುವ ಹಾಗೂ ಆ ಮೂಲಕ ಅವರನ್ನು ಹಿಂಸೆಗೆ ದೂಡುವ ಹುನ್ನಾರಗಳನ್ನು ಲಾಭಕೋರ ಮನಸ್ಸುಗಳು ಮಾಡುತ್ತಿವೆ. ಕೆಸರೂರಿನ ರಾಮಾಚಾರಿಯ ಕಚ್ಚೇಹರುಕ ಬುದ್ಧಿ, ಕೃಷ್ಣೇಗೌಡನ ರಾಜಕೀಯದ ಹಂಬಲ, ಸುಲೇಮಾನ್ ಬ್ಯಾರಿಯ ಕರಾಳ ಭೂಗತ ಚಟುವಟಿಕೆಗಳು ಅಲ್ಲಿನ ಪ್ರತಿಯೊಂದು ಮನೆಯನ್ನೂ ಬೆಂತರಲೋಕವನ್ನಾಗಿಸಿವೆ. ಏಲಕ್ಕಿಯ ಅವಸಾನದಂತೆ ಕೆಸರೂರು ಸಮಾಜ ತನಗರಿವಿಲ್ಲದೆಯೇ ಅವನತಿಯ ಹಾದಿಯಲ್ಲಿ ಬಂದು ನಿಂತಿದೆ. "ಏಲಕ್ಕಿ ತೋಟ ಸುಡೋದಕ್ಕೆ ಮೊದಲು ಕೆಸರೂರಿನ ಸಮಾಜ ಸುಡಬೇಕು, ಆ ಅಯೋಗ್ಯ ವಿಜ್ಞಾನಿಗಳನ್ನ, ಮೂರ್ಖ ರಾಜಕಾರಣಿಗಳನ್ನ, ದೇವಸ್ಥಾನ ಮಸೀದಿ ಕಟ್ಟಿಕೊಂಡು ಮೈಕಿನಲ್ಲಿ ಕಿರಿಚೋ ಧರ್ಮಾಂಧರನ್ನ ಎಲ್ರನ್ನೂ ಸುಡಬೇಕು" (ಚಿದಂಬರ ರಹಸ್ಯ, ೨೦೦೯, ಪುಟ-೫೩ & ೫೪) ಎನ್ನುವ ಪಾಟೀಲರ ಹತಾಶೆಯ ಮಾತುಗಳು ಕೆಸರೂರು ತಲುಪಿರುವ ಅಧೋಗತಿಯನ್ನೇ ಸಂಕೇತಿಸುತ್ತವೆ. ರಫಿ-ಜಯಂತಿಯರ ಪ್ರೇಮ ಪ್ರಕರಣದಂತೆ ಎಲ್ಲ ತತ್ವದ ಎಲ್ಲೆ ಮೀರಬೇಕಾಗಿದೆ. ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಯಿಂದಲೇ ಗೆಲ್ಲಬೇಕಾಗಿದೆ. ಸಮಾನತೆ,

ನೆಮ್ಮದಿಯಿಂದ ಕೂಡಿದ ಆರೋಗ್ಯಕರ ಸಮಾಜದ ನಿರ್ಮಿತಿಗೆ ಜಾತಿ ಮತ್ತು ಧರ್ಮಗಳ ಲಂಟಾನವೆಂಬ ಸ್ವಾರ್ಥ ಅಥವಾ ಕೇಡಿನ ಬೇಲಿಯಿಂದ ಜಿಗಿದು ಹೊರಬರದ ಹೊರತು ಅನ್ಯಮಾರ್ಗವಿಲ್ಲ ಎಂಬುದು ಈ ಕಾದಂಬರಿ ನೀಡುವ ಎಚ್ಚರಿಕೆಯಾಗಿದೆ. ಕೆಸರೂರಿನ ಸಮಾಜದ ಸುಧಾರಣೆಗೆ ಸಂಶೋಧನ ಕೇಂದ್ರದ ವಿಜ್ಞಾನಿಗಳು, ವಿಚಾರವಾದಿಗಳು, ಸರ್ಕಾರಗಳು, ರಾಜಕಾರಣಿಗಳು ಶೋಧಿಸುತ್ತಿರುವ ಚಿದಂಬರ ರಹಸ್ಯವಾಗಿರುವ ಕೆಸರೂರು ಹೈಬ್ರಿಡ್ ಏಲಕ್ಕಿ ತಳಿ ಬೇರ್‍ಯಾವುದೂ ಅಲ್ಲ, ಅದು ರಫಿ ಮತ್ತು ಜಯಂತಿಯ ಪ್ರೇಮವೇ ಆಗಿದೆ. ಈ ಹೈಬ್ರಿಡ್ ಪ್ರೇಮತಳಿಯಿಂದ ಸಮಾಜವನ್ನು ತೀವ್ರವಾಗಿ ಕಾಡುತ್ತಿರುವ ಜಾತಿ ಮತ್ತು ಮತೀಯವಾದಗಳನ್ನು ನಿರ್ಮೂಲನೆ ಮಾಡಲು ಸಾಧ್ಯವಿದೆ ಎಂಬುದು ತೇಜಸ್ವಿಯವರ ಕಥನದ ಆಶಯವಾಗಿದೆ.

ಜಾತಿ ಮತ್ತು ಧರ್ಮದ ಆಧಾರದಿಂದಲೇ ಅಧಿಕಾರ, ಸ್ಥಾನಮಾನಗಳನ್ನು ಪಡೆಯುವ, ವಂಚಿತವಾಗುವ ಹಾಗೂ ಗೌರವ, ಅಗೌರವಗಳಿಗೆ ಕಾರಣವಾಗುವ ಜಾತೀಯ ಜಗತ್ತಿನಲ್ಲಿ ಚಿದಂಬರ ರಹಸ್ಯದ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳಾದ ಇಂಗ್ಲೀಷ್ ಗೌಡ, ಚಂದ್ರ, ರಮೇಶ್, ಜೋಸೆಫ್ ಅಂಗಾರ, ರಫಿ ಮುಂತಾದ ಯುವಕರು ತೋರುವ ಜ್ಯಾತ್ಯಾತೀತ ನಿಲುವುಗಳು ತೇಜಸ್ವಿಯವರ ಕಥನ ಯುವಕರ ಮೇಲೆ, ಅವರ ಸಾಮರ್ಥ್ಯದ ಮೇಲೆ ಇಟ್ಟ ನಂಬಿಕೆಯನ್ನು ಸಂಕೇತಿಸುತ್ತದೆ. ಯುವಕರಿಂದ ಮಾತ್ರ ಜಾತಿ ಮತ್ತು ಮತೀಯವಾದವನ್ನು ನಾಶ ಮಾಡಲು ಸಾಧ್ಯ. ಜಾತಿ ಮತ್ತು ಮತೀಯ ಕೂಪದಲ್ಲಿ ಬಿದ್ದು ಹೊರಳಾಡಿ ಸಾಯುತ್ತಿರುವ ಸಮಾಜಕ್ಕೆ ಒಂದಷ್ಟು ಉಸಿರಾಡುವ ವಾತಾವರಣವನ್ನು ಈ ಯುವ ಸಮುದಾಯ ನೀಡುತ್ತದೆ ಎಂದು ತೇಜಸ್ವಿ ಕಥನ ನಂಬುತ್ತದೆ. ಇಂದು ಯುವ ಸಮುದಾಯ ಯಾರದೋ ಕುತಂತ್ರಗಳಿಗೆ, ಲಾಭಗಳಿಗೆ ಬಲಿಪಶುವಾಗಿ, ಹಣ, ಜಾತಿ ಮತ್ತು ಧರ್ಮಗಳ ಸುಳಿಗಳಲ್ಲಿ ಸಿಕ್ಕಿ ನರಳುತ್ತಿರುವ ಸಂದರ್ಭದಲ್ಲಿ ತೇಜಸ್ವಿಯವರ ಕಥನವು ಈ ಪ್ರಸಂಗಗಳ ಮೂಲಕ ನೀಡುವ ಎಚ್ಚರಿಕೆಗಳು ಪ್ರಸ್ತುತವೆಸುತ್ತವೆ.

ಸರ್ಕಾರಗಳು ಅಧಿಕಾರ ವಿಕೇಂದ್ರೀಕರಣಕ್ಕಾಗಿ ರೂಪಿಸಿರುವ ಪಂಚಾಯತ್‌ರಾಜ್ ವ್ಯವಸ್ಥೆ ಹಾಗೂ ಸಹಕಾರಿ ಸಂಘ-ಸಂಸ್ಥೆಗಳ ಸ್ಥಾಪನೆಯ ಹಿಂದೆ ಗ್ರಾಮಗಳ ಸುಧಾರಣೆಯ ಆಶಯವಿತ್ತು. ಆದರೆ ಇಂದು ಈ ವ್ಯವಸ್ಥೆಯಿಂದಾಗಿ ಹಳ್ಳಿಗಳ ಮಟ್ಟದಲ್ಲಿ ಜಾತಿ ಮತ್ತು ಮತೀಯ ಕಲಹಗಳು ಹೆಚ್ಚುತ್ತಿರುವುದು ವಿಷಾದದ ಸಂಗತಿಯಾಗಿದೆ. ಈ ಅಧಿಕಾರ ವಿಕೇಂದ್ರೀಕರಣದಿಂದ ಗ್ರಾಮಗಳು ಅಭಿವೃದ್ಧಿಯಾಗುತ್ತ; ಅಗತ್ಯ ಮೂಲಭೂತ ಸೌಲಭ್ಯಗಳನ್ನು ಸುಲಭದಲ್ಲಿ ಪಡೆಯಲು ಸಾಧ್ಯವಾಗುತ್ತದೆ ಎಂದು ಭಾವಿಸಿದ್ದ ಚಿಂತಕರಿಗೆ ತೇಜಸ್ವಿಯವರ ಕಥನ ಸಾಹಿತ್ಯ ಈ ರಾಜಕೀಯ ಅಧಿಕಾರ ಹೇಗೆಲ್ಲಾ ಜಾತಿ ಮತ್ತು ಮತೀಯ ಸಂಘರ್ಷಗಳಿಗೆ

ಎಡೆಮಾಡಿಕೊಟ್ಟಿದೆ ಎಂಬ ಕಟು ವಾಸ್ತವವನ್ನು ಎತ್ತಿ ತೋರಿಸುತ್ತದೆ. ಇಡೀ ವ್ಯವಸ್ಥೆಯೊಳಗೆ ಪ್ರಬಲ ಹಾಗೂ ಆರ್ಥಿಕವಾಗಿ ಬಲವುಳ್ಳ ಜಾತಿಗಳ ಜನರನ್ನು ಅಪರಾಧವೆಸಗಿದರೂ, ಭ್ರಷ್ಟರಾದರೂ ಯಾರೂ ಅವರನ್ನು ಮುಟ್ಟಲಾರರು. ಯಾವ ಕಾನೂನು ಸಹ ಅವರನ್ನು ಶಿಕ್ಷಿಸಲು ಮುಂದಾಗುವುದಿಲ್ಲ. ಈ ಅಂಶಗಳನ್ನು ತೇಜಸ್ವಿಯವರ ಕಥನ ಪರಿಣಾಮಕಾರಿಯಾಗಿ ಗುರುತಿಸುತ್ತದೆ. ಕುಬಿ ಮತ್ತು ಇಯಾಲ ಕಥೆಯಲ್ಲಿ "ಸೊಸೈಟಿ ಡೈರೆಕ್ಟರ್ ಶಿವಣ್ಣನಿಗೆ ಎಲ್ಲಾದರೂ ಈ ಹಮಾಲರು ತಾನು ಸೊಸೈಟಿ ಹಣ ತಿಂದುದರ ವಿವರಗಳನ್ನು ಬಹಿರಂಗಗೊಳಿಸುತ್ತಾರೋ ಎಂದು ಭಯವಿತ್ತು. ಅನೇಕ ಸಾರಿ ಕದ್ದು ಸಾಗಿಸುವಾಗಲೆಲ್ಲ ಈ ಹಮಾಲರೇ ಮೂಟೆಗಳನ್ನು ಲಾರಿಗೆ ಲೋಡು ಮಾಡಿದ್ದರು. ಗೊಬ್ಬರಕ್ಕೆ ಕಡೂರಿನ ಮರಳನ್ನೂ ಇವರ ಕೈಯಿಂದಲೇ ಮಿಶ್ರ ಮಾಡಿಸಿದ್ದ. ಆದ್ದರಿಂದಲೇ ಶಿವಣ್ಣ ಈ ಹಮಾಲರ ಮೇಲೆ ಕೊಂಚ ನಿಗಾ ಇಟ್ಟೇ ಇದ್ದ. ಬೇರೆ ಯಾವುದಾದರೂ ಒಂದು ಕೇಸಿನಲ್ಲಿ ಇವರನ್ನು ಸಿಕ್ಕಿಸಿ ಚರ್ಮ ಸುಲಿಸಿ ಹತ ಮಾಡಿಬಿಡಬೇಕೆಂದು ಹಂಚಿಕೆ ಹಾಕಿಕೊಂಡಿದ್ದ. ಅಥವಾ ಪ್ರಾಣಾಪಾಯದಷ್ಟು ತೊಂದರೆ ಕೊಟ್ಟು ಊರು ಬಿಡಿಸಬೇಕೆಂದು ಆಲೋಚಿಸಿದ್ದ." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ–೬೨ & ೬೩)

ಪ್ರಬಲ ಜಾತಿಗಳ ಪೈಪೋಟಿಯಲ್ಲಿ ಅಲ್ಪಸಂಖ್ಯಾತರೂ, ದುರ್ಬಲರೂ ಆದ ಕೆಳಜಾತಿಗಳು ಪಡುವ ಪಡಿಪಾಟಲುಗಳು, ಅಮಾಯಕ ಹಮಾಲರಾದ ರಂಗ, ರೆಹಮಾನ್ ಮತ್ತು ಇತರರ ಮೇಲೆ ನಡೆಯುವ ಅಮಾನುಷ ಹಿಂಸೆಗಳನ್ನು ನೋಡಿ ಮಾನವೀಯ ಮನಸ್ಸಿನ ಮಾತೃ ಹೃದಯಿ ಕುಬಿ ತತ್ತರಿಸಿಹೋಗುತ್ತಾನೆ. "ರಹಮಾನ್ ಹಾಗೂ ರಂಗ, ಹಲ್ಲು ಕಿರಿದುಕೊಂಡು ಒಳಗೆ ಬಂದರು. ಹಿಂದಿನ ದಿನ ಪೋಲೀಸರು ಯಾವುದೋ ಕಳುವಿನ ತನಿಖೆ ಮೇಲೆ ಚರ್ಮ ಸುಲಿಯುವವರೆಗೂ ಹೊಡೆದುಬಿಟ್ಟಿದ್ದರು. ಪೋಲೀಸಿನವರಿಗೂ ಗೊತ್ತಿತ್ತು, ಇವರು ಕಳ್ಳರೇ ಅಲ್ಲವೆಂದು. ಆದರೆ ಯಾರಿಗೊ ಹೊಡೆದು ತಾವು ಭಾರಿ ತನಿಖೆ ನಡೆಸುತ್ತಿದ್ದೇವೆಂದು ತೋರಿಸುವ ಅಗತ್ಯ ಪೋಲೀಸಿನವರಿಗಿತ್ತು. ಕುಬಿಗೆ ಹಮಾಲಿಗಳ ಅವಸ್ಥೆ ನೋಡಿ ತುಂಬಾ ಖೇದವಾಯ್ತು. ಅವರ ಬ್ಯಾಂಡೇಜುಗಳನ್ನೆಲ್ಲಾ ಬಿಚ್ಚಿ ಬೆಲ್ಟಿನಿಂದ ಹೊಡೆದ ಗಾಯಗಳನ್ನೆಲ್ಲ ನೋಡುತ್ತಾ ಚಿಂತೆಯಿಂದ ನಡೆದುದರ ಬಗ್ಗೆ ಕೇಳಿದ. 'ಏನೂ ಕಳ್ಳತನ ನಡೆದಿಲ್ಲ ಸ್ವಾಮಿ, ನೂರಾರು ಮೂಟೆ ನಾವು ಹೊತ್ತು ಸಾಗಿಸೋದಾದರೂ ಎಲ್ಲಿಗೆ? ಎಲ್ಲಾ ಸೊಸೈಟಿಯ ಡೈರೆಕ್ಟರುಗಳೂ ಕಾರ್ಯದರ್ಶಿಗಳೂ ಸೇರಿ ತಿಂದುಹಾಕಿದ್ದಾರೆ. ಜನರ ಕಣ್ಣಿಗೆ ಮಣ್ಣೆರೆಚುವುದಕ್ಕೆ ಕಂಪ್ಲೇಂಟು ಕೊಟ್ಟು ನಮಗೆ ಹೊಡೆಸುತ್ತಿದ್ದಾರೆ. ಬೈರಾಪುರದಲ್ಲಿ ಯಾವಾಗ ಕಳ್ಳತನ ಆಗಲಿ ನಮ್ಮನ್ನು ಕರೆದು ಚಮಡ ಸುಲಿಯುತ್ತಾರೆ ಸ್ವಾಮಿ. ನಾವು ಲಂಚಗಿಂಚ ಕೊಟ್ಟು

ಪೋಲೀಸರನ್ನು ಸಾಕುವಷ್ಟು ಸಾವುಕಾರರಲ್ಲ ಸ್ವಾಮಿ ಎಂದು ಅತ್ತುಕೊಂಡರು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೪೭ & ೪೮)

ಹೀಗೆ ಕದ್ದವರು, ಕೊಲೆಗಡುಕರು ಯಾರೆಂದು ಪೋಲೀಸರಿಗೆ ಗೊತ್ತಿದ್ದರೂ, ಯಾರದೋ ತಪ್ಪಿಗೆ, ತೃಪ್ತಿಗೆ, ಇನ್ನಾರನ್ನೋ ಶಿಕ್ಷಿಸುವುದು ನಮ್ಮ ಕಾನೂನು ರಕ್ಷಕರ ಕರ್ತವ್ಯ ನಿಷ್ಠೆ! ಇಯಾಲ ಕೊಲೆ ವಿಷಯದಲ್ಲಿ ಪೋಲೀಸರು ಹಮಾಲರನ್ನು ಬರಹೇಳಿದಾಗ ಅವರು ಡಾ. ಕುಬಿಯ ಬಳಿ ಸಹಾಯ ಮಾಡುವಂತೆ ವಿನಂತಿಸುವ ಪರಿ ಎಂಥವರನ್ನೂ ಈ ವ್ಯವಸ್ಥೆಯ ಬಗ್ಗೆ ಅಸಹ್ಯ ಹುಟ್ಟುವಂತೆ ಮಾಡುತ್ತದೆ. "ಹಮಾಲರು ದೈನ್ಯದಿಂದ ಡಾಕ್ಟರ್ ಕಡೆಗೆ ನೋಡುತ್ತಾ ಸ್ವಾಮಿ, ಒಂದು ಕೊನೆ ಉಪಕಾರ ಮಾಡ್ರಿ ಸ್ವಾಮಿ. ನೀವು ನಮಗೆ ಪ್ರಾಣಕೊಟ್ಟ ದೇವರಿದ್ದಂಗೆ. ಇನ್‌ಸ್ಪೆಕ್ಟರಿಗೆ ಹೇಳಿ. ಬೇಕಾದರೆ ಅವರು ನಮ್ಮ ಚಮಡ ಸುಲಿಯಲಿ. ಆದರೆ ಬೆನ್ನು ಬಿಟ್ಟು ಬೇರಲ್ಲಾದರೂ ಹೊಡೆಯಲಿ ಅಂತ ಹೇಳಿ ಸ್ವಾಮಿ' ಎಂದು ಹೇಳಿದರು" (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೬೦) ಬೆನ್ನು ಅವರ ದುಡಿಮೆಯ ಆಧಾರ. ಕದಿಯಲು ಬಾರದ ಇವರು ದುಡಿದು ಬದುಕಲು ಬಯಸುವವರು. ಅವರಿಗೆ ಭಯವಾಗುತ್ತಿರುವುದು ಪೋಲೀಸಿನವರ ಹೊಡೆತಗಳಿಗಲ್ಲ; ಬೆನ್ನ ಚಮಡ ಸುಲಿದರೆ ದುಡಿಮೆ ನಿಲ್ಲುವ, ಬದುಕಿನ ಮೂಲಾಧಾರವೇ ಇಲ್ಲವಾಗುವ ಭಯ. ಹಣ, ಅಧಿಕಾರದ ಅಮಲಿನಲ್ಲಿರುವ ಅಧಿಕಾರಶಾಹಿಗೆ ಇವರ ಸಂಕಟ ಅರ್ಥವಾಗುವದಾದರೂ ಹೇಗೆ? ಅಂದರೆ ಯಾರದೋ ತಪ್ಪುಗಳನ್ನು ಮುಚ್ಚಿಹಾಕಲು, ಮತ್ಯಾರ ಮೇಲೆಯೋ ದ್ವೇಷ ಸಾಧಿಸಲು, ಜಾತಿ-ಮತೀಯ ಕಲಹಗಳನ್ನು ಸೃಷ್ಟಿಸಿ ಲಾಭಪಡೆಯುವ ಸಮುದಾಯಗಳು ಇಂತಹ ಶಕ್ತಿಗಳಿಗೆ ಬೆಂಬಲವಾಗಿ ನಿಂತಿರುವ ಅಧಿಕಾರಶಾಹಿ ಮತ್ತು ಭ್ರಷ್ಟರು ಇಂದೂ ಸಹ ಕ್ರಿಯಾಶೀಲರಾಗಿದ್ದಾರೆ. ಇಲ್ಲಿ ಜಾತಿ- ಮತೀಯ ಹಿಂಸೆಗಳು ಆಯಾ ಜಾತಿ ಮತ್ತು ಧರ್ಮಗಳ ಸಮುದಾಯವನ್ನು ಸಮಗ್ರವಾಗಿ ಒಳಗುಮಾಡಿಕೊಳ್ಳುತ್ತಿಲ್ಲ. ಅಲ್ಲಿನ ಕೆಳವರ್ಗಗಳನ್ನು ಮಾತ್ರ ಹಿಂಸೆಯ ಕೂಪಕ್ಕೆ ತಳ್ಳುತ್ತಿವೆ. ಸಹಜವಾಗಿಯೇ ಮೇಲ್ವರ್ಗಗಳು ಈ ಕಲಹ ಮತ್ತು ಹಿಂಸೆಗಳಿಂದ ಲಾಭ ಮಾತ್ರ ಮಾಡುತ್ತಿರುವುದರ ಕುರಿತ ಎಚ್ಚರಿಕೆಯನ್ನು ತೇಜಸ್ವಿ ಕಥನ ನೀಡುತ್ತದೆ. ಅಂದರೆ ಇಲ್ಲಿ ಜಾತಿ ಮತ್ತು ಮತೀಯ ಕಲಹಗಳನ್ನು ಹುಟ್ಟುಹಾಕುತ್ತಿರುವವರು ಯಾರು ಮತ್ತು ಅದರ ಹಿಂದಿನ ಕಾರ್ಯಸೂಚಿಗಳು ಯಾವುವು? ಇವುಗಳ ಸಂತ್ರಸ್ತರು ಮತ್ತು ಲಾಭ ಮಾಡುವವರು ಯಾರಾಗಿದ್ದಾರೆ? ಎಂಬ ತಿಳುವಳಿಕೆ ಜನತೆಯಲ್ಲಿ ಬರಬೇಕು. ಈ ತಿಳುವಳಿಕೆ ಮತ್ತು ಎಚ್ಚರಿಕೆಯ ನಡೆಯಿಂದ ಮಾತ್ರ ಈ ಜಾತಿ ಮತ್ತು ಮತೀಯ ಶಕ್ತಿಗಳನ್ನು ನಿಯಂತ್ರಿಸಬಹುದು ಎಂಬುದು ತೇಜಸ್ವಿ ಕಥನದ ಆಶಯವಾಗಿದೆ.

ಇಂದು ಸರ್ಕಾರಗಳ ಪ್ರಾಯೋಜಿತ ಕಾರ್ಯಕ್ರಮವಾಗಿ ನಡೆಯುತ್ತಿರುವ ಜಾತಿ ಸಮೀಕ್ಷೆಗಳು ರಾಜಕೀಯ ಅಧಿಕಾರವನ್ನು ಪಡೆಯಲೆತ್ನಿಸುವ ಹುನ್ನಾರದಂತೆ ಕಂಡರೂ ಅವು ಸಾಮಾಜಿಕ ಯಾಜಮಾನ್ಯ ಸ್ಥಾಪನೆಯ ಉದ್ದೇಶವನ್ನು ಸಹಾ ಹೊಂದಿವೆ. ಇದೇ ಅಭಿಪ್ರಾಯವನ್ನು ಧರ್ಮಗಳಿಗೂ ಅನ್ವಯಿಸಬಹುದು. ಜಾತಿಗಳನ್ನು ತನ್ನ ಶಕ್ತಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದ ಒಂದು ರಾಜಕೀಯ ಪಕ್ಷ, ಜಾತಿ ಸಮೀಕ್ಷೆಗಳ ಮೂಲಕ ಆ ಅಧಿಕಾರವನ್ನು ನಿರಂತರಗೊಳಿಸಿಕೊಳ್ಳಲು ಯತ್ನಿಸುತ್ತಿದ್ದರೆ, ಧರ್ಮದ ಆಧಾರದ ಮೇಲೆ ಅಧಿಕಾರದ ಗದ್ದುಗೆಯನ್ನೇರಿದ ಮತ್ತೊಂದು ರಾಜಕೀಯ ಪಕ್ಷ ಜಾತಿ ಸಮೀಕ್ಷೆಯ ಪ್ರತಿಫಲವಾಗಬಹುದಾದ ಜಾತಿ ವಿಂಗಡಣೆಯ ನೋಟವನ್ನು ಸಮಾಜ ಕಂಟಕವೆಂದು ಭಾವಿಸಿ ವಿರೋಧಿಸುತ್ತದೆ. ಮತ/ಧರ್ಮದ ಆಧಾರದ ಮೇಲೆ ಸಮಾಜವನ್ನು ಒಡೆದು ರಾಜಕೀಯ ಮಾಡುತ್ತಿರುವುದು ದುರಂತ. ಅಂದರೆ ಧರ್ಮ-ಧರ್ಮಗಳ ನಡುವೆ ಸಹಜವಾಗಿರುವ ಜನಸಂಖ್ಯೆ, ಊಟೋಪಚಾರ, ಸಂಪ್ರದಾಯ, ಆಚರಣೆ ಉಡುಗೆ-ತೊಡುಗೆ ಹೀಗೆ ಹಲವು ಭಿನ್ನತೆಗಳನ್ನೇ ದಾಳವಾಗಿ ಮಾಡಿಕೊಂಡು ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಭಾರತೀಯ ಸಮಾಜವನ್ನು ಛಿದ್ರಗೊಳಿಸಿ ಅಧಿಕಾರಕ್ಕೇರಲು ಪ್ರಯತ್ನಿಸುತ್ತಾ; ಜಾತಿ ಸಮೀಕ್ಷೆಯಿಂದ ಸಮಾಜ ಛಿದ್ರಗೊಳ್ಳತ್ತದೆ ಎಂದು ಬೊಬ್ಬೆ ಹೊಡೆಯುತ್ತಿರುವುದು ಅಧಿಕಾರ ಕೇಂದ್ರಿತವಾದ ರಾಜಕಾರಣವಲ್ಲದೆ ಮತ್ತೇನು!

ಚಿದಂಬರ ರಹಸ್ಯದ ಸುಲೇಮಾನ್ ಬ್ಯಾರಿ ಮತ್ತು ರಾಮಾಚಾರಿ ಹಾಗೂ ಕೃಷ್ಣೇಗೌಡನ ಗುಂಪುಗಳು ಕೆಸರೂರನ್ನು ಇದೇ ಮಾದರಿಯಲ್ಲಿ ಛಿದ್ರಗೊಳಿಸಿ ತಮ್ಮ ಅಧಿಕಾರವನ್ನು ಚಲಾಯಿಸಲು ಯತ್ನಿಸುತ್ತವೆ. ಕೆಸರೂರಿನ ಸಮಾಜವನ್ನು ಅವನತಿಯ ಹಾದಿಗೆ ನೂಕುತ್ತವೆ. ಈ ಎರಡೂ ಗುಂಪುಗಳಿಂದ ಅಂತರ ಕಾಯ್ದುಕೊಳ್ಳುವ ರಾಮಚಂದ್ರ, ಪಾಟೀಲರು, ಬ್ರೀಡರ್ ಮಹಮದ್, ಹೆಗ್ಡೆ, ಸಿದ್ಧಪ್ಪನಂಥವರು ಆ ಎರಡೂ ಗುಂಪುಗಳಿಂದ ಸದಾ ಸಂಶಯಕ್ಕೆ ಒಳಗಾಗುವಂತಾಗುತ್ತದೆ. ಪ್ರಸ್ತುತ ಭಾರತೀಯ ಸಮಾಜ ಇದೇ ವೈರಿ ಸ್ಥಿತಿಯಲ್ಲಿ ನರಳುತ್ತಿದೆ. ಜಾತಿ ಮತ್ತು ಧರ್ಮಗಳ ಸಹಜವಾದ ಆಚರಣೆಗಳು, ನಂಬಿಕೆಗಳು ಭಾರತೀಯ ಸಮಾಜವನ್ನು ಎಂದೂ ಹಿಂಸೆಗೆ ದೂಡಿದ್ದಿಲ್ಲ. ಆದರೆ ಅಸಹಜವಾದ ಅಧಿಕಾರ ಮತ್ತು ರಾಜಕೀಯ ಕೇಂದ್ರಿತವಾದ ಜಾತಿ, ಧರ್ಮಗಳ ನಿರ್ಮಿತಿಯು ಸಮಾಜವನ್ನು ಹಿಂಸೆಯ ಕೂಪಕ್ಕೆ ನೂಕಿ ಇನ್ನಿಲ್ಲದಂತೆ ಕಾಡುತ್ತಿದೆ. ಮನುಷ್ಯನ ಅಧಿಕಾರ, ಸ್ಥಾನಮಾನಗಳ ಲಾಲಸೆಯಿಂದ ಸೃಷ್ಟಿಯಾಗಿರುವ ಜಾತಿ, ಧರ್ಮಗಳು ಕೆಸರೂರಿನ ಸಾಂಸ್ಕೃತಿಕ ಅವನತಿಗೆ ಹೇಗೆ ಕಾರಣವಾಗಿವೆಯೋ ಹಾಗೆಯೇ ಇದೇ ಅಂಶಗಳು ಇಡೀ ಭಾರತದ ಸಾಮಾಜಿಕ, ಸಾಂಸ್ಕೃತಿಕ ಅವನತಿಗೂ ಕಾರಣವಾಗಿವೆ. ಸುಲೇಮಾನ್ ಬ್ಯಾರಿ, ರಾಮಾಚಾರಿ, ಕೃಷ್ಣೇಗೌಡ-ಇವರೆಲ್ಲರೂ

ಗೋಸಾಯಿಗಳ ಬಗ್ಗೆ, ಅಲ್ಲಿನ ದಲಿತರ ಬಗ್ಗೆ ಹಾಗೂ ಕೇರಳದಿಂದ ವಲಸೆ ಬಂದಿರುವ ಬ್ಯಾರಿಗಳ ಬಗ್ಗೆ ತೋರುವ ಕಾಳಜಿ ಮತ್ತು ವಿರೋಧವು ಅಧಿಕಾರವನ್ನು ಪಡೆಯುವ ಹಾಗೂ ಭ್ರಷ್ಟಾಚಾರವನ್ನು ರಕ್ಷಿಸಿಕೊಳ್ಳುವ ಹುನ್ನಾರದಿಂದಲೇ ಕೂಡಿದ್ದಾಗಿದೆ. ಇಡೀ ಭಾರತೀಯ ಸಮಾಜದಲ್ಲಿ ಧರ್ಮಗುರುಗಳು, ಸ್ವಯಂಘೋಷಿತ ಸ್ವಾಮೀಜಿಗಳು, ದೇವಮಾನವರು ಹಾಗೂ ರಾಜಕೀಯ ಪಕ್ಷಗಳು ಜಾತಿ ಮತ್ತು ಧರ್ಮಗಳ ಮೇಲೆ ತೋರುತ್ತಿರುವ ಪ್ರೀತಿ ಮತ್ತು ಕಾಳಜಿಯೂ ಕೂಡ ಸ್ವಾರ್ಥದ ಮತ್ತು ಅಧಿಕಾರದ ಆಸೆಯ ಹುನ್ನಾರವನ್ನೇ ಹೊಂದಿದೆ. ರಾಜಕೀಯ ಪಕ್ಷಗಳು, ಆಡಳಿತಶಾಹಿ, ಪೋಲೀಸ್ ಇಲಾಖೆ, ಆರೋಗ್ಯ ಕೇಂದ್ರಗಳು, ನ್ಯಾಯಾಂಗ ವ್ಯವಸ್ಥೆಗಳು ಕೂಡ ತಮ್ಮದೇ ವರ್ಗ ರಾಜಕಾರಣವನ್ನು ಮಾಡುತ್ತ ಜಾತಿ, ಕೋಮುವಿನಂತೆಯೇ ವರ್ತಿಸುವ ಸೂಚನೆಗಳೂ ಕೂಡ ತೇಜಸ್ವಿ ಕಥನದಲ್ಲಿ ಕಾಣುತ್ತವೆ.

ಜಾತಿ ಧರ್ಮಗಳನ್ನು ಬಳಸಿಕೊಂಡು ತಮ್ಮ ಭ್ರಷ್ಟತೆಯನ್ನು ಮುಚ್ಚಿಕೊಳ್ಳುವುದು ಎಲ್ಲಾ ಜಾತಿ ಧರ್ಮಗಳಲ್ಲೂ ಇದೆ. ಜಾತೀವಾದ ಹಾಗೂ ಮತೀಯವಾದಗಳನ್ನು ಬಳಸಿಕೊಂಡು ಆಯಾ ಜಾತಿ ಧರ್ಮಗಳ ಅಯೋಗ್ಯರು, ಭ್ರಷ್ಟರು ಮುಂದೆ ಬಂದುಬಿಡುತ್ತಾರೆ ಎಂಬುದು ತೇಜಸ್ವಿಯವರ ಕಥನದ ನಿಲುವಾಗಿದೆ. ಭಾರತೀಯ ಗ್ರಾಮ ಸಮಾಜದ ಬಹುಪಾಲು ಜನರಿಗೆ ಜಾತಿ ಮತ್ತು ಧರ್ಮಗಳ ಹೋಲಿಕೆಯ ಅಗತ್ಯವೇ ಕಂಡುಬರುವುದಿಲ್ಲ. ಹಳ್ಳಿಗಳಲ್ಲಿ ಅವರವರ ಜಾತಿಯ ಭಿನ್ನತೆಯನ್ನು ಹೊರತುಪಡಿಸಿ ಅಲ್ಲಿನ ಆರ್ಥಿಕ ಸ್ಥಿತಿಗತಿಗಳಲ್ಲಿ ಕೆಲವಾರು ಜಾತಿಗಳ ಬದುಕು ಒಂದೇ ಬಗೆಯಾಗಿರುತ್ತದೆ. ಅವರೆಲ್ಲರೂ ಪರಸ್ಪರ ಅನ್ಯೋನ್ಯತೆಯಿಂದ, ಕೊಡು-ಕೊಳ್ಳುವ ಸಹಕಾರ ಮನೋಭಾವದಿಂದ ಜೀವಿಸುತ್ತಿರುತ್ತಾರೆ. ಕೆಲವೇ ಕೆಲವು ವ್ಯಕ್ತಿಗಳು ಮಾತ್ರ ತಮ್ಮ ಸ್ವಾರ್ಥ, ಅಧಿಕಾರದ ಆಸೆ ಮತ್ತು ಭ್ರಷ್ಟತೆಯ ಕಾರಣದಿಂದ ಜಾತಿ ಮತ್ತು ಧರ್ಮಗಳನ್ನು ಮುಂಚೂಣಿಗೆ ತರುತ್ತಿರುತ್ತಾರೆ. ಹಾಗೆಯೇ ಮೇಲ್ಜಾತಿಯವರಲ್ಲಿ ಮಾತ್ರ ಜಾತೀಯತೆ ಇದೆ ಕೆಳ ಜಾತಿಗಳಲ್ಲಿ ಇರುವುದಿಲ್ಲ ಎಂಬುದನ್ನು ತೇಜಸ್ವಿಯವರ ಕಥನ ಒಪ್ಪುವುದಿಲ್ಲ. "ನಮ್ಮಲ್ಲಿನ ಅನೇಕ ಶೂದ್ರರ, ಹಿಂದುಳಿದವರ, ದಲಿತ ಸಂಘಟನೆಗಳನ್ನು ಹತ್ತಿರದಿಂದ ನೋಡಿದ್ದೇನೆ ಅವರಲ್ಲಿ ಯಾವ ರೀತಿ ಅಶಿಸ್ತು, ಅಧಿಕಾರ ಲಂಪಟತೆ, ಪರಸ್ಪರ ದ್ವೇಷ, ಒಳಜಗಳಗಳಿವೆಯೆಂದರೆ ರಾಜಕೀಯ ಅಧಿಕಾರ ನೂರಾರು ಮೈಲಿದೂರ ಇದೆ ಎನ್ನಬೇಕಾದರೆ ಇಲ್ಲಿ ಕಚ್ಚಾಡಿಕೊಳ್ಳಲು ಶುರು ಮಾಡುತ್ತಾರೆ.... ನಮ್ಮ ಬ್ರಾಹ್ಮಣ ಟೀಕೆಯನ್ನು ನೋಡಿ ಶೂದ್ರರೆಲ್ಲಾ ಒಳ್ಳೆಯವರು ಮುಗ್ಧರು ಎಂದು ನಮ್ಮ ಅಭಿಪ್ರಾಯ ಎಂದು ಎಲ್ಲಾದರೂ ತಿಳಿದೀಯ! ಅವಕಾಶ ಸಿಕ್ಕರೆ ಇವರೆಲ್ಲಾ ಹಾರುವರಿಗಿಂತ ನೀಚತನ ತೋರಿಸುತ್ತಾರೆ... ಅಯೋಗ್ಯರ, ನೀಚರ ಸರಾಸರಿ ಪ್ರಮಾಣ ಎಲ್ಲಾ ಜಾತಿಗಳಲ್ಲೂ ಸಮಾನವಾಗಿದೆ." (ವಿಮರ್ಶೆಯ ವಿಮರ್ಶೆ. ೨೦೦೯. ಪುಟ-

೧೯೯) ಇದು ಅವರ ಚಿಂತನೆಯು ಯಾವುದೇ ಸಂಗತಿಗಳನ್ನು, ಸಾಮಾಜಿಕ ಸಮಸ್ಯೆಗಳನ್ನು ಏಕಮುಖವಾಗಿ ಗ್ರಹಿಸದೆ, ಚಿತ್ರಸದೇ; ಬಹುಮುಖಿ ನೆಲೆಯಲ್ಲಿ ಗ್ರಹಿಸುವುದಕ್ಕೆ ಸಾಕ್ಷಿಯಾಗಿದೆ.

ಭಾರತೀಯ ಹಳ್ಳಿಗಳ ಸೆಕ್ಯುಲರ್ ವಾತಾವರಣದ ನೈಜ ಚಿತ್ರಣವನ್ನು ಕಟ್ಟಿಕೊಡುವ ಮಾಯಾಲೋಕದಲ್ಲಿ ಇಂಜಿನಿಯರ್ ಮಲ್ಲಿಕಾರ್ಜುನ ಹಾಗೂ ಕಿರಗೂರಿನ ಗಯ್ಯಾಳಿಗಳು ಕಥೆಯ ಗ್ರಾಮ ಸೇವಕ ಶಂಕರಪ್ಪ ಮಾತ್ರ ತಮ್ಮ ಭ್ರಷ್ಟಚಾರವನ್ನು ಮುಚ್ಚಿಕೊಳ್ಳಲು ಜಾತಿಯನ್ನು ಬಳಸುತ್ತಾರೆ. ಕಿರಗೂರಿನ ಪುರುಷ ಸಮಾಜ ಜಾತಿ ಜಗಳದಲ್ಲಿ ಮುಳುಗಿದ್ದರೆ ಈ ಎಲ್ಲ ಜಾತಿ, ಧರ್ಮಗಳ ಮಿತಿಗಳನ್ನೂ ಮೀರಿ ಮನುಷ್ಯ ಧರ್ಮವನ್ನು ಮೆರೆಯುವ ಕಿರಗೂರಿನ ದಾನಮ್ಮ ಮತ್ತು ಆಕೆಯ ಸಂಗಡಿಗರು ಪಂಚಾಯ್ತಿಯಲ್ಲಿ ತೋರುವ ದೈರ್ಯದ ಚಿತ್ರಣ, ಜಾತಿಯನ್ನು ಮೀರಿ ನಾಗಮ್ಮ ಮಲೆಯಾಳಿ ಪಂಡಿತನೊಂದಿಗೆ ಹೋಗುವ ಸಂದರ್ಭ ನಮ್ಮ ಸಮಾಜದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತರಾಗಿರುವುದರ ಸಂಕೇತವಾಗಿದೆ. ಮಾಯಾಲೋಕದ ಬಜ್ಜಿ ಮಾರುವ ಫಾತಿಮ ಸಹಾ ಸೆಕ್ಯುಲರ್ ಮಹಿಳೆಯ ಸಂಕೇತವಾಗಿ ಕಾಣುತ್ತಾಳೆ. ದೇವರು, ಧರ್ಮ, ಆಚರಣೆ, ನಂಬಿಕೆಗಳಿಗಿಂತ ಬದುಕು ಮುಖ್ಯ ಎಂಬಂತೆ ಜೀವಿಸುವ ಈಕೆ ಮುಸ್ಲಿಂರ ಜಮಾತೆ ಮುಖ್ಯಸ್ಥರ ಶರಿಯತ್ ನಿಯಮದಂತೆ ಬುರ್ಖಾ ಹಾಕಬೇಕೆಂದು ಹೇಳುವುದನ್ನು ಧಿಕ್ಕರಿಸುತ್ತಾಳೆ. ಅವರ ವಿರುದ್ಧ ತಿರುಗಿಬೀಳುತ್ತಾಳೆ. ಜಮಾತೆಯವರು ಈಕೆಯನ್ನು ಕೇಳಲು ಹೆದರುವಂತಾಗುತ್ತದೆ. ಇಲ್ಲಿ ಮಹಿಳೆಯರು ಯತ್ನಿಸಿದಲ್ಲಿ ಜಾತಿ ಮತ್ತು ಮತೀಯ ಶಕ್ತಿಗಳನ್ನು, ಅವರ ಸಮಾಜ ಒಡೆಯುವ ಕೃತ್ಯಗಳನ್ನು ನಿಯಂತ್ರಿಸಬಹುದು ಎಂಬುದು ತೇಜಸ್ವಿಯವರ ಕಥನದ ನಂಬಿಕೆಯಾಗಿದೆ. ಇದು ಅವರ ಕಥನವು ಸಾಮಾಜಿಕ ಸಂಕಟಗಳ ನಿರ್ಮೂಲನೆಯ ಹಿನ್ನೆಲೆಯಲ್ಲಿ ಯುವ ಸಮುದಾಯ ಮತ್ತು ಮಹಿಳೆಯರಲ್ಲಿ ಅಪಾರ ವಿಶ್ವಾಸವನ್ನು ಹೊಂದಿರುವುದಕ್ಕೆ ಸಾಕ್ಷಿ.

ಇಂದು ಲಾಭಕೋರ ಮೇಲ್ವರ್ಗಗಳು ಸೃಷ್ಟಿಸುತ್ತಿರುವ ಜಾತಿ ಮತ್ತು ಮತೀಯ ಕಲಹಗಳು, ಜಗತ್ತಿನಾದ್ಯಂತ ನಡೆಯುತ್ತಿರುವ ಉಗ್ರವಾದದ ಹಿಂಸೆಗಳು ಜನರಲ್ಲಿ ಮನುಷ್ಯ ಮನುಷ್ಯರ ನಡುವೆ ಸಂಶಯ ಹಾಗೂ ಅಪನಂಬಿಕೆಯ ಬಹುದೊಡ್ಡ ಕಂದಕಗಳನ್ನು, ಒಟ್ಟಾಗಿ ಬಾಳಲಾರದ ಬಿಕ್ಕಟ್ಟುಗಳನ್ನು ಸೃಷ್ಟಿಸಿಬಿಟ್ಟಿವೆ. ಅದರಲ್ಲೂ ಅಲ್ಪಸಂಖ್ಯಾತ ಸಮುದಾಯದ ಜನ ಒಂದೇ ಊರಿನಲ್ಲಿದ್ದರೂ ಅಪರಿಚಿತರಂತೆ, ಸದಾ ಭಯ–ಆತಂಕದಲ್ಲಿ ಅಥವಾ ಮತ್ಯಾರನ್ನೋ ತೃಪ್ತಿಪಡಿಸುವಂತೆ ಬದುಕಬೇಕಾದ ಅಂತಂತ್ರ ಸ್ಥಿತಿಯಲ್ಲಿದ್ದಾರೆ. ಮಾಯಾಲೋಕದ ಇಕ್ಬಾಲ್ ಸಾಬಿ, ಫಾತಿಮಾ, ಜಲೀಲ್ ಸಾಬಿ, ಹಮೀದ; ಚಿದಂಬರ ರಹಸ್ಯದ ಬ್ರೀಡರ್ ಮಹಮದ್; ಡೇರ್ ಡೆವಿಲ್ ಮುಸ್ತಫಾ ಕಥೆಯ ಮುಸ್ತಫಾ ಇವರುಗಳ ಸ್ಥಿತಿಯೂ ಇದೇ ಬಗೆಯಲ್ಲಿದೆ. ಇಲ್ಲಿ ಬಜ್ಜಿ ಮಾರುವ ಫಾತಿಮ "ಕೊಂಚ ಜಗಳಗಂಟಿ ಹೆಂಗಸು! ಬುರುಕಾ ಹಾಕಿಕೊಂಡು

ವ್ಯಾಪಾರ ಮಾಡಬೇಕು ಎಂದು ಹೇಳಿದ್ದಕ್ಕೆ ಜಮಾತೆನವರಿಗೆ ಹೀನಾಮಾನ ಬೈದಿದ್ದಳಂತೆ. ಹಿಂದುಗಳೇ ಬಹುಸಂಖ್ಯಾತರಾಗಿರುವ ಗೊಂದಲಗೇರಿಯಲ್ಲಿ ತಾನು ಬುರ್ಖಾ ತೊಟ್ಟುಕೊಂಡು ಜಾತಿಯನ್ನೇ ಮುಂದುಮಾಡಿದರೆ ವ್ಯಾಪಾರಕ್ಕೆ ಕಲ್ಲು ಬೀಳುತ್ತದೆ. ಎಂದು ಅವಳಿಗೆ ಸೂಕ್ಷ್ಮವಾಗಿ ಅನ್ನಿಸಿದ್ದರಿಂದಲೇ ಅವಳು ಸೀರೆ ಸುತ್ತಿಕೊಂಡು ವ್ಯಾಪಾರಕ್ಕೆ ಕುಳಿತಿದ್ದು. ಒಮ್ಮೊಮ್ಮೆ ಕುಂಕುಮ ಸಹ ಇಟ್ಟುಕೊಂಡು ಬರುತ್ತಿದ್ದಳು." (ಮಾಯಾಲೋಕ, ೨೦೦೯, ಪುಟ-೨೯) ಹೀಗೆ ಶರಿಯತ್ ನಿಯಮಗಳನ್ನು ಉಲ್ಲಂಘಿಸಿ ಧರ್ಮಾತೀತ ನೆಲೆಯ ಮಹಿಳೆಯಾಗಿ ಕಂಡರೂ, ಆಕೆಯ ಈ ಧಿಕ್ಕಾರದ ಹಿಂದೆ ಗೊಂದಲಗೇರಿಯ ಬಹುಸಂಖ್ಯಾತರನ್ನು ಓಲೈಸಿ ಬದುಕಬೇಕಾದ ಒತ್ತಡವೂ ಇದೆ. ಆಕೆ ತನ್ನ ಧಾರ್ಮಿಕ ಭಿನ್ನತೆಯ ಕಾರಣದಿಂದ ಅಲ್ಲಿನ ಬಹುಸಂಖ್ಯೆಯ ಸಮುದಾಯಗಳನ್ನು ಎದುರಿಸಿ ಬದುಕಲಾರದ ಅಸಹಾಯಕ ಸ್ಥಿತಿಯನ್ನೂ ಕೂಡ ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಮುಸ್ಲಿಮರನ್ನು ಧರ್ಮಾಂಧರಂತೆ ಚಿತ್ರಿಸಿರುವ ಈ ಸಮಾಜದಲ್ಲಿ ತನ್ನ ಧರ್ಮದ ಆಚರಣೆಗೆ ವಿರುದ್ಧವಾಗಿ ಕುಂಕುಮ ಇಟ್ಟುಕೊಂಡು ಬರುವ ಫಾತಿಮಾಳ ನಡೆಯನ್ನು ಬೇರೆ ನೆಲೆಯವೂ ಗ್ರಹಿಸಬೇಕಿದೆ. ಆಕೆಯ ಆಂತ್ಯರ್ಯದಲ್ಲಿ ಇರಬಹುದಾದ ಪರಕೀಯತೆ, ಅಸಹಾಯಕತೆ, ಅತಂತ್ರ ಸ್ಥಿತಿ, ಅನ್ಯವಾಗಿಬಿಡುವ ಭಯ ಇವೆಲ್ಲಾ ಆಕೆಯ ಮೇಲೆ ಉಂಟು ಮಾಡಿರುವ ಮಾನಸಿಕ ಒತ್ತಡಗಳ ಹಿನ್ನೆಲೆಯಲ್ಲಿ ಆಕೆಯ ಧಾರ್ಮಿಕ ಒತ್ತಡಗಳನ್ನು ಕುರಿತ ವಿರೋಧ, ಕುಂಕುಮ ಇಟ್ಟುಕೊಂಡು ವ್ಯಾಪಾರಕ್ಕಿಳಿಯುವ ನಡೆಗಳನ್ನು ಗ್ರಹಿಸಲು ಸಾಧ್ಯವಿದೆ. ಮಂಕಿಗದ್ದೆಯ ಬಹುಸಂಖ್ಯಾತರಾದ ಹಿಂದೂಗಳು ಊರಳ್ಳಿಯವರ ಬಗೆಗಿನ ಇಕ್ಬಾಲ್ ಸಾಬಿಯ ಎಲ್ಲಾ ಆರೋಪಗಳನ್ನು ಗಂಭೀರವಾಗಿ ಪಣಿಸದಿರಲು ಅವನು ಅಲ್ಪಸಂಖ್ಯಾತನಾಗಿರುವದೇ ಕಾರಣವಾಗಿದೆ. ಅವನು ಈ ನೆಲದಲ್ಲಿ ಪರಕೀಯತೆಯನ್ನು ಅನುಭವಿಸುವಂತಾಗುತ್ತಾನೆ. ಸಾರಾಯಿ ಕಂಟ್ರಾಕ್ಟ್‌ರ್ ಪರವಾದ ಗೂಂಡಾಗಳ ತಪ್ಪುಗಳಿಗೂ ಇಕ್ಬಾಲ್‌ನನ್ನೇ ತಪ್ಪಿತಸ್ಥನಾಗಿ ಆರೋಪಿಸಿ ದಂಡಿಸಲಾಗುತ್ತದೆ. ಅವನ ಕೆಲವು ಆರೋಪಗಳಲ್ಲಿ ಸತ್ಯವಿಲ್ಲದಿರಬಹುದು, ಆದರೆ ಅದೇ ಆರೋಪಗಳನ್ನು ಹಿಂದೂಗಳು ಮಾಡಿದಾಗ ಒಪ್ಪುವ ಜನ ಅಲ್ಪಸಂಖ್ಯಾತನಾದ ಇಕ್ಬಾಲ್‌ನ ಮಾತುಗಳನ್ನು ನಂಬದಿರಲು ಕಾರಣ ಏನಿರಬಹುದು ಎಂಬ ಪ್ರಶ್ನೆ ಕಾಡದಿರದು. ಅವನು ತನ್ನ ಪ್ರತಿಯೊಂದು ಆರೋಪಗಳಿಗೂ ಸಾಕ್ಷಿಯನ್ನು ಒದಗಿಸಬೇಕಿರುವಂತ ಸ್ಥಿತಿ ದೇಶದ ಇಡೀ ಅಲ್ಪಸಂಖ್ಯಾತ ಸಮುದಾಯ ತಲುಪಿರುವ ಸ್ಥಿತಿಗೆ ಸಂಕೇತವಾಗಿದೆ.

ಕ್ರೀಡೆ, ವ್ಯಾಪಾರ, ಶಿಕ್ಷಣ ಮುಂತಾದವುಗಳಲ್ಲಿ ಸಹಜವಾಗಿಯೇ ಘಟಿಸುವ ಘಟನಾವಳಿಗಳಿಗೆ ಅಲ್ಪಸಂಖ್ಯಾತ ಸಮುದಾಯ ದೇಶಾಭಿಮಾನದ ಸಾಕ್ಷಿಗಳನ್ನು ಒದಗಿಸಿಯೇ

ತೀರಬೇಕು. ಇಲ್ಲವಾದಲ್ಲಿ ಅವರು ಹಾಗೂ ಅವರನ್ನೂ ಸಮರ್ಥಿಸುವವರು ದೇಶದ್ರೋಹದ ಆರೋಪಗಳಿಗೆ ಗುರಿಯಾಗಬೇಕಾದ ಅಪಾಯದ ಸುಳಿಯಲ್ಲಿ ಸಿಕ್ಕಿಬೀಳಬೇಕಾಗುತ್ತದೆ. ಇಂದು ಭಾರತದ ವಿರೋಧಿಗಳಂತೆ ಬಿಂಬಿಸಲ್ಪಡುತ್ತಿರುವ ಮುಸ್ಲಿಮರು "ತಾವು ಭಾರತದ ಮುಖ್ಯ ಪ್ರವಾಹದೊಳಗಡೆಯೇ ಇದ್ದೇವೆ, ತಮ್ಮ ನಿಲುವು ನಿಷ್ಠೆಗಳಲ್ಲಿ ಭಾರತ ವಿರೋಧಿಯಾದುದೇನೂ ಇಲ್ಲವೆಂಬುದನ್ನು ಅವರು ಮತ್ತೆ ಮತ್ತೆ ಪ್ರಕಟಿಸಬೇಕಾದ ಅನಿವಾರ್ಯತೆಯಲ್ಲಿದ್ದಾರೆ. ಹಿಂದೂಸ್ತಾನ್ ಆಟೋಮೊಬೈಲ್ಸ್, ಭಾರತ್ ಗ್ಯಾರೆಜ್, ಜೈ ಭಾರತ್ ಹೋಟೆಲ್, ಕರ್ನಾಟಕ ಟ್ರಾವೆಲ್ಸ್ ಮುಂತಾದ ಹೆಸರುಗಳನ್ನಿಟ್ಟುಕೊಂಡ ವಹಿವಾಟಿನ ಕೇಂದ್ರಗಳು ಮುಸ್ಲಿಂ ಒಡೆತನದಲ್ಲಿ ಹೆಚ್ಚಾಗಿವೆ. ಜೈ ಭಾರತ್ ಜೈ ಹಿಂದ್ ಎಂಬ ಪದಗಳ ಬಳಕೆಯು ಅವರು ಮತ್ತೆ ಮತ್ತೆ ತಮ್ಮ ಭಾರತೀಯತ್ವವನ್ನು ಘೋಷಿಸಿಕೊಳ್ಳುವ ಒಂದು ವಿಧಾನದಂತೆ ಕಂಡಿದೆ... ತಾವು ಅನ್ಯಗೊಳಿಸಲ್ಪಟ್ಟಿದ್ದೇವೆಂಬ ಭಾವನೆ ಇವುಗಳ ಹಿಂದೆ ನಿಚ್ಚಳವಾಗಿದೆ... ಅದೇ ಹಿಂದೂ ಸಮುದಾಯದವರೆಂದುಕೊಳ್ಳುವ ಮಾಲೀಕರು ತಮ್ಮ ಜಾತಿ, ಸಮುದಾಯ ಚಿಹ್ನೆಗಳ ಹೆಸರುಗಳನ್ನು ರಾಜಾರೋಷವಾಗಿ ಇಟ್ಟುಕೊಂಡು ವಹಿವಾಟು ನಡೆಸುತ್ತಾರೆ. ಇದರಿಂದ ಸಮುದಾಯದ ಬೇರೆಯವರು ತಮ್ಮನ್ನು ಪ್ರತ್ಯೇಕಗೊಳಿಸಬಹುದೆಂಬ ಯಾವ ಭಯವೂ ಅವರನ್ನು ಕಾಡುವುದಿಲ್ಲ. ಉಡುಪಿ ಬ್ರಾಹ್ಮಣರ ಹೋಟೆಲ್, ವೀರಶೈವ ಲಿಂಗಾಯತ ಖಾನಾವಳಿ ಮುಂತಾದುವುಗಳಿದ್ದಂತೆ ಮಲಬಾರಿ ಮುಸ್ಲಿಂ ಹೋಟೆಲ್ ಎಂದೋ, ಷಿಯಾ/ಸುನ್ನಿ ಆಟೋಮೊಬೈಲ್ಸ್ ಎಂಬಂತಹ ಹೆಸರುಗಳನ್ನು ನಾವು ಕಾಣುವುದು ಕಷ್ಟ." (ಬಂಜಗೆರೆ ಜಯಪ್ರಕಾಶ, ಮತಾಂತರ(ಮುನ್ನುಡಿ), ೨೦೦೯, ಪುಟ-೧೨)

ಪ್ರಸ್ತುತ ಸಮಾಜದ ವಿವಿಧ ಜಾತಿ ಧರ್ಮಗಳಲ್ಲಿರುವ ಭಿನ್ನತೆಗಳನ್ನು ಪರಸ್ಪರ ಗೌರವಿಸಿ ಬದುಕುವ ಬದಲು ದ್ವೇಷಿಸುವ ಮಾನಸಿಕ ದಬ್ಬಾಳಿಕೆಯನ್ನು ಈ ಜಾತಿ ಮತ್ತು ಮತೀಯವಾದಿಗಳು ಜನತೆಯಲ್ಲಿ ಬಿತ್ತುತ್ತಿದ್ದಾರೆ. ನಮ್ಮಗಳ ನಡುವಿನ ಆಚರಣೆ, ಆರಾಧನಾ ಪದ್ಧತಿ, ಪ್ರಾರ್ಥನಾ ಸ್ಥಳ, ಅದರ ವಿನ್ಯಾಸ, ಆಹಾರ ಕ್ರಮ, ಉಡುಪು, ಅಲಂಕಾರ ಮತ್ತು ವಿವಾಹ ಕ್ರಮಗಳು ಮುಂತಾದ ಭಿನ್ನತೆಗಳನ್ನೇ ಈ ಮತೀಯವಾದಿಗಳು ಬಹುಮುಖ್ಯ ಸಮಸ್ಯೆಗಳಾಗಿ ಬಿಂಬಿಸಲು ಪ್ರಯತ್ನಿಸುತ್ತಾರೆ. ಒಂದು ಕಾಲದ ಇಸ್ಲಾಂ ರಾಜರು ಅವರ ಅನುಯಾಯಿಗಳು ನಡೆಸಿದರೆನ್ನಲಾದ ಅತಿರೇಕಗಳು ಇವರಿಗೆ ಪೂರಕ ಸಾಮಗ್ರಿಗಳನ್ನು ಒದಗಿಸುತ್ತವೆ. ಇವುಗಳನ್ನೇ ಒಟ್ಟಾಗಿಸಿ ಇಂದಿನ ಭಿನ್ನತೆಗಳನ್ನೇ ಹಿಂದಿನ ಅತಿರೇಕಗಳ ಮುಂದುವರೆದ ಭಾಗವಾಗಿ ಇವರು ಚಿತ್ರಿಸಿಬಿಡುತ್ತಾರೆ. ಹಾಗಾಗಿ ಸಮುದಾಯಗಳಲ್ಲಿ ಈ ಬಗೆಯ ಸಾಮಾಜಿಕ ಭಿನ್ನತೆಗಳು ಹೆಚ್ಚಿದ್ದಷ್ಟೂ ಈ ಕೋಮುವಾದಿಗಳಿಗೆ ಹೆಚ್ಚು ಖುಷಿಯಾಗುತ್ತದೆ. ಅವರ ಅಪಪ್ರಚಾರ, ಒಡೆದು ಆಳುವ ಪ್ರವೃತ್ತಿ ಮತ್ತಷ್ಟು ರಂಗೇರುತ್ತದೆ.

ಇದರಿಂದ ಸಮಾಜದ ಅಲ್ಪಸಂಖ್ಯಾತ ಸಮುದಾಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದರೂ, ತಮ್ಮಿಷ್ಟದಂತೆ ಬದುಕುವ ಸ್ವಾತಂತ್ರ್ಯವಿದ್ದರೂ, ತಮ್ಮ ಬದುಕನ್ನು ಇನ್ನೊಬ್ಬರ ಅಣತಿಯಂತೆ ಬಲವಂತವಾಗಿ ಬದಲಿಸಿಕೊಂಡು ಬದುಕಬೇಕಾದ ದುಸ್ಥಿತಿಗೆ ಒಳಗಾಗುವಂತಾಗಿದೆ. ಈ ಬಗೆಯ ಚಿತ್ರಣಗಳನ್ನು ಮಾಯಾಲೋಕದ ಫಾತಿಮ ಮತ್ತು ಇಕ್ಬಾಲನ ನಡೆಗಳಲ್ಲಿ ಕಾಣಬಹುದು.

ಚಿದಂಬರ ರಹಸ್ಯ ಕಾದಂಬರಿಯು ಭಾರತೀಯ ಸಾಮಾಜಿಕ ಬದುಕಿನ ಸಂಕೀರ್ಣವಾದ ಸಮಸ್ಯೆಗಳಿಗೆ ಮೈಚಾಚಿಕೊಳ್ಳುತ್ತದೆ. ಕೆಸರೂರು ಕ್ಷುದ್ರತೆಗೆ ಸಂಕೇತವಾದ ಜಾತಿ ಮತ್ತು ಮತಾಂಧ ಭಾರತವನ್ನು ಪ್ರತಿನಿಧಿಸುತ್ತದೆ. ಈ ಕ್ಷುದ್ರತೆಗೆ ಕಾರಣಗಳನ್ನು ಹುಡುಕುವುದು ಆ ಮೂಲಕ ಓದುಗರನ್ನು ಎಚ್ಚರಿಸುವುದು ಕಾದಂಬರಿಯ ಧಾತುವಾಗಿದೆ. ಸುಲೇಮಾನ್ ಬ್ಯಾರಿ, ರಾಮಾಚಾರಿ, ಕೃಷ್ಣೇಗೌಡ, ಪ್ರಿನ್ಸಿಪಾಲ ವೆಂಕಟರಾಯ ಮುಂತಾದವರು ಮಸೀದಿಗಳನ್ನು, ದೇವಾಲಯಗಳನ್ನು ಕಟ್ಟಿಸುವುದು, ಜೀರ್ಣೋದ್ಧಾರ ಮಾಡುವುದು, ಆಯಾ ಧರ್ಮಗಳನ್ನು ಪ್ರಚಾರ ಮಾಡಲು ತೊಡಗುವುದು, ಯಾವ ಗುಂಪುಗಳೊಂದಿಗೂ ಸೇರದೇ ಇರುವವರನ್ನು ಸಂಶಯದಿಂದ ಕಾಣುವುದು, ವಿರೋಧಿಗಳೆಂದು ಭಾವಿಸುವುದು, ಪರಸ್ಪರ ಒಬ್ಬರ ಮೇಲೊಬ್ಬರು ಕತ್ತಿ ಮಸೆಯುವುದು, ಇವರುಗಳಿಗೆ ಸ್ಪಂದಿಸದ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುವುದು, ತಮ್ಮ ತಮ್ಮ ಜಾತಿ ಧರ್ಮಗಳ ಸಮುದಾಯಗಳ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಯತ್ನಿಸುವುದು ಅವರವರ ಧರ್ಮಗಳ ಮೇಲಿನ ಪ್ರೀತಿಯಿಂದಲ್ಲ; ಅಧಿಕಾರ ಪಡೆಯುವ ಮತ್ತು ತಮ್ಮ ಭ್ರಷ್ಟತೆಯನ್ನು ಮುಚ್ಚಿಕೊಳ್ಳುವ ಹುನ್ನಾರವನ್ನೊಳಗೊಂಡ ಗುಪ್ತ ಅಜೆಂಡಾಗಳಿಂದ.

ಕೆಸರೂರಿಗೆ ಒಣಮೀನು ವ್ಯಾಪಾರ ಮಾಡಲು ಬಂದ ಸುಲೇಮಾನ್ ಬೇರಿ ಕೆಸರೂರಿನ ತುಂಬ ಕೇರಳದ ಬ್ಯಾರಿಗಳನ್ನು ನೆಲೆಗೊಳ್ಳುವಂತೆ ಮಾಡಿ ಕೆಸರೂರಿನ ಆರ್ಥಿಕ ಶಕ್ತಿಯಾಗಿ ಬೆಳೆದು ಕೋಟ್ಯಧಿಪತಿಯಾಗುತ್ತಾನೆ. ಕೆಸರೂರಿನ ರಾಜಕೀಯ ನಡೆಗಳನ್ನು ನಿರ್ಧರಿಸುವ ಶಕ್ತಿ ಕೇಂದ್ರವಾಗಿ ಬೆಳೆಯುತ್ತಾನೆ. ಇದಕ್ಕೆಲ್ಲಾ ಅವನು ಅವ್ಯಾಹತವಾಗಿ ನಡೆಸುತ್ತಿದ್ದ ಕೆಸರೂರಿನ ಕಾಡಿನ ಲೂಟಿ, ಕಳ್ಳ ಸಾಗಾಣಿಕೆ, ಲಂಚ, ಭ್ರಷ್ಟಾಚಾರಗಳೇ ಮೂಲ ಕಾರಣ. ಇದಕ್ಕೆ ಸ್ಥಳೀಯ ರಾಜಕಾರಣದ ಅಧಿಕಾರವನ್ನು, ಹಣ ಹಾಗೂ ಧರ್ಮ ರಾಜಕೀಯವನ್ನು ಆತ ರಕ್ಷಣೆಯಾಗಿ ಬಳಸುತ್ತಿದ್ದ. ಇದು ಸ್ಥಳೀಯ ಹಿಂದೂಗಳ ಗಮನಕ್ಕೆ ಮೊದ ಮೊದಲು ಬಂದಿರುವುದಿಲ್ಲ. ಆದರೆ ಸುಲೇಮಾನ್ ಬ್ಯಾರಿಯ ಅಪಾಯ ಅವರಿಗೆ ತಟ್ಟಲಾರಂಭಿಸಿದ ರೀತಿಯೇ ಬೇರೆ. ಇವನು ತಾನು ಹೋದಲ್ಲೆಲ್ಲಾ ತನ್ನ ಕಡೆಯ ಜನಗಳಿಗೆ ಕೆಲಸ ಕೊಡುತ್ತಿದ್ದ. ಎಲ್ಲಿ ಯಾವ ಕಂಟ್ರಾಕ್ಟು ಹಿಡಿದರೂ ಅಲ್ಲೆಲ್ಲಾ ಇದ್ದಿಲು ಮಾಡಲು, ಅರಣ್ಯದ ಕೂಪು ಮಾಡಲು ನೂರಾರು

ಕೇರಳದ ಬ್ಯಾರಿಗಳು ಬಂದು ಬೀಡು ಬಿಡುತ್ತಿದ್ದರು. ಅಲ್ಲೇ ತಮ್ಮ ವಠಾರಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಮುಂದೆ ತನ್ನ ಪ್ರಭಾವ ಬಳಸಿಯೋ, ಆರ್ಥಿಕ ಶಕ್ತಿಯನ್ನು ಬಳಸಿಯೋ, ತಹಸಿಲ್ದಾರ್, ರೆವಿನ್ಯು ಇನ್ಸಪೆಕ್ಟರ್, ಸರ್ವೆಯರ್‌ಗಳನ್ನು ತನ್ನ ಲಂಚದ ಬುಟ್ಟಿಗೆ ಕೆಡವಿಕೊಂಡೋ ಬ್ಯಾರಿಗಳಿರುವ ಭೂಮಿಯನ್ನು ಅವರಿಗೆ ಮಂಜೂರಾಗುವಂತೆ ಆತ ಮಾಡುತ್ತಿದ್ದ. ಇದರ ಪರಿಣಾಮವಾಗಿ ಊರತುಂಬ ಸಾಬರ ಕೇರಿಗಳು ತಲೆ ಎತ್ತತೊಡಗುತ್ತವೆ. ಅಲ್ಲೆಲ್ಲಾ ಮಸೀದಿಗಳು ಎದ್ದು ನಿಂತು ಮೈಕುಗಳ ಕೂಗಾಟ ಆರಂಭವಾಗುತ್ತದೆ. ಹಾಗೇ ಆತ ತನ್ನ ಸಮುದಾಯದ ಜನ ಹೆಚ್ಚುತ್ತಲೇ ಸ್ಥಳೀಯ ರಾಜಕಾರಣಕ್ಕೆ ಕೈಹಾಕಿ ತನ್ನ ಕಡೆಯವರನ್ನು ತಾಲ್ಲೂಕು ಬೋರ್ಡ್ ಮೆಂಬರುಗಳನ್ನಾಗಿಯೂ ಮಾಡತೊಡಗುತ್ತಾನೆ. ಹೀಗೆ ಸುಲೇಮಾನ್ ಬ್ಯಾರಿ ಹಣ, ಧರ್ಮ, ರಾಜಕೀಯಗಳೆಲ್ಲವನ್ನೂ ಒಂದರೊಳಗೊಂದು ಸೇರಿಸಿ ತನ್ನ ಬಲವನ್ನು ಹೆಚ್ಚಿಸಿಕೊಳ್ಳತೊಡಗುತ್ತಾನೆ. ಇವು ಕೆಸರೂರಿನಲ್ಲಿ ಹಿಂದಿನಿಂದಲೂ ಪಾಳೇಗಾರಿಕೆ ನಡೆಸಿಕೊಂಡು ಬಂದಿದ್ದ ಕೆಸರೂರಿನ ಒಕ್ಕಲಿಗರು, ಲಿಂಗಾಯಿತರಲ್ಲಿ ತಲ್ಲಣಗಳನ್ನು ಉಂಟು ಮಾಡುತ್ತವೆ. ಸುಲೇಮಾನ್ ಬ್ಯಾರಿಯ ಉದ್ದೇಶ ಅರ್ಥವಾಗತೊಡಗಿದಂತೆ ಕೆಸರೂರಿಗೆ ಏನೋ ಕೇಡುಗಾಲ, ಅವಸಾನ ಕಾಲ ಬಂದಿದೆ ಎಂದು ಅವರಿಗೆ ಅನ್ನಿಸತೊಡಗುತ್ತದೆ.

ಬ್ಯಾರಿಗಳ ದಿಢೀರ್ ಬೆಳವಣಿಗೆ, ಎಚ್ಚೆತ್ತ ಸ್ಥಳೀಯ ಹಿಂದೂಗಳಿಂದಾದ ಪ್ರತಿರೋಧ ಮತ್ತು ಪ್ರತಿಕ್ರಿಯೆಗಳಿಂದ ಕೆಸರೂರು ತಲುಪಿರುವ ಸ್ಥಿತಿಯನ್ನು ಸಂಶೋಧನಾ ಕೇಂದ್ರದ ಪಾಟೀಲರು ಕೆಸರೂರಿನ ಏಲಕ್ಕಿ ಇಳುವರಿ ಕಡಿಮೆಯಾಗಲು ಕಾರಣಗಳನ್ನು ಕಂಡುಹಿಡಿಯಲು ಬಂದ ಅಂಗಾಡಿಗೆ ಹೇಳುವ ಮಾತುಗಳಲ್ಲಿ ಗ್ರಹಿಸಬಹುದು. "ಇಲ್ಲೆಲ್ಲಾ ಸುತ್ತುಮುತ್ತಾ ಕೇರಳದ ಬ್ಯಾರಿಗಳ ವಠಾರ ಬೆಳೆದಿದೆ. ಎಲ್ಲಾ ಸುಲೇಮಾನ್ ಬ್ಯಾರಿ ಕೈಕೆಳಗೆ ಕೆಲಸ ಮಾಡೋದು. ಆತನೊಬ್ಬ ಪ್ರಖ್ಯಾತ ಕಳ್ಳಸಾಗಾಣಿಕೆದಾರ. ಎಲ್ಲಾ ಕೆಸರೂರಿನ ಮುನಿಸಿಪಾಲಿಟಿ, ಗ್ರಾಮ ಪಂಚಾಯ್ತಿ, ತಾಲ್ಲೂಕು ಬೋರ್ಡು ರಾಜಕಾರಣದ ಪಾತ್ರಧಾರಿಗಳು. ಈಗ ಅವನು ಊರಿಗೆ ಒಂದು ಮಸೀದಿ ಕಟ್ಟಿಸಿದ್ದಾನೆ. ದಿನಾ ಅಲ್ಲಾ ಹೋ ಅಕ್ಬರ್ ಅಂತ ಕಿವಿಗಡಚಿಕ್ಕುವಂತೆ ಕೂಗ್ತಾರೆ. ಪೈಗಂಬರ್ ಕಾಲದಲ್ಲಿ ಮೈಕ್ ಇತ್ತೋ ಏನೋ, ಕೇಳಹೋದರೆ ಖುರಾನ್ ಪ್ರಕಾರ ಮಾಡ್ತಿದ್ದೀವಿ ಅಂತಾರೆ. ಅವರ ಹೋರಾಟಕ್ಕೆ ರಾಜಕಾರಣಕ್ಕೆ ಮಸೀದಿ ಸಂಕೇತ. ರಾಜಕಾರಣಕ್ಕೆ ಮತ ಧರ್ಮ ಹೇಗೆ ಉಪಯೋಗಿಸ್ಕೋಬೇಕಂತ ಆತ ಚೆನ್ನಾಗಿ ಬಲ್ಲ. ಅವನು ಮಸೀದಿ ಕಟ್ಟಿ ಆರ್ಭಟ ಆರಂಭಿಸೋದಕ್ಕೂ ಇಲ್ಲಿನ ಕನ್ನಡಿಗರಿಗೆ, ಹಿಂದೂಗಳಿಗೆ ಎಚ್ಚರ ಆಯ್ತು. ನಮ್ಮ ಸಂಶೋಧನ ಕೇಂದ್ರದಲ್ಲಿ ಸುಮಾರು ಜನ ಹಾರವರು, ಲಿಂಗಾಯಿತರು, ಒಕ್ಕಲಿಗರು ಹಿಂದೂವಾದಿಗಳಿದ್ದಾರೆ. ನಮ್ಮ ಸಂಶೋಧನ ಕೇಂದ್ರದ ಬೇಲಿಯೊಳಗೆ ಒಂದು ಮುರುಕಲು ಗುಡಿ ಇತ್ತು. ಅದನ್ನು ಉದ್ಭವ ವೆಂಕಟೇಶ್ವರಸ್ವಾಮಿ ಅಂತ ನಾಮಕರಣ ಮಾಡಿದರು. ಕೇರಳದ

ಸಾಬರ ಕೊಬ್ಬು ಅಡಗಿಸ್ತೀವಿ ಅಂತ ಇವರು ಮೈಕ್ ಹಾಕಿಕೊಂಡು ಜಗನ್ನಾಥ ಸ್ತೋತ್ರ, ವೆಂಕಟೇಶ್ವರ ಸ್ತೋತ್ರ ಎಲ್ಲಾ ಕೂಗಿಸೋದಕ್ಕೆ ಆರಂಭಿಸಿದ್ದಾರೆ. ಡಾ.ಜೋಗಿಹಾಳ್ ಇದ್ದಾಗಲೇ ಅವರ ಅಸಮ್ಮತಿ, ಪ್ರತಿಭಟನೆ ಎಲ್ಲಾ ಮೀರಿ ಸುತ್ತಮುತ್ತಲ ಪ್ರತಿಷ್ಠಿತ ಗೌಡರ ಸಹಾಯದಿಂದ ಇದನ್ನೆಲ್ಲಾ ಆರಂಭಿಸೇಬಿಟ್ಟರು ಇದಕ್ಕೆ ತಿರುಪತಿ ಕಡೆಯವರಿಂದಲೂ ಕುಮ್ಮಕ್ಕು ಧನಸಹಾಯ. ಇಲ್ಲಿ ಬೆಳೆಯುತ್ತಿರೋ ಧರ್ಮಸ್ಥಳದ ಪ್ರಭಾವ ಕಡಿಮೆ ಮಾಡಬೇಕು ಅಂತ ಅವರ ಕುತಂತ್ರ, ಜೋಗಿಹಾಳರನ್ನು ಇಲ್ಲಿಂದ ಗುಡಾರ ಎತ್ತಿಸೋದಕ್ಕೆ ಈ ಊರಿನ ಎಂ.ಎಲ್.ಎ., ಎಂ.ಎಲ್.ಸಿ. ಎಲ್ಲ ಶತಪ್ರಯತ್ನ ಮಾಡಿ ವರ್ಗ ಮಾಡಿಸಿದ್ದರು." (ಚಿದಂಬರ ರಹಸ್ಯ, ೨೦೦೯, ಪುಟ–೫೧)

ಹೀಗೆ ಸುಲೇಮಾನ್ ಬ್ಯಾರಿ ಮತ್ತು ಸ್ಥಳೀಯರಾದ ಹಿಂದೂಗಳು ತಮ್ಮ ತಮ್ಮ ಧರ್ಮಗಳ ನಡುವೆ ಪರಸ್ಪರ ಸಾಮರಸ್ಯವನ್ನು, ಸಹಕಾರ, ಸಹಬಾಳ್ವೆಯನ್ನು ಬೆಳೆಸುವುದರ ಬದಲು ದ್ವೇಷ, ವೈಷಮ್ಯ, ಅಸೂಯೆಗಳನ್ನು ಸೃಷ್ಟಿಸುತ್ತಿರುವುದು, ಆ ನಿಟ್ಟಿನಲ್ಲಿ ಧರ್ಮಗಳು ಬಳಕೆಯಾಗುತ್ತಿರುವುದು ಕೆಸರೂರಿನ ಸಾಮಾಜಿಕ ಸಂಕಟಗಳಿಗೆ ಕಾರಣವಾಗಿದೆ. ಇದೇ ಬಗೆಯಲ್ಲಿ ಕಿರಗೂರಿನ ಸಾಮರಸ್ಯ ಬದುಕನ್ನು ಕದಡುವ ಶಂಕರಪ್ಪ ಅಲ್ಲಿನ ಒಕ್ಕಲಿಗರು ಮತ್ತು ಹರಿಜನರ ನಡುವೆ ಜಾತಿ ಜಗಳಗಳನ್ನು ಹಚ್ಚಿ ತನ್ನ ಅವ್ಯವಹಾರಗಳಿಗೆ ರಹದಾರಿಯನ್ನು ನಿರ್ಮಿಸಿಕೊಳ್ಳುತ್ತಾನೆ. ಇದು ಎರಡು ಧರ್ಮಗಳ ಪ್ರಬಲರು, ಭ್ರಷ್ಟರು ಜಾತಿ ಮತ್ತು ಮತಕಲಹಗಳನ್ನು ಸೃಷ್ಟಿಸಿ ಅಧಿಕಾರ ಲಾಭಗಳನ್ನು ಪಡೆಯುತ್ತಿರುವುದರ ಸಂಕೇತವಾಗಿದೆ.

ಪ್ರಸ್ತುತ ಭಾರತೀಯ ರಾಜಕಾರಣದ ಅಧಿಕಾರ ಕೇಂದ್ರವು ಸಹಾ ಜನೋಪಯೋಗಿ ಕಾರ್ಯಗಳ ಆಧಾರದ ಮೇಲೆ ನಿರ್ಧಾರವಾಗದೇ, ದ್ವೇಷ ಅಸೂಯೆಗಳನ್ನು ಉಂಟುಮಾಡುವ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವ ಜಾತಿ, ಧರ್ಮಗಳ ನೆಲೆಯಿಂದ ನಿರ್ಧಾರವಾಗುತ್ತಿದೆ. ಚುನಾವಣೆಗಳೂ, ಜನಪ್ರತಿನಿಧಿಗಳ ಮತಯಾಚನೆ, ಅವರ ಆಯ್ಕೆಗಳೂ ಸಹಾ ಕಾನೂನುಬಾಹಿರವಾದರೂ ಜಾತಿ ಮತ್ತು ಧರ್ಮಗಳ ಆಧಾರದ ಮೇಲೆಯೇ ನಡೆಯುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಸದನೊಬ್ಬ ನನಗೆ ಮುಸ್ಲಿಂ ಮತಗಳ ಅಗತ್ಯವೇ ಇಲ್ಲ ಎಂದು ಚುನಾವಣಾ ಪ್ರಚಾರದಲ್ಲಿ ಹೇಳಿದ್ದನ್ನು, ಎಲ್ಲಾ ಪಕ್ಷಗಳೂ ಆಯಾ ಕ್ಷೇತ್ರಗಳ ಜಾತಿ ಮತ್ತು ಧರ್ಮಗಳ ಜನಸಂಖ್ಯೆಯ ಆಧಾರದ ಮೇಲೆಯೇ ಅಭ್ಯರ್ಥಿಗಳನ್ನು ನಿಲ್ಲಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಇಲ್ಲಿ ಸಂವಿಧಾನದ ಆಶಯ, ಅಭ್ಯರ್ಥಿಯ, ಕಾರ್ಯ ಮತ್ತು ವ್ಯಕ್ತಿತ್ವಕ್ಕಿಂತ ಅವನ ಹಣ, ಜಾತಿ, ಧರ್ಮಗಳೇ ಮುಖ್ಯವಾಗಿರುವುದು ವ್ಯವಸ್ಥೆ ಇಷ್ಟು ಹದಗೆಡಲು ಕಾರಣವಾಗಿದೆ. ಆದರೆ ಜಾತಿ ಧರ್ಮಗಳ ನಡುವೆ ಎಷ್ಟೇ ದ್ವೇಷ ಕಲಹಗಳಿದ್ದಾಗಿಯೂ ದೇಶದ ಶ್ರೀಮಂತ ಉದ್ದಿಮೆದಾರರ, ರಾಜಕಾರಣಿಗಳ ಉದ್ದಿಮೆಗಳ ವ್ಯಾಪಾರ ವಹಿವಾಟಿಗೆ ಯಾವ ತೊಡಕೂ ಆಗುವುದಿಲ್ಲ. ಪಾಕಿಸ್ತಾನ ಮತ್ತು ಭಾರತದ ನಡುವೆ

ಎಷ್ಟೇ ದ್ವೇಷ ಕಲಹಗಳಿದ್ದಾಗಿಯೂ ಎರಡೂ ದೇಶಗಳ ದೊಡ್ಡ ಉದ್ದಿಮೆದಾರರ ವ್ಯಾಪಾರ ವಹಿವಾಟು ವ್ಯವಸ್ಥಿತವಾಗಿಯೇ ನಡೆಯುತ್ತಿದೆ. ಅನೇಕ ಬಾರಿ ಜಾತಿ ಮತ್ತು ಧಾರ್ಮಿಕ ಕಲಹಗಳು ಸೃಷ್ಟಿಕರ್ತರೂ ಇದೇ ವ್ಯಾಪಾರಿಗಳೇ ಆಗಿರುತ್ತಾರೆ. ಪಾಕಿಸ್ತಾನ ಮತ್ತು ಭಾರತದ ನಡುವಿನ ಕಲಹಗಳ ಅಮೇರಿಕಾದಂತಹ ಶ್ರೀಮಂತ ರಾಷ್ಟ್ರಗಳಿಗೆ ಹೇಗೆ ಲಾಭವನ್ನು ತಂದುಕೊಡುತ್ತವೆಯೋ ಹಾಗೆಯೇ ಜಾತಿ ಮತ್ತು ಮತೀಯ ಕಲಹಗಳು ಇಲ್ಲಿನ ವ್ಯಾಪಾರಿಗಳಿಗೆ ಲಾಭವನ್ನು ತಂದುಕೊಡಬಲ್ಲವು. ಹಾಗಾಗಿ ಮತೀಯ ಕಲಹಗಳನ್ನು ನಿರಂತರಗೊಳಿಸುವ ಹುನ್ನಾರಗಳನ್ನು ಲಾಭಕೋರ ಮನಸ್ಸುಗಳು ಸದಾ ಹೆಣೆಯುತ್ತಿರುತ್ತವೆ. ಭಾರತದಲ್ಲಿ ಮತೀಯ ಕಲಹಗಳಿಗೆ ಕಾರಣವಾಗಿರುವ ಆಯಾ ಸಮುದಾಯಗಳ ನಾಯಕರುಗಳು ಪರಸ್ಪರ ಅನ್ಯೋನ್ಯವಾಗಿಯೇ ಇರುತ್ತಾರೆ. ತಮ್ಮಗಳ ನಡುವೆ ಪರಸ್ಪರ ನಡೆಯುತ್ತಿರುವ ವ್ಯಾಪಾರ ವಹಿವಾಟುಗಳನ್ನು ವ್ಯವಸ್ಥಿತವಾಗಿಯೇ ನಡೆಸುತ್ತಿರುತ್ತಾರೆ. ಆದರೆ ಇದರಿಂದ ಸಾಮಾನ್ಯ ಜನ, ಅದರಲ್ಲೂ ಮಕ್ಕಳು, ಮಹಿಳೆಯರು, ಮುದುಕರು, ಮುಗ್ಧ ಅಮಾಯಕ ಯುವ ಸಮೂಹ ಸಾವು–ನೋವುಗಳಿಗೆ ಒಳಗಾಗುತ್ತಿರುತ್ತಾರೆ.

ಭಾರತದಲ್ಲಿ ಇಲ್ಲಿಯವರೆಗೆ ನಡೆದ ಬಾಬ್ರಿ ಮಸೀದಿ ಧ್ವಂಸ, ಗುಜರಾತಿನ ನರಮೇಧ, ಚರ್ಚ್ ದಾಳಿ, ಮತಾಂತರ ಕಲಹ, ಬಾಂಬ್ ಸ್ಫೋಟಗಳು ಮುಂತಾದ ಮತೀಯ ಕಲಹಗಳಲ್ಲಿ ಸಾವು ನೋವುಗಳಿಗೆ ಒಳಗಾಗಿರುವುದು, ಅಂಗವೈಕಲ್ಯಕ್ಕೆ ಒಳಗಾಗಿರುವುದು, ಜೈಲು ಖೈದಿಗಳಾಗಿ ನ್ಯಾಯಾಲಯಗಳಿಗೆ ಅಲೆಯುತ್ತಿರುವುದು ಮತೀಯ ಕಲಹಗಳನ್ನು ಸೃಷ್ಟಿಸಿ ರಾಜಕೀಯ ಮತ್ತು ಆರ್ಥಿಕ ಲಾಭ ಮಾಡಿಕೊಂಡವರಲ್ಲ, ಸಾಮಾನ್ಯ ಜನರೇ. ಹೀಗೆ ಕೆಳಜಾತಿ ಕೆಳವರ್ಗಗಳ ಸಮುದಾಯ ಸದಾ ಭಯ, ಆತಂಕಗಳಿಂದ ಅಂತಂತ್ರ ಸ್ಥಿತಿಯಲ್ಲಿ ನರಳುವಂತಾಗಿದೆ. ಯಾವುದೇ ಬಗೆಯ ಸ್ವಯಂಕೃತ ಅಪರಾಧಗಳಿಲ್ಲದಾಗಿಯೂ ಮತ್ಯಾರದೋ ಕುಂತಂತ್ರಗಳಿಗೆ, ಲಾಭಗಳಿಗೆ ಜನಸಾಮಾನ್ಯರು ಬಲಿಪಶುಗಳಾಗುತ್ತಿದ್ದಾರೆ.

ಇಲ್ಲಿ ಇನ್ನೊಂದು ಪ್ರಶ್ನೆ ಅಥವಾ ಸಂಶಯ ಬಹಳ ಮುಖ್ಯವಾಗಿ ಎದ್ದು ನಿಲ್ಲುತ್ತದೆ. ಭಾರತದಲ್ಲಿ ಇಲ್ಲಿಯವರೆಗೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕೆಳಜಾತಿ, ಕೆಳವರ್ಗ ಹಾಗೂ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಗಳು ಮಾತ್ರ ಏಕೆ ಸಿಕ್ಕಿಬೀಳುತ್ತಿವೆ? ಮೇಲ್ಜಾತಿ–ಮೇಲ್ವರ್ಗಗಳು ಕ್ರಿಮಿನಲ್ ಪ್ರಕರಣಗಳ ಬಲೆಯಿಂದ ತಪ್ಪಿಸಿಕೊಳ್ಳಲು ಕಾರಣವೇನು? ಅಂದರೆ ಕೆಳಜಾತಿ, ಕೆಳವರ್ಗ ಹಾಗೂ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಗಳು ಮಾತ್ರವೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದಾರೆಯೇ? ಮೇಲ್ಜಾತಿ–ಮೇಲ್ವರ್ಗಗಳು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯೇ ಆಗಿಲ್ಲವೇ? ಅಥವಾ ಅವರು ಆ ಬಗೆಯ ಚಟುವಟಿಕೆಗಳಲ್ಲಿ ತೊಡಗುವಂತಾಗಲು, ಸದಾ ಅಧಿಕಾರವನ್ನು ಅನುಭವಿಸುತ್ತಿರುವ ಅಥವಾ ಅಧಿಕಾರದ

ನೆರಳಲ್ಲೇ ಬದುಕುತ್ತಿರುವ ಈ ದೇಶದ ಬೌದ್ಧಿಕ ಜಾಗೀರುದಾರರಾದ ಮೇಲ್ಜಾತಿ-ಮೇಲ್ವರ್ಗಗಳ ಹುನ್ನಾರಗಳು ಕಾರಣವಾಗುತ್ತಿಲ್ಲವೇ?

ಇಂದು ಯಾವುದಾದರೂ ಒಂದು ಜಾತಿಯ, ಒಂದು ಧರ್ಮದ ಗುಂಪಿನಲ್ಲಿ ಗುರುತಿಸಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಪ್ರಸ್ತುತ ಸಮಾಜದಲ್ಲಿ ಮತೀಯ ಶಕ್ತಿಗಳು ಸೃಷ್ಟಿ ಮಾಡುತ್ತಿದ್ದಾರೆ. ಇಲ್ಲದಿದ್ದಲ್ಲಿ ಎರಡೂ ಗುಂಪುಗಳ ಸಂಶಯಗಳ ದಾಳಿಗೆ ಒಳಗಾಗುವ ಅಪಾಯವನ್ನು ಅಲಿಪ್ತರು ಎದುರಿಸಬೇಕಾಗುತ್ತದೆ ಮತ್ತು ನರಳಬೇಕಾಗುತ್ತದೆ. ಕೆಸರೂರಿನ ಯಾವ ಗುಂಪಿಗೂ ಸೇರದ ಬ್ರೀಡರ್ ಮಹಮದ್ ಸುಲೇಮಾನ್ ಬ್ಯಾರಿಯ ಸಂಶಯದಿಂದ ಅವನ ಕಡೆಯವನಿಂದ ಬೆದರಿಕೆಗೆ ಒಳಗಾಗುತ್ತಾನೆ. ಆ ಘಟನೆಯ ನಂತರ ಮಹಮದ್ ಸ್ಥಿತಿ ಪೇಟೆಯ ನಾಗರೀಕ ಸಮಾಜವೊಂದರಲ್ಲಿ ಬದುಕುತ್ತಿದ್ದರೂ ಗೊಂಡಾರಣ್ಯದಲ್ಲಿ ಕ್ರೂರ ಮೃಗಗಳ ಜೊತೆ ಸದಾ ಮೃತ್ಯು ಭೀತಿಯಲ್ಲಿ ಬದುಕುತ್ತಿರುವ ಕ್ಷುದ್ರ ಜೀವಿಯಂತಾಗಿರುತ್ತದೆ. ಈ ಮತೀಯ ಶಕ್ತಿಗಳು ಈ ಬಗೆಯ ಅನಿವಾರ್ಯತೆಯನ್ನೂ, ಅಪಾಯವನ್ನೂ ತಂದೊಡ್ಡಿವೆ. ಹೀಗೆ ತೇಜಸ್ವಿಯವರ ಕಥನ ಜಾತಿ ಮತ್ತು ಧರ್ಮಗಳೆಂಬ ಜೈಲಿನಲ್ಲಿಯೇ ಜನರು ಬದುಕಬೇಕಾದ ಮತ್ತು ಅಲ್ಲಿ ಒಗ್ಗಿಕೊಳ್ಳದೇ ಹೋದರೆ ಬಹಿಷ್ಕೃತರಾಗಿ ಅಥವಾ ಮೃತ್ಯುಭೀತಿಯಲ್ಲಿ ಬದುಕಬೇಕಾದ ಅನಿವಾರ್ಯ ಸ್ಥಿತಿ ಇಂದು ನಮ್ಮ ಸಮಾಜದಲ್ಲಿ ಇರುವುದನ್ನು ಗುರುತಿಸುತ್ತದೆ. ಆ ಮೂಲಕ ಈ ಸಂಕಟಗಳಿಂದ ಸಮಾಜವನ್ನು ಪಾರುಮಾಡುವ ಹೊರದಾರಿಗಳು ಯಾವುವು? ಎಂಬ ಪ್ರಶ್ನೆ ಹಾಗೂ ಚಿಂತನೆಯನ್ನು ಸಹಾ ಹುಟ್ಟುಹಾಕುತ್ತದೆ.

ಜಾತಿ ಮತ್ತು ಮತೀಯತೆಯ ಇನ್ನೊಂದು ಅವತಾರವೆಂದರೆ ಕೆಲವೇ ಕೆಲವು ವ್ಯಕ್ತಿಗಳು ಬದುಕಲು ಇಡೀ ಸಮಾಜವನ್ನು ಬಲಿಕೊಡುವ ದುಷ್ಟಬುದ್ಧಿ. ಈ ಜಾತಿವಾದಿಗಳು, ಧರ್ಮಾಂಧರು ತಮ್ಮ ವೈಯಕ್ತಿಕವಾದ ದ್ವೇಷಾಸೂಯೆಗಳನ್ನು ಇಡೀ ಸಮಾಜದ ಸಮಸ್ಯೆಯಾಗಿಸಿಬಿಡುವ ಹುನ್ನಾರವನ್ನು ಮಾಡುತ್ತಾರೆ. ಕಿರಗೂರಿನಲ್ಲಿ ಹಲವು ಜಾತಿಗಳು ಇದ್ದವಾದರೂ ಅವರೆಲ್ಲರ ಆರ್ಥಿಕ ಸ್ಥಿತಿ ಒಂದೇ ತೆರನಾಗಿತ್ತು. ಜಾತಿಯನ್ನು ಹೊರತುಪಡಿಸಿದರೆ ಅವರುಗಳ ಬದುಕುಗಳಲ್ಲಿ ಯಾವ ವ್ಯತ್ಯಾಸವೂ, ಜಾತಿ ವೈಷಮ್ಯವೂ ಇರುವುದಿಲ್ಲ. ಆದರೆ ಗ್ರಾಮ ಸೇವಕ ಶಂಕರಪ್ಪ ಸರ್ಕಾರಿ ನೌಕರನಾಗಿದ್ದು, ಯಾವ ಕೆಲಸವನ್ನೂ ಮಾಡದೆ, ಊರಿನಲ್ಲಿ ತರಲೆ ತಾಪತ್ರಯಗಳನ್ನು ಹುಟ್ಟುಹಾಕುತ್ತಾ, ಸಾರಾಯಿ ಅಂಗಡಿಯಲ್ಲಿ ಸಾರಾಯಿ ಅಳೆಯುತ್ತಾ ಕಾಲಕಳೆಯುತ್ತಿದ್ದ. ಕೃಷಿ ಇಲಾಖೆಯವರು ಸಾಂದ್ರ ಬೇಸಾಯ ಮಾಡಲು ರೈತನನ್ನು ಆಯ್ಕೆ ಮಾಡುವಂತೆ ಸೂಚಿಸಿದ್ದರೂ ಕೆಲವು ರೈತರಿಂದ ಸುಳ್ಳು ರುಜು ಹಾಕಿಸಿಕೊಂಡು, ಸಾಂದ್ರ ಬೇಸಾಯದ ಬಗ್ಗೆ ಗಮನ ಕೊಡದೆ, ಇಲಾಖೆಯವರು ಹೇಳಿದ್ದಕ್ಕೆಲ್ಲಾ ತಲೆಯಾಡಿಸುತ್ತಾ ವಿತರಣೆಯಾದ ಔಷಧಿ, ಗೊಬ್ಬರ, ಸಬ್ಸಿಡಿಗಳೆನ್ನೆಲ್ಲಾ ಮಾರಿಕೊಂಡು

ಕಾಲಹಾಕುತ್ತಿದ್ದ. ಆದರೆ ಇಲಾಖೆಯವರು ಪರಿಶೀಲನೆಗಾಗಿ ಫಿಲ್ಡ್ ಡೇಗೆ ಬಂದಾಗ ಅವನ ವಂಚನೆ ಬಯಲಾಗಿ ಅದನ್ನು ಮರೆಮಾಚಲು ಸರ್ಕಾರದವರು ಬೆಳೆ ನಷ್ಟ ತುಂಬಿಕೊಡುವುದಾಗಿ ಸುಳ್ಳು ಹೇಳಿ ಕರಿಯನ ಸಹಿ ಪಡೆದು ಮೇಲ್ಜಾತಿಯವರ ಮೇಲೆ ಜಾತಿನಿಂದನೆಯ ದೂರನ್ನು ನೀಡುತ್ತಾನೆ. ಇದರ ಬಗ್ಗೆ ಯಾವ ಅರಿವೂ ಇಲ್ಲದ, ಊರಿನ ಕೆಲವು ಗೌಡರುಗಳು ಒಂದು ದಿನ ಜೈಲಿನಲ್ಲಿ ಕೊಳೆಯಬೇಕಾಗುತ್ತದೆ. ಶಂಕರಪ್ಪನ ಕುತಂತ್ರವನ್ನು ಅರಿಯದ ಊರಿನ ಗೌಡರು ಹರಿಜನರ ಮೇಲೆ ಜಾತಿ ವೈಷಮ್ಯವನ್ನು ಬೆಳೆಸಿಕೊಳ್ಳುತ್ತಾರೆ. ಆದರೆ ವೈಷಮ್ಯವನ್ನು ಬೆಳೆಸಿಕೊಂಡ ಹಾಗೂ ವೈಷಮ್ಯಕ್ಕೆ ಗುರಿಯಾದ ಎರಡೂ ವರ್ಗಗಳು ಈ ಪ್ರಕರಣದಲ್ಲಿ ಮುಗ್ಧರಾಗಿದ್ದಾರೆ.

ಹೀಗೆ ಭಾರತದ ಪ್ರತಿ ಹಳ್ಳಿಗಳೂ ಯಾರದೋ ಒಬ್ಬಿಬ್ಬರು ಲಾಭದ ಉದ್ದೇಶದಿಂದ ಸೃಷ್ಟಿಯಾಗುತ್ತಿರುವ ಜಾತಿ ಮತ್ತು ಮತೀಯ ಕಲಹಗಳ ಬೆಂಕಿಯಲ್ಲಿ ಬೇಯುತ್ತಿರುವುದನ್ನು ಇಲ್ಲಿ ಕಾಣಬಹುದು. ಕೆಸರೂರಂತೂ ಈ ಲಾಭಕೋರ ದಂಧೆಯ ಬಲಿಪಶುವಾಗಿ ಬೆಂದು ಬೂದಿಯಾಗುತ್ತದೆ. ಆದರೆ ಕಿರಗೂರಿನ ಎಚ್ಚೆತ್ತ ಮಹಿಳಾ ಸಮುದಾಯ ಈ ಅಪಾಯಗಳಿಂದ ಕಿರಗೂರನ್ನೂ, ಅಲ್ಲಿನ ಜನ ಸಮುದಾಯವನ್ನೂ ಕಾಪಾಡುತ್ತಾರೆ. ಇಲ್ಲಿ ಸಂವಿಧಾನ ನೀಡಿರುವ ಜಾತಿನಿಂದನೆಯ ದೂರಿನ ಹಕ್ಕಿನ ದುರ್ಬಳಕೆ ಆಗುತ್ತಿರುವುದರ ಕುರಿತ ಚಿಂತನೆಯಿದೆ. ಮಾಯಾಲೋಕದ ಮಲ್ಲಿಕಾರ್ಜುನ ಸ್ವತಃ ತನ್ನ ಭ್ರಷ್ಟತೆಯನ್ನು ಮುಚ್ಚಿಕೊಳ್ಳಲು, ಜಾತಿಯ ರಕ್ಷಣೆಯನ್ನು ಪಡೆಯಲು ಯತ್ನಿಸಿದರೆ, ಕಿರಗೂರಿನ ಗ್ರಾಮಸೇವಕ ಶಂಕರಪ್ಪ ತನ್ನ ಭ್ರಷ್ಟತೆಯ ಪರಿಣಾಮದಿಂದ ಎದುರಾಗಬಹುದಾದ ಶಿಕ್ಷೆಯಿಂದ ಪಾರಾಗಲು ದಲಿತ ಕರಿಯನ ಮುಗ್ಧತೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಾನೆ. ಅಂದರೆ ಜಾತಿ ನಿಂದನೆಯೆನ್ನುವುದು ವಾಸ್ತವವಾಗಿ ಜಾತಿಯ ಕೂಪದಲ್ಲಿ ನರಳುತ್ತಿರುವ ದಲಿತ ಸುಮುದಾಯದ ರಕ್ಷಣೆಗಿಂತ ಅದರಿಂದ ಲಾಭ ಪಡೆಯುತ್ತಿರುವವರ ಅಕ್ರಮಗಳಿಗೆ ರಕ್ಷಾಕವಚ ಆಗುತ್ತಿರುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಇಲ್ಲಿ ಜಾತಿನಿಂದನೆಯ ಪ್ರಕರಣಗಳನ್ನು ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ನಿರ್ವಹಿಸುತ್ತಿರುವ ಬಗ್ಗೆಯೂ ಸಹಾ ತೇಜಸ್ವಿ ಕಥನ ಪ್ರಸ್ತಾಪಿಸುತ್ತದೆ. ಈ ಜಾತಿನಿಂದನೆಯ ಪ್ರಕರಣದಲ್ಲಿ ಯಾವ ಮಾಹಿತಿಯೂ ಇಲ್ಲದ, ಯಾವ ತಪ್ಪೂ ಮಾಡದ, ಅದರ ಅರಿವೇ ಇಲ್ಲದ ಕಿರಗೂರಿನ ಕಾಳೇಗೌಡ, ಬೈರಪ್ಪ, ಸೀಗೇಗೌಡ ಮುಂತಾದವರನ್ನು ಪೋಲೀಸರು ನಡೆಸಿಕೊಳ್ಳುವ ರೀತಿ, ಅವರು ಮಾಡುವ ಅವಮಾನ, ನಡೆಸುವ ದೌರ್ಜನ್ಯ ಅವರ ಅವಾಚ್ಯ ಬೈಗುಳಗಳು, ನಿಂದನೆಗಳು ಇವೆಲ್ಲಾ ಕಿರಗೂರಿನ ದಲಿತರು ಮತ್ತು ದಲಿತೇತರರ ನಡುವೆ ವಿನಾಕಾರಣ ವೈಷಮ್ಯ ಬೆಳೆಯಲು ಕಾರಣವಾಗುತ್ತದೆ. ಪೊಲೀಸರು ಆರೋಪಿಗಳಿಂದಾಗಲಿ,

ಆರೋಪಿತರಿಂದಾಗಲಿ ಕನಿಷ್ಠ ಮಾಹಿತಿಯನ್ನೂ ಪಡೆಯದೆ, ವಿಚಾರಣೆಯನ್ನೂ ಮಾಡದೆ, ಪ್ರಾಥಮಿಕ ತನಿಖೆಯನ್ನೂ ನಡೆಸದೆ ಏಕಾಏಕಿ ದೂರಿಗೆ ಸಂಬಂಧವೇ ಇಲ್ಲದ ಮತ್ಯಾರೋ ಕೊಟ್ಟ ದೂರನ್ನಾದರಿಸಿ ಬಂಧಿಸಿ ಹಿಂಸಿಸುತ್ತಿರುವದರಿಂದ ಈ ಕಾನೂನಿನ ಬಗ್ಗೆ ದಲಿತೇತರರಲ್ಲಿ ಅಸಹನೆಯುಂಟಾಗಲೂ, ಅನ್ಯರ ಮೂಲಕ ದಲಿತಪರವಾದ ಕಾನೂನಿನ ದುರ್ಬಳಕೆ ಹೆಚ್ಚಾಗಲೂ ಕಾರಣವಾಗುತ್ತದೆ. ಹಾಗಾಗಿ ಅಂಬೇಡ್ಕರ್ ಮತ್ತು ಅವರು ರೂಪಿಸಿರುವ ಜಾತಿನಿಂದನೆಯ ವಿರುದ್ಧದ ಕಾನೂನುಗಳು ಕೆಲವು ಭ್ರಷ್ಟರು ತಮ್ಮ ಹಾಗೂ ತಮ್ಮ ಅಕ್ರಮಗಳ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಮತ್ತು ಹಣ ಮಾಡುವ ದಂಧೆಯ ಪರಿಕರಗಳಾಗಿ ಬಳಸುತ್ತಿರುವುದರ ಬಗ್ಗೆ ಇಲ್ಲಿ ತೇಜಸ್ವಿ ಕಥನ ಎಚ್ಚರಿಕೆಯನ್ನು ನೀಡುತ್ತದೆ. ಆ ಮೂಲಕ ಜನರನ್ನು ಪರಸ್ಪರ ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವವರ, ಸಮಾಜದ ನೆಮ್ಮದಿಯನ್ನು ಕದಡುವವರ ಬಗ್ಗೆ ಎಚ್ಚರಿಕೆಯನ್ನು ಹೊಂದಿರಬೇಕು ಎಂಬ ವಿವೇಕವನ್ನು ತೇಜಸ್ವಿ ಕಥನ ನೀಡುತ್ತದೆ. ಹಾಗೆಯೇ ಶೋಷಣೆ ಎನ್ನುವುದು ಕೇವಲ ಜಾತಿ ನೆಲೆಗಳಲ್ಲಿ ಮಾತ್ರ ಇರದೆ ಅದು ವರ್ಗ ನೆಲೆಗಳಿಗೂ ಚಲಿಸುವುದನ್ನು ತೇಜಸ್ವಿ ಕಥನ ಗುರ್ತಿಸುತ್ತದೆ.

ಇಡೀ ಕಿರಗೂರಿನ ಪುರುಷ ಸಮಾಜ ಜಾತಿ ಜಗಳದಲ್ಲಿ ಮುಳುಗಿದ್ದರೆ ಈ ಎಲ್ಲ ಜಾತಿ, ಧರ್ಮಗಳ ಮಿತಿಗಳನ್ನೂ ಮೀರಿ ಮನುಷ್ಯ ಧರ್ಮವನ್ನು ಮೆರೆಯುವ ಕಿರಗೂರಿನ ದಾನಮ್ಮನ ಚಿತ್ರಣ, ಪುರುಷ ಸಮಾಜದ ಮದುವೆಗಳು, ಆಚರಣೆಗಳು, ಸಂಪ್ರದಾಯಗಳು ಎಲ್ಲವನ್ನೂ ಹಿಂಸೆಕೊಡುವ ಗಂಡಸರ ನೀಚತನವಾಗಿಯೂ ಕಾಣುವ ದಾನಮ್ಮನ ಆಲೋಚನೆಗಳು, ಜಾತಿಯನ್ನು ಮೀರಿ ನಾಗಮ್ಮ ಮಲೆಯಾಳಿ ಪಂಡಿತನೊಂದಿಗೆ ಹೋಗುವ ಪ್ರಸಂಗ, ಪುರುಷರ ಜಾತಿ ಜಗಳಗಳು, ಆಚಾರಗಳು, ಜಾತಿಯ ಕಾರಣದಿಂದ ಉಳುಕು ತೆಗೆಯಲು ನಿರಾಕರಿಸುತ್ತಿದ್ದ ಕರಿಯನನ್ನು ಅವನ ಹೆಂಡತಿ ಕಾಳಿ ಕೋಲು ತೋರಿಸಿ ಹೆದರಿಸುವುದು, ಶರಿಯತ್ ಧಾರ್ಮಿಕ ಕಾನೂನುಗಳನ್ನೇ ನಿರಾಕರಿಸಿ ಜಮಾತೆಯವರ ವಿರುದ್ಧ ತಿರುಗಿಬೀಳುವ ಫಾತಿಮ ಈ ಎಲ್ಲ ಪ್ರಸಂಗ-ಪಾತ್ರವರ್ತನೆಗಳ ಚಿತ್ರಣವು ಜಾತಿ ಮತ್ತು ಲಿಂಗವ್ಯವಸ್ಥೆಯ ಸಂಬಂಧಾಂತರಗಳ ಮೇಲೂ ಬೆಳಕು ಚೆಲ್ಲುತ್ತದೆ. ನಮ್ಮ ಸಮಾಜದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತ ಹಾಗೂ ಧರ್ಮಾತೀತರಾಗಿರುವುದರ ಸಂಕೇತವಾಗಿ ಈ ಎಲ್ಲಾ ಚಿತ್ರಣಗಳನ್ನು ನಾವು ಕಾಣಬಹುದು.

ತೇಜಸ್ವಿಯವರ ಡೇರ್ ಡೆವಿಲ್ ಮುಸ್ತಫಾ ಕಥೆ ಒಂದು ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳ ನಡುವೆ ನಡೆಯುವ ಹಲವು ಘಟನೆಗಳ ಮೂಲಕ ಅವರು ಪರಸ್ಪರ ನಡೆಸುವ ಕೀಟಲೆಗಳ ಮೂಲಕ ಮುಸ್ಲಿಂ ಸಮುದಾಯದ ಕುರಿತ ಇತರೆ ಸಮುದಾಯಗಳಲ್ಲಿ ಇರಬಹುದಾದ ಗೊಂದಲ ಹಾಗೂ ಭಯವನ್ನು ವೈನೋದಿಕವಾಗಿ ವಿವರಿಸುತ್ತದೆ. ಈ

ಕಥೆಯಲ್ಲಿ ಚಿದಂಬರ ರಹಸ್ಯ, ಕುಬಿ ಮತ್ತು ಇಯಾಲ, ಕಿರಗೂರಿನ ಗಯ್ಯಾಳಿಗಳು ಮುಂತಾದ ಕಥನಗಳಲ್ಲಿ ತರುವಂತೆ ಸಮಾಜವನ್ನು ಕುರಿತಾದ ಗಂಭೀರ ವಿಮರ್ಶೆಯ ಚಿತ್ರಣಗಳನ್ನು ತರುವುದಿಲ್ಲ. ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿರುವ ಮುಗ್ಧ ಯುವ ಸಮುದಾಯ ಈ ಜಾತಿ ಮತ್ತು ಮತೀಯವಾದಿ ಸಾಮಾಜಿಕ ಪಿಡುಗುಗಳಿಂದ ಮುಕ್ತವಾಗಿ ಬದುಕಬೇಕು ಮತ್ತು ಬದುಕನ್ನು ಸವಿಯಬೇಕು ಎಂಬ ಆಶಯ ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ಆದರೆ ಇಡೀ ಕಥೆ ಜಾತಿ ಮತ್ತು ಮತೀಯವಾದಗಳ ಕುರಿತು ಕೆಲವು ಗಂಭೀರ ವಿಚಾರಗಳನ್ನು ಓದುಗರ ಮುಂದಿಡುತ್ತದೆ.

ಮುಸ್ಲಿಂ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿಯಲು ಬಹುಮುಖ್ಯ ಕಾರಣವಾಗಿರುವುದು ಆ ಸಮುದಾಯ ಶಿಕ್ಷಣಕ್ಕೆ ಮುಕ್ತವಾಗಿ ತೆರದುಕೊಳ್ಳದಿರುವುದೇ ಆಗಿದೆ. ಅಕ್ಷರಜ್ಞಾನದಿಂದ ವಿಮುಖರಾಗಿರುವ ಕಾರಣ ಅವರು ಸಾಮಾಜಿಕವಾಗಿ ಎಲ್ಲಾ ಸಮುದಾಯದೊಂದಿಗೆ ಮುಕ್ತವಾಗಿ ಬೆರೆಯಬಹುದಾದ ಅವಕಾಶದಿಂದ ವಂಚಿತರಾಗಿದ್ದಾರೆ. ಇದು ಇತರೆ ಸಮುದಾಯಗಳಿಗೆ ನಿಗೂಢವಾಗಿ ಕಾಣುವಂತಾಗಿದೆ. ಶಿಕ್ಷಣ ಈ ಸಮಾಜವನ್ನು ಬೇರೆ ಬೇರೆ ಮಗ್ಗುಲುಗಳಿಂದ ಅರಿಯಲು, ಎಲ್ಲಾ ಭಿನ್ನತೆಗಳ ನಡುವೆಯೂ ಸಮಾಜದೊಂದಿಗೆ ಮುಕ್ತವಾಗಿ ಬೆರೆಯುವ ಅವಕಾಶಗಳನ್ನು ಒದಗಿಸುವುದಲ್ಲದೇ ತಮ್ಮ ಬಗ್ಗೆ ಇತರೆ ಸಮುದಾಯಗಳಲ್ಲಿ ಇರಬಹುದಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಸಹಕಾರಿಯಾಗುತ್ತದೆ. ಚರಿತ್ರೆಯ ಕೆಲವು ಮುಸ್ಲಿಂ ದೊರೆಗಳ ಧಾರ್ಮಿಕ ಅತಿರೇಕಗಳನ್ನು ಮುಂದುಮಾಡಿ, ಇಲ್ಲವೇ ಚರಿತ್ರೆಯ ಅಪವ್ಯಾಖ್ಯಾನ ಮಾಡಿ, ಮುಸಲ್ಮಾನರನ್ನು ಅನ್ಯವಾಗಿಸಿ, ಇಡೀ ದೇಶದ ಸಮುದಾಯದೆದುರು ಅವರನ್ನು ಅಪರಾಧಿಯನ್ನಾಗಿಸುತ್ತಿರುವ ಹಿಂದೂ ಮತೀಯವಾದಿಗಳಿಗೆ ಪ್ರತ್ಯುತ್ತರವನ್ನು ನೀಡಲು ಶಿಕ್ಷಣಕ್ಕೆ ಮುಕ್ತವಾಗಿ ತೆರದುಕೊಳ್ಳುವುದು ಅವಶ್ಯಕವಾಗಿದೆ. ಇದನ್ನು ಡೇರ್ ಡೆವಿಲ್ ಮುಸ್ತಫಾನ ಶಿಕ್ಷಣದ ಪ್ರವೇಶ ಸಾಬೀತುಮಾಡುತ್ತದೆ. ಈ ಕಥೆಯಲ್ಲಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು 'ಜಮಾಲ್ ಅಬ್ದುಲ್ ಮುಸ್ತಾಫಾ ಹುಸೇನ್' ಎಂದು ಚರಿತ್ರೆಯ ಮಾಸ್ತರು ಕರೆದ ತಕ್ಷಣ ಚಕಿತರಾಗುತ್ತಾರೆ. ಯಾಕೆಂದರೆ "ಇಡಿಯ ಕ್ಲಾಸಿನ ರಿಜಿಸ್ಟರಿನಲ್ಲಿ ಅದೊಂದೇ ಮುಸಲ್ಮಾನ ಹೆಸರು ಇದ್ದದ್ದು. ನಮ್ಮ ಕಾಲೇಜಿನಲ್ಲೇ ಇನ್ಯಾವ ಮುಸ್ಲಿಂ ವಿದ್ಯಾರ್ಥಿಯೂ ಇರಲಿಲ್ಲ. ನಮಗೆ ಅಲ್ಲಿಯವರೆಗೆ ಒಬ್ಬನೇ ಒಬ್ಬ ಮುಸಲ್ಮಾನ ಸ್ನೇಹಿತ ಇರಲಿಲ್ಲ. ಮುಸಲ್ಮಾನನೊಬ್ಬ ಹಿಂದುಗಳಿಗೆ ಆಪ್ತನೋ, ಸ್ನೇಹಿತನೋ ಆಗಬಹುದಾದ ಸಾಧ್ಯತೆಯೇ ನಮ್ಮ ಕಲ್ಪನೆಗೆ ಮಿಕ್ಕುದಾಗಿತ್ತು. ಆದ್ದರಿಂದ ಮೊದಲ ಬಾರಿಗೆ ನಮ್ಮ ನಡುವೆ ಮುಸಲ್ಮಾನನೊಬ್ಬ ಕುಳಿತುಕೊಳ್ಳಲಿರುವನೆಂಬುದು ನಮಗೆಲ್ಲಾ ಕುತೂಹಲಕರ ಚರಿತ್ರಾರ್ಹ ಸಂಗತಿಯಾಗಿತ್ತು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯,

ಪುಟ-೮೪) ಇದು ಶಿಕ್ಷಣದ ಕಡೆಗಿನ ಮುಸಲ್ಮಾನರ ನಿರಾಸಕ್ತಿಯನ್ನೂ, ಅದರಿಂದ ಎಲ್ಲರೊಳಗೊಂದಾಗುವ ಅವಕಾಶಗಳಿಂದ ವಂಚಿತರಾಗಿ ಇತರೆ ಸಮುದಾಯಗಳಲ್ಲಿ ಮತ್ತಷ್ಟು ಗೊಂದಲಗಳಿಗೆ ಸಂಶಯಗಳಿಗೆ ಕಾರಣವಾಗುತ್ತಿರುವುದನ್ನು ಸೂಚಿಸುತ್ತದೆ. ಮುಸ್ಲಿಂ ಸಮುದಾಯ ಹಿಂದುಳಿಯಲು ಸಹಾ ಇವೇ ಅಂಶಗಳು ಕಾರಣವಾಗಿರುವುದನ್ನು ಸಾಚಾರ್ ಸಮಿತಿಯು ಉಲ್ಲೇಖಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮುಸ್ಲಿಂ ಸಮುದಾಯದ ಅವರ ಆಚರಣೆಗಳನ್ನೂ, ಕಸುಬುಗಳನ್ನೂ ಗಮನಿಸುವ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಇವರು ಬೇರ್‍ಯಾವುದೋ ಗ್ರಹದ ಜನರಂತೆ ಕಾಣುತ್ತಾರೆ. ಅವರು ಒಂದೇ ಊರಿನಲ್ಲಿದ್ದರೂ ಇತರ ಸಮುದಾಯಗಳಿಂದ ಅಪರಿಚಿತರಂತೆ ಎಲ್ಲೋ ಒಂದು ಕಡೆ, ತಮ್ಮದೇ ಆದ ಶೈಲಿಯಲ್ಲಿ, ನಿಗೂಢ ಜೀವಿಗಳಂತೆ ಬದುಕುವುದು. ಅವರ ವೃತ್ತಿಗಳಾದ ಚರ್ಮ ಹದಮಾಡುವುದು, ಮಾಂಸ ಮಾರುವುದು, ಇನ್ನಾವುದೋ ಅಪರಿಚಿತ ಕೆಲಸಗಳಲ್ಲಿ ತೊಡಗಿಕೊಂಡಿರುವುದು, ಅವರ ಮಸೀದಿಗಳು, ಹಬ್ಬಗಳು ಇವೆಲ್ಲಾ ಅವರ ಬಗ್ಗೆ ಮತ್ತಷ್ಟು ಸಂಶಯಗಳಿಗೆ, ನಿಗೂಢಗಳಿಗೆ ಕಾರಣವಾಗುತ್ತದೆ. ಆದರೆ ಈ ಭಿನ್ನತೆಗಳಾವುವು ಅಸಹಜವೇನಲ್ಲ. ಮತೀಯವಾದಿ ಶಕ್ತಿಗಳು ಈ ಭಿನ್ನತೆಗಳನ್ನೇ ಮುನ್ನೆಲೆಗೆ ತಂದು ಅವರನ್ನು ಈ ದೇಶದ ನೆಲದಿಂದ ಪರಕೀಯರನ್ನಾಗಿ ಬಿಂಬಿಸಿಬಿಟ್ಟಿವೆ. ಹಾಗಾಗಿ ಅವರು ಈ ಸಂಶಯಗಳಿಂದ ಮುಕ್ತರಾಗಬೇಕಾದರೆ ಶಿಕ್ಷಿತರಾಗಬೇಕು, ಧೃತಿಗೆಡದೆ ಧೈರ್ಯವಾಗಿ ಎಲ್ಲರೊಂದಿಗೆ ಬೆರೆಯಬೇಕು ಎಂಬುದು ತೇಜಸ್ವಿ ಕಥನದ ಆಶಯವಾಗಿದೆ.

ಅಲ್ಪಸಂಖ್ಯಾತರನ್ನು ಈ ಸಮಾಜದಿಂದ ಪ್ರತ್ಯೇಕಿಸಲು ಕಾರಣವಾಗಿರುವ ಮತ್ತೊಂದು ಅಂಶವೆಂದರೆ ನಮ್ಮ ಹಬ್ಬ-ಹರಿದಿನಗಳು. "ಮುಸಲ್ಮಾನರಿಗೂ ಹಿಂದೂಗಳಿಗೂ ಮೊಹರಂ ಹಾಗೂ ಗಣಪತಿ ಹಬ್ಬಗಳಲ್ಲಿ ನಡೆಯುತ್ತಿದ್ದ ಕೋಮು ಹೊಡೆದಾಟ. ಪ್ರತಿ ಹಿಂದೂ ಹಾಗೂ ಮುಸಲ್ಮಾನರ ಹಬ್ಬಗಳಲ್ಲೂ ಪ್ರಾಣಹಾನಿಯಾಗದಂತೆ ನೋಡಿಕೊಳ್ಳಲು ಪೊಲೀಸರಿಗೆ ಸಾಕುಬೇಕಾಗಿ ಹೋಗುತ್ತಿದ್ದಿತು. ಪರಸ್ಪರ ಒಬ್ಬರ ಮೇಲೊಬ್ಬರು ಮುಯ್ಯಿ ತೀರಿಸಲೆಂದೇ ಹಬ್ಬಗಳನ್ನು ಮಾಡುತ್ತಿದ್ದರು. ಹೀಗೆ ಕೋಮು ದ್ವೇಷವು ನಮ್ಮೂರಿನ ಜೀವನ ಕ್ರಮದಲ್ಲಿ ಒಂದು ಅಂತರ್ಗತ ಅಂಶವಾಗಿ ಹೋಗಿತ್ತು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೮೫) ಹೀಗೆ ಜನಸಮುದಾಯ ಸಂತೋಷದಿಂದಿರಲು ಆಚರಿಸಲಾಗುವ ಹಬ್ಬಗಳೂ ಕೂಡ ಕೋಮುದಳ್ಳುರಿಯ ಕೂಪಗಳಾಗಿ ಬದಲಾಗಿವೆ. ಇವು ಮುಗ್ಧ ಯುವಸಮುದಾಯಗಳ ಮನಸ್ಸನ್ನು ಪ್ರಭಾವಿಸಿ, ಕಲುಷಿತಗೊಳಿಸಿವೆ. ಹಬ್ಬಗಳು ಶ್ರದ್ಧಾಭಕ್ತಿಯ ಸಂಕೇತಗಳಾಗದೇ, ಜನರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ಸಾಮರಸ್ಯವನ್ನು ಬೆಳೆಸುವ ಮಾರ್ಗಗಳಾಗದೇ ಅನ್ಯ ಧರ್ಮವನ್ನು ಖಂಡಿಸುವ, ಅವಮಾನಿಸುವ, ವಿರೋಧಿಸುವ, ಆ ಧರ್ಮದ ವಿರುದ್ಧ

ಜನತೆಯನ್ನು ಎತ್ತಿಕಟ್ಟಿ ತನ್ನ ಪ್ರಾಬಲ್ಯವನ್ನು ಮೆರೆಯುವ ಹತಾರಗಳಾಗಿ ಬಳಕೆಯಾಗುತ್ತಿರುವುದನ್ನು ತೇಜಸ್ವಿ ಕಥನ ಖಂಡಿಸುತ್ತದೆ.

ಪರಂಪರೆ, ನಮ್ಮ ಆಚಾರ ವಿಚಾರಗಳು, ಸಂಪ್ರದಾಯಗಳು, ಆಚರಣೆಗಳು ನಮ್ಮ ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸುವ ಬದಲು ಮತ್ತಷ್ಟು ಬಿಕ್ಕಟ್ಟುಗಳಿಗೆ ಕಾರಣಗಳಾಗಿವೆ ಅಥವಾ ಮತೀಯವಾದಿಗಳು ಅವನ್ನು ಕಾರಣವಾಗಿಸಿದ್ದಾರೆ. ಯುವಜನತೆ ಇತರೆ ಸಮುದಾಯಗಳೊಂದಿಗೆ ಮುಕ್ತವಾಗಿ ಬೆರೆಯಲು ಹಿಂಜರಿಯುವ ವಾತಾವರಣ ನಿರ್ಮಾಣವಾಗಿದೆ. ಇವುಗಳನ್ನು ಸಮುದಾಯಗಳು ಪರಸ್ಪರ ದೂರ ನಿಂತು ಅಥವಾ ಪ್ರತ್ಯೇಕಗೊಂಡು ವಿವರಿಸಿಕೊಳ್ಳುವುದಾಗಲಿ, ಸರಿಪಡಿಸಿಕೊಳ್ಳುವುದಾಗಲಿ ಸಾಧ್ಯವಿಲ್ಲ. ಇಂತಹ ಪ್ರಶ್ನೆಗಳನ್ನಿಟ್ಟುಕೊಂಡು ತೇಜಸ್ವಿಯವರ ಕಥನ ಸಾಹಿತ್ಯವು ಮುಸ್ತಾಫಾ ಮತ್ತು ಆತನ ಸಹಪಾಠಿಗಳ ಮೂಲಕ ಉತ್ತರಗಳನ್ನು ಕಂಡುಕೊಳ್ಳಲು, ದೂರವಾಗಿರುವ ಸಮುದಾಯಗಳ ಸಾಮರಸ್ಯದ ಕೊಂಡಿಗಳನ್ನು ಬೆಸೆಯಲು ಯತ್ನಿಸುತ್ತದೆ. ಪರಸ್ಪರ ಇರಬಹುದಾದ ತಪ್ಪು ಕಲ್ಪನೆಗಳನ್ನು, ಚರಿತ್ರೆಯ ಸಂಗತಿಗಳನ್ನು ವಾಸ್ತವದಲ್ಲಿ ಹೋಲಿಕೆ ಮಾಡಿ ನೋಡುವ, ಆ ಮೂಲಕ ದ್ವೇಷಾಸೂಯೆಗಳನ್ನು ಉಂಟುಮಾಡಿ ಲಾಭ ಪಡೆಯುವುದನ್ನೂ, ಅಧಿಕಾರ ಕೇಂದ್ರಗಳನ್ನು ತಲುಪಲು ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳುತ್ತಿರುವುದನ್ನೂ ತೇಜಸ್ವಿ ಕಥನ ಖಂಡಿಸುತ್ತದೆ. ಹಾಗೆಯೇ ಜಾತಿ ಮತ್ತು ಧರ್ಮಗಳು ವೈಯಕ್ತಿಕ ವಿಚಾರಗಳಾಗಿದ್ದು, ಅವುಗಳಿಗೆ ಶಿಕ್ಷಣ, ಕ್ರೀಡೆ, ಕಲೆ, ಗೆಳೆತನ ಮುಂತಾದ ಸಾಮಾಜಿಕ ಸಾಮರಸ್ಯವನ್ನು ಬಯಸುವ ಪ್ರಕಾರಗಳಲ್ಲಿ ಪ್ರವೇಶವಿರಬಾರದು ಎಂಬ ಅಭಿಪ್ರಾಯವನ್ನೂ ಸಹಾ ವ್ಯಕ್ತಪಡಿಸುತ್ತದೆ.

ನಾವು ಏನನ್ನು ಓದುತ್ತೇವೆಯೋ, ಯಾರ ಸಹವಾಸದಲ್ಲಿರುತ್ತೇವೆಯೋ ಆ ವಿಚಾರಗಳಿಂದ ಪ್ರಭಾವಿತರಾಗುತ್ತೇವೆ. ರಾಮಾಚಾರಿಯ ಸಹವಾಸದಿಂದ ಜಯಂತಿಯ ಪ್ರೇಮವನ್ನು ಧಿಕ್ಕರಿಸಿ ಅವಳನ್ನು ಕೊಲ್ಲಲು ನಿರ್ಧರಿಸಿದ್ದ ಕೃಷ್ಣೇಗೌಡ ಆನಂತರ ಸಾಹಿತಿ ಜಯರಾಂ ನೀಡುವ ತಿಳುವಳಿಕೆಯಿಂದ "ನೋಡಿ ಹೊಲೇರವನಾದ್ರೂ ಪರ್ವಾ ಇಲ್ಲಿಲ್ಲ. ಒಂದೂ ಆದ್ರೆ ಸಾಕಿತ್ತು. ಎಲ್ಲಾ ಬಿಟ್ಟು ಹೋಗಿ ತುರುಕ! ತಂದೆ ತಾಯಿ ಇಲ್ಲದ ಬಿಕನಾಸಿ! ಥುತ್, ನಾನಿರೋವರೆಗೆ ಇದೆಲ್ಲಾ ಸಾಧ್ಯ ಇಲ್ಲ. ನನ್ನ ಹೆಣ ಬಿದ್ದಮೇಲೆ ಅವರು ಕಟ್ಕೋಬೇಕು' ಎಂದು ಅವಳನ್ನು ಕೊಲ್ಲುವ ಮಾತು ಬಿಟ್ಟು ಆತ್ಮಹತ್ಯೆಯ ಕಡೆಗೆ ತಿರುಗಿದ." (ಚಿದಂಬರ ರಹಸ್ಯ, ೨೦೦೯, ಪುಟ–೧೯೩) ಹೀಗೆ ನಮ್ಮ ಸಹವಾಸಗಳು, ಗೆಳೆಯರು, ನಮ್ಮ ಓದು ಮತ್ತು ಶಿಕ್ಷಣ ಇವೆಲ್ಲಾ ನಮ್ಮ ಮೇಲೆ ಸದಾ ಪ್ರಭಾವ ಬೀರುತ್ತಿರುತ್ತವೆ. ಹಾಗಾಗಿಯೇ ನಾವು ಪಡೆಯುವ ಶಿಕ್ಷಣವು ಕೋಮುಭಾವನೆಗಳಿಂದ ಮುಕ್ತವಾಗಿರಬೇಕು, ಸದಾ ಜಾತ್ಯತೀತ

ಚಿಂತನೆಗಳನ್ನು ಹುಟ್ಟುಹಾಕಬೇಕು. ಇದು ಶಿಕ್ಷಣದಲ್ಲಿನ ಕೋಮುವಾದಿಕರಣಕ್ಕೆ ತೇಜಸ್ವಿ ಕಥನ ತೋರುವ ಪ್ರತಿರೋಧವೇ ಆಗಿದೆ.

ಚಿದಂಬರ ರಹಸ್ಯದ ರಾಮಾಚಾರಿ, ಸುಲೇಮಾನ್ ಬ್ಯಾರಿ ಮಾಡುವ ಕುತಂತ್ರ ಇದೇ ಆಗಿದೆ. ರಾಮಚಾರಿ ಎಂಬ ಬ್ರಾಹ್ಮಣ ಮಹಾಪ್ರಳಯಾಂತಕ ಅವನ ಕುತಂತ್ರ ಬುದ್ದಿಗೆ ಹೆದರಿಯೇ ಎಲ್ಲರೂ ಬಹುವಚನದಲ್ಲಿ ಮಾತಾಡಿಸುತ್ತಿರುತ್ತಾರೆ. ಅವನು ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ಸದಾ ಕಲಹಗಳನ್ನು ತಂದಿಟ್ಟು ಲಾಗಾಯ್ತಿನಿಂದಲೂ ಪಾಲಿಸಿಕೊಂಡು ಬಂದಿರುವ ಬ್ರಾಹ್ಮಣ್ಯವನ್ನು ಕಾಪಾಡುತ್ತಿರುತ್ತಾನೆ. "ಕೆಸರೂರಿನ ಬೆರಳಣಿಕೆಯಷ್ಟಿದ್ದ ಬ್ರಾಹ್ಮಣರ ಮುಂದಾಳು. ಅವರ ಬ್ರಾಹ್ಮಣ್ಯವನ್ನು ಉಳಿಸಲು ಕಟಿಬದ್ಧನಾಗಿ ನಿಂತಿದ್ದವ ಜಾತಿ ಜಾತಿಗಳನ್ನು ಪರಸ್ಪರ ಎತ್ತಿಕಟ್ಟಿ ಬ್ರಾಹ್ಮಣರ ಹಿತಾಸಕ್ತಿ ಕಾಪಾಡುವುದರಲ್ಲಿ, ಬ್ರಾಹ್ಮಣರ ವಿರುದ್ಧ ಶೂದ್ರರು ಎಗರಿ ಬಿದ್ದಾಗ ಶೋಷಣೆ ಮಾಡುತ್ತಿದ್ದವರು ಒಕ್ಕಲಿಗರು, ಲಿಂಗಾಯಿತರೇ ಎಂದು ಹರಿಜನರನ್ನು ಅವರ ಮೇಲೆ ಎತ್ತಿಕಟ್ಟಿದ. ಬೇಸಾಯಗಾರರೆಲ್ಲಾ ಒಟ್ಟಾದಾಗ ಇವರೆಲ್ಲಾ ಭೂ ಮಾಲಿಕರು, ಭೂರಹಿತ ಕೃಷಿ ಕಾರ್ಮಿಕರನ್ನು ಶೋಷಿಸುತ್ತಿದ್ದಾರೆಂದು ಕಮ್ಯುನಿಸ್ಟ್ ಪಕ್ಷ ಒಂದನ್ನು ಮಾಡಿ ಭೂರಹಿತರನ್ನೂ ತೋಟದ ಆಳುಗಳನ್ನೂ ಬೇಸಾಯಗಾರರ ವಿರುದ್ಧ ಎತ್ತಿಕಟ್ಟಿದ." (ಚಿದಂಬರ ರಹಸ್ಯ, ೨೦೦೯, ಪುಟ-೫೧) ಇವನಿಗೆ ಹೆಂಗಸಿನ ಸೊಂಟ ಬಿಟ್ಟು ಬೇರ್‍ಯಾವ ಆಸೆ ಆಕಾಂಕ್ಷೆಗಳೂ ಇಲ್ಲ. ಹೆಂಗಸಿನ ಪ್ರಶ್ನೆ ಬಂದಾಗಲೆಲ್ಲಾ ಅವನ ಬುದ್ದಿ ಚುರುಕಾಗುತ್ತಿತ್ತು. ಈ ಬಾರಿ ಊರಿಗೆ ಬಂದಿರುವ ಗೋಸಾಯಿಗಳ ಹೆಂಗಸರನ್ನು ಸಾಕಷ್ಟು ದಿನ ಇಲ್ಲಿಯೇ ಉಳಿಸಿಕೊಳ್ಳುವ ಉಪಾಯದಲ್ಲಿದ್ದ. ಈ ಕಚ್ಚೇ ಹರುಕ ಬುದ್ಧಿ, ಗೋಸಾಯಿ ಹೆಣ್ಣುಗಳ ಬಗ್ಗೆ ಅವನಿಗಿದ್ದ ಆಕರ್ಷಣೆ, ಈ ಹಿಂದೆ ರಸಿಯಾ ಎಂಬ ಮುಸ್ಲಿಂ ಹೆಣ್ಣನ್ನು ತನಗೆ ಸಿಗದಂತೆ ಮಾಡಿ ಅವಳನ್ನು ಊರುಬಿಟ್ಟು ಓಡಿಸಿದ ಬಗ್ಗೆ ಸುಲೇಮಾನ್ ಬ್ಯಾರಿ ಮತ್ತು ಅವನ ಕಡೆಯವರ ಮೇಲೆ ಇರುವ ಅಸಮಧಾನ, ವೈಯಕ್ತಿಕ ದ್ವೇಷ ಇವೆಲ್ಲವನ್ನೂ ಸುಲೇಮಾನ್ ಬ್ಯಾರಿಯನ್ನು ಮಟ್ಟ ಹಾಕುವ ಉದ್ದೇಶವನ್ನು ಹೊಂದಿರುವ ಕೃಷ್ಣೇಗೌಡನ ರಾಜಕೀಯ ಅಧಿಕಾರದ ಹಂಬಲಕ್ಕಿರುವ ಸಮಸ್ಯೆಯನ್ನಾಗಿ, ಅಡ್ಡಿಯನ್ನಾಗಿ ಇವನು ಪರಿವರ್ತಿಸಿಬಿಡುತ್ತಾನೆ. ಭಾರತೀಯ ಮೇಲ್ಜಾತಿಗಳು ತಮ್ಮ ಬುದ್ಧಿಶಕ್ತಿ, ವಾಕ್ ಶಕ್ತಿಗಳನ್ನು ಬಳಸಿ ಕೆಳಜಾತಿಗಳನ್ನು ಪರಸ್ಪರ ಎತ್ತಿ ಕಟ್ಟಿ ಹೇಗೆಲ್ಲಾ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತವೆ ಎಂಬುದನ್ನು ತೇಜಸ್ವಿಯವರ ಕಥನ ಇಲ್ಲಿ ಗುರುತಿಸುತ್ತದೆ.

ಚಿದಂಬರ ರಹಸ್ಯದ ರಾಮಾಚಾರಿ, ಸುಲೇಮಾನ್ ಬ್ಯಾರಿ; ಕಿರಗೂರಿನ ಗಯ್ಯಾಳಿಗಳು ಕಥೆಯ ಗ್ರಾಮಸೇವಕ ಶಂಕರಪ್ಪ; ಮಾಯಾಲೋಕದ ಇಂಜನಿಯರ್ ಮಲ್ಲಿಕಾರ್ಜುನ ಮುಂತಾದವರು ಜಾತಿ ಮತ್ತು ಧರ್ಮಗಳ ಮೇಲೆ ಅಷ್ಟು ಗಾಢವಾದ ವಿಶ್ವಾಸ ಮತ್ತು

ನಂಬಿಕೆಯುಳ್ಳವರೇನಲ್ಲ. ಅವರಿಗೆ ತಮ್ಮ ಜಾತಿ ಮತ್ತು ಧರ್ಮಗಳು ರಕ್ಷಣೆಯ ಹತಾರಗಳಷ್ಟೇ. ಅವುಗಳ ಬಗ್ಗೆ ಯಾವ ಪ್ರೀತಿಯೂ ಇರುವುದಿಲ್ಲ. ಅವರುಗಳಿಗೆ ಜಾತಿ ಧರ್ಮಗಳ ಮೂಲಕ ಜನತೆಯಲ್ಲಿ ಜಗಳವನ್ನು ತಂದಿಟ್ಟು, ತಾವು ಅಧಿಕಾರವನ್ನು ಪಡೆಯುವ, ಅದನ್ನು ನಿರಂತರಗೊಳಿಸಿಕೊಳ್ಳುವ, ಎರಡೂ ಸಮುದಾಯಗಳ ನಡುವೆ ತಮ್ಮ ಅಗತ್ಯವನ್ನು ಸೃಷ್ಟಿಸುವುದೇ ಉದ್ದೇಶವಾಗುತ್ತದೆ. ಆ ಮೂಲಕ ಎರಡೂ ಸಮುದಾಯಗಳು ತಮ್ಮ ಮೇಲೆ ಅವಲಂಬನೆಯಾಗಿ ತಮ್ಮ ಯಾಜಮಾನ್ಯವನ್ನು ಒಪ್ಪಿ, ತಮ್ಮ ನಿಯಂತ್ರಣದಲ್ಲಿ ಬದುಕುವಂತೆ ಮಾಡುವ ಹುನ್ನಾರಗಳನ್ನು ಸದಾ ಇವರು ಮಾಡುತ್ತಿರುತ್ತಾರೆ. ಇವರು ಸಮಾಜದ ಪ್ರತಿ ಚಲನೆಯನ್ನೂ ತಮ್ಮ ಹಿಡಿತದಲ್ಲಿ ಇಟ್ಟು ನಿಯಂತ್ರಿಸುವ ಹತಾರಗಳನ್ನಾಗಿ ಜಾತಿ ಮತ್ತು ಧರ್ಮಗಳನ್ನು ಬಳಸುತ್ತಾರೆ. ಹಾಗಾಗಿ ಈ ಜಾತಿ ಮತ್ತು ಮತೀಯವಾದಿಗಳಿಗೆ ಜಾತಿ ಮತ್ತು ಕೋಮು ಸಂಘರ್ಷಗಳು ಹೆಚ್ಚು ಹೆಚ್ಚು ಸಂಭವಿಸಿದಷ್ಟು ಲಾಭವಾಗುತ್ತದೆ. ಆ ನಿಟ್ಟಿನಲ್ಲಿ ಅವರು ಸದಾ ಕ್ರಿಯಾಶೀಲರಾಗಿರುತ್ತಾರೆ. ಈ ಬಗ್ಗೆ ತೇಜಸ್ವಿ ಕಥನ ಸಮಾಜವನ್ನು ಎಚ್ಚರಿಸುತ್ತದೆ ಇಂತಹ ಕುತಂತ್ರಗಳನ್ನು ಅರ್ಥಮಾಡಿಕೊಳ್ಳುವಂತೆ ಓದುಗರನ್ನು ಪ್ರಚೋದಿಸುತ್ತದೆ.

ವಸಾಹತುಶಾಹಿಗಳ ಆಳ್ವಿಕೆಯ ಅವಧಿಯಲ್ಲೂ ಮತಾಂತರ ಪ್ರಕ್ರಿಯೆಗಳು ಮುಂದುವರೆಯುತ್ತವೆ. ಈ ಸಂದರ್ಭದಲ್ಲಿ ಬ್ರಾಹ್ಮಣಶಾಹಿಯೇ ಮುಂಚೂಣಿಯಲ್ಲಿ ನಿಂತು ಅಧಿಕಾರ ಹಾಗೂ ಇನ್ನಿತರೆ ಲಾಭದ ಆಸೆಗಳಿಗೆ ಮತಾಂತರಗೊಳ್ಳುತ್ತಾರೆ. ವಸಾಹತು ಕಾಲದ ಸಂದರ್ಭದಲ್ಲಿ ಮನುಧರ್ಮ ಶಾಸ್ತ್ರವನ್ನು ಧಿಕ್ಕರಿಸಿ ಮೆಕಾಲೆಯು ಸಾರ್ವತ್ರಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುತ್ತಾನೆ. ಇದರ ಪ್ರಭಾವದಿಂದ ಅವಕಾಶ ವಂಚಿತರಾಗಿದ್ದ ಅಸ್ಪೃಶ್ಯರು, ಶೂದ್ರರು ಅಕ್ಷರ ಜ್ಞಾನಕ್ಕೆ ತೆರೆದುಕೊಳ್ಳುತ್ತಾರೆ. ಇದರಿಂದಾಗಿ ಪರಂಪರೆಯಿಂದಲೂ ವೈದಿಕಶಾಹಿಯ ಕುತಂತ್ರಗಳಿಗೆ ಒಳಗಾಗಿ ಅನೇಕ ವಿಷಯಗಳಲ್ಲಿ ಮೂಲೆಗುಂಪಾಗಿದ್ದರ ಬಗ್ಗೆ, ಹಾಗೆ ಮಾಡಿದ್ದರ ಹಿಂದಿರುವ ಹುನ್ನಾರಗಳ ಕುರಿತ ಅರಿವು ಮತ್ತು ಎಚ್ಚರಿಕೆ ತಳ ಸಮುದಾಯಗಳಲ್ಲಿ ಮೂಡುತ್ತದೆ. ಈ ಅರಿವು ಮತ್ತು ಎಚ್ಚರಿಕೆ ತೀವ್ರತರವಾದ ಮತಾಂತರಗಳಿಗೆ ಕಾರಣವಾಗುತ್ತದೆ. ಅಂಬೇಡ್ಕರ್ ಅವರ 'ಹಿಂದೂ ಆಗಿ ಹುಟ್ಟಿದ್ದೇನೆ, ಹಿಂದೂ ಆಗಿ ಸಾಯಲಾರೆ' ಎಂಬ ಘೋಷಣೆಯಿಂದ ಅವರ ಅನುಯಾಯಿಗಳು ಸಾಮೂಹಿಕವಾಗಿ ಅಂಬೇಡ್ಕರ್ ಅವರನ್ನು ಅನುಸರಿಸಿ ಬೌದ್ಧ ಮತಕ್ಕೆ ಮತಾಂತರಗೊಳ್ಳುತ್ತಾರೆ. "ಅಸ್ಪೃಶ್ಯತೆಯು ಈ ದೇಶಕ್ಕಂಟಿದ ಶಾಪ. ಅದು ಶೋಷಿತ ಸಮುದಾಯಗಳ ಆತ್ಮಸ್ಥೈರ್ಯವನ್ನು, ನೈತಿಕ ಬಲವನ್ನು ಕಿತ್ತುಕೊಂಡು ಮಣ್ಣುಪಾಲು ಮಾಡಿದೆ. ಹಿಂದೂ ಧರ್ಮವು ಅಸ್ಪೃಶ್ಯರ ಮೆದುಳಿಗೆ ಸುತ್ತಿರುವ ಗುಲಾಮಗಿರಿಯ ಸಂಕೋಲೆಯನ್ನು ತುಂಡರಿಸಿ ಶಾಶ್ವತ ವಿಮೋಚನೆಯನ್ನು ಹೊಂದಲು ಮತಾಂತರವೊಂದೇ ಏಕೈಕ ಮಾರ್ಗ. ಧರ್ಮವಿರುವುದು ಮನುಷ್ಯನಿಗಾಗಿ. ಆದರೆ

ಮನುಷ್ಯನಿರುವುದು ಧರ್ಮಕ್ಕಾಗಿ ಅಲ್ಲ. ಸಂಘಟಿತರಾಗಲು, ಆತ್ಮಸ್ಥೈರ್ಯವನ್ನು ವೃದ್ಧಿಸಿಕೊಳ್ಳಲು, ಸ್ವತಂತ್ರರಾಗಲು, ಸಂತೋಷದಿಂದ ಕೌಟುಂಬಿಕ ಜೀವನವನ್ನು ನಡೆಸಲು ಮತಾಂತರವೊಂದೇ ಪರಿಹಾರ." (ಚಸರಾ & ಲಕ್ಷ್ಮೀಪತಿ ಸಿ.ಜಿ.(ಸಂ), ಮತಾಂತರ, ೨೦೦೯, ಪುಟ-೧೦೫) ಎಂದು ಭಾವಿಸಿದ ದಲಿತರು ಮತ್ತು ಶೂದ್ರರು ಮುಕ್ತವಾಗಿ ಮತಾಂತರಗಳಿಗೆ ತೆರೆದುಕೊಳ್ಳುತ್ತಾರೆ. ಆದರೆ ಶತಶತಮಾನಗಳಿಂದಲೂ ಅಧಿಕಾರವನ್ನು, ಯಾಜಮಾನ್ಯವನ್ನು ಅನುಭವಿಸಿಕೊಂಡು ಬಂದ ವೈದಿಕಶಾಹಿಯು ಸುಳ್ಳು, ಮೋಸ, ವಂಚನೆ ಮತ್ತು ಕುತಂತ್ರ ಮುಂತಾದುವುಗಳಿಂದ ಜೋಪಾನವಾಗಿ ಕಾಪಾಡಿಕೊಂಡಿದ್ದ ತಮ್ಮ ಮೇಲ್ಜಾತಿ ಯಾಜಮಾನ್ಯವು ಮುರಿದುಬೀಳುತ್ತಿರುವುದರ ಕುರಿತು ಆತಂಕಕ್ಕೊಳಗಾಗುತ್ತದೆ. ಎಸ್.ಎಲ್. ಬೈರಪ್ಪ, ಚಿದಾನಂದಮೂರ್ತಿ ಮುಂತಾದ ವೈಧಿಕಶಾಹಿಯ ಮುಖವಾಣಿಗಳು ಈ ಹಿಂಸಾ ದಾಳಿಗಳನ್ನು, ಚರಿತ್ರೆಯ ಮುಸ್ಲಿಂ ದಾಳಿಗಳನ್ನು ಸಮೀಕರಿಸಿಕೊಂಡು ಸಮರ್ಥನೆ ಮಾಡುತ್ತಿರುವುದು ಹೇಯವಾದದು. ಅಹಿಂಸೆಯನ್ನು ಹಿಂಸೆಯಿಂದ, ಜಾತ್ಯಾತೀತತೆಯನ್ನು ಜಾತಿವಾದದಿಂದ, ಸಮಾನತೆಯನ್ನು ಅಸಮಾನತೆಯಿಂದ ಗೆಲ್ಲಲು ಸಾಧ್ಯವಿಲ್ಲ ಎಂಬ ಗಾಂಧೀಜಿಯವರ ಮಾತು ಇಲ್ಲಿ ಅರ್ಥಪೂರ್ಣವೆನಿಸುತ್ತದೆ. (ಹೆಚ್ಚಿನ ವಿವರಗಳಿಗೆ: ಪೂರ್ಣಚಂದ್ರ ತೇಜಸ್ವಿ, ಹೊಸ ವಿಚಾರಗಳು, ೨೦೧೨)

ಭಾರತೀಯ ನೆಲದಲ್ಲಿ ಮತಾಂತರಗಳು ಹೊಸದೇನೂ ಅಲ್ಲ, ಮುಸ್ಲಿಮರು, ಕ್ರೈಸ್ತರು ಬರುವ ಮೊದಲೇ ಭಾರತದಲ್ಲಿ ಮತಾಂತರಗಳು ನಡೆದಿದ್ದವು. ಹಿಂದೂ ಧರ್ಮವೆಂದು ಕರೆಯುತ್ತಿರುವ ವೈಧಿಕ ಧರ್ಮದ ಜಾತಿಪದ್ಧತಿ, ಅಸ್ಪೃಶ್ಯತೆ, ಶ್ರೇಣೀಕೃತ ಅಸಮಾನ ವ್ಯವಸ್ಥೆ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಮುಂತಾದ ಭೇದ ಭಾವಗಳು, ಹಿಂಸಾ ಕೃತ್ಯಗಳು ಮುಂತಾದ ಅಮಾನವೀಯ ಅನಾಚಾರಗಳ ವಿರುದ್ಧ ಸಿಡಿದು ಬೌದ್ಧ, ಜೈನ, ಸಿಖ್, ವೀರಶೈವ, ಚಾರ್ವಾಕ ಮುಂತಾದ ಧಾರ್ಮಿಕ ಪಂಥಗಳು ಸ್ಥಾಪನೆಯಾದವು. ಪಂಪ ರನ್ನ ಮುಂತಾದವರು ವೈದಿಕ ಪಂಥವನ್ನು ತ್ಯಜಿಸಿ ಅಹಿಂಸೆಯನ್ನು ಸಾರುವ ಜೈನಮತಕ್ಕೆ ಮತಾಂತರವಾದರು. ವಚನ ಚಳುವಳಿಯ ಸಂದರ್ಭದಲ್ಲಂತೂ ಮತಾಂತರಗಳ ಪ್ರವಾಹವೇ ಹರಿಯಿತು. ವಚನ ಚಳುವಳಿಯ ನೇತಾರನಾದ ಬಸವಣ್ಣ ವೈದಿಕಶಾಹಿಯ ಧಾರ್ಮಿಕ ದಬ್ಬಾಳಿಕೆಗೆ ಒಳಗಾಗಿದ್ದ ಎಲ್ಲಾ ನಿರ್ಲಕ್ಷಿತ ಕೆಳಜಾತಿಗಳನ್ನು ಶೈವ ಪಂಥಕ್ಕೆ ಮತಾಂತರಗೊಳಿಸುತ್ತಾನೆ. ಹಾಗೆ ನೋಡಿದರೆ ಭಾರತದ ಚರಿತ್ರೆಯೇ ಮತಾಂತರದ ಚರಿತ್ರೆಯಾಗಿದೆ.

ಬ್ಯಾಂಕ್ ಸಾಲ ಪಡೆದು ಸಾಕಿದ್ದ ಹಂದಿಗಳನ್ನು ಸಾಲಕ್ಕೆ ಜಮೆ ಮಾಡಿಕೊಳ್ಳುವುದಾಗಿ ಬ್ಯಾಂಕಿನ ಮ್ಯಾನೇಜರ್ ಹೆದರಿಸಿದ್ದನ್ನು ಗಂಭೀರವಾಗಿ ತೆಗೆದುಕೊಂಡ ಹರಿಜನರು, ಹಂದಿಗಳನ್ನೆಲ್ಲಾ ತಿಂದು ತೇಗಿ, ನಾವು ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳುತ್ತೇವೆ ಆದ್ದರಿಂದ

ಅವುಗಳನ್ನು ಕಾಡಿಗೆ ಓಡಿಸಿಬಿಟ್ಟೆವು ಎಂಬ ಸುದ್ದಿಯನ್ನು ಹರಡಿಸುತ್ತಾರೆ. ಇದು ಕೆಸರೂರಿನ ಜಾತಿವಾದಿ ಸಮಾಜದ ಮೇಲ್ಜಾತಿ ಹಿಂದೂಗಳಲ್ಲಿ ಭಯ ಮಿಶ್ರಿತ ತಲ್ಲಣಗಳನ್ನು ಉಂಟುಮಾಡುತ್ತದೆ. ಅದರಲ್ಲೂ ರಾಮಾಚಾರಿಯು ಶೂದ್ರರ ನಡುವೆ ದ್ವೇಷವನ್ನು ಬಿತ್ತಿ, ಜಗಳ ಹುಟ್ಟುಹಾಕುವುದರಲ್ಲಿ ಸಫಲನಾದರೂ, ಅವನನ್ನು ಶೂದ್ರರು ಅನುಮಾನದಿಂದಲೇ ನೋಡುತ್ತಿರುತ್ತಾರೆ. ಹಾಗಾಗಿ ತನ್ನ ರಾಜಕೀಯ ಹಂಬಲ ಈಡೇರಬೇಕಾದರೆ ಅವನಿಗೆ ದಲಿತರ ಮತಗಳ ಅಗತ್ಯವಿರುತ್ತದೆ. ಆದ ಕಾರಣ ಎಂದೂ ಹೊಲೆಯರ ಕೇರಿಗೆ ಬರದಿರುವ ಈ ಬ್ರಾಹ್ಮಣ ತನ್ನ ಶಿಷ್ಯನಾದ ತಮ್ಮಣ್ಣಗೌಡನೊಂದಿಗೆ ದೌಡಾಯಿಸುತ್ತಾನೆ. ಹರಿಜನ ಕೇರಿಗೆ ಎಂದೂ ಕಾಲಿಡದವರು, ಯೋಗಕ್ಷೇಮ ವಿಚಾರಿಸದವರು ಮತಾಂತರವಾಗುತ್ತೇವೆ ಎಂಬ ಸುದ್ದಿ ಕೇಳಿ ಬಂದಿರುವುದು ಹರಿಜನರಲ್ಲಿ ಹಲವು ಸಂಶಯಗಳನ್ನು ಮೂಡಿಸುತ್ತದೆ. ಜಾತಿಯನ್ನು ಬಿಡುವುದರಲ್ಲಿ, ಮತಾಂತರ ಆಗುವುದರಲ್ಲಿ ಏನೋ ಮಹತ್ತಾದುದು ಇದೆ ಎಂದೆನಿಸುತ್ತದೆ. ಈ ಸಂದರ್ಭದಲ್ಲಿ ಹರಿಜನರು ರಾಮಾಚಾರಿ ಮತ್ತು ತಮ್ಮಣ್ಣಗೌಡರನ್ನು ಸಹಜವಾಗಿಯೇ ಕೇಳುವ ಪ್ರಶ್ನೆಗಳು ಪರಂಪರೆಯಿಂದಲೂ ಮೇಲ್ಜಾತಿಗಳು ನಡೆಸಿದ ದಬ್ಬಾಳಿಕೆಗಳಿಗೆ, ಮನುಷ್ಯ ವಿರೋಧಿ ಕೃತ್ಯಗಳಿಗೆ ಪ್ರತಿಭಟನೆಯಂತೆ ತೋರುತ್ತವೆ. "ನಿಮ್ಮ ದೇವಸ್ಥಾನಕ್ಕೆ ನಮ್ಮನ್ನು ಸೇರಿಸ್ಕೋತೀರಾ! ನಿಮ್ಮ ಮನೆ ಒಳಗೆ ನಮ್ಮನ್ನು ಬಿಟ್ಕೋತೀರಾ? ನಮ್ಮನ್ನು ಮುಟ್ಟಿಸ್ಕೋತೀರಾ.?... ನಮ್ಮಜ್ಜ ಮುತ್ತಜ್ಜನ ಕಾಲದಿಂದ ಮುಕ್ಕಿ ಬಗ್ಗಿಸಿ ದುಡಿದ್ರೂ ಇವತ್ತಿಗೂ ಅರೆ ಹೊಟ್ಟೆ ಹರಕಲು ಬಟ್ಟೆ! ಕಾಣಾದಿಲ್ಲೇನು?... ಹೊಲೇರ ಹುಡುಗೀರು ತೋಟದಾಗೆ ಬಂದ್ರೆ ಹಿಡಿಯಕ್ಕೆ ಹೋಗ್ತೀರಿ?... ನಮ್ಮ ಹುಡುಗೀರು ಮರ್ಯಾದೇಲಿ ಕೆಲಸ ಮಾಡ್ಕೊಂಡು ಗ್ರಾಸ್ತನ ಮಾಡಹಂಗೇ ಇಲ್ಲ" (ಚಿದಂಬರ ರಹಸ್ಯ, ೨೦೦೯, ಪುಟ–೧೫೪, ೧೫೫ & ೧೫೬) ಹೀಗೆ ಪರಂಪರೆಯಿಂದಲೂ ತಡೆಹಿಡಿದಿದ್ದ ನೋವನ್ನು, ಆಕ್ರೋಶವನ್ನು ಒಮ್ಮೆಲೆ ಹೊರಹಾಕುತ್ತಾರೆ. ಈ ಎಲ್ಲಾ ಪ್ರಶ್ನೆಗಳಿಗೆ ನೇರ ಉತ್ತರ ಕೊಡಲಾರದ ಬ್ರಾಹ್ಮಣ ಪರಂಪರೆಯ ಪ್ರತಿನಿಧಿ ರಾಮಾಚಾರಿ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಉತ್ತರಿಸುವ ಮೂಲಕ ಪಲಾಯನ ಮಾಡುತ್ತಾನೆ. ಶೂದ್ರನಾದ ತಮ್ಮಣ್ಣ ಹರಿಜನರ ಹೆಣ್ಣುಗಳನ್ನು ತಾವು ಅನುಭವಿಸುವುದು ಔದಾರ್ಯವೆಂದೇ ತಿಳಿದಿದ್ದವನು. ಹಾಗಾಗಿ ಹರಿಜನ ಯುವಕರು ಎತ್ತುವ ಪ್ರಶ್ನೆಗಳು ಅಧಿಕಪ್ರಸಂಗವಾಗಿ ಅವನಿಗೆ ಕಾಣುತ್ತವೆ. ಹಾಗಾಗಿಯೇ ಅವನು ಹರಿಜನರ ಜಾತಿ ಮತ್ತು ಬದುಕನ್ನು ಕುರಿತು ತುಚ್ಛವಾಗಿ ಮಾತಾಡುತ್ತಾನೆ. ಇದರಿಂದ ಕೆಲವು ಹರಿಜನ ಯುವಕರಿಗೆ ತಮ್ಮ ಜಾತಿಯ ಮೇಲೆ ಹೇಸಿಗೆಯುಂಟಾಗುತ್ತದೆ. ಇದು ಹೀಗೆ ಮುಂದುವರೆದು ದಲಿತ ಯುವಕರ ಪ್ರಶ್ನೆಗಳಿಗೆ ಉತ್ತರಿಸಲಾಗದ ರಾಮಾಚಾರಿ ಅದೇ ದ್ವೇಷದಿಂದ ಭೂತದ ವಿಷಯದಲ್ಲಿ ಹೇಳುವ ಸುಳ್ಳಿನಿಂದ ಹೊಲೆಯರ ಮಾಯಿಯನ್ನು ಕೃಷ್ಣೇಗೌಡ ಕೋವಿ ತೋರಿಸಿ ಬೆದರಿಕೆ ಹಾಕುತ್ತಾನೆ. ಈ ಸಂದರ್ಭದಲ್ಲಂತೂ ಹರಿಜನರ

ಆಕ್ರೋಶದ ಕಟ್ಟೆ ಒಡೆಯುತ್ತದೆ. "ಈ ಗೌಡ ನೋಡಿದ್ರೆ ಕೋವಿ ಹಿಡಿದುಕೊಂಡು ಕೊನ್ನಾಕೆ ಬಂದಿದ್ದಾನೆ. ನಾವೇನು ಕೇರಿಯಾಗೆ ನರಮನುಷರ ತರ ಇರಬೇಕೋ ಸಾಯಬೇಕೋ' ಎಂದ ಮಗದೊಬ್ಬ. 'ಥತ್ ಈ ಸೂಳೆಮಕ್ಕಳಿಗೆ ನಾವು ಸಾಬ್ರಿಗಿಂತ ಅತ್ತತ್ತ ಆಗೋದ್ವಲ್ಲ' ಎಂದ ಇನ್ನೊಬ್ಬ. 'ಮಾಯಣ್ಣ ನೀನೊಂದ್ಮಾತು ಹೂ ಅನ್ನು. ನಾವೆಲ್ಲಾ ಅತ್ತಲಾಗಿ ಸಾಬ್ರ ಜಾತಿಗಾರೂ ಸೇರ್ಕೋತೀವಿ' ಎಂದ ಇನ್ನೊಬ್ಬ" (ಚಿದಂಬರ ರಹಸ್ಯ, ೨೦೦೯, ಪುಟ-೧೪೯)

ಒಟ್ಟಾರೆ ಯಾವುದೋ ಇಂದು ಸಮುದಾಯ ಸ್ವಾರ್ಥದಿಂದ ಸೃಷ್ಟಿಸಿರುವ ಜಾತಿ ಮತ್ತು ಮತೀಯ ಕಟ್ಟಳೆಗಳು ಭಾರತೀಯ ಸಮಾಜದ ಕರ್ತೃತ್ವ, ಉಲ್ಲಾಸ, ಸಹೋದರತ್ವಗಳನ್ನೇ ಶಾಶ್ವತವಾಗಿ ಕೊಂದು ಹಾಕಿವೆ. ಆದರೆ ಇದೇ ಕಾದಂಬರಿಯಲ್ಲಿ ರಫಿಯನ್ನು ತನ್ನ ಸ್ವಾರ್ಥಕ್ಕಾಗಿ ಹಿಂದೂ ಧರ್ಮಕ್ಕೆ ಮತಾಂತರ ಮಾಡಿಸಲು ಯತ್ನಿಸುವುದು ಮೇಲ್ಜಾತಿಗಳ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಅಂದರೆ ಮೇಲ್ಜಾತಿ-ಮೇಲ್ವರ್ಗಗಳು ತಮಗಿಷ್ಟ ಬಂದಂತೆ ಧಾರ್ಮಿಕ ನಿಯಮಗಳನ್ನು ಕಟ್ಟುಪಾಡುಗಳನ್ನು ಬದಲಿಸಿಕೊಳ್ಳಬಹುದು. ಆದರೆ ಕೆಳಜಾತಿಗಳು ಮಾತ್ರ ಈ ನಿಯಮಗಳನ್ನು ಕಟ್ಟುಪಾಡುಗಳನ್ನು ಮೀರಬಾರದು. ತ್ಯಕ್ತ ಕಥೆಯಲ್ಲಿ ಹಾರವ ಹೇಮಂತ ನಾಯಕ ಶೂದ್ರ ಸೋಮುವಿನ ಅಡಿಗೆ ಮನೆಯ ಪ್ರವೇಶವನ್ನು ಪ್ರಶ್ನಿಸುವ ಸೋಮುವಿಗೆ ಹೇಮಂತ 'ಹಾಗಂತ ಹೇಳೋದಕ್ಕೆ ಶೂದ್ರನಿಗೆ ಅಧಿಕಾರವಿಲ್ಲ ಗೊತ್ತಾಯ್ತೋ. ಈ ಶಾಸನ ಮಾಡೋ ಹಕ್ಕು, ಪಾಲಿಸೋ ಹಕ್ಕು ನಮಗೆ ಮಾತ್ರ ಇರೋದು' ಎಂಬ ಮಾತುಗಳು ಇದೇ ಹಿನ್ನೆಲೆಯಲ್ಲಿ ಗಮನಿಸಬಹುದು. ಇದು ವೈದಿಕ ಧರ್ಮದ ತಾರತಮ್ಯ ನೀತಿ. ಹಿಂದೂ ಧರ್ಮದಲ್ಲಿ ವ್ಯಕ್ತಿಗೆ ಸ್ಥಾನವಿಲ್ಲ, ಜಾತಿ-ವರ್ಗ ಕಲ್ಪನೆಯೇ ಅದರ ಆಧಾರ, ಮನುಷ್ಯನ ಉನ್ನತಿಗೆ ಸಹಾನುಭೂತಿ, ಸಮಾನತೆ, ಸ್ವಾತಂತ್ರ್ಯ ಈ ಮೂರು ಅಂಶಗಳು ಬೇಕು ಇವು ಹಿಂದೂ ಧರ್ಮದಲ್ಲಿ ಕಾಣುವುದಿಲ್ಲ.

ಹಿಂದೂ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಜಾತಿ ತಾರತಮ್ಯದ ವಿರುದ್ಧ ಪ್ರತಿರೋಧವಾಗಿ ಮತಾಂತರಗಳು ನಡೆಯುತ್ತಿವೆ. ಮತಾಂತರಗಳು ಶೋಷಿತರ ಬದುಕನ್ನು ಸುಧಾರಿಸಿಬಿಡುತ್ತವೆ ಎಂದೇನೂ ತೇಜಸ್ವಿಯವರ ಕಥನ ನಂಬುವುದಿಲ್ಲ. ಆದರೆ ಪರಂಪರೆಯಿಂದಲೂ ಅಸ್ಪೃಶ್ಯರಂತೆ ಬದುಕುತ್ತಿದ್ದ ದಲಿತ ಸಮುದಾಯದಕ್ಕೆ ಸಾಮಾಜಿಕವಾಗಿ ಕೆಲವು ಸ್ಥಾನಮಾನಗಳು, ಉದ್ಯೋಗ, ಗೌರವಗಳು ಸಿಗುವಂತಾಗಿ ಇತರೆ ಸಮುದಾಯಗಳೊಂದಿಗೆ ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ ಎಂಬುದು ತೇಜಸ್ವಿ ಕಥನದ ನಂಬಿಕೆಯಾಗಿದೆ. ಜೋಸೆಫ್ ಅಂಗಾರನ ಪೂರ್ವಿಕರು ಯಾರೋ ಹೊಲೆಯರ ಜಾತಿಯಿಂದ ಮತಾಂತರಗೊಂಡಿರುವುದನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಮತಾಂತರಿಯೇ ಆಗಿರುವ ಮರ ಕಡಿಯುವ ಮಲೆಯಾಳಿ ಸೋನ್ಸ್ ಕಿರಗೂರಿನ ದಲಿತರ ಬಗ್ಗೆ

ಅವರ ವೃತ್ತಿಯ ಬಗ್ಗೆ ಆಡುವ ಮಾತುಗಳನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬಹುದು. "ಅಡ್ನಾಡಿ ಸೂಳೇಮಕ್ಕಳ ಕೈಗೆ ಗರಗಸ ಕೊಟ್ಟದ್ದು ನಿಮ್ಮ ಮೊದಲನೇ ತಪ್ಪು. ಕೆಳಗೆ ಆಪು ಕೊಟ್ಟುಕೊಳ್ಳದೆ ಇಂಥ ಮರ ಕುಯ್ಯೋದಕ್ಕೆ ಕಸುಬು ಗೊತ್ತಿದ್ದೋನು ಯಾವನಾದ್ರೂ ಕೈ ಹಾಕ್ತಾನಾ?.. ಗರಗಸ ಸಿಗಿಸಿದವರು ಹರಿಜನರೆಂದು ತಿಳಿದ ಮೇಲಂತು 'ನೋಡಿ ದೇವರು ಒಂದೊಂದು ಕೆಲ್ಸಕ್ಕೆ ಒಂದೊಂದು ಜಾತಿ ಮಾಡಿದ್ದಾನೆ. ಅದು ಬಿಟ್ಟು ಬೇರೆದಕ್ಕೆ ಕೈ ಹಾಕಬಾರ್ದು ನಾವು." (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೨೬) ಈ ದೇಶದಲ್ಲಿರುವ ಕ್ರಿಶ್ಚಿಯನ್ನರೆಲ್ಲಾ ಯಾವ ಕಾರಣಗಳಿಗೆ ಮತಾಂತರವಾದರೋ ಅದೇ ಜಾತಿ ಆಧಾರಿತ ಸಂಪ್ರದಾಯಗಳನ್ನು ಅಲ್ಲೂ ಅನುಸರಿಸುತ್ತಿರುವುದನ್ನು ಕಾಣಬಹುದು. ಆದರೂ ಇಲ್ಲಿ ಜಾತಿ-ಮತದ ಮಾನದಂಡದ ಆಧಾರದ ಮೇಲೆ ಘನತೆ-ಗೌರವಗಳು ಪ್ರಾಪ್ತವಾಗುತ್ತವೆ. ದಲಿತನಿಗೆ ಸವರ್ಣೀಯರ ಮನೆಯೊಳಗೆ ಪ್ರವೇಶವಿರುವುದಿಲ್ಲ. ಆದರೆ ಮತಾಂತರವಾದ ಅದೇ ದಲಿತನಿಗೆ ಪ್ರವೇಶವಿರುತ್ತದೆ. ಅವನು ಇತರೆ ಮೇಲ್ಜಾತಿಗಳ ನಡುವೆ ಸಮಾನಮನಸ್ಕನಂತೆ ಸ್ವಾಭಿಮಾನದಿಂದ ಬದುಕಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಮತಾಂತರಗಳ ಪರವಾದ ಒಲವನ್ನು ತೇಜಸ್ವಿ ಕಥನ ವ್ಯಕ್ತಪಡಿಸುತ್ತದೆ. ಹಾಗೆಯೇ ಮರ ಕಡಿಯುವ ಮಲೆಯಾಳಿ ಸೋನ್ಸ್ ಆಡುವ ಮಾತುಗಳ ಮೂಲಕ ಮತಾಂತರದ ನಂತರದಲ್ಲಿ ವ್ಯಕ್ತಿಯ ಆಲೋಚನೆ ಮತ್ತು ವರ್ತನೆಗಳಲ್ಲಿ ಆಗಬೇಕಾದ ಹಾಗೂ ಆಗುತ್ತಿರುವ ಬದಲಾವಣೆಗಳನ್ನೂ ಸಹಾ ತೀಕ್ಷ್ಣ ವಿಮರ್ಶೆಗೆ ಒಳಗು ಮಾಡಿದೆ.

ಆದರೆ ಮಾಯಾಲೋಕದ ಅಣ್ಣಪ್ಪಣ್ಣನ ಹೆಂಡತಿ ರುಕ್ಮಿಣಿ, ಬಾಬು ಹೆಂಡತಿ ಗಂಗೆ, ಕರಾಟೆ ಮಂಜನ ತಾಯಿ ಈರಿ ತಮ್ಮ ಗಂಡಂದಿರು ಮತ್ತು ಮಗನನ್ನು ಜಾನ್ ಬೆಟ್ಟಯ್ಯ ಮತಾಂತರ ಮಾಡುತ್ತಾನಂತೆ ಎಂಬ ಸುದ್ದಿ ಕೇಳಿ ವ್ಯಗ್ರರಾಗುವುದು, ಜಾನ್ ಬೆಟ್ಟಯ್ಯ ಹಾಗೂ ಈ ಮೂವರ ವಿರುದ್ಧ ನಿರೂಪಕನಲ್ಲಿ ಪುಕಾರು ತೆಗೆದುಕೊಂಡು ಹೋಗುವುದು ಇವೆಲ್ಲಾ ಹಳೆ ತಲೆಮಾರಿನ ಸಮುದಾಯ ಪರಂಪರೆಯಿಂದಲೂ ಜಾತಿ ಹಿಂಸೆಯ ಖೆಡ್ಡದೊಳಗೆ ಸಿಕ್ಕಿಹಾಕಿಕೊಂಡು ನರಳಿ ಅಭ್ಯಾಸವಾಗಿರುವುದರಿಂದ ಅಷ್ಟು ಸುಲಭಕ್ಕೆ ಮತಾಂತರಗಳನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಸಂಕೇತಿಸುತ್ತದೆ. ಹಾಗೆಯೆ ಮತಾಂತರಗಳನ್ನು ಸಂಪೂರ್ಣವಾಗಿ ಒಪ್ಪುವುದಾಗಲಿ ಅಥವಾ ನಿರಾಕರಿಸುವುದಾಗಲಿ ಮಾಡದೆ ಆ ಪ್ರಕ್ರಿಯೆಯ ಒಳಿತು ಮತ್ತು ಕೇಡುಗಳನ್ನು ಗುರುತಿಸುತ್ತದೆ.

ಹೀಗೆ ಜಾತಿ ಮತ್ತು ಮತೀಯವಾದಗಳು ಸಮಾಜದ ಧನಾತ್ಮಕ ಚಲನಶೀಲತೆಯನ್ನು ನಿರಾಕರಿಸುತ್ತಾ, ಅಸ್ಪೃಶ್ಯತೆಯನ್ನು, ದಬ್ಬಾಳಿಕೆಯನ್ನು ನಿರಂತರಗೊಳಿಸುವ ಹುನ್ನಾರಗಳಲ್ಲಿ ತೊಡಗಿವೆ. ಸಂವಿಧಾನದ ಆಶಯವಾದ ಸಮಾನತೆ, ಸ್ವಾತಂತ್ರ್ಯ, ಸಹೋದರತೆಗಳನ್ನು ಈ

ಎರಡೂ ಪಿಡುಗುಗಳು ಸರ್ವನಾಶ ಮಾಡುತ್ತಿವೆ. ಜಾತಿ ಮತ್ತು ಮತೀಯವಾದಗಳು ಮೇಲ್ಜಾತಿ ವರ್ಗಗಳ ಹಿಡಿತದಲ್ಲಿದ್ದು ಅವರ ಸ್ವಾರ್ಥದ ಮತ್ತು ಅಧಿಕಾರ ಸ್ಥಾನಮಾನಗಳನ್ನು ಪಡೆಯುವ ಹತಾರಗಳಾಗಿ ಬಳಕೆಯಾಗುತ್ತಿವೆ. ಇದರಿಂದ ಸಮಾಜದ ಕೆಳ ಜಾತಿ ವರ್ಗಗಳ ಸಮುದಾಯ ತನ್ನದಲ್ಲದ ಹಿಂಸೆಯ ಬೆಂಕಿಯಲ್ಲಿ ಬೇಯುತ್ತ ಅಂತಂತ್ರ ಸ್ಥಿತಿಯಲ್ಲಿ ನರಳುವಂತಾಗಿದೆ. ಕಾರ್ಯಾಂಗದ ಭ್ರಷ್ಟರು, ರಾಜಕಾರಣಿಗಳು, ವ್ಯಾಪಾರಿಗಳು ಇದೇ ಜಾತಿ ಧರ್ಮಗಳನ್ನು ಬಳಸಿಕೊಂಡು ತಮ್ಮ ಅನಾಚಾರಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಸಮಾಜದ ಕೆಳಜಾತಿಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಈ ಜಾತಿ ಮತ್ತು ಮತೀಯವಾದದಿಂದ ಹಿಂಸೆಯನ್ನು ಅನುಭವಿಸುವಂತಾಗಿದೆ. ಇವರು ಈ ನೆಲದಿಂದ ಅನ್ಯವಾಗುವ ಅಪಾಯಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲೂ ಪುರುಷ ನಿರ್ಮಿತ ಪರಂಪರೆಯ ಬಂಧನಗಳಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿರುವ ಮಹಿಳೆಯರು ಈ ಜಾತಿ ಮತ್ತು ಮತೀಯ ಸಮಸ್ಯೆಗಳಿಂದಾಗಿ ಮತ್ತಷ್ಟು ಸಂಕಷ್ಟಗಳಿಗೆ ಒಳಗಾಗಿದ್ದಾರೆ.

ಎಲ್ಲ ಸಂಕಷ್ಟಗಳಿಂದ, ಸಮಸ್ಯೆಗಳಿಂದ ಬಿಡುಗಡೆಗೊಳ್ಳುವ ಮಾರ್ಗಗಳಾಗಿ ಆಧುನಿಕ ಶಿಕ್ಷಣದ ತಿಳುವಳಿಕೆ, ಅಂತರ್ಜಾತಿ, ಅಂತರ್ಧರ್ಮೀಯ ವಿವಾಹಗಳು ಮತ್ತು ಮತಾಂತರಗಳು ತೇಜಸ್ವಿಯವರ ಕಥನದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಕೆಸರೂರಿನ ಜಾತಿ ಮತ್ತು ಮತೀಯತೆಯನ್ನು ಧಿಕ್ಕರಿಸಿ, ಪ್ರೀತಿಸುವ ರಫಿ–ಜಯಂತಿಯರಂತೆ, ಜಾತಿ ಸಂಕೋಲೆಗಳನ್ನು ತೊರೆಯುವ ಜಾತಿವಿನಾಶ ಸಂಘದ ಕೆಸರೂರಿನ ಯುವಕರಂತೆ, ಜಾತಿಯಾಧಾರಿತ ಕೌಟುಂಬಿಕ ಹಿಡಿತಗಳ ಸರಹದ್ದನ್ನು ದಾಟಿ ಹೊರಬರುವ ಹುಲಿಯೂರಿನ ಸೋಮುವಿನಂತೆ, ಪುರುಷರ ಜಾತಿಜಗಳಗಳನ್ನು ಮೀರಿ ಜಾತ್ಯತೀತವಾದ ನಿಲುವನ್ನು ತೋರುವ ಹಾಗೂ ಬದುಕುವ ಕಿರಗೂರಿನ ಮಹಿಳೆಯರಾದ ದಾನಮ್ಮ, ಕಾಳಿ, ನಾಗಮ್ಮ ಮುಂತಾದವರಂತೆ, ಜಮಾತೆಯವರು ಒತ್ತಾಯಪೂರ್ವಕವಾಗಿ ಹೇರಲು ಬರುವ ಶರಿಯತ್ ನಿಯಮಗಳನ್ನು ಧಿಕ್ಕರಿಸಿ, ಜಾತಿ ಧರ್ಮಗಳಿಗಿಂತ ಬದುಕು ಮುಖ್ಯವೆನ್ನುವ ಮಾಯಾಲೋಕದ ಫಾತಿಮಳಂತೆ, ಜಾತಿಯ ಅವಮಾನಗಳನ್ನು ಪ್ರತಿಭಟಿಸಿ ಮತಾಂತರವಾಗುವ ನಿರ್ಧಾರಕ್ಕೆ ಬರುವ ಕೆಸರೂರಿನ ದಲಿತ ಯುವಕರಂತೆ, ಪ್ರಾರಂಭದಲ್ಲಿ ಕಾಡುತ್ತಿದ್ದ ಜಾತಿ ಧರ್ಮದ ಭೇದಭಾವಗಳನ್ನು, ಪೂರ್ವನಿರ್ಧಾರಿತ ಆಲೋಚನೆಗಳನ್ನು ತೊಡೆದುಹಾಕಿ, ಯಾವುದೇ ಬಗೆಯ ಅವಮಾನ ಮತ್ತು ಪರಕೀಯತೆಯನ್ನು ಅನುಭವಿಸದೇ ಎಲ್ಲರೊಳಗೊಂದಾಗಿ ವಾಸ್ತವ ಬದುಕಿನೆಡೆಗೆ ಸಾಗುವ ಡೇರ್ ಡೆವಿಲ್ ಮುಸ್ತಾಫಾ ಮತ್ತು ಅವನ ಗೆಳೆಯರ ಚಿತ್ರಣಗಳ ಮೂಲಕ ಸಮಾಜವನ್ನು ಕಣ್ಣು ತೆರೆದು ನೋಡುವ ನೋಟಕ್ರಮಗಳನ್ನು ಹಾಗೂ ಜಾತಿ ಧರ್ಮಗಳ ಸಂಕೋಲೆಗಳಿಂದ ಬಿಡಿಸಿಕೊಳ್ಳುವ ಮಾರ್ಗಗಳನ್ನು ತೇಜಸ್ವಿ ಕಥನ ಬೋಧಿಸುತ್ತದೆ.

ಅಧ್ಯಾಯ-೭

ತೇಜಸ್ವಿ ಕಥನ : ಮಹಿಳಾ ಸಂಕಥನ

ಅಧ್ಯಾಯ-೭

ತೇಜಸ್ವಿ ಕಥನ : ಮಹಿಳಾ ಸಂಕಥನ

ಪೀಠಿಕೆ.

ಪೂರ್ಣಚಂದ್ರ ತೇಜಸ್ವಿಯವರು ತಮ್ಮನ್ನು ಯಾವ ಸಿದ್ಧಾಂತಗಳೊಂದಿಗೂ ಪ್ರಬಲವಾಗಿ ಗುರುತಿಸಿಕೊಂಡವರಲ್ಲ. ಅರವತ್ತು ಎಪ್ಪತ್ತರ ದಶಕದಲ್ಲಿ ನಡೆದ ಸಮಾಜವಾದಿ ಚಳುವಳಿಗಳು ಮತ್ತು ಆನಂತರದಲ್ಲಿ ನಡೆದ ರೈತ ಚಳುವಳಗಳಲ್ಲಿ ಇದ್ದೂ ಇಲ್ಲದಂತೆ ಇದ್ದವರು. ಹಾಗಿದ್ದೂ ಕರ್ನಾಟಕದ ಈ ಚಳುವಳಿಗಳ ಮೇಲೆ ತೇಜಸ್ವಿಯವರ ಪ್ರಭಾವ ಮತ್ತು ತೇಜಸ್ವಿಯವರ ಸಾಹಿತ್ಯದ ಮೇಲೆ ಈ ಚಳುವಳಿಗಳ ಪ್ರಭಾವ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಮಾತು ಸ್ತ್ರೀವಾದ ಮತ್ತು ತೇಜಸ್ವಿಯವರ ಸಾಹಿತ್ಯದ ನಡುವಿನ ಸಂಬಂಧಕ್ಕೂ ಅನ್ವಯಿಸುತ್ತದೆ. ಸ್ತ್ರೀವಾದವೆನ್ನುವುದು ಒಂದು ಸಾಹಿತ್ಯಿಕ ಸಿದ್ಧಾಂತವೂ ಹೌದು, ಸಾಮಾಜಿಕ ಸಿದ್ಧಾಂತವೂ ಹೌದು. ಹಾಗೆಯೇ ಇದು ಒಂದು ರಾಜಕೀಯ ಸಿದ್ಧಾಂತವೂ ಹೌದು. ಇದು ಲೋಕವನ್ನು ನೋಡುವ ದೃಷ್ಟಿಕೋನ. ಸ್ತ್ರೀಯರನ್ನೂ, ಸ್ತ್ರೀಯರ ಸಮಸ್ಯೆಗಳನ್ನು ಮುಖ್ಯವಾಗಿಸಿಕೊಂಡು ಸ್ತ್ರೀಪರ ಕಾಳಜಿಗಳನ್ನಿಟುಕೊಂಡು ಜಗತ್ತನ್ನು ಕಾಣುವ ಮತ್ತು ಸಾಹಿತ್ಯ ಕೃತಿಗಳನ್ನು ಓದುವ, ವಿಶ್ಲೇಷಿಸುವ ಕ್ರಮವನ್ನು ಸ್ತ್ರೀನಿಷ್ಠ ದೃಷ್ಟಿಕೋನ ಅಥವಾ ಸ್ತ್ರೀವಾದ ಎಂದು ಕರೆಯಬಹುದು.

ಶತಶತಮಾನಗಳಿಂದ ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಯಾವ ರೀತಿಯಲ್ಲಿ ಶೋಷಣೆಗೆ ಒಳಗಾಗಿದ್ದಾಳೆ? ಹೇಗೆ ಅಂಚಿಗೆ ತಳ್ಳಲ್ಪಟ್ಟಿದ್ದಾಳೆ? ಹೀಗೆ ಅಂಚಿಗೆ ತಳ್ಳಲ್ಪಟ್ಟಿರುವ ಮಹಿಳೆಯನ್ನು ಮತ್ತೆ ಕೇಂದ್ರಕ್ಕೆ ತರುವುದು ಹೇಗೆ? ಪುರುಷ ಪ್ರಧಾನ ಸಮಾಜವನ್ನು ಸ್ತ್ರೀ-ಪುರುಷ ಸಮಾನತೆಯುಳ್ಳ ಸಮಾಜವಾನ್ನಾಗಿ ರೂಪಿಸುವುದು ಹೇಗೆ? ಎಂಬ ಹಲವು ಪ್ರಶ್ನೆಗಳನ್ನು ಸ್ತ್ರೀವಾದಿಗಳು ಎತ್ತುತ್ತಾರೆ. ಸ್ತ್ರೀವಾದಿಗಳ ಪ್ರಕಾರ ಸಾಹಿತ್ಯ-ಸಿದ್ಧಾಂತ-ಚಳುವಳಿ ಈ ಮೂರು ಒಟ್ಟೊಟ್ಟಿಗೆ ಸಾಗಬೇಕು. ಅವರು ಹೇಳುವಂತೆ, ಸ್ತ್ರೀವಾದವು ವೈಯಕ್ತಿಕವೂ ಹೌದು. ರಾಜಕೀಯವೂ ಹೌದು. ಇಂತಹ ನಿಲುವುಗಳೊಂದಿಗೆ, ಸ್ತ್ರೀಪರ ಕಾಳಜಿಗಳೊಂದಿಗೆ ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯವು ಹುಟ್ಟು ಪಡೆಯಿತು. ಹೀಗೆ ಕನ್ನಡದಲ್ಲಿ ಆರಂಭವಾದ ಸ್ತ್ರೀವಾದಿ ಸಾಹಿತ್ಯ ಬರವಣಿಗೆ ಬಹಳ ಹಿಂದಿನಿಂದಲೂ ಸಾಹಿತ್ಯ ರಚನೆ ಮಾಡುತ್ತಿದ್ದ ಎಷ್ಟೋ ಲೇಖಕರ ಬರವಣಿಗೆಯ ಕ್ರಮವನ್ನು ಬದಲಿಸಿದೆ ಮತ್ತು ಪ್ರಭಾವಿಸಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀನಿಷ್ಠ ದೃಷ್ಟಿಕೋನಗಳ ಮೂಲಕ ತೇಜಸ್ವಿಯವರ ಸಾಹಿತ್ಯವನ್ನು ಅಧ್ಯಯನ ಮಾಡಲು ಸಾಧ್ಯವಿದೆ.

ತೇಜಸ್ವಿಯವರು ತಮ್ಮನ್ನು ಎಲ್ಲಿಯೂ ಸ್ತ್ರೀವಾದದೊಂದಿಗೆ ಅಥವಾ ಸ್ತ್ರೀವಾದಿಗಳೊಂದಿಗೆ ಗುರುತಿಸಿಕೊಂಡವರಲ್ಲ. ಆದರೂ ಅವರ ಕಥೆ-ಕಾದಂಬರಿಗಳು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸ್ತ್ರೀವಾದಕ್ಕೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿವೆ. ಕನ್ನಡದಲ್ಲಿ ಸ್ತ್ರೀವಾದವು ಒಂದು ಪ್ರಮುಖ ಸಾಹಿತ್ಯಿಕ ಸಿದ್ಧಾಂತವಾಗಿ ಪ್ರಚಲಿತಕ್ಕೆ ಬಂದದ್ದು ಎಪ್ಪತ್ತರ ದಶಕದಲ್ಲಿ. ನಮ್ಮ ಕರ್ನಾಟಕದ ಚಳುವಳಿಗಳನ್ನು ಗಮನಿಸಿದರೆ ಆರಂಭದಲ್ಲಿ ಯಾರು ಸಮಾಜವಾದಿ ಚಳುವಳಿಗಳಲ್ಲಿ ತೊಡಗಿಕೊಂಡಿದ್ದರೋ ಅವರೇ ತದನಂತರದಲ್ಲಿ ರೈತ ಚಳುವಳಿ, ದಲಿತ ಚಳುವಳಿ, ಸ್ತ್ರೀವಾದಿ (ಮಹಿಳಾ) ಚಳುವಳಿಗಳ ಭಾಗವಾಗಿ ಕವಲೊಡೆದದ್ದು ತಿಳಿದು ಬರುತ್ತದೆ. ಈ ಚಳುವಳಿಗಳ ನಡುವಿನ ಭಿನ್ನತೆಗಳೇನೇ ಇದ್ದರೂ ಇವುಗಳ ಮೂಲ ಆಶಯ ಒಂದೇ, ಎಲ್ಲಾ ಬಗೆಯ ಅಸಮಾನತೆಗಳನ್ನು ವಿರೋಧಿಸುವುದು, ಎಲ್ಲಾ ಬಗೆಯ ಶೋಷಣೆಗಳನ್ನು ಪ್ರಶ್ನಿಸುವುದು, ಜಾತಿ ಪ್ರಧಾನ, ಪುರುಷ ಪ್ರಧಾನ ಸಮಾಜಗಳ ದಬ್ಬಾಳಿಕೆಯನ್ನು ತಡೆಯುವುದು ಹಾಗೂ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ಸಿದ್ಧಾಂತವನ್ನಾಧರಿಸಿದ ಹೊಸ ಸಮಸಮಾಜವೊಂದನ್ನು ಕಟ್ಟುವುದು.

ತೇಜಸ್ವಿಯವರು ಮೂಲತಃ ವ್ಯಕ್ತಿ ವಿಶಿಷ್ಟ ಸಿದ್ಧಾಂತದ ಪ್ರತಿಪಾದಕರು. ಮೊದಮೊದಲು ಸಮಾಜವಾದದೊಂದಿಗೆ, ಆನಂತರ ರೈತ ಚಳುವಳಿಗಳೊಂದಿಗೆ ಗುರುತಿಸಿಕೊಂಡರೂ ಅಲ್ಲಿಯೂ ಕೂಡ ತಮ್ಮದೇ ಆದ ವಿಶಿಷ್ಟತೆಯನ್ನು ಕಾಯ್ದುಕೊಂಡವರು. ಇಲ್ಲಿ ಹೇಳಬಯಸುತ್ತಿರುವುದು ಏನೆಂದರೆ, ಸಮಕಾಲೀನರೇ ಆಗಿದ್ದರೂ ಸಮಾಜವಾದವನ್ನು ಅನಂತಮೂರ್ತಿಯವರು ಗ್ರಹಿಸುತ್ತಿದ್ದ ಕ್ರಮಕ್ಕೂ, ಲಂಕೇಶರು ಗ್ರಹಿಸುತ್ತಿದ್ದ ಕ್ರಮಕ್ಕೂ, ತೇಜಸ್ವಿಯವರು ಗ್ರಹಿಸುತ್ತಿದ್ದ ಕ್ರಮಕ್ಕೂ ವ್ಯತ್ಯಾಸಗಳಿವೆ. ರೈತ ಚಳುವಳಿಗಳ ವಿಷಯದಲ್ಲಿ ಲಂಕೇಶ್ ಮತ್ತು ತೇಜಸ್ವಿಯವರ ನಡುವೆ ದೊಡ್ಡ ಮಟ್ಟದ ವಾಗ್ವಾದಗಳೇ ನಡೆದಿವೆ. ಅಂದರೆ ಚಳುವಳಿಗಳಿಗೆ ತೇಜಸ್ವಿಯವರು ಸ್ಪಂದಿಸುತ್ತಿದ್ದ ರೀತಿಗೂ, ಲಂಕೇಶರು ಸ್ಪಂದಿಸುತ್ತಿದ್ದ ರೀತಿಗೂ, ಅನಂತಮೂರ್ತಿ ಸ್ಪಂದಿಸುತ್ತಿದ್ದ ರೀತಿಗೂ ವ್ಯತ್ಯಾಸಗಳಿವೆ. ಈ ಮಾತು ಸ್ತ್ರೀವಾದ ಮತ್ತು ಅವರುಗಳ ಸಾಹಿತ್ಯದ ನಡುವಿನ ಸಂಬಂಧಕ್ಕೂ ಅನ್ವಯಿಸುತ್ತದೆ. ಲಂಕೇಶ್ ಮತ್ತು ತೇಜಸ್ವಿಯವರು ಸ್ತ್ರೀವಾದದಿಂದ ನೇರವಾಗಿ ಪ್ರಭಾವಿತರಾಗದಿದ್ದರೂ, ಸ್ತ್ರೀವಾದಿ ಚಳುವಳಿಗಳು ರೂಪುಗೊಳ್ಳುತ್ತಿದ್ದ ಕಾಲದಲ್ಲೇ ಲಂಕೇಶರು ಅಕ್ಕ ಕಾದಂಬರಿಯನ್ನು, ತೇಜಸ್ವಿಯವರು ಕಿರಗೂರಿನ ಗಯ್ಯಾಳಿಗಳು ಕಥೆಯನ್ನು ಬರೆದಿರುವುದು. ಇದು ನವ್ಯರು ಸಮಾಜವಾದದ ಕಡೆಗೂ, ಸಮಾಜವಾದಿಗಳು ದಲಿತ ಚಳುವಳಿ, ರೈತ ಚಳುವಳಿ, ಸ್ತ್ರೀವಾದಿ ಚಳುವಳಿಗಳ ಕಡೆಗೂ ಹೊರಳಿಕೊಂಡ ಸೂಚನೆಗಳು. ಇವು ಅಧ್ಯಯನ ಯೋಗ್ಯ.

ತೇಜಸ್ವಿಯವರ ಕಥನ : ಮಹಿಳಾ ಕಾಳಜಿಗಳು

ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯ ಕೃತಿಗಳ ಬಗ್ಗೆ ಸ್ತ್ರೀವಾದಿ ಚಿಂತಕರ ಆರೋಪವೊಂದಿದೆ. ತೇಜಸ್ವಿಯವರ ಕೃತಿಗಳಲ್ಲಿ ಪುರುಷ ಪಾತ್ರಗಳು ದಟ್ಟವಾಗಿದ್ದು, ಅವು ವಿಜೃಂಭಿಸುವಷ್ಟು ಸ್ತ್ರೀ ಪಾತ್ರಗಳು ವಿಜೃಂಭಿಸುವುದಿಲ್ಲ. ಪುರುಷ ಪಾತ್ರಗಳು ಆವರಿಸಿಕೊಂಡಷ್ಟು ಸ್ತ್ರೀ ಪಾತ್ರಗಳು ಆವರಿಸಿಕೊಳ್ಳುವುದಿಲ್ಲ. ಸ್ತ್ರೀ ಪಾತ್ರಗಳು ಇದ್ದೂ ಇಲ್ಲದಂತೆ, ಕಂಡೂ ಕಾಣದಂತೆ ಬಂದು ಹೋಗುತ್ತವೆ. ಸದಾ ಕಡೆಗಣಿಸಲ್ಪಟ್ಟಿವೆ ಎಂಬುದೇ ಈ ಆರೋಪ. ಇಂತಹ ಆರೋಪಗಳಿಗೆ ಉತ್ತರವೇನೋ ಎಂಬಂತೆ ಕಿರುಗೂರಿನ ಗಯ್ಯಾಳಿಗಳು ಕೃತಿಯನ್ನು ತೇಜಸ್ವಿಯವರು ಬರೆದಂತಿದೆ. ನಿಗೂಢ ಮನುಷ್ಯರು ಮತ್ತು ಸ್ವರೂಪ ಕಾದಂಬರಿಗಳನ್ನು ಸಹಾ ಸ್ತ್ರೀವಾದದ ಹಿನ್ನೆಲೆಯಲ್ಲಿ ನಾವು ಚರ್ಚಿಸಲು ಅಡ್ಡಿಯಿಲ್ಲ.

ತೇಜಸ್ವಿಯವರ ಆರಂಭದ ಬರವಣಿಗೆಗಳಲ್ಲಿ ಹೆಣ್ಣು ಗಂಡಿನಿಂದ ಬಳಸಲ್ಪಡುವ ವಸ್ತುವಿನಂತೆ ಚಿತ್ರಿಸಲ್ಪಟ್ಟಿದ್ದಾಳೆ. ಇದಕ್ಕೆ ಉದಾಹರಣೆಯಾಗಿ ನಿಗೂಢ ಮನುಷ್ಯರು ಕಾದಂಬರಿಯ ಶಾರಿ ಪಾತ್ರವನ್ನು ಗಮನಿಸಬಹುದು. ಹೆಣ್ಣು ಮಾತನಾಡುವುದನ್ನು ಪುರುಷಪ್ರಧಾನ ಸಮಾಜವು ಇಷ್ಟ ಪಡುವುದಿಲ್ಲ. ಅವಳು ಮಾತನಾಡತೊಡಗಿದರೆ ತನ್ನ ಪುರುಷಾಧಿಕಾರಕ್ಕೆ ಅಪಾಯವೆಂದೇ ಪುರುಷಪ್ರಧಾನ ಸಮಾಜ ಭಾವಿಸುತ್ತದೆ. ಇದಕ್ಕೆ ರೂಪಕವೆನ್ನುವಂತೆ ಕಾದಂಬರಿಯಲ್ಲಿ ನಾಲಿಗೆ ಕತ್ತರಿಸಲ್ಪಟ್ಟ ಶಾರಿ ಚಿತ್ರಣಗೊಂಡಿದ್ದಾಳೆ. ಜಗನ್ನಾಥ ಮತ್ತು ರಂಗಪ್ಪ 'ಉಗ್ರಗಿರಿ'ಯ ಕೊರಕಲು ಹಾದಿಯಲ್ಲಿ ಕಾರು ಕೆಟ್ಟು 'ಊರಗಡಿ' ತಲುಪಿದಾಗ ಅಲ್ಲಿ ತೆರೆದುಕೊಳ್ಳುವ ಕಾಡಿನೊಳಗಿನ ವಿವಿಧ ಜಗತ್ತುಗಳು ಎಂತಹವರನ್ನೂ ದಂಗುಬಡಿಸುವಂತಹವು. ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ 'ಊರಗಡಿ' ಗ್ರಾಮದ ಗೋಪಾಲಯ್ಯನ ಮನೆಯಲ್ಲಿ ತಮ್ಮ ತಮ್ಮ ಪೂರ್ವಾಪರಗಳನ್ನು ಬಿಚ್ಚುತ್ತಾ ಕೂರುವ ಜಗನ್ನಾಥ, ರಂಗಪ್ಪ, ಗೋಪಾಲಯ್ಯ ಮತ್ತು ಅಲ್ಲಿಗೆ ತಮ್ಮ ತಂಟೆ-ತಕರಾರುಗಳನ್ನು ಹೊತ್ತು ತರುವ ಮರಸರ, ಕಾಂಪ್ರ, ಲೋರಿ, ಕುಳುಪ-ಇವರೆಲ್ಲರೂ ಸುರಿಯುತ್ತಿರುವ ಮಳೆಯ ನಡುವೆ ಅಗತ್ಯಕ್ಕಿಂತ ಹೆಚ್ಚೇ ಮಾತನಾಡುತ್ತಿರುತ್ತಾರೆ. ಆದರೆ ಇವರೆಲ್ಲರ ಮಾತುಗಳ ಹಿನ್ನೆಲೆಯಲ್ಲಿ ಕಂಡೂ ಕಾಣದ ಹಾಗೆ ಓಡಾಡುತ್ತಿರುವ, ತೆರೆಯ ಮರೆಯಲ್ಲಿದ್ದುಕೊಂಡೇ ಎಲ್ಲವನ್ನು ಕೇಳಿಸಿಕೊಂಡರೂ, ಏನನ್ನೂ ಪ್ರತಿಕ್ರಿಯಿಸದ ಶಾರಿಯ ಪಾತ್ರ ಓದುಗನನ್ನು ಕುತೂಹಲಗೊಳ್ಳುವಂತೆ ಮಾಡುತ್ತದೆ.

ಹೆಣ್ಣಿನ ವಿಷಯದಲ್ಲಿ ಪುರುಷಪ್ರಧಾನ ಸಮಾಜದ ನಿರೀಕ್ಷೆಗಳು ಹಲವು. ಹೆಣ್ಣು ಮಾತನಾಡಬಾರದು, ಬಹಿರಂಗವಾಗಿ ಕಾಣಿಸಿಕೊಳ್ಳಬಾರದು. ಅವಳು ತೊಡುವ ಉಡುಗೆ-ತೊಡುಗೆಗಳು ಹೀಗೆಯೇ ಇರಬೇಕು. ಅವಳ ಕಾರ್ಯಕ್ಷೇತ್ರ ಅಡುಗೆಮನೆ ಮಾತ್ರ. ಆಕೆ

ನಿರಂತರವಾಗಿ ಪುರುಷನ ರಕ್ಷಣೆಯಲ್ಲಿದ್ದು ಬದುಕು ಸವೆಸಬೇಕಾದವಳು. ಈ ಹಿನ್ನೆಲೆಯಲ್ಲಿ ಪ್ರಖ್ಯಾತ ಸ್ತ್ರೀವಾದಿ ಚಿಂತಕಿ 'ಸಿಮೋನ್ ದಿ ಬುವಾ' ರವರು ಹೇಳುವಂತೆ 'ಹೆಣ್ಣು ಹೆಣ್ಣಾಗಿ ಹುಟ್ಟುವುದಿಲ್ಲ, ಆಕೆಯನ್ನು ಹೆಣ್ಣಾಗಿ ರೂಪಿಸಲಾಗುತ್ತದೆ' ಎಂಬ ಮಾತು ಈ ಸಮಾಜ ಹೆಣ್ಣನ್ನು ಒಬ್ಬ ಮನುಷ್ಯಳಾಗಿ ನೋಡದೆ ಆಕೆಯನ್ನು ನಿರ್ಜೀವ ವಸ್ತುವನ್ನಾಗಿ ಭಾವಿಸಿರುವುದನ್ನು ಮತ್ತು ಆಕೆಯ ನಡೆ ನುಡಿಗಳನ್ನು ನಿರ್ಧರಿಸುವ ವಾರಸುದಾರಿಕೆಯನ್ನು ಇಲ್ಲಿ ತೇಜಸ್ವಿ ಕಥನ ಖಂಡಿಸುತ್ತದೆ.

ಕಾದಂಬರಿಯಲ್ಲಿ ಶಾರಿಯ ಬಗೆಗೆ ಗೋಪಾಲಯ್ಯ ನೀಡುವ ವಿವರಗಳನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು. "ಇವಳಿಗೆ ನಾಲಿಗೆ ಇಲ್ಲ. ಆದ್ದರಿಂದ ಅವಳು ಮೌನವಾಗಿರೋದು, ಅವಳ ನಾಲಿಗೆಯದೆ ಒಂದು ಕಥೆ. ಅವಳು ಇಲ್ಲಿನ ಒಬ್ಬ ಪ್ರೈಮರಿ ಸ್ಕೂಲ್ ಮಾಸ್ತರನ ಹೆಂಡತಿಯಾಗಿದ್ದಳು. ಆದರೆ ಅವಳಿಗೆ ಅದೇನೋ ಆಗಿ ಇಲ್ಲಿ ಗಂಧದ ಮರ ಕಳ್ಳಸಾಗಾಣಿಕೆ ತಂಡದವರ ಮೈತ್ರಿ ಬೆಳೆಯಿತು. ಇವಳೂ ಅವರೊಡನೆ ಕೆಲಸ ಮಾಡತೊಡಗಿದಳು. ಇವಳ ಗಂಡ ಇವಳನ್ನು ಬಿಟ್ಟು ಬೇರೆ ಊರಿಗೆ ವರ್ಗ ಮಾಡಿಸಿಕೊಂಡು ಹೋದನಂತೆ. ಈಕೆಗೆ ನನ್ನ ಪರಿಚಯವಾದ ನಂತರ ಒಂದು ದಿನ ಈಕೆಯನ್ನು ಯಾರೋ ದಾರಿಯಲ್ಲಿ ಹಿಡಿದು ನಾಲಿಗೆಯನ್ನು ಕೊಯ್ದು ಹಾಕಿದ್ದರು. ಅದರ ಉದ್ದೇಶ ಸ್ಪಷ್ಟ. ಈಕೆ ತನಗೆ ಗೊತ್ತಿರುವ ರಹಸ್ಯಗಳನ್ನೆಲ್ಲಾ ಇನ್ನೆಲ್ಲಿ ಬಯಲು ಮಾಡಿಬಿಡುತ್ತಾಳೊ ಎಂದು ಇರಬೇಕು! ಈಕೆಗೆ ಏನೇನು ಗೊತ್ತಿದ್ದಿತೋ ಏನೋ! ಬಹುಶಃ ಇಲ್ಲಿ ವ್ಯಾಪಕವಾಗಿ ಕಡಲು ತೀರದಿಂದ ನಡೆಯುವ ಚಿನ್ನದ ಸಾಗಾಣಿಕೆಗೂ ಸಂಬಂಧವಿದ್ದಿರಬೇಕು. ನಾನು ರಕ್ತಸಿಕ್ತವಾಗಿ ಬಿದ್ದಿದ್ದ ಈಕೆಯನ್ನು ಬದುಕಿಸುವುದರ ಬಗ್ಗೆಯೇ ಹೆಚ್ಚು ಯೋಚಿಸಿದೆ." (ಹುಲಿಯೂರಿನ ಸರಹದ್ದು ಕಥಾ ಸಂಕಲನ, ೨೦೦೪, ಪುಟ-೧೩೪) ಇಲ್ಲಿ ಶಾರಿಯು ಪ್ರಾಥಮಿಕ ಶಾಲಾ ಶಿಕ್ಷಕನ ಹೆಂಡತಿಯಾಗಿ, ಆನಂತರ ಕಳ್ಳಸಾಗಾಣಿಕೆದಾರರ ಸಖ್ಯ ಬೆಳೆಸಿ, ನಾಲಿಗೆ ಕಳೆದುಕೊಂಡು ಕೊನೆಗೆ ಗೋಪಾಲಯ್ಯನ ಆಶ್ರಯ ಪಡೆದವಳು ಹೀಗೆ ಶಾರಿಯ ಹಿನ್ನೆಲೆಯೇನೇ ಇದ್ದರೂ ಈ ಕಾದಂಬರಿಯಲ್ಲಿ ಎಲ್ಲರೂ ತಮ್ಮ ತಮ್ಮ ನಿಜ ವ್ಯಕ್ತಿತ್ವಗಳನ್ನು ಮರೆಮಾಚಿಕೊಳ್ಳುತ್ತಾ ಇರುವವರೇ. "ಗೋಪಾಲಯ್ಯನು ಶಾರಿ ತನಗೆ ಮೊದಲೇ ಪರಿಚಿತಳಾಗಿದ್ದವಳೆಂದು ಹೇಳುತ್ತಾನೆಯೆ ಹೊರತು, ಆ ಕುರಿತು ವಿವರ ನೀಡುವುದಿಲ್ಲ. ಆದ್ದರಿಂದ ಶಾರಿಯೇ ಅವನ ಹೆಂಡತಿಯಾಗಿದ್ದಿರಲಾರಳೆ, ಅಸಂಖ್ಯ ವೇಷಾಂತರಗಳಲ್ಲಿ ಹೊಕ್ಕು ಹೊರಬಂದ ಗೋಪಾಲಯ್ಯನೇ ಶಾರಿಯ ಗಂಡನೆಂದು, ಗೋಪಾಲಯ್ಯನೆ ತಿಳಿಸುವ ಕನ್ನಡ ಶಾಲೆಯ ಮಾಸ್ತರನಾಗಿದ್ದಿರಲಾರನೆ ಎಂಬಂಥ ಊಹೆಗೂ ಕಾರಣವಾದಂತಿದೆ." (ನಾಯಕ್ ಜಿ.ಎಚ್., ಅನಿವಾರ್ಯ, ೧೯೮೦, ಪುಟ-೧೦೫) ಹಾಗಾಗಿ ಶಾರಿ ನಾಲಿಗೆ ಕಳೆದುಕೊಂಡ ಸ್ಥಿತಿಗೆ

ಯಾರು ಕಾರಣ? ಆಕೆಯ ಗಂಡನೆ? ಕಳ್ಳ ಸಾಗಾಣಿಕೆದಾರರೇ? ಇವೆಲ್ಲವೂ ಆಗಿರಬಹುದಾದ ಗೋಪಾಲಯ್ಯನೇ? ಅಥವಾ ಇವರೆಲ್ಲರನ್ನು ಒಳಗೊಂಡ ಇಡೀ ವ್ಯವಸ್ಥೆಯೇ ಎಂಬುದು ನಿಗೂಢವಾಗಿಯೇ ಉಳಿದುಬಿಡುತ್ತದೆ.

ತೇಜಸ್ವಿಯವರು ಕಿರಗೂರಿನ ಗಯ್ಯಾಳಿಗಳು ಕೃತಿಯನ್ನು ಒಳಗೊಂಡಂತೆ ತಮ್ಮ ಎಲ್ಲಾ ಕೃತಿಗಳಲ್ಲಿಯೂ ಗಂಡು-ಹೆಣ್ಣಿನ ದಾಂಪತ್ಯ ಜೀವನದ ಚಿತ್ರಣಕ್ಕೆ ಪ್ರಾಮುಖ್ಯತೆ ನೀಡುವುದೇ ಇಲ್ಲ. ಕಿರಗೂರಿನ ಗಯ್ಯಾಳಿಗಳು ಕೃತಿಯನ್ನು ಹೊರತುಪಡಿಸಿದಂತೆ ಉಳಿದೆಲ್ಲಾ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು ಕಂಡೂ ಕಾಣದಂತೆ ಹಾದು ಹೋಗುತ್ತವಷ್ಟೇ. ಕರ್ವಾಲೋ ಕಾದಂಬರಿಯಲ್ಲಿ 'ಪ್ಯಾರ' ನಿರೂಪಕನಿಗೆ ಹೇಳುವ "ಕಾಣ್ತೀತೆ, ಆದ್ರೆ ಕಾಣಾಕಿಲ್ಲ" (ಕರ್ವಾಲೋ, ೨೦೦೯, ಪುಟ-೨೭) ಎಂಬ ಮಾತನ್ನು ಈ ಹಿನ್ನೆಲೆಯಲ್ಲಿಯೂ ಕೂಡ ಗ್ರಹಿಸಲು ಸಾಧ್ಯವಿದೆ.

ಅಬಚೂರಿನ ಪೋಸ್ಟಾಫೀಸು ಕಥೆಯ ಬೋಬಣ್ಣನ ಹೆಂಡತಿ ಕಾವೇರಿ, ಆತನ ಅತ್ತೆ ಮಾಚಮ್ಮ, ಕರ್ವಾಲೋ ಕಾದಂಬರಿಯಲ್ಲಿನ ಹಾವು ಗೊಲ್ಲರ ಎಂಕ್ಟನ ಹೆಂಡತಿ ಮತ್ತು ಮಂದಣ್ಣನ ಹೆಂಡತಿ ರಾಮಿ-ಇವರುಗಳೆಲ್ಲಾ ಸಾಹಸಮಯವಾದ ಪುರುಷ ಪ್ರಧಾನ ಜಗತ್ತಿನೊಳಗೆ ಮಿಂಚಿನಂತೆ ಸುಳಿದು ಹೋಗುವವರು. ತನ್ನ ಹೆಂಡತಿಯ ಬಗ್ಗೆ ನಿರೂಪಕನಿಗೆ ಎಂಕ್ಟನೇ ಹೇಳುವ ಮಾತುಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು. "ಅಯ್ಯೋ ನಮ್ ಜಾತಿ ಹೆಂಗಸ್ರಿಗೆ ಇದೊಂದು ಚಾಳಿ. ಹೆಚ್ಚಿಗೆ ಜೋರು ಮಾಡಿದರೆ ನನ್ನೇ ಬಿಟ್ಬೋಗ್ತೀನಂತಾರೆ ಸೋಮೇ, ಯಾರದೇನು ಹರ್‍ಯಾಕಿಲ್ಲ ಯಾರದ್ದೇನು ಮುರ್‍ಯಾಕಿಲ್ಲಾಂತ ನಾನು ಹ್ಯಂಗೋ ಅನುಸರಿಸಿಕೊಂಡು ಕಾಲ ಮಾಡ್ತಿದ್ದೀನಿ. ನನ್ ತೊಂದ್ರೆ ನಿಮ್ಗೇನ್ ಗೊತ್ತು!" (ಕರ್ವಾಲೋ, ೨೦೦೯, ಪುಟ-೧೩೦) ಅಸಹಾಯಕ ಎಂಕ್ಟನ ಬಾಯಿಂದ ಹೊರಡುವ ಈ ಮಾತುಗಳು ಹುಳ-ಹುಪ್ಪಟೆ, ಹಾವು ಹಿಡಿದುಕೊಂಡು ಓಡಾಡುವವನಲ್ಲಿನ ಹೆಣ್ಣಿನ ಬಗೆಗಿನ ದೃಷ್ಟಿಕೋನ ಎಂಥಹದ್ದು ಎಂಬುದನ್ನು ಸೂಚಿಸುತ್ತದೆ. ಇಂತಹ ಸಂದರ್ಭದಲ್ಲಿ ಹೆಣ್ಣನ್ನು ಕಾಣುವ ನಿರೂಪಕನ ದೃಷ್ಟಿಕೋನ ಎಂಥಹದ್ದು ಎಂಬ ಪ್ರಶ್ನೆಯೂ ಸಹ ಮೂಡುತ್ತದೆ. ಇದಕ್ಕೆ ಉದಾಹರಣೆಯಾಗಿ ಕರ್ವಾಲೋ ಕಾದಂಬರಿಯಲ್ಲಿ ಮಂದಣ್ಣನ ಹೆಂಡತಿ ರಾಮಿಯ ಬಗೆಗೆ ನಿರೂಪಕರು ಆಡುವ ಮಾತುಗಳನ್ನು ನಾವು ಗಮನಿಸಬಹುದು. "ಎಲ್ಲರಿಗೂ ಒಳಗೊಳಗೇ ಮೂರ್ಖವಾದೆವೇನೋ ಎಂದೆನ್ನಿಸಿತು. ಮಂದಣ್ಣನ ಹೆಣ್ತಿ ರಾಮಿಯನ್ನು ನೋಡಿದೆ. ಅವಳಲ್ಲಿ ಎದ್ದು ಕಂಡ ಒಂದೇ ಅಂಶವೆಂದರೆ ಅವಳ ವಯಸ್ಸಿಗೂ ಗಾತ್ರಕ್ಕೂ ತಾಳ ಮೇಳವಿಲ್ಲದಂತಿದ್ದ ಅವಳ ಬೃಹದಾಕರದ ಎರಡು ಮೊಲೆಗಳು. ಇವೇ ಮಂದಣ್ಣನ ತಲೆಕೆಡಿಸಿರಬೇಕೆಂದು ನಾನು ಊಹಿಸಿದೆ." (ಕರ್ವಾಲೋ. ೨೦೦೯. ಪುಟ-೫೧) ರಹಸ್ಯ ವಿಶ್ವ

ಕತೆಯ ರಂಗಮ್ಮನ ಪಾತ್ರ ಚಿತ್ರಣದ ಸಂದರ್ಭದಲ್ಲಿಯೂ ನಿರೂಪಕ ನೀಡುವ ವಿವರಗಳು ಇದೇ ಮಾದರಿಯಲ್ಲಿವೆ.

ತಬರನ ಕಥೆಯಲ್ಲಿ ತಬರಶೆಟ್ಟಿ ಮತ್ತು ಆತನ ಪತ್ನಿಯ ನಡುವಿನ ದಾಂಪತ್ಯ ಜೀವನದ ಚಿತ್ರಣವಿದೆಯಾದರೂ ತಬರ ತನ್ನ ಹೆಂಡತಿಯ ಕಾಲಿನ ಚಿಕಿತ್ಸೆಯ ಸಲುವಾಗಿ ತನಗೆ ಬರಬೇಕಾದ ಪೆನ್ಶನ್ ಸಲುವಾಗಿ ಹೋರಾಟ ಮಾಡುತ್ತಾನೆಯಾದರೂ, ಇಡೀ ಕಥೆ ವ್ಯವಸ್ಥೆಯ, ಅಧಿಕಾರಿಶಾಹಿಯ ಅಮಾನವೀಯತೆಯನ್ನೂ, ತಬರನ ಅಸಹಾಯಕತೆಯನ್ನೂ ಕಂಡರಿಸುತ್ತಾ ಹೋಗುತ್ತದೆ. ಕಥೆಯ ಗಮನವಿರುವುದೇ ವ್ಯವಸ್ಥೆಯ ಬಲಿಪಶುವಾದ ತಬರನ ದುರಂತ ಬದುಕನ್ನು ಚಿತ್ರಿಸುವುದರ ಕಡೆಗೆ. ಭ್ರಷ್ಟಗೊಂಡ ವ್ಯವಸ್ಥೆಯ ಕರಾಳ ಮುಖಗಳನ್ನು ತೆರೆದು ಬೆತ್ತಲೆಗೊಳಿಸುವುದರ ಕಡೆಗೆ. ಇಲ್ಲಿ ದಾಂಪತ್ಯ ಜೀವನದ ಚಿತ್ರಣ ಅನುಷಂಗಿಕವಾಗಿಬಿಡುತ್ತದೆ.

ತೇಜಸ್ವಿಯವರ ಎಲ್ಲಾ ಕೃತಿಗಳಲ್ಲಿಯೂ ಹೀಗೆ ಹೆಣ್ಣು ಮತ್ತು ಹೆಣ್ಣಿನ ಲೋಕ ತೆರೆಯ ಮರೆಯಲ್ಲಿಯೇ ಉಳಿದುಬಿಡುತ್ತದೆ. ಈ ಕುರಿತು ಆಶಾದೇವಿಯವರು "ಗಂಡು-ಹೆಣ್ಣಿನ ಸಂಬಂಧವನ್ನು ಕುರಿತಂತೆ ತೇಜಸ್ವಿ ಚರ್ಚೆ ಮಾಡುವುದು ಅವರ ಒಟ್ಟು ಸಾಹಿತ್ಯದ ದೃಷ್ಟಿಯಿಂದ ತುಂಬಾ ಕಡಿಮೆ. ಅವರ ಓರಗೆಯ ಲೇಖಕರು ಲಂಕೇಶ್, ಅನಂತಮೂರ್ತಿ, ಶಾಂತಿನಾಥ ದೇಸಾಯಿ-ಇವರ ಕೃತಿಗಳಲ್ಲಿ ಮತ್ತೆ ಮತ್ತೆ ದಾಂಪತ್ಯವನ್ನು ಕುರಿತ ಚರ್ಚೆಗಳು ಬರುತ್ತವೆ. ಬೇಕಿದ್ದೋ, ಬೇಡದೆಯೋ ಸಂಬಂಧಗಳು ಹುಟ್ಟಿ, ಆವರಿಸುವ, ಬದುಕನ್ನು ಇದ್ದಕ್ಕಿದ್ದಂತೆ ಎಂಬಂತೆ ಅನಿರೀಕ್ಷಿತ ತಿರುವುಗಳಲ್ಲಿ ಒಯ್ದು ನಿಲ್ಲಿಸುವ ಗಂಡು-ಹೆಣ್ಣಿನ ಸಂಬಂಧಗಳ ಅದಮ್ಯತೆಯನ್ನು ಈ ಲೇಖಕರು ಅವರ ಇತರೆ ಕಾಳಜಿಗಳಷ್ಟೇ ತನ್ಮಯತೆಯಲ್ಲಿ ಚಿತ್ರಿಸುತ್ತಾರೆ. ಆದರೆ ತೇಜಸ್ವಿಯವರಲ್ಲಿ ಇದೊಂದು ದೊಡ್ಡ ಗೈರುಹಾಜರಿ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಅವರ ಯಾವ ಮಹತ್ವದ ಕೃತಿಗಳಲ್ಲಿಯೂ ದಾಂಪತ್ಯ ಮುಖ್ಯವಾದ ಕಾಳಜಿ ಅಲ್ಲ, ವಸ್ತುವೂ ಅಲ್ಲ. ಅಬಚೂರಿನ ಪೋಸ್ಟಾಫೀಸಿನ ಬೋಬಣ್ಣ-ಕಾವೇರಿ, ಚಿದಂಬರ ರಹಸ್ಯದ ಕೃಷ್ಣೇಗೌಡ-ಅವನ ಹೆಂಡತಿ, ಅದೇ ಕಾದಂಬರಿಯ ಜಯಂತಿ ಮತ್ತು ಆಕೆಯ ಸಹಪಾಠಿಗಳ ಗೆಳೆತನ, ಮಂದಣ್ಣ-ರಾಮಿಯರ ಸಂಬಂಧ, ಕಿರಗೂರಿನ ಗಯ್ಯಾಳಿಯರಲ್ಲಿ ಬರುವ ಹಲವು ದಾಂಪತ್ಯಗಳ ವಿವರಗಳು-ಈ ಯಾವ ದಾಂಪತ್ಯಗಳಲ್ಲೂ ತೇಜಸ್ವಿ ಗಂಡ-ಹೆಂಡತಿಯರ, ಗಂಡು-ಹೆಣ್ಣಿನ ಸಂಬಂಧ ಬೆಳೆಸುವ, ಬೆಳಗುವ ಘಳಿಗೆಗಳನ್ನು ಗುರುತಿಸುವುದಿಲ್ಲ. ತೇಜಸ್ವಿಯವರಲ್ಲಿ ಇರುವುದು ಕೇವಲ ದಾಂಪತ್ಯ ಅಥವಾ ಕುಟುಂಬ ವ್ಯವಸ್ಥೆಯನ್ನು ಕುರಿತ ಪ್ರಶ್ನೆಗಳು ಮಾತ್ರವಲ್ಲ ಗಂಡು-ಹೆಣ್ಣಿನ ಸಂಬಂಧದ ಅಪೂರ್ಣತೆಯನ್ನು ಕುರಿತ ದೃಷ್ಟಿಕೋನವೂ ಇಲ್ಲಿ ಕೆಲಸ ಮಾಡುತ್ತಿರುವಂತೆ ತೋರುತ್ತದೆ." (ಆಶಾದೇವಿ ಎಂ.ಎಸ್.. ನಡುವೆ ಸುಳಿವ ಆತ್ಮ, ೨೦೧೧, ಪುಟ-೬೪ & ೬೫) ಎಂದು ಅಭಿಪ್ರಾಯಪಡುತ್ತಾರೆ.

ನಮ್ಮ ಸನಾತನಿ ಪರಂಪರೆಯ ಮನಸುಗಳು ಹೆಣ್ಣು ಗಂಡನ್ನೇ ಅವಲಂಬಿಸಿ ಬಾಳಬೇಕಾದ ಅನಿವಾರ್ಯತೆಯನ್ನೂ, ಗಂಡಿನ ಬೇಕು ಬೇಡಗಳ ಸಾಧನವಾಗಿಯೇ ಗ್ರಹಿಸಿದೆ. ತೇಜಸ್ವಿಯವರ "ಊರ್ವಶಿ ಕಥೆಯು ಸೋಮು ಸುಭದ್ರೆಯನ್ನು ಪ್ರೀತಿಸುತ್ತಿರುವನಾದರೂ ಅದು ಗಂಡಿನ ಏಕಪಕ್ಷೀಯ ಧೋರಣೆಯನ್ನು ವ್ಯಕ್ತಪಡಿಸುವಂತೆ ಕಾಣುತ್ತದೆ. ಭಾರತೀಯ ಗಂಡು ಹೆಣ್ಣನ್ನು ನಡೆಸಿಕೊಳ್ಳುವ ಹಾಗೆಯೇ ಸೋಮುವಿನ ಪ್ರಜ್ಞೆ ಕೆಲಸ ಮಾಡುತ್ತಿದೆ. ಗಾಳಿಗೆ ಹಾರಿದ ಸೆರಗಿನ ಹಿಂದಿದ್ದ ಎದೆ ಅವನಿಗೆ ಚೇತೋಹಾರಿಯಾಗಿರುವಂತೆ, ಸುಭದ್ರೆಗೆ ಅದು ಒಂದು ಹೆಣ್ಣಿಗೆ ಆಗಬಹುದಾದ ಅವಮಾನದಂತೆ ಕಂಡಿರಬೇಕು." (ಕೋದಂಡರಾಮ ಎನ್.ಕೆ., ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ೧೯೯೬, ಪುಟ-೨೩೧) ಹಾಗಾಗಿ ಗಂಡಿನ ಅಭಿಪ್ರಾಯಗಳು, ಅನಿಸಿಕೆಗಳು, ನಿರ್ಣಯಗಳು ಹೆಣ್ಣಿನವೂ ಆಗಿರಬೇಕು ಎಂಬುದು ಪುರುಷಾಧಿಕಾರವನ್ನು ಸೂಚಿಸುತ್ತದೆ. ಈ ಬಗೆಯ ಪುರುಷ ಯಾಜಮಾನ್ಯದ ಹೇರುವಿಕೆಯನ್ನೇ ಸ್ತ್ರೀವಾದಿಗಳು ಪ್ರಶ್ನಿಸುತ್ತಿರುವುದು. ಇಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ನೋಡುವ ಗಂಡಿನ ದೃಷ್ಟಿಕೋನಕ್ಕೆ ಸುಭದ್ರೆ ಸೋಮುವನ್ನು, ಅವನ ಪ್ರೀತಿಯನ್ನು ತ್ಯಜಿಸುವ ಮೂಲಕ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ. ಪುರುಷಸಮಾಜ ಏಕಪಕ್ಷೀಯವಾಗಿ ರೂಪಿಸಿಕೊಂಡಿರುವ ಹೆಣ್ಣನ್ನು ನೋಡುವ, ಗ್ರಹಿಸುವ, ಮಾದರಿಗಳು ಬದಲಾಗಬೇಕಿದೆ. ಈ ದೃಷ್ಟಿಕೋನಗಳು ಮೇಲ್ನೋಟಕ್ಕೆ ಎಷ್ಟೇ ಪ್ರಗತಿಪರವಾಗಿ ಕಂಡರೂ, ಆಂತರ್ಯದಲ್ಲಿ ಅವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಪುರುಷ ಪಕ್ಷಪಾತಿಯೇ ಆಗಿರುತ್ತವೆ.

ಗಂಡಿಗೆ ಹೆಣ್ಣಿನ ದೇಹ ಅರ್ಥವಾದಂತೆ ಆಕೆಯ ಮನಸ್ಸು ಅರ್ಥವಾಗುವುದಿಲ್ಲ. ಇದಕ್ಕೆ ಅವನು ಹೆಣ್ಣನ್ನು ನೋಡುವ ದೃಷ್ಟಿಕೋನವೇ ಕಾರಣ. ಸ್ವರೂಪ ಕಾದಂಬರಿಯಲ್ಲಿ ಹೆಣ್ಣು ಬಂದಾಗಲೆಲ್ಲ ಲೈಂಗಿಕ ಸೂಚನೆಗಳು ಸರಾಗವಾಗಿ ಬಂದುಬಿಡುತ್ತವೆ. ಹೇಮಂತ ಒಬ್ಬ ಸೂಳೆಯನ್ನು ನಿಲ್ಲಿಸಿಕೊಂಡು ಸಂಭೋಗ ಮಾಡುವುದು, ಶ್ರೀನಿವಾಸ ತನ್ನ ಉಪಾಧ್ಯಾಯಿನಿಯಾಗಿದ್ದ ಪ್ರೇಯಸಿ ದೂರವಾದಾಗ 'ಅವಳ ಕನ್ನೆತನವನ್ನು ಕೆಡಿಸದೇ ಉಳಿಸಿದ್ದು ತಪ್ಪಾಯಿತು' ಎಂದುಕೊಳ್ಳುವುದು, ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ಮಾರ ತಮ್ಮ ಹೆಂಡತಿಯರನ್ನು ಉದ್ದೇಶಿಸಿ "ಬಲೇ ಗಾಂಚಾಲಿ ಮುಂಡೇರು. ಮಲೆ ಬಂದೋರಿಗೆ ನೆಲಾ ಕಾಣದಿಲ್ಲಂತೆ, ಸೊಕ್ಕಿ ನೆಣಾ ಉಕ್ತದೆ ಅವರ ಮೈಯಾಗೆ. ಒಬ್ಬೊಬ್ರು ಹತ್ತು ಹತ್ತು ಹಡಿಯೋ ಹಂಗೆ ಮಾಡಬೇಕು, ಪುರುಸೊತ್ತೇ ಕೊಡಬಾರ್ದು. ಹಂಗಿದ್ರೆ ನೋಡಪ್ಪಾ ಈ ಹಾಳ್ಮುಂಡೇರನ್ನ ಹದ್‌ಬಸ್ತಿಗೆ ತರಬೌದು. ಇಲ್ದಿದ್ರೆ ಊರ್ನೆ ತೆಗಿತಾರೆ ಇವ್ರು" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೧೫) ಎಂದು ಸಿದ್ದನಿಗೆ ಹೇಳುವ ಮಾತುಗಳು ಇವೆಲ್ಲಾ

ಪುರುಷಸಮಾಜ ಸ್ತ್ರೀಯರು ತನ್ನ ಅಧೀನ ಸಂಸ್ಕೃತಿಯ ಭಾಗವಾಗಿಯೇ ಉಳಿಯಬೇಕೆನ್ನುವ ಒತ್ತಾಸೆಯ ತಂತ್ರಗಳಾಗಿಯೇ ಕಾಣುತ್ತವೆ.

ಹೆಣ್ಣಿನ ಸ್ವತಂತ್ರ ನಡೆಗಳು, ಆಲೋಚನೆಗಳು ನಿರಂತರವಾಗಿ ತನ್ನ ಅಧಿಕಾರವನ್ನು ಪ್ರತಿಷ್ಠಾಪಿಸಿಕೊಂಡು ಬಂದಿರುವ ಗಂಡಿನಲ್ಲಿ ತನ್ನ ಅಧಿಕಾರದ ಗೋಪುರಗಳು ಉರುಳುತ್ತಿರುವ ತಳಮಳಗಳನ್ನು ಉಂಟುಮಾಡುತ್ತವೆ. ಗಯ್ಯಾಳಿಗಳು ಕಥೆಯ ಮಾರನ ಮಾತುಗಳನ್ನು ಗಮನಿಸಿದರೆ ಲೈಂಗಿಕತೆ ಮತ್ತು ಬಿಡುವಿಲ್ಲದ ತಾಯ್ತನಗಳ ಮೂಲಕ ಹೆಣ್ಣನ್ನು ಹದ್ದುಬಸ್ತಿನಲ್ಲಿ ಇಡಬೇಕು; ಇಲ್ಲದಿದ್ದರೆ ಅವರು ನಿಯಂತ್ರಣಕ್ಕೆ ಸಿಕ್ಕುವುದಿಲ್ಲ ಎಂಬ ನಿಲುವು ಗಂಡಸರಲ್ಲಿ ಇರುವುದನ್ನು ಕಾಣಬಹುದು. ಹೀಗೆ ತಾಯ್ತನ ಒಂದೇ ಅಲ್ಲ ಧರ್ಮ, ಜಾತಿ, ಸಂಸ್ಕೃತಿ, ಲೈಂಗಿಕತೆ, ಮಕ್ಕಳ ಪೋಷಣೆ ಹೀಗೆ ಹಲವು ಕಾರ್ಯಗಳಿಗೆ ಹೆಣ್ಣನ್ನು ಜವಾಬ್ದಾರಳನ್ನಾಗಿ ಮಾಡುವುದರ ಮೂಲಕ ಹೇಗಾದರೂ ಆಕೆಯನ್ನು ತನ್ನ ಪುರುಷಾಧಿಕಾರಕ್ಕೆ ಧಕ್ಕೆಯಾಗದಂತೆ ನಿರಂತರವಾಗಿ ಬಂಧಿಯಾಗಿಡುವ ತಂತ್ರಗಳನ್ನು ಪುರುಷಪ್ರಧಾನ ಸಮಾಜ ಹೆಣೆಯುತ್ತಾ ಬಂದಿದೆ ಎಂಬುದು ತೇಜಸ್ವಿ ಕಥನ ಕಾಣಿಸುವ ಮಹಿಳಾ ಸಂಗತಿಯಾಗಿದೆ.

ಧರ್ಮ, ಜಾತಿ, ಸಂಸ್ಕೃತಿ, ಲೈಂಗಿಕತೆ, ತಾಯ್ತನ, ಪಾಲನೆ-ಪೋಷಣೆ ಮುಂತಾದುವುಗಳ ನೆಲೆಯಿಂದ ನೋಡುವ ಗಂಡಿನ ನೋಟಕ್ರಮಗಳು ಶತಶತಮಾನಗಳಿಂದಲೂ ಮಹಿಳೆಯರನ್ನು ಎಲ್ಲಾ ವಿಧದಲ್ಲೂ ತೀವ್ರತರವಾಗಿ ಬಾಧಿಸಿವೆ ಮತ್ತು ಶೋಷಿಸಿವೆ. ಈ ಎಲ್ಲಾ ಪುರುಷ ನಿರ್ಮಿತ ಸಂಕೋಲೆಗಳಿಂದ ಬಿಡುಗಡೆಗೊಳ್ಳದ ಹೊರತು ಸ್ತ್ರೀ ಪುರುಷ ಸಮಾನತೆಯ ಸಮಾಜದ ನಿರ್ಮಾಣವೆನ್ನುವುದು ಮರೀಚಿಕೆಯಾಗಿಯೇ ಉಳಿಯುವ ಅಪಾಯಗಳಿವೆ ಎಂದು ತೇಜಸ್ವಿಯವರ ಕಥನಗಳು ಎಚ್ಚರಿಸುತ್ತವೆ. ಇಲ್ಲಿ ಹೆಣ್ಣು-ಗಂಡು ಸಂಬಂಧಗಳ ನಡುವೆ ಲೈಂಗಿಕತೆಯ ಭಾವಗಳು ಇರಬಾರದೆಂದಲ್ಲ, ಅವು ಪರಸ್ಪರ ಸಮಾನತೆಯ ನೆಲೆಯಿಂದ, ಮೇಲು-ಕೀಳು ಎಂಬ ಬೇಧ-ಭಾವವಿಲ್ಲದೆ ನಡೆಯಬೇಕು. ಬೇಧ-ಭಾವಗಳಿಂದ ಕೂಡಿದ ಅಸಮಾನತೆಯ ನೆಲೆಯ ಲೈಂಗಿಕ ಭಾವಗಳು, ಸಂಬಂಧಗಳು ಹೆಣ್ಣಿನ ಸ್ವಾತಂತ್ರ್ಯವನ್ನು ಕಸಿಯುವುದಲ್ಲದೇ, ಪುರುಷಾಧಿಕಾರವನ್ನು ನಿರಂತರಗೊಳಿಸಿಬಿಡುವ ಅಪಾಯವಿದೆ. ಅಲ್ಲದೆ ಲೈಂಗಿಕತೆಯಾಗಲೀ, ತಾಯ್ತನವಾಗಲೀ, ನೀತಿ ನಿರ್ಬಂಧಗಳಾಗಲೀ ಇವೆಲ್ಲವೂ ಹೆಣ್ಣನ್ನು ನಿಯಂತ್ರಿಸುವ ನಿಯಂತ್ರಕಗಳಂತೆ, ಹೆಣ್ಣಿನ ಸ್ವಂತಿಕೆ, ಸ್ವಾತಂತ್ರ್ಯಗಳನ್ನು ಹಣಿಯುವ ತಂತ್ರೋಪಾಯಗಳಂತೆ ಬಳಕೆಗೊಳ್ಳುವ ಹುನ್ನಾರಗಳನ್ನೂ ತೇಜಸ್ವಿ ಕಥನ ಬಯಲಿಗೆಳೆಯುತ್ತದೆ.

ಚಿದಂಬರ ರಹಸ್ಯ ಕಾದಂಬರಿಯ ಗೋಸಾಯಿ ಹೆಣ್ಣುಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವ ಕೃಷ್ಣೇಗೌಡ, ರಾಮಾಚಾರಿ ಸ್ವೇಚ್ಛಾಚಾರಿಗಳು. ಇದು ಪುರುಷರಿಗೆ ಅವಮಾನದ

ವಿಷಯವಲ್ಲ, ಪ್ರತಿಷ್ಠೆಯ ಮತ್ತು ಘನತೆಯ ವಿಷಯ. ಇಲ್ಲಿ ಗಂಡು ಮಾತ್ರವೇ ಇಂಥ ಬಹಿರಂಗ ಲೈಂಗಿಕ ಸ್ವೇಚ್ಛೆ ಉಳ್ಳವನು. ಅದನ್ನೆ ಹೆಣ್ಣು ಬಯಸಿದರೆ ಅದು ವ್ಯಭಿಚಾರ, ಅನಾಗರೀಕತೆ. ಭಾರತೀಯ ಸಂಸ್ಕೃತಿಗೆ, ಹೆಣ್ಣುಕುಲಕ್ಕೆ ಮಾಡಿದ ಅವಮಾನ ಎಂದು ಜರಿದು ಹೆಣ್ಣನ್ನು ನ್ಯಾಯ-ಪಂಚಾಯಿತಿಗೆ ಒಳಪಡಿಸಲಾಗುತ್ತದೆ. ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ಮಲೆಯಾಳಿ ಪಂಡಿತನೊಂದಿಗೆ ಹೋಗುವ ನಾಗಮ್ಮನನ್ನು ಬಹಿರಂಗವಾಗಿ ಪ್ರಶ್ನಿಸುವುದನ್ನು ಅವಮಾನಿಸುವುದನ್ನು ಈ ಹಿನ್ನೆಲೆಯಲ್ಲಿ ಚರ್ಚಿಸಬಹುದು. ಅದು ಹೋಗಲಿ ದಾಂಪತ್ಯದಲ್ಲಿನ ಗಂಡು ಹೆಣ್ಣಿನ ಸಂಬಂಧಗಳಾದರೂ ಸಮಾನ ಆಗಿರುತ್ತವೆಯೆ? ಎಂಬುದು ಚರ್ಚಾಸ್ಪದ ವಿಷಯ. ಹೆಣ್ಣು-ಗಂಡಿನ ನಡುವಿನ ಲೈಂಗಿಕ ಸಂಬಂಧಗಳು ಪರಸ್ಪರ ಸಮಾನತೆಯ ನೆಲೆಯಿಂದ ಕೂಡಿರಬೇಕು. ಅಲ್ಲಿ ಬೇರೊಬ್ಬರ ಮಧ್ಯಪ್ರವೇಶ ನಿಷಿದ್ಧವಾಗಿರಬೇಕು. ಇಲ್ಲವಾದಲ್ಲಿ ಆ ಸಂಬಂಧಗಳು ಅಸೂಯೆ ಮತ್ತು ಶೋಷಣೆಯ ನೆಲೆಯನ್ನು ತಲುಪಿ ಛಿದ್ರಗೊಳ್ಳುತ್ತವೆ. ಅಬಚೂರಿನ ಪೋಸ್ಟಾಫೀಸ್ ಕಥೆಯ ಬೋಬಣ್ಣ-ಕಾವೇರಿಯ ನಡುವಿನ ಲೈಂಗಿಕ ಭಾವಗಳು ಪರಸ್ಪರ ಸಮಾನತೆಯ ನೆಲೆಯಲ್ಲಿ ಏರ್ಪಡುವ ಅವಕಾಶಗಳಿದ್ದಾಗಿಯೂ, ಕಾವೇರಿಯ ತಾಯಿ ಮಾಚಮ್ಮನ ಅಸಹನೆ, ಅಸೂಯೆ, ಸ್ವಾರ್ಥ, ಭವಿಷ್ಯದಲ್ಲಿ ಬಂದೆರಗಬಹುದೆಂದು ಊಹಿಸುವ ಏಕಾಂಗಿತನ, ಅಸಹಾಯಕತೆ ಮುಂತಾದ ದುರಾಲೋಚನೆಯ ಮಧ್ಯಪ್ರವೇಶದಿಂದಾಗಿ ಬೋಬಣ್ಣ-ಕಾವೇರಿಯ ಸಂಬಂಧ ದುರಂತ ಅಂತ್ಯವನ್ನು ಕಾಣುತ್ತದೆ. ಹೆಣ್ಣನ್ನು ಹೆಣ್ಣು ಶೋಷಿಸುವ ನೆಲೆಗಳು ಇಲ್ಲಿವೆ.

ಪರಂಪರೆಯಿಂದಲೂ ಹೆಣ್ಣು ನಿರಂತರವಾಗಿ ಶೋಷಣೆಗೆ, ದಬ್ಬಾಳಿಕೆಗೆ ಒಳಗಾಗಲು ಕಾರಣವಾಗಿರುವ ಮತ್ತೊಂದು ಅಂಶವೆಂದರೆ ಅದು ಮೂಢನಂಬಿಕೆ. ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿರುವ, ಮಾನವ ಸಂಬಂಧಗಳನ್ನು ವಿನಾಶದೆಡೆಗೆ ತಳ್ಳುತ್ತಿರುವ, ಮನುಷ್ಯನನ್ನು ಜೀವಂತವಾಗಿ ಸುಡುತ್ತಿರುವ ಈ ಮೂಡನಂಬಿಕೆಗಳನ್ನು ಪರಂಪರೆಯಿಂದ ಪರಂಪರೆಗೆ ವರ್ಗಾಯಿಸುವುದರಲ್ಲಿ ಪುರುಷನಿಗಿಂತಲೂ ಪ್ರಮುಖ ಪಾತ್ರ ವಹಿಸುವುದು ಹೆಣ್ಣೇ ಆದರೂ, ಅದರ ಮೂಲಕ ಎಲ್ಲಾ ಬಗೆಯ ಶೋಷಣೆಗೆ ಗುರಿಯಾಗಿರುವುದೂ ಸಹಾ ಹೆಣ್ಣೇ ಎನ್ನುವುದು ವಿಪರ್ಯಾಸ. ಅಥವಾ ಹೆಣ್ಣನ್ನು ಬಾಲ್ಯದಿಂದಲೂ ಸಂಸ್ಕೃತಿಯನ್ನು ಪೊರೆಯುವ, ಕಾಪಾಡುವ ಹೊಣೆಗಾರಳನ್ನಾಗಿ ಪುರುಷಸಮಾಜ ರೂಪಿಸುತ್ತಿದೆ. ಇಲ್ಲಿ ಮೇಲೆ ಪ್ರಸ್ತಾಪಿಸಿರುವ ಸ್ತ್ರೀವಾದಿ ಚಿಂತಕಿ 'ಸಿಮೋನ್ ದಿ ಬುವಾ' ಅವರ ಮಾತು ಹೆಚ್ಚು ಅನ್ವಯವಾಗುತ್ತದೆ. ಪುರುಷ ಸಮಾಜದ ದಬ್ಬಾಳಿಕೆ, ಅವನ ಅಧಿಕಾರ ಮತ್ತಷ್ಟು ಬಲಗೊಳ್ಳಲು ಮತ್ತು ನಿರಂತರಗೊಳ್ಳಲು ಹಾಗೂ ತನ್ನ ದೌರ್ಬಲ್ಯಗಳನ್ನು ಮುಚ್ಚಿಹಾಕಲು ಪ್ರಮುಖ ಅಸ್ತ್ರಗಳಾಗಿ ಬಳಕೆಯಾಗುತ್ತಿರುವುದು ಇವೇ ಮೂಡನಂಬಿಕೆಗಳು. ಮಾನವ ಬದುಕಿನ ದಿನನಿತ್ಯದ ವ್ಯಾಪಾರಗಳಾದ ಹುಟ್ಟು-ಸಾವು-

ನೋವು-ನಷ್ಟಗಳಿಗೆ ಹೆಣ್ಣಿನ ಹುಟ್ಟಿನ ಸಂದರ್ಭ, ಜಾತಕ, ಆಕೆಯ ಕಾಲ್ಗುಣ, ಮುಖದರ್ಶನ ಕಾರಣ ಎಂದು, ಎಲ್ಲಾ ಬಗೆಯ ಅವಗಢಗಳಿಗೂ ಆಕೆಯನ್ನೇ ದೋಷಿಯನ್ನಾಗಿ ಮಾಡಿ, ತನ್ನ ಎಲ್ಲಾ ದೌರ್ಬಲ್ಯಗಳನ್ನು ಮುಚ್ಚಿಹಾಕುವಲ್ಲಿ ಪುರುಷ ಪ್ರಧಾನ ಸಮಾಜ ಯಶಸ್ವಿಯಾಗಿದೆ. ಆದರೆ ಇವ್ಯಾವುದರ ಅರಿವೂ ಇಲ್ಲದ ಮಹಿಳೆ, ಇದೇ ಮೂಢನಂಬಿಕೆಗಳನ್ನು ತನ್ನ ಮುಂದಿನ ಜನಾಂಗಕ್ಕೆ ಸಾಗಿಸುವ ನಿಟ್ಟಿನಲ್ಲಿ ಮಾಧ್ಯಮವಾಗಿ ಕೆಲಸ ಮಾಡುತ್ತಿರುವುದು, ಇವುಗಳಿಂದ ತನ್ನ ಪ್ರಾಣಕ್ಕೆ ಸಂಚಕಾರ ತಂದುಕೊಂಡಿರುವುದು ದುರಂತವೇ ಸರಿ.

ಕುಬಿ ಮತ್ತು ಇಯಾಲ ಕಥೆಯಲ್ಲಿ ಮೂಢನಂಬಿಕೆಗಳ ಆಗರವಾದ ಬೈರಾಪುರದ ಜನರನ್ನು ವೈದ್ಯ ಕುಬಿ ಬಿಡುಗಡೆಗೊಳಿಸಲು ಎಷ್ಟೆಲ್ಲಾ ಪ್ರಯತ್ನಿಸಿದರೂ, ಅವು ಅವನ ನೆರಳಂತೆ ಹಿಂಬಾಲಿಸಿ ಕಾಡುತ್ತವೆ ಅವನ ಈ ಪ್ರಯತ್ನಗಳನ್ನೇ ಬಳಸಿಕೊಂಡು ಅವು ಮತ್ತಷ್ಟು ಬಲಗೊಳ್ಳುವುದು ವಿಪರ್ಯಾಸ. ಮೈನೆರೆದ ಕನ್ಯೆಯನ್ನು ಭೋಗಿಸಿದರೆ ಗುಪ್ತರೋಗಗಳು ವಾಸಿಯಾಗುತ್ತವೆ ಎಂಬ ಮೌಢ್ಯತೆಯಿಂದ ಕಲ್ಲು ಒಡೆಯುವ ಲೋರಿಯ ಬಾಲಕಿ ಇಯಾಲಳ ಮೇಲೆ ಅತ್ಯಾಚಾರಗೈದು ಕೊಂದುಹಾಕುವುದು, ಅದನ್ನು ಯಾವುದೇ ನಾಚಿಕೆ, ವಿಷಾದ, ಕರುಣೆಯೂ ಇಲ್ಲದೆ ಬೈರಾಪುರದ ಪುರುಷಸಮಾಜ ತನ್ನ ರಾಜಕೀಯ ಎದುರಾಳಿಗಳನ್ನು ಹಣಿಯಲು ಬಳಸಿಕೊಳ್ಳುವುದು ಜಿಗುಪ್ಸೆಯನ್ನು ಉಂಟುಮಾಡುತ್ತದೆ.

ಅವನತಿ ಕಥೆಯ ಇತ್ತಾವರ, ಇಸ್ಲಾಪುರ, ಜೋಗತಿಪೇಟೆ ಮುಂತಾದ ಸುತ್ತಮುತ್ತಲಿನ ನಾಲ್ಕಾರು ಹಳ್ಳಿಗಳು ಏನೇನು ಮಾಡಿಯೂ ಬದಲಾಗದ ಮೂಡನಂಬಿಕೆಗಳ ಕೂಪದಲ್ಲಿ ಮುಳುಗಿ ಭೂತ-ಪ್ರೇತ-ಮಾರಿ-ಮಸಣಿಗಳ ತಾಪತ್ರಯಗಳಲ್ಲಿ ಸಿಲುಕಿ ಜಡಗೊಂಡಿವೆ. ಸೂರಾಚಾರಿಯು ಈ ಜಡ ಸಮಾಜದಿಂದ ಮುಕ್ತವಾಗಲು ಹಂಬಲಿಸುತ್ತಾನೆ. ಆದರೆ ಮಲೆ ಸೀಮೆಯ ಗಡಿ ದಾಟಲು ನಿರಾಕರಿಸುವ ತನ್ನ ಹೆಂಡತಿ ಯಶೋದೆಯನ್ನು ದೆವ್ವ, ಪಿಚಾಚಿ ಮೆತ್ತಿಕೊಂಡಿದೆಯೆಂದು ಆರೋಪಿಸಿ ಅವುಗಳ ಉಚ್ಚಾಟನೆ ಮಾಡಲು "ಕಸಬರಿಕೆ ತೆಗೆದುಕೊಂಡು ಹೊಡೆಯುವುದು, ಮೆಟ್ಟಿನಲ್ಲಿ ಹೊಡೆಯುವುದು, ಹೊಗೆ ಹಾಕಿ ಸಗಣಿ ನೀರು ಕುಡಿಸುವುದು." (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೨೨) ಹೀಗೆ ಪುರುಷಪ್ರಧಾನ ಸಮಾಜದ ಸಂಕೇತವಾದ ಸೂರಾಚಾರಿ ಯಶೋದೆಯ ಮನೋಭಿಲಾಷೆನ್ನು ಅರ್ಥಮಾಡಿಕೊಳ್ಳದೆ ತನ್ನ ದೌರ್ಬಲ್ಯವನ್ನು ಮರೆಮಾಚಲು ಮೂಢನಂಬಿಕೆಗಳನ್ನು ಬಳಸಿಕೊಂಡು ಆಕೆಯನ್ನು ನಾನಾ ಬಗೆಯಲ್ಲಿ ಹಿಂಸಿಸುತ್ತಾನೆ. ಇದರ ಪರಿಣಾಮವಾಗಿ "ಯಶೋದೆ ನವೆದುಹೋದಳು. ಜೋಲು ಮೊಲೆಯ ಗುಳಿಗಣ್ಣಿನ ಯಶೋದೆಗೆ ಕೈಗೆ ಒಂದು ಖಡ್ಗವನ್ನೋ ತ್ರಿಶೂಲವನ್ನೋ ಕೊಟ್ಟರೆ ಮಾರಿಗೊಂಬೆಯಂತೆಯೇ ಕಾಣಬಹುದಾದ ಸ್ಥಿತಿಗೆ ಬಂದಿದ್ದಳು" (ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೨೪) ಇದೇ

ಕಥೆಯಲ್ಲಿ ಇತ್ತಾವರದ ಸುಬ್ಬಯ್ಯನ ಮಕ್ಕಳು ಹುಟ್ಟಿದ ಕೆಲವೇ ವಾರಗಳಲ್ಲಿ ಸಾಯುತ್ತಿರುವುದಕ್ಕೆ ಅಲ್ಲಿನ ವಾತಾವರಣ ಮತ್ತು ಸುಬ್ಬಯ್ಯನ ಅಜ್ಞಾನ ಕಾರಣವಾಗಿದ್ದು, ನಿಜ ಸಂಗತಿಯನ್ನು ಮುಚ್ಚಿಹಾಕಿ ಸುಬ್ಬಯ್ಯನನ್ನು ಸಂತೃಪ್ತಿಪಡಿಸಲು, ಅಪ್ರತಿಮ ಸುಂದರಿಯಾದ ಸುಬ್ಬಯ್ಯನ ಹೆಂಡತಿ ಗೌರಿಯ ಮೊಲೆಯಲ್ಲಿ ದೋಷವನ್ನು ಗುರುತಿಸುವ ಸೂರಾಚಾರಿ, ಆಕೆಯ ಮೊಲೆಯ ನರವನ್ನು ಅರಿಶಿಣದ ಕೊಂಬಿನಿಂದ ಸುಡುವ ಮೂಲಕ ಪುರುಷ ಆತ್ಮಗಳನ್ನು ತೃಪ್ತಿಪಡಿಸುತ್ತಾನೆ. ಹೀಗೆ ಮೂಢನಂಬಿಕೆಗಳು ಪುರುಷಾಧಿಕಾರವನ್ನು ಬಲಗೊಳಿಸಲು ಕಾರಣವಾಗುವುದರ ಮೂಲಕ ಸ್ತ್ರೀ ಶೋಷಣೆಗೆ ಇನ್ನಷ್ಟು ಹೊಸ ಹತಾರಗಳನ್ನು ಸೃಷ್ಟಿಸಿವೆ. ಇಂಥ ವಿಕಾರಗಳನ್ನು ಗುರುತಿಸಿಕೊಂಡು ತ್ಯಜಿಸದ ಹೊರತು ಮಹಿಳೆಯರು ಶೋಷಣೆಯ ಭಿನ್ನ ಮುಖಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಅವುಗಳ ಹಿಡಿತದಿಂದ ಬಿಡಿಸಿಕೊಳ್ಳಲು ಹಾಗೂ ಈ ಹಿನ್ನೆಲೆಯಲ್ಲಿ ಸ್ತ್ರೀ ಪರವಾದ ಹೋರಾಟಗಳು ಯಶಸ್ವಿಯಾಗಲು ಸಾಧ್ಯವಾಗುವುದಿಲ್ಲ ಎಂಬ ತಿಳುವಳಿಕೆಯನ್ನು ತೇಜಸ್ವಿಯವರ ಕಥನಗಳು ನೀಡುತ್ತವೆ.

ಸಂಸ್ಕೃತಿ, ಮೂಢನಂಬಿಕೆಗಳಂತೆ ಆಧುನಿಕತೆಯ ಸಂದರ್ಭದಲ್ಲಿ ಅಸಮಾನತೆಯಿಂದ ಕೂಡಿರುವ ವರ್ಗ ಧೋರಣೆಯೂ ಸಹಾ ಸ್ತ್ರೀ ಶೋಷಣೆಗೆ ಪ್ರಮುಖ ಕಾರಣವಾಗಿದೆ. ಇಡೀ ಭಾರತೀಯ ಸಮಾಜವನ್ನು ಅಧ್ಯಯನ ದೃಷ್ಟಿಯಿಂದ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಎಂದು ವಿಭಾಗಿಸಿಕೊಂಡು ಸ್ತ್ರೀ ಶೋಷಣೆಯ ಭಿನ್ನ ಮುಖಗಳನ್ನು ಗುರುತಿಸಲು ಇಲ್ಲಿ ಯತ್ನಿಸಲಾಗಿದೆ. ಈ ವರ್ಗದ ವ್ಯಾಪ್ತಿಯಲ್ಲಿ ನಗರ–ಗ್ರಾಮ, ವಿದ್ಯಾವಂತ–ಅವಿದ್ಯಾವಂತ, ಸುಂದರ–ಸುಂದರವಲ್ಲದ್ದು, ಶ್ರೀಮಂತ–ಬಡವ ಮುಂತಾದ ಅಸಮಾನ ದೃಷ್ಟಿಕೋನಗಳಿಂದಾಗಿ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಶೋಷಣೆಯೂ ಸಹಾ ಒಂದೇ ತೆರನಾಗಿರುವುದಿಲ್ಲ. ಅವೂ ಸಹಾ ಭಿನ್ನವಾಗಿಯೇ ಇರುವುದನ್ನು ಗುರುತಿಸಲು ಸಾಧ್ಯವಿದೆ. ಮೇಲ್ವರ್ಗ ಮಧ್ಯಮ ವರ್ಗವನ್ನೂ, ಮಧ್ಯಮವರ್ಗ ಕೆಳವರ್ಗವನ್ನೂ ನೋಡುವ, ಅರಿಯುವ, ಅರ್ಥೈಸುವ ಮತ್ತು ವ್ಯಾಖ್ಯಾನಿಸುವ ಬಗೆ ಬೇರೆ ಬೇರೆಯದೇ ಆಗಿರುತ್ತದೆ. ತಾತ್ವಿಕವಾಗಿ ಈ ಭಿನ್ನ ಶೋಷಣೆಯ ನೆಲೆಗಳನ್ನು ಗುರುತಿಸದ ಹೊರತು ಸ್ತ್ರೀ ಪರವಾದ ವಾದಗಳು, ಹೋರಾಟಗಳು, ಕಾನೂನುಗಳು, ಯೋಜನೆಗಳು ಭ್ರಮನಿರಸನಗೊಂಡು ದಿಕ್ಕುತಪ್ಪಿ ಸೋಲುವ ಅಪಾಯಗಳಿವೆ. ಏಕರೂಪಿತನದಿಂದ ಕೂಡಿದ ಇಲ್ಲವೇ ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಹಾಕಿ ನೋಡುವದರಿಂದ ಮಹಿಳಾ ಹೋರಾಟಗಳು ನೆಲಕಚ್ಚುತ್ತವೆ ಎಂಬ ಎಚ್ಚರಿಕೆಯನ್ನೂ ಕೂಡ ತೇಜಸ್ವಿಯವರ ಕಥನಗಳಲ್ಲಿ ಗುರುತಿಸಬಹುದು.

ಕರ್ವಾಲೋ ಕಾದಂಬರಿಯ ನಿರೂಪಕ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮಧ್ಯಮ ವರ್ಗದವನಾಗಿದ್ದು, ಅವನು ಈ ಸಮಾಜವನ್ನು ಒಂದು ಅಂತರ ಕಾಯ್ದುಕೊಂಡು

ಗ್ರಹಿಸುತ್ತಿರುತ್ತಾನೆ. ಮಂದಣ್ಣನ ಹೆಂಡತಿ ರಾಮಿಯ ಬಗೆಗೆ ತೀರ ಸರಳವಾಗಿ ಮತ್ತು ಉದಾಸೀನ ಸ್ಥಿತಿಯಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾನೆ. ನಿರೂಪಕನಿಗೆ ರಾಮಿ ಬಾಹ್ಯ ನೋಟಕ್ಕೆ ಅರೆ ಹುಚ್ಚಳಂತೆ ಕಾಣುತ್ತಾಳೆ. ಅವಳ ವಯಸ್ಸಿಗೂ, ಗಾತ್ರಕ್ಕೂ ತಾಳ ಮೇಳವಿಲ್ಲದೆ ಬೃಹದಾಕಾರದ ಮೊಲೆಗಳನ್ನು ನೋಡಿ ಮಂದಣ್ಣ ಮೋಸ ಹೋಗಿರಬೇಕು ಎಂಬ ನಿರೂಪಕನ ಮಾತುಗಳಲ್ಲಿ ಮಧ್ಯಮವರ್ಗದ ಜನ ಕೆಳ ವರ್ಗದ ಹೆಣ್ಣನ್ನು ಹೇಗೆ ನೋಡುತ್ತಾರೆ, ನಡೆಸಿಕೊಳ್ಳುತ್ತಾರೆ ಎಂಬುದನ್ನು ಗುರುತಿಸಬಹುದು. ನಿರೂಪಕನಿಗಿಂತ ರಾಮಿಯ ಆರ್ಥಿಕ, ಸಾಮಾಜಿಕ ಸ್ಥಿತಿ ಕೆಳ ಹಂತದಲ್ಲಿದೆ. ಇದರಿಂದಾಗಿಯೇ 'ರಾಮಿ ರಾಮಿ ಹರಾಮಿ' ಎಂಬ ಕೀಟಲೆ ಪ್ರಾರಂಭವಾಗುತ್ತದೆ. ಆದರೆ ಇದೇ ದೃಷ್ಟಿಕೋನ, ಕೀಟಲೆಗಳು ಮೇಲ್ವರ್ಗದ ಹೆಣ್ಣುಗಳ ಬಗ್ಗೆ ವ್ಯಕ್ತವಾಗುವುದಿಲ್ಲ. ಮೇಲ್ವರ್ಗದ ಹೆಣ್ಣುಗಳನ್ನು ಗೌರವದಿಂದ ಕಾಣುವುದು ನಮ್ಮ ಸಮಾಜದ ಸ್ಥಿತಿಯಾಗಿದೆ. ನಿರೂಪಕ ತನಗೇ ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದ, ತುಂಬಾ ಜಟಿಲವಾದ ಹಾರುವ ಓತಿಯ ಇತಿಹಾಸದ ಬಗ್ಗೆ ಕರ್ವಾಲೋ ಮಾತನಾಡುವ ಸಂದರ್ಭದಲ್ಲಿ ತನ್ನ ಪತ್ನಿಯ ಅಭಿಪ್ರಾಯಗಳನ್ನು, ಪ್ರಶ್ನೆಗಳನ್ನು ಗೌರವಿಸುತ್ತಾನೆ. ಆಕೆ ಪದವೀಧರೆಯೆಂದು ಸಮರ್ಥಿಸುತ್ತಾನೆ. ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ಮೇಲ್ವರ್ಗದ ಸುರೇಶನ ಪತ್ನಿ ಗೌರಿಯನ್ನು ಸುರೇಶನಿಗಿಂತ ಹೆಚ್ಚು ತಿಳುವಳಿಕೆಯುಳ್ಳವಳೆಂದು, ಬುದ್ದಿವಂತಳೆಂದು ನಿರೂಪಿಸಲಾಗಿದೆ. ಕಾದಂಬರಿಯ ಕೊನೆಯಲ್ಲಿ ರಾಜಪ್ಪ ಸುರೇಶನೊಂದಿಗೆ ಮಾತನಾಡುತ್ತಾ ನಿಧಿ ಸಿಕ್ಕರೆ ಫಿಪ್ಟಿ ಫಿಪ್ಟಿ ಹಂಚಿಕೊಳ್ಳೋಣ ಎಂದಾಗ "ಗೌರಿ ರೇಗಿ ಏನ್ರೀ ಹೆಂಗಸೂ ಅಂತ ನೀವು ನನ್ನನ್ನು ಲೆಕ್ಕಕ್ಕೆ ಇಟ್ಟುಕೊಂಡಿರೋ ಹಾಗೆ ಕಾಣೋದಿಲ್ಲ" (ಜುಗಾರಿಕ್ರಾಸ್, ೨೦೦೯, ಪುಟ-೨೦೮) ಎಂಬ ಮಾತಿಗೆ ರಾಜಪ್ಪ "ಅಯ್ಯಯ್ಯೋ ಸಾರಿ ಸ್ಸಾರಿ ಮೇಡಂ. ನಿಮ್ಮನ್ನು ಮರೆಯೋದಕ್ಕೆ ಆಗುತ್ತ! ಓನ್ ಬೈ ತ್ರೀ ಮಾಡೋಣ" (ಜುಗಾರಿ ಕ್ರಾಸ್, ೨೦೦೯, ಪುಟ-೨೦೮) ಎಂದು ಕ್ಷಮೆ ಕೇಳಿ, ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಾನೆ. ಹೀಗೆ ಮೇಲ್ವರ್ಗದ ಹೆಣ್ಣಿನ ಎಲ್ಲಾ ನಡೆಗಳನ್ನು ಅಭಿಪ್ರಾಯಗಳನ್ನು ಗೌರವದಿಂದಲೇ ಕಾಣಲಾಗುತ್ತದೆ.

ಮಂದಣ್ಣನಷ್ಟೇ ಕೆಳವರ್ಗದವನಾದ ಲಕ್ಷ್ಮಣನಿಗೆ ನಿರೂಪಕನು ಹೇಳುವಂತೆ ರಾಮಿಯ ಅಸಹಜತೆಯ ಅರಿವಿದ್ದರೂ ಅದು ಅವನಿಗೆ ಮುಖ್ಯವಾಗುವುದಿಲ್ಲ. ಅವಳ ತಂದೆ ನಾರ್ವೆ ರಾಮಯ್ಯ ನೀಡಿದ ಕಿರುಕುಳದ ಬಗ್ಗೆ ಬೇಸರವಿರುತ್ತದೆ. ಆ ಕಾರಣದಿಂದಾಗಿ ರಾಮಿಯ ವಿಷಯ ಪ್ರಸ್ತಾಪಿಸುತ್ತಾನೆ. ಆದರೆ ರಾಮಿಯ ಬಗೆಗಿನ ನಿರೂಪಕನ ಅಭಿಪ್ರಾಯವನ್ನು ತೇಲಿಸಿಬಿಡುತ್ತಾನೆ. ಇಲ್ಲಿ ತನ್ನ ವರ್ಗದ ಹೆಣ್ಣುಗಳ ಬಗೆಗಿನ ಲಕ್ಷ್ಮಣನ ದೃಷ್ಟಿಕೋನ ನಿರೂಪಕನ ದೃಷ್ಟಿಕೋನಕ್ಕಿಂತ ಭಿನ್ನವಾಗಿದೆ. ನಿರೂಪಕ ಕೆಳವರ್ಗದ ಸಮುದಾಯದಿಂದ ಅಂತರ ಕಾಯ್ದುಕೊಂಡರೆ, ಲಕ್ಷ್ಮಣ ಆ ವರ್ಗದೊಂದಿಗೆ ಸಾಮಿಪ್ಯವನ್ನು ಸೃಷ್ಟಿಸಿಕೊಳ್ಳುತ್ತಾನೆ. ಹೀಗೆ

ಹೆಣ್ಣಿನ ಶೋಷಣೆಯ ದೃಷ್ಟಿಯಿಂದ ಹೆಣ್ಣಿನ ವರ್ಗ ಮತ್ತು ಶಿಕ್ಷಣಗಳೂ ಸಹಾ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ.

ರಾಮಿಯನ್ನು ನಿರೂಪಕನ ದೃಷ್ಟಿಕೋನಗಳಿಗಿಂತ, ಅವನು ನೀಡುವ ನಿರ್ಣಯಗಳಿಗಿಂತ ಬೇರೆಯದೇ ರೀತಿಯಲ್ಲಿ ಗ್ರಹಿಸಲು ಸಾಧ್ಯವಿದೆ. ನಿರೂಪಕ ರಾಮಿಯನ್ನು ನೋಡುವುದು, ಗಮನಿಸುವುದು ಮಂದಣ್ಣನ ಮದುವೆಯ ಸಂದರ್ಭದಲ್ಲಿ ಹಾಗೂ ಮಂದಣ್ಣ ಮತ್ತು ಲಕ್ಷ್ಮಣ ನೀಡುವ ಕೆಲವು ವಿವರಗಳಲ್ಲಿ. ಈ ಎರಡೂ ಸಂದರ್ಭಗಳನ್ನು ಹೊರತುಪಡಿಸಿದರೆ ಅವರು ಸಂಧಿಸುವ ಸಂದರ್ಭಗಳು ಕಾದಂಬರಿಯಲ್ಲಿ ಬರುವುದೇ ಇಲ್ಲ. ಹಾಗಾಗಿ ನಿರೂಪಕನಿಗೆ ರಾಮಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ರಾಮಿಯ ಬಗೆಗೆ ಪೂರ್ಣ ಮಾಹಿತಿಯ ಕೊರತೆಯಿದ್ದಾಗಿಯೂ ಆಕೆಯ ಬಗ್ಗೆ ಒಂದು ನಿರ್ಣಯಕ್ಕೆ ಬಂದು ಬಿಡುವುದು ನಿರೂಪಕನ ವರ್ಗ ಧೋರಣೆಯ ಅಹಂನಿಂದಲೇ. ರಾಮಿಯ ವರ್ಗದವರು ಶ್ರಮ ಸಂಸ್ಕೃತಿಯ ದೈಹಿಕ ದುಡಿಮೆಯನ್ನು ನೆಚ್ಚಿಕೊಂಡಿರುವವರು. ಅವರು ಮೇಲ್ವರ್ಗದವರಂತೆ ಸೌಂದರ್ಯಕ್ಕೆ ಅಷ್ಟು ಮಹತ್ವವನ್ನು ನೀಡುವುದಿಲ್ಲ. ಸೌಂದರ್ಯ ಪ್ರಜ್ಞೆ ಅಷ್ಟು ಗಾಢವಾಗಿ ಅವರನ್ನು ತಟ್ಟುವುದಿಲ್ಲ. ಆದರೆ ಮೇಲ್ವರ್ಗ, ಮಧ್ಯಮ ವರ್ಗಗಳು ದೈಹಿಕ ಶ್ರಮ ಹಾಗೂ ದುಡಿಮೆಯಿಂದ ವಿಮುಖಗೊಳ್ಳಲು ಯತ್ನಿಸುತ್ತಿರುವುದರ ಪರಿಣಾಮವಾಗಿ ಹೆಣ್ಣಿನಲ್ಲಿ ಸೌಂದರ್ಯವನ್ನು ಅರಸುತ್ತವೆ ಮತ್ತು ಆರಾಧಿಸುತ್ತವೆ. ಇದು ನಿರೂಪಕ ರಾಮಿಯ ಬಗೆಗೆ ನಕಾರಾತ್ಮಕ ನಿರ್ಣಯಕ್ಕೆ ಬರಲು ಕಾರಣವಾಗಿರಬಹುದು. ರಾಮಿಯ ಸೆರಗು ಜಾರುವ, ಅದನ್ನು ಆಕೆ ಸರಿಪಡಿಸಿಕೊಳ್ಳದ ಸಂದರ್ಭವನ್ನು ಆಕೆಯ ಅಸಹಜ ಗುಣದಂತೆ ನಿರೂಪಕ ಭಾವಿಸುತ್ತಾನೆ. ಆದರೆ ಮಂದಣ್ಣನ ಬಂಧನದಿಂದ ಅತಿಯಾದ ದುಃಖಕ್ಕೆ ಒಳಗಾದ ಆಕೆಗೆ ಸೆರಗು ಜಾರಿರುವುದು, ಅದನ್ನು ಸರಿಪಡಿಸಿಕೊಳ್ಳುವುದು ಮುಖ್ಯವೆನಿಸದೆ ಇರಬಹುದು. ನಿರೂಪಕ ತನಗೆ ದೊರೆತ ಅಲ್ಪ ಮಾಹಿತಿ ಹಾಗೂ ಒಂದೆರಡು ಬಾರಿ ಕಂಡ ತಕ್ಷಣಕ್ಕೆ ರಾಮಿಯ ಒಟ್ಟಾರೆ ವ್ಯಕ್ತಿತ್ವವನ್ನು ಒಂದು ನಿರ್ಣಯಕ್ಕೆ ತಂದು ಕೂರಿಸುವುದು ಸಮಂಜಸ ಎನಿಸುವುದಿಲ್ಲ. ಇದು ಒಂದು ಹೆಣ್ಣಿನ ಬಗೆಗಿನ ಸಮಗ್ರ ದೃಷ್ಟಿಕೋನವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮೇಲ್ವರ್ಗದ ಪುರುಷ ಸಮಾಜ ಹೆಣ್ಣನ್ನು ವ್ಯಾಖ್ಯಾನಿಸಲು ರೂಪಿಸಿಕೊಂಡಿರುವ ದೇಹಕೇಂದ್ರಿತ ದೃಷ್ಟಿಯ ಅಪಕಲ್ಪನೆಗಳನ್ನು ಸ್ತ್ರೀವಾದಿಗಳು, ಸ್ತ್ರೀಪರವಾದ ಚಿಂತಕರು ಗುರುತಿಸಿ ಪ್ರಶ್ನಿಸಬೇಕಾಗಿದೆ ಎಂಬುದು ತೇಜಸ್ವಿ ಕಥನದ ಅಭಿಪ್ರಾಯವಾಗಿದೆ.

ಅವನತಿ ಕಥೆಯಲ್ಲಿ ಇತ್ತಾವರದ ಸುಬ್ಬಯ್ಯನ ಹೆಂಡತಿ "ಗೌರಿ ಒಂದು ಆಶ್ಚರ್ಯಾದ್ಭುತವಾಗಿದ್ದಳು. ಸೌಂದರ್ಯದಲ್ಲಿ ಸಕಲ ಶಿಲ್ಪ ಶಾಸ್ತ್ರ ಲಕ್ಷಣಗಳ ಅವತಾರದಂತೆ ಕಾಣುತ್ತಿದ್ದಳು. ಮೂಗು ಕಣ್ಣು ಹುಬ್ಬು ಕೂದಲು ತುಟಿ ರೇಖೆಗಳು ಕತ್ತು ಸ್ತನಗಳು ನಡು ಕಾಲು

ಎಲ್ಲ ಇನ್ನೇನು ಮಾಡಿಯೂ ಅವಳ ಸೌಂದರ್ಯವನ್ನು ಹೆಚ್ಚಿಸದಷ್ಟು ಅದ್ಭುತ ಸಾಮರಸ್ಯದಲ್ಲಿ ಮಿಳಿತವಾಗಿದ್ದವು. ಅದಕ್ಕಿಂತ ಮಿಗಿಲಾಗಿ ಆಕೆಯ ನಡೆ, ಚರ್ಯೆ, ನಿಲ್ಲುವ ನಡೆಯುವ ಭಂಗಿ ಇವುಗಳ ಸೌಂದರ್ಯವೇ ಛಂದೋಬದ್ಧವಾದಂತೆ ಕಾಣುತ್ತಿತ್ತು. ಕುಳಿತರೆ, ನಿಂತರೆ, ನಕ್ಕರೆ ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರವಾದಂತಾಗುತ್ತಿತ್ತು. "(ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ, ೨೦೦೯, ಪುಟ-೨೫) ಹೀಗೆ ಗೌರಿಯ ಸೌಂದರ್ಯವನ್ನು ಅರಾಧಿಸುವ ನಿರೂಪಕ ಇಲ್ಲಿ ತೋರುವ ಆದರ ಮತ್ತು ಕಾಳಜಿಯನ್ನು ರಾಮಿಯ ಸಂದರ್ಭದಲ್ಲಿ ತೋರುವುದಿಲ್ಲ. ಇದು ಮೇಲ್ವರ್ಗಗಳ ಸೌಂದರ್ಯಾರಾಧನೆಯ ಪರಿಣಾಮವೇ ಆಗಿದೆ. ಆದಾಗ್ಯೂ ಇಲ್ಲೂ ಇರುವುದು ದೇಹಕೇಂದ್ರಿತ ದೃಷ್ಟಿಕೋನವೇ ಆಗಿದೆ. ಗೌರಿಯ ಸೌಂದರ್ಯ ನಾಶಪಡಿಸುವುದನ್ನು ಸ್ತ್ರೀ ಶೋಷಣೆ ಮತ್ತು ಪುರುಷಾಧಿಕಾರದ ನೆಲೆಯಿಂದ ಚರ್ಚಿಸಬಹುದು. ಸೌಂದರ್ಯದ ಬಗ್ಗೆ ಅರಿವಿರುವ, ಸಮತೂಕದ ಸುಂದರ ಕಲ್ಲಿನ ಶಿಲ್ಪಗಳನ್ನು ಕಡೆದ ಅನುಭವವಿರುವ ಸೂರಾಚಾರಿ, ಗೌರಿಯ ಸೌಂದರ್ಯದ ಸಂಕೇತವಾದ ಅವಳ ಮೊಲೆಯ ನರದಲ್ಲಿ ದೋಷವನ್ನು ಹುಡುಕುವುದು, ಆ ಮೂಲಕ ಗೌರಿಯ ಸೌಂದರ್ಯವನ್ನು ನಾಶ ಮಾಡಲು ಯತ್ನಿಸುವ ಆತನ ನಡೆಯ ಬಗ್ಗೆ ಹಲವು ಸಂಶಯಗಳು ಮೂಡುತ್ತವೆ. ಅಪ್ರತಿಮ ಸುಂದರಿಯಾದ ಸುಬ್ಬಯ್ಯನ ಹೆಂಡತಿ ಗೌರಿಯ ಮುಂದೆ ಜೋಲು ಮೊಲೆಯ, ಗುಳಿಗಣ್ಣಿನ, ಕೈಗೆ ಒಂದು ಖಡ್ಗವನ್ನೋ ತ್ರಿಶೂಲವನ್ನೋ ಕೊಟ್ಟರೆ ಮಾರಿಗೊಂಬೆಯಂತೆಯೇ ಕಾಣುವ, ಕೃಷಗೊಂಡಿರುವ ತನ್ನ ಪತ್ನಿ ಯಶೋದೆಯನ್ನು ಕಲ್ಪಿಸಿಕೊಂಡು ತನಗೆ ಸಿಗದ ಸುಖ ಸುಬ್ಬಯ್ಯನಿಗೆ ಸಿಕ್ಕಿರುವ ಬಗ್ಗೆ ಅಸೂಯೆ ಪಟ್ಟಿರಬಹುದು. ಪುರುಷಪ್ರಧಾನ ಸಮಾಜ ಪರಸ್ಪರ ತಮ್ಮ ನಡುವಿನ ದ್ವೇಷ ಅಸೂಯೆಗಳಿಗೂ ಸಹಾ ಹೆಣ್ಣನ್ನೇ ಗುರಿಯಾಗಿಸಿ ಶಿಕ್ಷಿಸುವುದು ಅವನ ಮತ್ತೊಂದು ವಿಕಾರವೇ ಆಗಿದೆ.

ಪರಂಪರೆಯಲ್ಲಿನ ಯುದ್ಧಗಳು, ಹತ್ಯಾಕಾಂಡಗಳು ಹೆಣ್ಣನ್ನೇ ಗುರಿಯಾಗಿಸಿಕೊಂಡು ನಡೆದಿವೆ. ಪುರುಷರು ತಮ್ಮ ನಡುವಿನ ದ್ವೇಷ ಅಸೂಯೆಗಳನ್ನು ಈಡೇರಿಸಿಕೊಳ್ಳಲು, ಅಧಿಕಾರ ಕೇಂದ್ರಗಳನ್ನು ಹಿಡಿಯಲು ಹೆಣ್ಣನ್ನೇ ಹಿಂಸಿಸಿವೆ ಮತ್ತು ನಿರ್ನಾಮ ಮಾಡಿವೆ. ಔಷಧೋಪಚಾರದ ಮುಖವಾಡವುಳ್ಳ ಸೂರಾಚಾರಿ ಸುಬ್ಬಯ್ಯನ ತಂದೆಯ ಕಣ್ಣಿನ ದೋಷಕ್ಕೆ ಗೌರಿಯ ಎದೆ ಹಾಲನ್ನು ಔಷಧಿಯಾಗಿ ಪರಿಗಣಿಸುತ್ತಾನೆ. ಆದರೆ ಆ ಔಷಧಿಯ ಮೂಲವನ್ನೇ ಮಕ್ಕಳು ಸಾಯಲು ಕಾರಣವಾಗಿಸಿ, ಗೌರಿಯ ಹೆಣ್ತನದ ಸೌಂದರ್ಯವೇ ಆಗಿರುವ ಮೊಲೆಯ ನೀಲಿ ನರದಲ್ಲಿ ದೋಷವನ್ನು ಹುಡುಕಿ ಸುಡುವ, ಆ ಮೂಲಕ ಗೌರಿಗೆ ಸಂಬಂಧಪಟ್ಟಂತೆ ಸುಬ್ಬಯ್ಯನ ಬಗೆಗಿನ ಅಸೂಯೆ ಮತ್ತು ಯಶೋದೆಯ ಬಗೆಗಿನ ಅಸಹನೆಯನ್ನು ಸೂರಾಚಾರಿ ಏಕಕಾಲದಲ್ಲಿ ಈಡೇರಿಸಿಕೊಳ್ಳುವುದು ಅಸಹ್ಯವನ್ನು ಉಂಟುಮಾಡುತ್ತದೆ. ವ್ಯಂಗ್ಯವೆಂದರೆ

ಇದನ್ನೆಲ್ಲಾ ಸಂತೋಷದಿಂದ ಒಪ್ಪುವ. ಅದನ್ನೇ ಸತ್ಯವೆಂದು ಪ್ರಚಾರ ಮಾಡುವವನು ಗೌರಿಯ ಗಂಡ ಸುಬ್ಬಯ್ಯ. ಗಂಡು ತನ್ನ ಮೇಲಿನ ಆರೋಪಗಳನ್ನು ಎದುರಿಸಲಾಗದೆ ಅವೆಲ್ಲವನ್ನೂ ಹೆಣ್ಣಿನ ಮೇಲೆ ಬಲವಂತವಾಗಿ ಹೇರಿ ಪಲಾಯನ ಮಾಡಲು ಯತ್ನಿಸುತ್ತಾನೆ. ಇಲ್ಲಿಯೂ ಅಷ್ಟೆ ಸುಬ್ಬಯ್ಯ ಮಕ್ಕಳು ಹುಟ್ಟಿದ ಕೆಲವೇ ವಾರಗಳಲ್ಲಿ ಸಾಯುವುದಕ್ಕೆ ತಾನು ಕಾರಣವಾಗುವ ಅಪಾಯದಿಂದ ಪಾರಾಗಲು ಗೌರಿಯನ್ನು ಆರೋಪಿಯನ್ನಾಗಿ ಮಾಡಿ ಪಲಾಯನ ಮಾಡುತ್ತಾನೆ. ಇಲ್ಲೆಲ್ಲ ವೈಯಕ್ತಿಕವಾದ ಮತ್ತು ಸಮುದಾಯದ ನೆಲೆಯಲ್ಲಿ ಪ್ರತಿಯೊಂದು ಸೋಲು ಅಥವಾ ಅವಘಡಕ್ಕೂ ಹೆಣ್ಣೇ ಕಾರಣವೆಂದು ಅವಳನ್ನು ಸದಾ ಆರೋಪಿ-ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ಅವಳನ್ನು ಶಿಕ್ಷಿಸುವ ಸಮಾಜದ ಗಂಡು ಧೋರಣೆಯನ್ನು ತೇಜಸ್ವಿ ಕಥನ ನಮ್ಮ ಅರಿವಿಗೆ ತರುತ್ತದೆ.

ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ಕಾಳೇಗೌಡ ನಾಗಮ್ಮನು ಮಲೆಯಾಳಿ ಪಂಡಿತನ ಜೊತೆ ಓಡಿಹೋದ ಬಗ್ಗೆ ನ್ಯಾಯ, ನಿಷ್ಠೆ ಮುಖವಾಡ ಹಾಕಿಕೊಂಡು ಪಂಚಾಯಿತಿ ಮಾಡಬೇಕೆಂದು, ಇಲ್ಲದಿದ್ದರೆ ಆಕೆಯನ್ನು ಮನೆಯೊಳಗೆ ಕರೆದುಕೊಳ್ಳಲು ಸಾಧ್ಯವಿಲ್ಲವೆಂದು ಹೇಳುವುದು ಆಂತರ್ಯದಲ್ಲಿ ಇದೇ ರೀತಿಯ ಹುನ್ನಾರವನ್ನು ಹೊಂದಿದೆ. ಮಕ್ಕಳಾಗಲಿಲ್ಲ ಎಂದು ಎರಡನೇ ಮದುವೆ ಆಗಬೇಕೆಂದಿದ್ದ ಕಾಳೆಗೌಡ "ತನ್ನ ಮೊದಲ ಹೆಂಡತಿ ಗಂಡನನ್ನು ಬಿಟ್ಟು ಓಡಿಹೋದವಳು ಎಂದಾದರೆ ಮತ್ತೆ ಎರಡನೇ ಮದುವೆಗೆ ಯಾರು ಹೆಣ್ಣುಕೊಡಲು ಒಪ್ಪುತ್ತಾರೆ! ಈಗ ಬಹಿರಂಗ ವಿಚಾರಣೆ ಆಗದೆ ಹೆಂಡತಿಯನ್ನು ಮನೆಗೆ ಕರೆದುಕೊಂಡರೆ ಇವನಲ್ಲೇ ಏನೋ ಐಬಿದೆ ಎಂದು ಶಂಕಿಸುತ್ತಾರೆ! ಬಹಿರಂಗ ವಿಚಾರಣೆ ನಡೆದು ಅವಳು ನಂಬೂದರಿ ಜೊತೆ ಓಡಿಹೋದುದಕ್ಕೆ ಅವನ ಮೋಡಿಯೋ ಅಥವಾ ನಾಗಮ್ಮನನ್ನು ಮೆಟ್ಟಿಕೊಂಡಿರುವ ಪಿಶಾಚಿಯೋ ಕಾರಣ ಎಂದು ಸಾರ್ವಜನಿಕವಾಗಿ ತೀರ್ಮಾನ ಆದರೆ ಮಾತ್ರ ತಾನು ಅಪವಾದದಿಂದ ಮುಕ್ತನಾಗಬಹುದು" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೪೩) ಎಂಬುದೇ ಅವನು ಬಹಿರಂಗವಾಗಿ ತೋರುವ ನ್ಯಾಯ ನಿಷ್ಠೆಯ ಹಿಂದಿದ್ದ ಅಂತರಂಗವಾಗಿತ್ತು. ಹೀಗೆ ಅಹಂನೊಳಗೆ ಮುಳುಗಿ, ವರ್ಗ-ಲಿಂಗ ತಾರತಮ್ಯ ದೃಷ್ಟಿಕೋನದಿಂದ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳೊಂದಿಗೆ ಅಂತರ ಕಾಯ್ದುಕೊಂಡು ಗ್ರಹಿಸುತ್ತಿರುವ ನಿರೂಪಕನಿಗೆ ವಿಜ್ಞಾನಿ ಕರ್ವಾಲೋ 'ಕಣ್ಣು ತೆರೆದು ನೋಡುವ' ಹೊಸ ನೋಟಕ್ರಮದ ಅಗತ್ಯವನ್ನು ಮನಗಾಣಿಸುತ್ತಾನೆ.

ಹೆಣ್ಣಿನ ಸಹನೆ, ಮೌನ, ಸಹಿಸುವ ಗುಣಗಳಿಗೆ ಅಪವಾದವೆಂಬಂತೆ ಕಿರಗೂರಿನ ಗಯ್ಯಾಳಿಗಳು ಕೃತಿ ಮೂಡಿಬಂದಿದೆ. ೧೯೯೧ರಲ್ಲಿ ಪ್ರಕಟವಾದ ಕಿರಗೂರಿನ ಗಯ್ಯಾಳಿಗಳು ಕಥಾ ಸಂಕಲನವು ಕಿರಗೂರಿನ ಗಯ್ಯಾಳಿಗಳು, ಕೃಷ್ಣೇಗೌಡನ ಆನೆ, ಮಾಯಾಮೃಗ ಮತ್ತು

ರಹಸ್ಯ ವಿಶ್ವ ಎಂಬ ನಾಲ್ಕು ಕಥೆಗಳ ಸಂಕಲನ. ಮೊದಲನೆಯ ಕಥೆಯಾದ ಕಿರಗೂರಿನ ಗಯ್ಯಾಳಿಗಳು ಸ್ತ್ರೀ ವಾದಿಗಳಿಂದ ತುಂಬು ಪ್ರಶಂಸೆ ಪಡೆದಿದೆ. "ತಮ್ಮ ಆತ್ಮ ಗೌರವಕ್ಕಾಗಿ ಅವಿರತ ಹೋರಾಡುತ್ತಿರುವ ಎಲ್ಲಾ ಮಹಿಳೆಯರಿಗೆ" (ಕಿರಗೂರಿನ ಗಯ್ಯಾಳಿಗಳು ಕಥಾ ಸಂಕಲನದ ಅರ್ಪಣೆ) ಎಂದು ತೇಜಸ್ವಿಯವರು ಈ ಕೃತಿಯನ್ನು ಅರ್ಪಿಸುತ್ತಾರಾದರೂ ತಾವು ಕೃತಿ ರಚನೆಯ ಸಂದರ್ಭದಲ್ಲಿ ಅಂತಹ ಯಾವುದೇ ಸ್ತ್ರೀವಾದಿ ತಾತ್ವಿಕತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯಲಿಲ್ಲವೆಂದು ಒಂದು ಚರ್ಚೆಯ ಸಂದರ್ಭದಲ್ಲಿ 'ಟಿ.ಎನ್.ಸೀತಾರಾಂ' ರವರು ಕೇಳುವ ಪ್ರಶ್ನೆಗೆ ಉತ್ತರಿಸಿದ್ದಾರೆ. "ಕಿರಗೂರಿನ ಗಯ್ಯಾಳಿಗಳು ಮಹಿಳೆಯರ ದೌರ್ಜನ್ಯಗಳ ಬಗ್ಗೆ ಮಾತನಾಡಬೇಕೆನ್ನೋ ಉದ್ದೇಶದಿಂದ ಬರೆದಿದ್ದಲ್ಲ ಕಣ್ರೀ ಅದು. ನನಗೆ ಇಷ್ಟ ಬಂದಿರೋದು ಬರೆದಿರೋದು ಅಷ್ಟೇನೆ. ಮಹಿಳೆಯರ ದೌರ್ಜನ್ಯ, ಮಹಿಳೆಯರ ಮೇಲಾಗುವ ದೌರ್ಜನ್ಯದ ಬಗ್ಗೆ ಅದರಲ್ಲಿ ವಿವರಣೆ ಇದ್ರೆ ಅದು ಆಟೋಮ್ಯಾಟಿಕ್ಕಾಗಿ ಆಗಿರೋದು ಅಷ್ಟೇ ಹೊರತು ನಾನು ಅದನ್ನ ಒಂದು ಆಂಧೋಲನವಾಗಿ ಗ್ರಹಿಸಿ ಬರೆದಂಥ ಕಥೆಯಲ್ಲ. ನಾನು ಯಾವುದನ್ನೂ ಆಂಧೋಲನವಾಗಿ ಗ್ರಹಿಸಿ ಅದಕ್ಕೆ ಒಂದು ಎಕ್ಸ್‌ಪ್ಲನೇಶನ್ ಆಗಿ ಕಥೆಗಳನ್ನು ಬರೆಯೋದೇ ಇಲ್ಲ." (ತೇಜಸ್ವಿ ಲೋಕ, ೨೦೦೭, ಪುಟ-೧೩೭) ಎನ್ನುತ್ತಾರೆ. ತೇಜಸ್ವಿ ಹೀಗೆ ಹೇಳಿದ್ದಾಗ್ಯೂ ಈ ಕಥೆ ಸ್ತ್ರೀವಾದಿ ಚಳುವಳಿಯು ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿದ್ದ ತೊಂಬತ್ತರ ದಶಕದಲ್ಲಿ ಸಾಕಷ್ಟು ಜನಪ್ರಿಯತೆಯನ್ನು ಪಡೆದು ಹಿಂದಿ, ಇಂಗ್ಲೀಷ್, ಮಲಯಾಳಂ ಭಾಷೆಗಳಿಗೆಲ್ಲ ಅನುವಾದವಾಗಿದೆ. ಸ್ವತಃ ಲೇಖಕರಾದ ತೇಜಸ್ವಿ ಒಪ್ಪದಿದ್ದರೆ ಏನಂತೆ ಸ್ತ್ರೀವಾದದ ಗಾಳಿ ಬೀಸಿಯೇ ಅವರು ಈ ಕಥೆ ಬರೆದಿದ್ದಾರೆ ಎಂಬುದು ಓದುಗರಾದ ನಮಗೆ ತಿಳಿದೇ ತಿಳಿಯುತ್ತದೆ.

ತೇಜಸ್ವಿ ಕಥನದಲ್ಲಿ ಸಹಜವೆಂಬಂತೆ ಬರುವ ನಿರಂತರವಾಗಿ ಸುರಿಯುವ ಮಳೆ, ಎಲ್ಲವನ್ನೂ, ಎಲ್ಲರನ್ನೂ ಕೊಚ್ಚಿ ಹಾಕುವ 'ಪ್ರವಾಹ', ಚಿದಂಬರ ರಹಸ್ಯದ 'ಬೆಂಕಿ' ಇವುಗಳಂತೆ ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ 'ಬಿರುಗಾಳಿ' ಬರುತ್ತದೆ. ಮೂರು ಹಗಲು ಮೂರು ರಾತ್ರಿ ಎಡಬಿಡದೆ ಬೀಸುವ ಬಿರುಗಾಳಿಯು ಅಂತಿಮವಾಗಿ ನಾನಾ ಅವಾಂತರಗಳನ್ನು ಸೃಷ್ಟಿಸಿ ಕಿರಗೂರಿನ ಗಯ್ಯಾಳಿಯರಪುರುಷರ ವಿರುದ್ಧದ ಹೋರಾಟಕ್ಕೆ ಕಾರಣವಾಗುತ್ತದೆ. ಸ್ತ್ರೀ ಶಕ್ತಿಯ ಅನಂತ ಸಾಧ್ಯತೆಗಳನ್ನು ಬಿಡಿಸಿಡುವುದರ ಜೊತೆಗೆ, ಲಿಂಗಾಧಾರಿತ ಮನುಷ್ಯ ಸಂಬಂಧಗಳ ಆಳಕ್ಕಿಳಿದು ಈ ಅಸಮಾನ ವ್ಯವಸ್ಥೆಯ ವಿರುದ್ಧ ಮಹಿಳೆಯರು ಒಟ್ಟಾಗಿ ಬಂಡೇಳಬೇಕಾದ ಅನಿವಾರ್ಯತೆಯನ್ನು ಕಥೆ ಆ ಮೂಲಕ ಕಟ್ಟಿಕೊಡುತ್ತದೆ. ಬಿರುಗಾಳಿ ಮತ್ತು ಕಿರುಗೂರಿನ ಗಯ್ಯಾಳಿಯರ ಕ್ರಾಂತಿಯು ಎರಡೂ ಒಂದೇ ಏನೋ ಎನ್ನುವಂತೆ ಅದು ಆರಂಭಗೊಂಡು,

ಪುರುಷಪ್ರಧಾನ ಸಮಾಜಕ್ಕೆ ಸಂಕೇತವೆಂಬಂತೆ ಶತಮಾನಗಳಿಂದ ಬೆಳೆದು ನಿಂತಿದ್ದ ಬೃಹದಾಕಾರದ ಹೆಬ್ಬಲಸಿನ ಮರವನ್ನು ಉರುಳಿಸುತ್ತದೆ.

ಹೀಗೆ ಪುರುಷಪ್ರಧಾನ ಸಮಾಜದ ಸಂಕೇತವೆಂಬಂತಿದ್ದ ಹೆಬ್ಬಲಸಿನ "ಮರದ ಮೇಲೆ ಗಡ್ಡ ಮೀಸೆಗಳು ಬೆಳೆದಂತೆ ನಾನಾತರದ ಬಂದಳಿಕೆಗಳು ಬೆಳೆದುಕೊಂಡಿದ್ದವು. ಕವಲು ಕೊಂಬೆಗಳ ಬಿರುಕಿನಿಂದೆಲ್ಲ ಬಸುರಿಮರ ಅರಳಿಮರದ ಸಸಿಗಳು ಹುಟ್ಟಿ ಅಲ್ಲಿಂದ ನೆಲದವರೆಗೂ ಬೇರು ಕಳುಹಿಸಿದ್ದವು ಅಲ್ಲಿಂದ ಅನೇಕ ತರದ ಎಲೆಗಳನ್ನು ನೋಡಿದರೆ ಅದನ್ನು ಯಾವ ಜಾತಿ ಮರ ಎಂದು ನಿರ್ಧರಿಸುವುದೇ ಕಷ್ಟವಾಗುತ್ತಿತ್ತು. ಗಾಳಿ ಮಳೆಗಳನ್ನು ಅನೇಕ ಶತಮಾನಗಳಿಂದ ಪ್ರತಿರೋಧಿಸಿಕೊಂಡೇ ಬೆಳೆದಿದ್ದ ಆ ಮರದ ಕಾಂಡ ತಿರುಪಿ ತಿರುಪಿಕೊಂಡು ಸ್ಥೂತರ ಕಾಣುತಿತ್ತು. ಅಂಥ ಮರಗಳನ್ನು ಕಡಿಯುವುದಾಗಲೀ ಕುಯ್ಯುವುದಾಗಲಿ ಭಾರಿ ಕಷ್ಟ." (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೦೪) ಹೀಗೆ ಶತಶತಮಾನಗಳಿಂದಲೂ ಅನೇಕ ತಂತ್ರ ಕುತಂತ್ರಗಳನ್ನು ಮೈಗೂಡಿಸಿಕೊಂಡು, ದರ್ಪ ಅಹಂಕಾರದಿಂದ ಮೆರೆಯುತ್ತಿದ್ದ ಪುರುಷಪ್ರಧಾನ ವ್ಯವಸ್ಥೆಯನ್ನು ಕಿರಗೂರಿನ ಮಹಿಳೆಯರು ಹೊಡೆದುರುಳಿಸುತ್ತಾರೆ. ಉರುಳಿದಾಗಲೇ ತಮ್ಮ ಗಂಡಂದಿರ ದೌರ್ಬಲ್ಯವೆಂಥದ್ದು, ಅವರ ದೆಸೆಯಿಂದ ನಾವು ಹೇಗೆಲ್ಲಾ ಶೋಷಣೆಗೆ ಒಳಗಾಗುತ್ತಿದ್ದೇವೆ ಮತ್ತು ಸ್ತ್ರೀಯರಾದ ನಮ್ಮ ಶಕ್ತಿಯೆಂಥದ್ದು ಎನ್ನುವುದರ ಅರಿವು ಕಿರಗೂರಿನ ಹೆಣ್ಣುಮಕ್ಕಳಿಗೆ ಆಗುತ್ತದೆ. ಪುರುಷಪ್ರಧಾನ ಸಮಾಜ ರೂಪಿಸಿದ ಕಾನೂನು ಸಂಪ್ರದಾಯಗಳ ಸುಳಿಗಳಲ್ಲಿ ತಾವು ವೃಥಾ ಸಿಕ್ಕಿ ನರಳುತ್ತಿದ್ದೇವೆ ಎನ್ನುವ ಸಂಗತಿ ಅರಿವಾಗಿ ಕಿರಗೂರಿನ ಮಹಿಳೆಯರೆಲ್ಲಾ ದಾನಮ್ಮನ ನೇತೃತ್ವದಲ್ಲಿ ಒಂದುಗೂಡಿ ಪಂಚಾಯಿತಿ ವಿಚಾರಣೆಯ ಸಂದರ್ಭದಲ್ಲಿ ನಡೆಸುವ ಹಿಂಸಾತ್ಮಕ ದಾಳಿ ಪುರುಷ ನಿರ್ಮಿತ ವ್ಯವಸ್ಥೆಯ ವಿರುದ್ಧದ ಕ್ರಾಂತಿಯಾಗಿಯೇ ಕಾಣುತ್ತದೆ.

ಇಲ್ಲಿ ಕಿರಗೂರಿನ ಗಂಡಸರು ಒಂದು ರಾತ್ರಿ ಅನುಭವಿಸಬೇಕಾಗಿ ಬಂದ ಯಾತನಾಮಯ ನರಕವನ್ನು ಹೆಣ್ಣು ಶತಮಾನಗಳಿಂದಲೂ ಅನುಭವಿಸುತ್ತಾ ಬಂದಿದ್ದಾಳೆ. ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯುವ, ಲಿಂಗ ಅಸಮಾನತೆಯ ವ್ಯವಸ್ಥೆಯಿಂದ ಬಿಡುಗಡೆಗೊಳ್ಳುವ ರೀತಿಯಲ್ಲಿ ಕಿರಗೂರಿನ ಮಹಿಳೆಯರು ದಾನಮ್ಮನ ನೇತೃತ್ವದಲ್ಲಿ ಒಟ್ಟಾಗಿ ಪುರುಷ ಆಧಿಪತ್ಯವನ್ನು ಪ್ರತಿಪಾದಿಸುವ, ಆ ಮೂಲಕ ತನ್ನ ಆಂತರ್ಯದಲ್ಲಿರುವ ಪುರುಷ ಹಿತವನ್ನು ಪ್ರತಿಸ್ಥಾಪಿಸುವ ಈ ನೆಲದ ಪಂಚಾಯಿತಿ ನ್ಯಾಯ ವ್ಯವಸ್ಥೆಯನ್ನು ಬಿರುಗಾಳಿಯಂತೆ ದಾಳಿಮಾಡಿ ಬರಕಾಸ್ತುಗೊಳಿಸುತ್ತಾರೆ. ಸಕಾರಣವಿಲ್ಲದೇ ಶತಶತಮಾನಗಳಿಂದ ಅನುಭವಿಸಬೇಕಾಗಿ ಬಂದ ದಬ್ಬಾಳಿಕೆಯ ಸಂಕೋಲೆಗಳಿಂದ ಬಿಡುಗಡೆಗೊಳಿಸುವ ಸ್ತ್ರೀ ಸಮುದಾಯದ ಪ್ರತಿನಿಧಿಗಳಾಗಿ ದಾನಮ್ಮ ಮತ್ತು ಸಂಗಡಿಗರು ಇಲ್ಲಿ ಗುರುತಿಸಲ್ಪಡುತ್ತಾರೆ.

ಹೆಣ್ಣಿಗೆ ಸಹನೆ, ಸೌಮ್ಯ ಗುಣಗಳನ್ನು ಆರೋಪಿಸಿ, ಆಕೆಯನ್ನು ಅಸಹಾಯಕ ಸ್ಥಿತಿಯಲ್ಲಿಟ್ಟು ಶೋಷಿಸುತ್ತಾ, ಹೆಬ್ಬಲಸಿನ ಮರದಂತೆ ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚಿ ಗಟ್ಟಿಗೊಂಡಿರುವ ವ್ಯವಸ್ಥೆಗೆ ಯಾರೂ ನಿರೀಕ್ಷಿಸದ ರೀತಿ ದಾನಮ್ಮ ಮತ್ತು ಸಂಗಡಿಗರು ಬಿರುಗಾಳಿಯಂತೆ ಅಪ್ಪಳಿಸಿ ತಮಗೆ ಆರೋಪಿಸಿರುವ ಗುಣಗಳನ್ನು ಧಿಕ್ಕರಿಸುತ್ತಾರೆ. ಪಂಚಾಯಿತಿಯಲ್ಲಿ "ಸೊಂಟ ಬಿದ್ದ ಗಂಡಸತ್ರ ಸಂಸಾರ ಮಾಡೋದೇನ್ನ?" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೪೫) ಎಂದು ದಾನಮ್ಮ ಕೇಳುವ ಪ್ರಶ್ನೆ ಹೆಣ್ಣನ್ನು ಸಮಾನತೆಯಿಂದ ಕಾಣದ, ಆಕೆಯ ಶ್ರಮವನ್ನು ಗೌರವಿಸದ ಇಡೀ ಪುರುಷ ಪ್ರಾಧಾನ್ಯ ವ್ಯವಸ್ಥೆಯಕುರಿತಪ್ರಶ್ನೆಯೇ ಆಗಿದೆ. ಇವರ ಜಾತಿಗಳು, ಆಚಾರಗಳು, ಮದುವೆಗಳು, ಸಂಪ್ರದಾಯಗಳು, ಪಂಚಾಯಿತಿಗಳು ಪ್ರತಿಯೊಂದು ಮಹಿಳೆಯರಿಗೆ ಹಿಂಸೆ ನೀಡುವ ಗಂಡಸರ ನೀಚತಂತ್ರಗಳಾಗಿದ್ದು, ಏನೆಲ್ಲಾ ಅನಾಚಾರ ಮಾಡಿಯೂ ಅವೆಲ್ಲವನ್ನೂ ತಂದು ಮಹಿಳೆಯರ ತಲೆಗೆ ಕಟ್ಟುವ ಮೂಲಕ, ಎಲ್ಲಕ್ಕೂ ಮಹಿಳೆಯನ್ನು ಆರೋಪಿಯನ್ನಾಗಿಸುವ, ಶಿಕ್ಷಿಸುವ ಗಂಡಿನ ಕುತಂತ್ರಗಳನ್ನು ಪಂಚಾಯಿತಿಯಲ್ಲಿ ದಾನಮ್ಮ ಪ್ರಶ್ನಿಸುತ್ತಾಳೆ. ಕಿರಗೂರಿನ ಹೆಣ್ಣುಮಕ್ಕಳಲ್ಲಿ ಬಹುಕಾಲದಿಂದ ಸುಪ್ತವಾಗಿದ್ದ, ಹೆಪ್ಪುಗಟ್ಟಿದ್ದ ಅಸಹನೆ, ಸಿಟ್ಟು, ಆಕ್ರೋಶ, ಕೋಪ ಏಕಕಾಲಕ್ಕೆ ಬಿರುಗಾಳಿಯಂತೆ ಹೊರಬಂದು ಪುರುಷ ಯಾಜಮಾನ್ಯದ ಸಾಮ್ರಾಜ್ಯವನ್ನು ನೆಲಸಮಗೊಳಿಸುತ್ತದೆ. ಗೌರಿ ಮತ್ತು ನಾಗಮ್ಮನಂತೆ ಅಸ್ತಿತ್ವವನ್ನೇ ಕಳೆದುಕೊಂಡು ನಿಷ್ಕ್ರಿಯಗೊಂಡಿದ್ದ ಮಹಿಳಾ ಸಮಾಜವನ್ನು ದಾನಮ್ಮ ಎಚ್ಚರಿಸುವ ಮೂಲಕ ಇಲ್ಲಿ ಬದಲಾವಣೆಗೆ ಬಿರುಗಾಳಿಯ ವೇಗವನ್ನು ನೀಡುತ್ತಾಳೆ. ಇಲ್ಲಿ ದಾನಮ್ಮನ ಬಿರುಗಾಳಿಯ ನಡೆಗಳಲ್ಲಿ ನಾಗಮ್ಮನ ಸೌಮ್ಯ ಪ್ರತಿಭಟನೆ ಓದುಗರ ಗಮನಕ್ಕೆ ಬರುವುದಿಲ್ಲ. ಆದರೆ ನಾಗಮ್ಮ ಜಾತಿಯ ಸಂಕೋಲೆಗಳನ್ನು ಅದರ ಹಿಡಿತಗಳನ್ನು ಮೀರಿ ಮಲೆಯಾಳಿ ಪಂಡಿತನೊಂದಿಗೆ ಹೋಗುವ ನಿರ್ಧಾರ ಸಾಮನ್ಯವಾದುದಲ್ಲ. ಈ ನಿಲುವೂ ಜಾತಿ ಕೂಪದ ಪುರುಷ ಸಮಾಜಕ್ಕೆ ತೋರುವ ಪ್ರತಿಭಟನೆಯೇ ಆಗಿದೆ. ಇಡೀ ಕಿರಗೂರಿನ ಬದಲಾವಣೆಗೆ, ಸ್ತ್ರೀಯರ ಕ್ರಾಂತಿಗೆ ಕಾರಣವಾಗುವುದೇ ನಾಗಮ್ಮನ ಈ ಪ್ರಕರಣ. ಇಲ್ಲಿ ದಾನಮ್ಮನ ಹಲವಾರು ಆಲೋಚನೆಗಳನ್ನು ಪ್ರಾಯೋಗಿಕವಾಗಿ ಜಾರಿಗೆ ತರುವುದು ನಾಗಮ್ಮನೇ.

ದಾನಮ್ಮನಂತೆ ಬಿಡುಗಡೆಗೆ ಪ್ರಯತ್ನಿಸುವ ಸ್ತ್ರೀ ಸಮುದಾಯವನ್ನು ಸದಾ ದಮನಕಾರಿ ನೆಲೆಯಲ್ಲಿಯೇ ಸಾಗಿಬಂದ ಪುರುಷಸಮಾಜ ಹೆಣ್ಣಿನ ಅಸ್ಥಿತ್ವ ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಲು, ಹಣಿಯಲು ಯತ್ನಿಸುವುದು ಕಿರಗೂರಿನ ಸಿದ್ಧ ಮತ್ತು ಮಾರನ ಸಂಭಾಷಣೆಯಲ್ಲಿ ವ್ಯಕ್ತವಾಗುತ್ತದೆ. "ಈ ಮೂರು ಕಾಸಿನ ಹೆಂಗಸಿಗೆ ಎಷ್ಟು ಗರ್ವ ನೋಡು!" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೧೪) ಇಲ್ಲಿ ಮಹಿಳೆಯರನ್ನು ಹಿಡಿತದಲ್ಲಿ

ಇಟ್ಟುಕೊಳ್ಳಬೇಕೆಂಬ ಧೋರಣೆ ಈ ಇಬ್ಬರ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಈ ಎಲ್ಲಾ ದಮನಕಾರಿ ತಂತ್ರಗಳಿಗೆ ದಾನಮ್ಮ ಪಂಚಾಯಿತಿಯಲ್ಲಿ "ಬಂಜೆ ಕಟ್ಟಿಕೊಂಡು ಕಾಲಹಾಕಬೇಕಾ" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೪೯) ಎನ್ನುವ ಗ್ರಾಮಸೇವಕ ಶಂಕ್ರಪ್ಪನನ್ನು ಕುರಿತು ಹೇಳುವ ಮಾತುಗಳನ್ನು ಗಮನಿಸಬಹುದು. "ನಿನ್ನಂಗಡೀಲಿ ಸೇಂದಿ ಕುಡಿದು ಓತಿಕ್ಯಾತನಂಗೆ ಆಗಿದ್ದಾವೆ. ಹಿಚ್ಚಿದರೆ ಮುಕ್ಳೀಲಿ ಮೂರು ತೊಲ ಮಾಂಸ ಇಲ್ಲ. ಕುಡಿದು ರಸ್ತೇಲೋ ಚರಂಡೀಲೋ ಬಿದ್ದು ಬಂದ್ರೆ ಮಕ್ಕಳು ಹೆಂಗೋ ಆಗ್ತವೆ? ಮಕ್ಕಳಾಗಲಿಲ್ಲಂತೆ? ಅಮಾಸೆಗೊಂದು ಸಾರಿ ಹುಣ್ಣಿಮೆಗೆ ಒಂದು ಸಾರಿ ಹೆಣ್ತಿ ನೆನಪಾದ್ರೆ ಮಕ್ಕಳಾಗ್ತವಾ? ಥೂ ಬೇವರಿಸಿ. ನೀನು ನಿಜವಾಗ್ಲು ನಿಮ್ಮಪ್ಪಂಗೆ ಹುಟ್ಟಿದ್ರೆ ಹೋಗಿ ಕೇಳ್ಕೊಂಡು ಬಾ ಹ್ಯಾಗೆ ಹುಟ್ಟಿಸ್ದೆ ಅಂತ" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೪೯) ಹೀಗೆ ಸ್ತ್ರೀಯರ ಪ್ರತಿನಿಧಿಯಂತೆ ಮಾತನಾಡುವ ದಾನಮ್ಮ ಒಟ್ಟಾರೆ ಪುರುಷ ಸಮುದಾಯದ ದೌರ್ಬಲ್ಯಗಳನ್ನು ಹೊರಹಾಕುವ ಮೂಲಕ ತಕ್ಕ ಉತ್ತರಗಳನ್ನೇ ನೀಡುತ್ತಾಳೆ. ದಾನಮ್ಮ ಪ್ರಸ್ಥಾಪಿಸುವ 'ರಸ್ತೇಲೋ ಚರಂಡೀಲೋ' ಎಂಬ ಪದಗಳನ್ನು ಮತ್ತಷ್ಟು ವಿಸ್ತರಿಸುವುದಾದರೆ ಇವು ಗಂಡಿನ ಗುಪ್ತ ಸಂಬಂಧಗಳನ್ನು ವ್ಯಭಿಚಾರವನ್ನು ಕುರಿತಾದ ಪ್ರತಿರೋಧ ಹಾಗೂ ಟೀಕೆಯೇ ಆಗಿವೆ. ಹಾಗೆಯೆ ಸೊಂಟ ಉಳುಕಿಸಿಕೊಂಡ ಗಂಡಸರನ್ನು ಕುರಿತು ದಾನಮ್ಮ "ಒಳ್ಳೆ ಮಾತಲ್ಲಿ ಕರಿಯನ ಹತ್ರ ಉಳುಕು ತೆಗೆಸಿಕೊಂತಿರೋ ಇಲ್ಲಾ ನಿಮ್ಮ ಹೆಂಡ್ರು ಸಂತೇಲಿ ಸೀರೆ ಬಿಚ್ಚಿ, ಹೋಗಿ ಬರೋರಿಗೆ ಬಸಿರಾಗಬೇಕೋ ಏಚ್ನೆ ಮಾಡಿ?" (ಕಿರಗೂರಿನ ಗಯ್ಯಾಳಿಗಳು, ೨೦೦೯, ಪುಟ-೫೦) ಎಂಬ ಎಚ್ಚರಿಕೆಯನ್ನೂ ನೀಡುತ್ತಾಳೆ. ಮಹಿಳೆಗೆ ದನಿ ಬಂದರೆ ಏನಾಗಬಹುದು? ಈ ಪ್ರಶ್ನೆಗೆ ಉತ್ತರವೆಂಬಂತೆ ಕಿರಗೂರಿನ ಗಯ್ಯಾಳಿಗಳು ಕಥೆಯ ಈ ಪ್ರಸಂಗಗಳನ್ನು ಗ್ರಹಿಸಬಹುದು.

ಕಿರಗೂರಿನ ಗಯ್ಯಾಳಿಗಳು ಕಥೆ ಸ್ತ್ರೀಯರ ಸುತ್ತ ಹೆಣೆಯಲ್ಪಟ್ಟಿದ್ದು, ಹೆಣ್ಣು ಅಬಲೆ, ಸಹನಶೀಲಳು, ಸಹಿಷ್ಣುತೆಯುಳ್ಳವಳು, ಸೌಮ್ಯಮೂರ್ತಿ, ಪರಂಪರೆಯ ಸನಾತನಿ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವ, ಗಂಡಿನ ಎಲ್ಲಾ ಅನಾಚಾರಗಳನ್ನು, ಅವಗಡಗಳನ್ನು ತನ್ನ ಮೇಲೆ ಹೇರಿಕೊಂಡು ಅವನನ್ನು ರಕ್ಷಿಸುವ ಗುಣವುಳ್ಳವಳು ಹಾಗೂ ಸದಾ ಪುರುಷನ ಅಧೀನದಲ್ಲಿ ಬದುಕುವವಳು ಎಂಬ ಪುರುಷ ಕಲ್ಪಿತ ಹುಸಿ ಸತ್ಯಗಳನ್ನು ಬುಡಮೇಲುಗೊಳಿಸುತ್ತದೆ. ಗಂಡಸಿನ ಬದುಕಲ್ಲಿ ತಂಪಾದ ನೆಮ್ಮದಿಯ ವಾತಾವರಣವನ್ನು ಸೃಷ್ಟಿಸುವ ಹೆಣ್ಣಿಗೆ, ಅದೇ ನೆಮ್ಮದಿಯನ್ನು ಹಾಳು ಮಾಡುವ ಬಿರುಗಾಳಿಯ ವಿನಾಶಕಾರಿ ಶಕ್ತಿಯೂ ಇದೆ ಎಂಬುದನ್ನು ಈ ಕಥೆ ಹೇಳುತ್ತದೆ. ಹೆಣ್ಣಿನ ಸಹನೆ, ಮೌನ, ಸಹಿಷ್ಣುತೆ ಇವೆಲ್ಲಾ ಆಕೆಯ ದೌರ್ಬಲ್ಯಗಳಲ್ಲ ಹಾಗೂ ಪುರುಷಾಧಿಕಾರದ ಸಂಕೇತವೂ ಅಲ್ಲ. ಹೆಣ್ಣು ತನ್ನ ಕೌಟುಂಬಿಕ ಸಮಾಜದಲ್ಲಿ ನೆಮ್ಮದಿಯ ವಾತಾವರಣ ನೆಲೆಗೊಳ್ಳಲು ತಾನೇ ಹೇರಿಕೊಂಡಿರುವ

ಸ್ವಯಂ ನಿಯಂತ್ರಕಗಳು. ಇವು ವೈಯಕ್ತಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಗಂಡಿನ ಬದುಕಿನಲ್ಲಿ ನೆಮ್ಮದಿ ನೆಲೆಗೊಳ್ಳಲು ಕಾರಣವಾಗಿವೆ. ಆದರೆ ಅದೇ ಗುಣಗಳನ್ನು ದೌರ್ಬಲ್ಯಗಳೆಂದು ಭಾವಿಸಿ ದಬ್ಬಾಳಿಕೆ ನಡೆಸಿದರೆ ಬಿರುಗಾಳಿಯಂತೆ ವಿನಾಶಕಾರಿ ಶಕ್ತಿಯಾಗಿ ಪಲ್ಲಟಗೊಳ್ಳುವ ಅಪಾಯವಿದೆ ಎಂಬ ಎಚ್ಚರಿಕೆಯ ಸಂದೇಶವನ್ನು ಪುರುಷ ಪ್ರಧಾನ ಸಮಾಜಕ್ಕೆ ಕಿರಗೂರಿನ ಗಯ್ಯಾಳಿಗಳು ಕಥೆ ನೀಡುತ್ತದೆ.

ತೇಜಸ್ವಿಯರ ಕಥನಗಳಲ್ಲಿ ಸ್ತ್ರೀ ಪಾತ್ರಗಳು ಪುರುಷ ಪಾತ್ರಗಳಷ್ಟು ವಿಜೃಂಭಿಸುವುದಿಲ್ಲ ನಿಜ. ಆದರೆ ಇರುವ ಕೆಲವು ಪಾತ್ರಗಳು ಪುರುಷ ಪ್ರಧಾನ ಸಮಾಜದ ಕಪಿಮುಷ್ಟಿಯಿಂದ ಬಿಡುಗಡೆಗೊಳ್ಳಲು, ಅವನ ಅಹಂಕಾರವನ್ನು ಮುರಿಯಲು ತನ್ನದೇ ಹಾದಿಗಳನ್ನು ಕಂಡುಕೊಳ್ಳುತ್ತವೆ. ಗಂಡಿನ ಆಧಿಪತ್ಯವನ್ನು ಸಾರುವ, ಅಸಹ್ಯವನ್ನುಂಟು ಮಾಡುವ ಕೆಸರೂರಿನ ಜಾತೀಯತೆ, ಮತ ಕಲಹಗಳು, ವ್ಯಭಿಚಾರ, ಭ್ರಷ್ಟಚಾರ, ಮೋಸ, ವಂಚನೆ, ಕುತಂತ್ರಗಳಿಂದ ಕೂಡಿದ ವ್ಯವಸ್ಥೆಯಿಂದ ಅಂತರ್ಧರ್ಮೀಯನಾದ ರಫಿಯನ್ನು ಪ್ರೀತಿಸುವ ಮೂಲಕ ಜಯಂತಿ ಬಿಡುಗಡೆಗೊಳ್ಳುತ್ತಾಳೆ. ಕೃಷ್ಣೇಗೌಡನ ವ್ಯಭಿಚಾರ, ಗುಪ್ತ ಸಂಬಂಧಗಳು, ಕುಟುಂಬದೆಡೆಗಿನ ನಿರ್ಲಕ್ಷ್ಯ ಮುಂತಾದುವುಗಳಿಂದ ರೋಸಿಹೋದ ಆತನ ಪತ್ನಿ ತನ್ನ ಮನೆಯ ಮೇಲೆ ತಾನೆ ಕಲ್ಲುಗಳನ್ನೆಸೆದುಕೊಂಡು ಅವನನ್ನು ಮನೆಯಲ್ಲೇ ಉಳಿಯುವಂತೆ, ಮನೆಯ ಅಥವಾ ಕುಟುಂಬದ ಬಗ್ಗೆ ಚಿಂತಿಸುವಂತೆ ಮಾಡುತ್ತಾಳೆ. ತನ್ನ ಹಳ್ಳಿಯನ್ನು ಬಿಡಲು ಇಷ್ಟವಿಲ್ಲದ ಯಶೋದೆ ಗಂಡೇ ಸೃಷ್ಟಿಸಿರುವ ಭೂತವನ್ನು ಆವಾಹನೆ ಮಾಡಿಕೊಳ್ಳುವ ಮೂಲಕ ಸೂರಾಚಾರಿಯನ್ನು ತಡೆದು ನಿಲ್ಲಿಸುತ್ತಾಳೆ. ಗಂಡು ಎಲ್ಲೇ ಹೋಗಲಿ ಅದು ಹೆಣ್ಣಿಗೆ ಇಷ್ಟವಿರಲಿ, ಇಲ್ಲದಿರಲಿ ಅವನ ಹಿಂದೆ ಹೋಗಲೇಬೇಕು ಎಂಬ ಪುರುಷ ಯಾಜಮಾನ್ಯದ ಸಂಕೇತವಾದ ಸನಾತನಿ ಹುಸಿ ನಂಬಿಕೆಯನ್ನು ಆಕೆ ಛಿದ್ರಗೊಳಿಸಿಬಿಡುತ್ತಾಳೆ. ಗೌರಿಯಂತೂ ತನ್ನ ಮಕ್ಕಳು ಸಾಯಲು ಮಲೆನಾಡಿನ ಥಂಡಿ ವಾತಾವರಣವೇ ಕಾರಣ ಎಂದು ವೈಜ್ಞಾನಿಕವಾಗಿ ಚಿಂತಿಸಿ, ಮುಂದಿನ ಬಾರಿ ಗರ್ಭಿಣಿಯಾದಾಗ ಬಯಲುಸೀಮೆಗೆ ಹೊರಡಬೇಕೆಂದು ನಿರ್ಧರಿಸುತ್ತಾಳೆ. ಇದು ಮೊಲೆದೋಷ ಮುಂತಾದ ಗಂಡಿನ ಮೂಢನಂಬಿಕೆಗಳನ್ನು ಧಿಕ್ಕರಿಸುವುದೇ ಆಗಿದೆ.

ತುಕ್ಕೋಜಿ ತನ್ನ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸದಿದ್ದಾಗ ಸರೋಜ ಆತನನ್ನು ಬೇರೆಯದೇ ರೀತಿಯಲ್ಲಿ ಕಾಡುವ ಮೂಲಕ ತನ್ನ ಕಡೆ ಸೆಳೆಯುತ್ತಾಳೆ. ವಾಸ್ತವವನ್ನು ಮರೆಮಾಚಿ ಸದಾ ಸುಳ್ಳುಗಳಲ್ಲೇ ಬದುಕುವ ನಿಗೂಢ ಮನುಷ್ಯರು ಕಾದಂಬರಿಯ ರಂಗಪ್ಪ, ಜಗನ್ನಾಥ, ಗೋಪಾಲಯ್ಯನ ಪುರುಷ ಪ್ರಧಾನ ಸಮಾಜವನ್ನು ಶಾರಿಯ ಮೌನ ಹೆಚ್ಚು ಕಾಡುತ್ತದೆ. ಮನುಷ್ಯರಿಗಿಂತಲೂ ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವ ಜುಗಾರಿಕ್ರಾಸ್‌ನ ಗಂಡು ಸಮಾಜದ ಚಿಂತನೆಗೆ ವಿರುದ್ಧವಾಗಿ ಗೌರಿ ಕಾಣುತ್ತಾಳೆ. ಗಾನ್ ಕೇಸ್ ಎಂದು

ತಿರಸ್ಕರಿಸಲ್ಪಟ್ಟವನೂ, ಕೆಲಸಕ್ಕೆ ಬಾರದವನೆಂದು ಅವಮಾನಿತನಾದವನೂ ಆದ ಸುರೇಶನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಏಲಕ್ಕಿಯಿಂದ ಬರುವ ಒಂದೂವರೆ ಲಕ್ಷ ರೂಪಾಯಿ ಹಣವನ್ನು ಯಾವ ಯೋಚನೆಯೂ ಮಾಡದೆ ರಾಜಪ್ಪನಿಗೆ ಕೊಟ್ಟುಬಿಡುತ್ತಾಳೆ. ಇದು ಜುಗ್ಗಾರಿಕ್ರಾಸ್ ಹಾಗೂ ದೇವಪುರದ ವ್ಯವಹಾರಗಳಿಗೆ ವಿರುದ್ಧವಾದದು. ಗಂಡಿನ ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಕಿರಗೂರಿನ ಪಂಚಾಯಿತಿಯಲ್ಲಿ ಪ್ರಾರಂಭವಾದ ದಾನಮ್ಮ ಮತ್ತು ಆಕೆಯ ಸಂಗಡಿಗರ ಬಿರುಗಾಳಿಯ ಹೋರಾಟ ಅಥವಾ ಕ್ರಾಂತಿ ಆನಂತರದಲ್ಲಿ ಮದ್ಯಪಾನ ವಿರೋಧಿ ಚಳುವಳಿಯಾಗಿ, ರೈತ ಚಳುವಳಿಗೆ ಕಾರಣವಾಗುತ್ತದೆ.

ಜಮಾತೆಯವರ ಪುರುಷ ನಿರ್ಮಿತ ಶರಿಯತ್ ದಾರ್ಮಿಕ ಆಚರಣೆಗಳ ವಿರುದ್ಧ ತಿರುಗಿಬೀಳುವ ಮಾಯಾಲೋಕದ ಫಾತಿಮ "ಕೊಂಚ ಜಗಳಗಂಟಿ ಹೆಂಗಸು! ಬುರುಕಾ ಹಾಕಿಕೊಂಡು ವ್ಯಾಪಾರ ಮಾಡಬೇಕು ಎಂದು ಹೇಳಿದ್ದಕ್ಕೆ ಜಮಾತೆನವರಿಗೆ ಹೀನಾಮಾನ ಬೈದಿದ್ದಳಂತೆ. ಹಿಂದುಗಳೇ ಬಹುಸಂಖ್ಯಾತರಾಗಿರುವ ಗೊಂದಲಗೇರಿಯಲ್ಲಿ ತಾನು ಬುರ್ಖಾ ತೊಟ್ಟುಕೊಂಡು ಜಾತಿಯನ್ನೇ ಮುಂದುಮಾಡಿದರೆ ವ್ಯಾಪಾರಕ್ಕೆ ಕಲ್ಲು ಬೀಳುತ್ತದೆ. ಎಂದು ಅವಳಿಗೆ ಸೂಕ್ಷ್ಮವಾಗಿ ಅನ್ನಿಸಿದ್ದರಿಂದಲೇ ಅವಳು ಸೀರೆ ಸುತ್ತಿಕೊಂಡು ವ್ಯಾಪಾರಕ್ಕೆ ಕುಳಿತಿದ್ದು. ಒಮ್ಮೊಮ್ಮೆ ಕುಂಕುಮ ಸಹ ಇಟ್ಟುಕೊಂಡು ಬರುತ್ತಿದ್ದಳು. ಶರಿಯತ್ ಕಾನೂನು ಅವಳ ಮೇಲೆ ಚಲಾಯಿಸಲು ಹೋದ ಜಮಾತೆಯವರು ಅವಳು ಹಲ್ಲು ಕಡಿದು ತಿರುಗಿ ಬಿದ್ದಿದ್ದು ನೋಡಿ ಅವಸರದಲ್ಲಿ ಜಾಗ ಖಾಲಿ ಮಾಡಿದರು" (ಮಾಯಾಲೋಕ, ೨೦೦೯, ಪುಟ-೨೯) ಇಲ್ಲಿ ಧರ್ಮವನ್ನು ಅದರ ಆಚರಣೆಗಳನ್ನು ಮುಂದುಮಾಡಿ ಹೆಣ್ಣನ್ನು ನಿಯಂತ್ರಿಸುವ, ಬಂಧಿಸುವ ಗಂಡಿನ ಹುನ್ನಾರಗಳ ವಿರುದ್ಧ ಸಿಡಿದೆದ್ದು ನಿಮ್ಮ ಧಾರ್ಮಿಕ ಆಚರಣೆಗಳಿಗಿಂತ ಬದುಕು ಮುಖ್ಯ ಎಂಬ ಎಚ್ಚರಿಕೆಯನ್ನು ಈಕೆ ನೀಡುತ್ತಾಳೆ.

ತರಕಾರಿ ವ್ಯಾಪಾರಿ ಜಲೀಲನ ಬಳಿ ಕೊಂಡ ಬೋಂಡ ಮೆಣಸಿನಕಾಯಿ ತುಂಬಾ ಕಾರವಿದ್ದು, ಇದರಿಂದ ನನ್ನ ವ್ಯಾಪಾರ ಕುಸಿಯುವ ಬಗ್ಗೆ ಜಲೀಲನೊಂದಿಗೆ ತಕರಾರು ತೆಗೆಯುವ ಫಾತಿಮಾಳಿಗೆ ಮೆಣಸಿನಕಾಯಿ ಕಾರವಿಲ್ಲ ಎಂಬುದನ್ನು ಪ್ರತ್ಯಕ್ಷ ಪ್ರಮಾಣದ ಮೂಲಕ ಸಾಬೀತು ಮಾಡಿ ತೋರಿಸಲು ಪ್ರಯತ್ನಿಸಿ, ತಾನು ತಿಂದ ಮೆಣಸಿನಕಾಯಿ ಕಾರವನ್ನು ತಡೆದುಕೊಳ್ಳಲು ಸಾಧ್ಯವಾಗದೇ ಸುಮ್ಮನಿರಲೂ ಆಗದೇ ಹಿಂಸೆಪಡುತ್ತಿದ್ದ ಜಲೀಲನ ಮಗ ಹಮೀದನಿಗೆ "ಥೂ ಹುಚ್ಚು ಮುಂಡೇಗಂಡಾ, ಬ್ಯಾಡಾ ಕಣೋ ಕಾರ ಇದೇ ಅಂದರೂ ಕೇಳದೆ ಬಾಯಾಗೆ ಹಾಕ್ಕೊಂಡು ಅಗಿದೀಯಲ್ಲಾ! ಈಗ್ಲಾರೂ ಗೊತ್ತಾಯ್ತ ನಾ ಸುಳ್ಳೇಳುತ್ತಿಲ್ಲಾಂತ ನಿಮ್ಮಪ್ಪನಿಗೆ! ಇಗಾ ಈ ದುಡ್ಡು ಹಿಡಿ! ಅಲ್ಲಿ ಹೋಗಿ ಬೀಡಾ ಅಂಗಡೀಲಿ ಎರಡು ಪಚಬಾಳೆ ಹಣ್ಣು ತಗೊಂಡು ತಿನ್ನು, ಬರೀ ನೀರು ಕುಡುದ್ರೆ ಕಾರ ಇಳಿಯೋದಿಲ್ಲ' ಎಂದು ದುಡ್ಡು

ಕೊಟ್ಟು" (ಮಾಯಾಲೋಕ, ೨೦೦೯, ಪುಟ-೩೦) ಕಳುಹಿಸುವ ಫಾತಿಮ, ತನ್ನ ಮೇಲೆ ಜಗಳಕ್ಕೆ ಬಂದವನು ನೋವಿನಿಂದ ನರಳುತ್ತಿದ್ದರೆ ಅವನ ಮೇಲೆ ಅಷ್ಟೇ ಪ್ರೀತಿ, ಅಕ್ಕರೆ, ವಾತ್ಸಲ್ಯವನ್ನು ತೋರುತ್ತಾಳೆ.

ಕಿರಗೂರಿನ ಗಂಡಸರ ದೌರ್ಬಲ್ಯಗಳನ್ನು ಎತ್ತಿ ಜಾಲಾಡುವ ದಾನಮ್ಮ, ರಾಕ್ಷಸಾಕಾರದ ಮರದ ದಿಮ್ಮಿಯ ಉರುಳುವಿಕೆಯಿಂದ ಕಿರಗೂರಿನ ಮಕ್ಕಳು, ವಯಸ್ಸಾದವರೂ ಅದರ ಅಡಿಯಲ್ಲಿ ಸಿಕ್ಕಿಹಾಕಿಕೊಳ್ಳುವ ಸಂದರ್ಭದಲ್ಲಿ ಊರಿನ ಗಂಡಸರೆಲ್ಲಾ ಅಸಹಾಯಕರಾಗಿ ಪಲಾಯನ ಮಾಡಿದಾಗ ದಾನಮ್ಮ ತನ್ನ ಶಕ್ತಿಮೀರಿ ಪ್ರಯತ್ನಿಸಿ ಆ ಅಪಾಯದಿಂದ ಅವರನ್ನು ಕಾಪಾಡುತ್ತಾಳೆ. ಇವು ಹೆಣ್ಣು ದಬ್ಬಾಳಿಕೆಯ ವಿರುದ್ಧ ಯಾವ ರೀತಿ ಬಿರುಗಾಳಿಯಂತೆ ತಿರುಗಿಬೀಳಬಲ್ಲಳೋ, ಹಾಗೆ ತನ್ನ ವಿರುದ್ಧ ಇರುವವರು ಹಾಗೂ ತನ್ನ ಹಗೆಗಳು ಸಂಕಷ್ಟಗಳಲ್ಲಿ ಸಿಕ್ಕಿಬಿದ್ದಾಗ ಅಷ್ಟೇ ತೀವ್ರವಾಗಿ ಮುತುವರ್ಜಿಯಿಂದ ಅವರ ನೋವಿಗೆ ಸ್ಪಂದಿಸಬಲ್ಲಳು, ಅವರನ್ನು ಕಾಯಬಲ್ಲಳು ಹಾಗೂ ಸೋಲಬಲ್ಲಳು ಎಂಬುದನ್ನು ಈ ಪ್ರಸಂಗಗಳ ಮೂಲಕ ತೇಜಸ್ವಿ ಕಥನ ಗುರುತಿಸುತ್ತದೆ.

ಇಡೀ ಪುರುಷ ಸಮಾಜ ಜಾತಿ ಮತ್ತು ಧಾರ್ಮಿಕ ಜಗಳಗಳಲ್ಲಿ ಮುಳುಗಿದ್ದರೆ ಈ ಎಲ್ಲಾ ಜಾತಿ, ಧರ್ಮಗಳ ಮಿತಿಗಳನ್ನೂ ಮೀರಿ ಮನುಷ್ಯ ಧರ್ಮವನ್ನು ಮೆರೆಯುವ ಹಾಗೂ ಪುರುಷರ ಜಾತಿ ಜಗಳಗಳು, ಆಚಾರಗಳು, ಇವರ ಮದುವೆಗಳು ಎಲ್ಲವನ್ನೂ ಹಿಂಸೆಕೊಡುವ ಗಂಡಸರ ನೀಚತನವಾಗಿಯೂ ಕಾಣುವ ಕಿರಗೂರಿನ ದಾನಮ್ಮನ ಚಿತ್ರಣ, ಜಾತಿಯ ಸಂಕೋಲೆಗನ್ನು ಮೀರಿ ಮಲೆಯಾಳಿ ಪಂಡಿತನೊಂದಿಗೆ ಹೋಗುವ ನಾಗಮ್ಮ, ಜಾತಿಯ ಕಾರಣದಿಂದ ಉಳುಕು ತೆಗೆಯಲು ನಿರಾಕರಿಸುತ್ತಿದ್ದ ಕರಿಯನನ್ನು ಕೋಲು ತೋರಿಸಿ ಹೆದರಿಸುವ ಕಾಳಿ, ಜಾತೀವಾದಿ ಪುರುಷ ಸಮಾಜದ ವಿರುದ್ದ ಸಿಡಿದೇಳುವ ದಾನಮ್ಮನ ಜೊತೆ ಕೈಜೋಡಿಸುವ ಕಿರಗೂರಿನ ಮಹಿಳೆಯರ ಸಮಾಜದ ಸ್ವಾಸ್ಥ್ಯದ ಕುರಿತಾದ ಆಲೋಚನೆಗಳು, ಶರಿಯತ್ ಧಾರ್ಮಿಕ ಕಾನೂನುಗಳನ್ನೇ ನಿರಾಕರಿಸಿ ಜಾತಿ ಧರ್ಮಗಳ ಆಚರಣೆಗಳಿಗಿಂತ ಬದುಕು ಮುಖ್ಯ ಎಂದು ಭಾವಿಸಿ ಜಮಾತೆಯವರ ವಿರುದ್ಧ ತಿರುಗಿಬೀಳುವ ಮಯಾಲೋಕದ ಫಾತಿಮ ಹಾಗೂ ಜಾತಿ ಮತ್ತು ಮತಾಂಧತೆಯ ಬೆಂಕಿಯಲ್ಲಿ ಬೇಯುತ್ತಿರುವ ಕೆಸರೂರಿನಲ್ಲಿ ಮುಸ್ಲಿಂನಾದ ರಫಿಯನ್ನು ಪ್ರೀತಿಸಿ ತನ್ನ ಎಲ್ಲಾ ಸಂಬಂಧಗಳನ್ನು ಧಿಕ್ಕರಿಸಿ ಅವನೊಂದಿಗೆ ಹೋಗುವ ಜಯಂತಿ ಇವರುಗಳ ಚಿತ್ರಣವನ್ನು ತೇಜಸ್ವಿಯವರು ತಮ್ಮ ಕಥನಗಳಲ್ಲಿ ತರುವುದು ಜಾತಿ, ಧರ್ಮಗಳ ನಮ್ಮ ಸಮಾಜದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತ ಹಾಗೂ ಧರ್ಮಾತೀತರಾಗಿರುವುದರ ಸಂಕೇತವಾಗಿದೆ.

ಮಾಯಾಲೋಕ ಕಾದಂಬರಿಯ ಅಣ್ಣಪ್ಪಣ್ಣನ ಹೆಂಡತಿ ರುಕ್ಮಿಣಿ, ಬಾಬು ಹೆಂಡತಿ ಗಂಗೆ, ಕರಾಟೆ ಮಂಜನ ತಾಯಿ ಈರಿ ತಮ್ಮ ಗಂಡಂದಿರು ಮತ್ತು ಮಗನನ್ನು ಜಾನ್ ಬೆಟ್ಟಯ್ಯ ಮತಾಂತರ ಮಾಡುತ್ತಾನಂತೆ ಎಂಬ ಸುದ್ದಿ ಕೇಳಿ ವ್ಯಗ್ರರಾಗುವುದು, ಜಾನ್ ಬೆಟ್ಟಯ್ಯನನ್ನು ಬಡಿಯಲು ಸಿದ್ಧರಾಗುವುದು ಹಾಗೂ ಈ ಮೂವರ ವಿರುದ್ಧ ನಿರೂಪಕನಲ್ಲಿ ಪುಕಾರು ತೆಗೆದುಕೊಂಡು ಹೋಗುವುದು ಇವೆಲ್ಲಾ ಹಳೆ ತಲೆಮಾರಿನ ಅನಕ್ಷರಸ್ಥ ಮಹಿಳಾ ಸಮುದಾಯ ಪರಂಪರೆಯಿಂದಲೂ ಪುರುಷ ನಿರ್ಮಿತ ಜಾತಿ ಹಿಂಸೆಯ ಖೆಡ್ಡದೊಳಗೆ ಸಿಕ್ಕಿಹಾಕಿಕೊಂಡು ನರಳಿ ಅಭ್ಯಾಸವಾಗಿರುವುದರಿಂದ ಅಷ್ಟು ಸುಲಭಕ್ಕೆ ಮತಾಂತರಗಳನ್ನು, ಬದಲಾವಣೆಗಳನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಸಂಕೇತಿಸುತ್ತದೆ. ಆದರೂ ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡ ಮಹಿಳೆಯರು ಪುರುಷ ನಿರ್ಮಿತ ಜಾತಿಯ ಸಂಕೋಲೆಗಳಿಂದ ಬಿಡಿಸಿಕೊಳ್ಳುವ ಮಾರ್ಗಗಳನ್ನು ತೇಜಸ್ವಿ ಕಥನ ಶೋಧಿಸಿದೆ.

ಪುರುಷ ಸಮಾಜ ಸಮಸ್ಯೆಗಳಿಂದ ಓಡಿಹೋಗಿ ಪಲಾಯನ ಮಾಡುವಂತೆ ಮಹಿಳೆ ಪಲಾಯನ ಮಾಡುವುದಿಲ್ಲ. ಆಕೆಗೆ ಬದುಕಿನ ಬಗ್ಗೆ ಅದಮ್ಯ ವಿಶ್ವಾಸವಿರುತ್ತದೆ. ಎಂತಹುದೇ ಸಮಸ್ಯೆಗಳು ಎದುರಾದರೂ ನೆಲ ಕಚ್ಚಿ ನಿಂತು ಬದುಕುತ್ತಾಳೆ. ಹೆಣ್ಣನ್ನು ದುರ್ಬಲಳು, ಅಸಹಾಯಕಳು, ಅವಲಂಬಿತಳು ಎಂದು ಚಿತ್ರಿಸುತ್ತಾ ತನ್ನ ಹೆಚ್ಚುಗಾರಿಕೆಯನ್ನು ಮೆರೆಯುವ ಪುರುಷ ಸಮಾಜಕ್ಕೆ ಮೇದರಹಳ್ಳಿಯ ಮೂಕಿ ದ್ಯಾವಮ್ಮ ಅವರ ಈ ಆರೋಪಗಳನ್ನು ಹುಸಿಗೊಳಿಸುತ್ತಾಳೆ. ಮೇದರಹಳ್ಳಿಯ ಅವಸಾನದಿಂದಾಗಿ ಮೇದರ ಜನಾಂಗವೆಲ್ಲಾ ದಿಕ್ಕುಗೆಟ್ಟು ಚದುರಿ ಚೆಲ್ಲಾಪಿಲ್ಲಿಯಾಗಿ ಬೇರೆಕಡೆಗಳಿಗೆ ವಲಸೆ ಹೋಗಿದ್ದರೂ, ಅವರೊಂದಿಗೆ ಮೂಕಿ ದ್ಯಾವಮ್ಮ ತನ್ನ ಮಗಳೊಂದಿಗೆ ತಾನೂ ಪಲಾಯನ ಮಾಡದೇ ಅಲ್ಲಿಯೇ ಉಳಿಯುತ್ತಾಳೆ. "ಅವಳು ಮೇದರಹಳ್ಳಿಯಲ್ಲೇ ಉಳಿದುದಕ್ಕೆ ಎಲ್ಲಾ ತಿಳಿದಂತೆ ಆ ಊರಿನ ವ್ಯಾಮೋಹವೂ ಕಾರಣವಲ್ಲ, ಅಥವಾ ಅವಳ ಗಂಡ ಒಂದಲ್ಲಾ ಒಂದು ದಿನ ಬಂದಾನೆಂಬ ದೂರದ ಹಂಬಲವೂ ಅಲ್ಲ, ಅಥವಾ ಬೇರೆಕಡೆ ಬದುಕುವ ಅವಕಾಶಗಳ ಕೊರತೆಯೂ ಅಲ್ಲ. ಅವಳು ಅಲ್ಲಿದ್ದಿದ್ದು ಕೇವಲ ಮಾನವೀಯ ಗಾಂಭೀರ್ಯದಿಂದ, ಜೀವನದ ದುರಂತ ರೌದ್ರತೆಯನ್ನು ಅಂಜದೆ ನೋಡುವ ಧೈರ್ಯದಿಂದ, ಆತ್ಮಗೌರವದಿಂದ" (ಜುಗಾರಿಕ್ರಾಸ್, ೨೦೦೯, ಪುಟ-೨೧) ಹೀಗೆ ಬದುಕಿನ ಸಂಕಷ್ಟಗಳಿಗೆ ಹೆದರಿ ಪಲಾಯನ ಮಾಡುವ ಪುರುಷ ಸಮಾಜಕ್ಕೆ ಮೂಕಿ ದ್ಯಾವಮ್ಮ ಎಲ್ಲರೂ ನಿರಾಕರಿಸಿದ್ದ ಬದುಕನ್ನು ಆಯ್ಕೆಮಾಡಿಕೊಂಡು ಬದುಕಿ ತೋರಿಸುವ ಮೂಲಕ ಹೆಣ್ಣನ್ನು ದುರ್ಬಲಳು, ಅಸಹಾಯಕಳು, ಅವಲಂಬಿತಳು ಎಂದು ಚಿತ್ರಿಸಿರುವ ಪುರುಷ ಸಮಾಜಕ್ಕೆ ಛಡಿಯೇಟು ನೀಡುತ್ತಾಳೆ.

ಹೀಗೆ ತೇಜಸ್ವಿಯವರು ತಮ್ಮ ಕಥನಗಳ ಮೂಲಕ ಕಥಿಸುವ ಸ್ತ್ರೀಪಾತ್ರಗಳು ಸಾಮಾಜಿಕ ಸ್ವಾಸ್ಥ್ಯವನ್ನು ನೆಲೆಗೊಳಿಸುವ ಹಿನ್ನೆಲೆಯಲ್ಲಿ ಕಾರ್ಯೋನ್ಮುಖವಾಗಿವೆ. ಇವರ ಕಥನದಲ್ಲಿ ಬರುವ ಸ್ತ್ರೀಪಾತ್ರಗಳ ಸಂಖ್ಯೆ ಕಡಿಮೆ ಇದ್ದರೂ; ಸ್ತ್ರೀಪ್ರಧಾನವಾದ ಸಾಹಿತ್ಯ ಇವರದಲ್ಲವಾದರೂ ಇಲ್ಲಿ ಬರುವ ಕೆಲವೇ ಪಾತ್ರಗಳು ಪುರುಷಪ್ರಧಾನ ಸಮಾಜದ ಲಿಂಗ ಅಸಮಾನತೆಯನ್ನು ಖಂಡಿಸುತ್ತಾ, ಅವರ ದೌರ್ಬಲ್ಯಗಳನ್ನು ಹೊರಹಾಕುತ್ತಾ ಅವರ ಹಿಡಿತಗಳಿಂದ ಬಿಡುಗಡೆಗೊಳ್ಳುವ ಹಾದಿಗಳನ್ನು ಕಂಡುಕೊಳ್ಳುತ್ತವೆ. ಹೀಗೆ ಸ್ವತಂತ್ರ ಆಲೋಚನೆ, ಆಯ್ಕೆ ಮತ್ತು ಕಾರ್ಯಶೀಲತೆಯುಳ್ಳ ಹೆಣ್ಣು ಪಾತ್ರಗಳನ್ನು ಚಿತ್ರಿಸುವ ಮೂಲಕ ತೇಜಸ್ವಿ ಕಥನ ಮಹಿಳೆಯನ್ನು ನೋಡುವ ಪಾರಂಪರಿಕ ದೃಷ್ಟಿಗಳ ಆಚೆಗಿನ ಸಾಧ್ಯತೆಗಳನ್ನು ತೆರೆದಿದೆ. ಇದು ತೇಜಸ್ವಿಯವರ ಕಥನ ಸಾಹಿತ್ಯದ ಮಹಿಳಾ ಪರವಾದ ಚಿಂತನೆ ಮತ್ತು ಕಾಳಜಿಗೆ ಸಾಕ್ಷಿಯಾಗಿದೆ.

ಅಧ್ಯಾಯ-೮

ಅಧ್ಯಯನದ ಫಲಿತಗಳು

ಅಧ್ಯಾಯ-೮

ಅಧ್ಯಯನದ ಫಲಿತಗಳು

ಏಕರೂಪೀಕರಣ, ವ್ಯಾಪಾರೀಕರಣ, ಕೈಗಾರಿಕೀಕರಣ, ಖಾಸಗೀಕರಣ, ವಲಸೆ ಇತ್ಯಾದಿಗಳೆಲ್ಲವೂ ಜಾಗತೀಕರಣದ ವಿವಿಧ ಚಹರೆಗಳಂತೆ ಆಗುತ್ತಿರುವ ಇಂದಿನ ಸಂದರ್ಭದಲ್ಲಿ ನಮ್ಮ ಸಾಹಿತ್ಯ- ಸಾಹಿತ್ಯ ಚಿಂತನೆಗಳ ಹೊಣೆಗಾರಿಕೆ ದುಪ್ಪಟ್ಟಾಗುತ್ತಿದೆ. ಕನ್ನಡ ನಾಡು-ನುಡಿ ಇಂದು ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ನವ್ಯವನ್ನು ವಿರೋಧಿಸಿ ಬರೆಯತೊಡಗಿದ ತೇಜಸ್ವಿ ಬರಹವು ಇತ್ತೀಚಿನ ನಿರ್ನೋರ್ಟೀಕರಣದ ನಿಕಷವನ್ನೂ ದಾಟಿ ಚರ್ಚೆಗೆ ಗುರಿಯಾಗುತ್ತಿದೆ. ಬಂಡಾಯೋತ್ತರ ಕಾಲಘಟ್ಟದಲ್ಲಿ ಹೊಸ ಸಾಹಿತ್ಯ ಚಳುವಳಿಗೆ ನಾವು ಕಾದು ಕುಳಿತಿರುವಾಗ; ನಮ್ಮೆದುರಿನ ಹಲವು ಬೌದ್ಧಿಕ ವಾಗ್ವಾದಗಳೂ ಬಸವಳಿದಿರುವಾಗ ಸಹಜವಾಗಿ ಈ ಸಮಾಜದ ಸಾಕ್ಷಿ ಪ್ರಜ್ಞೆಯಂತೆ ಬರವಣಿಗೆ ಮಾಡಿದ ಲಂಕೇಶ್, ತೇಜಸ್ವಿ, ಡಿ.ಆರ್.ನಾಗರಾಜ ಇಂಥವರ ಕಡೆಗೆ ನಾವು ಮತ್ತೆ ಮತ್ತೆ ಹೊರಳಿ ನೋಡುವುದು ಅನಿವಾರ್ಯವಾಗಿದೆ. ಈ ದಿಸೆಯಲ್ಲಿ ತೇಜಸ್ವಿಯವರ ಕಥನ ಸಾಹಿತ್ಯವು ನಮ್ಮ ನಾಡುಕಂಡ ರೈತ ಹೋರಾಟ, ಮಹಿಳಾ ಹೋರಾಟ ಮತ್ತು ಲಿಂಗನ್ಯಾಯದ ಪ್ರಶ್ನೆಗಳು, ದಲಿತ-ಬಂಡಾಯ ಚಳುವಳಿ, ನಿರ್ಜಾತೀಕರಣ, ಕೋಮು ಸಾಮರಸ್ಯದ ನಡೆಗಳು, ಪರಿಸರ ಚಳವಳಿ, ಪರಂಪರೆ-ಆಧುನಿಕತೆ-ಜಾಗತೀಕರಣದ ಮುಖಾಮುಖಿ ಮೊದಲಾದುವುಗಳ ಹಿನ್ನೆಲೆಯಲ್ಲಿ ನಮ್ಮ ಮುಂದಿನ ನಡೆಗಳಿಗೆ ಬೇಕಾದ ಹಲವು ಕೈಮಾರ್ಗಗಳನ್ನು ಸೂಚಿಸುತ್ತದೆ. ಇಂತಹ ಕೆಲವು ಕೈಮಾರ್ಗಗಳನ್ನು ಈ ಅಧ್ಯಯನದಲ್ಲಿ ಗುರ್ತಿಸಿಕೊಳ್ಳಲಾಗಿದೆ. ಇದು ಸಾಮಾಜಿಕ ಬದಲಾವಣೆಗಾಗಿ ಜಾರಿ ಮಾಡಬಹುದಾದ ಕಾರ್ಯಸೂಚಿಯಂತೆ ಇಲ್ಲದಿದ್ದರೂ ನಮ್ಮ ಸಮಾಜವನ್ನು ನೋಡುವ ಭಿನ್ನ ವೈಚಾರಿಕ ಒಳನೋಟಗಳ ಕಂಡುಕೊಳ್ಳುವಿಕೆಯೇ ಆಗಿದೆ.

ಪರಂಪರೆಯೆಂಬ ಬಂಧನ ಮತ್ತು ಆಧುನಿಕತೆಯೆಂಬ ಬಿಡುಗಡೆ

ತೇಜಸ್ವಿಯವರ ಕಥನವು ಪರಂಪರೆಯನ್ನು ಕೌಟುಂಬಿಕ ಹಿಂಸೆ, ಮೌಢ್ಯತೆಯಿಂದ ಕೂಡಿದ ಪರಿಸರವಾಗಿ ಮೊದಲಿಗೆ ಗ್ರಹಿಸುತ್ತದೆ. ಕುರುಡಾದ ಅಮಾನವೀಯ ಸಂಪ್ರದಾಯಗಳು, ಜಾತಿತಾರತಮ್ಯ, ಹೊಸ ಸಂವೇದನೆಗಳಿಗೆ ಅಡ್ಡಿಯಾಗಿರುವ, ಹೊಸ ವಿಚಾರಗಳಿಗೆ ತೆರೆದುಕೊಳ್ಳದ ಪಾರಂಪರಿಕ ಯಾಜಮಾನ್ಯದ ಹಿಡಿತಗಳು ಮುಂತಾದ ನೆಲೆಗಳಿಂದ ಬಿಡುಗಡೆ ಮಾಡುವ ಶಕ್ತಿಯಂತೆಯೂ, ಹಾದಿಯಂತೆಯೂ ಆಧುನಿಕತೆಯನ್ನು ತೇಜಸ್ವಿ ಕಥನವು ಪರಿಗಣಿಸುತ್ತದೆ. ಈ ಕಾರಣಗಳಿಂದ ಮೊದಮೊದಲಿಗೆ ಆಧುನಿಕತೆಯನ್ನು ಸ್ವಾಗತಿಸುವ ಅವರ ಕಥನವು ಪಾರಂಪರಿಕ ಸಮಾಜದ ಯಾಜಮಾನ್ಯದ ಕಪಿಮುಷ್ಟಿಯ ಬಂಧನದಲ್ಲಿ ಸಿಕ್ಕಿ

ನರಳುತ್ತಿರುವ ಜನತೆಗೆ ಉಸಿರಾಡುವ ಅವಕಾಶವನ್ನು ಆಧುನಿಕತೆ ನೀಡುತ್ತದೆ ಎಂದು ನಂಬುತ್ತದೆ. ಅವರ ಪ್ರಾರಂಭದ ಹುಲಿಯೂರಿನ ಸರಹದ್ದು, ನಿಗೂಢ ಮನುಷ್ಯರು, ಸ್ವರೂಪ ಮುಂತಾದ ಕಥನಗಳಲ್ಲಿ ಈ ಬಗೆಯ ವಿಚಾರಗಳನ್ನು, ನಂಬಿಕೆಗಳನ್ನು ಕಾಣಬಹುದು.

'ನಿಗೂಢ ಮನುಷ್ಯರು' ಕಾದಂಬರಿಯಲ್ಲಿ ಜಗನ್ನಾಥ, ರಂಗಪ್ಪ, ಗೋಪಾಲಯ್ಯ ಮುಂತಾದವರು ಪರಂಪರೆಯ ಕೂಪದಿಂದ ಹೊರಬರಲಾಗದೆ ನರಳುವ ಚಿತ್ರಣವಿದೆ. ಅವರಿಗೆ ಅಲ್ಲಿನ ಜಡಿಮಳೆ, ಮುಂದೆ ಸಾಗದೆ ಸ್ಥಗಿತಗೊಡಿರುವ ರಸ್ತೆ ಮತ್ತು ಬದುಕು, ಅಲ್ಲಿನವರ ತಂಟೆ ತಕರಾರುಗಳು ರೇಜಿಗೆಯನ್ನುಂಟು ಮಾಡುತ್ತವೆ. 'ಸ್ವರೂಪ'ದಲ್ಲಿ ತನ್ನ ಚಿಕ್ಕಪ್ಪನ ಮರಣದ ತರುವಾಯ ಹಳ್ಳಿಯ ಜೀವನದ ಬಗ್ಗೆ ನೂರಾರು ಕನಸುಗಳನ್ನಿಟ್ಟುಕೊಂಡು ವ್ಯವಸಾಯ ಮಾಡಲು ಬರುವ ಪದವೀಧರ ಶ್ರೀನಿವಾಸನಿಗೆ ಅಲ್ಲಿನ ಜನರಿಂದ ಎದುರಾಗುವ ತೊಂದರೆಗಳು, ಸಮಸ್ಯೆಗಳು, ಶೋಷಣೆಗಳು ಅವನಿಗೆ ಗ್ರಾಮ ಬದುಕಿನ ಬಗ್ಗೆ ನಿರ್ಲಕ್ಷ್ಯ ತಾಳಲು ಕಾರಣವಾಗುತ್ತವೆ.

ಹುಲಿಯೂರಿನ ಸರಹದ್ದು ಕಥೆಯಲ್ಲಿ ಪರಂಪರೆಯ ಕೌಟುಂಬಿಕ ಹಿಡಿತಗಳು, ಜಾತಿಯ ವೈಭವೀಕರಣ, ಮನೆತನದ ಹೆಸರಲ್ಲಿ ಬದುಕಲೇಬೇಕಾದ ಅನಿವಾರ್ಯ ಹಿಡಿತಗಳು ಸೋಮುವನ್ನು ಈ ಪರಂಪರೆಯ ಹಿಡಿತಗಳಿಂದ ಕಳಚಿಕೊಳ್ಳುವ, ಹುಲಿಯೂರಿನ ಸರಹದ್ದನ್ನು ದಾಟಿಹೋಗುವ ನಿರ್ಧಾರಕ್ಕೆ ಬರಲು ಕಾರಣವಾಗುತ್ತವೆ. ಇದೇ ಕಥೆಯಲ್ಲಿ ಹೆಂಟೆಯೊಂದು ತನ್ನ ಮರಿಗಳನ್ನು ಕಳೆದುಕೊಂಡು ಮರಿಯ ಸತ್ತ ದೇಹದ ಮುಂದೆಯೇ ಗೆದ್ದಲು ಹುಳುಗಳನ್ನು ತಿನ್ನುತ್ತಿರುತ್ತದೆ. ಇದು ತನ್ನ ಮೌಲ್ಯಗಳನ್ನು ಕಳೆದುಕೊಂಡು ಕೊಳೆತ ಶವದಂತೆ ನಾರುತ್ತಿರುವ ಪರಂಪರೆಯ ಸಂಕೇತವಾಗಿ ಅವನಿಗೆ ಕಾಣುತ್ತದೆ. ಮನುಷ್ಯನ ಎಲ್ಲಾ ಚಿಂತನೆಗಳ ಮೂಲಭೂತ ಉದ್ದೇಶ ಎಲ್ಲಾ ರೀತಿಯ ಹಿಡಿತಗಳಿಂದ ಬಿಡಿಸಿಕೊಂಡು ಹೊರ ಬರುವುದು. ಅದಕ್ಕಾಗಿ ಅವನು ನಿರಂತರವಾಗಿ ಪ್ರಯತ್ನಿಸುತ್ತಿರುತ್ತಾನೆ.

ತೇಜಸ್ವಿಯವರ ಕಥನದಲ್ಲಿನ ಈ ಪ್ರಯತ್ನದ ಹಾದಿ ಹಾಗೂ ಪ್ರತಿಫಲವೇ ಆಧುನಿಕತೆಯಾಗಿದೆ. ಹೀಗೆ ಅವರ ಪ್ರಾರಂಭದ ಕಥನಗಳಲ್ಲಿ ಪರಂಪರೆಯು ಬಂಧನವಾಗಿಯೂ, ಆಧುನಿಕತೆಯು ಆ ಬಂಧನದಿಂದ ಬಿಡುಗಡೆ ಮಾಡುವ ಅಸ್ತ್ರವಾಗಿಯೂ ಚಿತ್ರಣಗೊಂಡಿದೆ.

ಆಧುನಿಕತೆಯ ವ್ಯಾಮೋಹದಿಂದ ಬಿಡುಗಡೆ

ಮೊದಮೊದಲಿಗೆ ಎಲ್ಲಾ ಪಾರಂಪರಿಕ ಜಂಜಡಗಳಿಂದ, ಮೌಢ್ಯಗಳಿಂದ ಬಿಡುಗಡೆ ಮಾಡುವ ಹೊಸ ಆಶಾಕಿರಣವಾಗಿ ಆಧುನಿಕತೆಯನ್ನು ಕಟ್ಟಿಕೊಡುವ ತೇಜಸ್ವಿಯವರ ಕಥನವು

ನಂತರ ಒಂದೊಂದಾಗಿ ಅದರ ಕರಾಳತೆಗಳನ್ನು ಅನುಭವಕ್ಕೆ ತಂದುಕೊಡುತ್ತದೆ. ಪರಂಪರೆಯ ಎಲ್ಲಾ ಅನಿಷ್ಟಗಳನ್ನು ನಿವಾರಿಸುವ ಆಪದ್ಬಾಂಧವ ಎಂದರೆ ಆಧುನಿಕತೆ ಮಾತ್ರ ಎಂಬ ನಂಬಿಕೆ ತೇಜಸ್ವಿಯವರ ಕಥನವು ಕಟ್ಟಿಕೊಡುವ ವಾಸ್ತವವಾದಿ ಚಿತ್ರಗಳ ಮೂಲಕ ಹುಸಿಯಾಗತೊಡಗುತ್ತದೆ. ಈ ಆಧುನಿಕತೆ ಎಂಬುದು ಪರಂಪರೆಯ ಹಿಡಿತಗಳಿಂದ ಬಿಡಿಸುವ ಶಕ್ತಿ ಮಾತ್ರವಲ್ಲ, ಎಲ್ಲವನ್ನೂ, ಎಲ್ಲರನ್ನೂ ಗುಡಿಸಿಹಾಕಿಬಿಡುವ, ಬಗೆಹರಿಸಲಾಗದ, ಗುರುತಿಸಲಾಗದ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಸಿಬಿಡುವ, ಯಾವ ಅಂಕೆಗೂ, ಅಳತೆಗೂ ಸಿಗದ ಮಾಯಾವಿಯಾಗಿದೆ ಎಂಬ ಬಗ್ಗೆ ಅವರ ಹಲವಾರು ಕಥನಗಳು ನಮಗೆ ಎಚ್ಚರಿಕೆಯ ಸಂದೇಶಗಳನ್ನು ನೀಡುತ್ತವೆ.

ಪರಂಪರೆಯ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಲು ಸಾಧ್ಯವಾಗದೇ ಇರುವ ದುಸ್ಥಿತಿಗೆ ನಮ್ಮನ್ನು ಆಧುನಿಕತೆಯೇ ತಂದು ನಿಲ್ಲಿಸಿದೆ ಅಥವಾ ಹಾಗೆ ಅದನ್ನು ನಾವು ಕಟ್ಟಿಕೊಂಡಿದ್ದೇವೆ. ಮತ್ತು ಅದರಲ್ಲಿ ನಮ್ಮವರನ್ನೂ ಸಿಕ್ಕಿಸಿ ನಾವೂ ಸಿಕ್ಕಿಕೊಂಡಿದ್ದೇವೆ. ಹಳೆಯ ಕಾಲದಲ್ಲಿ ಪರಂಪರೆಯಿಂದ ಕುಟುಂಬಗಳಲ್ಲಿ ಕ್ರೌರ್ಯವಿತ್ತು ನಿಜ, ಆದರೂ ಬದುಕಬಹುದಿತ್ತು. ಆದರೆ ಆಧುನಿಕ ವ್ಯವಸ್ಥೆ ಮನುಷ್ಯ ಸಂಬಂಧಗಳನ್ನೇ ಛಿದ್ರಗೊಳಿಸುವ ಮೂಲಕ ಬದುಕುವ ಅವಕಾಶಗಳನ್ನೇ ಇಲ್ಲವಾಗಿಸುತ್ತಿದೆ. ಜುಗಾರಿಕ್ರಾಸ್, ಚಿದಂಬರ ರಹಸ್ಯ, ಅಬಚೂರಿನ ಪೋಸ್ಟಾಫೀಸ್ ಮುಂತಾದ ಕಥನಗಳ ಒಟ್ಟು ಸಂದೇಶ ಇದೇ ಆಗಿದೆ.

ಆಧುನಿಕತೆಯು ಭಾರತೀಯ ಗ್ರಾಮಗಳ ಜೀವನ ಕ್ರಮವನ್ನು ಹಣದಿಂದ, ಲಾಭದ ದೃಷ್ಟಿಯಿಂದ ನೋಡುತ್ತಿರುತ್ತದೆ. ಅದರಲ್ಲೂ ಹುಟ್ಟು, ಸಾವು ಮದುವೆ ಮುಂತಾದವನ್ನೂ ಕೂಡ ಹಣದಿಂದ ಅಳೆಯಲು ಯತ್ನಿಸುವ ಆಧುನಿಕತೆಯು ಗ್ರಾಮಗಳನ್ನು ಅಲ್ಲಿನ ಸಹಬಾಳ್ವೆಯ ಬದುಕನ್ನು ಛಿದ್ರಗೊಳಿಸುತ್ತಿರುವುದನ್ನು; ಶ್ರಮ ಸಂಸ್ಕೃತಿಯ, ಸಹಬಾಳ್ವೆಯ ಕೇಂದ್ರಗಳಾದ ಹಳ್ಳಿಗಳು ನಗರಗಳಂತೆ ಹಣ, ಅಧಿಕಾರ ಮತ್ತು ಯಾಂತ್ರಿಕ ಯಾಜಮಾನ್ಯದ ಅಡಿಯಾಳಾಗಿ ಬದಲಾಗುತ್ತಿರುವುದನ್ನು ತೇಜಸ್ವಿಯವರ ಕಥನವು ಗುರುತಿಸುತ್ತದೆ.

ಆಧುನಿಕತೆಯ ದಾಳಿಯು ಇಡೀ ಗ್ರಾಮೀಣ ಬದುಕನ್ನು ವ್ಯಾಪಾರಿ ನೆಲೆಯಿಂದ ನೋಡುವುದನ್ನೂ, ಅಲ್ಲಿನ ನೆಲ, ಜಲ, ಕಲೆ, ಸಂಸ್ಕೃತಿಗಳನ್ನು ಇಲ್ಲವಾಗಿಸುವ ಇಲ್ಲವೇ ಆವಾಹನೆ ಮಾಡಿಕೊಳ್ಳುವುದನ್ನೂ ತೇಜಸ್ವಿಯವರ ಕಥನವು ಗುರುತಿಸುತ್ತದೆ. ಮೇದರಹಳ್ಳಿಯನ್ನು ಪ್ರವೇಶಿಸುವ ಪ್ಲಾಸ್ಟಿಕ್ ಒಂದು ಕಾಲಕ್ಕೆ ಬಿದಿರು ಕಲೆಗೆ ಪ್ರಖ್ಯಾತಿಯಾಗಿದ್ದ ಆ ಹಳ್ಳಿಯನ್ನು ಹಾಳುಕೊಂಪೆಯಾಗಿಸುತ್ತದೆ. ಅಲ್ಲಿನ ಯುವಕರನ್ನು ದುಷ್ಟ ಮಾಫಿಯಾಗಳಲ್ಲಿ ಸಿಕ್ಕಿಬಿದ್ದು ನರಳುವಂತಾಗಿಸುತ್ತದೆ. ಗ್ರಾಮೀಣಾಭಿವೃದ್ಧಿಯ ನೆಪದಲ್ಲಿ ಪ್ರವೇಶ ಪಡೆಯುವ ಸಹಕಾರಿ ವ್ಯವಸ್ಥೆ ಮತ್ತು ರಾಜಕೀಯ ಅಧಿಕಾರ ಬೈರಾಪುರದ ದುರ್ಬಲ ಸಮುದಾಯವನ್ನು

ಹಿಂಸೆಗೆ ದೂಡಿ ಇನ್ನಿಲ್ಲದಂತೆ ಕಾಡುತ್ತದೆ. ಅಭಿವೃದ್ಧಿಯ ಹಿನ್ನೆಲೆಯಲ್ಲಿ ನಿರ್ಮಿಸುವ ರಸ್ತೆ ಬೈರಾಪುರದ ಜನತೆಯನ್ನು, ಅವರ ಶ್ರಮವನ್ನು ಸರ್ಕಾರಿಯಂತ್ರ ಮತ್ತು ಇತರರು ವಿವಿಧ ಬಗೆಯಲ್ಲಿ ಸುಲಿಯಲು, ದೋಚಲು ಕಾರಣವಾಗುತ್ತದೆ. ಗ್ರಾಮಗಳು ನಗರಗಳಾಗುವ ಧಾವಂತದಲ್ಲಿ ಅದರ ವೇಗಕ್ಕೆ ಸ್ಪಂದಿಸಲಾಗದ ತುಕ್ಕೋಜಿ ಮತ್ತು ಸರೋಜಳ ದಾಂಪತ್ಯದಲ್ಲಿ ಬಿರುಕುಗಳು ಸೃಷ್ಟಿಯಾಗುತ್ತವೆ. ಅಬಚೂರಿನ ಬೋಬಣ್ಣನ ಬದುಕಲ್ಲಿ ಪೋಸ್ಟಾಫೀಸಿನ ರೂಪದಲ್ಲಿ ಪ್ರವೇಶ ಪಡೆಯುವ ಈ ಆಧುನಿಕತೆ ಅವನ ದಾಂಪತ್ಯವನ್ನು ಛಿದ್ರಗೊಳಿಸುತ್ತದೆ. ಏನೊಂದು ಅರ್ಥವಾಗದ ಅಸಂತುಷ್ಟತೆಯಲ್ಲಿ ನರಳುವಂತೆ ಮಾಡುತ್ತದೆ.

ಹೀಗೆ ಆಧುನಿಕತೆಯ ಪ್ರವೇಶ ಭಾರತೀಯ ಗ್ರಾಮ ವ್ಯವಸ್ಥೆಯನ್ನು ಬೆಂತರಲೋಕವಾಗಿಸಿ, ಗ್ರಾಮ ಸಮುದಾಯದ ನೆಮ್ಮದಿಯ, ಸಹಬಾಳ್ವೆಯ ಬದುಕನ್ನು ಕಸಿದುಕೊಂಡಿದೆ. ಅಭಿವೃದ್ಧಿಯ ನೆಪದಲ್ಲಿ ಅಲ್ಲಿನ ನೈಸರ್ಗಿಕ ಸಂಪತ್ತನ್ನು ಇಲ್ಲವಾಗಿಸಿದೆ. ಈ ಆಧುನಿಕತೆ ಸೃಷ್ಟಿಸುತ್ತಿರುವ ಅತಿಯಾದ ಮಹತ್ವಾಕಾಂಕ್ಷೆಗಳ ಸುಳಿಯಲ್ಲಿ ಸಿಕ್ಕಿಬಿದ್ದಿರುವ ಯುವಸಮೂಹ ಮತ್ತು ಸಮಾಜ ದಿಕ್ಕುತಪ್ಪುತ್ತಿರುವುದನ್ನೂ ತೇಜಸ್ವಿಯವರ ಕಥನವು ಗುರುತಿಸಿದೆ.

ಆಧುನಿಕ ಶಿಕ್ಷಣ : ಈ ನೆಲದಿಂದ ದೂರವಾಗುವಿಕೆ

ಆಧುನಿಕತೆಯ ಬಳುವಳಿಯಾದ ಶಿಕ್ಷಣವು ನಮ್ಮ ಸಮಾಜವನ್ನು ನಾವು ಅರಿಯಲು ಸಹಕರಿಸುತ್ತದೆ; ನಮ್ಮ ನಡುವಿನ ಮನುಷ್ಯ ಸಂಬಂಧಗಳು ಮತ್ತಷ್ಟು ಬಲಗೊಳ್ಳಲು, ದಿಕ್ಕುತಪ್ಪಿರುವ ಪಾರಂಪರಿಕ ಸಮಾಜವನ್ನು ಸರಿದಾರಿಗೆ ತರಲು ಸಹಾಯ ಮಾಡುತ್ತದೆ ಎಂಬಂತೆ ತೇಜಸ್ವಿ ಕಥನವು ಕೆಲವೆಡೆ ಭಾವಿಸುತ್ತದೆ. ಸುಶಿಕ್ಷಿತ ಯುವಸಮುದಾಯವು ಗ್ರಾಮಗಳಲ್ಲಿನ ಸಮಸ್ಯೆಗಳನ್ನು ತಾನು ಪಡೆದ ಶಿಕ್ಷಣದ ತಿಳುವಳಿಕೆಯಿಂದ ನಿವಾರಣೆ ಮಾಡುತ್ತದೆ ಎಂಬ ನಂಬಿಕೆಗಳು, ಆಶಯಗಳು ತೇಜಸ್ವಿಯವರ ಆರಂಭದ ಕಥನಗಳಲ್ಲಿ ಇವೆ. ಆದರೆ ಈ ನಂಬಿಕೆಗಳು ಹುಸಿಯಾಗುವುದನ್ನು ಅವರ ನಂತರದ ಕಥನಗಳಲ್ಲಿ ಕಾಣಬಹುದು.

ಇವರ ಕಥನದಲ್ಲಿ ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳುವ ಯುವಸಮೂಹ ಆತ್ಮವಿಶ್ವಾಸಕ್ಕೆ ಬದಲಾಗಿ ತಾವು ಹುಟ್ಟಿಬೆಳೆದ ಸ್ಥಳೀಯ ಬದುಕನ್ನು ವಿಚಿತ್ರವಾಗಿ ನೋಡುತ್ತದೆ. ಅದನ್ನು ಅವಮಾನಿಸುತ್ತ, ಅನುಮಾನ ಮತ್ತು ತಿರಸ್ಕಾರದಿಂದ ಕಾಣುತ್ತದೆ. ಯುವಜನತೆಯು ಸ್ವತಃ ಅಸಹಾಯಕತೆ ಮತ್ತು ಪರಕೀಯತೆಯನ್ನು ಅನುಭವಿಸುವಂತೆ ಕೂಡ ಆಧುನಿಕ ಶಿಕ್ಷಣವು ಮಾಡುತ್ತದೆ ಎಂಬ ಸುಳಿವುಗಳನ್ನೂ ತೇಜಸ್ವಿ ಕಥನ ನೀಡುತ್ತದೆ.

ಆಧುನಿಕ ಶಿಕ್ಷಣದ ಬಳುವಳಿಯಾದ ಹೊಸ ಜ್ಞಾನದಿಂದಾಗಿ ಮನುಷ್ಯರು ಪರಸ್ಪರ ನಂಬಿಕೆಯನ್ನು ಕಳೆದುಕೊಂಡು ಅಸಹಾಯಕತೆ, ಆಸೆಬುರುಕತನ, ಮೋಸ-ವಂಚನೆಗಳಿಂದ ಗೊಂದಲ-ಗಾಬರಿಗಳಿಂದ, ಅತಂತ್ರ ಸ್ಥಿತಿಯಲ್ಲಿ ಬದುಕುತ್ತ ಈ ನೆಲದಿಂದ ದೂರವಾಗಿ ನರಳುವುದನ್ನು ಅವರ ಕಥನವು ಗುರುತಿಸುತ್ತದೆ. ಹೊಸ ಸಂವೇದನೆಯುಳ್ಳವನಿಗೆ ತಾನು ಪಡೆದ ವೈಚಾರಿಕ ಮತ್ತು ವೈಜ್ಞಾನಿಕ ತಿಳುವಳಿಕೆಯ ಪರಿಣಾಮದಿಂದ ಈ ಪರಿಸರದ ಸಹಜ ವ್ಯಾಪಾರಗಳಾದ ಮಳೆ, ಗಾಳಿ, ಬೆಟ್ಟ, ಗುಡ್ಡ, ಕಾಡು, ಭೂಕಂಪ, ಪ್ರವಾಹ ಹಾಗೂ ಮನುಷ್ಯೇತರ ಜೀವಸಂಕುಲ-ಇವೆಲ್ಲವೂ ಸಹಜವೆಂಬಂತೆ ಬಾಸವಾಗಬೇಕಿತ್ತು, ಆದರೆ ಈ ಎಲ್ಲಾ ಪಕೃತಿಯ ಸಹಜ ವ್ಯವಹಾರಗಳು ಅವನಿಗೆ ಅಸಹಜವೂ, ಪ್ರಾರಬ್ಧವೂ, ಅಸಂಬದ್ಧವೂ ಆಗುವಂತೆ ಆಧುನಿಕತೆಯ ತಿಳುವಳಿಕೆ ಮಾಡಿರುವುದನ್ನು ತೇಜಸ್ವಿಯವರ ಕಥನವು ಗುರುತಿಸುತ್ತದೆ.

ಆಧುನಿಕ ಶಿಕ್ಷಣ ಪಡೆದ ಜನ ಪ್ರಾಕೃತಿಕ ಸಹಜ ವ್ಯವಹಾರಗಳಿಂದ ಬಿಡುಗಡೆಗೊಳ್ಳಲು ಸದಾ ಯತ್ನಿಸುವುದನ್ನು ಹಾಗೂ ಆ ಯತ್ನಗಳು ವಿಫಲಗೊಳ್ಳುವುದನ್ನೂ ತೇಜಸ್ವಿಯವರ ಕಥನಗಳಲ್ಲಿ ಕಾಣಬಹುದು. ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಆಧುನಿಕ ತಿಳುವಳಿಕೆಯಿಂದ ಗ್ರಾಮ ಸಮಾಜವನ್ನು ಪ್ರವೇಶಿಸುವ ಗೋಪಾಲಯ್ಯ, ಜಗನ್ನಾಥ, ರಂಗಪ್ಪ, ಹುಲಿಯೂರಿನ ಸೋಮು, ಕರ್ವಾಲೋದ ನಿರೂಪಕ ಇದೇ ಬಗೆಯ ತೊಳಲಾಟಗಳಲ್ಲಿ ನರಳುತ್ತಾರೆ. ಮನುಷ್ಯ ಸಂಬಂಧಗಳಲ್ಲಿ ನಂಬಿಕೆಯನ್ನೇ ಕಳೆದುಕೊಂಡು ಪರಸ್ಪರ ಸಂಶಯಗಳಲ್ಲಿ ಮುಳುಗುತ್ತಾರೆ. ಸದಾ ಸುಳ್ಳುಗಳ ಸರಮಾಲೆಯನ್ನೆ ಹೆಣೆಯುತ್ತಾ ಪರಸ್ಪರ ನಿಗೂಢವಾಗಲು ಪ್ರಯತ್ನಿಸುತ್ತಾರೆ. ಇದು ಇಗ್ಲೀಷ್ ಶಿಕ್ಷಣದ ಪ್ರಭಾವದಿಂದ ತನ್ನ ಸುತ್ತಲಿನ ಸಮಾಜವನ್ನು ಹೊರಗೆ ನಿಂತು ನೋಡುವ ನೋಟಕ್ರಮದಿಂದ ಬಂದಿರುವುದನ್ನು ಗುರುತಿಸುವ ತೇಜಸ್ವಿಯವರ ಕಥನವು, ನಮ್ಮವರೇ ಅನ್ಯರಾಗಿ ಬೆಳೆಯುವ ಮತ್ತು ನಮ್ಮದೇ ಅನ್ಯ ಆಗುವ ಅಪಾಯದ ಎಚ್ಚರಿಕೆಯನ್ನೂ ಸಹಾ ನೀಡುತ್ತದೆ.

ಆಧುನಿಕತೆ ಮತ್ತು ಪರಂಪರೆ ಬೈನರಿ ಶತ್ರುಗಳಲ್ಲ

ತೇಜಸ್ವಿಯವರ ಕಥನವು ಆರಂಭದಲ್ಲಿ ಪರಂಪರೆಯ ಜಡತೆಯಿಂದ ಬಿಡುಗಡೆಮಾಡುವ ಅಸ್ತ್ರವಾಗಿ ಆಧುನಿಕತೆಯನ್ನು ಸಮರ್ಥಿಸುತ್ತದೆ. ನಂತರ ಈ ಆಧುನಿಕತೆ ಉಂಟುಮಾಡಿರುವ ಸಮಾಜದ ಛಿದ್ರೀಕರಣವನ್ನು, ಅಮಾನವೀಯ ವ್ಯಾಪಾರಿ ಹುನ್ನಾರಗಳನ್ನು ಗುರುತಿಸುತ್ತ ಪರ್ಯಾಯಗಳ ಹುಡುಕಾಟದಲ್ಲಿ ತೊಡಗುತ್ತದೆ.

ಆಧುನಿಕತೆ ಜುಗಾರಿಯಿದ್ದಂತೆ. ಇಷ್ಟವಿರಲಿ ಇಲ್ಲದಿರಲಿ ಎಲ್ಲರನ್ನೂ ಒಳಗುಮಾಡುವ, ಒಳಗಾಗಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿಬಿಡುವ ಶಕ್ತಿ ಮತ್ತು ಯುಕ್ತಿ ಅದಕ್ಕಿದೆ. ಅಬಚೂರಿನ ಪೋಸ್ಟಾಫೀಸು ಕಥೆಯಲ್ಲಿ ನೆಮ್ಮದಿಯ ಬದುಕನ್ನು ಕಾಣುತ್ತಿದ್ದ ಬೋಬಣ್ಣನಲ್ಲಿ ಊರಿಗೆ ಬಂದ ಪೋಸ್ಟಾಫೀಸು ಅವನ ನೆಮ್ಮದಿಯನ್ನು ಕಿತ್ತುಕೊಳ್ಳುವುದಲ್ಲದೆ, ಕುಟುಂಬವನ್ನು ಛಿದ್ರಗೊಳಿಸುತ್ತದೆ. ಆದುನಿಕತೆಯ ಪ್ರವೇಶದಿಂದಾದ ಹಣದಾಹ, ಅಮಾನವೀಯತೆ, ಪ್ರತಿಯೊಂದನ್ನೂ ವ್ಯಾವಹಾರಿಕ ನೆಲೆಯಲ್ಲಿ ನೋಡುವ ಹಲವು ಹಂಬಲಗಳು, ನಿಸರ್ಗದತ್ತವಾದ ಕಾಡಿನ ಲೂಟಿ, ಜಾತೀವಾದ ಹಾಗೂ ಮತೀಯತೆಯಿಂದ ಕೆಸರೂರು ಸುಟ್ಟು ನಾಶವಾಗುವ ಚಿತ್ರಣವನ್ನು ಚಿದಂಬರ ರಹಸ್ಯದಲ್ಲಿ ಕಾಣಬಹುದು. ದೇವಪುರವಂತೂ ಹಣಕ್ಕೆ ತನ್ನನ್ನು ಮಾರಿಕೊಂಡು ಸ್ವಾತಂತ್ರ್ಯವನ್ನೆ ಕಳೆದುಕೊಂಡಂತೆ ವರ್ತಿಸುತ್ತದೆ. ತೇಜಸ್ವಿ ಕಥನದ ಪ್ರಕಾರ ಇವೆಲ್ಲಾ ಆಧುನಿಕತೆಯ ಬಳುವಳಿಗಳೇ. ಆಧುನಿಕತೆ ಎಂಬುದು ತಂತಾನೆ ಸ್ವಯಂಭೂ ಅಲ್ಲ. ಮಾನವನ ಆಳದಲ್ಲಿ ಇರುವ ಸ್ವಾರ್ಥ ಮತ್ತು ಐಷಾರಾಮಿ ದಾಹ ಏನನ್ನೂ ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಕೊಳ್ಳಬಲ್ಲ ಮತ್ತು ಶೋಷಣೆಯ ಹತ್ಯಾರವನ್ನಾಗಿ ಮಾಡಿಕೊಳ್ಳಬಲ್ಲ ಶಕ್ತಿ ಇರುವಂಥದ್ದು ಮತ್ತು ಇದಕ್ಕೆಲ್ಲ ಪರಿಹಾರವೆಂದರೆ ನಮ್ಮ ಅಂತಃಶಕ್ತಿ ಮತ್ತು ಆತ್ಮಸಾಕ್ಷಿಗಳೆ ನಿಜಕ್ಕು ರಿಪೇರಿ ಆಗಬೇಕಾಗಿರುವ ಸಂಗತಿಗಳು ಎಂದು ತೇಜಸ್ವಿ ಕಥನ ಎಚ್ಚರಿಸುತ್ತದೆ.

ಯಾವುದನ್ನು ಪರಂಪರೆಯ ರೋಗಗಳಿಗೆ ಔಷಧಿಯೆಂದು ತೇಜಸ್ವಿ ಕಥನ ಭಾವಿಸಿದ್ದಿತೋ ಅದೇ ಆಧುನಿಕತೆಯು ಹೊಸ ಬಗೆಯ ಕೇಡುಗಳನ್ನು, ರೋಗಗಳನ್ನು ಸೃಷ್ಟಿಸುತ್ತಿದೆ ಎಂಬುದನ್ನು ಗುರುತಿಸುತ್ತದೆ. ತೇಜಸ್ವಿ ಕಥನವು ಈ ಎರಡೂ ಸಂವೇದನೆಗಳನ್ನು ಪರಸ್ಪರ ಶತ್ರುಗಳಂತೆ ಭಾವಿಸದೇ ಒಂದಕ್ಕೊಂದನ್ನು ಪೂರಕವಾಗಿ ಗಮನಿಸುತ್ತಾ, ಪರಸ್ಪರ ಕೊಡುಕೊಳ್ಳುವಿಕೆಯ ನೆಲೆಯಲ್ಲಿ ಅವುಗಳಲ್ಲಿರುವ ಕೇಡುಗಳನ್ನು ಪರಿಹರಿಸಿಕೊಳ್ಳಬೇಕು ಎಂದು ಅಭಿಪ್ರಾಯಪಡುತ್ತದೆ. ಮೂಲಿಕೆ ಬಳ್ಳಿಯ ಸುತ್ತ ಕಥೆಯಲ್ಲಿ ಬರುವ ಪಾರಂಪರಿಕ ತಿಳುವಳಿಕೆ ಮತ್ತು ಆಧುನಿಕ ಜ್ಞಾನದ ಸಮೀಕರಣದ ಅಗತ್ಯವನ್ನು ಇದೇ ಹಿನ್ನೆಲೆಯಲ್ಲಿ ಕಾಣಬಹುದು.

ಆಧುನಿಕತೆ ಮತ್ತು ಪರಂಪರೆಯನ್ನು ಸಂಪೂರ್ಣ ತಿರಸ್ಕರಿಸಿ ಅಥವಾ ಸಂಪೂರ್ಣ ಒಪ್ಪಿಕೊಂಡು ಬದುಕಲು ಸಾಧ್ಯವಿಲ್ಲ. ಆದ್ದರಿಂದ ಜುಗಾರಿಕ್ರಾಸ್‌ನ ಸುರೇಶ-ಗೌರಿಯಂತೆ ಹಣದ ಹೊಳೆಯಲ್ಲಿ ಕೊಚ್ಚಿಹೋಗದೆ ಪಕ್ಕಕ್ಕೆ ಸರಿದು ನಿಲ್ಲುವ, ಮೇದರಹಳ್ಳಿಯ ಮೂಕಿ ದ್ಯಾವಮ್ಮನಂತೆ ನೆಲಕಚ್ಚಿ ನಿಂತು ಬದುಕುವ, ರಫಿ-ಜಯಂತಿಯಂತೆ ಪಾರಂಪರಿಕ ಸಮಾಜವು ಸ್ವಾರ್ಥಕ್ಕಾಗಿ ರೂಪಿಸಿರುವ ಕಟ್ಟುಪಾಡುಗಳನ್ನು ಧಿಕ್ಕರಿಸುವ, ವಿಜ್ಞಾನಿ ಕರ್ವಾಲೋರಂತೆ ತನ್ನ ಸುತ್ತಲಿರುವುದನ್ನು ಕಣ್ಣು ತೆರೆದು ನೋಡುವ, ವೈದ್ಯ ಕುಬಿಯಂತೆ ಮೌಢ್ಯಾಚಾರ, ರಾಜಕೀಯ ಭ್ರಷ್ಟತೆಯ ನಡುವೆಯೂ ಸಂತ್ರಸ್ಥರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳುವ- ಹೀಗೆ

ಪರ್ಯಾಯ ಮಾರ್ಗಗಳನ್ನು ಸೃಷ್ಟಿಸಿಕೊಳ್ಳಬೇಕು ಎಂಬ ವಿವೇಕವನ್ನು ತೇಜಸ್ವಿ ಕಥನ ಓದುಗರ ಮುಂದಿಡುತ್ತದೆ.

ಹೀಗೆ ಅಖಂಡವಾಗಿ ನೋಡಿದಾಗ ಇವರ ಕಥನವು ಆಧುನಿಕತೆ ಮತ್ತು ಪರಂಪರೆ ಇವುಗಳಲ್ಲಿ ಯಾವೊಂದರ ಪರ ಆಗಲಿ ಅಥವಾ ವಿರೋಧವಾಗಿ ಆಗಲಿ ವಾದಿಸುವುದಿಲ್ಲ. ಅವೆರಡರಲ್ಲು ಇರಬಹುದಾದ ಸಮಸ್ಯೆ ಮತ್ತು ಸಾಧ್ಯತೆಗಳತ್ತ ಓದುಗರ ಗಮನವನ್ನು ಇದು ಸೆಳೆಯುತ್ತದೆ. ಹಾಗೆಯೇ ಇವೆರಡರ ಸಂಯೋಜಿತ ಮಧ್ಯಮಮಾರ್ಗವೊಂದರ ಪರ್ಯಾಯವನ್ನು ನಾವೇ ಕಂಡುಕೊಳ್ಳಬೇಕಾದ ಅಗತ್ಯವನ್ನು ಸೂಚಿಸುತ್ತದೆ.

ಕೃಷಿ ಮತ್ತು ರೈತ ಪರಿಕಲ್ಪನೆಗಳ ನವೀನ ವ್ಯಾಖ್ಯಾನ

ಸ್ವತಃ ರೈತರಾಗಿ, ರೈತರ ಬದುಕು ಮತ್ತು ಬವಣೆಗಳನ್ನು ಬಲ್ಲ ತೇಜಸ್ವಿ ರೈತಚಳುವಳಿಗಳ ಭಾಗವಾಗಿಯೂ ಸಹಾ ಇದ್ದವರು. ರೈತರ ಬದುಕು ಮತ್ತು ಅವರ ಸಮಸ್ಯೆಗಳನ್ನು ಕಟ್ಟಿಕೊಡುವ ಅವರ ಕಥನಗಳು ರೈತರನ್ನು ಸರ್ಕಾರಗಳು, ವಿಜ್ಞಾನಿಗಳು, ಸಂಶೋಧಕರು, ಒಟ್ಟಾರೆ ಇಡೀ ಸಮಾಜ ಇಲ್ಲಿಯತನಕ ಅರ್ಥಮಾಡಿಕೊಂಡಿರುವುದಕ್ಕಿಂತ ಭಿನ್ನವಾಗಿ ಗುರುತಿಸಿಕೊಳ್ಳುತ್ತದೆ.

ಕೃಷಿ ಎನ್ನುವುದು ರೈತರ ಕಸುಬು ಅಥವಾ ಉದ್ಯೋಗ ಮಾತ್ರವಲ್ಲ, ಒಟ್ಟಾರೆ ಅವರ ಜೀವನ ವಿಧಾನವೇ ಆಗಿದೆ. ರೈತ ಎಂದರೆ ಕೇವಲ ಭೂಮಾಲಿಕ ಮಾತ್ರವಲ್ಲ, ರೈತಕಾರ್ಮಿಕನನ್ನೂ ಒಳಗೊಂಡಂತೆ ಕಮ್ಮಾರ, ವ್ಯಾಪಾರಿ, ಕ್ಷೌರಿಕ, ನೀರಗಂಟಿ, ಕೃಷಿವಿಜ್ಞಾನಿ, ಸಂಶೋಧಕ, ಬೇಟೆಗಾರ ಇವರೆಲ್ಲರೂ ರೈತಕುಟುಂಬದ ಭಾಗವೇ ಆಗಿದ್ದಾರೆ. ಇಷ್ಟೇ ಅಲ್ಲದೇ ಸ್ಥಳೀಯ ಸಂತೆಗಳು, ಹೈನುಗಾರಿಕೆ, ಕಾಡುಗಳು, ನದಿಗಳು, ಝರಿಗಳು, ಬೆಟ್ಟಗುಡ್ಡಗಳು, ಕೆರೆ ಕುಂಟೆಗಳು, ಸಸ್ಯ–ಪ್ರಾಣಿ–ಪಕ್ಷಿ ಸಂಕುಲಗಳನ್ನೂ ಹೀಗೆ ಕೃಷಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಇಡೀ ಗ್ರಾಮ ಪರಿಸರವನ್ನೇ ರೈತಸಮುದಾಯವೆಂದು ಪರಿಗಣಿಸುವ ತೇಜಸ್ವಿ ಕಥನವು ಈ ಸರಪಳಿಯಲ್ಲಿ ಯಾವ ಒಂದು ವಲಯ ಅವನತಿಯಾದರೂ ರೈತನನ್ನು ಒಳಗೊಂಡಂತೆ ಇಡೀ ಸಮಾಜವೇ ನಾಶವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ನೀಡುತ್ತದೆ. ಚಿದಂಬರ ರಹಸ್ಯದ ಸುಲೇಮಾನ್ ಬ್ಯಾರಿ ಹಾಗೂ ಗೋಸಾಯಿಗಳು; ಮಾಯಾಲೋಕದ ಹಕ್ಕಿಪಿಕ್ಕಿಯವರು ಇಂತಹ ಪಾತ್ರ/ಜನ ನಡೆಸುವ ಕಾಡಿನ ಜೀವಜಾಲದ ಮಾರಣಹೋಮದಿಂದ ಪ್ರಾಕೃತಿಕ ವಿಕೋಪಗಳು ಸೃಷ್ಟಿಯಾಗಿ ಅಲ್ಲಿನ ಸಮಾಜವೇ ನಿರ್ನಾಮವಾಗುವುದು ಇದನ್ನೇ ಸಂಕೇತಿಸುತ್ತದೆ.

ಸಮಾಜದ ಎಲ್ಲಾ ವಲಯಗಳನ್ನು ಕೃಷಿಯ ಅಥವಾ ರೈತ ಬದುಕಿನ ವ್ಯಾಪ್ತಿಗೆ ಒಳಪಡಿಸಿ ನೋಡುವ ತೇಜಸ್ವಿಯವರ ಕಥನವು ಕೃಷಿಯೆಂದರೆ ಬರೀ ಬೆಳೆ ಬೆಳೆಯುವುದು ಮಾತ್ರವಲ್ಲ, ಅದನ್ನು ಅವಲಂಬಿಸಿದ ಮಾರುಕಟ್ಟೆ ವ್ಯವಸ್ಥೆ, ಸಂಚಾರ ವ್ಯವಸ್ಥೆ, ವಿಜ್ಞಾನ-ತಂತ್ರಜ್ಞಾನ, ಸಂಶೋಧನೆಗಳು, ಪ್ರಯೋಗಾಲಯಗಳು ಇವೆಲ್ಲವನ್ನೂ ಒಳಗೊಂಡ ವಲಯ ಎಂದೇ ಭಾವಿಸುತ್ತದೆ. ಆಳುವ ವರ್ಗ ಜಾಗತಿಕವಾಗಿ ತೆಗೆದುಕೊಳ್ಳುವ ತೀರ್ಮಾನಗಳೂ ಸೇರಿದಂತೆ ಸಮಗ್ರವಾದ ನೆಲೆಯಲ್ಲಿ ರೈತರನ್ನು ಗ್ರಹಿಸದಿರುವುದೇ ರೈತರ ಸಮಸ್ಯೆಗಳು ನಿವಾರಣೆಯಾಗದಿರಲು ಬಹುಮುಖ್ಯ ಕಾರಣವೆಂದು ಇವರ ಕಥನ ಪ್ರತಿಪಾದಿಸುತ್ತದೆ. ನೆಲವನ್ನು ಉತ್ತು ಬಿತ್ತಿ ಬೆಳೆ ಬೆಳೆಯುವ ರೈತ ಸಮುದಾಯವನ್ನು ಮಾತ್ರ ಕೇಂದ್ರೀಕರಿಸಿದ ಚಿಂತನೆ ನಮ್ಮ ರೈತರ ಕುರಿತ ಕಾಳಜಿಯನ್ನು ದಿಕ್ಕುತಪ್ಪಿಸುತ್ತಿದೆ ಎನ್ನುವ ಅವರ ಕಥನ ಮಾದರಿಯು, ರೈತ ವಲಯಕ್ಕೆ ಪೂರಕವಾದ, ಸಹಸಂಬಂಧಿಯಾದ ಇತರ ವಲಯಗಳ ಸಂಕಷ್ಟಗಳಿಗೆ ಸ್ಪಂದಿಸದಿರುವುದು, ಅವುಗಳ ಅವನತಿಯನ್ನು ಕಂಡೂ ಕಾಣದೆ ನಿರ್ಲಕ್ಷಿಸಿರುವುದು ಅಥವಾ ಆ ಕೃತ್ಯಗಳ ಭಾಗವೇ ಆಗಿರುವುದು ಸಹಾ ರೈತರ ಬವಣೆಗಳು ನಿವಾರಣೆಯಾಗದಿರಲು ಮತ್ತೂ ಹೆಚ್ಚಲು ಕಾರಣವಾಗಿವೆ.

ಶಿಕ್ಷಣ, ಸಂಶೋಧನೆ, ಆಳುವ ವರ್ಗದ ಯೋಜನೆಗಳ ರೈತರ ಕಡೆಗಿನ ಚಲನೆ

ನಮ್ಮ ಶಿಕ್ಷಣದ ತಿಳುವಳಿಕೆಯೂ ಸಹಾ ರೈತರ ಮತ್ತು ಅವರ ಕಸುಬಿನ ಕುರಿತು ಕೀಳರಿಮೆಯನ್ನು ಬಿತ್ತುತ್ತಿದೆ. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಪದ್ಧತಿ, ಸಂಶೋಧನೆಗಳು, ರೈತ ಹೋರಾಟಗಾರರು, ಸರ್ಕಾರಗಳು, ಸ್ವತಃ ರೈತರೇ ಎಡವಿರುವುದರ ಬಗ್ಗೆ ತೇಜಸ್ವಿ ಕಥನ ಓದುಗರ ಗಮನವನ್ನು ಸೆಳೆಯುತ್ತದೆ. ಇವುಗಳ ಜೊತೆಗೆ ಅತಿವೃಷ್ಟಿ, ಬರಗಾಲ, ಮುಂತಾದ ಪ್ರಾಕೃತಿಕ ಸಮಸ್ಯೆಗಳು, ಸರ್ಕಾರಿ ಪ್ರಾಯೋಜಿತವಾದ ಅವ್ಯವಸ್ಥೆಯಿಂದ ಕೂಡಿದ ಮಾರುಕಟ್ಟೆ ವ್ಯವಸ್ಥೆ, ಸ್ಪಷ್ಟವಿಲ್ಲದ-ನಿಗಧಿತವಲ್ಲದ ಬೆಲೆಗಳು, ದಲ್ಲಾಳಿಗಳ ವಂಚನೆ, ಬ್ಯಾಂಕ್ ಸಾಲಗಳು, ಸ್ಥಳೀಯ ಲೇವಾದೇವಿಗಾರರ ಶೋಷಣೆ, ಅನಿಯಂತ್ರಿತ ಕಳಪೆ ಬಿತ್ತನೆಬೀಜಗಳ ಮಾರಾಟ, ಸರ್ಕಾರದ ಯೋಜನೆಗಳು ರೈತರನ್ನು ತಲುಪದಂತೆ ಮಾಡಿರುವ ಭ್ರಷ್ಟಾಚಾರ ಮತ್ತು ಆಳುವ ವರ್ಗದಲ್ಲಿರುವ ಅವಕಾಶವಾದಿತನ ಮತ್ತು ಇಚ್ಛಾಶಕ್ತಿಯ ಕೊರತೆ ಮುಂತಾದ ಮಾನವ ನಿರ್ಮಿತ ಸಮಸ್ಯೆಗಳು ರೈತನ ದುಸ್ಥಿತಿಗೆ, ಬವಣೆಗಳಿಗೆ ಒಟ್ಟಾರೆ ಅವನ ಅವನತಿಗೆ ಕಾರಣವಾಗಿರುವುದನ್ನು ತೇಜಸ್ವಿಯವರ ಕಥನಗಳು ಕಟ್ಟಿಕೊಡುತ್ತವೆ.

ರೈತರು ಹೋರಾಟ ಮಾಡಿಯೇ ಸೌಲಭ್ಯಗಳನ್ನು ಪಡೆಯಬೇಕಾದ ದುಸ್ಥಿತಿಗೆ ತಲುಪಿರುವುದರ ಬಗ್ಗೆ ಪ್ರಸ್ತಾಪಿಸುವ ಅವರ ಕಥನವು ರೈತ ಹೋರಾಟಗಳಿಗಿರುವ

ಅಸಂಘಟಿತತೆ ಮತ್ತು ಅಲ್ಪಾಯುಷ್ಯವನ್ನೂ, ಆಳುವ ವರ್ಗಗಳು ರೈತ ಹೋರಾಟ ಮತ್ತು ಸ್ವಾರ್ಥ ಹೋರಾಟಗಾರರನ್ನು ಆಮಿಷಗಳ ಮೂಲಕ ದುರ್ಬಳಕೆ ಮಾಡಿಕೊಂಡು ಅವರ ಹೋರಾಟಗಳನ್ನು ಮತ್ತು ಒಕ್ಕೂಟವನ್ನು ಛಿದ್ರಗೊಳಿಸುವುದನ್ನು, ರೈತ ಹೋರಾಟಗಳ ಬಗೆಗಿನ ಆಳುವ ವರ್ಗಗಳ ನಿರ್ಲಕ್ಷವನ್ನೂ ಸಹಾ ಅವರ ಕಥನಗಳು ನಿರೂಪಿಸುತ್ತವೆ.

ರೈತರು ಸಂಶೋಧನಾ ಕೇಂದ್ರಗಳ ಕಡೆ, ಸಂಶೋಧಕ–ಸಂಶೋಧನೆಗಳು ರೈತರ ಕಡೆ ಚಲಿಸದಿರುವುದು ರೈತ ಸಮುದಾಯದ ಸಮಸ್ಯೆಗಳನ್ನು ಅದಕ್ಕಿರುವ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗದೇ ಇರುವುದಕ್ಕೆ ಒಂದು ಮುಖ್ಯ ಕಾರಣವಾಗಿದೆ. ಹಾಗಾಗಿ ಸಂಶೋಧಕರು–ಸಂಶೋಧನೆಗಳು–ರೈತರು–ಸರ್ಕಾರಗಳ ನಡುವೆ ಸೇತುವೆ ಬೆಳೆಯಬೇಕಾದ ಅನಿವಾರ್ಯತೆಯ ಚಿತ್ರಣವನ್ನು ತೇಜಸ್ವಿ ಕಥನವು ವಿಜ್ಞಾನಿ ಕರ್ವಾಲೋ ಮತ್ತು ಪಾಟೀಲರ ಮೂಲಕ ಕಟ್ಟಿಕೊಡುತ್ತದೆ. ನಮ್ಮ ಶಿಕ್ಷಣದ ಗುರಿ ಮತ್ತು ದಾರಿಗಳು ರೈತ–ಕೃಷಿ ಕಡೆಗೆ ನಡೆಯಬೇಕಾಗಿರುವುದನ್ನು ಅಷ್ಟೇ ಏಕೆ ನಮ್ಮ ಸಂಶೋಧನೆಗಳು, ಆಳುವ ವರ್ಗದ ಎಲ್ಲ ಅಭಿವೃದ್ಧಿ ಯೋಜನೆಗಳು ರೈತರ ಕಡೆಗೆ, ಕೃಷಿ ಬದುಕಿನ ಕಡೆಗೆ ಚಲಿಸಬೇಕಾಗಿರುವ ಸೂಚನೆಗಳನ್ನು ತೇಜಸ್ವಿ ಕಥನ ನೀಡುತ್ತದೆ.

ರೈತರು ದೇವರುಗಳಲ್ಲ; ಅಮಾಯಕರೂ ಅಲ್ಲ

ತೇಜಸ್ವಿ ಕಥನವು ರೈತರ ಅವನತಿಗೆ ಕಾರಣವಾಗಿರುವ ಹೊರಗಿನ ಸಮಸ್ಯೆಗಳನ್ನು ಮಾತ್ರ ತರುವುದಿಲ್ಲ; ಸ್ವತಃ ರೈತರ ದೌರ್ಬಲ್ಯಗಳು, ಸ್ವಾರ್ಥ, ಸೋಮಾರಿತನ, ಜಾತೀಯತೆ, ಸರ್ಕಾರ ಅಥವಾ ಮತ್ಯಾರೋ ಬಂದು ನಮ್ಮ ಸಮಸ್ಯೆಗಳನ್ನು ನಿವಾರಿಸಬೇಕು ಎಂದು ಕಾಯುವ ಪರಾವಲಂಬಿತನದ ಚಿತ್ರಣಗಳನ್ನೂ ನೀಡುತ್ತದೆ. ಹಾಗೆ ನೀಡುವ ಮೂಲಕ ರೈತರ ಬಗೆಗೆ ಏಕಮುಖಿ ಅಥವಾ ಪಕ್ಷಪಾತಿ ಆಗುವುದರಿಂದ ಪಾರಾಗುತ್ತ; ರೈತ ಸಮುದಾಯದಲ್ಲಿ ಇರಬಹುದಾದ ದೌರ್ಬಲ್ಯ ಮತ್ತು ಇಬ್ಬಂದಿತನವನ್ನೂ ತೀಕ್ಷ್ಣ ವಿಮರ್ಶೆಗೆ ಒಳಪಡಿಸುತ್ತದೆ.

ಒಟ್ಟಾರೆ ರೈತರ ಸಮಸ್ಯೆಗಳು ಮತ್ತು ಅವರ ದೌರ್ಬಲ್ಯಗಳು, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ನಿಸರ್ಗದ ವ್ಯಾಪಾರಗಳು, ತನ್ನ ದುರಾಸೆಗಳಿಂದ ಸ್ವತಃ ಮಾನವನೇ ನಡೆಸುತ್ತಿರುವ ಕಾಡುಗಳ ಮತ್ತು ಅಲ್ಲಿನ ಜೀವಸಂಕುಲದ ಮಾರಣಹೋಮ, ಇವುಗಳಿಗೆ ಇರಬಹುದಾದ ಬಹುಮುಖಿ ಆಯಾಮಗಳನ್ನು ತೇಜಸ್ವಿಯವರ ಕಥನವು ಚಿತ್ರಿಸುತ್ತದೆ. ರೈತರ ಬವಣೆಗಳಿಗೆ, ಸಂಕಟಗಳಿಗೆ ಇರುವ ಹಲವು ಬಗೆಯ ಒಳನೋಟಗಳ ಹಿನ್ನೆಲೆಯಲ್ಲಿ ರೈತಪರ ಕಾಳಜಿಗಳು, ಯೋಜನೆಗಳು ರೂಪುಗೊಳ್ಳಬೇಕಿದೆಯೇ ವಿನಹ ಆಳುವ ವರ್ಗಗಳ ಅವಕಾಶವಾದದ ಹಿನ್ನೆಲೆಯಲ್ಲಿ ರೂಪಿಸಲಾಗುತ್ತಿರುವ ಕ್ಷಣಿಕ ಅಥವಾ ಅಲ್ಪಾವಧಿ ಯೋಜನೆಗಳು ರೈತರನ್ನು

ಅವರ ಸಂಕಟಗಳು ಮತ್ತು ಸಮಸ್ಯೆಗಳಿಂದ ಪಾರುಮಾಡುವುದಿಲ್ಲ ಎಂಬುದನ್ನೂ ಪ್ರತಿಪಾದಿಸುತ್ತದೆ. ಆ ಮೂಲಕ ಕೃಷಿಕರ ಸಮಸ್ಯೆಗಳ ಕುರಿತಾಗಿ ಇದ್ದ ಏಕಮುಖಿ ಚಿಂತನೆ ಮತ್ತು ನಿಲುವುಗಳನ್ನು ಛಿದ್ರಗೊಳಿಸುತ್ತಲೇ; ಇಡೀ ಸಮಾಜವನ್ನು ಒಳಗೊಂಡ ಬಹುಮುಖಿ ಆಯಾಮಗಳ ಹಿನ್ನೆಲೆಯಲ್ಲಿ ರೈತಚಿಂತನೆಯ ಅಗತ್ಯವನ್ನು ಪ್ರತಿಪಾದಿಸುತ್ತದೆ. ರೈತರು ಸಂಪೂರ್ಣ ಬಲಿಪಶುಗಳೋ ಅಥವಾ ಅಮಾಯಕರೋ ಅಲ್ಲ. ಅವರೂ ಅವರ ಸ್ಥಿತಿಗೆ ಕಾರಣರೇ ಆಗಿದ್ದಾರೆ ಎಂಬುದನ್ನೂ ಅವರ ಕಥನವು ಗರುತಿಸುತ್ತದೆ.

ರೈತನ ಸಮಸ್ಯೆ ರೈತನದ್ದಲ್ಲ, ಸಮಾಜದ್ದು

ರೈತರ ಸಮಸ್ಯೆಗಳನ್ನು, ಅವರ ಸಂಕಟಗಳನ್ನು ಒಟ್ಟಾರೆ ಅವರ ಬದುಕನ್ನು ಒಂದಿಡೀ ಸಮಾಜದ ಸಮಸ್ಯೆಯಾಗಿಯೂ, ಸಂಕಟವಾಗಿಯೂ ಇವರ ಕಥನವು ಗ್ರಹಿಸುತ್ತದೆ. ಒಟ್ಟಾರೆ ಸಮಾಜದ ಚಲನೆ ಅಥವಾ ಅವನತಿಯ ದಿಕ್ಕುದೆಸೆಗಳನ್ನು ಗ್ರಹಿಸುತ್ತ, ರೈತರ ಅಥವಾ ಕೃಷಿ ಸಮಸ್ಯೆಗಳ ನಿವಾರಣೆ ಹಿನ್ನೆಲೆಯಲ್ಲಿ ಸಮಗ್ರವಾದ ನೆಲೆಯಲ್ಲಿ ಚಿಂತಿಸಿ, ಯೋಜನೆಗಳನ್ನು ರೂಪಿಸಬೇಕಾದ, ಪರಿಹಾರಗಳನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತದೆ.

ರೈತ ಸಮುದಾಯದ ಹಾಗೂ ಅವರಿಗೆ ಸಂಬಂಧಿಸಿದ ಇತರೆ ವಲಯಗಳ ಸಮಸ್ಯೆಗಳು ಸಮಾಜದ ಸಮಸ್ಯೆಗಳೇ ಆಗಿದ್ದು, ಅವುಗಳ ಏಳಿಗೆ ಮತ್ತು ಅವನತಿ ಸಮಾಜದ ಏಳಿಗೆ ಮತ್ತು ಅವನತಿಯೇ ಆಗುತ್ತದೆ. ಒಟ್ಟಾರೆ ರೈತ ಹಾಗೂ ರೈತ ಸಂಬಂಧಿ ಕ್ಷೇತ್ರಗಳ ಬಗೆಗಿನ ನಿರ್ಲಕ್ಷ್ಯದಿಂದ ಇಡೀ ಮಾನವ ಸಮಾಜವೇ ಅವನತಿ ಆಗುವ ಅಪಾಯದ ಬಗ್ಗೆಯೂ ಸಹಾ ತೇಜಸ್ವಿ ಕಥನಸಾಹಿತ್ಯ ನಮ್ಮನ್ನು ಎಚ್ಚರಿಸುತ್ತದೆ.

ಪರಿಸರವೆಂದರೆ ಮರಗಿಡವೇ?

ತೇಜಸ್ವಿಯವರ ಕಥನಕ್ಕೆ ಪರಿಸರವೆಂದರೆ, ಪರಿಸರ ಕಾಳಜಿಯೆಂದರೆ ರೂಢಿಗತ ಅರ್ಥದಲ್ಲಿ ಗ್ರಹಿಸುವಂತೆ ಮರ, ಗಿಡ, ಪ್ರಾಣಿ, ಪಕ್ಷಿಗಳನ್ನೊಳಗೊಂಡ ನೈಸರ್ಗಿಕ ಪರಿಸರ ಮಾತ್ರವಾಗಿಲ್ಲ, ನಮ್ಮ ಬದುಕನ್ನು ಆವರಿಸಿಕೊಂಡಿರುವ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ವಾಣಿಜ್ಯಾತ್ಮಕ ನೆಲೆಗಳೆಲ್ಲವನ್ನೂ ಒಳಗೊಂಡಂತೆ ಸ್ಥಳೀಯ ಭೂಗೋಳದ ಜೀವಜಾಲ ಮತ್ತು ಜೀವಾನಾನುಭವವನ್ನು ಒಳಗೊಂಡಿರುವುದೇ ಪರಿಸರ ಆಗಿದೆ. ನಿಸರ್ಗದ ದಿಗ್ಭ್ರಮೆಗಳನ್ನು, ಅದರ ಬೆತ್ತಲಾಗದ ನಿರಂತರ ನಿಗೂಢತೆ, ಏಕಾಂತತೆಯನ್ನು, ಅದರೊಳಗೆ ಅಡಗಿರುವ ಕ್ರೌರ್ಯ, ಬೆರಗು, ಇದ್ದಕ್ಕಿದ್ದಂತೆ ಸಿಡಿದೇಳುವ,

ತಕ್ಷಣಕ್ಕೆ ಶಾಂತ ಸ್ಥಿತಿಯಾಗಿಬಿಡುವ, ಪ್ರತೀಕಾರ ತೀರಿಸಿಕೊಳ್ಳುವಂತೆ ವರ್ತಿಸುವ, ಯಾರ ಅಂಕೆಗೂ ನಿಲುಕದ ನಿಸರ್ಗದ ವಿರಾಟ್ ಸ್ವರೂಪವನ್ನು ಅವರ ಕಥನ ಸಾಹಿತ್ಯವು ಕಟ್ಟಿಕೊಡುತ್ತದೆ. ಆ ಮೂಲಕ ಪರಿಸರ ಎಂದರೆ ಕೇವಲ ಮರಗಿಡ ಪ್ರಾಣಿಪಕ್ಷಿ ಕ್ರಿಮಿಕೀಟ ಮಾತ್ರವಲ್ಲ; ಸ್ಥಳೀಯ ಭೂಗೋಳದ ಜೀವಾಜೀವ ಸಂಕುಲವೇ ಪರಿಸರ ಎಂಬ ನೆಲೆಯನ್ನು ತೋರುತ್ತದೆ.

ಮಾನವನ ಮಧ್ಯಪ್ರವೇಶದ ನಿರಾಕರಣೆ

ತೇಜಸ್ವಿ ನಿಸರ್ಗವನ್ನು ವಿಶ್ಲೇಷಿಸದೇ ಅದರ ಬೆರಗಿಗೆ ಮೈಮರೆಯದೇ ಅದರೊಳಗೊಂದಾಗಿ ಬೆರೆತಿದ್ದಾರೆ. ನಿಸರ್ಗವನ್ನು ಅದರ ವೈವಿಧ್ಯಮಯ ಜೀವ ಸಂಕುಲವನ್ನು ನಮ್ಮಿಷ್ಟದಂತೆ ಬದಲಿಸಲು, ನಿಯಂತ್ರಿಸಲು ಪ್ರಯತ್ನಿಸುವುದನ್ನು ತೇಜಸ್ವಿ ಕಥನ ಒಪ್ಪುವುದಿಲ್ಲ. ಪ್ರತಿಯೊಂದು ಪ್ರಾಣಿ ಪಕ್ಷಿಗಳ ಜೀವನಕ್ರಮ, ಆಹಾರ ಪದ್ಧತಿ, ರೂಢಿ–ರಿವಾಜುಗಳು, ಲಾಲನೆ–ಪೋಷಣೆ, ಔಷಧ ಪದ್ಧತಿ, ಬೇರೆ ಬೇರೆಯಾಗಿರುತ್ತದೆ. ಆದರೆ ನಾವು ಅದನ್ನೆಲ್ಲಾ ಹೊರಗಿನ ಆಲೋಚನೆಗಳ ಮೂಲಕ ಬದಲಿಸಲು ಯತ್ನಿಸುತ್ತೇವೆ. ಇದು ಪರಿಸರ ನಾಶಕ್ಕೆ ಬಹುಮುಖ್ಯ ಕಾರಣವಾಗಿದೆ. ಹಾಗಾಗಿ ಪ್ರಾಣಿ–ಪಕ್ಷಿಗಳ ಕುರಿತು ವಸ್ತುನಿಷ್ಠ ಪ್ರೀತಿಯನ್ನು ಮನುಷ್ಯ ಬೆಳೆಸಿಕೊಳ್ಳಬೇಕು. ಪರಿಸರವನ್ನು ಅದರ ಜೀವ ವೈವಿಧ್ಯತೆಯನ್ನು ಒಪ್ಪಿಕೊಂಡಾಗ ಮಾತ್ರ ಪರಿಸರ ರಕ್ಷಣೆ ಸಾಧ್ಯ ಎಂಬುದೇ ತೇಜಸ್ವಿಯವರ ಕಥನ ಸಾಹಿತ್ಯದ ಒಟ್ಟಾರೆ ಧ್ವನಿಯಾಗಿದೆ.

ನೈಸರ್ಗಿಕ ಪರಿಸರದ ಮೇಲೆ ಮಾನವನ ಹಿಡಿತಗಳು ಹೆಚ್ಚು ಬಿಗಿಯಾದಾಗ ಅದಕ್ಕೆ ಪ್ರತಿಯಾಗಿ ನಿಸರ್ಗ ಆ ಹಿಡಿತಗಳನ್ನು ಕಾಲಕಾಲಕ್ಕೆ ಛಿದ್ರಗೊಳಿಸುತ್ತಲೇ ಇರುತ್ತದೆ. ಚಿದಂಬರ ರಹಸ್ಯದ ನಿಯಂತ್ರಿಸಲಾಗದ ಕಾಳ್ಗಿಚ್ಚು, ನಿಗೂಢ ಮನುಷ್ಯರು ಕಾದಂಬರಿಯಲ್ಲಿ ನಿರಂತರ ಸುರಿಯುವ ಜಡಿಮಳೆ, ಅಗಾಧವಾದ ಅಥವಾ ಮುಗಿಯದ ಕೆಸರು, ಸರಿಯುತ್ತಿರುವ ಉಗ್ರಗಿರಿ, ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿನ ಬಿರುಗಾಳಿ, ಹೆಬ್ಬಲಸಿನ ಮರ ಮತ್ತು ಎಲ್ಲವನ್ನು ಚಾಪೆಯಂತಾಗಿಸುವ ಅದರ ಚಲನೆ, ಮಾಯಾಲೋಕದ ಬರಗಾಲ, ಮಳೆ ಮತ್ತು ಪ್ರವಾಹ, ಕರ್ವಾಲೋ ಕಾದಂಬರಿಯಲ್ಲಿ ಯಾರ ಹಿಡಿತಕ್ಕೂ ಸಿಗದೇ ಹಾರಿಹೋಗುವ ಓತಿ –ಮುಂತಾದ ನಿಸರ್ಗದ ವಿದ್ಯಮಾನಗಳು ನಿಸರ್ಗ ತನ್ನ ಮೇಲಿನ ಹಿಡಿತಗಳನ್ನು ಬಿಡಿಸಿಕೊಳ್ಳಲು ಕಂಡುಕೊಂಡ ಪರ್ಯಾಯ ಮಾರ್ಗಗಳೇ ಆಗಿವೆ. ಇವು ಮಾನವ ಪ್ರಪಂಚದ ಅತಿಕ್ರಮಣದ ವಿರುದ್ಧ ನಿಸರ್ಗ ತೋರುವ ಪ್ರತಿರೋಧವೂ ಹಾಗೂ ಎಚ್ಚರಿಕೆಯೂ ಆಗಿದೆ. ಹಾಗಾಗಿ ಪರಿಸರವು ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುತ್ತದೆ ಎಂಬುದು ತೇಜಸ್ವಿ ಕಥನದ

ನಂಬಿಕೆಯಾಗಿದೆ. ಹಾಗೆಯೇ ಮಾನವನ ಅತಿಯಾದ ಮಧ್ಯಪ್ರವೇಶವೇ ನಿರಾಕರಣೀಯ ಎಂಬುದನ್ನು ಇವರ ಕಥನ ಪ್ರತಿಪಾದಿಸುತ್ತದೆ.

ಸಂಘರ್ಷ–ಸಾಮರಸ್ಯ–ಸಹಬಾಳ್ವೆ

ತೇಜಸ್ವಿಯವರ ಪ್ರಾರಂಭದ ಕಥನಗಳಲ್ಲಿ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದ ನಡುವೆ ಸಂಘರ್ಷದ ಚಿತ್ರಣಗಳು ಕಾಣುತ್ತವೆ. ಹೊರಗಿನ ಆಲೋಚನೆಗಳ ಮೂಲಕ ಜನರು ಸ್ಥಳೀಯ ಪರಿಸರವನ್ನು ನೋಡುವುದರಿಂದ, ಸ್ಥಳೀಯ ಪರಿಸರದಲ್ಲಿ ಬದಲಾವಣೆಗಳನ್ನು ಬಯಸುವುದರಿಂದ ಸಂಘರ್ಷಗಳುಂಟಾಗಿ ಅವರಿಗೆ ತೀವ್ರತರವಾದ ಪರಕೀಯತೆ ಕಾಡುತ್ತದೆ. ನಿಗೂಢ ಮನುಷ್ಯರು, ಅಬಚೂರಿನ ಪೋಸ್ಟಾಫೀಸು, ಹುಲಿಯೂರಿನ ಸರಹದ್ದು, ಅವನತಿ ಮುಂತಾದ ಕಥನಗಳಲ್ಲಿ ತನ್ನ ಸುತ್ತಲಿನ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು ಸೋಲುವ ಮನುಷ್ಯ ಅದನ್ನು ಬಂಧನವಾಗಿ, ತನ್ನ ಸ್ವಾತಂತ್ರ್ಯಕ್ಕೆ ಇರುವ ಅಡೆತಡೆಯಾಗಿ ಗ್ರಹಿಸುತ್ತಾನೆ. ಹುಲಿಯೂರಿನ ಸೋಮು, ಅವನತಿಯ ಸೂರಾಚಾರಿ, ಅಬಚೂರಿನ ಬೋಬಣ್ಣ, ನಿಗೂಢ ಮನುಷ್ಯರು ಕಥೆಯ ರಂಗಪ್ಪ, ಜಗನ್ನಾಥ ಮುಂತಾದವರಲ್ಲಿ ಈ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದ ಹಿಡಿತಗಳಿಂದ ಬಿಡುಗಡೆಗೊಳ್ಳಲು ತವಕಿಸುವ ನಿರಂತರ ಪ್ರಯತ್ನಗಳು ಕಾಣುತ್ತವೆ. ಸೋಮು ಹುಲಿಯೂರಿನ ನೈಸರ್ಗಿಕ ಪರಿಸರದ ಜೊತೆಗೆ ಅಲ್ಲಿನ ಸಾಮಾಜಿಕ ಪರಿಸರಗಳ ಹಿಂಸೆಗೆ ಒಳಗಾದಂತೆ ಭಾವಿಸುತ್ತಾನೆ. ತಂದೆ–ತಾಯಿ ಬಂಧು–ಬಳಗಕ್ಕಿಂತ ಅವನ ಬಿಡುಗಡೆಯೇ ಮುಖ್ಯವಾಗಿ ಅವನಿಗೆ ತೋರುತ್ತದೆ. ಶಿಲ್ಪಿ ಸೂರಾಚಾರಿಯ ಕಲೆ ಜಡಗೊಂಡ, ಚಲನೆಯನ್ನೇ ಕಳೆದುಕೊಂಡ ಸಮಾಜದಲ್ಲಿ ಅವನತಿಯಾಗುತ್ತಿರುವುದಾಗಿ ಭಾವಿಸಿ ಅಲ್ಲಿನ ಸಾಮಾಜಿಕ ಪರಿಸರದಿಂದ ಬಿಡುಗಡೆಗೊಳ್ಳುವುದೇ ಅವನ ಬಹುಮುಖ್ಯ ಗುರಿಯಾಗಿರುತ್ತದೆ. ಹೊಸ ಆಲೋಚನೆಗಳಿಗೆ ಸ್ಪಂದಿಸದ, ತೆರೆದುಕೊಳ್ಳದ ಜಡ ಅಬಚೂರಿನ ಸಾಮಾಜಿಕ ಪರಿಸರದಲ್ಲಿ ಬೋಬಣ್ಣ ಅತಂತ್ರ ಸ್ಥಿತಿಯಲ್ಲಿ ನರಳುತ್ತಾನೆ. ತನ್ನ ಕುಟುಂಬವೂ ಸಹಾ ಸ್ಪಂದಿಸದಾಗ ಅವನೂ ಸಹಾ ಊರುಬಿಟ್ಟು ಹೋಗುವ ಮೂಲಕ ಬಿಡುಗಡೆಯನ್ನು ಕಾಣಲು ಯತ್ನಿಸುತ್ತಾನೆ.

ಕರ್ವಾಲೋ, ಜುಗಾರಿ ಕ್ರಾಸ್, ಚಿದಂಬರ ರಹಸ್ಯ, ಕಿರಗೂರಿನ ಗಯ್ಯಾಳಿಗಳು, ಮಾಯಾಲೋಕ ಇಲ್ಲೆಲ್ಲ ಮನುಷ್ಯನಿಂದ ನೈಸರ್ಗಿಕ ಪರಿಸರ ಬಿಡುಗಡೆಗೊಳ್ಳುವ ಚಿತ್ರಣಗಳಿವೆ. ಜೊತೆಜೊತೆಗೆ ಈ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು, ಬದಲಿಸಲು ಯತ್ನಿಸುವ ಬದಲಾಗಿ ಈ ಪರಿಸರದಲ್ಲಿಯೇ ನೆಲೆನಿಂತು, ತನ್ನ ಮಹತ್ವಾಕಾಂಕ್ಷೆಗಳನ್ನು ನಿಯಂತ್ರಿಸಿಕೊಂಡು, ಅಲ್ಲಿನ ಸಮಸ್ಯೆಗಳಿಗೆ ಆ ನೆಲ ಮೂಲದಿಂದಲೇ

ಪರ್ಯಾಯಗಳನ್ನು ಕಂಡುಕೊಂಡು ಬದುಕುವ ಪ್ರಯತ್ನಗಳು ಹಾಗೂ ಆ ಪರಿಸರದವನೇ ಆಗಿಬಿಡುವ ಚಿತ್ರಣಗಳು ಕಂಡುಬರುತ್ತವೆ. ಹಾಗಾಗಿ ಇಲ್ಲೆಲ್ಲ ಸಾಮರಸ್ಯದ, ಸಹಬಾಳ್ವೆಯ ಚಿತ್ರಣಗಳೇ ಪ್ರಧಾನವಾಗಿ ಎದ್ದು ಕಾಣುತ್ತವೆ.

ಬಿಡುಗಡೆಯ ಭ್ರಾಂತಿಯಿಂದ ಬಿಡುಗಡೆ

ಸ್ಥಳೀಯ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರವನ್ನು ಹೊರಗಿನಿಂದ ಪ್ರವೇಶಿಸುವ ಗೋಪಾಲಯ್ಯ, ಶಾರಿ, ಕರ್ವಾಲೋ, ಕುಬಿ, ರಫಿ–ಜಯಂತಿ, ಸುರೇಶ–ಗೌರಿಯರಿಗೆ ಈ ಪರಕೀಯತೆ ಕಾಡುವುದಿಲ್ಲ. ಏಕೆಂದರೆ ಇವರು ಸ್ಥಳೀಯತೆಯನ್ನು ನಿಯಂತ್ರಿಸಲು, ತನ್ನ ಧೋರಣೆಗಳಿಗೆ ತಕ್ಕಹಾಗೆ ಬದಲಿಸಲು ಪ್ರಯತ್ನಿಸದೇ, ಕುತೂಹಲವನ್ನು ಮಾತ್ರ ಬೆಳೆಸಿಕೊಂಡು, ತಮ್ಮ ಮಹತ್ವಾಕಾಂಕ್ಷೆಗಳನ್ನು ಸ್ವಯಂ ನಿಯಂತ್ರಿಸಿಕೊಂಡು ಅದೇ ಪರಿಸರದವರಾಗುತ್ತಾರೆ. ಕರ್ವಾಲೋ ಹಾರುವ ಓತಿ ತಪ್ಪಿಸಿಕೊಂಡಾಗ ಅದರ ಬಗೆಗೆ ಪರಿತಪಿಸದೇ 'ಹೋಗಲಿ ಬಿಡಿ, ಬ್ಯಾಡ್‌ಲಕ್, ಆದರೆ ಏನೂ ಬೇಸರವಿಲ್ಲ' ಎಂದು ವಿಷಾದ ಭಾವಕ್ಕೆ ತೃಪ್ತಿಪಟ್ಟುಕೊಂಡರೆ, ಕರ್ವಾಲೋ ಕಾದಂಬರಿಯ ನಿರೂಪಕ ಕರ್ವಾಲೋ ಸಹವಾಸದಿಂದ ಸಮಾಜವನ್ನು 'ಕಣ್ಣು ತೆರೆದು ನೋಡುವ' ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುತ್ತಾನೆ. ಹಾಗೆಯೇ ಮಂದಣ್ಣ, ಕರಿಯಪ್ಪ, ಹಾವುಗೊಲ್ಲರ ಎಂಕ್ಟರು ಬದುಕುತ್ತಿರುವ ಸಮಾಜವನ್ನು ಲಾಭದ ದೃಷ್ಟಿಗಳಲ್ಲಿ ನೋಡುವ ನೆಲೆಗಳಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತಾನೆ. ಕೃಷಿ ಎನ್ನುವುದು ಲಾಭವಲ್ಲ, ಅದೊಂದು ಬದುಕು ಮತ್ತು ಅನುಭವ ಎಂದು ಭಾವಿಸುತ್ತಾನೆ.

ರಫಿ ಮತ್ತು ಜಯಂತಿ ಪ್ರೀತಿಯೆಂಬ ವೈಯಕ್ತಿಕ ನೆಲೆಯಲ್ಲಿ ಬಿಡುಗಡೆಯ ದಾರಿಗಳನ್ನು ಕಂಡುಕೊಳ್ಳುತ್ತಾರೆ. ಸುರೇಶ ಮತ್ತು ಗೌರಿ ತಮ್ಮನ್ನು ಹಣಕ್ಕೆ ಮಾರಿಕೊಂಡಂತೆ ಬದುಕುತ್ತಿರುವ ದೇವಪುರದ ಜುಗಾರಿಯಲ್ಲಿ ಕೊಚ್ಚಿಹೋಗದೆ ಈ ವ್ಯವಸ್ಥೆಯ ಬಗ್ಗೆ ಬರೀ ಕುತೂಹಲಿಗಳಾಗಿ ಪ್ರಜ್ಞಾಪೂರ್ವಕವಾಗಿ ತಮ್ಮಿಷ್ಟದಂತೆ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಇವೆಲ್ಲವೂ ನಾವು ನಮ್ಮ ಸುತ್ತಲಿನ ಪರಿಸರದೊಂದಿಗೆ ಸಾಮರಸ್ಯದಿಂದ ಬದುಕುವ ಮಾದರಿಗಳೇ ಆಗಿವೆ. ಪರಿಸರ ಕಾಳಜಿಯೆಂದರೆ ಪರಿಸರದೊಂದಿಗೆ ಅಂತರವನ್ನು ಕಾಯ್ದುಕೊಂಡು ನೋಡುವುದಲ್ಲ, ಯಾವುದೋ ಎರವಲು ಚಿಂತನೆಗಳ, ಲಾಭದ ಆಲೋಚನೆಗಳ ಮೂಲಕ ಗ್ರಹಿಸುವುದಲ್ಲ. ಹೊರಗಿನಿಂದ ಪರಿಸರವನ್ನು ನೋಡಿ ಮಾತನಾಡುವುದಲ್ಲ. ಅಲ್ಲಿನ ಪರಿಸರದವನೇ ಆಗಿಬಿಡುವುದಾಗಿದೆ ಎಂಬುದನ್ನು ತೇಜಸ್ವಿಯವರ ಕಥನ ನಿರೂಪಿಸುತ್ತದೆ. ಆ ಮೂಲಕ ಬಿಡುಗಡೆಗೊಳ್ಳಬೇಕಾದುದು ಈ ಪರಿಸರದಿಂದ ಅಲ್ಲ, ಬಿಡುಗಡೆಯ ಭ್ರಾಂತಿಯಿಂದ ಕೂಡಿರುವ ಪ್ರಕ್ಷುಬ್ಧ ಮನಃಸ್ಥಿತಿಯಿಂದ ಎಂಬುದನ್ನು ಅವರ ಕಥನಸಾಹಿತ್ಯ ಗುರುತಿಸುತ್ತದೆ. ಹಾಗೆಯೇ

ನಮಗಾಗಿ ಪರಿಸರವನ್ನು ಬದಲಿಸುವ ಕಾರ್ಯಕ್ಕಿಂತ ಪರಿಸರದೊಂದಿಗೆ ಬಾಳಲು ನಾವು ಬದಲುಗೊಳ್ಳಬೇಕಾಗಿರುವ ಅಗತ್ಯವನ್ನು ಗುರುತಿಸುತ್ತದೆ.

ಪರಿಸರದ ನಾಶವೇ ಸಮಾಜದ ನಾಶ

ಪರಿಸರ ಕಾಳಜಿಯನ್ನು ಹೊರಗಿನ ಎರವಲು ಆಲೋಚನೆಗಳಿಂದ ಮುಕ್ತವಾಗಿ, ಕಾಡು, ಪ್ರಾಣಿ, ಪಕ್ಷಿ, ಮನುಷ್ಯ ಸೇರಿದ ಒಟ್ಟಾರೆ ಜೀವಜಾಲ ವಿನ್ಯಾಸದ ನೆಲೆಯಲ್ಲಿ ಗ್ರಹಿಸಬೇಕು, ನಿಸರ್ಗದ ಮೇಲೆ ಯಾರೂ ಒಡೆತನವನ್ನು, ಹಕ್ಕನ್ನು ಸಾಧಿಸಲು ಸಾಧ್ಯವಿಲ್ಲ. ಅಂತಹ ಹಿಡಿತಗಳನ್ನು ಪರಿಸರವೇ ಕಾಲ ಕಾಲಕ್ಕೆ ಛಿದ್ರಗೊಳಿಸಿ, ತನ್ನ ರಕ್ಷಣೆಯನ್ನು ತಾನೆ ಮಾಡಿಕೊಳ್ಳುತ್ತದೆ ಎಂಬ ಎಚ್ಚರಿಕೆಯ ಜೊತೆಗೆ ನಾವು ಸಹಬಾಳ್ವೆಯಿಂದ ನಿಸರ್ಗದೊಳಗೆ ಒಂದಾಗಿ ಬದುಕುವುದೇ ನಾವು ತೋರುವ ಪರಿಸರ ಕಾಳಜಿಯಾಗಿದೆ.

ನೈಸರ್ಗಿಕ ಪರಿಸರ ಹಾಗೂ ಸಾಮಾಜಿಕ ಪರಿಸರಗಳು ಬೇರೆ ಬೇರೆಯಲ್ಲ. ಎರಡೂ ಪರಸ್ಪರ ಸಂಬಂಧವುಳ್ಳವೇ. ಒಂದರ ಮೇಲಿನ ಹಲ್ಲೆ ಇನ್ನೊಂದರ ಮೇಲೆ ಪರಿಣಾಮ ಬೀರುತ್ತದೆ. ನಿಸರ್ಗದ ಮೇಲಿನ ಹಲ್ಲೆ, ಸಾಮಾಜಿಕ ಪರಿಸರದ ಮೇಲಿನ ಹಲ್ಲೆಯೇ ಆಗಿರುತ್ತದೆ. ಪರಿಸರದ ನಾಶ ಸಮಾಜದ ನಾಶವೇ ಆಗಿರುತ್ತದೆ ಎಂಬ ತಿಳುವಳಿಕೆ ಹಾಗೂ ಎಚ್ಚರಿಕೆಯನ್ನು ತೇಜಸ್ವಿ ಕಥನ ನೀಡುತ್ತದೆ. ಹಾಗಾಗಿ ಸಾಮಾಜಿಕ ಪರಿಸರ ಮತ್ತು ನೈಸರ್ಗಿಕ ಪರಿಸರಗಳನ್ನು ಎರಡು ಭಿನ್ನ ವೈರಿ ಲೋಕಗಳು ಎಂದು ನಾವು ಭಾವಿಸದೆ ಎರಡೂ ಪರಸ್ಪರ ಬೆರತ ಸಹಬಾಳ್ವೆಯ ಪರಿಸರವನ್ನು ಕಟ್ಟಿಕೊಳ್ಳುವ ಜರೂರತ್ತನ್ನು ಸೂಚಿಸುತ್ತದೆ.

ಜಾತಿ-ಮತವೆಂಬ ಜೈಲುಗಳು

ನಮ್ಮ ಸಮಾಜವನ್ನು ಕಾಡುತ್ತಿರುವ, ಮನುಷ್ಯ ವಿರೋಧಿ ಸಾಮಾಜಿಕ ಕಾಯಿಲೆಗಳೆಂದರೆ ಜಾತಿವಾದ ಮತ್ತು ಮತೀಯವಾದಗಳು. ಇವುಗಳನ್ನು ನಿವಾರಿಸಬೇಕಾದ ಆಳುವ ಸರ್ಕಾರಗಳು ತಮ್ಮ ಲಾಭಕ್ಕಾಗಿ ಈ ಸಮಸ್ಯೆಗಳು ಮತ್ತಷ್ಟು ಬಿಗಡಾಯಿಸುವಂತೆ ಮಾಡಿಬಿಟ್ಟಿವೆ. ಈ ಸಮಸ್ಯೆಗಳ ಕುರಿತು ತೇಜಸ್ವಿ ಕಥನ ತುಂಬಾ ಕಟುವಾಗಿಯೇ ಮಾತಾಡುತ್ತದೆ. ಮೇಲ್ಜಾತಿ ಮೇಲ್ವರ್ಗಗಳು ದಲಿತರ ಮತ್ತು ಶೂದ್ರರ ನಡೆ, ನುಡಿ, ಆಹಾರ, ಉಡುಪು, ನಿದ್ದೆ ಒಟ್ಟಾರೆ ಅವರ ಬದುಕುಗಳನ್ನು ನಿರ್ಧರಿಸುವಷ್ಟು, ನಿಯಂತ್ರಿಸುವಷ್ಟು ಹಿಡಿತಗಳನ್ನು ಸಾಧಿಸಿರುವುದು ಕೂಡ ಇದೇ ಜಾತಿ ಮತ್ತು ಮತೀಯವಾದದ ಹುನ್ನಾರಗಳಿಂದಲೇ.

ಆಳುವ ವರ್ಗ ಮತ್ತು ಅಧಿಕಾರಿ ವರ್ಗ ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು, ಅಧಿಕಾರದ ಗದ್ದುಗೆಯನ್ನು ಏರಲು ಜಾತಿವಾದ ಮತ್ತು ಮತೀಯವಾದವನ್ನು ಬಳಸಿಕೊಳ್ಳುತ್ತಿರುವುದನ್ನು ತೇಜಸ್ವಿ ಕಥನ ವಿವರವಾಗಿ ಚರ್ಚಿಸುತ್ತದೆ. ಜಾತಿ ಧರ್ಮಗಳೆಂಬ ಜೈಲಿನಲ್ಲಿಯೇ ಜನರು ಬದುಕಬೇಕಾದ ಮತ್ತು ಅದಕ್ಕೆ ಒಗ್ಗಿಕೊಳ್ಳದೇ ಹೋದರೆ ಬಹಿಷ್ಕೃತರಾಗಿ-ಅನಾಥರಾಗಿ, ಇಲ್ಲವೇ ಬಹುಸಂಖ್ಯಾತ ಸಮುದಾಯದ ಸಂಶಯಗಳ ಸುಳಿಯಲ್ಲಿ ಬದುಕಬೇಕಾದ ಅನಿವಾರ್ಯ ಹಾಗೂ ಅಸಹಿಷ್ಣುತಾ ಮನೋಭಾವದ ಸ್ಥಿತಿ ಇಂದು ನಮ್ಮ ಸಮಾಜದಲ್ಲಿ ಇರುವುದನ್ನು ತೇಜಸ್ವಿ ಕಥನ ಹಲವು ಪ್ರಸಂಗಗಳ ಮೂಲಕ ಬಹಿರಂಗಪಡಿಸುತ್ತದೆ.

ಯಾಜಮಾನ್ಯ : ಅಸಹಾಯಕತೆ-ಪ್ರತಿರೋಧ

ಹಿಂದೂ ಹಾಗೂ ಮುಸ್ಲಿಂ ಧರ್ಮಾಂಧರ ಎರಡೂ ಗುಂಪುಗಳಿಂದ ದೂರವಿದ್ದ ಬ್ರೀಡರ್ ಮಹಮದ್‌ಗೆ ಸುಲೇಮಾನ್ ಬ್ಯಾರಿಯ ಕಡೆಯವರು ಕೊಲೆ ಬೆದರಿಕೆಯನ್ನು ಹಾಕುತ್ತಾರೆ. ಜಾತ್ಯತೀತ ಚಿಂತನೆಯ ಮನೋಭಾವದ ರಫಿ-ಜಯಂತಿಯ ಪ್ರೀತಿಗೆ ಜಾತೀವಾದಿ ಮತ್ತು ಮತೀಯವಾದಿಗಳಿಂದ ಅಡ್ಡಿ ಆತಂಕಗಳು ಎದುರಾಗುತ್ತವೆ. ಪ್ರಗತಿಪರವಾಗಿ ಚಿಂತಿಸುವ ಪಾಟೀಲರು, ರಾಮಚಂದ್ರ, ಅಂಗಾಡಿ, ಜಯರಾಂ, ಸಿದ್ಧಪ್ಪನವರ ಕೊಲೆಗೆ ಸಂಚಿನ ಯತ್ನಗಳು ನಡೆಯುತ್ತವೆ. ಹೀಗೆ ಜಾತ್ಯತೀತ ಮತ್ತು ಪ್ರಗತಿಪರ ವ್ಯಕ್ತಿತ್ವಗಳು ಎದುರಿಸಬೇಕಾಗಿ ಬರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಸಮಾಜದಲ್ಲಿ ನೆಲೆಯೂರುತ್ತಿರುವ ಅಸಹಿಷ್ಣುತಾ ಮನೋಭಾವಗಳ ಹಿಂದೆ ಮೇಲ್ಜಾತಿ ಮತ್ತು ಮೇಲ್ವರ್ಗದ ಯಾವುದೋ ಒಂದು ಸಮುದಾಯ ತನ್ನ ಯಾಜಮಾನ್ಯವನ್ನು ಮರುಸ್ಥಾಪಿಸಲು ಯತ್ನಿಸುತ್ತಿರುವುದನ್ನು ಗುರುತಿಸಬಹುದು. ಇದಕ್ಕೆಲ್ಲಾ ಹೊರದಾರಿಗಳು ಯಾವುವು? ಎಂಬ ಪ್ರಶ್ನೆಯನ್ನಿಟ್ಟುಕೊಂಡ ಚಿಂತನೆಯನ್ನು ಕೂಡ ತೇಜಸ್ವಿಯವರ ಕಥನ ಹುಟ್ಟಿಸುತ್ತದೆ.

ಸಮಾಜದ ಕೆಳಜಾತಿ ಹಾಗೂ ಅಲ್ಪಸಂಖ್ಯಾತ ಸಮುದಾಯಗಳು ಬಹುಸಂಖ್ಯಾತ ಅಥವಾ ಮೇಲ್ಜಾತಿ ಸಮುದಾಯಗಳ ಮೂಗಿನ ನೇರಕ್ಕೆ ಮತ್ತು ಅವರನ್ನು ಸಂತುಷ್ಟಗೊಳಿಸುವಂತೆ ಬದುಕಬೇಕಾದ ಅಸಹಾಯಕತೆಯಲ್ಲಿ ಸಿಲುಕಿರುವುದನ್ನು ತೇಜಸ್ವಿಯವರ ಕಥನ ಗುರುತಿಸುತ್ತದೆ. ಮಾಯಾಲೋಕದ ಫಾತಿಮಾ, ಇಕ್ಬಾಲ್ ಸಾಬಿ; ಡೇರ್ ಡೆವಿಲ್ ಮುಸ್ತಫಾ ಕಥೆಯ ಮುಸ್ತಫಾ; ಕುಬಿ ಮತ್ತು ಇಯಾಲ ಕಥೆಯ ಹಮಾಲಿಗಳಾದ ರೆಹಮಾನ್, ರಂಗ; ಚಿದಂಬರ ರಹಸ್ಯದ ರಫಿ, ಬ್ರೀಡರ್ ಮಹಮದ್ ಇವರು ಇದೇ ಅಸಹಾಯಕ ಸ್ಥಿತಿಯಲ್ಲಿ ನರಳುತ್ತಾರೆ. ಚಿದಂಬರ ರಹಸ್ಯದ ಹರಿಜನರು ಇಸ್ಲಾಂ ಧರ್ಮಕ್ಕೆ

ಮತಾಂತರಗೊಳ್ಳಲು ಯತ್ನಿಸುವುದನ್ನು ಮೇಲ್ಜಾತಿ ಮೇಲ್ವರ್ಗಗಳು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ವಿರೋಧಿಸುತ್ತಾರೆ. ದಲಿತ ಯುವಕರು ತಮ್ಮ ಹಾಗೂ ಸಮುದಾಯದ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ-ದಬ್ಬಾಳಿಕೆಯನ್ನು ಪ್ರಶ್ನಿಸಿದ ಪರಿಣಾಮ ಕೃಷ್ಣೇಗೌಡ, ರಾಮಾಚಾರಿ, ತಮ್ಮಣ್ಣಗೌಡ ಇವರುಗಳಿಂದ ನಿಂದನೆಗೆ-ಅವಮಾನಕ್ಕೆ ಹಾಗೂ ಹಲ್ಲೆ ಮತ್ತು ಜೀವ ಬೆದರಿಕೆಗೆ ಒಳಗಾಗುತ್ತಾರೆ. ಇಲ್ಲಿ ಮೇಲ್ಜಾತಿ ಮೇಲ್ವರ್ಗಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಕೆಳಜಾತಿ ಹಾಗೂ ಅಲ್ಪಸಂಖ್ಯಾತ ಸಮುದಾಯಗಳನ್ನು ಬಳಸಿಕೊಳ್ಳುವ, ಆ ಮೂಲಕ ಅವರ ಬದುಕನ್ನು ನಿರ್ದೇಶಿಸುವ ಸೂತ್ರಧಾರರಾಗಲು ಯತ್ನಿಸುತ್ತವೆ. ಇದಕ್ಕೆ ಯಾವ ಪ್ರತಿರೋಧವನ್ನೂ ವ್ಯಕ್ತಪಡಿಸಲಾಗದ ಈ ಸಮುದಾಯಗಳ ಅಸಹಾಯಕತೆಯನ್ನು ತೇಜಸ್ವಿಯವರ ಕಥನ ಗುರುತಿಸುತ್ತದೆ.

ಭ್ರಷ್ಟಾಚಾರಕ್ಕೆ ಜಾತಿ ಧರ್ಮಗಳ ಭೇದಭಾವ ಇರುವುದಿಲ್ಲ. ಈ ಭ್ರಷ್ಟರು ಎಲ್ಲಾ ಜಾತಿ ಮತ್ತು ಧರ್ಮಗಳಲ್ಲಿ ಇದ್ದು, ಅವರೆಲ್ಲರೂ ತಮ್ಮ ರಕ್ಷಣೆಯ ಕವಚವಾಗಿ ಜಾತಿ ಧರ್ಮಗಳನ್ನು ಬಳಸುತ್ತಿರುವುದನ್ನು, ಈ ಜಾತಿ ಮತ್ತು ಮತೀಯ ಶಕ್ತಿಗಳ ಭ್ರಷ್ಟತೆಯ ಕಾರಣಕ್ಕೆ ಆಯಾಯ ಜಾತಿ ಧರ್ಮಗಳ ಕೆಳವರ್ಗಗಳ ಅಮಾಯಕ ಮಹಿಳೆಯರು, ವೃದ್ಧರು, ಯುವಕರು ಬಲಿಯಾಗುತ್ತಿರುವುದನ್ನು ಗುರುತಿಸುವ ತೇಜಸ್ವಿ ಕಥನ ಈ ಬಗ್ಗೆ ತಳ ಸಮುದಾಯಗಳಿಗೆ ಎಚ್ಚರಿಕೆಯನ್ನು ನೀಡುತ್ತದೆ. ಎಲ್ಲಾ ಜಾತಿ ಧರ್ಮಗಳ ಭ್ರಷ್ಟರು ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಸಮಾಜದ ಜನರನ್ನು ಪರಸ್ಪರ ಎತ್ತಿ ಕಟ್ಟಿ ಹೇಗೆಲ್ಲಾ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಾರೆ, ತಮ್ಮ ವೈಯಕ್ತಿಕ ದ್ವೇಷಾಸೂಯೆಗಳನ್ನು ಇಡೀ ಸಮಾಜದ ಸಮಸ್ಯೆಯಾಗಿಸಿಬಿಡುವ ಹುನ್ನಾರಗಳನ್ನು ಹೆಣೆಯುತ್ತಾರೆ ಎಂಬುದನ್ನು ಸಹಾ ತೇಜಸ್ವಿಯವರ ಕಥನ ಗುರುತಿಸುತ್ತದೆ. ಚಿದಂಬರ ರಹಸ್ಯದ ಕಚ್ಚೇಹರುಕ ಬುದ್ಧಿಯ ರಾಮಚಾರಿ, ಕೃಷ್ಣೇಗೌಡ, ಸುಲೇಮಾನ್ ಬ್ಯಾರಿ, ಕಿರಗೂರಿನ ಗಯ್ಯಾಳಿಗಳು ಕಥೆಯ ಗ್ರಾಮಸೇವಕ ಶಂಕರಪ್ಪ, ಮಾಯಾಲೋಕದ ಇಂಜಿನಿಯರ್ ಮಲ್ಲಿಕಾರ್ಜುನ ಮುಂತಾದವರನ್ನು ಈ ಹಿನ್ನೆಲೆಯಲ್ಲಿ ನೋಡಬಹುದು.

ದಬ್ಬಾಳಿಕೆಯ ನಡೆಗಳಿಗೆ ಮತ್ತು ಭ್ರಷ್ಟತೆಯ ನಡೆಗಳಿಗೆ ಅಂಚಿನ ಜಾತಿ, ಲಿಂಗಗಳು ಪ್ರತಿಭಟಿಸಲಾಗದೆ ಅಸಹಾಯಕತೆಯಲ್ಲಿ ನರಳುವ ಚಿತ್ರಣಗಳು ಇರುವಂತೆಯೇ ತೇಜಸ್ವಿ ಕಥನದಲ್ಲಿ ಅವುಗಳನ್ನು ಸಣ್ಣ ಸಣ್ಣ ಪ್ರಮಾಣದಲ್ಲಿ ಪ್ರತಿರೋಧಿಸುವ ಚಿತ್ರಣಗಳೂ ಕಂಡುಬರುತ್ತವೆ. ಆದರೆ ಸಾಮಾಜಿಕ ವಾಸ್ತವವನ್ನು ಚಿತ್ರಿಸಲು ಹೆಚ್ಚು ಗಮನ ಕೇಂದ್ರಿಕರಿಸಿದಾಗ ಸಮಾಜದ ಗತಿಯನ್ನು ತರ್ಕಿಸುವ ಕಡೆಗೆ ಗಮನ ಕಡಿಮೆಯಾಗುವುದನ್ನು ತೇಜಸ್ವಿ ಕಥನದಲ್ಲಿ ಗುರುತಿಸಬಹುದು.

ನಿರ್ಜಾತೀಕರಣದ ದಾರಿಗಳು

ತೇಜಸ್ವಿಯವರ ಸಾಹಿತ್ಯದಲ್ಲಿ ಪ್ರಮುಖವಾಗಿ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳು ಸಾಮಾಜಿಕ ಕಾಳಜಿಯ ಆಶಯವಾಗಿ ಕಾಣುತ್ತವೆ. ಮತಾಂತರಗಳನ್ನು, ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಗಳನ್ನು ಇವರ ಕಥನಗಳು ಸಮರ್ಥಿಸುತ್ತವೆ. ಅಂತರ್ಜಾತಿ ಮತ್ತು ಅಂತರ್ಧಮೀಯ ವಿವಾಹ ಆದವರಿಗೆ ಜಾತಿವಾದಿ ಮತ್ತು ಮತೀಯವಾದಿ ದುಷ್ಟಶಕ್ತಿಗಳಿಂದ ಅಪಾಯಗಳಿದ್ದು, ಇವರಿಗೆ ಪ್ರಭುತ್ವಗಳು ರಕ್ಷಣೆ ನೀಡಬೇಕು ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಈ ಬಗೆಯ ವ್ಯಕ್ತಿತ್ವಗಳನ್ನು ಬೆಂಬಲಿಸಬೇಕು. ಇದರಿಂದ ಸಮಾಜವನ್ನು ಕಾಡುತ್ತಿರುವ ಜಾತಿವಾದ ಮತ್ತು ಕೋಮುವಾದದಂತಹ ಸಮಸ್ಯೆಗಳಿಂದ ಪಾರಾಗಬಹುದು ಎಂದು ತೇಜಸ್ವಿಯವರ ಕಥನವು ಪ್ರತಿಪಾದಿಸುತ್ತದೆ. ಹುಲಿಯೂರಿನ ಸೋಮು ಮತ್ತು ನಳಿನಾಕ್ಷಿ ಹಾಗೂ ಕೆಸರೂರಿನ ರಫಿ ಮತ್ತು ಜಯಂತಿಯರ ಪ್ರೇಮ ವಿವಾಹಗಳು, ಇಲ್ಲೆಲ್ಲ ಇಂತಹ ಪ್ರೀತಿಗೆ ಎದುರಾಗುವ ಸಮಸ್ಯೆಗಳು, ಅಡ್ಡಿ–ಆತಂಕಗಳು ಹಾಗೂ ಜೀವಭಯದ ಬೆದರಿಕೆಗಳನ್ನು ಈ ಹಿನ್ನೆಲೆಯಲ್ಲಿ ನಾವು ಗಮನಿಸಬಹುದು.

ಸೋಮುವಿಗೆ ಜಾತಿಯ ಹಿಡಿತಗಳು ರೇಜಿಗೆಯನ್ನು ಉಂಟುಮಾಡಿರುತ್ತವೆ. ಅಂತರ್ಜಾತಿ ವಿವಾಹ ಅವನಿಗೆ ಅವುಗಳಿಂದ ಬಿಡುಗಡೆಗೊಳ್ಳುವ ಹಾದಿಯಾಗಿ ಕಾಣುತ್ತದೆ. ಜಾತೀವಾದ, ಧರ್ಮಾಂಧತೆ, ಭ್ರಷ್ಟಾಚಾರದ ಕೂಪವಾಗಿರುವ ಕೆಸರೂರಿನ ವಾತಾವರಣದಲ್ಲಿ ಎಲ್ಲವೂ ಅವನತಿಯ ಹಾದಿಯನ್ನು ಹಿಡಿದಿದ್ದರೆ, ರಫಿ ಮತ್ತು ಜಯಂತಿಯ ಪ್ರೀತಿ ಗೆಲ್ಲುವುದು ನಿಜಕ್ಕೂ ತೇಜಸ್ವಿಯವರ ಬಹುದೊಡ್ಡ ಆಶಯವಾಗಿ, ನಾಳೆಗಳ ಜೀವಂತಿಕೆಯ ಲಕ್ಷಣವಾಗಿ ಕಾಣುತ್ತದೆ. ಕೆಸರೂರಿನ ಜನ ತಾವೇ ಪರಸ್ಪರ ಸೃಷ್ಟಿಸಿಕೊಂಡ ಲಂಟಾನವೆಂಬ ಜಾತಿ ಧರ್ಮಗಳ ದ್ವೇಷಾಸೂಯೆಗಳ ಹೊಗೆಯಲ್ಲಿ ಸಿಕ್ಕಿ ಸಾಯುತ್ತಿರುತ್ತಾರೆ. ಆ ಹೊಗೆಯಿಂದ, ಆ ಕೆಸರಿನ ಕೂಪದಿಂದ ತಮ್ಮ ಪ್ರೀತಿಯ ಕಾರಣದಿಂದಲೇ ರಫಿ ಮತ್ತು ಜಯಂತಿ ತಪ್ಪಿಸಿಕೊಳ್ಳುತ್ತಾರೆ. ಕಾದಂಬರಿಯ ಅಂತ್ಯದಲ್ಲಿ ರಫಿ ಮತ್ತು ಜಯಂತಿಯ ನಡುವೆ ನಡೆಯುವ ಸಂಭಾಷಣೆ ಇಡೀ ಭಾರತೀಯ ಸಮಾಜ ಎಚ್ಚತ್ತುಕೊಂಡು ನಡೆಯಬೇಕಾದ ಮಾರ್ಗವನ್ನು ಸೂಚಿಸುತ್ತದೆ. ಹೀಗೆ ಜಾತಿವಾದ ಮತ್ತು ಮತೀಯವಾದದಿಂದ ಸಮಾಜವನ್ನು ಪಾರುಮಾಡುವ ವಿಧಾನಗಳಲ್ಲಿ ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ವಿವಾಹಗಳ ಅಗತ್ಯವನ್ನು ತೇಜಸ್ವಿ ಕಥನ ಮನಗಾಣಿಸುತ್ತದೆ.

ಸಮಾಜದಲ್ಲಿ ಹಿಂಸೆಯಿಂದ, ದ್ವೇಷದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಯಿಂದಲೇ ಗೆಲ್ಲಬೇಕಾಗಿದೆ. ಸಮಾನತೆ, ನೆಮ್ಮದಿಯಿಂದ ಕೂಡಿದ ಆರೋಗ್ಯಕರ ಸಮಾಜದ ನಿರ್ಮಿತಿಗೆ ಜಾತಿ ಮತ್ತು ಮತೀಯವಾದಗಳು ಅಡ್ಡಿಯಾಗಿದ್ದು, ಈ ಜಾತಿ ಮತ್ತು ಮತೀಯತೆಯ ಲಂಟಾನವೆಂಬ ಸ್ವಾರ್ಥ ಹಾಗೂ ಕೇಡಿನ ಬೇಲಿಯಿಂದ ಜಿಗಿದು ಹೊರಬರದು ಹೊರತು ಅನ್ಯಮಾರ್ಗವಿಲ್ಲ ಎಂಬುದು ಡೆರ್ ಡೆವಿಲ್ ಮುಸ್ತಾಫಾ ನೀಡುವ ತಿಳುವಳಿಕೆಯಾಗಿದೆ. ಕೆಸರೂರಿನ ಸಮಾಜದ ಸುಧಾರಣೆಗೆ ಸಂಶೋಧನ ಕೇಂದ್ರದ ವಿಜ್ಞಾನಿಗಳು, ವಿಚಾರವಾದಿಗಳು, ಸರ್ಕಾರಗಳು, ರಾಜಕಾರಣಿಗಳು ಶೋಧಿಸುತ್ತಿರುವ ಚಿದಂಬರ ರಹಸ್ಯವಾಗಿರುವ ಕೆಸರೂರು ಹೈಬ್ರಿಡ್ ಏಲಕ್ಕಿ ತಳಿ ಬೇರ್ಯಾವುದೂ ಅಲ್ಲ, ಅದು ರಫಿ ಮತ್ತು ಜಯಂತಿಯ ಪ್ರೇಮವೇ. ಈ ಹೈಬ್ರಿಡ್ ಪ್ರೇಮತಳಿಯಿಂದ ಸಮಾಜವನ್ನು ತೀವ್ರವಾಗಿ ಕಾಡುತ್ತಿರುವ ಜಾತಿ ಮತ್ತು ಮತೀಯವಾದಿ ಸಂಕಟಗಳನ್ನು ನಿರ್ಮೂಲನೆ ಮಾಡಲು ಸಾಧ್ಯವಿದೆ ಎಂಬುದು ತೇಜಸ್ವಿಯವರ ಕಥನದ ಆಶಯವಾಗಿದೆ.

ಪ್ರತಿರೋಧ ಮತ್ತು ಅರಿವಿನ ನೆಲೆಗಳು

ಕೆಸರೂರಿನ ಹರಿಜನರು ರಾಮಾಚಾರಿ ಮತ್ತು ತಮ್ಮಣ್ಣಗೌಡನನ್ನು ಸಹಜವೆಂಬಂತೆ ಕೇಳುವ 'ನಿಮ್ಮ ದೇವಸ್ಥಾನಕ್ಕೆ ನಮ್ಮನ್ನು ಸೇರಿಸ್ಕೋತೀರಾ! ನಿಮ್ಮ ಮನೆ ಒಳಗೆ ನಮ್ಮನ್ನು ಬಿಟ್ಕೋತೀರಾ? ನಮ್ಮನ್ನು ಮುಟ್ಟಿಸ್ಕೋತೀರಾ.?' 'ನಮ್ಮಜ್ಜ ಮುತ್ತಜ್ಜನ ಕಾಲದಿಂದ ಮುಕ್ಕಿ ಬಗ್ಗಿಸಿ ದುಡಿದ್ರೂ ಇವತ್ತಿಗೂ ಅರೆ ಹೊಟ್ಟೆ ಹರಕಲು ಬಟ್ಟೆ! ಕಾಣಾದಿಲ್ಲೇನು?' 'ಹೊಲೇರ ಹುಡುಗೀರು ತೋಟದಾಗೆ ಬಂದ್ರೆ ಹಿಡಿಯಕ್ಕೆ ಹೋಗ್ತೀರಿ?' ಎಂಬ ಪ್ರಶ್ನೆಗಳು ಎಚ್ಚೆತ್ತ ಸಮಾಜದ ಲಕ್ಷಣಗಳಾಗಿದ್ದು, ಈ ನಿಟ್ಟಿನಲ್ಲಿ ಸಮಾಜ ನಡೆಯಬೇಕಾದ ಅಗತ್ಯವನ್ನು ತೇಜಸ್ವಿ ಕಥನ ಸೂಚಿಸುತ್ತದೆ.

ಕಿರಗೂರಿನ ಪುರುಷ ಸಮಾಜ ಜಾತಿ ಜಗಳದಲ್ಲಿ ಮುಳುಗಿದ್ದರೆ ಈ ಎಲ್ಲ ಜಾತಿ, ಧರ್ಮಗಳ ಮಿತಿಗಳನ್ನೂ ಮೀರಿ ಮನುಷ್ಯ ಧರ್ಮವನ್ನು ಮೆರೆಯುವ ಕಿರಗೂರಿನ ದಾನಮ್ಮ ಮತ್ತು ಸಂಗಡಿಗರ ಚಿತ್ರಣ, ಜಾತಿಯನ್ನು ಮೀರಿ ನಾಗಮ್ಮ ಮಲೆಯಾಳಿ ಪಂಡಿತನೊಂದಿಗೆ ಹೋಗುತ್ತಾಳೆ. ಜಾತಿಯ ಕಾರಣದಿಂದ ಉಳುಕು ತೆಗೆಯಲು ನಿರಾಕರಿಸುತ್ತಿದ್ದ ಕರಿಯನನ್ನು ಅವನ ಹೆಂಡತಿ ಕಾಳಿ ಕೋಲು ತೋರಿಸಿ ಹೆದರಿಸುತ್ತಾಳೆ. ಶರಿಯತ್ ಧಾರ್ಮಿಕ ಕಾನೂನುಗಳನ್ನೇ ನಿರಾಕರಿಸಿ ಜಮಾತೆಯವರ ವಿರುದ್ಧ ಫಾತಿಮ ತಿರುಗಿಬೀಳುತ್ತಾಳೆ. ಈ ಪ್ರಸಂಗಗಳು ನಮ್ಮ ಸಮಾಜದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತರು ಹಾಗೂ ಧರ್ಮಾತೀತರು ಆಗಿರುವುದನ್ನು ತೇಜಸ್ವಿ ಕಥನ ಸೂಚಿಸುತ್ತಿದೆ. ಮಹಿಳೆಯರಿಗೆ ಜಾತಿ ಮತ್ತು

ಧರ್ಮಗಳಿಗಿಂತಲೂ ಬದುಕು ಮುಖ್ಯವಾಗಿ ತೋರುತ್ತದೆ. ಮಹಿಳೆಯರು ಪ್ರಯತ್ನಿಸಿದಲ್ಲಿ ಈ ಜಾತಿ ಮತ್ತು ಮತೀಯವಾದಿ ಶಕ್ತಿಗಳನ್ನು, ಸಮಾಜ ಒಡೆಯುವ ಪುರುಷರ ಸಮಾಜ ವಿರೋಧಿ ಕೃತ್ಯಗಳನ್ನು ನಿಯಂತ್ರಿಸಬಹುದು ಎಂಬ ಆಶಯವನ್ನು ತೇಜಸ್ವಿ ಕಥನ ವ್ಯಕ್ತಪಡಿಸುತ್ತದೆ.

ಹಾಗೆಯೇ ಹಳೆ ತಲೆಮಾರಿನ ಸಮುದಾಯ ಪರಂಪರೆಯಿಂದಲೂ ಜಾತಿ ಹಿಂಸೆಯ ಖೆಡ್ಡದೊಳಗೆ ಸಿಕ್ಕಿಹಾಕಿಕೊಂಡು ನರಳಿ ಅಭ್ಯಾಸವಾಗಿರುವುದರಿಂದ ಅಷ್ಟು ಸುಲಭಕ್ಕೆ ಮತಾಂತರಗಳನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನೂ ಅಣ್ಣಪ್ಪಣ್ಣನ ಹೆಂಡತಿ ರುಕ್ಮಿಣಿ, ಬಾಬು ಹೆಂಡತಿ ಗಂಗೆ, ಕರಾಟೆ ಮಂಜನ ತಾಯಿ ಈರಿ ಇವರೆಲ್ಲರ ವರ್ತನೆಯಲ್ಲಿ ಕಾಣಬಹುದು.

ಪರಂಪರೆಯ ನಂಬಿಕೆಗಳನ್ನು ಎಚ್ಚೆತ್ತ ಸುಶಿಕ್ಷಿತ ನವಸಮಾಜ ಪ್ರಶ್ನಿಸಬೇಕು ಆ ಮೂಲಕ ಅವರ ನಂಬಿಕೆಗಳ ಹಿಂದಿರುವ ಮೇಲ್ಜಾತಿ, ವರ್ಗಗಳ ಗುಪ್ತ ಹುನ್ನಾರಗಳನ್ನು ಅರಿತುಕೊಳ್ಳಬೇಕು ಎಂಬುದು ತೇಜಸ್ವಿ ಕಥನದ ಆಶಯವಾಗಿದೆ. ರಫಿ, ಜಯಂತಿ, ಕೆಸರೂರಿನ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕ ರಾಮಚಂದ್ರ, ಸಾಹಿತಿ ಜಯರಾಂ, ಹರಿಜನ ಯುವಕರು; ಹುಲಿಯೂರಿನ ಸೋಮು, ನಳಿನಾಕ್ಷಿ; ಡೇರ್ ಡೆವಿಲ್ ಮುಸ್ತಫಾ ಕಥೆಯ ಮುಸ್ತಫಾ ಮತ್ತು ಆತನ ಸಹಪಾಠಿಗಳು; ಬೈರಾಪುರದ ವೈದ್ಯ ಕುಬಿ ಮುಂತಾದ ಪಾತ್ರಗಳ ಮೂಲಕ ಶಿಕ್ಷಣ ನಮ್ಮನ್ನು ಪರಂಪರೆಯಿಂದ ಕಾಡುತ್ತಿರುವ ಜಾತಿವಾದ ಮತ್ತುಮತೀಯವಾದಿ ಬಂಧನಗಳಿಂದ ಬಿಡುಗಡೆಗೊಳಿಸುತ್ತದೆ ಎಂಬುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಒಟ್ಟಾರೆ ಸ್ವತಂತ್ರ ಭಾರತದ ಈ ಸಮಾಜವನ್ನು ಜಾತಿ ಮತ್ತು ಮತೀಯ ಶಕ್ತಿಗಳೇ ಆಳುತ್ತಿರುವುದು ಮತ್ತು ಇಲ್ಲಿನ ಅಧಿಕಾರ ಕೇಂದ್ರಗಳನ್ನು ನಿಯಂತ್ರಿಸುತ್ತಿರುವುದು ನಮ್ಮ ಪ್ರಜಾಪ್ರಭುತ್ವವನ್ನು ಅಣಕಿಸುವಂತಿದೆ. ಈ ಜಾತಿ ಮತ್ತು ಮತೀಯ ಸಮಾಜದೊಂದಿಗೆ ಒಂದು ಅಂತರವನ್ನು ಕಾಯ್ದುಕೊಂಡು ಈ ಸಮಾಜದ ಸಮಗ್ರ ಚಲನೆಯನ್ನು ಗ್ರಹಿಸಲು, ಅರ್ಥೈಸಲು ಯತ್ನಿಸುವುದರ ಜೊತೆಗೆ ಉದಾತ್ತ ಜೀವನಕ್ರಮದ ಅನಿವಾರ್ಯತೆಯನ್ನು ರೂಡಿಸಿಕೊಳ್ಳಬೇಕು ಎಂಬುದನ್ನು ಮನಗಾಣಿಸಲು ತೇಜಸ್ವಿ ಕಥನ ಯತ್ನಿಸುತ್ತದೆ. ಅಸ್ಪೃಶ್ಯತೆಯ ಒಂದೊಂದೇ ಮುಖಗಳನ್ನು ಬೆತ್ತಲೆಗೊಳಿಸುತ್ತ; ಅಸ್ಪೃಶ್ಯತೆಯನ್ನು ಆಚರಿಸುವವರ ಆಂತರ್ಯದ ಹುನ್ನಾರಗಳನ್ನು ಅರಿಯುವುದರ ಜೊತೆಯಲ್ಲೇ ಅವುಗಳಿಂದ ಬಿಡಿಸಿಕೊಳ್ಳಲು ಇರುವ ಪರ್ಯಾಯ ಹಾದಿಗಳನ್ನೂ ಸಹಾ ಶೋಧಿಸುತ್ತದೆ. ಎಲ್ಲಾ ಬಗೆಯ ಕೋಮುವಾದವನ್ನು ವಿರೋದಿಸುತ್ತಲೇ, ಜ್ಯಾತ್ಯತೀತತೆ ಎನ್ನುವುದು ನಾವು ನೆಮ್ಮದಿಯಿಂದ ಬದುಕುವುದು ಮಾತ್ರವಲ್ಲ, ನಮ್ಮ ಸುತ್ತಲಿನವರನ್ನೂ ನೆಮ್ಮದಿಯಿಂದ ಬದುಕುವಂತೆ ಮಾಡುವುದೇ ಆಗಿದೆ ಎಂಬ ಅರಿವನ್ನು ಇವರ ಕಥನ ನಮಗೆ ಕಟ್ಟಿಕೊಡುತ್ತದೆ.

ಗಂಡು ಕಣ್ಣಿನ ಗ್ರಹಿಕೆ : ದೇಹಕೇಂದ್ರಿತ ನೋಟ

ತೇಜಸ್ವಿಯವರ ಆರಂಭದ ಬರವಣಿಗೆಗಳಲ್ಲಿ ಪುರುಷ ಸಮಾಜ ಹೆಣ್ಣುಗಳನ್ನು ಬಳಸಲ್ಪಡುವ ವಸ್ತುವಿನಂತೆ ಭಾವಿಸುವುದನ್ನು ಚಿತ್ರಿಸಲಾಗಿದೆ. ಇದಕ್ಕೆ ಉದಾಹರಣೆಯಾಗಿ 'ನಿಗೂಢ ಮನುಷ್ಯರು' ಕಾದಂಬರಿಯ ಶಾರಿ, ಸ್ವರೂಪ ಕಾದಂಬರಿಯಲ್ಲಿನ ಶ್ರೀನಿವಾಸ ಪ್ರಸ್ತಾಪಿಸುವ ಸ್ತ್ರೀ ಪಾತ್ರಗಳು, ಹುಲಿಯೂರಿನ ಸರಹದ್ದು ಕಥಾ ಸಂಕಲನದ ಹೆಣ್ಣಿನ ಚಿತ್ರಣಗಳನ್ನು ಗಮನಿಸಬಹುದು. ಸ್ವರೂಪ ಕಾದಂಬರಿಯಲ್ಲಿ ಶ್ರೀನಿವಾಸ ಪ್ರಸ್ತಾಪಿಸುವ ಸ್ತ್ರೀ ಪಾತ್ರಗಳನ್ನು ಭೋಗದ ವಸ್ತುವನ್ನಾಗಿ ಮಾತ್ರ ನೋಡುವುದು ಮತ್ತು ಅವರನ್ನು ಬಳಸಿಕೊಳ್ಳದೇ ಇರುವ ಬಗ್ಗೆ ವಿಷಾದ ವ್ಯಕ್ತಪಡಿಸುವ ದೃಷ್ಟಿಯೇ ಇದೆ. ಹುಲಿಯೂರಿನ ಸರಹದ್ದು ಕಥಾ ಸಂಕಲನದ ಸುಭದ್ರೆ, ನಳಿನಾಕ್ಷಿ ಮುಂತಾದ ಹೆಣ್ಣಿನ ಪಾತ್ರಗಳನ್ನು ಪುರುಷ ಸಮಾಜವು ಭೋಗದ ವಸ್ತುವನ್ನಾಗಿಯೇ ನೋಡುತ್ತದೆ. ಜೊತೆಗೆ ತಾನು ಪಾರಂಪರಿಕ ಸಮಾಜದ ಸಂಕೋಲೆಗಳಿಂದ ಬಿಡುಗಡೆಗೊಳ್ಳಲು ಇರುವ ಮೆಟ್ಟಿಲುಗಳಂತೆ ಹೆಣ್ಣನ್ನು ಕಾಣುತ್ತದೆ ಮತ್ತು ಬಳಸುತ್ತದೆ.

ಗಂಡಿಗೆ ಹೆಣ್ಣಿನ ದೇಹ ಅರ್ಥವಾದಂತೆ ಆಕೆಯ ಮನಸ್ಸು ಅರ್ಥವಾಗುವುದಿಲ್ಲ. ಇದಕ್ಕೆ ಅವನು ಹೆಣ್ಣನ್ನು ನೋಡುವ ದೃಷ್ಟಿಕೋನವೇ ಕಾರಣ. ಸ್ವರೂಪ ಕಾದಂಬರಿಯಲ್ಲಿನ ಶ್ರೀನಿವಾಸನ ಮಾತುಗಳು, ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ಮಾರ ಮತ್ತು ಸಿದ್ಧ ತಮ್ಮ ಹೆಂಡತಿಯರನ್ನು ಉದ್ದೇಶಿಸಿ ಹೇಳುವ ಮಾತುಗಳು ಇವೆಲ್ಲಾ ಪುರುಷ ಹೆಣ್ಣನ್ನು ತನ್ನ ಅಧೀನವಾಗಿಯೇ ಉಳಿಸಿಕೊಳ್ಳಬೇಕೆನ್ನುವ ಒತ್ತಾಸೆಯ ತಂತ್ರಗಳೇ ಆಗಿರುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ಹೆಣ್ಣಿನ ಸ್ವತಂತ್ರ ನಡೆಗಳು, ಆಲೋಚನೆಗಳು ನಿರಂತರವಾಗಿ ತನ್ನ ಅಧಿಕಾರವನ್ನು ಪ್ರತಿಷ್ಠಾಪಿಸಿಕೊಂಡು ಬಂದಿರುವ ಗಂಡಿನಲ್ಲಿ ತಳಮಳಗಳನ್ನು ಉಂಟುಮಾಡುತ್ತವೆ. ಕಿರಗೂರಿನ ಗಯ್ಯಾಳಿಗಳು ಕತೆಯ ಮಾರನ ಮಾತುಗಳನ್ನು ಗಮನಿಸಿದರೆ ಲೈಂಗಿಕತೆ ಮತ್ತು ಬಿಡುವಿಲ್ಲದ ತಾಯ್ತನಗಳ ಮೂಲಕ ಹೆಣ್ಣನ್ನು ಹದ್ದುಬಸ್ತಿನಲ್ಲಿ ಇಡಬೇಕು; ಇಲ್ಲದಿದ್ದರೆ ಅವರು ನಿಯಂತ್ರಣಕ್ಕೇ ಸಿಕ್ಕುವುದಿಲ್ಲ ಎಂಬ ನಿಲುವು ಪುರುಷ ಸಮುದಾಯದಲ್ಲಿ ಇರುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ. ಹೀಗೆ ತಾಯ್ತನ ಒಂದೇ ಅಲ್ಲ ಧರ್ಮ, ಜಾತಿ, ಸಂಸ್ಕೃತಿ, ಲೈಂಗಿಕತೆ, ಮಕ್ಕಳ ಪೋಷಣೆ ಹೀಗೆ ಹಲವು ಕಾರ್ಯಗಳಿಗೆ ಹೆಣ್ಣು ಒಬ್ಬಳನ್ನೇ ಜವಾಬ್ದಾರಳನ್ನಾಗಿ ಮಾಡುವುದರ ಮೂಲಕ ಹೇಗಾದರೂ ಆಕೆಯನ್ನು ತನ್ನ ಪುರುಷಾಧಿಕಾರಕ್ಕೆ ಧಕ್ಕೆಯಾಗದಂತೆ

ನಿರಂತರವಾಗಿ ಬಂಧಿಯಾಗಿಡುವ ತಂತ್ರಗಳನ್ನು, ಗುಪ್ತ ಹುನ್ನಾರಗಳನ್ನು ಪುರುಷಪ್ರಧಾನ ಸಮಾಜ ಹೆಣೆಯುತ್ತಾ ಬಂದಿರುವುದನ್ನು ತೇಜಸ್ವಿ ಕಥನ ಬಹಿರಂಗಗೊಳಿಸುತ್ತದೆ.

ಅವನತಿ ಕಥೆಯಲ್ಲಿನ ಇತ್ತಾವರದ ಸುಬ್ಬಯ್ಯನ ಹೆಂಡತಿ ಗೌರಿ ಒಂದು ಆಶ್ಚರ್ಯಾದ್ಭುತವಾಗಿದ್ದಳು. ಸೌಂದರ್ಯದಲ್ಲಿ ಸಕಲ ಶಿಲ್ಪ ಶಾಸ್ತ್ರ ಲಕ್ಷಣಗಳ ಅವತಾರದಂತೆ ಕಾಣುತ್ತಿದ್ದಳು. ಅವಳು ಕುಳಿತರೆ, ನಿಂತರೆ, ನಕ್ಕರೆ ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರವಾದಂತಾಗುತ್ತಿತ್ತು ಎಂಬ ನಿರೂಪಣೆ ಬರುತ್ತದೆ. ಹೀಗೆ ಗೌರಿಯ ಸೌಂದರ್ಯವನ್ನು ಅರಾಧಿಸುವ ನಿರೂಪಕ ಇಲ್ಲಿ ತೋರುವ ಆದರ ಮತ್ತು ಕಾಳಜಿಯನ್ನು ಕರ್ವಾಲೋ ಕಾದಂಬರಿಯ ಮಂದಣ್ಣನ ಪತ್ನಿ ರಾಮಿಯ ಸಂದರ್ಭದಲ್ಲಿ ತೋರುವುದಿಲ್ಲ. ಇದು ಮೇಲ್ವರ್ಗಗಳ ಸೌಂದರ್ಯಾರಾಧನೆಯ ಪರಿಣಾಮವೇ ಆಗಿದೆ. ವರ್ಗದೃಷ್ಟಿಯ ನೆಲೆಯಲ್ಲಿ ಹೆಣ್ಣನ್ನು ದೇಹಕೇಂದ್ರಿತವಾಗಿ ನೋಡುವ ಗಂಡು ನೋಟದ ಮಿತಿಗಳನ್ನೂ ಸಹಾ ಇವರ ಕಥನಗಳು ನಮಗೆ ತೆರೆದು ತೋರುತ್ತವೆ.

ಸಂಸ್ಕೃತಿ, ಮೌಢ್ಯ ಮತ್ತು ಪುರುಷಾಧಿಕಾರ

ಭಾರತೀಯ ಸಂಸ್ಕೃತಿ, ಇಲ್ಲಿನ ಆಚರಣೆಗಳು, ನಂಬಿಕೆಗಳು ಸನಾತನವಾದುದು. ಇವುಗಳನ್ನು ಉಳಿಸಿಬೆಳೆಸುವ ಹೊಣೆಗಾರಿಕೆ ಹೆಣ್ಣಿನದ್ದು ಎಂಬ ಹುಸಿಗಳನ್ನು ಸೃಷ್ಟಿಸಿ, ಪುರುಷಪ್ರಧಾನ ಸಮಾಜವು ಸಂಸ್ಕೃತಿ, ಆಚರಣೆ, ತಾಯ್ತನ, ಮೂಢನಂಬಿಕೆಗಳ ಮೂಲಕ ಹೆಣ್ಣನ್ನು ನಿಯಂತ್ರಿಸುವ ಹುನ್ನಾರಗಳನ್ನು ಹೂಡುತ್ತಿರುವುದನ್ನು ತೇಜಸ್ವಿಯವರ ಕಥನ ಚರ್ಚಿಸುತ್ತದೆ.

ಕುಬಿ ಮತ್ತು ಇಯಾಲ ಕಥೆಯಲ್ಲಿ ಮೂಢನಂಬಿಕೆಗಳ ಆಗರವಾದ ಬೈರಾಪುರದ ಜನರನ್ನು ವೈದ್ಯ ಕುಬಿ ಬಿಡುಗಡೆಗೊಳಿಸಲು ಎಷ್ಟೆಲ್ಲಾ ಪ್ರಯತ್ನಿಸಿದರೂ, ಅವನ ಎಲ್ಲಾ ಪ್ರಯತ್ನಗಳು ವಿಪಲಗೊಳ್ಳುತ್ತವೆ ಹಾಗೂ ಅವನ ಪ್ರಯತ್ನಗಳನ್ನೇ ಬಳಸಿಕೊಂಡು ಅವು ಮತ್ತಷ್ಟು ಬಲಗೊಳ್ಳುತ್ತವೆ. ಮೈನೆರೆದ ಕನ್ಯೆಯನ್ನು ಭೋಗಿಸಿದರೆ ಗುಪ್ತರೋಗಗಳು ವಾಸಿಯಾಗುತ್ತವೆ ಎಂಬ ಮೌಢ್ಯದಿಂದ ಲೋರಿಯು ಬಾಲಕಿ ಇಯಾಲಳ ಮೇಲೆ ಅತ್ಯಾಚಾರಗೈದು ಕೊಂದುಹಾಕುತ್ತಾನೆ. ಅದನ್ನು ಖಂಡಿಸಬೇಕಾದ, ವಿರೋಧಿಸಬೇಕಾದ ಬೈರಾಪುರದ ಪುರುಷ ಸಮಾಜ ಯಾವುದೇ ನಾಚಿಕೆ, ವಿಷಾದ, ಕರುಣೆಯೂ ಇಲ್ಲದೆ ಆ ಘಟನೆಯನ್ನು ತನ್ನ ರಾಜಕೀಯ ಎದುರಾಳಿಗಳನ್ನು ಹಣಿಯಲು ಬಳಸಿಕೊಳ್ಳುತ್ತದೆ. ಇದು ಪುರುಷಪ್ರಧಾನ ಸಮಾಜವು ತನ್ನದೇ ಆದ ಮೂಢನಂಬಿಕೆಗಳ ಲೋಕವನ್ನು ಸೃಷ್ಟಿಸಿ ಹೆಣ್ಣನ್ನು ಬಳಸಿಕೊಳ್ಳುವುದನ್ನು ಸೂಚಿಸುತ್ತದೆ.

ಅವನತಿ ಕಥೆಯ ಸೂರಾಚಾರಿಯು ಮಲೆಸೀಮೆಯ ಗಡಿ ದಾಟಲು ನಿರಾಕರಿಸುವ ತನ್ನ ಹೆಂಡತಿ ಯಶೋದೆಯ ಮನೋಭಿಲಾಷೆಯನ್ನು ಅರಿಯಲು ಯತ್ನಿಸದೆ ದೆವ್ವ, ಪಿಶಾಚಿ ಮೆತ್ತಿಕೊಂಡಿದೆಯೆಂದು ಆರೋಪಿಸಿ ಅವುಗಳ ಉಚ್ಚಾಟನೆ ಮಾಡಲು ಕಸಬರಿಕೆ ತೆಗೆದುಕೊಂಡು ಹೊಡೆಯುವುದು, ಮೆಟ್ಟಿನಲ್ಲಿ ಹೊಡೆಯುವುದು, ಹೊಗೆ ಹಾಕಿ ಸಗಣಿ ನೀರು ಕುಡಿಸುವುದು ಇವೆಲ್ಲಾ ಮೌಢ್ಯಾಚರಣೆಯ ಪರಮಾವಧಿಯೇ ಆಗಿದೆ. ಸೌಂದರ್ಯದಲ್ಲಿ ಸಕಲ ಶಿಲ್ಪಶಾಸ್ತ್ರ ಲಕ್ಷಣಗಳ ಅವತಾರದಂತಿದ್ದ ಇತ್ತಾವರದ ಸುಬ್ಬಯ್ಯನ ಹೆಂಡತಿ ಗೌರಿ ಸೌಂದರ್ಯವನ್ನು ಮಕ್ಕಳು ಸಾಯಲು ಕಾರಣವಾಗಿಸಿ ಸುಟ್ಟು ವಿರೂಪಗೊಳಿಸುವುದು ಇವೆಲ್ಲವೂ ಹೆಣ್ಣನ್ನು ಈ ಸಮಾಜವು ಮೂಢನಂಬಿಕೆಗಳಲ್ಲಿ ಇರಿಸಿರುವುದನ್ನು ಸೂಚಿಸುತ್ತದೆ.

ಹೆಣ್ತನದ ಕಲ್ಪನೆ : ವರ್ಗದೃಷ್ಟಿ ಮತ್ತು ಶೋಷಣೆ

ಆಧುನಿಕತೆಯ ಸಂದರ್ಭದಲ್ಲಿ ಅಸಮಾನತೆಯಿಂದ ಕೂಡಿರುವ ಶಿಕ್ಷಣ, ಜಾತಿ, ವರ್ಗ ಧೋರಣೆಯೂ ಸಹಾ ಸ್ತ್ರೀ ಶೋಷಣೆಗೆ ಪ್ರಮುಖ ಕಾರಣವಾಗಿರುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ. ನಗರ–ಗ್ರಾಮ, ವಿದ್ಯಾವಂತ–ಅವಿದ್ಯಾವಂತ, ಸುಂದರ–ಸುಂದರವಲ್ಲದ್ದು, ಶ್ರೀಮಂತ–ಬಡವ ಮುಂತಾದ ಅಸಮಾನ ದೃಷ್ಟಿಕೋನಗಳೂ ಸಹಾ ಮಹಿಳೆಯರನ್ನು ಭಿನ್ನ ಬಗೆಯಲ್ಲಿ ಶೋಷಣೆಗೆ ಗುರಿಮಾಡಿವೆ. ಸ್ತ್ರೀ ಶೋಷಣೆಯನ್ನು ಏಕರೂಪಿತನದಿಂದ ಕೂಡಿದ ಇಲ್ಲವೇ ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಹಾಕಿ ನೋಡುವುದರಿಂದ ಮಹಿಳಾ ಹೋರಾಟಗಳು, ಸ್ತ್ರೀ ಕಾಳಜಿಯ ಚಿಂತನೆಗಳು ನೆಲಕಚ್ಚುತ್ತವೆ ಎಂಬ ಎಚ್ಚರಿಕೆಯ ಜೊತೆಗೆ ನಿಜಕ್ಕೂ ಸ್ತ್ರೀಪರವಾದ ಚಿಂತನೆಗಳು ರೂಪಿಸಿಕೊಳ್ಳಬೇಕಾದ ತಾತ್ವಿಕತೆಯನ್ನೂ ತೇಜಸ್ವಿಯವರ ಕಥನಗಳಲ್ಲಿ ಗುರುತಿಸಬಹುದು.

ತೇಜಸ್ವಿಯವರ ಕಥನಗಳ ನಿರೂಪಕ ಪಾತ್ರಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮಧ್ಯಮ ವರ್ಗದ ಸ್ತಾನದಲ್ಲಿವೆ. ಅವು ಈ ಸಮಾಜವನ್ನು ಒಂದು ಅಂತರ ಕಾಯ್ದುಕೊಂಡು ಗ್ರಹಿಸುತ್ತವೆ ಮತ್ತು ನಿರೂಪಿಸುತ್ತವೆ. ಮಂದಣ್ಣನ ಹೆಂಡತಿ ರಾಮಿಯನ್ನು ತೀರ ಸರಳವಾಗಿ ಮತ್ತು ಉದಾಸೀನವಾಗಿ ಬಾಹ್ಯ ನೋಟಕ್ಕೆ ಅರೆ ಹುಚ್ಚಳಂತೆ ನಿರೂಪಿಸಲಾಗಿದೆ. ಆದರೆ ಇದೇ ದೃಷ್ಟಿಕೋನ, ಕೀಟಲೆಗಳು ಮೇಲ್ವರ್ಗದ ಹೆಣ್ಣುಗಳ ಬಗ್ಗೆ ವ್ಯಕ್ತವಾಗುವುದಿಲ್ಲ. ನಿರೂಪಕ ಹಾರುವ ಓತಿಯ ಕುರಿತ ಚರ್ಚೆಯಲ್ಲಿ ಕರ್ವಾಲೋ ಮಾತನಾಡುವ ಸಂದರ್ಭದಲ್ಲಿ ತನ್ನ ಪತ್ನಿಯ ಅಭಿಪ್ರಾಯಗಳನ್ನು, ಪ್ರಶ್ನೆಗಳನ್ನು ಗೌರವಿಸುತ್ತಾನೆ. ಆಕೆ ಪದವೀಧರೆಯೆಂದು ಸಮರ್ಥಿಸುತ್ತಾನೆ. ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ಮೇಲ್ವರ್ಗದ ಸುರೇಶನ ಪತ್ನಿ ಗೌರಿಯನ್ನು ಸುರೇಶನಿಗಿಂತ ಹೆಚ್ಚು ತಿಳುವಳಿಕೆಯುಳ್ಳವಳೆಂದು, ಬುದ್ಧಿವಂತಳೆಂದು ನಿರೂಪಿಸಲಾಗಿದೆ. ಆ ಮೂಲಕ ಶಿಕ್ಷಣ,

ಜಾತಿ, ವರ್ಗ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಸ್ತ್ರೀ ಶೋಷಣೆಯ ಭಿನ್ನ ಆಯಾಮಗಳನ್ನು ತೇಜಸ್ವಿ ಕಥನ ಚರ್ಚಿಸುತ್ತದೆ.

ಹೆಣ್ಣು ಅಬಲೆ, ಸಹನಶೀಲಳು, ಸಹಿಷ್ಣುತೆಯುಳ್ಳವಳು, ಸೌಮ್ಯಮೂರ್ತಿ, ಪರಂಪರೆಯ ಸನಾತನಿ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವ, ಗಂಡಿನ ಎಲ್ಲಾ ಅನಾಚಾರಗಳನ್ನು, ಅವಗಡಗಳನ್ನು ತನ್ನ ಮೇಲೆ ಹೇರಿಕೊಂಡು ಅವನನ್ನು ರಕ್ಷಿಸುವ ಗುಣವುಳ್ಳವಳು ಹಾಗೂ ಸದಾ ಪುರುಷನ ಅಧೀನದಲ್ಲಿ ಬದುಕುವವಳು ಎಂಬ ಪುರುಷ ಕಲ್ಪಿತ ಹುಸಿಗಳನ್ನು ಯಾರೂ ನಿರೀಕ್ಷಿಸದ ರೀತಿ ದಾನಮ್ಮ ಮತ್ತು ಸಂಗಡಿಗರು ಬಿರುಗಾಳಿಯಂತೆ ಅಪ್ಪಳಿಸಿ ತಮಗೆ ಆರೋಪಿಸಿರುವ ಗುಣಗಳನ್ನು ಧಿಕ್ಕರಿಸುತ್ತಾರೆ. ಹೀಗೆ ದಾನಮ್ಮ, ನಾಗಮ್ಮನಂತಹ ಪಾತ್ರಗಳ ಚಿತ್ರಣದ ಮೂಲಕ ತೇಜಸ್ವಿ ಕಥನವು ನಮ್ಮ ಸಮಾಜವು ಹೆಣ್ಣನ್ನು ನಡೆಸಿಕೊಳ್ಳುತ್ತಿರುವ ಮಾದರಿಗಳನ್ನು ನಿರೂಪಣೆ ಮಾಡುತ್ತಲೇ, ಆ ಬಗ್ಗೆ ನಮ್ಮಲ್ಲಿ ಎಚ್ಚರ ಮತ್ತು ವಿವೇಕವನ್ನು ಹುಟ್ಟಿಸುವ ಕೆಲಸವನ್ನು ಮಾಡುತ್ತಲೇ ಪ್ರತಿರೋಧಿಸುವ ಮಾದರಿಗಳನ್ನು ನಮ್ಮೆದುರು ಮಂಡಿಸುತ್ತದೆ.

ರಾಮಿ, ಗೌರಿ ಮುಂತಾದ ಪಾತ್ರಗಳ ಮೂಲಕ ಹೆಣ್ಣಿನ ಸೌಂದರ್ಯ ಗಂಡಿನ ಪುರುಷಾಧಿಕಾರದ ಮೆರೆಯುವಿಕೆಗೂ, ಪರಸ್ಪರ ನಮ್ಮ ನಡುವಿನ ಅಸೂಯೆ ಮತ್ತು ದ್ವೇಷ ಸಾಧನೆಗಳಿಗೂ ಹಾಗೂ ತಮ್ಮ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳುವುದಕ್ಕೂ ಬಳಕೆಯಾಗುತ್ತಿರುವುದನ್ನು ತೇಜಸ್ವಿ ಕಥನ ಗುರುತಿಸುತ್ತದೆ.

ನಿರ್ಜಾತೀಕರಣದ ದಾರಿಗಳು ಮತ್ತು ಮಹಿಳೆ

ಸಮಾಜವನ್ನು ಕಾಡುತ್ತಿರುವ ಜಾತೀವಾದ ಮತ್ತು ಮತೀಯವಾದಗಳ ನಿರ್ಮೂಲನೆಯಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತ ಹಾಗೂ ಧರ್ಮಾತೀತರಾಗಿರುವುದನ್ನು ತೇಜಸ್ವಿ ಕಥನ ಕಾಣಿಸುತ್ತದೆ.

ಕಿರಗೂರಿನ ಪುರುಷ ಸಮಾಜ ಜಾತಿ ಜಗಳದಲ್ಲಿ ಮುಳುಗಿದ್ದರೆ ಈ ಎಲ್ಲ ಜಾತಿ, ಧರ್ಮಗಳ ಮಿತಿಗಳನ್ನೂ ಮೀರಿ ದಾನಮ್ಮ, ನಾಗಮ್ಮ, ಕಾಳಿ ಮುಂತಾದವರು ಮನುಷ್ಯ ಧರ್ಮವನ್ನು ಮೆರೆಯುತ್ತಾರೆ. ಪುರುಷ ಸಮಾಜದ ಮದುವೆಗಳು, ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು ಎಲ್ಲವನ್ನೂ ಹಿಂಸೆಕೊಡುವ ಗಂಡಸರ ನೀಚತನವಾಗಿ ಕಾಣುತ್ತಾರೆ. ಜಾತಿಯನ್ನು ಮೀರಿ ನಾಗಮ್ಮ ಮಲೆಯಾಳಿ ಪಂಡಿತನೊಂದಿಗೆ ಹೋಗುವ ಮೂಲಕ ಜಾತಿಯನ್ನು ಮೀರಲು ಯತ್ನಿಸುತ್ತಾಳೆ. ಜಾತಿಯ ಕಾರಣದಿಂದ ಉಳುಕು ತೆಗೆಯಲು ನಿರಾಕರಿಸುತ್ತಿದ್ದ ಕರಿಯನನ್ನು ಅವನ ಹೆಂಡತಿ ಕಾಳಿ ಕೋಲು ತೋರಿಸಿ ಹೆದರಿಸುತ್ತಾಳೆ.

ಮಾಯಾಲೋಕದ ಬಜ್ಜಿ ಮಾರುವ ಫಾತಿಮ ಸಹಾ ಸೆಕ್ಯುಲರ್ ಮಹಿಳೆಯ ಸಂಕೇತವಾಗಿ ಕಾಣುತ್ತಾಳೆ. ಈಕೆ ಜಮಾತೆ ಮುಖ್ಯಸ್ಥರು ಹೇರಲು ಬರುವ ಶರಿಯತ್ ಧಾರ್ಮಿಕ ಕಾನೂನುಗಳನ್ನು ನಿರಾಕರಿಸಿ ಜಮಾತೆಯವರ ವಿರುದ್ಧ ತಿರುಗಿಬೀಳುತ್ತಾಳೆ. ದೇವರು, ಧರ್ಮ, ಆಚರಣೆ, ನಂಬಿಕೆಗಳಿಗಿಂತ ಸಹಬಾಳ್ವೆಯಿಂದ ಬದುಕುವುದು ಮುಖ್ಯ ಎಂದು ತಿಳಿದು ಹಾಗೆಯೇ ಬದುಕುತ್ತಾಳೆ. ಕೆಸರೂರು ಜಾತಿ ಮತ್ತು ಧಾರ್ಮಿಕ ಕಲಹಗಳಲ್ಲಿ ಮುಳುಗಿ ಅವನತಿಯಾಗುತ್ತಿದ್ದರೆ ಜಯಂತಿ ಅಂತರ್ಧರ್ಮೀಯನಾದ ರಫಿಯನ್ನು ಪ್ರೀತಿಸಿ ಅವನೊಂದಿಗೆ ಹೊರಡುತ್ತಾಳೆ. ಈ ಪ್ರಸಂಗಗಳು ನಮ್ಮ ಸಮಾಜದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಜಾತ್ಯತೀತ ಹಾಗೂ ಧರ್ಮಾತೀತರಾಗಿರುವುದನ್ನೇ ಹೇಳುತ್ತವೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಜಾತಿ ಧರ್ಮಗಳನ್ನು ಮೀರಲು ಯತ್ನಿಸುವ ಪ್ರಕ್ರಿಯೆಗಳು ನಿಜಕ್ಕೂ ಕ್ರಾಂತಿಕಾರಕವಾದವು.

ಆದರೆ ಮಾಯಾಲೋಕದ ಅಣ್ಣಪ್ಪಣ್ಣನ ಹೆಂಡತಿ ರುಕ್ಮಿಣಿ, ಬಾಬು ಹೆಂಡತಿ ಗಂಗೆ, ಕರಾಟೆ ಮಂಜನ ತಾಯಿ ಈರಿ ಮತಾಂತರದ ವಿಷಯದಲ್ಲಿ ಕ್ರಾಂತಿಕಾರಕವಾಗಿ ಯೋಚಿಸುವುದೂ ಇಲ್ಲ; ವರ್ತಿಸುವುದೂ ಇಲ್ಲ. ರುಕ್ಮಿಣಿ, ಗಂಗೆ, ಈರಿಯರು ಹಳೆಯ ತಲೆಮಾರನ್ನು ಪ್ರತಿನಿಧಿಸುತ್ತಾರೆ. ಹಳೆ ತಲೆಮಾರಿನ ಸಮುದಾಯ ಪರಂಪರೆಯಿಂದಲೂ ಜಾತಿ ಹಿಂಸೆಯ ಖೆಡ್ಡದೊಳಗೆ ಸಿಕ್ಕಿಹಾಕಿಕೊಂಡು ನರಳಿ ಅಭ್ಯಾಸವಾಗಿರುವುದರಿಂದ ಅಷ್ಟು ಸುಲಭಕ್ಕೆ ಮತಾಂತರಗಳನ್ನು ಒಪ್ಪಿಕೊಳ್ಳುವುದಿಲ್ಲ ಎಂದೇ ತೇಜಸ್ವಿ ಕಥನ ಹೇಳುತ್ತದೆ.

ಹೀಗೆ ತೇಜಸ್ವಿಯವರ ಕಥನಗಳು ಕಥಿಸುವ ಸ್ತ್ರೀಪಾತ್ರಗಳು ಮಹಿಳಾ ಶಕ್ತಿಯ ಅನಂತ ಸಾಧ್ಯತೆಗಳನ್ನು ಬಿಡಿಸಿಡುವುದರ ಜೊತೆಗೆ, ಲಿಂಗಾಧಾರಿತ ಮನುಷ್ಯ ಸಂಬಂಧಗಳ ಆಳಕ್ಕಿಳಿದು ಈ ಅಸಮಾನ ವ್ಯವಸ್ಥೆಯ ವಿರುದ್ಧ ಮಹಿಳೆಯರು ಒಟ್ಟಾಗಿ ಬಂಡೇಳಬೇಕಾದ, ಅನಿವಾರ್ಯತೆಯನ್ನು ಸೂಚಿಸುತ್ತವೆ. ಸಾಮಾಜಿಕವಾಗಿ ಬಿಡುಗಡೆಗೊಳ್ಳುವ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ನೆಲೆಗೊಳಿಸುವ ಹಿನ್ನೆಲೆಯಲ್ಲಿ ಕಾರ್ಯೋನ್ಮುಖವಾಗಬೇಕಾದ ಅಗತ್ಯ ಮತ್ತು ಅನಿವಾರ್ಯತೆಯನ್ನೂ ಕಟ್ಟಿಕೊಡುತ್ತವೆ. ಪುರುಷಪ್ರಧಾನ ಸಮಾಜದ ಲಿಂಗ ಅಸಮಾನತೆಯನ್ನು ಖಂಡಿಸುತ್ತಾ, ಅವರ ದೌರ್ಬಲ್ಯಗಳನ್ನು ಹೊರಹಾಕುತ್ತಾ ಅವರ ಹಿಡಿತಗಳಿಂದ ಬಿಡುಗಡೆಗೊಳ್ಳುವ ಹಾದಿಗಳನ್ನು ಕಂಡರಿಸುತ್ತವೆ.

ರೈತ ಕಾಳಜಿಗಳಿರಲಿ, ಪರಿಸರ ಕಾಳಜಿಗಳಿರಲಿ, ಮಹಿಳಾ ಕಾಳಜಿಗಳಿರಲಿ, ಸಹಬಾಳ್ವೆಯ–ಸಾಮರಸ್ಯದ ಕಾಳಜಿಗಳಿರಲಿ ಇಲ್ಲವೇ ಆಧುನಿಕತೆ ಮತ್ತು ಪರಂಪರೆಯ ನಿರ್ವಚನ ಮತ್ತು ಚಲನಶೀಲತೆಯ ಸಾಧ್ಯತೆಗಳಿರಲಿ ಎಲ್ಲಿಯೂ ತೇಜಸ್ವಿ ಕಥನವು ಏಕರೂಪ ಮಾದರಿಯ ನಿಲುವುಗಳನ್ನು ಪ್ರಕಟಿಸುವುದಿಲ್ಲ. ಸರಳ ರೀತಿಯ ಪರಿಹಾರಗಳನ್ನು

ಸೂಚಿಸುವುದಿಲ್ಲ. ಸಂಕೀರ್ಣ ಪ್ರಸಂಗಗಳು ಮತ್ತು ಬದುಕಿನ ವಿನ್ಯಾಸಗಳನ್ನು ಕಟ್ಟಿಕೊಡುವ ಮೂಲಕವೇ ಓದುಗರಲ್ಲಿ ತಮ್ಮದೇ ಆದ ವಿವೇಚನೆಗಳು ಮೂಡುವಂತೆ ರಚನೆಗೊಂಡಿದೆ. ಆನಂದ ಪಡೆಯಲಿಕ್ಕಾಗಿ ಅಥವಾ ಸಮಯ ಕಳೆಯಲಿಕ್ಕಾಗಿ ಓದುವ ಓದುಗ ವರ್ಗವನ್ನು ತೇಜಸ್ವಿ ಕಥನ ಖಂಡಿತವಾಗಿಯೂ ಬದಲಿಸುತ್ತದೆ. ಲೋಕಗ್ರಹಿಕೆ ಬಗೆಗೆ- ಲೋಕರಚನೆಯ ಬಗೆಗೆ ಭಿನ್ನ ದೃಷ್ಟಿಕೋನಗಳನ್ನು ತಳೆಯುವಂತೆ ಪ್ರೇರೇಪಿಸುತ್ತದೆ. ಕಾಳಜಿಪೂರ್ಣ ವ್ಯಕ್ತಿತ್ವವನ್ನಾಗಿ ಓದುಗನನ್ನು ರೂಪಿಸುವ ಶಕ್ತಿಯೇ ತೇಜಸ್ವಿ ಕಥನಸಾಹಿತ್ಯದ ವಿಶಿಷ್ಟತೆಯಾಗಿದೆ.

ಆಕರ ಗ್ರಂಥಗಳು

ಆಕರ ಗ್ರಂಥಗಳು

೦೧. ಹುಲಿಯೂರಿನ ಸರಹದ್ದು, ಪುಸ್ತಕ ಪ್ರಕಾಶನ, ಮೈಸೂರು, ೧೯೬೨.

೦೨. ಸ್ವರೂಪ, ಪುಸ್ತಕ ಪ್ರಕಾಶನ, ಮೈಸೂರು, ೧೯೬೬.

೦೩. ಅಬಚೂರಿನ ಪೋಸ್ಟಾಫೀಸು, ಪುಸ್ತಕ ಪ್ರಕಾಶನ, ಮೈಸೂರು, ೧೯೭೩.

೦೪. ನಿಗೂಢ ಮನುಷ್ಯರು, ಪುಸ್ತಕ ಪ್ರಕಾಶನ, ಮೈಸೂರು, ೧೯೭೬.

೦೫. ಕರ್ವಾಲೋ, ಪುಸ್ತಕ ಪ್ರಕಾಶನ, ಮೈಸೂರು, ೧೯೮೦.

೦೬. ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಮೈಸೂರು, ೧೯೮೫.

೦೭. ಕಿರಗೂರಿನ ಗಯ್ಯಾಳಿಗಳು, ಪುಸ್ತಕ ಪ್ರಕಾಶನ, ಮೈಸೂರು, ೧೯೯೧.

೦೮. ಪರಿಸರದ ಕಥೆ, ಪುಸ್ತಕ ಪ್ರಕಾಶನ, ಮೈಸೂರು, ೧೯೯೧.

೦೯. ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಮೈಸೂರು, ೧೯೯೪.

೧೦. ಮಾಯಾಲೋಕ, ಪುಸ್ತಕ ಪ್ರಕಾಶನ, ಮೈಸೂರು, ೨೦೦೬.

ಪೂರಕ ಪರಾಮರ್ಶನ ಗ್ರಂಥಗಳು

ಪೂರಕ ಪರಾಮರ್ಶನ ಗ್ರಂಥಗಳು

೦೧. ಅನಂತಮೂರ್ತಿ ಯು.ಆರ್., **ಮಾತು ಸೋತ ಭಾರತ**, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

೦೨. ಅನಂತಮೂರ್ತಿ ಯು.ಆರ್., **ಯುಗ ಪಲ್ಲಟ–ನಮ್ಮ ಕಾಲದ ತಲ್ಲಣಗಳು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೦೩. ಅನಂತಮೂರ್ತಿ ಯು.ಆರ್., **ಋಜುವಾತು**, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೭.

೦೪. ಆಮೂರ ಜಿ.ಎಸ್, **ಕನ್ನಡ ಕಥನ ಸಾಹಿತ್ಯ : ಕಾದಂಬರಿ**, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪.

೦೫. ಕರೀಗೌಡ ಬೀಚನಹಳ್ಳಿ, **ಶತಮಾನದ ಸಣ್ಣಕಥೆಗಳ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೦೬. ಕಾಳೇಗೌಡ ನಾಗವಾರ, ಆನಂದ ಮೂರ್ತಿ ಜಿ.ವಿ., **ಶಾಂತವೇರಿ ಗೋಪಾಲ ಗೌಡ ನೆನಪಿನ ಸಂಪುಟ**, ಕನ್ನಡ ವಿಶ್ವ ವಿದ್ಯಾಲಯ, ೧೯೯೭.

೦೭. ಕೀರ್ತಿನಾಥ ಕುರ್ತಕೋಟಿ, **ಬಯಲು–ಆಲಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨

೦೮. ಕೀರ್ತಿನಾಥ ಕುರ್ತಕೋಟಿ, **ನೂರು ಮರ ನೂರು ಸ್ವರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೦೯. ಕುಮಾರ್ ಕೆ.ಎಂ, **ಕರ್ನಾಟಕದಲ್ಲಿ ರೈತ ಚಳುವಳಿಗಳು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೮

೧೦. ಗಣೇಶ್ ಮೊಗಳ್ಳಿ (ಸಂ),**ಮತೀಯ ಭಯಾವತಾರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೧. ಗಿರಡ್ಡಿ ಗೋವಿಂದರಾಜ, **ಸಾತತ್ಯ**, ಸ್ನೇಹ ಪ್ರಕಾಶನ, ೧೯೯೨

೧೨. ಗೋವಿಂದರಾವ್ ಜಿ.ಕೆ., **ಬಿಂಬ–ಪ್ರತಿಬಿಂಬ**, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭.

೧೩. ಗೋವಿಂದರಾವ್ ಜಿ.ಕೆ., **ಕ್ರಿಯೆ ಪ್ರತಿಕ್ರಿಯೆ**, ಅನ್ನಪೂರ್ಣ ಪ್ರಕಾಶನ, ಸಿರಿಗೇರಿ, ೨೦೦೯.

೧೪. ಗೌರಿ ಲಂಕೇಶ್(ಸಂ), **ಆವರಣ ಎಂಬ ವಿ–ಕೃತಿ**, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೦೭.

೧೫. ಚಸರಾ, ಲಕ್ಷ್ಮೀಪತಿ ಸಿ.ಜಿ.,(ಸಂ) **ಮತಾಂತರ**, ಸಂಚಲನ ಪ್ರಕಾಶನ, ಬೆಂಗಳೂರು, ೨೦೦೯.

೧೬. ಜಾಫೆಟ್, ಚಂದ್ರಶೇಖರ್ ಐಜೂರ್,(ಸಂ) **ಸಂವಿಧಾನ-೬೦: ಸಾಮಾಜಿಕ ನ್ಯಾಯ ಮತ್ತು ಕರ್ನಾಟಕ**, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು, ೨೦೧೧.

೧೭. ಜ್ಯೋತಿ ಶಶಿಕುಮಾರ್, **ಮಹಿಳಾ ಸಾಮಾಜಿಕತೆ**, ಕನ್ನಡ ವಿಶ್ವವಿದ್ಯಾಲಯ ಪ್ರಸಾರಂಗ, ಹಂಪಿ, ೨೦೦೭.

೧೮. ಡೊಮಿನಿಕ್‌ಡಿ., **ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು**, ಸಖಿ ಪ್ರಕಾಶನ, ಹೊಸಪೇಟೆ, ೨೦೦೭.

೧೯. ಡೊಮಿನಿಕ್ ಡಿ, **ಏಕರೂಪಿತನದ ಅಪಕಲ್ಪನೆಗಳು**, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೮

೨೦. ದೇವನೂರು ಮಹದೇವ, **ಎದೆಗೆ ಬಿದ್ದ ಅಕ್ಷರ**, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨.

೨೧. ನಟರಾಜ್ ಹುಳಿಯಾರ್, **ರಾಮ್‌ಮನೋಹರ ಲೋಹಿಯಾ ಚಿಂತನೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೨. ನಟರಾಜ್ ಹುಳಿಯಾರ್(ಸಂ), **ಉತ್ತರ ದಕ್ಷಿಣ-ರಾಮಮನೋಹರ ಲೋಹಿಯಾ ಬರಹಗಳು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೨೩. ನಟರಾಜ್ ಹುಳಿಯಾರ್(ಸಂ), **ಮಾರ್ಕ್ಸ್ ಗಾಂಧಿ ಸಮಾಜವಾದ-ರಾಮಮನೋಹರ ಲೋಹಿಯಾ ಬರಹಗಳು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩.

೨೪. ನಟರಾಜ್ ಹುಳಿಯಾರ್, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೫. ನರಹಳ್ಳಿ ಬಾಲಸುಬ್ರಮಣ್ಯ, **ಸಾಹಿತ್ಯ-ಸಂಸ್ಕೃತಿ**, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೮.

೨೬. ನಾಗೇಶ್ ಹೆಗಡೆ, **ಗೋಹತ್ಯೆ ಒಂದು ಪರಾಮರ್ಶೆ**, ನವಕನಾಟಕ ಪ್ರಕಾಶನ, ಬೆಂಗಳೂರು, ೨೦೧೦.

೨೭. ನಾಗರಾಜ ಡಿ.ಆರ್.(ಸಂ), **ಅಶೀಶ್ ನಂದಿ ವಿಚಾರ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫.

೨೮. ನಾಗರಾಜ್ ಡಿ.ಆರ್, **ಸಾಹಿತ್ಯ ಕಥನ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

೨೯. ನಾಗರಾಜ್ ಡಿ.ಆರ್, **ಸಂಸ್ಕೃತಿ ಕಥನ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೩೦. ಪ್ರಶಾಂತ್ ನಾಯಕ, **ಸಾಹಿತ್ಯ ವಿಮರ್ಶೆ**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೧.

೩೧. ಬಸವರಾಜ ಸಾದರ, **ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು**, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೦೨.

೩೨. ಬಸವರಾಜ, **ಶಿವಮೊಗ್ಗ ರೈತ ಚಳವಳಿ**, ಸಮುದಾಯ ಪ್ರಕಾಶನ, ಬೆಂಗಳೂರು, ೧೯೮೧.

೩೩. ಬಸವರಾಜ ಕಲ್ಗುಡಿ, **ನಕ್ಷೆ ನಕ್ಷತ್ರ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

೩೪. ಬಂಜಗೆರೆ ಜಯಪ್ರಕಾಶ್, **ಕನ್ನಡ ರಾಷ್ಟ್ರೀಯತೆ**, ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು, ೨೦೦೦.

೩೫. ಬರಗೂರು ರಾಮಚಂದ್ರಪ್ಪ(ಸಂ), **ಕೋಮುಸಮಸ್ಯೆ ಮತ್ತು ಆಧುನಿಕ ಕನ್ನಡ ಸಾಹಿತ್ಯ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೩೬. ಬರಗೂರು ರಾಮಚಂದ್ರಪ್ಪ(ಸಂ), **ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೩೭. ಬದರೀನಾಥ್ ಕೆ. ರಾವ್., **ಹಿಂದುತ್ವ ಮತ್ತು ಅಲ್ಪ ಸಂಖ್ಯಾತರು**, ಕೋಮುವಾದಿ ವಿರೋಧಿ ಆಂದೋಲನ ಪ್ರಕಾಶನ, ಬೆಂಗಳೂರು, ೨೦೦೨.

೩೮. ಭಟ್ ಎಸ್.ಆರ್., ರಾಜಶೇಖರ್. ಜಿ., ಫಣಿರಾಜ್ ಕೆ., **ಕೋಮುವಾದದ ಕರಾಳ ಮುಖಗಳು**, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫.

೩೯. **ಮಹಿಳೆ ಮತ್ತು ಕೋಮುವಾದ**, ಮಹಿಳಾ ಜಾಗೃತಿಯ ಪ್ರಕಟಣೆ, ಬೆಂಗಳೂರು, ೨೦೦೦.

೪೦. ಮಂಗ್ಳೂರ ವಿಜಯ(ಸಂ), **ಸಾಚಾರ್ ವರದಿ ಮತ್ತು ಮುಸ್ಲಿಮರ ಸ್ಥಿತಿಗತಿ**, ಸಾಮಾಜಿಕ ಕ್ರಿಯಾ ಸಮಿತಿ, ಬೆಂಗಳೂರು, ೨೦೦೭.

೪೧. ಮುಜಾಫರ್ ಅಸಾದಿ, **ರೈತ, ರೈತಹೋರಾಟ ಹಾಗೂ ಸಾಮಾಜಿಕ ಚಳುವಳಿಗಳು**, ಶ್ರೀ ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರ ದೊಡ್ಡಿ, ೨೦೦೯.

೪೨. ರಹಮತ್ ತರೀಕರೆ, **ಮರದೊಳಗಣ ಕಿಚ್ಚು,** ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ೨೦೦೨.

೪೩. ರಹಮತ್ ತರೀಕರೆ, **ಕತ್ತಿಯಂಚಿನ ದಾರಿ,** ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

೪೪. ರಹಮತ್ ತರೀಕೆರೆ, **ಧರ್ಮ ಪರೀಕ್ಷೆ,** ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦.

೪೫. ರಹಮತ್ ತರೀಕೆರೆ, **ಸಾಂಸ್ಕೃತಿಕ ಅಧ್ಯಯನ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೪೬. ರಂಜಾನ್ ದರ್ಗಾ, **ಅಮೃತ ಮತ್ತು ವಿಷ,** ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೦.

೪೭. ರಾಮಚಂದ್ರನ್ ಸಿ.ಎನ್., **ವಸಾಹತೋತ್ತರ ಚಿಂತನೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦.

೪೮. ರಾಮಲಿಂಗಪ್ಪ ಟಿ.ಬೇಗೂರು, **ನುಡಿಯಾಟ,** ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೭

೪೯. ಲಂಕೇಶ್, **ಟೀಕೆ–ಟಿಪ್ಪಣಿ–ಸಂಪುಟ–೧,** ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೭.

೫೦. ಲಂಕೇಶ್, **ಟೀಕೆ–ಟಿಪ್ಪಣಿ–ಸಂಪುಟ–೨,** ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೮.

೫೧. ಲಂಕೇಶ್, **ಟೀಕೆ–ಟಿಪ್ಪಣಿ–ಸಂಪುಟ–೩,** ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೧೦.

೫೨. ಲಂಕೇಶ್, **ಪ್ರಸ್ತುತ,** ಲಂಕೇಶ್ ಪ್ರಕಾಶನ, ಬೆಂಗಳೂರು, ೧೯೭೦.

೫೩. ಲಂಕೇಶ್, **ಬಿಟ್ಟು ಹೋದ ಪುಟಗಳು, ಸಂಗ್ರಹ–೧,** ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೪.

೫೪. ವಿನಯ ಲಾಲ್, ಅಶಿಶ್ ನಂದಿ, **ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೭.

೫೫. ಶಂಕರ್ ಎನ್.ಎಸ್., **ಆವರಣ ಅನಾವರಣ,** ಆದಿಮ, ಕೋಲಾರ, ೨೦೦೭.

೫೬. ಶಿವರಾಮ ಪಡಿಕ್ಕಲ್, **ನಾಡು ನುಡಿಯ ರೂಪಕ,** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೧.

೫೭. ಶಿವರುದ್ರಪ್ಪ ಜಿ.ಎಸ್., **ಕನ್ನಡ ಸಾಹಿತ್ಯ ಸಮೀಕ್ಷೆ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೫೮. ಶಿವರುದ್ರಪ್ಪ ಜಿ.ಎಸ್., **ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.

೫೯. ಶಿವದಾಸ ಘೋಷ್, **ರೈತ ಜೀವನದ ಕೆಲವೊಂದು ಪ್ರಮುಖ ಸಮಸ್ಯೆಗಳ ಕುರಿತು**, ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಬೆಂಗಳೂರು, ೨೦೦೪.

೬೦. ಶಿವಸುಂದರ್, **ಚಾರ್ವಾಕ**, ಲಂಕೇಶ ಪ್ರಕಾಶನ, ಬೆಂಗಳೂರು, ೨೦೧೧.

೬೧. ಶಿವಾರೆಡ್ಡಿ ಕೆ.ಸಿ., **ಕುವೆಂಪು ಸಮಗ್ರ ಗದ್ಯ ಸಂಪುಟ ೧ ಮತ್ತು ೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೩-೦೪.

೬೨. ಶ್ರೀನಿವಾಸ ಹಾವನೂರು, **ಹೊಸಗನ್ನಡದ ಅರುಣೋದಯ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦.

೬೩. ಶೆಲ್ಲಿ ವಾಲಿಯಾ, **ಎಡ್ವರ್ಡ್ ಸೈದ್**, ಅನು:ರಾಮಲಿಂಗಪ್ಪ ಟಿ.ಬೇಗೂರು, ಚಂದ್ರಗಿರಿ ಪ್ರತಿಷ್ಠಾನ, ಬೆಂಗಳೂರು, ೨೦೦೯.

೬೪. ಶೇಷಗಿರಿರಾವ್ ಎಲ್.ಎಸ್., **ಹೊಸಗನ್ನಡ ಸಾಹಿತ್ಯ ಚರಿತ್ರೆ**, ಅಂಕಿತ ಪುಸ್ತಕ, ಬೆಂಗಳೂರು, ೨೦೦೬.

೬೫. ಸರಸ್ವತಿ ದು(ಸಂ), **ನೀರದಾರಿ**, ಕವಿ ಪ್ರಕಾಶನ, ಕವಲಕ್ಕಿ(ಉ.ಕ), ೨೦೧೪.

೬೬. ಸರಸ್ವತಿ ದು(ಸಂ), **ಕರ್ನಾಟಕ ಸಂದರ್ಭದಲ್ಲಿ ಕೋಮುವಾದ**, ಪರ್ಯಾಯ ಕಾನೂನು ವೇದಿಕೆ, ಬೆಂಗಳೂರು, ೨೦೦೬.

೬೭. ಸಾರಾ ಅಬೂಬಕ್ಕರ್, **ಸಾಹಿತ್ಯಕ್ಕೊಂದು ದಾರಿದೀಪ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೨.

೬೮. ಸಾರಾ ಅಬೂಬಕ್ಕರ್, **ಹೊತ್ತು ಕಂತುವ ಮುನ್ನ**, ಚಂದ್ರಗಿರಿ ಪ್ರಕಾಶನ, ಮಂಗಳೂರು, ೨೦೧೦.

೬೯. ಸಾಯಿನಾಥ ಪಿ., **ರೈತ ಬವಣೆಗಳ ಬಗ್ಗೆ**, ಅನು: ಕೃಷ್ಣೇಗೌಡ ಕೆ.ಎಲ್., ಚಿಂತನ ಪ್ರಕಾಶನ, ಬೆಂಗಳೂರು, ೨೦೦೯.

೭೦. ಸುಬ್ಬಯ್ಯ ಎ.ಕೆ., **ಆರ್.ಎಸ್.ಎಸ್. ಅಂತರಂಗ**, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೪.

೭೧. ಹನುಮಂತ, **ಸಂಡೂರು ಹೋರಾಟ**, ಜನಪ್ರಕಾಶನ, ಬೆಂಗಳೂರು, ೧೯೮೧.

ಅನುಬಂಧ-೧

ತೇಜಸ್ವಿಯವರನ್ನು ಮತ್ತು ಅವರ ಸಾಹಿತ್ಯವನ್ನು ಕುರಿತ ಕೃತಿಗಳ (ಲೇಖಕ) ಅಕಾರಾದಿ

ಅನುಬಂಧ-೧

ತೇಜಸ್ವಿಯವರನ್ನು ಮತ್ತು ಅವರ ಸಾಹಿತ್ಯವನ್ನು ಕುರಿತ ಕೃತಿಗಳ (ಲೇಖಕ)ಅಕಾರಾದಿ

೦೧. ಅಶೋಕ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೦೨. ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ : ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೦೩. ಕಲೀಮ್ ಉಲ್ಲಾ, **ಪೂರ್ಣಚಂದ್ರತೇಜಸ್ವಿ**, ಸಿರಿಗನ್ನಡ ಪುಸ್ತಕ ಮನೆ, ಶಿವಮೊಗ, ೨೦೧೧.

೦೪. ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೦೫. ಕೋಟಿ ಎಂ.ಬಿ., **ಈ ಕೆಲಕಾದಂಬರಿಗಳು ಒಂದು ಅಧ್ಯಯನ**, ವಿಕಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೫.

೦೬. ಗೌರಿ ಸುಂದರ್(ಸಂ), **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೦೭. ಚಂದ್ರೇಗೌಡ ಬಿ., ರಾಜು ಬಿ.ಎಲ್.(ಸಂ), **ತೇಜಸ್ವಿ ನೆನಪು**, ರಂಗ ಭಾರತಿ ಪ್ರಕಾಶನ ಹೂವಿನಹಡಗಲಿ, ಬಳ್ಳಾರಿ, ೨೦೦೭.

೦೮. ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥಮಾಲೆ, ಕೃಷ್ಣಾಪುರದೊಡ್ಡಿ, ೨೦೦೭.

೦೯. ದೊಡ್ಡೇಗೌಡ ಆರ್.(ಆರ್.ಡಿ.ಜಿ.)(ಸಂ), **ತೇಜಸ್ವಿಯನ್ನು ಹುಡುಕುತ್ತಾ**, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೦. ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ -ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೧೧. ನಟರಾಜ್ ಹುಳಿಯಾರ್, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೨. ಪ್ರಹ್ಲಾದ ಡಿ.ವಿ.(ಸಂ), **ಬಗೆ ತೆರದ ಬಾನು**, ಸಂಚಯ ಪ್ರಕಾಶನ, ಬೆಂಗಳೂರು, ೧೯೯೬.

೧೩. ಪ್ರಹ್ಲಾದ ಡಿ.ವಿ.(ಸಂ), **ತೇಜಸ್ವಿ ಲೋಕ**, ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೪. ಪ್ರಸಾದ್ ರಕ್ಷಿದಿ, **ನಮ್ಮ ನಡುವಿನ ತೇಜಸ್ವಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೫. ಬೈರೇಗೌಡ ಎಂ., ಸತ್ಯನಾರಾಯಣ. ಬಿ.ಆರ್.(ಸಂ), **ತೇಜಸ್ವಿ**, ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು, ೨೦೦೬.

೧೬. ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೧೭. ವೀರಪ್ಪ ಜಿ.ಟಿ., ಬೈರೇಗೌಡ ಎಂ(ಸಂ), **ತೇಜಸ್ವಿ–ಸಾಹಿತ್ಯ ಕೃಷಿ**, ಕರ್ನಾಟಕ ಸಾಹಿತ್ಯ ಅಕಾಡಿಮೆ, ಬೆಂಗಳೂರು, ೨೦೦೪.

೧೮. ಶಶಿಕಲಾ ಹೆಚ್, **ಏಕ–ಅನೇಕ**, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ೨೦೦೫.

೧೯. ಶಂಕರೇಗೌಡ ಎನ್.ಎಸ್., **ತೇಜಸ್ವಿ ಸಾಹಿತ್ಯ ಸಂಕಥನ**, ಪದ್ಮ ಶೇಖರ ಪ್ರಿಂಟರ್ಸ್, ಮೈಸೂರು, ೨೦೧೧.

೨೦. ರಮೇಶ್ ಬೇ.ಗೋ., **ಪೂರ್ಣಚಂದ್ರ ತೇಜಸ್ವಿ**, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, ೨೦೦೮.

೨೧. ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೈಸೂರು, ೨೦೧೦.

ಅನುಬಂಧ–೨

ತೇಜಸ್ವಿಯವರನ್ನು ಮತ್ತು ಅವರ ಸಾಹಿತ್ಯವನ್ನು ಕುರಿತ ಬಿಡಿ ಲೇಖನಗಳ ಲೇಖನ ಅಕಾರಾದಿ

ಅನುಬಂಧ-೨

ತೇಜಸ್ವಿಯವರನ್ನು ಕುರಿತ ಬಿಡಿ ಲೇಖನಗಳ ಲೇಖನ ಅಕಾರಾದಿ

೦೧. ಅಣ್ಣನ ನೆನಪುಗಳು, ನರಹಳ್ಳಿ ಬಾಲಸುಬ್ರಮಣ್ಯ, **ಸಾಹಿತ್ಯ-ಸಂಸ್ಕೃತಿ**, ಅಕ್ಷರ ಪ್ರಕಾಶನ, ಬೆಂಗಳೂರು, ೧೯೯೮.

೦೨. ಅಣ್ಣನ ನೆನಪು : ಕೆಲವು ಸಂಶಯಗಳು, ಪಿ.ಲಂಕೇಶ್, **ತೇಜಸ್ವಿ ಲೋಕ**, ಸಂ: ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೦೩. ಅಣ್ಣನ ನೆನಪು, ಅಶೋಕ್. ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು,೨೦೦೪.

೦೪. ಅಣ್ಣನ ನೆನಪು, ನರಸಿಂಹಮೂರ್ತಿ.ಕೆ.ಹೆಚ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೦೫. ಅನುವಾದಗಳು, ಮಹೇಶ್ವರಯ್ಯ. ಎಚ್.ಎಂ, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೦೬. ಅನುವಾದ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೦೭. ಅನ್ವೇಷಣೆಯ ಪರಿಸರ ಸಾಹಿತಿ, ನರೇಂದ್ರ ರೈ ದೇರ್ಲ, **ಎಂಟು ಲೋಕ**, ಮಿತ್ರ ಮಾಧ್ಯಮ ಪ್ರಕಾಶನ, ಬೆಂಗಳೂರು, ೨೦೦೦.

೦೮. ಅಬಚೂರಿನ ಪೋಸ್ಟಾಫೀಸು, ಅಶೋಕ್.ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೦೯. ಅಭಿವ್ಯಕ್ತಿಯ ಸಾಧ್ಯತೆಗಳ ವಿಸ್ತರಿಸಿದ ಅಸೀಮ ಅನ್ವೇಷಕ:ತೇಜಸ್ವಿ, ದೊಡ್ಡರಂಗೇಗೌಡ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೦. ಅಮ್ಮನ ಅನಾರೋಗ್ಯ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೧. ಅಂಡಮಾನಲ್ಲಿ ಮುಳುಗಿದ ನಾಗರಿಕ ಹಡುಗು, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೧೨. ಅರಿವಿಗೆ ಬಂದದ್ದು, ಧನಂಜಯ ಜೀವಾಳ.ಬಿ.ಕೆ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೩. ಅರಿಯುವಿಕೆಯ ಅನ್ವೇಷಣೆಯಾಗಿ, ಶಶಿಕಲಾ. ಎಚ್., **ಏಕ-ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೪. ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೧೫. ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಹೇಮಲತಾ ಮಹಿಷಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೬. ಅವರು ಕರ್ವಾಲೋ ಹಾಗಿದ್ದರು, ನಾವು ಮಂದಣ್ಣನಂತಿರೋಣ, ಜಾನಕಿ, **ಜಾನಕಿ ಕಾಲಂ-೨**, ಛಂದ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೭.

೧೭. ಅವರು 'ಯ ರ ಲ ವ'ದಿಂದ ವರ್ಣಮಾಲೆ ಕಲಿತವರಾ, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೧೮. ಅಸಮಾನ್ಯರ ಅಂಗಳದಲ್ಲಿ, ಪ್ರಧೀಪ್ ಕೆಂಜಿಗೆ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೯. ಆ ಸ್ಯಾಂಟಿಯಾಗೋ ಮತ್ತು ಈ ಸೈಂಟಿಸ್ಟ್, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೦. ಇತರ ಬರಹಗಳು, ಮಹೇಶ್ವರಯ್ಯ ಎಚ್.ಎಂ, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೨೧. ಇಬ್ಬರೂ ಜೈಲಿಗೆ ಹೋಗ್ತೀವಿ ಕಣೋ....., ಮಂಜುನಾಥ ಅದ್ದೆ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೨. ಈ ಕಾಲಘಟ್ಟದ ಚಳುವಳಿಗೆ ಬರೋಣ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೩. ಎಲ್ಲಿಯ ತೇಜಸ್ವಿ.. ಅದ್ಯಾವ ಜಪಾನು?, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೪. ಎಲ್ಲಾ ವೇಸ್ಟ್ ಆಯಿತಲ್ಲ!, ನಟರಾಜ ಹುಳಿಯಾರ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೫. ಎದ್ದು ನಿಂತ ಗದ್ದೆ, ಧನಂಜಯ ಜೀವಾಳ ಬಿ.ಕೆ., **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೬. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಅಶೋಕ್.ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೨೭. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಗಾಯಿತ್ರಿ ರವಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೮. ಏಳು ಕಾದಂಬರಿಗಳು, ಅಮೂರ ಜಿ.ಎಸ್., **ವ್ಯವಸಾಯ**, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೨.

೨೯. ಒಟ್ಟಾರೆಯಾಗಿ, ಶಶಿಕಲಾ. ಎಚ್.,**ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೩೦. ಕಂಪೂಟ್ರು ತಂದಾರಂತೆ, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು,೨೦೧೩.

೩೧. ಕಥೆಗಳು, ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೩೨. ಕಥಾ ಪ್ರಪಂಚ–ಒಂದು ಚಿಂತನೆ, ಭಾಸ್ಕರ್ ಎಂ.ಎಸ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು,೨೦೧೬.

೩೩. ಕನ್ನಡದ ವಿಸ್ಮಯ ತೇಜಸ್ವಿ, ಚಂದ್ರ ಮಾಗಡಿ, **ತೇಜಸ್ವಿ ಲೋಕ**, ಸಂ:ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು,೨೦೦೭.

೩೪. ಕನ್ನಡ ತಂತ್ರಾಶ ಮತ್ತು ತೇಜಸ್ವಿ, ಚಂದ್ರಶೇಖರ್ ಕಂಬಾರ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೩೫. ಕರ್ನಾಟಕ ನಾಡಿನ ಹಕ್ಕಿಗಳು, ರಾಮಚಂದ್ರನ್ ಇ.ಆರ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು,೨೦೧೬.

೩೬. ಕವಲು ದಾರಿಯಲ್ಲಿ ಕನ್ನಡ ಸಣ್ಣ ಕತೆ, ಗಿರಡ್ಡಿ ಗೋವಿಂದರಾಜ, **ಕಲ್ಪಿತ ವಾಸ್ತವ**, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, ೨೦೦೯.

೩೭. ಕವಿತೆ ಮತ್ತು ನಾಟಕ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ,** ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೩೮. ಕರ್ವಾಲೋ : ವಿಜ್ಞಾನದ ಮೂಲಕ ಆಧ್ಯಾತ್ಮ, ನಾಗಭೂಷಣ್ ಡಿ.ಎಸ್., **ಗಮನ,** ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ (ಚಿ), ೧೯೯೦.

೩೯. ಕರ್ವಾಲೋತ್ತರ ಕೃತಿಗಳು : ಪರಿಸರದ ತಪಸ್ಸು-ಧ್ಯಾನದ ಫಲಶೃತಿಗಳು, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ,** ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೪೦. ಕರ್ವಾಲೋ : ಕಣ್ತೆರೆದು ನೋಡಿದಾಗ, ಶಶಿಕಲಾ ಎಚ್., **ಏಕ-ಅನೇಕ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೪೧. ಕರ್ವಾಲೋ, ಅಶೋಕ್ ಟಿ.ಪಿ., **ತೇಜಸ್ವಿ ಕಥನ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೪೨. ಕರ್ವಾಲೋ ಮತ್ತು ಪ್ರಾಮಾಣಿಕತೆ, ಮುರಳೀಧರ ಎಚ್. ಎನ್, **ಪ್ರತಿಕ್ರಿಯೆ,** ರಚನಾ ಪ್ರಕಾಶನ, ಬೆಂಗಳೂರು, ೧೯೯೫.

೪೩. ಕರ್ವಾಲೋ : ಪೂರ್ಣಚಂದ್ರ ತೇಜಸ್ವಿ, ನಾರಾಯಣ ಕೆ.ವಿ., **ಬೇರು ಕಾಂಡ ಚಿಗುರು,** ವಿವೇಕ ಪ್ರಕಾಶನ, ಬೆಂಗಳೂರು, ೧೯೯೭.

೪೪. ಕರ್ವಾಲೋ, ವೆಂಕಟೇಶ್ ಬಾಬು, **ಕಾದಂಬರಿ,** ಕನ್ನಡ ಸಂಘ, ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು, ೧೯೮೨.

೪೫. ಕರ್ವಾಲೋ, ಶರ್ಮಿಳಾ ಅಪ್ಪಾಜಪ್ಪ, **ಕಾದಂಬರಿ,** ಕನ್ನಡ ಸಂಘ, ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು, ೧೯೮೨.

೪೬. ಕರ್ವಾಲೋ, ಕೋಟಿ ಎಂ.ಬಿ., **ಈ ಕೆಲ ಕಾದಂಬರಿಗಳು** : ಒಂದು ಅಧ್ಯಯನ, ವಿಕಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೫.

೪೭. ಕರ್ವಾಲೋತ್ತರ ಕೃತಿಗಳು : ಅಣುಕು ಹಾಸ್ಯಗಳು, ವಿವಿಧ ವಿನೋದಾವಳಿಗಳು, ದುರಂತ ವೈನೋದಿಕಗಳು, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ,** ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೪೮. ಕಾಡಿನ ಕಥೆಗಳು ಮಾಲಿಕೆ: ಸಂಗ್ರಹಾನುವಾದ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ,** ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೪೯. 'ಕಾಡಿನ ಕಥೆಗಳು-೧' ಬೆಳ್ಳಂದೂರಿನ ನರಭಕ್ಷಕ, ಅಶ್ವತ್ಥ ನಾರಾಯಣ ಎಂ.ಎನ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೫೦. ಕಾಡಿನ ಕಥೆಗಳನ್ನು ಬಿಚ್ಚಿಟ್ಟ ತೇಜಸ್ವಿಯವರು, ಗುಂಡೂರಾವ್ ವೈ.ಎನ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೫೧. ಕಾಡಿನಲ್ಲಿ ಕುಣಿತ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ –ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೫೨. ಕಾದಂಬರಿ 'ಕರ್ವಾಲೋ':ತೇಜಸ್ವಿಗೆ ವಿಮರ್ಶಾ ಪತ್ರ, ಲಂಕೇಶ್‌ಪಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭,

೫೩. ಕಾದಂಬರಿಗಳು, ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೫೪. ಕಾದಂಬರಿಗಳು, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ,: ಬದುಕು-ಬರಹ,** ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೫೫. ಕಾದಂಬರಿ 'ಕರ್ವಾಲೊ' : ತೇಜಸ್ವಿಗೆ ವಿಮರ್ಶಾ ಪತ್ರ, ಲಂಕೇಶ್ ಪಿ., **'ಸಾಹಿತಿ-ಸಾಹಿತ್ಯ-ವಿಮರ್ಶೆ'**, ಸಂ:ಶ್ರೀಧರ ವಿ.ಎಸ್, ಲಂಕೇಶ ಪ್ರಕಾಶನ, ಬೆಂಗಳೂರು, ೨೦೦೮.

೫೬. ಕಾಲದ ಕಾಲ ಸದ್ದು ಆಲಿಸಬಲ್ಲ ಲೇಖಕ ತೇಜಸ್ವಿ, ರಾಮದಾಸ್ ಕೆ., **ತೇಜಸ್ವಿ-ಸಾಹಿತ್ಯ ಕೃಷಿ**, ಸಂ:ವೀರಪ್ಪ ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೫೭. ಕಾವ್ಯ, ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೫೮. ಕಿರಗೂರಿನ ಗಯ್ಯಾಳಿಗಳು, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೫೯. ಕಿರಗೂರಿನ ದಾರಿಯಲ್ಲಿ ಸಾಗುತ್ತಾ.....,ಶ್ರೀಧರ ಮೂರ್ತಿ ಎನ್.ಎಸ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೬೦. ಕೆ.ಪಿ.ಪೂರ್ಣಚಂದ್ರ ತೇಜಸ್ವಿ : ಮಾಯಾಲೋಕದ ಮಾಂತ್ರಿಕ, ವಿಜಯಶಂಕರ ಎಸ್.ಆರ್., **ಒಡನಾಟ**, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೭.

೬೧. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕರೀಗೌಡ ಬೀಚನಹಳ್ಳಿ, **ಶತಮಾನದ ಸಣ್ಣ ಕಥೆಗಳ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩.

೬೨. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಹಾರೋಗದ್ದೆ ಉಷಾ ರಮೇಶ್ ನಾಯಕ್, **ಶಿವಮೊಗ್ಗ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು, ಭಾಗ-೧**, ಭೂಮಿಕಾ ಪ್ರಕಾಶನ, ಬೆಂಗಳೂರು, ೨೦೦೨.

೬೩. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ : ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೬೪. ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಒಂದು ಬೇಟಿ, ಬೈರೇಗೌಡ ಜಿ., **ಬಗೆ ತೆರದ ಬಾನು**, ಸಂಚಯ ಪ್ರಕಾಶನ, ಬೆಂಗಳೂರು, ೧೯೯೬.

೬೫. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಬಸವರಾಜ ಡೋಣೂರ, **ಬಯಲ ಬೆರಗು**, ಶಕ್ತಿ ಪ್ರಿಂಟರ್ಸ್ & ಪಬ್ಲಿಷರ್ಸ್, ಬೆಂಗಳೂರು, ೨೦೦೫.

೬೬. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಯವರ ಕಥನದ ಸ್ವರೂಪ,. ಶ್ರೀಧರ ಮೂರ್ತಿ ಎನ್.ಎಸ್, **ಬೆಳಕಿನ ಬೆರಗು**, ಉದಯರವಿ ಪ್ರಕಾಶನ, ಬೆಂಗಳೂರು, ೨೦೦೫.

೬೭. ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಚಿದಂಬರ ರಹಸ್ಯ, ಅಶೋಕ ಟಿ.ಪಿ., **ಸಾಹಿತ್ಯ ಸಂಪರ್ಕ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೬.

೬೮. ಕೇಸುಗಳಿಂದ ಕುಗ್ಗಿ ಹೋದವ 'ಪ್ಯಾಪಿಲಾನ್' ಹುಟ್ಟಿಸಿದ!, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೬೯. ಕೊನೆಯ ದಿನಗಳು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೭೦. ಕೋಕಿಲೋದಯ ಚೈತ್ರ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೭೧. ಗಯ್ಯಾಳಿಗಳೂ ಮತ್ತು ಬಿರುಗಾಳಿಯೂ, ವಾಸುದೇವ ನಾಡಿಗ್, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೭೨. ಗಣಿ-ರಾಜಕಾರಣಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೭೩. ಗಂಧದ ಚಕ್ಕೆ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೭೪. ಗ್ರಾಮೀಣತೆಯ ಒಡಲಿನೊಳಗಣ ಸ್ಥಗಿತ ಸ್ಥಿತಿ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೭೫. ಗಿಳಿ, ಗೊರವಂಕ, ಮರಕುಟಿಗ, ಒಯ್ದು ನೀಡಿರೇ ಕಂಬನಿ ಹೂವ..., ಸವಿತಾ ನಾಗಭೂಷಣ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೭೬. ಗಿರಿಯೇರಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ –ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೭೭. ಗೂಡು ಬಿಟ್ಟು ದಿಗಂತ ಸೇರಿತೇ ಗೀಜಗನ ಹಕ್ಕಿ,ಬಂಜಗೆರೆ ಜಯಪ್ರಕಾಶ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೭೮. ಚಂದ್ರನ ಚೂರು,ಉಷಾರಾಣಿ ಆರ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೭೯. ಚಪ್ಪಲಿಗಳು ಇಲ್ಲೇ ಇದೆಯೆಂದ ಮೇಲೆ ತೇಜಸ್ವಿ ಮತ್ತೆ ಬರುತ್ತಾರಲ್ಲವೇ?, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೮೦. ಚಳುವಳಿಗಳು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೮೧. ಚಿಂತನಶೀಲ ತೇಜಸ್ವಿ, ಹಳೇಕೋಟೆ ಎನ್. ರಮೇಶ್, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೮೨. ಚಿದಂಬರ ರಹಸ್ಯ, ಶ್ರೀಕಂಠ ಕೂಡಿಗೆ, **ಧ್ಯಾನ**, ಚೇತನ ಬುಕ್ ಹೌಸ್, ಮೈಸೂರು, ೧೯೯೬.

೮೩. ಚಿದಂಬರ ರಹಸ್ಯ, ರೇಣುಕಾರಾಧ್ಯ ಎಸ್.ಎಸ್., **ಆಲೋಚನೆ**, ಸಿಂಚನ ಪ್ರಕಾಶನ, ಹಾವೇರಿ, ೧೯೯೬.

೮೪. ಚಿದಂಬರ ರಹಸ್ಯ, ಬಸವರಾಜ ಸಬರದ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೮೫. ಚಿದಂಬರ ರಹಸ್ಯ, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೮೬. ಚಿದಂಬರ ರಹಸ್ಯ, ಮಹೇಶ್ವರಯ್ಯ ಎಚ್.ಎಂ, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೮೭. ಚಿದಂಬರ ರಹಸ್ಯ, ಅನ್ನದಾನೇಶ ಬಿ.ಎ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೮೮. ಚಿದಂಬರ ರಹಸ್ಯದ ವಿಸ್ಮಯಕಾರಿ ಮಾಂತ್ರಿಕ, ಸಿಂಹ ಸಿ.ಆರ್., **ನಿಮ್ಮ೨ಸಿಮ್ಮ**, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

೮೯. ಚಿದಂಬರ ರಹಸ್ಯ, ಶೂದ್ರ ಶ್ರೀನಿವಾಸ, **ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೯೦. ಜಾಕ್ ಪಾಟ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ –ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೯೧. ಜಾಲಹಳ್ಳಿಯ ಕುರ್ಕ(ಕಾಡಿನ ಕಥೆಗಳು ಭಾಗ–೨), ಸಂಧ್ಯಾರಾಣಿ ಎಂ.ಎಸ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೯೨. ಜೀವನ ಚರಿತ್ರೆ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೯೩. ಜುಗಾರಿ ಕ್ರಾಸ್ : ಒಂದು ಅಧ್ಯಯನ, ಬಾಲ ಸುಬ್ರಹ್ಮಣ್ಯ ಕಂಜರ್ಪಣೆ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೯೪. ಜುಗಾರಿ ಕ್ರಾಸ್, ನರಹಳ್ಳಿ ಬಾಲಸುಬ್ರಮಣ್ಯ, **ಸಾಹಿತ್ಯ–ಸಂಸ್ಕೃತಿ**, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೮.

೯೫. ಜುಗಾರಿ ಕ್ರಾಸಿನ ದಂಡೆಗೆ, ಕೀರ್ತಿ ಕೋಲ್ಗಾರ್, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೯೬. ಜೀವಜಾಲದ ವಿಸ್ಮಯ ಬೆಳೆಗಾರ ತೇಜಸ್ವಿ, ಮೂಗಳ್ಳಿ ಗಣೇಶ್, **ತಕರಾರು**, ಪಲ್ಲವಿ ಪ್ರಕಾಶನ, ಚನ್ನಪಟ್ಟಣ, ೨೦೦೮.

೯೭. ಜುಗಾರಿ ಕ್ರಾಸ್, ಶಶಿಕಲಾ ಎಚ್, **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೯೮. ಜುಗಾರಿ ಕ್ರಾಸ್, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೯೯. ಟೀಂ ವರ್ಕ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ –ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೧೦೦. ಜೋಗದಲ್ಲೊಂದು ನಿದ್ರೆ, ಮೀನುಗಳಿಗೆ ಜಾಗರಣೆ, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೧೦೧. ಟ್ರಿಣ್ ಟ್ರಿಣ್ ಎಂದ ಸೈಕಲ್ ಬೆಲ್ಲು, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೧೦೨. ತನ್ನ ಅಸ್ತಿತ್ವಕ್ಕೆ ದೂರವಾಗುತ್ತಿರುವ ಧನದಾಹಿ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೦೩. ತಾತ್ವಿಕತೆಯಿಂದಾಗಿ ಏರ್ಪಟ್ಟ ಪರಕೀಯತೆ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೦೪. ತಾಂತ್ರಿಕತೆಯಿಂದ ಸೃಜನಾತ್ಮಕತೆಯೆಡೆಗೆ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೦೫. ತುಂಗಾನದಿಯ ಜಾಡಿನಲ್ಲಿ, ಅಗ್ರಹಾರ ಕೃಷ್ಣಮೂರ್ತಿ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೦೬. ತೇಜಸ್ವಿ ಕಥನ, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೧೦೭. ತೇಜಸ್ವಿ ಯವರ ಚಿದಂಬರ ರಹಸ್ಯ, ರಾಜೇಂದ್ರ ಚೆನ್ನಿ, **ನಡುಹಗಲಿನ ಕಂದೀಲುಗಳು**, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೪.

೧೦೮. ತೇಜಸ್ವಿ ಯವರ ಚಿದಂಬರ ರಹಸ್ಯ, ಬಸವರಾಜ ಸಬರದ, **ಸಾಹಿತ್ಯ ಸಂಗಾತಿ**, ಪಲ್ಲವಿ ಪ್ರಕಾಶನ, ಗುಲ್ಬರ್ಗಾ, ೧೯೯೪.

೧೦೯. ತೇಜಸ್ವಿ ದೆಸೆಯಿಂದ ಊರೇ ಬಿಟ್ಟುಹೋದರು, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೧೧೦. ತೇಜಸ್ವಿಯವರ ಎರಡು ಕಥೆಗಳು, ಅಶೋಕಟಿ.ಪಿ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೧೧. ತೇಜಸ್ವಿಯವರಿಗೆ, ಹಳ್ಳಿಯ ಪರವಾಗಿ ಕೃತಜ್ಞತೆ, ಸುರೇಶ್ ಕೆ.ಪಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೧೨. ತೇಜಸ್ವಿ "ಭಿನ್ನವಾಗಿ ಬರೆಯಬೇಕೆಂದರೆ", ರಾಮಚಂದ್ರನ್ ಸಿ.ಎನ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೧೩. ತೇಜಸ್ವಿ ಎಂಬ ಜನನಾಯಕ, ಮಾರ್ಗದರ್ಶಕ, ಸತ್ಯಮೂರ್ತಿ ಆನಂದೂರು, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೧೪. ತೇಜಸ್ವಿ, ರವೀಂದ್ರನಾಥ್ ಕೆ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೧೫. ತೇಜಸ್ವಿ ಸಾಹಿತ್ಯ ಮತ್ತು ಸಿದ್ಧಾಂತ, ಗೋಪಾಲ ಕೃಷ್ಣಯ್ಯ ಕೆ.ಎಲ್., **ಸಾಹಿತ್ಯ ಸಂವಾದ**, ವಿಶ್ರಾಂತ ಪ್ರಕಾಶನ, ಬೆಂಗಳೂರು, ೧೯೯೩.

೧೧೬. ತೇಜಸ್ವಿ ಬರಹದ ಶೈಲಿ, ಮರುಳಯ್ಯ ಸಾ.ಶಿ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೧೭. ತೇಜಸ್ವಿ ನನ್ನ ದೃಷ್ಟಿಯಲ್ಲಿ, ಕಡಿದಾಳ್ ಶಾಮಣ್ಣ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೧೮. ತೇಜಸ್ವಿ ಒಂದು ನೆನಪು.., ಪ್ರಕಾಶ್ ಎಂ.ಪಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೧೯. ತೇಜಸ್ವಿ ಇಲ್ಲದ ಜಗತ್ತಿನಲ್ಲಿ ನಾನೂ ಇರಲಾರೆ, ಅನಂತಮೂರ್ತಿ ಯು.ಆರ್., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೨೦. ತೇಜಸ್ವಿ ಬಾಲ್ಯದ ಚಟುವಟಿಕೆಗಳು, ತಾರಿಣಿ ಚಿದಾನಂದ, ಸಂ:ದೊಡ್ಡೇಗೌಡ ಆರ್.(ಆರ್.ಡಿ.ಜಿ), **ತೇಜಸ್ವಿಯನ್ನು ಹುಡುಕುತ್ತಾ**, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೨೧. ತೇಜಸ್ವಿ ಕಂಡ ಪೆಸಿಫಿಕ್ ದ್ವೀಪಗಳು, ಶ್ರೀನಿವಾಸ ಉಡುಪ ಎನ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೨೨. ತೇಜಸ್ವಿ ಒಡನಾಟ, ರಾಘವೇಂದ್ರ ಆರ್.(ರಘು), **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೨೩. ತೇಜಸ್ವಿಯವರ ಥಿಯರಿ, ಅಕ್ಷರ ಕೆ.ವಿ, **ಸಮ್ಮುಖದಲ್ಲಿ ಸ್ವಗತ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೨.

೧೨೪. ತೇಜಸ್ವಿ ತೆರೆದಿಟ್ಟ ಹಕ್ಕಿ ಪ್ರಪಂಚ, ಕಲ್ಲುಗುಂಡಿ ನವೀನ್, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೨೫. ತೇಜಸ್ವಿ ಕಥೆಗಳು, ಬಸವರಾಜು. ಜಿ.ಪಿ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೨೬. ತೇಜಸ್ವಿಯವರ ಜುಗಾರಿ ಕ್ರಾಸ್, ಅಶೋಕ್ ಟಿ.ಪಿ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೨೭. ತೇಜಸ್ವಿಯವರ ಸೃಜನಶೀಲ ನೆಲೆಗಳು, ಸತ್ಯನಾರಾಯಣರಾವ್ ಅಣತಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೨೮. ತೇಜಸ್ವಿ ಯವರ ನಿಗೂಢ ಮನುಷ್ಯರು, ಶಿವರಾಮಯ್ಯ, **ಸಾಹಿತ್ಯ ಪರಿಸರ**, ವೈಚಾರಿಕ ಪುಸ್ತಕ ಮಾಲೆ, ಚಿಕ್ಕಮಗಳೂರು, ೧೯೯೩.

೧೨೯. ತೇಜಸ್ವಿ : ಚಿದಂಬರ ರಹಸ್ಯ, ಶೂದ್ರ ಶ್ರೀನಿವಾಸ, **ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೧೩೦. ತೇಜಸ್ವಿಯವರ ಸಾಹಿತ್ಯ, ನಾಯಕ್ ಜಿ.ಹೆಚ್, **ಅನಿವಾರ್ಯ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೦.

೧೩೧. ತೇಜಸ್ವಿಯವರ ನಿಗೂಢ ಜಗತ್ತು, **ಜಾನಕಿ-ಜಾನಕಿಕಾಲಂ**, ಛಂದ ಪ್ರಕಾಶನ, ಬೆಂಗಳೂರು, ೨೦೦೭.

೧೩೨. ತೇಜಸ್ವಿಯವರ ಮಾಯಾ ಲೋಕ, ರಹಮತ್ ತರೀಕೆರೆ, **ಕತ್ತಿಯಂಚಿನ ದಾರಿ**, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

೧೩೩. ತೇಜಸ್ವಿ ಹಸಿರು ಹೊನ್ನು, ಪದ್ಮಾ ಶ್ರೀರಾಮ್, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೩೪. ತೇಜಸ್ವಿಯವರ ಮಾಯಾಲೋಕ, ವಿಸ್ಮಯಗಳ ಜಾದೂ ಪೆಟ್ಟಿಗೆ, ಶಿವರಾಮಯ್ಯ, **ಸುನಯ**, ಧಾತ್ರಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೭.

೧೩೫. ತೇಜಸ್ವಿ ಕಥೆ 'ಅವನತಿ', ಚನ್ನೇಶ ಹೊನ್ನಾಳಿ ಬಿ.ಜೆ., **ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ**, ಸಂ:ನಾರಾಯಣ ಕೆ.ವಿ., ಕೃಷ್ಣಮೂರ್ತಿ ಬಿ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೧೩೬. ತೇಜಸ್ವಿಯವರ ಜುಗಾರಿ ಕ್ರಾಸ್ ಕಾದಂಬರಿ : ಒಂದು ಅಧ್ಯಯನ, ಸುಮಿತ್ರ ಎಲ್.ಸಿ., **ವಿಭಾವ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೭.

೧೩೭. ತೇಜಸ್ವಿ ಕಾದಂಬರಿಗಳಲ್ಲಿ ಅನ್ವೇಷಣೆಯ ಸ್ವರೂಪ, ಅಮೂರ ಜಿ.ಎಸ್., **ಕನ್ನಡ ಕಥನ ಸಾಹಿತ್ಯ : ಕಾದಂಬರಿ**, ಸ್ವಪ್ನ ಪ್ರಕಾಶನ, ಬೆಂಗಳೂರು, ೨೦೦೬.

೧೩೮. ತೇಜಸ್ವಿಯವರ ಚಿದಂಬರ ರಹಸ್ಯ : ಒಂದು ಪ್ರಾಯೋಗಿಕ ವಿಮರ್ಶೆ, ರವೀಂದ್ರ ಭಟ್ ಬಳಗುಳಿ, **ಬಹುಮಾನಿತ ಲೇಖನಗಳು**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೯.

೧೩೯. ತೇಜಸ್ವಿಯವರ ನಿಗೂಢ ಮನುಷ್ಯರು, ನಾಯಕ್ ಜಿ.ಎಚ್., **ವಿನಯ ವಿಮರ್ಶೆ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧.

೧೪೦. ತೇಜಸ್ವಿಯವರ ಕಥೆಗಳು, ಬಸವರಾಜು ಜಿ.ಪಿ., **ಕಂಡಷ್ಟು**, ಚೇತನ ಬುಕ್ ಹೌಸ್, ಮೈಸೂರು, ೧೯೯೬.

೧೪೧. ತೇಜಸ್ವಿಯವರ ಜುಗಾರಿ ಕ್ರಾಸ್, ಸುಮಿತ್ರ ಎಲ್.ಸಿ., **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೪೨. ತೇಜಸ್ವಿಯವರ ಚಿದಂಬರ ರಹಸ್ಯ, ರವೀಂದ್ರ ಭಟ್ ಬಳಗುಳಿ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೪೩. ತೇಜಸ್ವಿಯವರ ಮಾಯಾಲೋಕ, ರಹಮತ್ ತರೀಕೆರೆ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೪೪. ತೇಜಸ್ವಿಯವರ ಚಿದಂಬರ ರಹಸ್ಯ ಒಂದು ಅವಲೋಕನ, ರಾ.ಲಕ್ಷ್ಮಿನಾರಾಯಣ, **ಅಹ್ಲಾದ**, ಇಳಾ ಪ್ರಕಾಶನ, ಬೆಂಗಳೂರು, ೨೦೦೧.

೧೪೫. ತೇಜಸ್ವಿಯವರ ಜೊತೆ ನಾವೂ ಪಯಣಿಸುತ್ತಲೇ ಇದ್ದೇವೆ, ಕರ್ವಾಲೋ ಜೊತೆ ಮಂದಣ್ಣ ನಡೆದ ಹಾಗೆ, ನಾಗರಾಜ ಕಿ.ರಂ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೪೬. ತೇಜಸ್ವಿ : ಹೀಗಿದ್ದರು 'ನಿಗೂಢ' ಮನುಷ್ಯ, ಅಗ್ನಿ ಶ್ರೀಧರ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೪೭. ತೇಜಸ್ವಿ:ಸೃಜನಶೀಲತೆಯ ಮಹಾರೂಪಕ, ರಾಜು.ಬಿ.ಎಲ್., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೪೮. ತೇಜಸ್ವಿ ನಿಜವಾದ ರೈತನ ಮಗ, ಚಂದ್ರೇಗೌಡ. ಬಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೪೯. ತೇಜಸ್ವಿ ಕಾಫಿ ಮತ್ತು ತೇನೆ ಹಕ್ಕಿ ಮೊಟ್ಟೆ, ಸಿದ್ದಯ್ಯ.ಕೆ.ಬಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೫೦. ತೇಜಸ್ವಿ ವೈಚಾರಿಕ ನಿಲುವುಗಳು, ಶಿವಾರೆಡ್ಡಿ ಕೆ.ಸಿ., **ತೇಜಸ್ವಿ ಲೋಕ**, ಸಂ: ಡಿ.ವಿ.ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೫೧. ತೇಜಸ್ವಿ ಸಾಹಿತ್ಯ ಮತ್ತು ವೈಜ್ಞಾನಿಕತೆ, ಪುಟ್ಟಸ್ವಾಮಿ .ಕೆ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೫೨. ತೇಜಸ್ವಿಯವರ ಕಾದಂಬರಿಗಳು : ಹೊಸ ಒಳನೋಟಗಳು, ಕರೀಗೌಡ ಬೀಚನಹಳ್ಳಿ, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ, ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೧೫೩. ತೇಜಸ್ವಿ ಸಾಹಿತ್ಯ : ಸಾಮಾಜಿಕ ಪ್ರಜ್ಞೆ, ವೇಣುಗೋಪಾಲ ಸೊರಬ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೫೪. ತೇಜಸ್ವಿ ಕಥಾಲೋಕ : ನನ್ನ ಗ್ರಹಿಕೆಯಲ್ಲಿ, ವೆಂಕಟರಮಣಗೌಡ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು.

೧೫೫. ತೇಜಸ್ವಿಯವರ ಅನುವಾದಗಳು, ಲಕ್ಷ್ಮೀನಾರಾಯಣ ಅರೋರ, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ, ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೧೫೬. ತೇಜಸ್ವಿಯವರ ಕಥಾಸಾಹಿತ್ಯ, ಪ್ರಶಾಂತ್‌ನಾಯಕ್ ಜಿ., **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ, ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೧೫೭. ತೇಜಸ್ವಿಯವರ ಬದುಕು, ಮಹೇಶ್ವರಯ್ಯ. ಎಚ್.ಎಂ, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೧೫೮. ತೇಜಸ್ವಿಯವರ ಮಾಯಾಲೋಕ, ನಾಗಭೂಷಣ್ ಡಿ.ಎಸ್., **ಸಾಹಿತ್ಯ ವಿಮರ್ಶೆ**, ಸಂ: ನಾಗರತ್ನಕುಮಾರಿ ಬಿ.ಎಸ್., ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೮.

೧೫೯. ತೋಟ ಮಾಡಿದರು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೬೦. ದಣಿವಿಲ್ಲದ ಪ್ರವಾಸ, ಕೃಪಾಕರ ಸೇನಾನಿ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೬೧. ದಾರ್ಶನಿಕ ಹುಡುಕಾಟದ ಲೇಖಕ, ರಹಮತ್ ತರೀಕೆರೆ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೬೨. ದೇಶ ವಿದೇಶ ೨ ಮತ್ತು ೩,ಒಂದು ಪರಿವೀಕ್ಷಣೆ, ಪ್ರಕಾಶ್ ಹೆಚ್.ಎಸ್.ಎಂ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೬೩. ನಕ್ಷತ್ರಿಕ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೧೬೪. ನನ್ನ ತೇಜಸ್ವಿ, ರಾಜೇಶ್ವರಿ ತೇಜಸ್ವಿ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೬೫. ನನ್ನ ಬರವಣಿಗೆಗೆ ಹಣೆಪಟ್ಟಿ ಅನವಶ್ಯಕ, ಚಂದ್ರೇಗೌಡ ಬಿ., (ಸಂದರ್ಶನ), **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೬೬. ನಮಸ್ಕಾರ ಸಾರ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೧೬೭. ನಮ್ಮ ಹೆಮ್ಮಿಂಗ್ವೆ, ಶೂದ್ರ ಶ್ರೀನಿವಾಸ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೬೮. ನಮ್ಮ ಹೆಜ್ಜೆ ಮೂಡಿದ ಹಾದಿ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೬೯. ನಮ್ಮ ಸಂಸಾರ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೭೦. ನಾಟಕ, ಮಹೇಶ್ವರಯ್ಯ ಎಂ.ಎಚ್, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು,೨೦೦೮.

೧೭೧. ನಾಲ್ಕು ಸಾಲುಗಳು, ರಾಜೇಶ್ವರಿ ತೇಜಸ್ವಿ, ನನ್ನ ತೇಜಸ್ವಿ, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೭೨. ನಿಕೇತನದಿಂದ ಅನಿಕೇತನಕ್ಕೆ ಮತ್ತು ಅನಿಕೇತನದಿಂದ ನಿಕೇತನಕ್ಕೆ ತುಡಿಯುವ ವಿರುದ್ಧ ಚಲನೆಗಳು: ಕರ್ವಾಲೋ, ಮಂದಣ್ಣ, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೧೭೩. ನಿಗೂಢ ಮನುಷ್ಯರು : ಅನುಭವ ಮತ್ತು ತಾತ್ವಿಕತೆ.ಇವುಗಳ ಶೋಧನೆಯ ಅಂಶವಾಗಿ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೭೪. ನಿಗೂಢದ ಭಾಗಿಯಾದ ವೈಜ್ಞಾನಿಕ ವಿಸ್ಮಯ, ವಿಜಯಶಂಕರ್ ಎಸ್.ಆರ್., **ತೇಜಸ್ವಿ ಲೋಕ**, ಸಂ:ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೭೫. ನಿಗೂಢ ಮನುಷ್ಯರು, ಕೋಟಿ ಎಂ.ಬಿ., **ಈ ಕೆಲ ಕಾದಂಬರಿಗಳು : ಒಂದು ಅಧ್ಯಯನ**, ವಿಕಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೫.

೧೭೬. ನಿಗೂಢದ ಬೆನ್ನುಹತ್ತಿದ ಬೆರಗಿನ ಬೇಟೆಗಾರ, ಪುಟ್ಟಸ್ವಾಮಿ ಕೆ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೭೭. ನಿತ್ಯ ಕುತೂಹಲಿ–ತೇಜಸ್ವಿ, ಗಿರಿಜಾ ಶಂಕರ ಸ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೧೭೮. ನಿಮಗೆ ಬುದ್ದಿ, ಭಾಷೆ ಇದೆಯಾ?, ಚಂದ್ರೇಗೌಡ. ಬಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೭೯. ನಿರುತ್ತರಕ್ಕೆ ಬಂದಿದ್ದು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ,ಮೂಡಿಗೆರೆ,೨೦೧೧.

೧೮೦. ನಿಸರ್ಗ ಮತ್ತು ಸಂಸ್ಕೃತಿಯ ಸಹ ಸಂಬಂಧಗಳು ಮತ್ತು ಸಂಘರ್ಷಗಳು, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೧೮೧. ಪತ್ರಗಳು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ** , ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೮೨. ಪರಿಸರ ಕಥಾ ಸಾಹಿತ್ಯ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೧೮೩. ಪರಿಚಯವಾಯ್ತು!, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೮೪. ಪರಿಸರ ಮತ್ತು ವೈಜ್ಞಾನಿಕತೆ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೧೮೫. ಪರಿಸರ:ಪಕ್ಷಿಲೋಕ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೧೮೬. ಪರಿಸರದ ಕಥೆ–ಒಂದು ಹಕ್ಕಿ ನೋಟ, ದೇ.ಜ.ಗೌ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೮೭. ಪರಿಸರ ವಿಸ್ಮಯ ಮಾಲಿಕೆ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೧೮೮. ಪರಿಸರದ ಕಥೆ, ಅಶೋಕ್ ಟಿ.ಪಿ., **ತೇಜಸ್ವಿ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೧೮೯. ಪರಿಸರ: ತೇಜಸ್ವಿ ದೃಷ್ಟಿಕೋನ, ಸತ್ಯನಾರಾಯಣ ಕೆ., **ತೇಜಸ್ವಿ ಲೋಕ**, ಸಂ:ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೧೯೦. ಪರಿಸರದ ಕಥೆ:ಒಂದು ಮರು ಓದು, ಅಮೃತ ಸಿಂಧು ಬಿ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೧೯೧. ಪಕ್ಕಾ ಪೂಡು, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೧೯೨. ಪ್ರವಾಸ ಕಥನಗಳನ್ನು ಸಾಯಿಸಿದ ಪರ್ಯಟನ ಕಥನಗಳು, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೧೯೩. ಪ್ರವಾಸ ಕಥನ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೧೯೪. ಪ್ರಜ್ಞೆ ಮತ್ತು ಪರಿಸರ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೯೫. ಪ್ರತಿಭಟನೆಯಿಂದ ಸೃಜನಾತ್ಮಕನೆಲೆಗೆ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೧೯೬. ಪ್ರವಾಸ ಕಥನ, ಮಹೇಶ್ವರಯ್ಯ. ಎಚ್.ಎಂ, **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೧೯೭. 'ಪ್ರಗತಿರಂಗ' ತೇಜಸ್ವಿಗೆ ಇಷ್ಟವಿರಲಿಲ್ಲ, ಕೇಶವಮೂರ್ತಿ. ಎಚ್. ಎಲ್., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೧೯೮. ಪುಸ್ತಕ ಪ್ರಕಾಶನ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೧೯೯. ಪಾಕಕ್ರಾಂತಿ ಮತ್ತು ಇತರ ಕತೆಗಳು,ಪ್ರಭಾ ಮೂರ್ತಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೦೦. ಪೂರ್ಣ ವ್ಯಕ್ತಿತ್ವದ ತೇಜಸ್ವಿ, ನಾಯಕ್.ಎ.ಎಚ್., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೦೧. ಪೂರ್ಣಚಂದ್ರ ತೇಜಸ್ವಿ, ಅಮೂರ ಜಿ.ಎಸ್., **ಕನ್ನಡ ಕಥನ ಸಾಹಿತ್ಯ : ಸಣ್ಣ ಕತೆ**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩.

೨೦೨. ಪೂರ್ಣದೃಷ್ಟಿ: ಕುವೆಂಪು ಮತ್ತು ತೇಜಸ್ವಿ, ಸತ್ಯನಾರಾಯಣ.ಕೆ., ಸಂ:ದೊಡ್ಡೇಗೌಡ ಆರ್. (ಆರ್.ಡಿ.ಜಿ), **ತೇಜಸ್ವಿಯನ್ನು ಹುಡುಕುತ್ತಾ**, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೨೦೩. ಪೂರ್ಣಚಂದ್ರ ತೇಜಸ್ವಿ ಮತ್ತು ಪರಿಸರ, ಕೃಷ್ಣಮೂರ್ತಿ ಹಾನೂರ, **ನುಡಿಶೋಧ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೦೪. ಪೂರ್ಣಚಂದ್ರ ತೇಜಸ್ವಿ, ಅನಂತಮೂರ್ತಿ ಯು.ಆರ್., **ಮಾತು ಸೋತ ಭಾರತ**, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

೨೦೫. ಪೂರ್ಣಚಂದ್ರ ತೇಜಸ್ವಿಯವರ ಆಯ್ದ ಕಥೆಗಳು, ಹೆಗಡೆ ಜಿ.ಎಂ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೦೬. ಪೂರ್ಣಚಂದ್ರ ತೇಜಸ್ವಿ ಬರೆದ–ಸ್ವರೂಪ, ಹರಿದಾಸ ಭಟ್ಟ ದಾಮೋಧರರಾವ್, **ಅಭಿವ್ಯಕ್ತಿ**, ಕರ್ನಾಟಕ ಸಂಘ, ಉಡುಪಿ, ೧೯೬೮.

೨೦೭. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ ವರ್ತಮಾನದ ಸಂವೇದನೆಗಳು, ಮಹೇಶ್ವರಯ್ಯ.ಎಚ್.ಎಂ, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೦೮. ಪೂರ್ಣಚಂದ್ರ ತೇಜಸ್ವಿಯವರ 'ವ್ಯಕ್ತಿವಿಶಿಷ್ಟ ಸಿದಾಂತ', ಸುಮತೀಂದ್ರ ನಾಡಿಗ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೦೯. ಪೂರ್ಣಚಂದ್ರ ತೇಜಸ್ವಿ ಮತ್ತು ಪರಿಸರ, ಕೃಷ್ಣಮೂರ್ತಿ ಹನೂರು, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೧೦. ಪೂರ್ಣಚಂದ್ರ ತೇಜಸ್ವಿಯವರು ಮತ್ತು ಕನ್ನಡ ತಂತ್ರಾಂಶ, ಚಿದಾನಂದಗೌಡ ಕೆ., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೨೧೧. ಪೂರ್ಣಚಂದ್ರ ತೇಜಸ್ವಿಯವರ ಕಥಾ ಸಾಹಿತ್ಯ, ಕೋದಂಡರಾಮ ಎನ್.ಕೆ, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯಿತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬

೨೧೨. ಪ್ರೆಸ್ಸು ಹಾಕಿದ್ದು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೧೩. ಫ್ಲೈಯಿಂಗ್ ಸಾಸರ್ಸ್ ಭಾಗ ೧,೨, ಮಂಜುನಾಥ ಸಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೧೪. ಪೊಲೀಸ್ನೋರ್ನ ನಂಬಂಗಿಲ್ಲ ಕಣ್ರೀ ಅಂದಿದ್ರು ತೇಜಸ್ವಿ, ರಾಜಪ್ಪ.ಡಿ.ಸಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೧೫. ಪೋಟೋಗ್ರಫಿ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೧೬. ಬಚಾವಾದೆ ಮಾರಾಯ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೧೭. ಬರ್ಮುಡಾ ರಸ್ತೆ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೧೮. ಬಹಳ ರುಚಿಯಿತ್ತು ಆ ಕಾಫಿ, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೧೯. ಬಹುಮುಖಿ ತೇಜಸ್ವಿಯವರ ನಾಟಕ ಮತ್ತು ಕವನಗಳಲ್ಲಿ ಜೀವನ ಪ್ರೀತಿ, ಜಯದೇವಪ್ಪ ಜೈನಕೇರಿ, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೨೦. ಬಿಡಿ ಬಿಡಿ ಸೊಗಡು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೨೧. ಭದ್ರಾ ತೀರದ ಚಾರಣ, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೨೨. ಮದಗಜಗಳ ನಡುವೆ, ಬಸವರಾಜು, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೨೩. ಮದುವೆ ಸಂಭ್ರಮ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೨೪. ಮನುಷ್ಯರ ಮಧ್ಯ ಪ್ರವೇಶದ ಬಹುರೂಪಿ ನೆಲೆಗಳು, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೨೨೫. ಮನುಷ್ಯನಾಶದ ಅಮಾನವೀಯತೆಯತ್ತಾ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೨೬. ಮಲೆನಾಡಿನ ಸುಂದರ ಚಿತ್ರಣ, ಗುರುಪ್ರಸಾದ್ ಡಿ.ವಿ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೨೭. ಮಹತ್ವಾಕಾಂಕ್ಷೆಗೆ ಹಾಕುವ ಕಡಿವಾಣ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೨೮. ಮಹಾಯುದ್ಧ– ೧–೨, ಪ್ರಭಾವತಿ ಎಸ್.ವಿ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೨೯. ಮಹಾಯುದ್ಧ–೨, ಸತ್ಯ ಸಿ.ಆರ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೩೦. ಮಳೆಗಾಲದ ಚಕ್ರ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, **ಗದ್ಯಚಿತ್ರಗಳು**, ಸಂ: ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್., ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಂಗ, ಬೆಂಗಳೂರು, ೧೯೯೨.

೨೩೧. ಮಾರೆರಾ ನನ್ ತೊಡೆ ತೆಗ್ದೇಬಿಟ್ರೀ, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೩೨. ಮಿಂಚುಳ್ಳಿ, ವಾಗೀಶ ಬ. ಹೂಗಾರ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೩೩. ಮಿಸ್ಸಿಂಗ್ ಲಿಂಕ್, ಡಿಸೋಜ ನಾ., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೩೪. 'ಮಿಲೇನಿಯಂ'- ಪುಸ್ತಕೋದ್ಯಮದ ಅಚ್ಚರಿ, ನರೇಂದ್ರ ರೈ ದೇರ್ಲ, **ತೇಜಸ್ವಿ ಲೋಕ**, ಸಂ: ಪ್ರಹ್ಲಾದ್ ಡಿ.ವಿ., ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.

೨೩೫. ಮಿಲೇನಿಯಂ ಪುಸ್ತಕ ಸರಣಿ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೨೩೬. ಮೀನ್ಹಿಡಿಯಲು, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೩೭. ಮುಂದುವರೆದ ಕಾರಂತ...., ಕೃಪಾಕರ ಸೇನಾನಿ, **ತೇಜಸ್ವಿ ನೆನಪು**, ಸಂ: ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೩೮. ಮುಗಿಯದ ಕುತೂಹಲಕ್ಕೆ ಹಠಾತ್ ಅಂತ್ಯ, ಕೃಪಾಕರ ಸೇನಾನಿ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೩೯. ಮೂಡಿಗೆರೆ ಮಡಿಗೆರೆಯಾದೀತೆಂತು, ರವಿ ಉಪಾಧ್ಯ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೪೦. **"ಮೂಡಿಗೆರೆ ಪೋಸ್ಟ್"** ಮತ್ತು ತೇಜಸ್ವಿಗೆ ಕಿರುಕುಳ, ಗೌರಿ ಲಂಕೇಶ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೪೧. ಮೂಡಿಗೆರೆಯ ಪೋಸ್ಟಾಫೀಸು, ಧನಂಜಯ ಜೀವಾಳ ಬಿ.ಕೆ., **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೪೨. ಮೆರವಣಿಗೆ ನೋಡಿ ಬಂದು ಕದವಿಕ್ಕಿ ಹಾಡು ಬರೆವ ಹುಡುಗನಂತೆ, ರವಿ ಬೆಳಗೆರೆ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೪೩. ಯಜಮಾನ್ಯ ಮತ್ತು ಪ್ರತಿರೋಧ : ಚದುರಂಗ ಮತ್ತು ತೇಜಸ್ವಿಯವರ ಕಾದಂಬರಿಗಳಲ್ಲಿ, ಶಿವಾರೆಡ್ಡಿ ಕೆ.ಸಿ., **ಸ್ಥಿತ್ಯಂತರ**, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, ೨೦೦೦.

೨೪೪. ರನ್ನಿಂಗ್ ಕಾಮೆಂಟರಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೪೫. ರುದ್ರ ಪ್ರಯಾಗದ ಭಯಾನಕ ನರಭಕ್ಷಕ, ಜಯಂತಿ ಆರ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೪೬. ಲೋಹಿಯಾವಾದಿಯ ಗಾಂಧಿ ಪ್ರಯೋಗ, ನಾರಾಯಣಸ್ವಾಮಿ. ಕೆ.ವೈ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೪೭. ವಸ್ತುನಿಷ್ಠತೆಯಿಂದ ತಾತ್ವಿಕತೆಯೆಡೆಗೆ, ಶಶಿಕಲಾ ಎಚ್., **ಏಕ-ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೪೮. ವ್ಯಕ್ತಿ ಮತ್ತು ಸಮಾಜ:ನವ್ಯ ಸಣ್ಣ ಕಥೆಗಳು, ಹೊನ್ನಯ್ಯ ಸಿ.ಬಿ., **ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೪.

೨೪೯. ವಿಮರ್ಶೆ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೨೫೦. ವಿಮರ್ಶೆಯ ವಿಮರ್ಶೆ, ಶ್ರೀನಿವಾಸ ಜೋಕಟ್ಟೆ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೫೧. ವಿಸ್ಮಯ ವೈರುಧ್ಯ, ಪಾರ್ವತೀಶ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೫೨. ವಿಸ್ಮಯಗಳ ಮಡಿಲನ್ನು ತೂಗಿದ ತೇಜಸ್ವಿ, ಸವಿತಾ ರವಿಶಂಕರ್, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೫೩. ವಿಸ್ಮಯ ಪ್ರತಿಷ್ಠಾನದ ಮೂಲ ಪರಿಕಲ್ಪನೆ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೫೪. ವಿಸ್ಮಯ ಲೋಕದ ವಿಶಿಷ್ಟ ಜಗತ್ತಿನ ತೇಜಸ್ವಿ, ಸುಬ್ರಮಣ್ಯ ಸ್ವಾಮಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೫೫. ವೈಚಾರಿಕತೆಗೆ ಪಳಗಿಕೊಳ್ಳದ ಹಳ್ಳಿ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೫೬. ಶಿಕಾರಿಪ್ರಿಯ ತೇಜಸ್ವಿ, ಶ್ರೀರಾಮ ಬಿ.ಎನ್., **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೨೫೭. ಶ್ರೀಮತಿ ರಾಜೇಶ್ವರಿಯವರ ನನ್ನ ತೇಜಸ್ವಿ, ಸುಬ್ರಮಣ್ಯ ಗಲಗಲಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೫೮. ಶ್ರೇಷ್ಠ ಅನುವಾದಕರಾಗಿ ಪೂರ್ಣಚಂದ್ರ ತೇಜಸ್ವಿ, ಪ್ರಧಾನ್ ಗುರುದತ್ತ, ಸ **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೨೫೯. ಸಂತೆಯೊಳಗೆ ಸಿಕ್ಕ ಸಂತ ಕಾಡಲ್ಲಿ ಕಣ್ಮರೆಯಾದ, ನಾಗತಿಹಳ್ಳಿ ಚಂದ್ರಶೇಖರ್, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೬೦. ಸಣ್ಣ ಕತೆಯ ಹೊಸ ಒಲವುಗಳು, ಗಿರಡ್ಡಿ ಗೋವಿಂದರಾಜ, **ಕಲ್ಪಿತ ವಾಸ್ತವ**, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, ೨೦೦೯.

೨೬೧. ಸತ್ತ ಟೆಲಿಗ್ರಾಮು ಎದ್ದು ಹೇಳಿದ ಕಥೆ, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೬೨. ಸಮುದ್ರದ ಉಪ್ಪು.... ಬೆಟ್ಟದ ನೆಲ್ಲಿಕಾಯಿ, ರುದ್ರೇಶ್.ಬಿ.ಟಿ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೬೩. ಸಮಾರೋಪ, ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೨೬೪. ಸಮಾರೋಪ ಭಾಷಣ, ಪಾಂಡುರಂಗ ಉಡುಪ, **ತೇಜಸ್ವಿ–ಸಾಹಿತ್ಯ ಕೃಷಿ**, ಸಂ:ವೀರಪ್ಪ ಜಿ.ಟಿ., ಬೈರೇಗೌಡ ಎಂ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೬೫. ಸತ್ವಶಾಲಿ ಕಥಾ ಸಂಕಲನ : ಅಬಚೂರಿನ ಪೋಸ್ಟಾಫೀಸ್, ಅರಳು ಮಲ್ಲಿಗೆ ಪಾರ್ಥಸಾರಥಿ, **ವಿನ್ಯಾಸ**, ರಾಜ್‌ದೀಪ್ ಪ್ರಕಾಶನ, ಬೆಂಗಳೂರು, ೧೯೭೮.

೨೬೬. ಸಮೂಹ ಸಂಕಲ್ಪದ ಸಾರ್ಥಕ ಕಾದಂಬರಿ : ಕರ್ವಾಲೋ, ಆರ್ಕೆ, **ಸಾಹಿತ್ಯ ಪ್ರಕ್ರಿಯೆ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೫.

೨೬೭. ಸ್ವಪ್ರಜ್ಞೆ ಒಳಗೊಂಡೇ ವಾಸ್ತವತೆಯತ್ತ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೬೮. ಸರಕ್ಕೆ ಸರೀತಲ್ಲ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೬೯. ಸ್ವರೂಪ, ಕೋಟಿ ಎಂ.ಬಿ., **ಈ ಕೆಲ ಕಾದಂಬರಿಗಳು : ಒಂದು ಅಧ್ಯಯನ**, ವಿಕಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೫.

೨೭೦. ಸವಲತ್ತುಗಳ ರುಚಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೭೧. ಸಹಜ ಸೋಜಿಗದ ಅಪ್ಪಟ ಮನುಷ್ಯ, ಜಯಂತ ಕಾಯ್ಕಿಣಿ, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜುಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೭೨. ಸಹಜ ಕೃಷಿ–ಪೂರ್ಣಚಂದ್ರ ತೇಜಸ್ವಿ, ಶರಣಬಸವೇಶ್ವರ ಅಂಗಡಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೭೩. ಸಹಜ ಕೃಷಿ–ತೇಜಸ್ವೀ ಕೃಷಿ, ರಮಾನಂದ ಕೆ.ವಿ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೭೪. ಸಹ್ಯಾದ್ರಿ ಗರ್ಭದಿಂದುದಿಸಿ ಬಾ ಮತ್ತೊಮ್ಮೆ, ದೇಜಗೌ, **ತೇಜಸ್ವಿಯನ್ನು ಹುಡುಕುತ್ತಾ**, ಸಂ:ಆರ್.ದೊಡ್ಡೇಗೌಡ(ಆರ್.ಡಿ.ಜಿ), ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೨೭೫. ಸಂಪಾದಕರ ನುಡಿ, ವೀರಪ್ಪ ಜಿ.ಟಿ., ಬೈರೇಗೌಡ ಎಂ., **ತೇಜಸ್ವಿ–ಸಾಹಿತ್ಯ ಕೃಷಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೭೬. ಸಂಸ್ಮರಣ, ಮಹೇಶ್ವರಯ್ಯ ಎಚ್.ಎಂ., **ಪೂರ್ಣಚಂದ್ರ ತೇಜಸ್ವಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮.

೨೭೭. ಸಾಮಾಜಿಕತೆಯಿಂದ ತಾತ್ವಿಕತೆಯೆಡೆಗೆ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೭೮. ಸ್ವಾತಂತ್ರ್ಯ ಮತ್ತು ಪ್ರತಿಭಟನೆಯ ಸಾಧನ, ಶಶಿಕಲಾ ಎಚ್., **ಏಕ–ಅನೇಕ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೭೯. ಸಾಕ್ಷಚಿತ್ರವಾಗದ ಸಾಕ್ಷಿಪ್ರಜ್ಞೆ, ಪುಟ್ಟಸ್ವಾಮಿ.ಕೆ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೮೦. ಸಿತಾರ್ ಕಲಿಯಲಿಕ್ಕೆ ಹೊರಟ ತೇಜಸ್ವಿ, ಸುಮತೀಂದ್ರ ನಾಡಿಗ್, **೫ನೇ ಸಾಹಿತ್ಯ ಚರಿತ್ರೆ**, ಸ್ವಪ್ನ ಪ್ರಕಾಶನ, ಬೆಂಗಳೂರು, ೨೦೦೮.

೨೮೧. ಸ್ತ್ರೀಶಕ್ತಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೮೨. ಸುಬ್ರಹ್ಮಣ್ಯ ಪ್ರಜ್ಞೆಗೆ ಬದಲು ವಿನಾಯಕ ಪ್ರಜ್ಞೆಯ ದೀಮಂತಿಕೆ, ಚಂದ್ರಶೇಖರ ನಂಗಲಿ, **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥ ಮಾಲೆ, ಬೆಂಗಳೂರು, ೨೦೦೭.

೨೮೩. ಸೂರ್ಯಂಗೇ ಟಾರ್ಚ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೮೪. ಸೆಕೆಂಡ್ ಇನ್ನಿಂಗ್ಸ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೮೫. ಸೈದ್ಧಾಂತಿಕತೆ-ಕೃಷಿ ಚಿಂತನೆ ಮತ್ತು ಪೋಟೋಗ್ರಫಿ, ಕರೀಗೌಡ ಬೀಚನಹಳ್ಳಿ, **ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು-ಬರಹ**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೧೦.

೨೮೬. ಸೊಸೆ ಕಂಡಂತೆ ಕುವೆಂಪು, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೮೭. ಸೋಲಲೇಬೇಕಾದ ಯುದ್ಧ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೮೮. ಹಲ್ಕ ಸೂಳೇಮಗ... ಏನ್ ಟಾಲೆಂಟ್ ಇದ್ದಾನ್ರಿ!, ಕೀರ್ತಿ ಕೋಲ್ಗಾರ, **ತೇಜಸ್ವಿ ಬದುಕಿದ್ದಾರೆ**, ಅಭಿರುಚಿ ಪ್ರಕಾಶನ, ಮೈಸೂರು, ೨೦೧೩.

೨೮೯. ಹಲ್ಲು ಕಚ್ಚಿ ಶಿಸ್ತಾಗಿ ಕುಳಿತು ಬರೆಯಬೇಕು, ಚಂದ್ರಶೇಖರ ಆಲೂರು, **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜುಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೯೦. ಹಸ್ತಪ್ರತಿ ನಿಂದನೆ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೨೯೧. ಹ್ಯಾಂಡ್ಸ್ ಅಪ್, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ-ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೯೨. ಹಿಂದಣ ಹೆಜ್ಜೆ: ಹುಲಿಯೂರಿನ ಸರಹದ್ದು : ಸಹೃದಯ ಓದು, ಪೋಲಂಕಿ ರಾಮಮೂರ್ತಿ, **ಕನ್ನಡ ಅಧ್ಯಯನ (ಮಳೆ ಸಂಚಿಕೆ)**, ಸಂ:ರಹಮತ್ ತರೀಕೆರೆ, ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗ, ಹಂಪಿ, ೨೦೦೦.

೨೯೩. ಹಿಂದಿನ ಸಾಲಿನ ಮೂಲೆಯ ಖುರ್ಚಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨೯೪. ಹಿಮಾಲಯಕ್ಕೆ ಹೋಗೋಣ ಅಂದಿದ್ದರು, ಗಿರೀಶ್.ಕೆ., **ತೇಜಸ್ವಿ ನೆನಪು**, ಸಂ:ಚಂದ್ರೇಗೌಡ ಬಿ., ರಾಜು ಬಿ.ಎಲ್., ರಂಗ ಭಾರತಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ, ೨೦೦೭.

೨೯೫. ಹುಲಿಯೂರಿನ ಸರಹದ್ದು–ತೇಜಸ್ವಿ, ಲಂಕೇಶ್ ಪಿ., **ಪ್ರಸ್ತುತ**, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೦೬.

೨೯೬. ಹುಲಿಯೂರಿನ ಸರಹದ್ದು, ಭಗವಾನ್ ಕೆ.ಎಸ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೯೭. ಹುಳುಗಳ ವಿಸ್ಮಯ–ನಡೆಯುವ ಕಡ್ಡಿ–ಹಾರುವ ಎಲೆ, ಮಂಜುಳಾಕ್ಷಿ ಎಲ್., **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೯೮. ಹೆಜ್ಜೆ ಮೂಡದ ಹಾದಿ, ಸುನಂದಾ ಪ್ರಕಾಶ ಕಡಮೆ, **ಪೂರ್ಣಚಂದ್ರ ತೇಜಸ್ವಿ ಕೃತಿಗಳ ಕುರಿತು**, ಸಂ:ಗೌರಿ ಸುಂದರ್, ಸುಂದರ ಪ್ರಕಾಶನ, ಬೆಂಗಳೂರು, ೨೦೧೬.

೨೯೯. ಹೇಳುವ ಕಥೆ–ವ್ಯಥೆ, ರಾಜೇಶ್ವರಿ ತೇಜಸ್ವಿ, **ನನ್ನ ತೇಜಸ್ವಿ**, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೧೧.

೩೦೦. ಹೊಯ್ಸಳ ಹೆಸರಿಗೆ ಮಸಿ, ಧನಂಜಯ ಜೀವಾಳ ಬಿ.ಕೆ, **ಕಾಡಿನ ಸಂತ–ತೇಜಸ್ವಿ** ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೩೦೧. ಹೊಸಗನ್ನಡದ ಮೂರನೆಯ ತಲೆಮಾರು : ಪೂರ್ಣಚಂದ್ರ ತೇಜಸ್ವಿ, ಕೋದಂಡರಾಮ ಎನ್.ಕೆ., **ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**, ಗಾಯಿತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬.

೩೦೨. ಹೊಸ ದಿಗಂತದ ಕಡೆಗೆ: ಕರ್ವಾಲೋ, ಬಸವರಾಜು. ಜಿ.ಪಿ., **ತೇಜಸ್ವಿ ಲೋಕ**. ಸಂ: ಪ್ರಹ್ಲಾದ್ ಡಿ.ವಿ, ಸಂಚಯ ಪ್ರಕಾಶನ, ಬೆಂಗಳೂರು, ೨೦೦೭.